ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–37

ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನ ಮತ್ತು ಸ್ವರ್ಗಾರೋಹಣ ಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೭

ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನ ಮತ್ತು ಸ್ವರ್ಗಾರೋಹಣ ಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ರವಿಕುಮಾರ್ ಆಚಾರ್ಯ, ಉಡುಪಿ.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನ ಮತ್ತು ಸ್ವರ್ಗಾರೋಹಣ ಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನ ಮತ್ತು ಸ್ವರ್ಗಾರೋಹಣ ಪರ್ವ - ಭಾಗ ೩.೭

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-41-9

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXVIII + 476 = 504
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ವಿದ್ವಾನ್ ರವಿಕುಮಾರ್ ಆಚಾರ್ಯ ಉಡುಪಿ.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ಮುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಮಹಾಭಾರತದಲ್ಲಿ ಅತ್ಯಂತ ದುರಂತದ ಪಾತ್ರಧಾರಿ ಧೃತರಾಷ್ಟ್ರ. ಹುಟ್ಟಿನಿಂದ ಅಂಧನಾಗಿ, ಕಲ್ಯಾದಿ ದೈತ್ಯರ ತಂದೆಯಾಗಿ, ಧರ್ಮ ನೀತಿಗಳ ವಿರುದ್ಧ ಹೋರಾಟ ಮಾಡುವ ಕಲಿಯನ್ನು ಬೆಂಬಲಿಸಲೂ ಆಗದೆ ನಿರಾಕರಿಸಲೂ ಆಗದೆ ಮಮ್ಮರ ಮರುಗಿದ ವ್ಯಕ್ತಿತ್ವ ಧೃತರಾಷ್ಟ್ರನದ್ದು. ದುರ್ಯೋಧನಾದಿಗಳೆಲ್ಲರೂ ಸತ್ತ ಬಳಿಕವೂ ಅವರ ಮೋಹದಲ್ಲಿಯೇ ಪಾಂಡವರ ಮನೆಯ ಆಶ್ರಯವನ್ನು ಪಡೆದು ಬದುಕುವ ದುರಂತ ಪ್ರಸಂಗ ಧೃತರಾಷ್ಟ್ರನಿಗೆ ಒದಗಿ ಬಂದಿತು. ಬಹುಶಃ ಮಹಾಭಾರತದಲ್ಲಿ ಭೀಮನೆಂಬ ಪಾತ್ರವು ಇಲ್ಲವಾಗಿದ್ದಲ್ಲಿ ಧೃತರಾಷ್ಟ್ರನು ಧರ್ಮಾಂಧನಾಗಿಯೇ ಮರಣ ಹೊಂದುತ್ತಿದ್ದ. ಲೋಕದ ದೃಷ್ಟಿಯಿಂದ ತಂದೆಯ ಸ್ಥಾನವನ್ನು ಧೃತರಾಷ್ಟ್ರನು ಭೀಮಸೇನನ ಪಾಲಿಗೆ ಅಲಂಕರಿಸಿದ್ದರೂ ಆಧ್ಯಾತ್ಮಿಕ ದೃಷ್ಟಿಯಿಂದ ಭೀಮಸೇನನೇ ಧೃತರಾಷ್ಟ್ರನು ತಂದೆಯಾಗಿದ್ದಾನೆ. ಈ ಧೃತರಾಷ್ಟ್ರನಿಗೆ ಅಧ್ಯಾತ್ಮಿಕವಾಗಿ ಚಿಕಿತ್ಸೆಯನ್ನು ಕೊಡುವುದು ಅನಿವಾರ್ಯ ಎಂದು ಭಗವದ್ಧರ್ಮನಿಷ್ಠೆಯನ್ನು ಹೊಂದಿದ ಭೀಮಸೇನನು ನಿಶ್ಚಯಿಸಿಕೊಳ್ಳುತ್ತಾನೆ. ಎಲ್ಲರೂ ಧೃತರಾಷ್ಟ್ರನಿಗೆ ಸತ್ಕಾರಗಳನ್ನು ಮಾಡುತ್ತಿದ್ದರೆ ನ್ಯಕ್ಕಾರವನ್ನು ಮಾಡಿ ಅವನ ಹೃದಯದಲ್ಲಿ ಪಶ್ಚಾತ್ತಾಪ ಮೂಡುವಂತೆ ಧರ್ಮಪ್ರಜ್ಞೆಯನ್ನು ಹುಟ್ಟಿಸಿದ ಮಹಾನುಭಾವ ಭೀಮಸೇನ. ಭೀಮಸೇನನ ಈ ಧರ್ಮನಿಷ್ಠೆಯಿಂದ ಧೃತರಾಷ್ಟ್ರನು ಕೊನೆಯ ಗಳಿಗೆಯಲ್ಲಿ ಧರ್ಮಮಾರ್ಗವನ್ನು ಅನುಸರಿಸುವಂತಾಯಿತು. ಅಪರಾಧದ ಎಚ್ಚರವೇ ಇಲ್ಲದೆ ಬದುಕಿದ್ದ ಧೃತರಾಷ್ಟ್ರನಿಗೆ ನಾನು ಅಪರಾಧಿ ಎಂದು ಎಚ್ಚರ ಹುಟ್ಟಿಸಿ, ಅವನ ಆತ್ಮವನ್ನು ನಿರ್ಮಲಗೊಳಿಸಿದ ಕೀರ್ತಿ ಭೀಮಸೇನನದ್ದು. ಭೀಮನಿಂದ ಪ್ರಚೋದಿತನಾದ ಧೃತರಾಷ್ಟ್ರನು ಭಗವನ್ಮುಖನಾಗಿ ವನಕ್ಕೆ ತೆರಳಬೇಕೆಂದು ನಿಶ್ಚಯಿಸಿ ನಾಗಪುರದ ಸಮಸ್ತ ಮಂದಿಯ ಬಳಿ ತನ್ನ ಆಳ್ವಿಕೆಯಲ್ಲಾದ ಅವ್ಯವಸ್ಥೆಗಳಿಗೆ ಕ್ಷಮೆಯಾಚಿಸುತ್ತಾನೆ. ಇಂತಹ ಮೌಲಿಕವಾದ ಮನಃಪರಿವರ್ತನೆಗೆ ಭೀಮಸೇನನೇ

ಹೇತುವಾಗಿದ್ದಾನೆ. ಭಗವಂತನ ಭೂಭಾರಹರಣದಲ್ಲಿ ಭೀಮನು ಪ್ರಧಾನ ಅಂಗನಾಗಿ ಇದ್ದದ್ದು ಮಾತ್ರವಲ್ಲ, ಶ್ರೀಕೃಷ್ಣನ ತತ್ತ್ವೋಪದೇಶಗಳಲ್ಲಿಯೂ ಆಯಾ ಜೀವರಿಗೆ ಆಯಾ ತತ್ತ್ವೋಪದೇಶಗಳು ಆಯಾ ಕಾಲಕ್ಕೆ ಹೃದಯದಲ್ಲಿ ಪ್ರತಿಫಲಿಸುವಂತೆ ಎಚ್ಚರಿಕೆಯನ್ನು ನೀಡಿದವನು ಭೀಮಸೇನ. ಇಂತಹ ಸನ್ನಿವೇಶಗಳನ್ನು ವ್ಯಾಸರು ಮಾರ್ಮಿಕವಾಗಿ ಮಹಾಭಾರತದಲ್ಲಿ ಬಿತ್ತರಿಸಿ ನಮ್ಮ ಭಾರತ ದೇಶವು ಇಂದಿಗೂ ಇಂತಹ ಇತಿಹಾಸವನ್ನು ಅವಲೋಕಿಸುತ್ತಾ ಧರ್ಮಮರ್ಯಾದೆಯಿಂದ ಮುಂಚೂಣಿಯಲ್ಲಿ ಸಾಗುವಂತೆ ಅನುಗ್ರಹಿಸಿದ ಮಹಾನುಭಾವರು ವ್ಯಾಸರು. ಇಂತಹ ಅನೇಕ ಪ್ರಸಂಗಗಳನ್ನು ನಾವು ಮಹಾಭಾರತದಲ್ಲಿ ನೋಡಬಹುದಾಗಿದೆ.

ಈ ಆಶ್ರಮವಾಸಿಕ ಪರ್ವವನ್ನು ಅತ್ಯಂತ ಶ್ರದ್ಧೆಯಿಂದ, ಸುಂದರವಾಗಿ ಅನುವಾದಿಸಿಕೊಟ್ಟ ನಮ್ಮವರೇ ಆದ ವಿದ್ವಾನ್ ರವಿಕುಮಾರ್ ಭಟ್ ಇವರನ್ನು ವಿಶೇಷವಾಗಿ ಅಭಿನಂದಿಸುತ್ತೇವೆ. ಅನುವಾದಕರಿಗೂ, ಗ್ರಂಥ ಅಧ್ಯೇತೃಗಳಿಗೂ ಶ್ರೀಹರಿ-ವಾಯು-ಗುರುಗಳು ವಿಶೇಷವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಭೂಮಿಕೆ

ವಿಶ್ವಮಾನ್ಯವಾದ ಮಹಾಭಾರತದಲ್ಲಿ ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನಿಕ ಸ್ವರ್ಗಾರೋಹಣ ಎಂದು ನಾಲ್ಕು ಪರ್ವಗಳು ಕೊನೆಯಲ್ಲಿ ವ್ಯಾಸರಿಂದ ರಚಿತವಾಗಿವೆ.

ಆಶ್ರಮವಾಸಿಕ ಪರ್ವದಲ್ಲಿ ಭೀಮಸೇನನ ಕಠೋರವಾದ ಮಾತುಗಳಿಂದ ವಿದುರನ ಉಪದೇಶದಿಂದಲೂ ವಿರಕ್ತನಾದ ಧೃತರಾಷ್ಟ್ರನು ಕಾಡಿಗೆ ಹೋಗುವ ಪ್ರಸಂಗವು ಕಾಣಿಸುತ್ತದೆ. ಆರಂಭದಲ್ಲಿ ದುಃಖಿತನಾದ ಧೃತರಾಷ್ಟ್ರನು ಉಪವಾಸಾದಿಗಳಿಂದ ದೇಹವನ್ನು, ಮನಸ್ಸನ್ನು ಕೃಶಗೊಳಿಸಿಕೊಂಡು ಧರ್ಮರಾಜನ ಅನುಮತಿಯನ್ನು, ವೇದವ್ಯಾಸದೇವರ ಆಜ್ಞೆಯನ್ನು ಸ್ವೀಕರಿಸಿ ಕಾಡಿಗೆ ಹೊರಟನು. ಹೊರಡುವ ಸಂದರ್ಭದಲ್ಲಿ ಯುಧಿಷ್ಠಿರನಿಗೆ ರಾಜನೀತಿಗಳನ್ನು ಉಪದೇಶಿಸುತ್ತಾನೆ. ಧೃತರಾಷ್ಟ್ರನು ಉಪದೇಶಿಸುವ ಈ ನಾಲ್ಕು ಅಧ್ಯಾಯಗಳು ಇಂದಿಗೂ ಪ್ರಸ್ತುತವಾಗಿವೆ. ಬಳಿಕ ಧೃತರಾಷ್ಟ್ರನು ಊರಿನಿಂದ ಕಾಡಿಗೆ ಹೋಗುವಾಗ ಪ್ರಜೆಗಳ ಮಧ್ಯದಲ್ಲಿ ತನ್ನ ಅಪರಾಧವನ್ನು ನೆನೆದು ಕ್ಷಮೆಯನ್ನು ಯಾಚಿಸಿ ಹೊರಡುತ್ತಾನೆ. ಈ ಪ್ರಸಂಗವು ಇಂದಿಗೂ ಪ್ರಜೆಗಳ ವಿಷಯದಲ್ಲಿ ಅಧಿಕಾರಿಗಳು ಹೇಗೆ ವರ್ತಿಸಬೇಕು ಎಂಬುದನ್ನು ಅರ್ಥವತ್ತಾಗಿ ತಿಳಿಸುತ್ತಿದೆ. ಧೃತರಾಷ್ಟ್ರನು ತನ್ನ ಬಂಧು-ಬಾಂಧವರಿಗೆ-ಮಕ್ಕಳಿಗೆ ಶ್ರಾದ್ಧ ಕ್ರಿಯೆಯನ್ನು ಆಚರಿಸಬೇಕೆಂದು ಧನವನ್ನು ಭೀಮನ ಬಳಿ ಯಾಚಿಸಿದಾಗ ಭೀಮನು ಅವನ ಪ್ರಾರ್ಥನೆಯನ್ನು ನಿರಾಕರಿಸುತ್ತಾನೆ. ರಾಜ್ಯದ ಬೊಕ್ಕಸವನ್ನು ಅನಧಿಕಾರಿಗಳಾದ ಅಯೋಗ್ಯರಿಗೆ ನೀಡಬಾರದೆಂಬುದು ಭೀಮನ ಅಭಿಪ್ರಾಯ. ಹೇಗೋ ರಾಜ್ಯದ ಬೊಕ್ಕಸವನ್ನು ದುರ್ಬಳಕೆಯನ್ನು ಮಾಡುವ ಇಂದಿನ ರಾಜಕಾರಣಿಗಳಿಗೆ ಭೀಮನ ಈ ನಡೆ ಅತ್ಯಂತ ಮಾರ್ಗದರ್ಶಕವಾಗಿದೆ.

ಧೃತರಾಷ್ಟ್ರನು ಅರಣ್ಯಕ್ಕೆ ಹೋಗುವ ಸಂದರ್ಭದಲ್ಲಿ ಅವನನ್ನು ಅನುಸರಿಸಿ ಕುಂತಿಯೂ ಅರಣ್ಯಕ್ಕೆ ಸಾಗುತ್ತಾಳೆ. ಆ ಪ್ರಸಂಗದಲ್ಲಿ ಪಾಂಡವರಿಗೂ, ಕುಂತಿಗೂ

ನಡೆದ ಸಂವಾದವು ಅತ್ಯಂತ ಹೃದಯಂಗಮವಾಗಿದೆ. ಧೃತರಾಷ್ಟ್ರನು ಬಳಿಕ ಅರಣ್ಯಕ್ಕೆ ಸಾಗುತ್ತಾನೆ. ಅಲ್ಲಿ ಶತಯೂಪರ ಆಶ್ರಮದಲ್ಲಿ ವಾಸಿಸುತ್ತಾನೆ. ಆ ಪ್ರಸಂಗದಲ್ಲಿ ನಾರದರು ಅಲ್ಲಿಗೆ ಆಗಮಿಸುತ್ತಾರೆ. ಆಧ್ಯಾತ್ಮಿಕವಾದ ಉನ್ನತಿಯನ್ನು ಹೇಗೆ ಹೊಂದಬೇಕು ಎಂದು ನಾರದರು ಧೃತರಾಷ್ಟ್ರನಿಗೆ ಮಾರ್ಗದರ್ಶನವನ್ನು ಮಾಡುತ್ತಾರೆ. ಯುಧಿಷ್ಠಿರಾದಿಗಳು ಅರಣ್ಯದಲ್ಲಿರುವ ಕುಂತಿಯನ್ನು, ಧೃತರಾಷ್ಟ್ರ ಗಾಂಧಾರಿಯನ್ನು ನೋಡಬೇಕೆಂದು ಸಾಗಿದಾಗ ಅದೇ ಪ್ರಸಂಗದಲ್ಲಿ ವೇದವ್ಯಾಸ ಮಹರ್ಷಿಗಳು ಅಲ್ಲಿಗೆ ಆಗಮಿಸುತ್ತಾರೆ. ಧೃತರಾಷ್ಟ್ರ, ಧರ್ಮರಾಜ ಇವರೆಲ್ಲರ ಪ್ರಾರ್ಥನೆಯಂತೆ ಯುದ್ಧಭೂಮಿಯಲ್ಲಿ ಮೃತರಾದವರ ಸಮಾಗಮವು, ಸಹವಾಸವು ಮತ್ತೆ ಒದಗಿ ಬರುವಂತೆ ತಮ್ಮ ಯೋಗಶಕ್ತಿಯಿಂದ ಮಾಡುತ್ತಾರೆ. ಒಂದು ರಾತ್ರಿಯ ಕಾಲ ಮೃತರಾದ ವ್ಯಕ್ತಿಗಳು ನಿಜರೂಪದಿಂದ ಬಂದು ಧೃತರಾಷ್ಟ್ರಾದಿಗಳ ಜೊತೆಗೆ ಸೇರುವಂತೆ ಮಾಡಿದ ವ್ಯಾಸರ ಈ ಶಕ್ತಿ ಅಚಿಂತ್ಯಐಶ್ವರ್ಯಶಕ್ತಿಗೆ ದ್ಯೋತಕವಾಗಿದೆ.

ಮುಂದೆ ಮೌಸಲಪರ್ವದಲ್ಲಿ ಋಷಿಗಳನ್ನು ಯಾದವರು ಅವಹೇಳನ ಮಾಡುವ ಪ್ರಸಂಗವಿದೆ. ಯಾದವರಿಗೆ ಋಷಿ-ಮುನಿಗಳಿಂದ ಪ್ರಾಪ್ತವಾಗುವ ಶಾಪದ ವಿವರವನ್ನು ನೋಡಿದಾಗ ಋಷಿಗಳ ವಿಷಯದಲ್ಲಿ ಎಂದಿಗೂ ನಾವು ಅವಮಾನವನ್ನು ಮಾಡಬಾರದು ಎಂಬುದು ಅರ್ಥವಾಗುತ್ತದೆ. ಯಾದವರ ಕ್ಷಯವನ್ನು ಅವಲೋಕಿಸಿದ ಶ್ರೀಕೃಷ್ಣನು ಎಲ್ಲ ಯಾದವರನ್ನು ಪ್ರಭಾಸ ಕ್ಷೇತ್ರಕ್ಕೆ ಕರೆದೊಯ್ಯುತ್ತಾನೆ. ಇದರ ಅಭಿಪ್ರಾಯ ಕ್ಷೇತ್ರದಲ್ಲಿ ಮರಣ ಹೊಂದುವುದು ಸದ್ಗತಿಗೆ ಕಾರಣವಾಗುತ್ತದೆ ಎಂದು. ಮೈರೇಯ ಎಂಬ ಮದ್ಯವನ್ನು ಸೇವಿಸಿದ ಯಾದವರು ಪರಸ್ಪರ ಹಿಂಸೆಗಳಿಂದ ಹೊಡೆದಾಡಿಕೊಂಡು ಸಮುದ್ರದ ತೀರದಲ್ಲಿ ಮರಣವನ್ನಪ್ಪುತ್ತಾರೆ. ಮದ್ಯಪಾನವು ಹಿಂಸೆಯಲ್ಲಿ ಪರ್ಯವಸಾನವಾಗುತ್ತದೆ ಎಂಬ ನೀತಿಯು ಈ ಪ್ರಸಂಗದಿಂದ ಅರ್ಥವಾಗುತ್ತದೆ.

ನಂತರ ಶ್ರೀಕೃಷ್ಣನು ಪರಂಧಾಮಕ್ಕೆ ಹೊರಡುವ ಅಭಿಪ್ರಾಯದಿಂದ ತನ್ನ ಪತ್ನಿಯರನ್ನೆಲ್ಲ ರಕ್ಷಿಸು ಎಂದು ಅರ್ಜುನನಿಗೆ ತಿಳಿಸಿ ಕಳುಹಿಸಿಕೊಡುತ್ತಾನೆ. ಈ ಪ್ರಸಂಗದಲ್ಲಿ ಅರ್ಜುನನು ಗುಡ್ಡಗಾಡಿನ ಪಡ್ಡೆ ಹುಡುಗರ ಆಕ್ರಮಣದಿಂದ ಆ ಸ್ತ್ರೀಯರನ್ನು ರಕ್ಷಿಸಲು ಅಸಮರ್ಥನಾಗುತ್ತಾನೆ. ಈ ಪ್ರಸಂಗವು ಜೀವರ ಅಸ್ವಾತಂತ್ರ್ಯ, ಪರಮ ಸಂಕಲ್ಪ ಶಕ್ತಿಗಳ ಮಹತ್ವವನ್ನು ವಿಷದವಾಗಿಯೇ ಅರ್ಥ ಮಾಡಿಸುತ್ತದೆ.

ಮುಂದೆ ಬರುವ ಪರ್ವದಲ್ಲಿ ಯುಧಿಷ್ಠಿರನೇ ಮೊದಲಾದ ಪಾಂಡವರು, ದ್ರೌಪದೀದೇವಿ ಇವರೆಲ್ಲರೂ ಸ್ವರ್ಗವನ್ನೇರುವ ಮುನ್ನ ಪತನವನ್ನು ಹೊಂದುತ್ತಾರೆ. ಈ ಪ್ರಸಂಗದಲ್ಲಿ ಭೀಮನು ಧರ್ಮರಾಜನ ಬಳಿ ಪತನದ ಉದ್ದೇಶವನ್ನು ಕೇಳಿದಾಗ

ಧರ್ಮರಾಜನು ಯಾವ ಉತ್ತರಗಳನ್ನು ಕೊಡುತ್ತಾನೋ ಅವುಗಳು ನಮ್ಮ ಮನಸ್ಸಿಗೆ ಗೊಂದಲವನ್ನುಂಟು ಮಾಡುತ್ತವೆ. ಅದಕ್ಕೆ ಸಮರ್ಪಕವಾದ ಉತ್ತರಗಳನ್ನು ಶ್ರೀಮದಾನಂದತೀರ್ಥಭಗತ್ಪಾದಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ ಸಹಾಯದಿಂದ ತಿಳಿದುಕೊಳ್ಳಬೇಕು.

ಕೊನೆಯದ್ದಾದ ಸ್ವರ್ಗಾರೋಹಣ ಪರ್ವದಲ್ಲಿ ಯುಧಿಷ್ಠಿರನ ಧರ್ಮನಿಷ್ಠೆ, ಶರಣಾಗತ ಜನರಲ್ಲಿ ತೋರಿಸುವ ವಾತ್ಸಲ್ಯ ಇವೆಲ್ಲವೂ ಮನೋಜ್ಞವಾಗಿ ನಿರೂಪಿಸಲ್ಪಟ್ಟಿವೆ.

ಲಕ್ಷಾಲಂಕಾರದ ವೈಶಿಷ್ಟ್ಯ

ಶ್ರೀಭಾವಿಸಮೀರ ಶ್ರೀಮದ್ವಾದಿರಾಜ ಗುರುಸಾರ್ವಭೌಮರಿಂದ ರಚಿತವಾದ ಲಕ್ಷಾಲಂಕಾರವು ವ್ಯಾಸರ ಭಾವವನ್ನು ಸರಿಯಾಗಿ ನಿರೂಪಿಸುವಲ್ಲಿ ಅತ್ಯಂತ ಸಮರ್ಥವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಒಂದೆರಡು ಉದಾಹರಣೆಗಳನ್ನು ನೋಡೋಣ–

ಆಶ್ರಮವಾಸಿಕ ಪರ್ವದ ಹತ್ತನೆಯ ಅಧ್ಯಾಯದಲ್ಲಿ ರಾಜಧರ್ಮವನ್ನು ನಿರೂಪಿಸುವಾಗ –

ಅತಿಪಾನೇನ ರಾಜಾऽಪಿ ಸರ್ವಂ ಕೋಶಂ ವಿನಾಶಯೇತ್ ।
ವಿತರೇದ್ ಗಾಯಕೇಭ್ಯಶ್ಚ ಪ್ರಧಾನದ್ರವ್ಯಸಂಚಯಮ್ ॥

ರಾಜನೂ ಕೂಡ ಅತಿಯಾಗಿ ಮದ್ಯಪಾನ ಮಾಡುವುದರಿಂದ ತನ್ನ ಎಲ್ಲ ಕೋಶವನ್ನೂ ನಾಶಮಾಡಿಯಾನು. ಆದ್ದರಿಂದ ಅಸ್ಥಾನದಲ್ಲಿ ಮನಸ್ಸಂತೋಷಕ್ಕಾಗಿ ಹಾಡುವ ಗಾಯನಗಳಿಗೂ ಮಂತ್ರಿಗಳು ಸಂಗ್ರಹಿಸಿದ ದ್ರವ್ಯವನ್ನೇ ನೀಡಬೇಕೇ ಹೊರತು ಕೋಶದಲ್ಲಿ ಸಂಗ್ರಹಿಸಿದ ದ್ರವ್ಯವನ್ನು ನೀಡಬಾರದು ಎಂದು ವ್ಯಾಖ್ಯಾನಿಸಿದ್ದಾರೆ.

ತಥಾऽಮಾತ್ಯಾ ಜನಪದಾ ದುರ್ಗಾಣಿ ವಿವಿಧಾನಿ ಚ ।
ಕುರುಶ್ರೇಷ್ಠ ಭವಂತ್ಯೇಷಾಂ ಯಥಾದೇಶಂ ಯಥಾಸ್ವಕಮ್ ॥

ಪಂಚ ದ್ವಾದಶ ಕೌಂತೇಯ ರಾಜಾನೋ ವಿವಿಧಾತ್ಮಕಾಃ ।
ಮಂತ್ರಿಪ್ರಧಾನಾಶ್ಚ ಗುಣಾಃ ಷಟ್ ಚ ದ್ವಾದಶ ಚ ಸ್ಮೃತಾಃ ॥

ಏತನ್ಮಂಡಲಮಿತ್ಯಾಹುರಾಚಾರ್ಯಾ ನೀತಿಕೋವಿದಾಃ ।
ಅತ್ರ ಷಾಡ್ಗುಣ್ಯಮಾಯತ್ತಂ ಯುಧಿಷ್ಠಿರ ನಿಬೋಧ ತತ್ ॥೫॥

ಹೇ ಕುರುಶ್ರೇಷ್ಠನೇ, ಅದೇ ರೀತಿ ಮಂತ್ರಿಗಳು, ಬೇರೆ ಬೇರೆ ರೀತಿ ಪ್ರದೇಶದ ಜನರ ವಿಷಯಗಳು, ನಾನಾ ರೀತಿಯ ದುರ್ಗಗಳು ಇವೆಲ್ಲವೂ ಆಯಾಯಾ ಪ್ರದೇಶಕ್ಕೆ ಅನುಗುಣವಾಗಿ, ರಾಜರ ಇಚ್ಛೆಗೆ ಅನುಸಾರವಾಗಿ ಇರುತ್ತವೆ. ಅವನ್ನೂ ತಿಳಿದುಕೊಳ್ಳಬೇಕು. ಹೇ ಕೌಂತೇಯನೇ, ರಾಜರುಗಳು ವಿವಿಧ ಗುಣಗಳಿಂದ ಕೂಡಿರುತ್ತಾರೆ. ಪ್ರಧಾನವಾಗಿ ಐದು ಹಾಗೂ ಹನ್ನೆರಡು ಗುಣಗಳಿಂದ ಕೂಡಿರುವರು. ಅದೇ ರೀತಿ ಮಂತ್ರಿಗಳಲ್ಲಿ ಆರು ಹಾಗೂ ಹನ್ನೆರಡು ಪ್ರಧಾನ ಗುಣಗಳಿರಬೇಕು. ರಾಜನೀತಿಯನ್ನು ಬಲ್ಲ ಆಚಾರ್ಯರು ಇವೆಲ್ಲವನ್ನೂ ಸೇರಿಸಿ ಮಂಡಲ ಎಂಬ ಶಬ್ದದಿಂದ ಕರೆದಿದ್ದಾರೆ. ಹೇ ಯುಧಿಷ್ಠಿರನೇ, ಈ ರಾಜನ ಹದಿನೇಳು ಗುಣಗಳು ಹಾಗೂ ಮಂತ್ರಿಗಳ ಹದಿನೆಂಟು ಗುಣಗಳಲ್ಲೇ ಷಾಡ್ಗುಣ್ಯವು ನಿಂತಿದೆ.

ವ್ಯಾಖ್ಯಾನ ವಿಶೇಷ– ಸಹಾಯಭೂತರಾದ ಮಂತ್ರಿಗಳು, ಸಾಧನಕ್ಕೆ ಉಪಾಯ ಭೂತವಾದ ತರ್ಕಗಳು, ದೇಶವಿಭಾಗ, ಕಾಲವಿಭಾಗ, ಆಪತ್ತಿನ ಪ್ರತೀಕಾರ – ಈ ಐದು ಕಾರ್ಯಸಿದ್ಧಿಯ ಐದು ಅಂಗಗಳು.

ಅಧ್ಯಯನ, ಯಜನ, ದಾನ, ಶಸ್ತ್ರಾಸ್ತ್ರಕೌಶಲ, ಯುದ್ದದಲ್ಲಿ ಪಲಾಯನ ಮಾಡದಿರುವುದು, ಬಾಹ್ಯ ಹಾಗೂ ಆಂತರ ಶತ್ರುಗಳ ಜಯ, ಕ್ಷಮಾಶೀಲತೆ, ದಯಾಗುಣ, ಗಾಂಭೀರ್ಯ, ಸ್ಥಿರತೆ, ಶೌರ್ಯ, ಅಹಂಕಾರ ಇಲ್ಲದಿರುವುದು – ಈ ಹನ್ನೆರಡು, ಹಿಂದಿನ ಐದು ಅಂಗಗಳು ಸೇರಿ ಒಟ್ಟು ಹದಿನೇಳು ರಾಜಗುಣಗಳು. **'ಷಟ್ ಚ ದ್ವಾದಶ ಚ'** ಎಂಬಲ್ಲಿ ಷಟ್ ಚ – ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ, ಆಶ್ರಯ. **ಸಂಧಿ** ಎಂದರೆ ಕೇಳಿದ ವಸ್ತುವನ್ನು ಅಥವಾ ಧನವನ್ನು ಕೊಟ್ಟು ಸಂಧಾನ ಮಾಡಿಕೊಳ್ಳುವುದು. **ವಿಗ್ರಹ** ಎಂದರೆ ತಾನು ಇದ್ದಲ್ಲೇ ಇದ್ದು ಶತ್ರುಪಕ್ಷದಲ್ಲಿ ದಾಹ, ಶೌರ್ಯಾದಿಗಳನ್ನು ನಡೆಸುವುದು. ಅಂದರೆ ಅವರ ಬಲವನ್ನು ಅಪಹರಿಸುವುದು. **ಯಾನ** ಅಂದರೆ ಯುದ್ಧಕ್ಕಾಗಿಯೇ ಹೊರಡುವುದು. **ಆಸನ** ಅಂದರೆ ಪರರು ಅತಿಬಲಗಳೆಂದು ತಿಳಿದು ಯುದ್ಧಕ್ಕೆ ಹೋಗದೆ ಸುಮ್ಮನಿರುವುದು. **ದ್ವೈಧ** ಎಂದರೆ ಎರಡೂ ಕಡೆಯಿಂದ ಶತ್ರುಗಳ ಬರುವ ಸಂದರ್ಭವಿದ್ದರೆ ಒಬ್ಬರ ಜೊತೆಗೆ ಸಂಧಿ ಮಾಡಿ ಇನ್ನೊಬ್ಬರೊಡನೆ ಯುದ್ಧ ಮಾಡುವುದು. **ಆಶ್ರಯ** ಎಂದರೆ ಬಲಿಷ್ಠರಾದ ಧರ್ಮನಿಷ್ಠರಾದ ರಾಜರನ್ನು ಆಶ್ರಯಿಸುವುದು. ಈ ಆರು ಮಂತ್ರಿಗುಣಗಳು. **ದ್ವಾದಶ** ಎಂಬಲ್ಲಿ ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿ ಎಂಬ ಶಕ್ತಿತ್ರಯ; ಶತ್ರುಜಯಸಿದ್ಧಿ, ಸ್ಥಾನಸಿದ್ಧಿ, ಕೋಶವೃದ್ಧಿ ಎಂಬ ಸಿದ್ಧಿತ್ರಯ; ಧರ್ಮೋದಯ, ಕೀರ್ತ್ಯುದಯ, ಜಯೋದಯ ಎಂಬ ಉದಯತ್ರಯಗಳು; ಚಾರಸಂಚಾರಣ, ಚೋರನಿವಾರಣ,

ನ್ಯಾಯಾನ್ಯಾಯ ವಿಚಾರಣ ಎಂಬ ನೀತಿತ್ರಯಗಳು. ಹೀಗೆ ಹನ್ನೆರಡು ಮಂತ್ರಿಗುಣಗಳು. ಹಿಂದಿನ ಆರು ಗುಣಗಳು ಸೇರಿ ಒಟ್ಟು ಹದಿನೆಂಟು ಮಂತ್ರಿ ಗುಣಗಳು.

ಷಾಡ್ಗುಣ್ಯಂ– ಸ್ವರಕ್ಷಣೆ, ತನ್ನ ದೇಶದ ರಕ್ಷಣೆ, ತನ್ನ ಮಿತ್ರರ ರಕ್ಷಣೆ, ಶತ್ರುಸಂಹಾರ, ಶತ್ರು ದೇಶದ ಅಪಹಾರ, ಶತ್ರುಗಳಿಗೆ ಮಿತ್ರರಾದವರ ಅಪಹಾರ – ಇವು ರಾಜ್ಯದ ಷಾಡ್ಗುಣ್ಯಗಳು.

ವೃದ್ಧಿಕ್ಷಯೌ ಚ ವಿಜ್ಞೇಯೌ ಸ್ಥಾನಂ ಚ ಕುರುನಂದನ ।
ದ್ವಿಸಪ್ತತ್ಯಾಂ ಮಹಾಬಾಹೋ ತತಃ ಷಾಡ್ಗುಣ್ಯಚಾರಣಾ ॥೬॥

ಹೇ ಕುರುನಂದನನೇ, ಮಹಾಬಾಹುವೇ, ತನ್ನ ವೃದ್ಧಿ ಹಾಗೂ ಶತ್ರುಗಳ ಕ್ಷಯವು, ಅಲ್ಲದೇ ಸ್ವರಾಜ್ಯದ ಸ್ಥಿತಿಯು ಈ ಮೂರು ಎಪ್ಪತ್ತೆರಡು ಕಾರಣಗಳಿಂದ ಉಂಟಾಗುತ್ತದೆ. ಇವೆಲ್ಲವೂ ಸರಿಯಾಗಿದ್ದರೆ ಅದರಿಂದಲೇ ಹಿಂದೆ ಹೇಳಿದ ಷಾಡ್ಗುಣ್ಯವು ಸರಿಯಾಗಿರುತ್ತದೆ.

ವ್ಯಾಖ್ಯಾನ ವಿಶೇಷ– ದ್ವಿಸಪ್ತತ್ಯಾಂ– ಅರವತ್ನಾಲ್ಕು ಕಲೆಗಳು, ನಾಲ್ಕು ಉಪಾಯಗಳು, ನಾಲ್ಕು ರೀತಿಯ ಸೇನಾಂಗಗಳು – ಇವು ಸೇರಿ ಎಪ್ಪತ್ತೆರಡು ರಾಜ್ಯವೃದ್ಧಿಕರ ಕಾರಣಗಳು.

ಈ ರೀತಿ ಅರ್ಥವಾಗುವ ವಿಸ್ತಾರವಾದ ವಿವರಣೆಯನ್ನು ನಾವು ಲಕ್ಷಾಲಂಕಾರದಲ್ಲಿ ನೋಡಬಹುದು.

ಹೀಗೆ ಅಲ್ಲಲ್ಲಿ ಬರುವ ಪದಗಳ ಸಂಶಯ ಅಥವಾ ಪ್ರಸಂಗಗಳ ಸಂಶಯಗಳನ್ನು ವಾದಿರಾಜ ಗುರುಸಾರ್ವಭೌಮರು ಯುಕ್ತಿಬದ್ಧವಾಗಿ ಪರಿಹರಿಸಿ ಮಹದುಪಕಾರವನ್ನು ಮಾಡಿರುತ್ತಾರೆ. ಇಂತಹ ಪವಿತ್ರವಾದ ಮಹಾಭಾರತದ ಸಂಶೋಧನಾ ಕಾರ್ಯದಲ್ಲಿ ನನ್ನನ್ನು ನಿಯೋಜಿಸಿ ಅನುಗ್ರಹಿಸಿದ ಪಲಿಮಾರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರನ್ನು ಕೃತಜ್ಞತಾ ಪೂರ್ವಕವಾಗಿ ನಮಿಸಿ ವಿರಮಿಸುತ್ತೇನೆ.

ಗುರುಗಳ ಚರಣಸೇವಕ
ರವಿಕುಮಾರಾಚಾರ್ಯ ನಕ್ರೆ
ಉಡುಪಿ

★ ★ ★ ★ ★

ಪ್ರಕಾಶಕರ ನುಡಿ

ಹದಿನೈದನೆಯ ಪರ್ವವೆನಿಸಿದ ಆಶ್ರಮವಾಸಿಕ ಪರ್ವವು ಸಮಗ್ರ ಕಥಾಭಾಗದ ಮುಕ್ತಾಯವನ್ನು ಧೃತರಾಷ್ಟ್ರನ ಕಥೆಯ ಮೂಲಕ ನಿರೂಪಿಸುತ್ತಿದೆ. ಧೃತರಾಷ್ಟ್ರನಿಗೂ ಭೀಮಸೇನನು ವೈರಾಗ್ಯವನ್ನು ಹುಟ್ಟಿಸಿ, ಅವನ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಿದ ಸನ್ನಿವೇಶಗಳು, ಧೃತರಾಷ್ಟ್ರನ ಕ್ಷಮಾ ಯಾಚನೆ, ವೇದವ್ಯಾಸದೇವರ ಅದ್ಭುತವಾದ ಮಹಿಮೆಗಳು, ಧೃತರಾಷ್ಟ್ರಾದಿಗಳ ನಿರ್ಯಾಣ, ಪಾಂಡವರ ರಾಜ್ಯಭಾರ. ಹೀಗೆ ಅನೇಕ ವಿಚಾರಗಳಿಂದ ಕೂಡಿರುವ ಪರ್ವ ಆಶ್ರಮವಾಸಿಕ ಪರ್ವ. ದುರ್ಯೋಧನಾದಿಗಳ ಉತ್ಪತ್ತಿಗೆ ಕಾರಣವಾದ ವ್ಯಾಸರು ಧೃತರಾಷ್ಟ್ರನ ಪ್ರಾರ್ಥನೆಯಂತೆ ಯುದ್ಧದಲ್ಲಿ ಮೃತರಾದವರನ್ನೆಲ್ಲ ಪುನಃ ದಿವ್ಯದೃಷ್ಟಿಯನ್ನು ಕೊಟ್ಟು ಅವರನ್ನೆಲ್ಲ ನೋಡುವಂತೆ ಅನುಗ್ರಹಿಸುತ್ತಾರೆ. ಒಂದು ರಾತ್ರಿಯ ಕಾಲ ವ್ಯಾಸರ ಆದೇಶದಂತೆ ತಮ್ಮ ತಮ್ಮ ಪತ್ನಿಯರೊಂದಿಗೆ ಧೃತರಾಷ್ಟ್ರನ ಮೃತರಾದ ಸಂಬಂಧಿಗಳು ಕಾಲ ಕಳೆಯುತ್ತಾರೆ. ಸರ್ವೇಶ್ವರರಾದ ವ್ಯಾಸರ ಈ ಅದ್ಭುತ ವ್ಯಾಪಾರವು ಆಶ್ಚರ್ಯವನ್ನುಂಟು ಮಾಡಿದೆ. ಈ ವ್ಯಾಸರ ಮಹಿಮೆಯನ್ನು ವೈಶಂಪಾಯನರ ಮುಖದಿಂದ ಕೇಳ ಕೇಳುತ್ತಲೇ ಜನಮೇಜಯನು ತಾನು ತನ್ನ ತಂದೆಯಾದ ಪರೀಕ್ಷಿತನನ್ನು ಕಾಣಲು ಬಯಸಿದ. ವೇದವ್ಯಾಸರು ವೈಕುಂಠದಿಂದ ಅವನನ್ನೂ ಅಲ್ಲಿಗೆ ಕರೆಸಿ ಜನಮೇಜಯನು ತನ್ನ ತಂದೆಯನ್ನು ನೋಡುವಂತೆ ಮಾಡಿದ್ದಾರೆ. ವ್ಯಾಸರ ಸರ್ವೋತ್ತಮತ್ವವನ್ನು; ಅತ್ಯಂತ ಮಹತ್ವಪೂರ್ಣವಾಗಿ ವಿಜ್ಞಾನ ಪ್ರಪಂಚಕ್ಕೆ ಸವಾಲನ್ನೊಡ್ಡುವ ಇಂತಹ ಅಪರೂಪವಾದ ಅನೇಕ ಸನ್ನಿವೇಶಗಳನ್ನು ನಿರೂಪಿಸುವ ಆಶ್ರಮವಾಸಿಕ ಪರ್ವವನ್ನು ಅತ್ಯಂತ ಶ್ರದ್ಧೆಯಿಂದ ಸುಂದರವಾಗಿ ಅನುವಾದಿಸಿಕೊಟ್ಟಿರುವ ವಿದ್ವಾನ್ ರವಿಕುಮಾರಾಚಾರ್ಯರಿಗೆ ತತ್ವಸಂಶೋಧನಾ ಸಂಸತ್‌ನ ವತಿಯಿಂದ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ

ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಆಶ್ರಮವಾಸಿಕಾದಿ ಪರ್ವದ ಭಾಗವನ್ನು ಅರ್ಥಸಹಿತ ಒಂದು ಸಂಪುಟದಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ|| ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾವಿದ್ಯನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ

ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಆಶ್ರಮವಾಸಿಕಾದಿ ಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು
ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ವಸಂಶೋಧನಸಂಸತ್,
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೭

ಆಶ್ರಮವಾಸಿಕಪರ್ವ

ಪುಟ ಸಂ.

1. ಯುಧಿಷ್ಠಿರನ ರಾಜ್ಯಭಾರ. ಕುಂತಿ ಮತ್ತು ದ್ರೌಪದಿಯೇ ಮೊದಲಾದವರಿಂದ ಗಾಂಧಾರಿಯ ವಿಷಯದಲ್ಲಿ ಅತ್ತೆಯಂತೆ ಗೌರವಪೂರ್ವಕವಾದ ನಡವಳಿಕೆ. ಭೀಮನನ್ನು ಬಿಟ್ಟು ಅರ್ಜುನನೇ ಮೊದಲಾದ ಎಲ್ಲರಿಂದಲೂ ಯುಧಿಷ್ಠಿರನ ಅಪ್ಪಣೆಯಂತೆ ವಿಶೇಷವಾಗಿ ಧೃತರಾಷ್ಟ್ರನ ಅನುಸರಣೆ 3

2. ನಗರವಾಸಿಗಳೆಲ್ಲರೂ ಧೃತರಾಷ್ಟ್ರನನ್ನು ಅನುಸರಿಸಲೇಬೇಕೆಂದು ಯುಧಿಷ್ಠಿರನಿಂದ ಕಟ್ಟಪ್ಪಣೆ ಜೊತೆಗೆ ಸಹೋದರರೊಂದಿಗೆ ಯಾವುದೇ ಪ್ರಮಾದ ಬರದಂತೆ ಧೃತರಾಷ್ಟ್ರನನ್ನು ಅನುಸರಿಸುವ ಮೂಲಕ ಧೃತರಾಷ್ಟ್ರನಿಗೆ ಆನಂದ 9

3. ಧೃತರಾಷ್ಟ್ರ ಗಾಂಧಾರಿಯರು ಪಾಂಡವರ ಜೊತೆ ಸುಖದಿಂದಿರುವುದು. ಧೃತರಾಷ್ಟ್ರನಲ್ಲಿ ಧರ್ಮಜನ ಅನನ್ಯ ಪ್ರೀತಿ. ಭೀಮಸೇನನ ಅಸಮಾಧಾನ 12

4. ಭೀಮಸೇನನ ಕಠೋರ ಮಾತುಗಳ ಶ್ರವಣದಿಂದ ವೈರಾಗ್ಯ ಹೊಂದಿದ ಧೃತರಾಷ್ಟ್ರನಿಂದ ಗಾಂಧಾರಿಯ ಜೊತೆಗೆ ವನಕ್ಕೆ ತೆರಳಬೇಕೆಂಬ ನಿಶ್ಚಯ 21

5. ಎಲ್ಲ ಪೌರಜನರನ್ನೂ ಕರೆಸಿ ಧೃತರಾಷ್ಟ್ರನು ತಾನು ವನಕ್ಕೆ ಹೋಗಬೇಕೆಂದು ನಿಶ್ಚಯಿಸಿರುವುದನ್ನು ನಿವೇದಿಸುವುದು. ಯುಧಿಷ್ಠಿರನಲ್ಲಿ ವನಗಮನವನ್ನು ಕುರಿತು ಒಪ್ಪಿಗೆ ನೀಡಬೇಕೆಂದು ಪ್ರಾರ್ಥಿಸುವುದು 25

6. ಧೃತರಾಷ್ಟ್ರನ ವನಗಮನ ನಿರ್ಧಾರದಿಂದ ದುಃಖಿತನಾದ ಯುಧಿಷ್ಠಿರನು ಅದನ್ನು ತಡೆಯಲು ಪ್ರಯತ್ನ 31

7. ಧರ್ಮಜನು ಧೃತರಾಷ್ಟ್ರನನ್ನು ಆಲಂಗಿಸಿ ಸಮಾಧಾನಪಡಿಸಿದುದು. ಧೃತರಾಷ್ಟ್ರನ ವನಗಮನದ ನಿರ್ಧಾರವನ್ನು ಧರ್ಮಜನು ತಡೆಯಲು ಯತ್ನಿಸಿದಾಗ ವೇದವ್ಯಾಸರ ಆಗಮನ 38

8. ವೇದವ್ಯಾಸರು ಯುಧಿಷ್ಠಿರನನ್ನು ಕುರಿತು ಸಕಾರಣವಾಗಿ ಕಾಡಿಗೆ ಹೋಗಲು ಧೃತರಾಷ್ಟ್ರನಿಗೆ ಒಪ್ಪಿಗೆ ನೀಡಬೇಕೆಂದು ವಿವರಿಸಿ ಆಶ್ರಮಕ್ಕೆ ಹಿಂದಿರುಗುವುದು. ಯುಧಿಷ್ಠಿರನು ಕಷ್ಟದಿಂದ ಧೃತರಾಷ್ಟ್ರನಿಗೆ ಒಪ್ಪಿಗೆ ನೀಡುವುದು 42

9. ಕಾಡಿಗೆ ಹೊರಟುನಿಂತ ಧೃತರಾಷ್ಟ್ರನು ಯುಧಿಷ್ಠಿರನಿಗೆ ರಾಜನೀತಿಯನ್ನು ನಿರೂಪಿಸುವುದು 47

10. ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ 54

11. ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ 59

12. ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ 65

13. ಧೃತರಾಷ್ಟ್ರನು ಯುಧಿಷ್ಠಿರನ ಮೂಲಕ ಎಲ್ಲ ಜನರನ್ನೂ ಕರೆಯಿಸಿ, ತಾನು ಕಾಡಿಗೆ ತೆರಳುವುದಾಗಿ ನಿವೇದಿಸುತ್ತಾ ಅವರಲ್ಲಿ ಒಪ್ಪಿಗೆಯನ್ನು ಯಾಚಿಸುವುದು 72

14. ಧೃತರಾಷ್ಟ್ರನು ಜನರಲ್ಲಿ, ತಾನು ದುರ್ಯೋಧನನ ಪಕ್ಷಪಾತದಿಂದ ಮಾಡಿದ ಅನ್ಯಾಯಗಳ ಬಗ್ಗೆ ಕ್ಷಮೆಯಾಚನೆ ಮಾಡುವುದು ಹಾಗೂ ಯುಧಿಷ್ಠಿರನನ್ನು ಅವರಲ್ಲಿ ನ್ಯಾಸರೂಪವಾಗಿ ಸಮರ್ಪಿಸಿ, ಅವರಿಂದ ತನ್ನ ವನಗಮನದ ಕುರಿತು ಒಪ್ಪಿಗೆಯನ್ನು ಯಾಚಿಸುವುದು 77

15. ಪೌರಜನರು ಬ್ರಾಹ್ಮಣನನ್ನು ಮುಂದೆ ಮಾಡಿಕೊಂಡು ಧೃತರಾಷ್ಟ್ರನಿಗೆ ಸಮಾಧಾನ ಪಡಿಸಿ ಕಷ್ಟದಿಂದ ಅವನಿಗೆ ಒಪ್ಪಿಗೆ ನೀಡುವುದು 82

16. ಧೃತರಾಷ್ಟ್ರನು ಭೀಷ್ಮ-ದುರ್ಯೋಧನಾದಿಗಳಿಗೆ ಶ್ರಾದ್ಧ ಮಾಡಲು ಬಯಸಿ, ವಿದುರನ ಮುಖಾಂತರ ಯುಧಿಷ್ಠಿರನಲ್ಲಿ ಸಂಪತ್ತನ್ನು ಯಾಚಿಸುವುದು. ಇದನ್ನು ಕೇಳಿ ವಿಮನಸ್ಕನಾದ ಭೀಮನಲ್ಲಿ ಅವನ ಅಭಿಪ್ರಾಯವನ್ನು ಬಲ್ಲ ಅರ್ಜುನನು ದ್ರವ್ಯವನ್ನು ಯಾಚಿಸಿದಾಗ, ಭೀಮನು ಧೃತರಾಷ್ಟ್ರನ ಅನ್ಯಾಯಗಳನ್ನು ಸ್ಮರಿಸುತ್ತಾ, ಹಣವನ್ನು ನೀಡುವ ಬಗ್ಗೆ ತನ್ನ ಸಮ್ಮತಿ ಇಲ್ಲವೆನ್ನುವುದು 96

17. ಭೀಮನು ದುರ್ಯೋಧನಾದಿಗಳ ಉದ್ದೇಶದಿಂದ ಶ್ರಾದ್ಧ ಮಾಡಲು ಸಂಪತ್ತನ್ನು ನೀಡಬಾರದೆಂದು ಅಭಿಪ್ರಾಯ ಪಟ್ಟಾಗ, ಯುಧಿಷ್ಠಿರನು ವಿದುರನಲ್ಲಿ ತನ್ನ ವೈಯಕ್ತಿಕ ಭಂಡಾರದಿಂದ ಹಣವನ್ನು ನೀಡುವೆನೆಂದು ತಿಳಿಸುವುದು 101

18. ವಿದುರನು ಧೃತರಾಷ್ಟ್ರನಲ್ಲಿ ಭೀಷ್ಮಾದಿಗಳಿಗೆ ಶ್ರಾದ್ಧ ಮಾಡಲು ಯುಧಿಷ್ಠಿರನು ಹಣವನ್ನು ನೀಡಲು ಒಪ್ಪಿದ್ದಾನೆ ಎಂದು ನಿವೇದಿಸುವುದು 105

19. ಧೃತರಾಷ್ಟ್ರನು ಭೀಷ್ಮ-ದುರ್ಯೋಧನಾದಿಗಳ ಉದ್ದೇಶದಿಂದ ಶ್ರಾದ್ಧ ಮಾಡುತ್ತಾ, ಹಣ-ವಸ್ತ್ರ ಹಾಗೂ ಅನ್ನಾದಿಗಳನ್ನು ನೀಡುವ ಮೂಲಕ ಬ್ರಾಹ್ಮಣರನ್ನು ಸಂತೋಷಪಡಿಸುವುದು 109

20. ಕುಂತಿಯ ಹೆಗಲ ಮೇಲೆ ಕೈಯನ್ನಿರಿಸಿದ ಗಾಂಧಾರೀ ದೇವಿಯ ಹೆಗಲನ್ನು ಆಧರಿಸಿರುವ ಧೃತರಾಷ್ಟ್ರನು ಶೋಕಾವಿಷ್ಟರಾದ ಪೌರರು ಹಾಗೂ ಯುಧಿಷ್ಠಿರಾದಿಗಳ ಜೊತೆಗೆ ಕಾಡಿಗೆ ಹೊರಡುವುದು 116

21. ಧೃತರಾಷ್ಟ್ರನು ಕಾಡಿಗೆ ಹೊರಟು ನಿಂತಾಗ ವಿದುರ ಹಾಗೂ ಸಂಜಯರೂ ವನವಾಸಕ್ಕಾಗಿ ಅವನೊಂದಿಗೆ ಹೊರಡುವುದು. ಹಾಗೆಯೇ ಯುಧಿಷ್ಠಿರಾದಿಗಳು ಬಹುರೀತಿಯಿಂದ ಪ್ರಾರ್ಥಿಸಿ ತಡೆಯುತ್ತಿದ್ದರೂ ಅವರನ್ನು ಸಮಾಧಾನಗೊಳಿಸಿ ಕುಂತಿಯೂ ಗಾಂಧಾರಿಯೊಂದಿಗೆ ಕಾಡಿಗೆ ಹೊರಡುವುದು. 120

22. ತನ್ನ ವನವಾಸನಿಶ್ಚಯದಿಂದ ದಿಗ್ಭ್ರಾಂತರಾದ ಯುಧಿಷ್ಠಿರಾದಿಗಳನ್ನು ಕುಂತಿಯು ಸಕಾರಣವಾಗಿ ಸಮಾಧಾನಗೊಳಿಸುವುದು. 127

23. ಕುಂತಿಯು ಬಹುಪ್ರಯತ್ನಪೂರ್ವಕವಾಗಿ ಯುಧಿಷ್ಠಿರಾದಿಗಳನ್ನು ಹಿಂದಿರುಗುವಂತೆ ಸೂಚಿಸಿದಾಗ, ಅವರು ಕಷ್ಟದಿಂದಲೇ ನಗರಕ್ಕೆ ಹಿಂದಿರುಗುವುದು. ಧೃತರಾಷ್ಟ್ರಾದಿಗಳು ವಿದುರನ ಜೊತೆ ಕಾಡನ್ನು ಪ್ರವೇಶಿಸಿ ಗಂಗಾತೀರದಲ್ಲಿ ಸಂಧ್ಯಾದಿಗಳನ್ನು ಪೂರೈಸಿ ರಾತ್ರಿಯನ್ನು ಕಳೆಯುವುದು 132

24. ಧೃತರಾಷ್ಟ್ರನು ವಿದುರಾದಿಗಳ ಜೊತೆಗೆ ಗಂಗಾತೀರದಿಂದ ಕುರುಕ್ಷೇತ್ರಕ್ಕೆ ತೆರಳಿ, ಅಲ್ಲಿ ಶತಯೂಪರ ಆಶ್ರಮದಲ್ಲಿ ವೇದವ್ಯಾಸರ ಆಜ್ಞೆಯಂತೆ ಅವರು ಉಪದೇಶಿಸಿದ ಕ್ರಮದಂತೆ ತಪಸ್ಸನ್ನು ಆಚರಿಸುವುದು 137

25. ಶತಯೂಪರ ಆಶ್ರಮಕ್ಕೆ ಧೃತರಾಷ್ಟ್ರನನ್ನು ನೋಡಬಯಸಿದ ನಾರದ-ಪರ್ವತಾದಿಗಳ ಆಗಮನ. ನಾರದರು ಧೃತರಾಷ್ಟ್ರನಿಗೆ 'ಆ ತಪೋವನವು ಸಹಸ್ರ ಚಿತ್ಯನೇ ಮೊದಲಾದ ರಾಜರ್ಷಿಗಳಿಗೆ ಸ್ವರ್ಗವನ್ನು ತಂದುಕೊಟ್ಟಿದೆ' ಎಂಬ ಮಹಿಮೆಯನ್ನು ವಿವರಿಸಿ, ವಿದುರಾದಿಗಳ ಜೊತೆ ಅವನಿಗೂ ಅಲ್ಲಿ ಉತ್ತಮ ಸಿದ್ಧಿಯಾಗುವುದೆಂದು ತಿಳಿಸುವುದು 141

26. ಶತಯೂಪನ ಪ್ರಶ್ನೆಗೆ ಉತ್ತರಿಸುತ್ತಾ ನಾರದರು ಧೃತರಾಷ್ಟ್ರನಿಗೆ ಮೂರು ವರ್ಷದ ನಂತರ ಗಾಂಧಾರಿಯೊಂದಿಗೆ ಕುಬೇರ ಲೋಕಪ್ರಾಪ್ತಿಯಾಗುವುದೆಂದು ತಿಳಿಸುವುದು 146

27. ಕುಂತಿ ಹಾಗೂ ಧೃತರಾಷ್ಟ್ರಾದಿಗಳ ವನಗಮನದಿಂದ ಕಂಗೆಟ್ಟ ಯುಧಿಷ್ಠಿರಾದಿಗಳು ಅದರ ಜೊತೆಗೆ ಅಭಿಮನ್ಯುವೇ ಮೊದಲಾದ ಬಂಧುಜನರನ್ನು ಸ್ಮರಿಸಿ, ಶೋಕಾವಿಷ್ಟರಾಗಿ ತಮ್ಮ ತಮ್ಮ ನಿತ್ಯಕರ್ಮಗಳಲ್ಲೂ ಅನಾಸಕ್ತಿಯನ್ನು ತೋರುವುದು 150

28. ಕಾಡಿನಲ್ಲಿರುವ ಕುಂತೀ-ಧೃತರಾಷ್ಟ್ರಾದಿಗಳನ್ನು ನೋಡಬೇಕೆಂಬ ಬಯಕೆಯಿಂದ ಯುಧಿಷ್ಠಿರನು ದ್ರೌಪದಿಯೇ ಮೊದಲಾದವರೊಂದಿಗೆ ಹಾಗೂ ಪೌರರು ಮತ್ತು ಸಹೋದರರೊಂದಿಗೆ ಕಾಡಿಗೆ ಹೊರಡುವುದು 153

29. ನಾನಾ ವಿಧವಾದ ವಾಹನಗಳಲ್ಲಿ ಬಂದಿರುವ ಪೌರರು ಹಾಗೂ ಸಹೋದರರೊಂದಿಗೆ ಯುಧಿಷ್ಠಿರನು ಧೃತರಾಷ್ಟ್ರಾದಿಗಳನ್ನು ನೋಡಲು ಶತಯೂಪರ ಆಶ್ರಮವನ್ನು ಪ್ರವೇಶಿಸುವುದು 160

30. ಯುಧಿಷ್ಠಿರಾದಿಗಳು ಶತಯೂಪಾಶ್ರಮದಲ್ಲಿ ಧೃತರಾಷ್ಟ್ರನನ್ನು ಸಮೀಪಿಸಿ, ತಮ್ಮ ತಮ್ಮ ಹೆಸರನ್ನು ಹೇಳುತ್ತಾ ಅವನಿಗೆ ವಂದಿಸುವುದು. ಧೃತರಾಷ್ಟ್ರನು ತನ್ನ ಅವಸ್ಥೆಯನ್ನು ನೋಡಿ ದುಃಖಿಸುವ ಅವರನ್ನು ಸಮಾಧಾನ ಪಡಿಸುವುದು 164

31. ಸಂಜಯನು ಅಲ್ಲಿರುವ ತಾಪಸರಿಗೆ ಯುಧಿಷ್ಠಿರಾದಿಗಳನ್ನು ಹಾಗೂ ದ್ರೌಪದಿಯೇ ಮೊದಲಾದ ಸ್ತ್ರೀಯರನ್ನು ಬೊಟ್ಟುಮಾಡಿ ತೋರಿಸುತ್ತಾ ಪರಿಚಯಿಸುವುದು 168

32. ಧೃತರಾಷ್ಟ್ರ ಮತ್ತು ಯುಧಿಷ್ಠಿರನ ಉಭಯ ಕುಶಲೋಪರಿ ಮಾತುಕತೆ. ಯುಧಿಷ್ಠಿರನು ಧೃತರಾಷ್ಟ್ರನನ್ನು ವಿದುರನೆಲ್ಲೆಂದು ಪ್ರಶ್ನಿಸಿದಾಗ ಅಲ್ಲಿರುವ ವ್ಯಕ್ತಿಯೊಬ್ಬ ಆಕಸ್ಮಿಕವಾಗಿ ಧೃತರಾಷ್ಟ್ರನ ಸಮೀಪಕ್ಕೆ ಬರುತ್ತಿರುವ ಜನಸಂಪರ್ಕವನ್ನು ನೋಡಿ ಹಿಂದಿರುಗಲು ಬಯಸಿದ ವಿದುರನನ್ನು ತೋರಿಸುವುದು. ನಂತರ ಯುಧಿಷ್ಠಿರನು ಅವನನ್ನು ಹಿಂಬಾಲಿಸುವುದು. ವಿದುರನು ಯೋಗಬಲದಿಂದ ತನ್ನ ಶರೀರವನ್ನು ಬಿಟ್ಟು ಯುಧಿಷ್ಠಿರನ ಶರೀರದಲ್ಲಿ ಪ್ರವೇಶಿಸುವುದು. ಯುಧಿಷ್ಠಿರನು ಧೃತರಾಷ್ಟ್ರಾದಿಗಳಲ್ಲಿ ಆ ಅದ್ಭುತ ಪ್ರಸಂಗವನ್ನು ವಿವರಿಸುವುದು 174

33. ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದ ಯುಧಿಷ್ಠಿರನು ಸಹೋದರರೊಂದಿಗೆ ಮಹರ್ಷಿಗಳ ಆಶ್ರಮವನ್ನು ಸಂದರ್ಶಿಸುವುದು. ಶತಯೂಪಾದಿ ಮಹರ್ಷಿಗಳು ಮತ್ತು ಶಿಷ್ಯರೊಂದಿಗೆ ಕೂಡಿದ ವೇದವ್ಯಾಸರು- ಯುಧಿಷ್ಠಿರಾದಿಗಳ ಜೊತೆಗಿರುವ ಧೃತರಾಷ್ಟ್ರನ ಆಶ್ರಮಕ್ಕೆ ಆಗಮಿಸುವುದು. ವೇದವ್ಯಾಸರು ಧೃತರಾಷ್ಟ್ರನಿಗೆ ಕುಶಲಪ್ರಶ್ನೆಯೊಂದಿಗೆ ವಿದುರನ ನಿಜಸ್ವರೂಪವನ್ನು ವಿವರಿಸುವುದು ಹಾಗೂ ''ಇತರ ಋಷಿಗಳಿಗೆ ಅಸಾಧ್ಯವಾದ ನಿಮಗೆ ಇಷ್ಟವಾದ ಆಶ್ಚರ್ಯಕರ್ಮವನ್ನು ನಡೆಸುವೆನೆಂದು'' ಶಪಥಗೈಯ್ಯುವುದು. 183

34. ಸಹೋದರರು ಹಾಗೂ ಸೈನ್ಯದಿಂದ ಕೂಡಿಕೊಂಡು ಯುಧಿಷ್ಠಿರನು ಧೃತರಾಷ್ಟ್ರನ ಆಶ್ರಮದಲ್ಲಿ ಒಂದು ಮಾಸದ ಕಾಲ ವಾಸವಾಗಿದ್ದಾಗ ವೇದವ್ಯಾಸರು ಹಾಗೂ ಧೃತರಾಷ್ಟ್ರಾದಿಗಳನ್ನು ಸುತ್ತುವರಿದು ನಾರದ-ಪರ್ವತಾದಿ ಋಷಿಗಳೂ, ಗಾಂಧಾರಿಯೇ ಮೊದಲಾದ ಸ್ತ್ರೀಯರೂ, ಪಾಂಡವರೂ ಒಟ್ಟುಸೇರುವುದು 195

35. ಗಾಂಧಾರಿಯು ವೇದವ್ಯಾಸರಲ್ಲಿ ಧೃತರಾಷ್ಟ್ರನಿಗೆ ಮಕ್ಕಳನ್ನು ನೋಡುವ ಬಯಕೆ ಇದೆ ಎಂದು ನಿವೇದಿಸಿದಾಗ ವೇದವ್ಯಾಸರು ಕುಂತಿಯಲ್ಲಿ ಅವಳ ಅಭೀಷ್ಟವನ್ನು ನಿವೇದಿಸುವಂತೆ ಸೂಚಿಸುವುದು 203

36. ಕುಂತಿಯು ವೇದವ್ಯಾಸರಲ್ಲಿ ದುರ್ವಾಸರ ಅನುಗ್ರಹದಿಂದ ಸೂರ್ಯದೇವನಿಂದ ತನ್ನಲ್ಲಿ ಕರ್ಣನ ಉತ್ಪತ್ತಿಯಾಗಿರುವುದನ್ನು ತಿಳಿಸುವ ಮೂಲಕ ಅವನನ್ನು ನೋಡಬೇಕೆಂಬ ಬಯಕೆ ಇದೆ ಎಂದು ನಿವೇದಿಸುವುದು. ವೇದವ್ಯಾಸರು ಸಕಾರಣವಾಗಿ ಕರ್ಣನ ಉತ್ಪತ್ತಿಯಿಂದ ಕುಂತಿಗೆ ಯಾವುದೇ ದೋಷವಿಲ್ಲ ಎನ್ನುತ್ತಾ ಅವಳ ಶಂಕೆಯನ್ನು ಪರಿಹರಿಸುವುದು 207

37. ವೇದವ್ಯಾಸರು ಗಾಂಧಾರಿಗೆ ಯುದ್ಧದಲ್ಲಿ ಹತರಾದ ದುರ್ಯೋಧನನೇ ಮೊದಲಾದ ಎಲ್ಲರನ್ನೂ ರಾತ್ರಿಯಲ್ಲಿ ತೋರಿಸುವೆನೆಂದು ಹೇಳುತ್ತಾ, ಧೃತರಾಷ್ಟ್ರನೇ ಮೊದಲಾದವರು ವಿಶೇಷವಾಗಿ ಗಂಧರ್ವಾಂಶದಿಂದ ಜನಿಸಿದವರು ಎಂದು ವಿವರಿಸುವುದು. ಧೃತರಾಷ್ಟ್ರಾದಿಗಳು ವೇದವ್ಯಾಸರ ಮಾತಿನಂತೆ ಗಂಗಾತೀರಕ್ಕೆ ತಲುಪಿ, ಬಂಧುಗಳನ್ನು ನೋಡುವ ಉತ್ಸಾಹದಿಂದ ಕಷ್ಟದಿಂದ ಹಗಲನ್ನು ಕಳೆಯುವುದು 215

38. ವೇದವ್ಯಾಸರು ರಾತ್ರಿಯಲ್ಲಿ ಗಂಗೆಯಲ್ಲಿ ಮುಳುಗಿ, ಎಲ್ಲರನ್ನೂ ಕರೆದಾಗ, ಯುದ್ಧದಲ್ಲಿ ಹತರಾದ ಕುರು-ಪಾಂಡವ ಉಭಯ ಪಕ್ಷೀಯರೆಲ್ಲರೂ ತಮ್ಮ ತಮ್ಮ ಆಭರಣ-ಆಯುಧ-ವಾಹನಾದಿಗಳ ಜೊತೆಗೆ ನೀರಿನಿಂದ ಮೇಲೆ ಬಂದು ತೀರದಲ್ಲಿ ಒಟ್ಟುಸೇರುವುದು. ಧೃತರಾಷ್ಟ್ರನು ವೇದವ್ಯಾಸರ ಅನುಗ್ರಹದಿಂದ ದಿವ್ಯವಾದ ದೃಷ್ಟಿಯನ್ನು ಪಡೆದು ದುರ್ಯೋಧನನೇ ಮೊದಲಾದ ಎಲ್ಲರನ್ನೂ ಅವಲೋಕಿಸುವುದು 221

39. ಧೃತರಾಷ್ಟ್ರ-ಯುಧಿಷ್ಠಿರಾದಿಗಳು ವೇದವ್ಯಾಸರ ಪ್ರಸಾದದಿಂದ ಮತ್ತೆ ಬದುಕಿಬಂದ, ಯುದ್ಧದಲ್ಲಿ ಹತರಾದ ತಮ್ಮ ಬಂಧುಗಳ ಜೊತೆಗೆ ಮಾತುಕತೆಗಳನ್ನಾಡುತ್ತಾ ಇಡೀ ರಾತ್ರಿ ವಿಹರಿಸುವುದು 226

40. ಜನಮೇಜಯನು ದೇಹವನ್ನು ತೊರೆದು ಹೋದ ಕುರು-ಪಾಂಡವಪಕ್ಷದ ಯೋಧರು ಪುನಃ ಹೇಗೆ ಬಂದರು? ಎಂದು ಪ್ರಶ್ನಿಸಿದಾಗ ಸಕಾರಣವಾಗಿ ಅದಕ್ಕೆ ಉತ್ತರ ನೀಡುವುದು 233

41. ಜನಮೇಜಯನು ಪರೀಕ್ಷಿತನನ್ನು ತೋರಿಸಿ ಎಂದು ಪ್ರಾರ್ಥಿಸಿದಾಗ ಪರೀಕ್ಷಿತನನ್ನೂ, ಶಮೀಕ ಮಹರ್ಷಿಯನ್ನೂ, ಶೃಂಗಿಯನ್ನೂ ತೋರಿಸುವುದು. ಜನಮೇಜಯನು ಅವಭೃಥಸ್ನಾನವನ್ನು ಮುಗಿಸಿ, ಆಸ್ತಿಕರನ್ನು ಪೂಜಿಸಿದ ನಂತರ ವೈಶಂಪಾಯನರಿಗೆ ಕಥೆಯನ್ನು ಮುಂದುವರಿಸಬೇಕೆಂದು ಪ್ರಾರ್ಥಿಸುವುದು 239

42. ಮಕ್ಕಳನ್ನು ನೋಡಿದ ನಂತರ ಧೃತರಾಷ್ಟ್ರನು ಯುಧಿಷ್ಠಿರಾದಿಗಳ ಜೊತೆಗೆ ಮತ್ತೆ ಆಶ್ರಮಕ್ಕೆ ಹಿಂದಿರುಗುವುದು. ವೇದವ್ಯಾಸರು ಧೃತರಾಷ್ಟ್ರನಲ್ಲಿ ಯುಧಿಷ್ಠಿರಾದಿಗಳನ್ನು ನಗರಕ್ಕೆ ಕಳುಹಿಸುವಂತೆ ಆದೇಶಿಸುವುದು. ನಗರಕ್ಕೆ ಹಿಂದಿರುಗುವ ಮನಸ್ಸಿಲ್ಲದಿದ್ದರೂ ಧೃತರಾಷ್ಟ್ರನ ಹಾಗೂ ಕುಂತೀದೇವಿ, ಗಾಂಧಾರಿದೇವಿಯರ ಆದೇಶದಂತೆ ಮತ್ತೆ ಎಲ್ಲರೊಂದಿಗೆ ಹಸ್ತಿನಪುರಕ್ಕೆ ಹಿಂದಿರುಗುವುದು 243

43. ನಾರದರು ಒಮ್ಮೆ ಹಸ್ತಿನಪುರಕ್ಕೆ ಬಂದು ಪಾಂಡವರಲ್ಲಿ ಧೃತರಾಷ್ಟ್ರಾದಿಗಳು ಸ್ವರ್ಗವನ್ನು ಪಡೆದರೆಂದು ತಿಳಿಸುವುದು. ಧೃತರಾಷ್ಟ್ರನು ಗಾಂಧಾರಿ, ಕುಂತಿ ಮತ್ತು ಸಂಜಯರಿಂದ ಕೂಡಿಕೊಂಡು ಗಂಗೆಯಲ್ಲಿ ಮಿಂದು, ತನ್ನ ಆಶ್ರಮಕ್ಕೆ ಹಿಂದಿರುಗುತ್ತಿರುವಾಗ ಮಾರ್ಗಮಧ್ಯದಲ್ಲಿ ದಾವಾಗ್ನಿಯು ಅವರನ್ನು ಸುತ್ತುವರಿಯುವುದು. ಧೃತರಾಷ್ಟ್ರನು ಸಂಜಯನನ್ನು ದೂರ ಹೋಗಲು ತಿಳಿಸಿ ಕುಂತಿ ಹಾಗೂ ಗಾಂಧಾರಿಯೊಂದಿಗೆ ಅಗ್ನಿಯನ್ನು ಪ್ರವೇಶಿಸುವುದು. ನಂತರ ಸಂಜಯನು ಹಿಮವತ್‌ಪರ್ವತಕ್ಕೆ ತೆರಳುವುದು 258

★ ★ ★ ★ ★

ಮೌಸಲಪರ್ವ

ಪುಟ ಸಂ.

1. ಪ್ರಜೆಗಳನ್ನು ರಕ್ಷಿಸುತ್ತಾ ತನ್ನ ಪಟ್ಟಣದಲ್ಲಿ ಸಹೋದರರೊಂದಿಗೆ ಸುಖವಾಗಿದ್ದ ಯುಧಿಷ್ಠಿರನು ಒಂದು ಬಾರಿ ಅಶುಭಸೂಚಕವಾದ ನಿಮಿತ್ತಗಳನ್ನು ನೋಡುವುದು. ಸ್ವಲ್ಪ ಕಾಲದ ನಂತರ ಬಲರಾಮ-ಕೃಷ್ಣರಿಂದ ಕೂಡಿದ ಎಲ್ಲ ಯಾದವರು ಪರಸ್ಪರವಾಗಿ ಮುಸಲದಿಂದ ಹೊಡೆದುಕೊಂಡು ಪೂರ್ಣವಾಗಿ ನಾಶರಾದರೆಂದು ಕೇಳಿ ತಿಳಿಯುವುದು 272

2. ವೈಶಂಪಾಯನರು ಜನಮೇಜಯನಿಗೆ ಯಾದವರು ಮುಸಲದಿಂದ ಹತರಾದರೆಂಬ ಕಥೆಯನ್ನು ಹೇಳಲು ಆರಂಭಿಸುವುದು. ವಿಶ್ವಾಮಿತ್ರಾದಿ ಮಹರ್ಷಿಗಳು ದ್ವಾರಕೆಗೆ ಆಗಮಿಸಿದಾಗ ಕೆಲವು ಯಾದವರು ಸಾಂಬನಿಗೆ ಸ್ತ್ರೀವೇಷವನ್ನು ತೊಡಿಸಿ, ಋಷಿಗಳಲ್ಲಿ ಈ ಗರ್ಭಿಣಿಯು ಎಂತಹ ಮಗುವನ್ನು ಹಡೆಯುತ್ತಾಳೆ ಎಂದು ಪ್ರಶ್ನಿಸುವುದು. ಆಗ ಕೋಪಗೊಂಡ ಮಹರ್ಷಿಗಳು ನಿಮ್ಮ ಕುಲವನ್ನು ನಾಶಮಾಡುವ ಕಬ್ಬಿಣದ ಒನಕೆಯನ್ನು ಹಡೆಯುತ್ತಾಳೆ ಎಂದು ಶಪಿಸುವುದು. ಮಾರನೆಯ ದಿನ ಸಾಂಬನು ಮುಸಲವನ್ನು ಹಡೆದಾಗ ಹೆದರಿದ ಅವರು ರಾಜನ ಆಜ್ಞೆಯಂತೆ ಆ ಮುಸಲವನ್ನು ಚೂರ್ಣೀಕರಿಸಿ ಸಮುದ್ರದಲ್ಲಿ ಎಸೆಯುವುದು 276

3. ದ್ವಾರಕೆಯಲ್ಲಿ ನಾನಾ ರೀತಿಯ ಉತ್ಪಾತಗಳ ಪ್ರಾದುರ್ಭಾವ. ಅದನ್ನು ನೋಡಿದ ಕೃಷ್ಣನು ಗಾಂಧಾರಿಯ ಶಾಪವನ್ನೂ ಸ್ಮರಿಸಿಕೊಂಡು, ಅದನ್ನು ಸತ್ಯಗೊಳಿಸಬೇಕೆಂದು ಎಲ್ಲ ವೃಷ್ಣಿಗಳೂ ತೀರ್ಥಯಾತ್ರೆಗೆ ಹೊರಡಬೇಕೆಂದು ಭಟರಿಂದ ಘೋಷಣೆ ಮಾಡಿಸುವುದು 281

4. ದ್ವಾರಕೆಯಲ್ಲಿ ವೃಷ್ಣಿ ಮತ್ತು ಅಂಧಕಾದಿಗಳು ಅನರ್ಥಸೂಚಕವಾದ ದುಃಸ್ವಪ್ನಾದಿಗಳನ್ನು ಕಾಣುವುದು. ಅನಂತರ ಕೃಷ್ಣನ ಆಜ್ಞೆಯಂತೆ ಸ್ತ್ರೀ-ಬಾಲರಿಂದ ಕೂಡಿದ ಎಲ್ಲರೂ ಪ್ರಭಾಸ ಕ್ಷೇತ್ರಕ್ಕೆ ಹೋಗುವುದು. ಅಲ್ಲಿ ನೃತ್ಯ-ಗಾನಾದಿ ಮಹೋತ್ಸವವನ್ನು ನಡೆಸುತ್ತಾ ಮದ್ಯಪಾನವನ್ನು ಮಾಡುವುದು. ಆ ಕಾಲದಲ್ಲಿ ಸಭಾಮಧ್ಯದಲ್ಲಿ ಸಾತ್ಯಕಿಯು ಸ್ಯಮಂತಕಮಣಿಯನ್ನು ಅಪಹರಣ ಮಾಡಿದ ಗುಟ್ಟನ್ನು ರಟ್ಟುಮಾಡುತ್ತಾ ಕೃತವರ್ಮನನ್ನು ತೆಗಳುವುದು. ಮಣಿಯ ವೃತ್ತಾಂತವನ್ನು ಕೇಳಿ ಸತ್ಯಭಾಮೆಯು ಖಿನ್ನಳಾದಾಗ ಅವಳನ್ನು ಸಂತೋಷ ಪಡಿಸುವುದಕ್ಕಾಗಿ ಸಾತ್ಯಕಿಯು ಕೃತವರ್ಮನ ಶಿರಸ್ಸನ್ನು ಛೇದಿಸುವುದು. ನಂತರ ಕೃತವರ್ಮ ಹಾಗೂ ಸಾತ್ಯಕಿಯ ಪಕ್ಷದವರು ಒನಕೆಯಂತಿರುವ ಹುಲ್ಲುಗಳಿಂದ ಪರಸ್ಪರ ಹೊಡೆದುಕೊಂಡು ಸಾಯಿಸುವುದು. 286

5. ಎಲ್ಲ ಯಾದವರೂ ಮರಣ ಹೊಂದಿದ ನಂತರ ಬಭ್ರು ಹಾಗೂ ದಾರುಕನೊಂದಿಗೆ ಬಲಭದ್ರನನ್ನು ಹುಡುಕುತ್ತಾ ಶ್ರೀಕೃಷ್ಣನು ಕಾಡಿನಲ್ಲಿ ಮರವನ್ನು ಆಶ್ರಯಿಸಿದ ಬಲದೇವನನ್ನು ನೋಡುವುದು. ನಂತರ ಕೃಷ್ಣನು ಪಾಂಡವರಿಗೆ ಸುದ್ದಿಯನ್ನು ಮುಟ್ಟಿಸುವುದಕ್ಕಾಗಿ ದಾರುಕನನ್ನು ಕಳುಹಿಸುವುದು. ಬಲಭದ್ರನು ಯೋಗದಿಂದ ಸರ್ಪಶರೀರವನ್ನು ಸ್ವೀಕರಿಸಿ, ಸಮುದ್ರವನ್ನು ಪ್ರವೇಶಿಸುವುದು. ಕೃಷ್ಣನು ಶರೀರವನ್ನು ಬಿಡುವುದಕ್ಕಾಗಿ ಯೋಗದಿಂದ ನಿದ್ರಿಸುವುದು. ವ್ಯಾಧನು ಪ್ರಾಣಿ ಎಂದುಕೊಂಡು ಕೃಷ್ಣನ ಪಾದಕ್ಕೆ ಬಾಣದಿಂದ ಗಟ್ಟಿಯಾಗಿ ಹೊಡೆಯುವುದು. ಅನಂತರ ಸಮೀಪಕ್ಕೆ ಬಂದು, ಕೃಷ್ಣನನ್ನು ಕಂಡು ಪಶ್ಚಾತ್ತಾಪದಿಂದ ನಮಸ್ಕರಿಸಿದ ಬೇಡನನ್ನು ಸ್ವರ್ಗಕ್ಕೆ ಕಳುಹಿಸುವುದು. ನಂತರ ಕೃಷ್ಣನು ಶರೀರವನ್ನು ತ್ಯಜಿಸಿ, ಸ್ವರ್ಗಲೋಕಕ್ಕೆ ಬಂದು, ಸ್ವರ್ಗದಲ್ಲಿರುವ ದೇವತೆಗಳಿಂದ ಪುಷ್ಪವೃಷ್ಟಿ ಹಾಗೂ ಸ್ತೋತ್ರಾದಿಗಳಿಂದ ಗೌರವಿಸಲ್ಪಟ್ಟು ತನ್ನ ಪರಂಧಾಮವನ್ನು ಪ್ರವೇಶಿಸುವುದು 303

6. ದಾರುಕನು ಹಸ್ತಿನಪುರಕ್ಕೆ ಬಂದು ಪಾಂಡವರಲ್ಲಿ ಎಲ್ಲ ಯಾದವರ ಕ್ಷಯವನ್ನು ನಿವೇದಿಸುವುದು. ಅರ್ಜುನನು ದ್ವಾರಕೆಗೆ ಆಗಮಿಸಿ ರುಗ್ಮಿಣಿಯೇ ಮೊದಲಾದವರನ್ನು ಸಮಾಧಾನಪಡಿಸಿ ವಸುದೇವನ ಗೃಹಕ್ಕೆ ತೆರಳುವುದು 314

7. ವಸುದೇವನು ತನ್ನ ಮನೆಗೆ ಬಂದ ಅರ್ಜುನನಿಗೆ ಯಾದವರ ಕ್ಷಯವನ್ನೂ, ಅದಕ್ಕೆ ಕಾರಣವನ್ನೂ ತಿಳಿಸುತ್ತಾ, ಕೃಷ್ಣಾದಿಗಳನ್ನು ಸ್ಮರಿಸಿಕೊಂಡು ಪರಿತಪಿಸುವುದು. ಹಾಗೆಯೇ ಅರ್ಜುನನಿಗೆ ಕೃಷ್ಣನ ಸೂಚನೆಯನ್ನು ತಿಳಿಸಿ ರಾಜ್ಯ, ಸ್ತ್ರೀ, ಧನಾದಿಗಳನ್ನು ಅರ್ಪಿಸಿ, ತಾನು ಪ್ರಾಣತ್ಯಾಗ ಮಾಡುವೆನೆಂದು ತಿಳಿಸುವುದು 317

8. ಅರ್ಜುನನು ವಸುದೇವನನ್ನು ಸಮಾಧಾನಪಡಿಸಿ, ಎಲ್ಲ ಪೌರರಿಗೂ ಅತಿಶೀಘ್ರದಲ್ಲೇ ದ್ವಾರಕೆಯನ್ನು ಸಮುದ್ರವು ಮುಳುಗಿಸುವುದೆಂದು ನಿವೇದಿಸಿ ಎಲ್ಲರೂ ಇಂದ್ರಪ್ರಸ್ಥಕ್ಕೆ ಹೊರಡಬೇಕೆಂದು ಸೂಚಿಸುವುದು. ಮಾರನೆಯ ದಿನ ಶೋಕದಿಂದ ಶರೀರತ್ಯಾಗವನ್ನು ಮಾಡಿದ ವಸುದೇವನಿಗೆ ಪತ್ನಿಯರೊಂದಿಗೆ ಸಂಸ್ಕಾರವನ್ನು ನಡೆಸಿ, ರಾಮ-ಕೃಷ್ಣರ ಶರೀರಕ್ಕೂ ದಹನಸಂಸ್ಕಾರವನ್ನು ನಡೆಸುವುದು. ಅನಂತರ ವಜ್ರ ಹಾಗೂ ಅರ್ಜುನರ ಜವಾಬ್ದಾರಿಯೊಂದಿಗೆ ಎಲ್ಲ ಪೌರಜನರೂ ಮುಂದೆ ಮುಂದೆ ನಡೆದಂತೆ ಸಮುದ್ರವು ಹಿಂಭಾಗದಲ್ಲಿ ದ್ವಾರಕೆಯನ್ನು ಮುಳುಗಿಸುತ್ತಾ ಬರುವುದು. ಅರ್ಜುನನು ಮಾರ್ಗಮಧ್ಯದಲ್ಲಿ ದಸ್ಯುಗಳಿಂದ ಪರಾಜಿತನಾಗಿ, ಅವರು

ಅಪಹರಿಸದೆ ಬಿಟ್ಟು ಉಳಿದ ಯಾದವ ಸ್ತ್ರೀಯರೊಂದಿಗೆ ತನ್ನ ದೇಶಕ್ಕೆ ಬಂದು, ಯುಧಿಷ್ಠಿರನ ಆಜ್ಞೆಯಂತೆ ವಜ್ರನನ್ನು ಇಂದ್ರಪ್ರಸ್ಥರಾಜ್ಯದಲ್ಲಿ ಅಭಿಷೇಕ ಮಾಡುವುದು. ಅನಂತರ ಸಾತ್ಯಕಿಯ ಮಗನೇ ಮೊದಲಾದವರನ್ನು ಅಲ್ಲಲ್ಲಿ ರಾಜ್ಯದಲ್ಲಿ ಅಭಿಷೇಕ ಮಾಡುವುದು. ರುಗ್ಮಿಣಿಯೇ ಮೊದಲಾದ ಕೆಲವು ಸ್ತ್ರೀಯರು ಅಗ್ನಿಯನ್ನು ಪ್ರವೇಶಿಸುವುದು. ಸತ್ಯಭಾಮೆಯೇ ಮೊದಲಾದ ಕೆಲವರು ತಪಸ್ಸಿಗಾಗಿ ಕಾಡಿಗೆ ತೆರಳುವುದು 324

9. ಅರ್ಜುನನು ವೇದವ್ಯಾಸರ ಆಶ್ರಮಕ್ಕೆ ತೆರಳಿ ಅಲ್ಲಿ ವೇದವ್ಯಾಸರನ್ನು ಸಂದರ್ಶಿಸುವುದು. ವೇದವ್ಯಾಸರಲ್ಲಿ ದ್ವಾರಕಾವೃತ್ತಾಂತವನ್ನು ನಿವೇದಿಸುವುದು. ವೇದವ್ಯಾಸರು ಅರ್ಜುನನಿಗೆ ಯುಧಿಷ್ಠಿರನೇ ಮೊದಲಾದ ನೀವು ಸ್ವರ್ಗಕ್ಕೆ ತೆರಳಿರೆಂದು ಸೂಚಿಸುವುದು. ಅನಂತರ ಅರ್ಜುನನು ಹಸ್ತಿನಪುರಕ್ಕೆ ಬಂದು ಯುಧಿಷ್ಠಿರನಿಗೆ ದ್ವಾರಕೆಯಲ್ಲಾದ ವೃತ್ತಾಂತವನ್ನು ನಿವೇದಿಸುವುದು 344

★ ★ ★ ★ ★

ಮಹಾಪ್ರಸ್ಥಾನಪರ್ವ

ಪುಟ ಸಂ.

1. ಸಹೋದರರು ಹಾಗೂ ದ್ರೌಪದಿಯೊಂದಿಗೆ ಸ್ವರ್ಗಕ್ಕೆ ತೆರಳಲಿರುವ ಯುಧಿಷ್ಠಿರನು ಯುಯುತ್ಸುವಿನಲ್ಲಿ ರಾಜ್ಯದ ಹೊಣೆಯನ್ನು ಒಪ್ಪಿಸಿ, ಪರೀಕ್ಷಿತನನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುವುದು. ಅನಂತರ ಬಹುಪ್ರಯಾಸದಿಂದ ಪೌರರ ಅನುಮತಿಯನ್ನು ಸ್ವೀಕರಿಸುವುದು 355

2. ನಾರುಮಡಿಗಳನ್ನುಡುವ ಮೂಲಕ ಶ್ವಾನದೊಂದಿಗೆ ಯುಧಿಷ್ಠಿರಾದಿಗಳು ಮನೆಯಿಂದ ಹೊರಡುವುದು. ಮಾರ್ಗಮಧ್ಯದಲ್ಲಿ ಅರ್ಜುನನು ಬತ್ತಳಿಕೆಯೊಂದಿಗೆ ಗಾಂಡೀವವನ್ನು ಅಗ್ನಿಯ ಮಾತಿನಂತೆ ವರುಣನಿಗಾಗಿ ಸಮುದ್ರದಲ್ಲಿ ಎಸೆಯುವುದು 360

3. ಮೇರುಪರ್ವತವನ್ನು ಏರುತ್ತಾ ಯುಧಿಷ್ಠಿರನು ಹಿರಿತನಕ್ಕೆ ಅನುಸಾರವಾಗಿ ಹಿಂಬಾಲಿಸುತ್ತಿರುವ ದ್ರೌಪದಿಯೇ ಮೊದಲಾದವರು ಯೋಗಭ್ರಷ್ಟರಾಗಿ ಕ್ರಮವಾಗಿ ಭೂಮಿಯಲ್ಲಿ ಬೀಳುತ್ತಿರುವಾಗ ಭೀಮನ ಪ್ರಶ್ನೆಯಂತೆ ಅವನಿಗೆ ಅವರು ಬಿದ್ದುದಕ್ಕೆ ಕಾರಣವನ್ನು ತಿಳಿಸುವುದು ಹಾಗೂ ಕೇವಲ ತನ್ನನ್ನು ಹಿಂಬಾಲಿಸುತ್ತಿರುವ ಶ್ವಾನದೊಂದಿಗೆ ಮುಂದೆ ನಡೆಯುವುದು 370

4. ಶ್ವಾನದೊಂದಿಗೆ ಮುಂದೆ ನಡೆಯುತ್ತಿರುವ ಯುಧಿಷ್ಠಿರನಿಗೆ ಇಂದ್ರನು ಸ್ವರ್ಗಕ್ಕೆ ತೆರಳಲು ತನ್ನ ರಥವನ್ನೇರುವಂತೆ ತಿಳಿಸುವುದು. ಯುಧಿಷ್ಠಿರನು ಶ್ವಾನವನ್ನು ಬಿಟ್ಟು ರಥವನ್ನೇರಲು ಬಯಸದಿದ್ದಾಗ, ಯಮನು ನಿಜಸ್ವರೂಪವನ್ನು ತೋರಿಸಿ ಅವನನ್ನು ಪ್ರಶಂಸಿಸುವುದು. ಅನಂತರ ಯಮ-ಇಂದ್ರಾದಿಗಳ ಜೊತೆಗೆ ರಥದಲ್ಲಿ ಸ್ವರ್ಗಕ್ಕೆ ತೆರಳಿದ ಯುಧಿಷ್ಠಿರನು ಅಲ್ಲಿ ಭೀಮಾದಿಗಳನ್ನು ಕಾಣದೆ ಸಹೋದರರಿಲ್ಲದ ಸ್ಥಳವು ಸ್ವರ್ಗವಾಗಿದ್ದರೂ ನನಗೆ ಅದು ಬೇಡ ಎಂದು ಹೇಳುತ್ತಾ, ಭೀಮಾದಿಗಳು ಇರುವಲ್ಲಿಗೆ ತನ್ನನ್ನು ಕಳುಹಿಸಿರೆಂದು ಇಂದ್ರನನ್ನು ಪ್ರಾರ್ಥಿಸುವುದು. 375

★ ★ ★ ★ ★

ಸ್ವರ್ಗಾರೋಹಣಪರ್ವ

ಪುಟ ಸಂ.

1. ಸ್ವರ್ಗವನ್ನು ಪ್ರವೇಶಿಸಿದ ಯುಧಿಷ್ಠಿರನು ಅಲ್ಲಿ ಎತ್ತರವಾದ ಆಸನದಲ್ಲಿ ಶೋಭಿಸುತ್ತಿರುವ ದುರ್ಯೋಧನನನ್ನು ನೋಡುವುದು ಹಾಗೂ ಅವನ ಏಳಿಗೆಯನ್ನು ಸಹಿಸಲಾಗದೆ, ಅವರಲ್ಲಿದ್ದ ದೋಷಗಳನ್ನು ಹೇಳುವ ಮೂಲಕ ದುರ್ಯೋಧನನೊಂದಿಗೆ ತನಗೆ ಸ್ವರ್ಗವಾಸದಲ್ಲೂ ಆಸಕ್ತಿಯಿಲ್ಲ ಎಂದು ನಿವೇದಿಸುತ್ತಾ ನಾರದರಲ್ಲಿ ತನ್ನ ಸಹೋದರರನ್ನು ನೋಡುವ ಬಯಕೆಯನ್ನು ನಿವೇದಿಸುವುದು 392

2. ಯುಧಿಷ್ಠಿರನು ಸ್ವರ್ಗದಲ್ಲಿ ಕರ್ಣನೇ ಮೊದಲಾದ ಬಂಧುಜನರನ್ನು ಕಾಣದೆ, ದೇವತೆಗಳಲ್ಲಿ ಎಂತಹ ಪ್ರದೇಶವಾಗಿದ್ದರೂ ಬಂಧುಜನರೊಂದಿಗೆ ತಾನು ವಾಸಿಸುತ್ತೇನೆ ಎಂದು ತಿಳಿಸುವುದು. ದೇವತೆಗಳಿಂದ ಆಜ್ಞಾಪಿತನಾದ ದೇವದೂತನು ಬಂಧುಜನರನ್ನು ತೋರಿಸುವುದಕ್ಕಾಗಿ ಯುಧಿಷ್ಠಿರನನ್ನು ನರಕ ಪ್ರದೇಶಕ್ಕೆ ಒಯ್ಯುವುದು. ನೋಡಲು ಅಶಕ್ಯವಾದ ನರಕದರ್ಶನವನ್ನು ಸಹಿಸಿಕೊಳ್ಳಲಾಗದೆ ದೇವದೂತನೊಂದಿಗೆ ಹಿಂದಿರುಗುತ್ತಿದ್ದ ಯುಧಿಷ್ಠಿರನು ತಾನು ಹಿಂದೆ ಕೇಳಿದ ಕಂಠಧ್ವನಿಗಳನ್ನು ಕೇಳಿಸಿಕೊಳ್ಳುವುದು. ಅನಂತರ ಯುಧಿಷ್ಠಿರನು ಕೇಳಿದಾಗ, ತಾವು ಕರ್ಣ-ಭೀಮಾದಿಗಳೆಂದು ತಿಳಿಸುವುದು. ಅನಂತರ ದೂತನಲ್ಲಿ ತಾನು ಹಿಂದಿರುಗಿ ಅಲ್ಲಿಗೆ ಬರಲಾರೆನೆಂದು ತಿಳಿಸು ಎಂದು ಸೂಚಿಸುವುದು. ದೂತನು ಇಂದ್ರನ ಸಮೀಪದಲ್ಲಿ ಯುಧಿಷ್ಠಿರನು ಹೇಳಿದುದನ್ನು ನಿವೇದಿಸುವುದು 398

3. ತಮ್ಮ ಪರೀಕ್ಷೆಯಲ್ಲಿ ಯುಧಿಷ್ಠಿರನು ಗೆದ್ದುದರಿಂದ ಸಂತೋಷಗೊಂಡ ಧರ್ಮ ಹಾಗೂ ಇಂದ್ರಾದಿಗಳು ಯುಧಿಷ್ಠಿರನ ಸಮೀಪಕ್ಕೆ ಬಂದಾಗ, ಅಲ್ಲಿ ಈ ಮೊದಲು ಕಂಡಿದ್ದ ನರಕಾದಿಗಳು ಕ್ಷಣದಲ್ಲಿ ಅಂತರ್ಧಾನವಾಗುವುದು. ಧರ್ಮರಾಜನು ಯುಧಿಷ್ಠಿರನನ್ನು ಪ್ರಶಂಸಿಸುತ್ತಾ, ಅವನು ನೋಡಿದ ನರಕವು ಪರೀಕ್ಷೆಗೋಸ್ಕರ ಇಂದ್ರನ ಮಾಯೆಯಿಂದ ಸೃಷ್ಟಿಯಾದುದೆಂದು ತಿಳಿಸುವುದು. ಅನಂತರ ಯುಧಿಷ್ಠಿರನು ದೇವಗಂಗೆಯಲ್ಲಿ ಮುಳುಗಿ, ಮಾನುಷಶರೀರವನ್ನು ಪರಿತ್ಯಜಿಸಿ, ದಿವ್ಯಶರೀರವನ್ನು ಸ್ವೀಕರಿಸಿ, ಮಹರ್ಷಿಗಳ ಹೊಗಳಿಕೆಯೊಂದಿಗೆ ದೇವತೆಗಳ ಜೊತೆಗೆ ತನ್ನ ಸಹೋದರರಿರುವ ದಿವ್ಯ ಸ್ಥಳಕ್ಕೆ ಆಗಮಿಸುವುದು 413

4. ಯುಧಿಷ್ಠಿರನು ಸ್ವರ್ಗದಲ್ಲಿ ವಾಸಿಸುತ್ತಿದ್ದ ಕೃಷ್ಣ-ಕರ್ಣಾದಿಗಳನ್ನು ನೋಡುವುದು. ಇಂದ್ರನು ಯುಧಿಷ್ಠಿರನಿಗೆ ದ್ರೌಪದಿಯ ಮಕ್ಕಳೇ ಮೊದಲಾದವರು ಅವರವರಿಗೆ ಯೋಗ್ಯವಾದ ಸ್ಥಾನದಲ್ಲಿ ಇರುವರೆಂದು ಪ್ರತ್ಯೇಕವಾಗಿ ತೋರಿಸುವುದು 428

5. ಭಾರತಶ್ರವಣವಿಧ್ಯಧ್ಯಾಯಃ 450

6. ಲಕ್ಷಾಲಂಕಾರದ ಶ್ಲೋಕಗಳು 469

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಆಶ್ರಮವಾಸಿಕಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯಃ

ಯಜ್ಞೇಶ್ವರೇಣಾಭಿಯುತೇಷು ಭಕ್ತ್ಯಾ
ಮಹೀಂ ಪ್ರಶಾಸತ್ಸು ಪೃಥಾಸುತೇಷು ।
ಯಿಯಕ್ಷುರಾಗಾನ್ನಿಶಿ ವಿಪ್ರವರ್ಯೋ
ಯುಧಿಷ್ಠಿರಂ ವಿತ್ತಮಭೀಪ್ಸಮಾನಃ ॥

ಯಜ್ಞೇಶ್ವರನಾದ ಶ್ರೀಕೃಷ್ಣನಿಂದ ಯುಕ್ತರಾದ ಪಾಂಡವರು ಹರಿಭಕ್ತಿಯುಕ್ತರಾಗಿ ಭೂಮಿಯನ್ನು ಆಳುತ್ತಿದ್ದಾಗ ಯಾಗಮಾಡುವ ಬಯಕೆಯಿಂದ ಬ್ರಾಹ್ಮಣೋತ್ತಮನೊಬ್ಬ ಹಣವನ್ನು ಬಯಸಿ ರಾತ್ರಿಯಲ್ಲಿ ಧರ್ಮರಾಜನ ಬಳಿಗೆ ಬಂದನು.

ಪ್ರಾತರ್ದದಾನೀತಿ ನೃಪಸ್ಯ ವಾಕ್ಯಂ
ನಿಶಮ್ಯ ವಿಪ್ರಸ್ತ್ವರಿತೋ ಮಖಾರ್ಥೇ ।
ಭೀಮಂ ಯಯಾಚೇ ಸ ನೃಪೋಕ್ತಮಾಶು
ನಿಶಮ್ಯ ಚಾದಾನ್ನಿಜಹಸ್ತಭೂಷಣಮ್ ॥

ಬೆಳಿಗ್ಗೆ ಕೊಡುವೆನೆಂದು ಯುಧಿಷ್ಠಿರನು ಹೇಳಿದಾಗ, ಅದನ್ನು ಕೇಳಿದ ಬ್ರಾಹ್ಮಣ ತ್ವರೆಯಿಂದ ಭೀಮನ ಹತ್ತಿರ ಯಾಗಕ್ಕೆ ಹಣವನ್ನು ಕೇಳಿದ. ಭೀಮನು ಯುಧಿಷ್ಠಿರನು ಹೇಳಿದ್ದನ್ನು ಕೇಳಿ ತಾನೇ ಬೇಗನೆ ತನ್ನ ಕೈಯ ಆಭರಣವನ್ನಿತ್ತನು.

ಅನರ್ಘ್ಯಮಗ್ನಿಪ್ರತಿಮಂ ವಿಚಿತ್ರಂ
ರತ್ನಾಂಚಿತಂ ವಿಪ್ರವರಸ್ತದಾಪ್ಯ ।
ಯಯೌ ಕೃತಾರ್ಥೋಽಥ ಚ ನಂದಿಘೋಷ-
ಮಕಾರಯದ್ ವಾಯುಸೂನುಸ್ತದೈವ ॥

ಭೀಮನ ಕೈಯ ಆಭರಣ ಅಮೂಲ್ಯ ವಿಚಿತ್ರ ರತ್ನಖಚಿತ. ಬೆಂಕಿಯಂತೆ ಹೊಳೆಯುತ್ತಿತ್ತು. ಬ್ರಾಹ್ಮಣೋತ್ತಮ ಅದನ್ನು ಪಡೆದು ಕೃತಾರ್ಥನಾಗಿ ಹೊರಟು ಹೋದನು. ಭೀಮನು ಆಗಲೇ ಆನಂದದ ಭೇರೀನಾದವನ್ನು ಮಾಡಿದನು.

ಅಕಾಲಜಂ ತಂ ತು ನಿಶಮ್ಯ ರಾಜಾ
ಪಪ್ರಚ್ಛ ದೂತೈಸ್ತಮುವಾಚ ಭೀಮಃ ।
ಯನ್ಮರ್ತ್ಯದೇಹೋಽಪಿ ವಿನಿಶ್ಚಿತಾಯು-
ರಭೂನ್ನೃಪಸ್ತೇನ ಮಮಾಽಸ ಹರ್ಷಃ ॥

ಅಕಾಲದಲ್ಲಿ ಉಂಟಾದ ಆ ಭೇರಿನಾದವನ್ನು ಕೇಳಿ ರಾಜಾ ಯುಧಿಷ್ಠಿರ ದೂತರ ಮೇಲೆ ದೂತರನ್ನು ಕಳಿಸಿ ಭೀಮನಲ್ಲಿ ವಿಚಾರಿಸಿದನು. ಭೀಮನೆಂದ, ಮಾನವ ದೇಹದವನಾಗಿದ್ದೂ ಯುಧಿಷ್ಠಿರ ತನ್ನಾಯುಷ್ಯದ ಬಗ್ಗೆ ನಿಶ್ಚಯ ಜ್ಞಾನವನ್ನು ಹೊಂದಿದ್ದಾನೆ. ಅದರಿಂದ ನನಗೆ ಆನಂದವಾಯಿತು.

ಇತೀರಿತೋಽಸೌ ನೃಪತಿಸ್ತ್ವರೇತ
ಧರ್ಮಾರ್ಥಮಿತ್ಯಸ್ಯ ಮತಂ ಪ್ರಪೂಜಯನ್ ।
ಜಗಾದ ಸಾಧ್ವಿತ್ಯಥ ಭೂಯ ಏವ
ಧರ್ಮೇ ತ್ವರಾವಾನಪಿ ಸಂಬಭೂವ ॥

ಭೀಮನು ಹೀಗೆ ಹೇಳಿದಾಗ ಯುಧಿಷ್ಠಿರ 'ಧರ್ಮಾಚರಣೆಯಲ್ಲಿ ತ್ವರೆ ಮಾಡಬೇಕು' ಎಂಬ ಭೀಮನ ಅಭಿಪ್ರಾಯವನ್ನು ತಿಳಿದು ಹೊಗಳುತ್ತ 'ಭೀಮನು ಮಾಡಿದ್ದು ಯುಕ್ತ' ಎಂದನು. ಬಳಿಕ ಧರ್ಮಾಚರಣೆಯಲ್ಲಿ ಇನ್ನೂ ಹೆಚ್ಚು ತ್ವರೆ ಮಾಡಿದನು.

ಒಂದನೆಯ ಅಧ್ಯಾಯ

ಯುಧಿಷ್ಠಿರನ ರಾಜ್ಯಭಾರ. ಕುಂತಿ ಮತ್ತು ದ್ರೌಪದಿಯೇ ಮೊದಲಾದವರಿಂದ ಗಾಂಧಾರಿಯ ವಿಷಯದಲ್ಲಿ ಅತ್ತೆಯಂತೆ ಗೌರವಪೂರ್ವಕವಾದ ನಡವಳಿಕೆ. ಭೀಮನನ್ನು ಬಿಟ್ಟು ಅರ್ಜುನನೇ ಮೊದಲಾದ ಎಲ್ಲರಿಂದಲೂ ಯುಧಿಷ್ಠಿರನ ಅಪ್ಪಣೆಯಂತೆ ವಿಶೇಷವಾಗಿ ಧೃತರಾಷ್ಟ್ರನ ಅನುಸರಣೆ.

ಜನಮೇಜಯಃ

ರಾಜ್ಯಂ ಪ್ರಾಪ್ಯ ನರವ್ಯಾಘ್ರಾಃ ಪಿತೃಪೈತಾಮಹಂ ಮಹತ್ ।
ಕಥಮಾಸನ್ ಮಹಾರಾಜೇ ಧೃತರಾಷ್ಟ್ರೇ ಮಹಾತ್ಮನಿ ॥೧॥

ಸ ಹಿ ರಾಜಾ ಹತಾಮಾತ್ಯೋ ಹತಪುತ್ರೋ ನಿರಾಶ್ರಯಃ ।
ಕಥಮಾಸೀದ್ ಗತೈಶ್ವರ್ಯೋ ಗಾಂಧಾರೀ ಚ ಯಶಸ್ವಿನೀ ॥೨॥

ಕಿಯಂತಂ ಚೈವ ಕಾಲಂ ತೇ ಪಿತರೋ ಮಮ ಪೂರ್ವಕಾಃ ।
ಸ್ಥಿತಾ ರಾಜ್ಯೇ ಮಹಾತ್ಮಾನಃ ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

ಜನಮೇಜಯ– ಮನುಜಶ್ರೇಷ್ಠರಾದ ಪಾಂಡವರು ತಮ್ಮ ತಂದೆ ಹಾಗೂ ಅಜ್ಜಂದಿರು ಆಳಿದ ವಿಶಾಲವಾದ ರಾಜ್ಯವನ್ನು ಪಡೆದ ನಂತರ ಮಹಾತ್ಮನಾದ ಮಹಾರಾಜ (ಧರ್ಮರಾಜನು) ಧೃತರಾಷ್ಟ್ರನ ವಿಷಯದಲ್ಲಿ ಹೇಗೆ ವರ್ತಿಸಿದರು? ಆ ಧೃತರಾಷ್ಟ್ರ ರಾಜನು ಆಪ್ತಮಂತ್ರಿಗಳನ್ನು ಕಳೆದುಕೊಂಡು, ತನ್ನ ಮಕ್ಕಳನ್ನೂ ಕಳೆದುಕೊಂಡು, ಆಶ್ರಯ ಹೀನನಾಗಿ, ಐಶ್ವರ್ಯ ಹೀನನಾಗಿ ಹೇಗೆ ಜೀವಿಸುತ್ತಿದ್ದನು? ಜೊತೆಗೆ ಕೀರ್ತಿಯುಕ್ತಳಾದ ಗಾಂಧಾರಿಯು ಹೇಗಿದ್ದಳು? ಮಹಾತ್ಮರಾದ ನನ್ನ ಅಜ್ಜಂದಿರಾದ ಆ ಪಾಂಡವರು ತಮ್ಮ ರಾಜ್ಯದಲ್ಲಿ ಎಷ್ಟು ಕಾಲ ಆಡಳಿತ ನಡೆಸಿದರು? ಇದನ್ನೂ ಕೂಡ ನನಗೆ ತಿಳಿಸುವವರಾಗಿ.

ವೈಶಂಪಾಯನಃ

ಪ್ರಾಪ್ಯ ರಾಜ್ಯಂ ಮಹಾತ್ಮಾನಃ ಪಾಂಡವಾ ಹತಶತ್ರವಃ ।
ಧೃತರಾಷ್ಟ್ರಂ ಪುರಸ್ಕೃತ್ಯ ಪೃಥಿವೀಂ ಪರ್ಯಪಾಲಯನ್ ॥೪॥

ವೈಶಂಪಾಯನ– ಶತ್ರುಗಳನ್ನು ಜಯಿಸಿದ ಮಹಾತ್ಮರಾದ ಪಾಂಡವರು ರಾಜ್ಯವನ್ನು ಪಡೆದ ನಂತರ ಧೃತರಾಷ್ಟ್ರನನ್ನು ಮುಂದಿರಿಸಿಕೊಂಡು ಭೂಮಿಯನ್ನು ಆಳಿದರು.

ಧೃತರಾಷ್ಟ್ರಮುಪಾತಿಷ್ಠದ್ ವಿದುರಃ ಸಂಜಯಸ್ತಥಾ ।
ಯುಯುತ್ಸುಶ್ಚೈವ ಮೇಧಾವೀ ವೈಶ್ಯಾಪುತ್ರಃ ಸ ಕೌರವಃ ॥೫॥

ವಿದುರ, ಸಂಜಯ ಹಾಗೂ ಧೃತರಾಷ್ಟ್ರನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದ ಮೇಧಾವಿಯಾದ ಯುಯುತ್ಸು ಇವರೆಲ್ಲರು ಧೃತರಾಷ್ಟ್ರನ ಜೊತೆಗಿದ್ದು ಅವನನ್ನು ಸೇವಿಸಿದರು.

ಪಾಂಡವಾಃ ಸರ್ವಕಾರ್ಯೇಷು ಪೃಚ್ಛಂತಿ ಸ್ಮ ಚ ತಂ ನೃಪಮ್ ।
ಚಕ್ರುಸ್ತೇನಾಭ್ಯನುಜ್ಞಾತಾ ವರ್ಷಾಣಿ ದಶ ಪಂಚ ಚ ॥೬॥

ಪಾಂಡವರಾದರೂ ಎಲ್ಲ ಕೆಲಸಕಾರ್ಯಗಳನ್ನು ನಡೆಸುವ ಮೊದಲು ಧೃತರಾಷ್ಟ್ರನ ಸಲಹೆಯನ್ನು ಕೇಳುತ್ತಿದ್ದರು. ಅವನಿಂದ ಒಪ್ಪಿಗೆ ಪಡೆದೇ ಕೆಲಸಕಾರ್ಯಗಳನ್ನು ನಡೆಸುತ್ತಾ ಹದಿನೈದು ವರ್ಷಗಳ ಕಾಲ ರಾಜ್ಯಭಾರ ಮಾಡಿದರು.

ಸದಾऽಭಿಗಮ್ಯ ತೇ ವೀರಾಃ ಪರ್ಯುಪಾಸತ ತಂ ನೃಪಮ್ ।
ಪಾದಾಭಿವಂದನಂ ಕೃತ್ವಾ ಯುಧಿಷ್ಠಿರಮತೇ ಸ್ಥಿತಾಃ ॥೭॥

ಯುಧಿಷ್ಠಿರನ ಅಭಿಪ್ರಾಯಕ್ಕೆ ಅನುಕೂಲರಾಗಿರುವ ಆ ಪಾಂಡವವೀರರು ರಾಜನಾದ ಧೃತರಾಷ್ಟ್ರನ ಸಮೀಪಕ್ಕೆ ಪ್ರತಿನಿತ್ಯವೂ ಬಂದು ಪಾದಗಳಿಗೆ ನಮಸ್ಕರಿಸಿ ಅವನನ್ನು ಸೇವಿಸುತ್ತಿದ್ದರು.

ತೇನ ತೇ ಮೂರ್ಧ್ನಿ ಚಾಘ್ರಾತಾಃ ಸರ್ವಕಾರ್ಯಾಣಿ ಚಕ್ರಿರೇ ॥೮॥

ಧೃತರಾಷ್ಟ್ರನಾದರೂ ಅವರ ಶಿರಸ್ಸನ್ನು ಆಘ್ರಾಣಿಸಿ ಸಂತೈಸುತ್ತಿದ್ದನು. ಹೀಗೆ ಅವನಿಂದ ಒಪ್ಪಿಗೆಯನ್ನು ಪಡೆದು ಎಲ್ಲ ಕಾರ್ಯಗಳನ್ನೂ ಪಾಂಡವರು ನೆರವೇರಿಸುತ್ತಿದ್ದರು.

ಕುಂತೀ ಭೋಜಸುತಾ ಚೈವ ಗಾಂಧಾರೀಮನ್ವವರ್ತತ ।
ದ್ರೌಪದೀ ಚ ಸುಭದ್ರಾ ಚ ಯಾಶ್ಚಾನ್ಯಾಃ ಪಾಂಡವಸ್ತ್ರಿಯಃ ॥೯॥

ಸಮಾಂ ವೃತ್ತಮವರ್ತಂತ ತಯೋಃ ಶ್ವಶ್ರ್ವೋರ್ಯಥಾವಿಧಿ ॥೧೦॥

ಭೋಜಸುತೆಯಾದ ಕುಂತಿಯೂ ಕೂಡ ಗಾಂಧಾರಿದೇವಿಯನ್ನು ಅನುಸರಿಸಿಕೊಂಡೇ ನಡೆಯುತ್ತಿದ್ದಳು. ದ್ರೌಪದೀ ಹಾಗೂ ಸುಭದ್ರೆಯರು ಸೇರಿದಂತೆ ಎಲ್ಲ ಪಾಂಡವಪತ್ನಿಯರು ಅತ್ತೆಯರಾದ ಗಾಂಧಾರಿ ಹಾಗೂ ಕುಂತಿಯರಿಬ್ಬರಲ್ಲೂ ಯಥಾಯೋಗ್ಯವಾದ ಸಮಾನವಾದ ಗೌರವವನ್ನು ಸೂಚಿಸಿ ಅವರನ್ನು ಅನುಸರಿಸಿದರು.

ಶಯನಾನಿ ಮಹಾರ್ಹಾಣಿ ವಾಸಾಂಸ್ಯಾಭರಣಾನಿ ಚ ।
ಸರ್ವಾಣಿ ಭಕ್ಷ್ಯಭೋಜ್ಯಾನಿ ವಿವಿಧಾನಿ ಚ ಸರ್ವಶಃ ॥೧೧॥

ಯುಧಿಷ್ಠಿರೋ ಮಹಾರಾಜೋ ಧೃತರಾಷ್ಟ್ರೇ ಹ್ಯುಪಾನಯತ್ ।
ತಥೈವ ಕುಂತೀ ಗಾಂಧಾರ್ಯಾಂ ಗುರುವೃತ್ತಿಮವರ್ತತ ॥೧೨॥

ಮಹಾರಾಜನಾದ ಯುಧಿಷ್ಠಿರನು ಧೃತರಾಷ್ಟ್ರನಿಗೆ ಉತ್ತಮವಾದ ಹಾಸಿಗೆಗಳನ್ನೂ, ಬೆಲೆಬಾಳುವ ವಸ್ತ್ರಾಭರಣಗಳನ್ನೂ, ನಾನಾ ವಿಧವಾದ ಎಲ್ಲ ರೀತಿಯ ಭಕ್ಷ್ಯಭೋಜ್ಯಗಳನ್ನೂ ಎಲ್ಲ ರೀತಿಯಿಂದಲೂ ಸಮರ್ಪಿಸುತ್ತಿದ್ದನು. ಅದೇ ರೀತಿ ಕುಂತಿಯೂ ಕೂಡ ಗಾಂಧಾರಿದೇವಿಯ ವಿಷಯದಲ್ಲಿ ಗುರು-ಹಿರಿಯರಂತೆಯೇ ನಡೆದುಕೊಂಡಳು.

ವಿದುರಃ ಸಂಜಯಶ್ಚೈವ ಯುಯುತ್ಸುಶ್ಚೈವ ಕೌರವ ।
ಉಪಾಸಂತಿ ಸ್ಮ ತಂ ವೃದ್ಧಂ ಹತಪುತ್ರಂ ನರಾಧಿಪಮ್ ॥೧೩॥

ಹೇ ಜನಮೇಜಯನೇ! ವಿದುರ, ಸಂಜಯ ಹಾಗು ಯುಯುತ್ಸು ಇವರು ಮಕ್ಕಳನ್ನು ಕಳೆದುಕೊಂಡ ವಯಸ್ಸಾದ ಧೃತರಾಷ್ಟ್ರರಾಜನನ್ನು ಸೇವೆಗೈಯ್ಯುತ್ತಿದ್ದರು.

ಸ್ಯಾಲೋ ದ್ರೋಣಸ್ಯ ಯಶ್ಚೈಕೋ ದಯಿತೋ ಬ್ರಾಹ್ಮಣೋ ಮಹಾನ್ ।
ಸ ಚ ತಸ್ಮಿನ್ ಮಹೇಷ್ವಾಸಃ ಕೃಪಃ ಸಮಭವತ್ ತದಾ ॥೧೪॥

ಅದೇ ಸಮಯದಲ್ಲಿ ದ್ರೋಣನ ಒಬ್ಬ ಭಾವನಾದ ಮತ್ತು ದ್ರೋಣನಿಗೆ ಪ್ರೀತಿಪಾತ್ರನಾದ, ಉತ್ತಮಬ್ರಾಹ್ಮಣನಾದ, ಧನುರ್ವಿದ್ಯೆಯನ್ನು ಚೆನ್ನಾಗಿ ತಿಳಿದ ಕೃಪನು ಧೃತರಾಷ್ಟ್ರನ ಜೊತೆಗೇ ಇರುತ್ತಿದ್ದನು.

ವ್ಯಾಸಶ್ಚ ಭಗವಾನ್ ನಿತ್ಯಂ ವಾಸಂ ಚಕ್ರೇ ನೃಪೇಣ ಹ ।
ಕಥಾಂ ಕುರ್ವನ್ ಪುರಾಣರ್ಷಿರ್ದೇವರ್ಷಿರ್ನೃಪರಕ್ಷಸಾಮ್ ॥೧೫॥

ಪುರಾಣಗಳನ್ನು ಜಗತ್ತಿಗೆ ನೀಡಿದ ದೇವರ್ಷಿಯಾದ ಭಗವಾನ್ ವ್ಯಾಸಮಹರ್ಷಿಗಳು ರಾಜರ ಹಾಗೂ ರಾಕ್ಷಸರ ಕಥೆಗಳನ್ನು ಹೇಳುತ್ತಾ ರಾಜನಾದ ಧೃತರಾಷ್ಟ್ರನೊಂದಿಗೆ ನಿತ್ಯವೂ ವಾಸವಾಗಿದ್ದರು.

ಧರ್ಮಯುಕ್ತಾನಿ ಕಾರ್ಯಾಣಿ ವ್ಯವಹಾರಾನ್ವಿತಾನಿ ಚ ।
ಧೃತರಾಷ್ಟ್ರಾಭ್ಯನುಜ್ಞಾತೋ ವಿದುರಸ್ತಾನ್ಯಕಾರಯತ್ ॥೧೬॥

ಧೃತರಾಷ್ಟ್ರನಿಂದ ಅನುಜ್ಞೆಯನ್ನು ಪಡೆದುಕೊಂಡ ವಿದುರನು ಧಾರ್ಮಿಕವಾದ ಕಾರ್ಯಗಳನ್ನೂ, ವ್ಯಾವಹಾರಿಕವಾದ ನ್ಯಾಯತೀರ್ಮಾನಗಳನ್ನೂ ನಡೆಸುತ್ತಿದ್ದನು.

ಕಾಮತೋ ಹಿ ಪ್ರಿಯಾಣ್ಯಸ್ಯ ಕಾರ್ಯಾಣಿ ಸುಗುರೂಣ್ಯಪಿ ।
ಪ್ರಾಪ್ಯಂತೇಽರ್ಥೈಃ ಸುಲಘುಭಿಃ ಪ್ರಭಾವಾದ್ ವಿದುರಸ್ಯ ವೈ ॥೧೭॥

ಜೊತೆಗಿರುವ ವಿದುರನ ಪ್ರಭಾವದಿಂದ ಈ ಧೃತರಾಷ್ಟ್ರನಿಗೆ ಪ್ರಿಯವಾದ ಕಾರ್ಯಗಳು ಬಹಳವಾಗಿದ್ದರೂ ಕಡಿಮೆ ವೆಚ್ಚದಲ್ಲಿಯೇ ಶ್ರೇಷ್ಠವಾಗಿ ನಡೆಯುತ್ತಿದ್ದವು.

ಅಕರೋದ್ ಬಂಧಮೋಕ್ಷಾಂಶ್ಚ ವಧ್ಯಾನಾಂ ಮೋಕ್ಷಣಂ ತಥಾ ॥೧೮॥

ನ ಚ ಧರ್ಮಾತ್ಮಜೋ ರಾಜಾ ಕದಾಚಿತ್ ಕಿಂಚಿದಬ್ರವೀತ್ ॥೧೯॥

ಮಹಾತ್ಮನಾದ ವಿದುರನು ಖೈದಿಗಳಿಗೆ ಬಂಧನದಿಂದ ಬಿಡುಗಡೆಯನ್ನೂ, ಮರಣದಂಡನೆಗೊಳಗಾದವರಿಗೂ ಬಿಡುಗಡೆಯನ್ನೂ ಮಾಡುತ್ತಿದ್ದನು. ರಾಜನಾದ ಧರ್ಮಾತ್ಮನಾದ ಯುಧಿಷ್ಠಿರನು ಯಾವಾಗಲೂ ಏನನ್ನೂ ಈ ವಿಷಯದಲ್ಲಿ ಹೇಳುತ್ತಿರಲಿಲ್ಲ.

ವಿಹಾರಯಾತ್ರಾಸು ಪುನಃ ಕುರುರಾಜೋ ಯುಧಿಷ್ಠಿರಃ ।
ಸರ್ವಾನ್ ಕಾಮಾನುಪಸ್ಥಾಪ್ಯ ಧೃತರಾಷ್ಟ್ರೇ ನ್ಯವೇದಯತ್ ॥೨೦॥

ಕುರುರಾಜನಾದ ಯುಧಿಷ್ಠಿರನು ವಿಹಾರ ಹಾಗೂ ಯಾತ್ರೆಗಳ ಸಂದರ್ಭದಲ್ಲೂ ಅಗತ್ಯವಿದ್ದ ಎಲ್ಲ ಅಭೀಷ್ಟವಸ್ತುಗಳನ್ನೂ ಜೊತೆಗೂಡಿಸಿ ಧೃತರಾಷ್ಟ್ರನಿಗೆ ಒಪ್ಪಿಸುತ್ತಿದ್ದನು.

ಆರಾಲಿಕಾಃ ಸೂಪಕಾರಾ ರಾಗಷಾಡವಿಕಾಸ್ತಥಾ ।
ಉಪಾತಿಷ್ಠಂತ ರಾಜಾನಂ ಧೃತರಾಷ್ಟ್ರಂ ಯಥಾಪುರಮ್ ॥೨೧॥

ಅನ್ನವನ್ನು ಮಾಡುವ ಆರಾಲಿಕರು, ವ್ಯಂಜನ ಪದಾರ್ಥವನ್ನು ಮಾಡುವ ಸೂಪಕಾರರು, ಚಿತ್ರವಿಚಿತ್ರವಾದ ಭಕ್ಷ್ಯಲೇಹ್ಯಾದಿಗಳನ್ನು ಮಾಡುವ ರಾಗಷಾಡವಿಕರು ಮೊದಲಿನಂತೆಯೇ ರಾಜನಾದ ಧೃತರಾಷ್ಟ್ರನನ್ನು ಸೇವಿಸುತ್ತಿದ್ದರು.

ವಾಸಾಂಸಿ ಸುಮಹಾರ್ಹಾಣಿ ಮಾಲ್ಯಾನಿ ವಿವಿಧಾನಿ ಚ ।
ಉಪಜಹ್ರುರ್ಯಥಾಕಾಲಂ ಧೃತರಾಷ್ಟ್ರಸ್ಯ ಪಾಂಡವಾಃ ॥೨೨॥

ಪಾಂಡವರು ಬೆಲೆಬಾಳುವ ವಸ್ತುಗಳನ್ನು, ನಾನಾ ರೀತಿಯ ಮಾಲೆಗಳನ್ನು ಕಾಲಕ್ಕೆ ಸರಿಯಾಗಿ ಧೃತರಾಷ್ಟ್ರನಿಗೆ ಒಪ್ಪಿಸುತ್ತಿದ್ದರು.

ಮೈರೇಯಕಾಣಿ ಮಾಂಸಾನಿ ಪಾನಕಾನಿ ಲಘೂನಿ ಚ ।
ಚಿತ್ರಾನ್. ಭಕ್ಷ್ಯವಿಕಾರಾಂಶ್ಚ ಚಕ್ರುರಸ್ಯ ಯಥಾಪುರಮ್ ॥೨೩॥

ಈ ಹಿಂದಿನಂತೆಯೇ ನಾನಾ ರೀತಿಯ ಮದ್ಯಗಳನ್ನೂ, ಮಾಂಸಪದಾರ್ಥಗಳನ್ನೂ ಸಿಹಿಪಾನಕ ಮೊದಲಾದ ಸಣ್ಣ ಸಣ್ಣ ವಸ್ತುಗಳನ್ನೂ, ಚಿತ್ರವಿಚಿತ್ರವಾದ ಭಕ್ಷ್ಯ ವಸ್ತುಗಳನ್ನೂ ಧೃತರಾಷ್ಟ್ರನಿಗಾಗಿ ತಯಾರಿಸುತ್ತಿದ್ದರು.

ಯೇ ಚಾಪಿ ಪೃಥಿವೀಪಾಲಾಃ ಸಮಾಜಗ್ಮುಃ ಸಮಂತತಃ ।
ಉಪಾತಿಷ್ಠಂತ ತೇ ಸರ್ವೇ ಕೌರವೇಂದ್ರಂ ಯಥಾಪುರಮ್ ॥೨೪॥

ರಾಜದರ್ಶನಕ್ಕಾಗಿ ಯಾರೆಲ್ಲ ಸಾಮಂತರಾಜರು ಬರುತ್ತಿದ್ದರೋ ಅವರೆಲ್ಲರೂ ಧೃತರಾಷ್ಟ್ರನನ್ನು ಮೊದಲಿನಂತೆಯೇ ಗೌರವಿಸುತ್ತಿದ್ದರು.

ಕುಂತೀ ಚ ದ್ರೌಪದೀ ಚೈವ ಸಾತ್ವತೀ ಚೈವ ಭಾಮಿನೀ ।
ಉಲೂಪೀ ನಾಗಕನ್ಯಾ ಚ ದೇವೀ ಚಿತ್ರಾಂಗದಾ ತಥಾ ॥೨೫॥

ಧೃಷ್ಟಕೇತೋಶ್ಚ ಭಗಿನೀ ಜರಾಸಂಧಸ್ಯ ಚಾತ್ಮಜಾ ।
ಏತಾಶ್ಚಾನ್ಯಾಶ್ಚ ಬಹ್ವ್ಯೀ ವೈ ಯೋಷಿತಃ ಪುರುಷರ್ಷಭ ॥೨೬॥

ಕಿಂಕರಾಃ ಸ್ಮೋಪತಿಷ್ಠಂತಿ ಸರ್ವಾಃ ತಾಃ ಸುಬಲಾತ್ಮಜಾಮ್ ॥೨೭॥

ಕುಂತೀದೇವಿ, ದ್ರೌಪದೀದೇವಿ, ಸಾತ್ವತ ವಂಶದ ಸ್ತ್ರೀಯಾದ ಸುಭದ್ರೆ, ನಾಗಕನ್ಯೆಯಾದ ಉಲೂಪೀ, ಚಿತ್ರಾಂಗದಾ ದೇವಿ ಹಾಗೆಯೇ ನಕುಲನ ಮಡದಿಯಾದ

ಧೃಷ್ಟಕೇತುವಿನ ತಂಗಿಯಾದ ರೇಣುಮತಿ, ಸಹದೇವನ ಪತ್ನಿಯಾದ ಜರಾಸಂಧನ ಮಗಳು, ಜೊತೆಗೆ ಅಂತಃಪುರದಲ್ಲಿಯ ಎಲ್ಲ ಸ್ತ್ರೀಯರೂ ಕೂಡ ಸುಬಲಾತ್ಮಜೆಯಾದ ಗಾಂಧಾರಿಯನ್ನು ಸೇವಕಿಯರಂತೆ ಸೇವಿಸುತ್ತಿದ್ದರು.

ಯಥಾ ಪುತ್ರವಿಯುಕ್ತೋಽಯಂ ನ ಕಿಂಚಿದ್ದುಃಖಮಾಪ್ನುಯಾತ್ ।
ಇತಿ ರಾಜಾಽನ್ವಶಾಸದ್ ಭ್ರಾತೄನ್ ನಿತ್ಯಮೇವ ಯುಧಿಷ್ಠಿರಃ ॥೨೮॥

ರಾಜನಾದ ಯುಧಿಷ್ಠಿರನು ಈ ಧೃತರಾಷ್ಟ್ರನು ಮಕ್ಕಳಿಂದ ವಿಯುಕ್ತನಾಗಿ ಸ್ವಲ್ಪ ಕೂಡ ದುಃಖವನ್ನು ಹೇಗೆ ಹೊಂದಲಾರನೋ ಆ ರೀತಿ ಅವನಲ್ಲಿ ನಡೆದು-ಕೊಳ್ಳಬೇಕೆಂದು ಸಹೋದರರಿಗೆ ಆಜ್ಞಾಪಿಸಿದ್ದನು.

ಏತತ್ ತೇ ಧರ್ಮರಾಜಸ್ಯ ಶ್ರುತ್ವಾ ವಚನಮರ್ಥವತ್ ।
ಸವಿಶೇಷಮವರ್ತಂತ ಭೀಮಮೇಕಂ ವಿನಾ ತದಾ ॥೨೯॥

ಧರ್ಮರಾಜನು ಹೇಳಿದ ಅರ್ಥವತ್ತಾದ ಈ ಆಜ್ಞೆಯನ್ನು ಕೇಳಿ ಭೀಮನೊಬ್ಬನನ್ನು ಬಿಟ್ಟು ಉಳಿದೆಲ್ಲರೂ ಅದೇ ರೀತಿಯಾಗಿ ನಡೆದುಕೊಳ್ಳುತ್ತಿದ್ದರು.

ನ ಹಿ ತತ್ ತಸ್ಯ ವೀರಸ್ಯ ಹೃದಯಾದಪಗಚ್ಛತಿ ।
ಧೃತರಾಷ್ಟ್ರಸ್ಯ ಯದ್ ವೃತ್ತಂ ದುರ್ಬುದ್ಧೇರ್ದ್ಯೂತಮಂಡಲೇ ॥೩೦॥

ಆದರೆ ವೀರನಾದ ಭೀಮನಿಗೆ ದ್ಯೂತಪ್ರಸಂಗದಲ್ಲಿ ದುರ್ಬುದ್ಧಿಯುಳ್ಳ ಧೃತರಾಷ್ಟ್ರನ ಯಾವ ವರ್ತನೆಯಿದೆಯೋ ಅದು ಮನಸ್ಸಿನಿಂದ ಮರೆಯಾಗಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರಶುಶ್ರೂಷಣಂ ನಾಮ ಪ್ರಥಮೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ನಗರವಾಸಿಗಳೆಲ್ಲರೂ ಧೃತರಾಷ್ಟ್ರನನ್ನು ಅನುಸರಿಸಲೇಬೇಕೆಂದು ಯುಧಿಷ್ಠಿರನಿಂದ ಕಟ್ಟಪ್ಪಣೆ ಜೊತೆಗೆ ಸಹೋದರರೊಂದಿಗೆ ಯಾವುದೇ ಪ್ರಮಾದ ಬರದಂತೆ ಧೃತರಾಷ್ಟ್ರನನ್ನು ಅನುಸರಿಸುವ ಮೂಲಕ ಧೃತರಾಷ್ಟ್ರನಿಗೆ ಆನಂದ.

ವೈಶಂಪಾಯನಃ

ಏವಂ ಸಂಪೂಜಿತೋ ರಾಜಾ ಪಾಂಡವೈರಂಬಿಕಾಸುತಃ ।
ವಿಜಹಾರ ಯಥಾಪೂರ್ವಮೃಷಿಭಿಃ ಪರ್ಯುಪಸ್ಥಿತಃ ॥೧॥

ವೈಶಂಪಾಯನ– ಹೀಗೆ ಪಾಂಡವರಿಂದ ಗೌರವಿಸಲ್ಪಟ್ಟ ಅಂಬಿಕೆಯ ಮಗನಾದ ಧೃತರಾಷ್ಟ್ರ ರಾಜನು ಹಿಂದಿನಂತೆಯೇ ಋಷಿಗಳಿಂದ ಸುತ್ತುವರಿಯಲ್ಪಟ್ಟು ಸಂತೋಷದಿಂದಿದ್ದನು.

ಬ್ರಹ್ಮದೇಯಾಗ್ರಹಾರಾಂಶ್ಚ ಪ್ರದದೌ ಕುರುಸತ್ತಮಃ ।
ತಚ್ಚ ಕುಂತೀಸುತೋ ರಾಜಾ ಸರ್ವಮೇವಾನ್ವಮೋದತ ॥೨॥

ಕುರುಶ್ರೇಷ್ಠನಾದ ಧೃತರಾಷ್ಟ್ರನು ಬ್ರಾಹ್ಮಣರಿಗೆ ಕೊಡಲು ಯೋಗ್ಯವಾದ ಅಗ್ರಹಾರಗಳನ್ನು ಅವರಿಗೆ ದಾನ ಮಾಡಿದನು. ಆ ಎಲ್ಲವನ್ನೂ ಕುಂತೀಸುತನಾದ ಧರ್ಮರಾಜನು ಅನುಮೋದಿಸಿದನು.

ಆನೃಶಂಸ್ಯಪರೋ ಧೀಮಾನ್ ಪ್ರೀಯಮಾಣೋ ಯುಧಿಷ್ಠಿರಃ ।
ಉವಾಚ ಚ ಸ ತಾನ್ ಭ್ರಾತೄನ್ ಅಮಾತ್ಯಾಂಶ್ಚ ಮಹೀಪತಿಃ ॥೩॥

ಪರಮದಯಾಳುವಾದ ಯುಧಿಷ್ಠಿರನು ದೊಡ್ಡಪ್ಪನ ವಿಷಯದಲ್ಲಿ ಬಹಳ ಪ್ರೀತಿಯುಳ್ಳವನಾಗಿದ್ದನು. ಬುದ್ಧಿವಂತನಾದ ಅವನು ತನ್ನ ಸಹೋದರರನ್ನು ಹಾಗೂ ಅಮಾತ್ಯರನ್ನು ಕರೆಸಿಕೊಂಡು ಮುಂದೆ ಹೇಳುವಂತೆ ವಿಚಾರವನ್ನು ಮಂಡಿಸಿದನು.

ಯುಧಿಷ್ಠಿರಃ

ಮಯಾ ಚೈವ ಭವದ್ಭಿಶ್ಚ ಮಾನ್ಯ ಏವ ನರಾಧಿಪಃ ॥೪॥

ನಿದೇಶೇ ಧೃತರಾಷ್ಟ್ರಸ್ಯ ಯಃ ಸ್ಥಾಸ್ಯತಿ ಸ ಮೇ ಸುಹೃತ್ ।
ವಿಪರೀತಶ್ಚ ಮೇ ಶತ್ರುರ್ನಿರಸ್ಯಶ್ಚ ಭವೇನ್ನರಃ ॥೫॥

ಯುಧಿಷ್ಠಿರ– ನಾನು ಹಾಗು ನೀವೆಲ್ಲರೂ ರಾಜನಾದ ಧೃತರಾಷ್ಟ್ರನನ್ನು ಗೌರವಿಸಲೇಬೇಕು. ಯಾರು ಧೃತರಾಷ್ಟ್ರನ ಆಜ್ಞೆಯಂತೆ ಇರುವರೋ ಅವರು ನನಗೆ ಮಿತ್ರರಾಗಿದ್ದಾರೆ. ಯಾರು ಇದಕ್ಕೆ ವಿಪರೀತವಾಗಿ ನಡೆಯುವರೋ ಅವರು ನನ್ನ ಶತ್ರುಗಳಾಗಿದ್ದು ಹೊರನಡೆಯಬೇಕಾದ ಪರಿಸ್ಥಿತಿ ಬರಬಹುದು.

ಪರಿವೃತ್ತೇಷು ಚಾಹಸ್ಸು ಪುತ್ರಾಣಾಂ ಶ್ರಾದ್ಧಕರ್ಮಣಿ ।
ದದಾತು ರಾಜಾ ವಿತ್ತಾನಿ ಯಾವದಸ್ಯ ಚಿಕೀರ್ಷಿತಮ್ ॥೬॥

ಮುಂದಿನ ದಿನಗಳಲ್ಲಿ ತನ್ನ ಮಕ್ಕಳ ಶ್ರಾದ್ಧ ಮಾಡುವ ಸಂದರ್ಭ ಬಂದಾಗ ರಾಜನಾದ ಧೃತರಾಷ್ಟ್ರನು ಎಷ್ಟು ದಾನ ಮಾಡಬೇಕೆಂದು ಬಯಸುವನೋ ಅಷ್ಟು ಹಣವನ್ನೂ ಅವನಿಗೆ ಒದಗಿಸಬೇಕು.

ವೈಶಂಪಾಯನಃ

ತತಃ ಸ ರಾಜಾ ಕೌರವ್ಯೋ ಧೃತರಾಷ್ಟ್ರೋ ಮಹಾಮನಾಃ ।
ಬ್ರಾಹ್ಮಣೇಭ್ಯೋ ಯಥಾರ್ಹೇಭ್ಯೋ ದದೌ ವಿತ್ತಮನೇಕಶಃ ॥೭॥

ವೈಶಂಪಾಯನ– ಅನಂತರ ಕುರುವಂಶದಲ್ಲಿ ಬಂದ ರಾಜನಾದ ಆ ಧೃತರಾಷ್ಟ್ರನು ವಿಶಾಲ ಮನಸ್ಸುಳ್ಳವನಾಗಿ ಬ್ರಾಹ್ಮಣರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಅನೇಕ ರೀತಿಯಿಂದ ಹಣವನ್ನು ನೀಡಿದನು ಅರ್ಥಾತ್ ದಾನ ಮಾಡಿದನು.

ಧರ್ಮರಾಜಶ್ಚ ಭೀಮಶ್ಚ ಸವ್ಯಸಾಚೀ ಯಮಾವಪಿ ।
ತತ್ಸರ್ವಮನ್ವವರ್ತಂತ ಧೃತರಾಷ್ಟ್ರವ್ಯಪೇಕ್ಷಯಾ ॥೮॥

ಧರ್ಮರಾಜ, ಭೀಮ, ಸವ್ಯಸಾಚಿಯಾದ ಅರ್ಜುನ, ಅವಳಿ ಮಕ್ಕಳಾದ ನಕುಲ ಸಹದೇವ- ಇವರೆಲ್ಲರೂ ಕೂಡ ಧೃತರಾಷ್ಟ್ರನ ಮೇಲಿನ ಆದರದಿಂದ ಅವನು ಮಾಡಿದ ಎಲ್ಲವನ್ನೂ ಒಪ್ಪಿ ಅನುಸರಿಸಿದರು.

ಕಥಂ ನು ರಾಜಾ ವೃದ್ಧಃ ಸನ್ ಪುತ್ರಶೋಕಸಮಾಹತಃ ।
ಶೋಕಮಸ್ಮತ್ಕೃತಂ ಪ್ರಾಪ್ಯ ನ ಮ್ರಿಯೇತೇತಿ ಚಿಂತ್ಯ ವೈ ॥೯॥

ವೃದ್ಧನಾದ, ಪುತ್ರರ ಶೋಕದಿಂದ ಈಗಾಗಲೇ ಪೆಟ್ಟುತಿಂದಿರುವ ರಾಜನಾದ

ಧೃತರಾಷ್ಟ್ರನು ನಾವು ಮಾಡಿದ ಕಾರ್ಯಗಳಿಂದ ದುಃಖವನ್ನು ಹೊಂದಿದವನಾಗಿ ಸಾಯಬಾರದು ಎಂದು ಚಿಂತಿಸಿ ಅವನ ಕರ್ಮಗಳನ್ನು ಒಪ್ಪಿಕೊಂಡರು.

ಯಾವದ್ಧಿ ಕುರುಮುಖ್ಯಸ್ಯ ಜೀವಪುತ್ರಸ್ಯ ವೈ ಸುಖಮ್ ।
ತಾವತ್ ಸುಖಮವಾಪ್ನೋತು ಭೋಗಾಂಶ್ಚೇತಿ ವ್ಯವಸ್ಥಿತಾಃ ॥೧೦॥

ಕುರುಮುಖ್ಯನಾದ ಧೃತರಾಷ್ಟ್ರನಿಗೆ ಮಕ್ಕಳು ಬದುಕಿದ್ದರೆ ಯಾವೆಲ್ಲ ಸುಖವಿರುವುದೋ ಆ ಎಲ್ಲ ಸುಖಗಳನ್ನೂ ಹಾಗು ವಿಷಯಭೋಗಗಳನ್ನು ಅವನು ಹೊಂದಲಿ ಎಂದು ಪಾಂಡವರೆಲ್ಲರೂ ನಿಶ್ಚಯಿಸಿದ್ದರು.

ತತಸ್ತೇ ಸಹಿತಾಃ ಸರ್ವೇ ಭ್ರಾತರಃ ಪಂಚ ಪಾಂಡವಾಃ ।
ದಾನಶೀಲಾಸ್ತಥಾ ತಸ್ಥುರ್ಧೃತರಾಷ್ಟ್ರಸ್ಯ ಶಾಸನೇ ॥೧೧॥

ಆದ್ದರಿಂದಲೇ ಐದು ಮಂದಿ ಅಣ್ಣ-ತಮ್ಮಂದಿರಾದ ಪಾಂಡವರು ಒಗ್ಗಟ್ಟಾಗಿ ದಾನಶೀಲರಾಗಿದ್ದರು. ಹಾಗೆಯೇ ಧೃತರಾಷ್ಟ್ರನ ಆಜ್ಞೆಯಂತೆ ನಡೆದುಕೊಂಡರು.

ಧೃತರಾಷ್ಟ್ರಸ್ತು ತಾನ್ ವೀರಾನ್ ವಿನೀತಾನ್ ವಿನಯೇ ಸ್ಥಿತಾನ್ ।
ಶಿಷ್ಯವೃತ್ತೌ ಸ್ಥಿತಾನ್ ನಿತ್ಯಂ ಗುರುವತ್ ತಾನಪಶ್ಯತ ॥೧೨॥

ಧೃತರಾಷ್ಟ್ರನಾದರೂ ವಿನೀತರಾದ, ವಿಶಿಷ್ಟವಾದ ನೀತಿಯಲ್ಲಿ ಇರುವ, ವೀರರಾದ, ತನಗೆ ಶಿಷ್ಯರಂತೆ ವರ್ತಿಸುತ್ತಿರುವ ಆ ಪಾಂಡವರನ್ನು ನೋಡಿ ಅವರನ್ನು ಗುರು-ಹಿರಿಯರು ನೋಡುವಂತೆಯೇ ನೋಡತೊಡಗಿದನು.

ಗಾಂಧಾರೀ ಚಾಪಿ ಪುತ್ರಾಣಾಂ ವಿವಿಧೈಃ ಶ್ರಾದ್ಧಕರ್ಮಭಿಃ ।
ಆನೃಣ್ಯಮಗಮತ್ ಕಾಮಂ ವಿಪ್ರೇಭ್ಯಃ ಪ್ರತಿಪಾದ್ಯ ವೈ ॥೧೩॥

ಗಾಂಧಾರೀ ದೇವಿಯೂ ಕೂಡ ತನ್ನ ಪುತ್ರರಿಗಾಗಿ ನಾನಾ ರೀತಿಯ ಶ್ರಾದ್ಧ ಕರ್ಮಗಳನ್ನು ಅನುಷ್ಠಾನ ಮಾಡುತ್ತಾ, ಬ್ರಾಹ್ಮಣರಿಗೆ ಯಥೇಷ್ಟವಾಗಿ ದಾನವನ್ನೂ ಮಾಡುತ್ತಾ ಪುತ್ರಋಣದಿಂದ ಮುಕ್ತಿಯನ್ನು ಪಡೆದಳು.

ಏವಂ ಧರ್ಮಭೃತಾಂ ಶ್ರೇಷ್ಠೋ ಧರ್ಮರಾಜೋ ಯುಧಿಷ್ಠಿರಃ ।
ಭ್ರಾತೃಭಿಃ ಸಹಿತೋ ಧೀಮಾನ್ ಪೂಜಯಾಮಾಸ ತಂ ನೃಪಮ್ ॥೧೪॥

ಈ ರೀತಿಯಾಗಿ ಧಾರ್ಮಿಕರಲ್ಲಿ ಶ್ರೇಷ್ಠನಾಗಿ ಧರ್ಮರಾಜನನೆನಿಸಿದ ಬುದ್ಧಿವಂತನಾದ ಯುಧಿಷ್ಠಿರರಾಜನು ಸಹೋದರರ ಜೊತೆಗೆ ಕೂಡಿಕೊಂಡು ರಾಜನಾದ ಆ ಧೃತರಾಷ್ಟ್ರನನ್ನು ಗೌರವಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ದ್ವಿತೀಯೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಧೃತರಾಷ್ಟ್ರ ಗಾಂಧಾರಿಯರು ಪಾಂಡವರ ಜೊತೆ ಸುಖದಿಂದಿರುವುದು.
ಧೃತರಾಷ್ಟ್ರನಲ್ಲಿ ಧರ್ಮಜನ ಅನನ್ಯ ಪ್ರೀತಿ. ಭೀಮಸೇನನ ಅಸಮಾಧಾನ.

ವೈಶಂಪಾಯನಃ

ಸ ರಾಜಾ ಸುಮಹಾತೇಜಾ ವೃದ್ಧಃ ಕುರುಕುಲೋದ್ವಹಃ ।
ನಾಪಶ್ಯತ ತದಾ ಕಿಂಚಿದ್ ಅಪ್ರಿಯಂ ಕುರುನಂದನಾತ್ ॥೧॥

ವೈಶಂಪಾಯನ– ಮಹಾತೇಜಸ್ವಿಯಾದ, ಕುರುಕುಲದಲ್ಲಿ ಜನಿಸಿದ, ವೃದ್ಧನಾದ ಆ ಧೃತರಾಷ್ಟ್ರರಾಜನು ಕುರುನಂದನನಾದ ಯುಧಿಷ್ಠಿರನಿಂದ ಸ್ವಲ್ಪವೂ ಕೂಡ ಅಹಿತಕರವಾದ ನಡವಳಿಕೆಯನ್ನು ನೋಡಲಿಲ್ಲ.

ವರ್ತಮಾನೇಷು ಸದ್ವೃತ್ತಿಂ ಪಾಂಡವೇಷು ಮಹಾತ್ಮಸು ।
ಪ್ರೀತಿಮಾನಭವದ್ ರಾಜಾ ಧೃತರಾಷ್ಟ್ರೋಽಂಬಿಕಾಸುತಃ ॥೨॥

ಮಹಾತ್ಮರಾದ ಪಾಂಡವರು ಸನ್ನಡತೆಯಲ್ಲಿ ಇರುವುದನ್ನು ಕಂಡು ಅಂಬಿಕೆಯ ಮಗನಾದ ಧೃತರಾಷ್ಟ್ರರಾಜನು ಅವರಲ್ಲಿ ಅತಿಶಯವಾದ ಪ್ರೀತಿಯುಳ್ಳವನಾದನು.

ಸೌಬಲೇಯೀ ಚ ಗಾಂಧಾರೀ ಪುತ್ರಶೋಕಮಪಾಸ್ಯ ತಮ್ ।
ಸದೈವ ಪ್ರೀತಿಮತ್ಯಾಸೀತ್ ಪಾಂಡವೇಷು ನಿಜೇಷ್ವಿವ ॥೩॥

ಸುಬಲಾತ್ಮಜೆಯಾದ ಗಾಂಧಾರಿಯೂ ಕೂಡ ತನ್ನ ಪುತ್ರಶೋಕವನ್ನು ಕಳೆದುಕೊಂಡು ತನ್ನ ಮಕ್ಕಳಲ್ಲಿ ಮಾಡುವಂತೆಯೇ ಪಾಂಡವರಲ್ಲಿ ಯಾವಾಗಲೂ ಪ್ರೀತಿಯುಳ್ಳವಳಾದಳು.

ಪ್ರಿಯಾಣ್ಯೇವ ತು ಕೌರವ್ಯೋ ನಾಪ್ರಿಯಾಣಿ ಕುರೂದ್ವಹಃ ।
ವೈಚಿತ್ರವೀರ್ಯೇ ನೃಪತೌ ಸಮಾಚರತ ಸರ್ವದಾ ॥೪॥

ಕುರುವಂಶದಲ್ಲಿ ಜನಿಸಿದ ಯುಧಿಷ್ಠಿರನು ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರರಾಜನಲ್ಲಿ ಅವನಿಗೆ ಪ್ರಿಯವಾದುದನ್ನೇ ಸದಾಕಾಲ ಮಾಡುತ್ತಿದ್ದನು. ಕುರೂದ್ವಹನಾದ ಆ ಯುಧಿಷ್ಠಿರನು ಅಪ್ರಿಯವಾದ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ.

ಯದ್ಯದ್ ಬ್ರೂತೇ ಚ ಕಿಂಚಿತ್ ಸ ಧೃತರಾಷ್ಟ್ರೋ ನರಾಧಿಪಃ ।
ಗುರು ವಾ ಲಘು ವಾ ಕಾರ್ಯಂ ಗಾಂಧಾರೀ ವಾ ಯಶಸ್ವಿನೀ ॥೫॥

ತತ್ ಸ ರಾಜಾ ನರವ್ಯಾಘ್ರಃ ಪಾಂಡವಾನಾಂ ಧುರಂಧರಃ ।
ಪೂಜಯಿತ್ವಾ ವಚಸ್ತತ್ತದ್ ಅಕಾರ್ಷೀತ್ ಪರವೀರಹಾ ॥೬॥

ನರಶ್ರೇಷ್ಠನಾದ ಪಾಂಡವರಲ್ಲಿ ಅಗ್ರಗಣ್ಯನಾದ ಆ ಧರ್ಮರಾಜನು ನರಾಧಿಪನಾದ ಧೃತರಾಷ್ಟ್ರನು ಯಾವೆಲ್ಲವನ್ನು ಹೇಳುತ್ತಿದ್ದನೋ ಅಥವಾ ಯಶಸ್ವಿನಿಯಾದ ಗಾಂಧಾರಿ ದೇವಿಯು ಯಾವೆಲ್ಲವನ್ನು ಹೇಳುತ್ತಿದ್ದಳೋ ಅಂತಹ ಕಾರ್ಯವು ಬಹಳ ದೊಡ್ಡದಾಗಿದ್ದರೂ ಅಥವಾ ಚಿಕ್ಕದಾಗಿದ್ದರೂ ಅವರ ಮಾತನ್ನು ಗೌರವಿಸಿ ಅವೆಲ್ಲವನ್ನೂ ನಡೆಸಿಕೊಡುತ್ತಿದ್ದನು.

ತೇನ ತಸ್ಯಾಭವತ್ ಪ್ರೀತೋ ವೃತ್ತೇನ ಸ ನರಾಧಿಪಃ ॥೭॥

ಅನ್ವತಪ್ಯತ ಸಂಸ್ಮೃತ್ಯ ಪುತ್ರಂ ಮಂದಮಚೇತಸಮ್ ॥೮॥

ನರಾಧಿಪನಾದ ಆ ಧೃತರಾಷ್ಟ್ರನು ಯುಧಿಷ್ಠಿರನ ಈ ಹಿಂದೆ ಹೇಳಿದ ನಡತೆಯಿಂದ ಬಹಳ ಸಂತೋಷವನ್ನು ಹೊಂದಿದನು. ಅದೇ ಸಮಯದಲ್ಲಿ ಬುದ್ಧಿಯಿಲ್ಲದ, ದಡ್ಡನಾದ ತನ್ನ ಮಗನನ್ನು ನೆನಪಿಸಿಕೊಂಡು ದುಃಖಪಟ್ಟನು.

ಸದಾ ಚ ಪ್ರಾತರುತ್ಥಾಯ ಕೃತಜಪ್ಯಃ ಶುಚಿರ್ನೃಪಃ ।
ಆಶಾಸ್ತೇ ಪಾಂಡುಪುತ್ರಾಣಾಂ ಸಮರೇಷ್ವಪರಾಜಯಮ್ ॥೯॥

ರಾಜನಾದ ಧೃತರಾಷ್ಟ್ರನು ಯಾವಾಗಲೂ ಕೂಡ ಬೆಳಿಗ್ಗೆ ಎದ್ದು ನಿತ್ಯಾಹ್ನಿಕಗಳನ್ನು ಮುಗಿಸಿ ಪಾಂಡುಪುತ್ರರಿಗೆ ಯುದ್ಧದಲ್ಲಿ ಯಾವಾಗಲೂ ಸೋಲಾಗದಂತೆ ಆಶೀರ್ವದಿಸುತ್ತಿದ್ದನು.

ಬ್ರಾಹ್ಮಣಾನ್ ಯಾಚಯಿತ್ವಾ ಚ ಹುತ್ವಾ ಚೈವ ಹುತಾಶನಮ್ ।
ಆಯೂಂಷಿ ಪಾಂಡುಪುತ್ರಾಣಾಮನುಶಾಸ್ತೇ ಸ ಕೌರವಃ ॥೧೦॥

ಕುರುವಂಶದಲ್ಲಿ ಜನಿಸಿದ ಆ ಧೃತರಾಷ್ಟ್ರನು ಬ್ರಾಹ್ಮಣರಲ್ಲಿ ಕೇಳಿಕೊಂಡು ಯಜ್ಞ ಯಾಗಾದಿಗಳನ್ನು ನಡೆಸಿ ಪಾಂಡುಪುತ್ರರಿಗೆ ಆಯುಷ್ಯವೃದ್ಧಿಯಾಗುವಂತೆ ಪ್ರಾರ್ಥಿಸುತ್ತಿದ್ದನು.

ಸ ತಾಂ ಪ್ರೀತಿಂ ಪರಾಮಾಪ ಸ್ವಪ್ನೇಭ್ಯಃ ಸ ಮಹೀಪತಿಃ ।
ಯಾಂ ಪ್ರೀತಿಂ ಪಾಂಡುಪುತ್ರೇಭ್ಯಃ ಸಮವಾಪ ಮಹೀಪತಿಃ ॥೧೧॥

ಮಹೀಪತಿಯಾದ ಧೃತರಾಷ್ಟ್ರನು ಪಾಂಡುಪುತ್ರರಿಂದ ಯಾವ ರೀತಿ ಸಂತೋಷ ಹೊಂದಿದನೆಂದರೆ ನಿದ್ರೆಯಿಂದ ಮಾತ್ರ ಹೊಂದಬಹುದಾದ ಉತ್ತಮವಾದ ಆ ಸ್ವರೂಪ ಸುಖವನ್ನೇ ಅನುಭವಿಸಿದನು.

ಬ್ರಾಹ್ಮಣಾನಾಂ ಚ ವೃದ್ಧಾನಾಂ ಕ್ಷತ್ರಿಯಾಣಾಂ ಚ ಭಾರತ ।
ತಥಾ ವಿಟ್‌ಶೂದ್ರಸಂಘಾನಾಮಭವತ್ ಪಾಂಡವಃ ಪ್ರಿಯಃ ॥೧೨॥

ಪಾಂಡುನಂದನನಾದ ಧರ್ಮರಾಜನು ಬ್ರಾಹ್ಮಣರಿಗೆ, ವೃದ್ಧರಿಗೆ, ಕ್ಷತ್ರಿಯರಿಗೆ ಹೇಗೆ ಪ್ರಿಯನಾಗಿದ್ದನೋ ಅದೇ ರೀತಿ ವೈಶ್ಯರಿಗೂ, ಶೂದ್ರಸಮೂಹದವರಿಗೂ ಅತ್ಯಂತ ಪ್ರೀತಿಪಾತ್ರನಾಗಿದ್ದನು.

ಯಚ್ಚ ಕಿಂಚಿತ್ ಪುರಾ ಪಾಪಂ ಧೃತರಾಷ್ಟ್ರಸುತೈಃ ಕೃತಮ್ ।
ಅಕೃತ್ವಾ ಹೃದಿ ತದ್ ರಾಜಾ ತಂ ನೃಪಂ ಸೋಽನ್ವವರ್ತತ ॥೧೩॥

ಈ ಹಿಂದೆ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನನಿಂದ ಏನೆಲ್ಲ ಪಾಪಕೃತ್ಯಗಳು ತಮ್ಮ ವಿಷಯದಲ್ಲಿ ನಡೆಸಲ್ಪಟ್ಟಿವೆಯೋ ಆ ಎಲ್ಲವನ್ನೂ ರಾಜನಾದ ಯುಧಿಷ್ಠಿರನು ಮನಸ್ಸಿನಲ್ಲಿ ಇರಿಸಿಕೊಳ್ಳದೆ ಧೃತರಾಷ್ಟ್ರನನ್ನು ಅನುಸರಿಸಿದನು.

ಯಶ್ಚ ಕಶ್ಚ ನರಃ ಕಿಂಚಿದಪ್ರಿಯಂ ಹ್ಯಂಬಿಕಾಸುತೇ ।
ಕುರುತೇ ದ್ವೇಷ್ಯತಾಮೇತಿ ಸ ಕೌಂತೇಯಸ್ಯ ಧೀಮತಃ ॥೧೪॥

ಯಾವುದೇ ಒಬ್ಬ ಮನುಷ್ಯನು ಅಂಬಿಕಾಸುತನಾದ ಧೃತರಾಷ್ಟ್ರನಲ್ಲಿ ಸ್ವಲ್ಪ ಅಪ್ರಿಯವಾದುದನ್ನು ಮಾಡುತ್ತಾನೋ ಅವನು ಧೀಮಂತನಾದ, ಕುಂತೀಪುತ್ರನಾದ ಯುಧಿಷ್ಠಿರನಿಗೆ ದ್ವೇಷಿಯಾಗುತ್ತಾನೆ.

ನ ರಾಜ್ಞೋ ಧೃತರಾಷ್ಟ್ರಸ್ಯ ನ ಚ ದುರ್ಯೋಧನಸ್ಯ ಚ ।
ಅರೋಚದ್ ದುಷ್ಕೃತಂ ಕಿಂಚಿದ್ ಯುಧಿಷ್ಠಿರಭಯಾನ್ನರಃ ॥೧೫॥

ಯುಧಿಷ್ಠಿರನ ಮೇಲಿನ ಭಯದಿಂದ ಯಾವುದೇ ಮನುಷ್ಯನೂ ಕೂಡ ರಾಜನಾದ ಧೃತರಾಷ್ಟ್ರನ ಅಥವಾ ಹಿಂದಿನ ರಾಜನಾದ ದುರ್ಯೋಧನನ ಕೆಟ್ಟ ಕೆಲಸವನ್ನು ಸ್ವಲ್ಪವೂ ಪ್ರಕಟಪಡಿಸಲಿಲ್ಲ.

ತುಷ್ಟೋಽಭೂದ್ ಧೃತರಾಷ್ಟ್ರಶ್ಚ ಗಾಂಧಾರೀ ಚ ಮಹಾಯಶಾಃ ।
ಅಜಾತಶತ್ರೋರ್ವೃತ್ತೇನ ನ ತು ಭೀಮಸ್ಯ ಪಾರ್ಥಿವಃ ॥೧೬॥

ಮಹಾಯಶಸ್ವಿಯಾದ ಧೃತರಾಷ್ಟ್ರನು ಮತ್ತು ಗಾಂಧಾರಿ ದೇವಿಯೂ ಕೂಡ ಅಜಾತಶತ್ರುವಾದ ಯುಧಿಷ್ಠಿರನ ಈ ನಡವಳಿಕೆಯಿಂದ ತೃಪ್ತರಾದರು. ಆದರೆ ರಾಜನಾದ ಧೃತರಾಷ್ಟ್ರನು ಭೀಮನ ನಡವಳಿಕೆಯಿಂದ ಸಂತೋಷಪಡಲಿಲ್ಲ.

ಅನ್ವವರ್ತಂತ ಭೀಮೋಽಪಿ ತಿಷ್ಠಂತಂ ಧರ್ಮಜಂ ನೃಪಮ್ ।
ಧೃತರಾಷ್ಟ್ರಂ ಸ ಸಂಪ್ರೇಕ್ಷ್ಯ ಸದಾ ಭವತಿ ದುರ್ಮನಾಃ ॥೧೭॥

ಭೀಮನಾದರೂ ರಾಜನಾದ ಧೃತರಾಷ್ಟ್ರನಿಗೆ ಅನುಕೂಲವಾಗಿ ನಡೆಯುವ ಧರ್ಮರಾಜನನ್ನು ಅನುಸರಿಸಿದರೂ ಧೃತರಾಷ್ಟ್ರನನ್ನು ನೋಡುವ ಎಲ್ಲ ಸಂದರ್ಭಗಳಲ್ಲೂ ಉದ್ವೇಗಗೊಳ್ಳುತ್ತಿದ್ದನು.

ರಾಜಾನಮನುಗಚ್ಛಂಸ್ತು ಧರ್ಮಪುತ್ರಂ ಮಹಾಮತಿಮ್ ।
ಅನ್ವವರ್ತತ ಸಕ್ರೋಧೋ ಹೃದಯೇನ ಪರಾಙ್ಮುಖಃ ॥೧೮॥

ಮಹಾಬುದ್ಧಿಶಾಲಿಯಾದ ಧರ್ಮಪುತ್ರನಾದ ರಾಜಾ ಯುಧಿಷ್ಠಿರನನ್ನು ಅನುಸರಿಸುವವನಾದರೂ ಧೃತರಾಷ್ಟ್ರನ ವಿಷಯದಲ್ಲಿ ಕ್ರೋಧದಿಂದ ಕೂಡಿದವನಾಗಿ ಮನಸ್ಸಿಲ್ಲದೆ ಅವನನ್ನು ಅನುಸರಿಸುತ್ತಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ತೃತೀಯೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩ನೇ ಅಧ್ಯಾಯ

ಅಥಾಽಂಬಿಕೇಯಂ ವಿಷಯೇಷು ಸಕ್ತಂ
ದುಸ್ಸಂಗದುಷ್ಟಂ ಕೃತಭೂರಿದೋಷಮ್ ।
ಸಮಸ್ತರಾಜಾಪ್ಯಯಹೇತುಭೂತಂ
ವಿಚಾರ್ಯ ತಂ ಮಾರುತಿರನ್ವಕಂಪತ ॥

ಬಳಿಕ ಧೃತರಾಷ್ಟ್ರನು ದುರ್ಜನಸಂಗದೋಷದಿಂದ ಸಮಸ್ತ ರಾಜರ ನಾಶಕ್ಕೆ ಕಾರಣನಾಗಿ ಮಹಾಪಾಪ ಮಾಡಿದ್ದರೂ ವಿಷಯಭೋಗದಲ್ಲಿ ಆಸಕ್ತನಾಗಿದ್ದುದನ್ನು ಕಂಡು ಭೀಮನು ಅವನಲ್ಲಿ ಅನುಕಂಪ ತೋರಿದ.

ಅಕುರ್ವತಸ್ತೀಕ್ಷ್ಣತಪಃ ಕುತಶ್ಚಿ-
ನ್ನೈವಾಸ್ಯ ಲೋಕಾಪ್ತಿರಮುಷ್ಯ ಭೂಯಾತ್ ।
ರಾಗಾಧಿಕೋಽಯಂ ನ ತಪಶ್ಚ ಕುರ್ಯಾ-
ದಿತ್ಯಸ್ಯ ವೈರಾಗ್ಯಕರಾಣಿ ಚಕ್ರೇ ॥

ಧೃತರಾಷ್ಟ್ರನಿಗೆ ತೀವ್ರ ತಪಸ್ಸು ಮಾಡದೆ ತನ್ನ ಗಂಧರ್ವಲೋಕ ಪ್ರಾಪ್ತಿ ಯಾವ ಕಾರಣದಿಂದಲೂ ಆಗದು. ವಿಷಯಾಸಕ್ತಿ ಬಹಳ ಇರುವುದರಿಂದ ತಪಸ್ಸನ್ನು

ಮಾಡಲಾರ ಎಂದು ಅವನಿಗೆ ವೈರಾಗ್ಯ ಉಂಟು ಮಾಡಲು ಉಪಾಯಗಳನ್ನು ಕೈಗೊಂಡನು.

ಆಜ್ಞಾಂ ಪರೈರಸ್ಯ ನಿಹಂತಿ ಸೋದರೈ-
ರ್ವಧೂಜನೈರಪ್ಯತಿಪೂಜಿತೇಽಸ್ಮಿನ್ ।
ಸ ನಿಷ್ಪನತ್ಯೇವಮಪೀತರೈಃ ಸ
ಸುಪೂಜಿತೋ ನಾಽಸ ತದಾ ವಿರಾಗಃ ॥

ಸೋದರರೂ ಸ್ತ್ರೀಯರೂ ಧೃತರಾಷ್ಟ್ರನನ್ನು ಅತಿಯಾಗಿ ಸತ್ಕರಿಸುತ್ತಿದ್ದರೂ ಭೀಮನು ಇತರ ಜನರಿಂದ ಅವನ ಆಜ್ಞೆಯ ಉಲ್ಲಂಘನೆ ಮಾಡಿಸಿದನು. ತಾನೂ ನಿಷ್ಠುರವಾಗಿ ಮಾತನಾಡಿ ನಿರಾಕರಿಸಿದನು. ಹೀಗಿದ್ದರೂ ಇತರರು ಚೆನ್ನಾಗಿಯೇ ಸತ್ಕರಿಸುತ್ತಿದ್ದುದರಿಂದ ಧೃತರಾಷ್ಟ್ರನಿಗೆ ವೈರಾಗ್ಯ ಬರಲಿಲ್ಲ.

ಸರ್ವೇ ಹಿ ಪಾರ್ಥಾಸ್ತಮೃತೇ ಸಭಾರ್ಯಾ
ವೈಚಿತ್ರವೀರ್ಯಂ ಪರಮಾದರೇಣ ।
ಪರ್ಯೇವ ಚಕ್ರುಃ ಸತತಂ ಸಭಾರ್ಯಂ
ಕೃಷ್ಣಾ ಚ ನ ಸ್ಯಾತ್ ತನಯಾರ್ತಿಮಾನಿತಿ ॥

ಭೀಮನೊಬ್ಬನನ್ನು ಹೊರತು ಎಲ್ಲ ಪಾಂಡವರೂ ಪತ್ನೀ ಸಮೇತರಾಗಿ ಸತತವಾಗಿ ಪರಮಾದರದಿಂದ ಪತ್ನೀ ಸಹಿತನಾದ ಧೃತರಾಷ್ಟ್ರನನ್ನು ಉಪಚರಿಸಿದರು. ಅವನು ಪುತ್ರಶೋಕದಿಂದ ಪೀಡಿತನಾಗದಿರಲೆಂದು ದ್ರೌಪದಿಯೂ ಉಪಚರಿಸಿದಳು.

ಸ ಪ್ರೀಯಮಾಣೋ ನಿತರಾಂ ಚ ತೇಷು
ನೈವಾಧಿಕಂ ಪ್ರೀಯತೇ ಭೀಮಸೇನೇ ।
ಸ್ಮರನ್ ಸುತಾಂಸ್ತೇನ ಹತಾನ್ ಸಮಸ್ತಾ-
ನಪಿ ಪ್ರಭಾವಂ ಪರಮಸ್ಯ ಜಾನನ್ ॥

ಧೃತರಾಷ್ಟ್ರ ಭೀಮನ ಮಹಾಬಲವನ್ನು ಅರಿತವನಾಗಿದ್ದರೂ ಬೇರೆ ಪಾಂಡವರಲ್ಲಿ ಬಹಳ ಪ್ರೀತಿ ಮಾಡುವಾಗಲೂ ಭೀಮಸೇನನನ್ನು ಹೆಚ್ಚು ಪ್ರೀತಿ ಮಾಡಲಿಲ್ಲ. ಅವನು ತನ್ನೆಲ್ಲ ಮಕ್ಕಳನ್ನು ಕೊಂದುದನ್ನೇ ನೆನೆಯುತ್ತಿದ್ದನು.

ತಸ್ಯಾಪನೇತುಂ ವಿಷಯೇಷು ಸಕ್ತಿಂ
ದ್ವೇಷಂ ತಥೈವಾऽತ್ಮನಿ ಭೀಮಸೇನಃ ।
ಜಗಾದ ಮಾದ್ರೀಸುತಯೋಃ ಸಮಕ್ಷ-
ಮಾಸ್ಫೋಟ್ಯ ಸಂಶೃಣ್ವತ ಏವ ತಸ್ಯ ॥

ಭೀಮಸೇನ ಧೃತರಾಷ್ಟ್ರನಿಗೆ ವಿಷಯ ಭೋಗದಲ್ಲಿ ಆಸಕ್ತಿಯನ್ನೂ ತನ್ನಲ್ಲಿ ದ್ವೇಷವನ್ನು ಕಳೆಯುವುದಕ್ಕಾಗಿ ನಕುಲ-ಸಹದೇವರ ಸಮಕ್ಷಮದಲ್ಲಿ ಧೃತರಾಷ್ಟ್ರ ಕೇಳುವಂತೆ ಭುಜ ತಟ್ಟಿಕೊಂಡು ಹೇಳಿದ.

ತಾವಿಮೌ ಮೇ ಭುಜೌ ವೃತ್ತೌ ಪೀನೌ ಚಂದನರೂಷಿತೌ ।
ಯಯೋರಂತರಮಾಸಾದ್ಯ ಜರತಸ್ಯ ಸುತಾ ಹತಾಃ ॥

'ದುಂಡಾಗಿ ಪುಷ್ಟವಾಗಿ ಶ್ರೀಗಂಧಲೇಪನಯುಕ್ತವಾದ ಈ ನನ್ನ ಭುಜಗಳ ನಡುವೆ ಸಿಲುಕಿಯೇ ಈ ಮದುಕನ ಮಕ್ಕಳೆಲ್ಲ ಹತರಾದರು' ಎಂದು.

ಯಮೌ ತದನ್ವಮೋದೇತಾಂ ತತ್ಸ್ನೇಹಾದ್ ಗೌರವಾದಪಿ ।
ನೈವ ತತ್ಕೃಷ್ಣಯಾ ಜ್ಞಾತಂ ಪೃಥಯಾ ಚ ಸಪುತ್ರಯಾ ॥

ತಚ್ಛ್ರುತ್ವೋತ್ಪನ್ನನಿರ್ವೇದಂ ಕ್ಷತ್ತಾ ಜ್ಯೇಷ್ಠಸ್ಯ ವರ್ಧಯನ್ ।
ಉವಾಚ ಜೀವಿತಾಶಾ ತೇ ನನು ರಾಜನ್ ಗರೀಯಸೀ ॥

ನಕುಲ-ಸಹದೇವರು ಭೀಮನ ಮಾತನ್ನು ಒಪ್ಪಿದರು. ಆದರೆ ಧೃತರಾಷ್ಟ್ರನ ಮೇಲಿನ ಪ್ರೀತಿಯಿಂದಲೂ, ಗೌರವದಿಂದಲೂ ಏನೂ ಹೇಳಲಿಲ್ಲ. ಈ ಸಂಗತಿ ದ್ರೌಪದಿಗಾಗಲಿ, ಕುಂತಿಗಾಗಲಿ, ಧರ್ಮರಾಜನಿಗಾಗಲಿ, ಅರ್ಜುನನಿಗಾಗಲಿ ತಿಳಿಯಲಿಲ್ಲ. ಭೀಮನ ಈ ಮಾತನ್ನು ಕೇಳಿ ಧೃತರಾಷ್ಟ್ರನಿಗೆ ವೈರಾಗ್ಯ ಮೂಡಿತು. ಆ ವೈರಾಗ್ಯವನ್ನು ಹೆಚ್ಚಿಸಲು ವಿದುರ ಅವನಿಗೆ ಹೇಳಿದ: 'ರಾಜನೇ, ನಿನಗೆ ಬದುಕುವಾಸೆ ಅತಿಯಾಗಿದೆ.

ಅಹೋ ಗರೀಯಸೀ ಜಂತೋರ್ಜೀವಿತಾಶಾ ಯಯಾ ಭವಾನ್ ।
ಭೀಮಾಪವರ್ಜಿತಂ ಪಿಂಡಮಾದತ್ಸೇ ಗೃಹಪಾಲವತ್ ॥

'ಆಶ್ಚರ್ಯ! ಜಂತುವಿಗೆ ಬದುಕುವಾಸೆ ದೊಡ್ಡದು. ಅದರಿಂದಲೇ ನೀನು ಭೀಮನೆಸೆವ ಅನ್ನದ ಪಿಂಡವನ್ನು ಮನೆ ಕಾಯುವ ನಾಯಿಯಂತೆ ಉಣ್ಣುತ್ತಿ!'

ನ ಚಾಪರಾಧೋ ಭೀಮಸ್ಯ ಬ್ರುವತಸ್ತಾ ವಿಮಿದಂ ವಚಃ ।
ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ' ॥

ಹೃತಂ ಕ್ಷೇತ್ರಂ ಧನಂ ಯಸ್ಯ ಕಿಂ ಭೀಮೇನ ಕೃತಂ ತ್ವಯಿ ।
ಅಲಮಾಸಜ್ಜತಸ್ತೇದ್ಯ ನಿರ್ವೇದಕರಮೀರಿತಮ್ ॥

ಉಪಕಾರಾಯ ಭೀಮೇನ ತವ ದ್ವೇಷಂ ತ್ಯಜಾತ್ರ ತತ್ ।
ವಿಮುಚ್ಯ ದ್ವೇಷಕಾಮೌ ತ್ವಂ ವನೇ ತೀರ್ಥನಿಷೇವಕಃ ॥

ತಪಸಾऽऽರಾಧಯ ಹರಿಂ ತತಃ ಪೂತೋ ಭವಿಷ್ಯಸಿ ।
ಇತ್ಯುಕ್ತೋ ದ್ವೇಷಮುತ್ಸೃಜ್ಯ ಭೀಮೇ ನಿರ್ವೇದಮಾಗತಃ ॥

ಭೀಮ ನಿನಗೆ ಈ ಮಾತನ್ನು ಹೇಳಿದರೂ ಅವನದೇನೂ ತಪ್ಪಿಲ್ಲ. ನಿನ್ನ ಮಕ್ಕಳು ಅವನಿಗೆ ಬೆಂಕಿ ಹಚ್ಚಿದ್ದಾರೆ. ವಿಷವಿಕ್ಕಿದ್ದಾರೆ. ಹೆಂಡತಿಯನ್ನು ಅವಮಾನಿಸಿದ್ದಾರೆ. ಭೂಮಿ ಧನಗಳನ್ನು ಅಪಹರಿಸಿದ್ದಾರೆ. ಇದನ್ನೆಲ್ಲ ಮಾಡಿಸಿದ ನಿನಗೆ ಪ್ರತಿಯಾಗಿ ಭೀಮ ಏನು ಅಪಕಾರ ಮಾಡಿದ್ದಾನೆ? ಅತಿಯಾಗಿ ವಿಷಯಾಸಕ್ತನಾದ ನಿನಗೆ ಇಂದು ಉಪಕಾರಕ್ಕಾಗಿ ವೈರಾಗ್ಯ ಉಂಟು ಮಾಡುವ ಮಾತನ್ನಾಡಿದ್ದಾನೆ. ಅದರಿಂದ ನೀನು ಭೀಮನಲ್ಲಿ ದ್ವೇಷಭಾವನೆಯನ್ನು ಬಿಟ್ಟುಬಿಡು. ರಾಗ-ದ್ವೇಷಗಳನ್ನು ತ್ಯಜಿಸಿ ಅರಣ್ಯದಲ್ಲಿ ತೀರ್ಥಗಳನ್ನು ಸೇವಿಸುತ್ತ ತಪಸ್ಸಿನಿಂದ ಹರಿಯನ್ನು ಆರಾಧಿಸು. ಆಗ ನೀನು ಪಾಪಮುಕ್ತನಾಗುವಿ. ಹೀಗೆ ವಿದುರ ಹೇಳಿದಾಗ ಧೃತರಾಷ್ಟ್ರನು ಭೀಮನಲ್ಲಿ ದ್ವೇಷವನ್ನು ಬಿಟ್ಟು ವೈರಾಗ್ಯ ಹೊಂದಿದನು.

ಅನುಜ್ಞಾಂ ತಪಸೇ ಪ್ರಾಪ್ತುಮುಪವಾಸಪರೋऽಭವತ್ ।
ಅನಶ್ನಂತಂ ಚತುರ್ಥೇऽಹ್ನಿ ಧೃತರಾಷ್ಟ್ರಂ ಯುಧಿಷ್ಠಿರಃ ॥

ಜ್ಞಾತ್ವಾ ಸಂಪ್ರಾರ್ಥಯಾಮಾಸ ಭೋಜನಾರ್ಥಂ ಪುನಃ ಪುನಃ ।
ಅನುಜ್ಞಾಂ ವನವಾಸಾಯ ತತ್ತಃ ಪ್ರಾಪ್ಯೈವ ಸರ್ವಥಾ ॥

ಭೋಕ್ಷ್ಯೇऽನ್ಯಥಾ ನೇತಿ ವದನ್ ಧೃತರಾಷ್ಟ್ರಃ ಶ್ರಮಾನ್ವಿತಃ ।
ಉಪವಾಸಕೃಶೋ ಭಾರ್ಯಾಂ ಶಿಶ್ರಿಯೇ ಮೂರ್ಛಿತಃ ಕ್ಷಣಾತ್ ।

ಧೃತರಾಷ್ಟ್ರ ತಪಸ್ಸಿಗೆ ಧರ್ಮರಾಜನಿಂದ ಅನುಜ್ಞೆ ಪಡೆಯಲು ಉಪವಾಸ ಮಾಡತೊಡಗಿದ. ನಾಲ್ಕನೆ ದಿನ ಧೃತರಾಷ್ಟ್ರ ಉಣದಿದ್ದುದನ್ನು ತಿಳಿದು ಯುಧಿಷ್ಠಿರ ಭೋಜನಕ್ಕಾಗಿ ಪುನಃ ಪುನಃ ಪ್ರಾರ್ಥಿಸಿದನು. ವನವಾಸಕ್ಕೆ ಒಪ್ಪಿಗೆಯನ್ನು ನಿನ್ನಿಂದ ಪಡೆದೇ ನಾನು ಉಣ್ಣುವೆನು, ಇಲ್ಲದಿದ್ದರೆ ಸರ್ವಥಾ ಇಲ್ಲ ಎನ್ನುತ್ತ, ಉಪವಾಸದಿಂದ ಸೊರಗಿ ಆಯಾಸಗೊಂಡಿದ್ದ ಧೃತರಾಷ್ಟ್ರನು ಗಾಂಧಾರಿಯನ್ನು ಆಶ್ರಯಿಸಿದ. ಕ್ಷಣದಲ್ಲಿ ಮೂರ್ಛಿತನಾದ.

ಶಂತಮೇನ ಕರೇಣಾಥ ಧರ್ಮಜಸ್ತಂ ಮೃದು ಸ್ಪೃಶನ್ ।
ಶನೈಃ ಸಂಜ್ಞಾಮಗಮಯದಬ್ರವೀಚ್ಚ ಸುದುಃಖಿತಃ ॥

ಧರ್ಮರಾಜನು ಅತ್ಯಂತ ಸುಖಕರವಾದ ಕೈಯಿಂದ ಧೃತರಾಷ್ಟ್ರನನ್ನು ಮೃದುವಾಗಿ ಸ್ಪರ್ಶಿಸಿ ಮೆಲ್ಲನೆ ಎಚ್ಚರಗೊಳಿಸಿದನು. ಬಹಳ ದುಃಖಿತನಾಗಿ ನುಡಿದನು.

ಪುರಸೃತ್ಯ ಯುಯುತ್ಸುಂ ತ್ವಂ ಕುರು ರಾಜ್ಯಮಕಂಟಕಮ್ ।
ವಯಮೇವ ತ್ವದರ್ಥಾಯ ಕುರ್ಮಃ ಸರ್ವೇ ತಪೋವನೇ ॥

'ಯುಯುತ್ಸುವನ್ನು ಮುಂದೆ ಮಾಡಿಕೊಂಡು ನೀನು ನಿಷ್ಕಂಟಕವಾಗಿ ರಾಜ್ಯವಾಳು. ನಾವೆ ಎಲ್ಲರೂ ನಿನಗಾಗಿ ಕಾಡಿನಲ್ಲಿ ತಪಸ್ಸು ಮಾಡುವೆವು'.

ನೇತ್ಯಾಹ ಧೃತರಾಷ್ಟ್ರಸ್ತಂ ಕುಲಧರ್ಮೋ ಹಿ ನೋ ವನೇ ।
ಅಂತೇ ದೇಹಪರಿತ್ಯಾಗಸ್ತನ್ಮಾಽನುಜ್ಞಾತುಮರ್ಹಸಿ ॥

'ಬೇಡ' ಎಂದ ಧೃತರಾಷ್ಟ್ರ. 'ಅಂತ್ಯಕಾಲದಲ್ಲಿ ಕಾಡಿನಲ್ಲಿ ದೇಹಪರಿತ್ಯಾಗ ಮಾಡುವುದು ನಮಗೆ ಕುಲಧರ್ಮ. ಅದಕ್ಕೆ ನನಗೆ ನೀನು ಒಪ್ಪಿಗೆ ನೀಡು' ಎಂದ.

ತಯೋರ್ವಿವದತೋರೇವಂ ಕೃಷ್ಣದ್ವೈಪಾಯನಃ ಪ್ರಭುಃ ।
ಸರ್ವಜ್ಞಃ ಸರ್ವಕರ್ತೇಶ ಆವಿರ್ಭೂತೋಽಬ್ರವೀನ್ನೃಪಮ್ ॥

ಹೀಗೆ ಧೃತರಾಷ್ಟ್ರ-ಧರ್ಮರಾಜರು ವಿವಾದ ಮಾಡುತ್ತಿದ್ದಾಗ ಸರ್ವಜ್ಞ, ಸರ್ವಕರ್ತ, ಸರ್ವಸ್ವಾಮಿ, ಪ್ರಭು ಶ್ರೀವೇದವ್ಯಾಸರು ಆವಿರ್ಭವಿಸಿ ಧರ್ಮರಾಜನಿಗೆ ಹೇಳಿದರು.

ತಪಸಾऽಶೇಷದೋಷಾಣಾಂ ಕ್ಷಯಕಾಮಮಿಮಂ ನೃಪಮ್ ।
ಅನುಜಾನೀಹಿ ನೈವಾಸ್ಯ ಧರ್ಮವಿಘ್ನಕರೋ ಭವ ॥

ತಪಸ್ಸಿನಿಂದ ಎಲ್ಲ ಪಾಪ ಪರಿಹರಿಸಿಕೊಳ್ಳಲು ಬಯಸುತ್ತಿರುವ ಧೃತರಾಷ್ಟ್ರನಿಗೆ ನೀನು ಒಪ್ಪಿಗೆ ನೀಡು. ಅವನ ಧರ್ಮಸಾಧನೆಗೆ ನೀನು ಅಡ್ಡ ಬರಬೇಡ.

ಕಾಲೇ ನಿರ್ವೇದಮಾಪನ್ನಸ್ತಪಸಾ ದಗ್ಧಕಿಲ್ಬಿಷಃ ।
ಶುಭಾಂ ಗತಿಮಯಂ ಯಾಯಾದನ್ಯಥಾ ನ ಕಥಂಚನ ॥

ಯೋಗ್ಯಕಾಲದಲ್ಲಿ ವೈರಾಗ್ಯ ಹೊಂದಿ ತಪಸ್ಸಿನಿಂದ ಪಾಪಗಳನ್ನು ಸುಟ್ಟುಕೊಂಡರೆ ಮಾತ್ರ ಈತ ಸದ್ಗತಿಯನ್ನು ಪಡೆಯುತ್ತಾನೆ. ಇಲ್ಲದಿದ್ದರೆ ಸರ್ವಥಾ ಇಲ್ಲ.

★ ★ ★ ★ ★

ನಾಲ್ಕನೆಯ ಅಧ್ಯಾಯ

ಭೀಮಸೇನನ ಕಠೋರ ಮಾತುಗಳ ಶ್ರವಣದಿಂದ ವೈರಾಗ್ಯ ಹೊಂದಿದ ಧೃತರಾಷ್ಟ್ರನಿಂದ ಗಾಂಧಾರಿಯ ಜೊತೆಗೆ ವನಕ್ಕೆ ತೆರಳಬೇಕೆಂಬ ನಿಶ್ಚಯ.

ವೈಶಂಪಾಯನಃ

ಯುಧಿಷ್ಠಿರಸ್ಯ ನೃಪತೇರ್ದುರ್ಯೋಧನಪಿತುಸ್ತದಾ ।
ನಾಂತರಂ ದದೃಶೂ ರಾಜನ್ ಪುರುಷಾಃ ಪ್ರಣಯಂ ಪ್ರತಿ ॥೧॥

ವೈಶಂಪಾಯನ– ಹೇ ರಾಜನೇ! ಆ ಸಮಯದಲ್ಲಿ ರಾಜ್ಯದಲ್ಲಿರುವ ಎಲ್ಲ ಪುರುಷರು ರಾಜನಾದ ಯುಧಿಷ್ಠಿರನಿಗೂ ದುರ್ಯೋಧನನ ತಂದೆಯಾದ ಧೃತರಾಷ್ಟ್ರನಿಗೂ ಪ್ರೀತಿಯ ವಿಷಯದಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು ಕಂಡುಕೊಂಡರು.

ಯದಾ ತು ಕೌರವೋ ರಾಜಾ ಪುತ್ರಂ ಸಸ್ಮಾರ ಬಾಲಿಶಮ್ ।
ತದಾ ಭೀಮಮಪಧ್ಯಾತಿ ಹೃದಯೇನಾಂಬಿಕಾಸುತಃ ॥೨॥

ಯಾವಾಗ ಕುರುವಂಶದಲ್ಲಿ ಬಂದ ಅಂಬಿಕೆಯ ಮಗನಾದ ಧೃತರಾಷ್ಟ್ರ ರಾಜನು ಮಂದಬುದ್ಧಿಯುಳ್ಳ ಮಗನನ್ನು ಸ್ಮರಿಸಿಕೊಳ್ಳುವನೋ ಆಗ ಮನಸ್ಸಿನಲ್ಲಿ ಭೀಮನನ್ನು ಬೈದುಕೊಳ್ಳುವನು.

ಕೌರವಶ್ಚೈವ ಭೀಮಶ್ಚ ಹೃದಾऽನ್ಯೋನ್ಯಮದೂಷ್ಯತಾಮ್ ।
ಧ್ಯಾಯಂತೌ ಶ್ಲಕ್ಷ್ಣಯಾ ವಾಚಾ ಅನ್ಯೋನ್ಯಮಭಿತಿಷ್ಠತಾಮ್ ॥೩॥

ಧೃತರಾಷ್ಟ್ರ ಮತ್ತು ಭೀಮ ಇವರಿಬ್ಬರೂ ಪರಸ್ಪರವಾಗಿ ಮನಸ್ಸಿನಲ್ಲಿ ಚಿಂತಿಸುತ್ತಾ ಬೈದುಕೊಳ್ಳುವರು. ಹಾಗೆಯೇ ಮಧುರವಾದ ಮಾತಿನಿಂದ ಪರಸ್ಪರ ಎದುರುಗೊಳ್ಳುವರು.

ಅಪ್ರಕಾಶಂ ವ್ಯಲೀಕಾನಿ ಕುರುತೇऽಸ್ಯ ವೃಕೋದರಃ ।
ಆಜ್ಞಾಂ ಪ್ರತ್ಯಹನಚ್ಚೈವ ಕೃತಕೈಃ ಪುರುಷೈಃ ಸದಾ ॥೪॥

ಭೀಮನು ಈ ಧೃತರಾಷ್ಟ್ರನಿಗೆ ಗೊತ್ತಾಗದಂತೆ ಅಪ್ರಿಯವನ್ನೇ ಮಾಡುತ್ತಾನೆ. ಅಲ್ಲದೆ ಕೃತ್ರಿಮರಾದ ಪುರುಷರಿಂದ ಅವನ ಆಜ್ಞೆಯನ್ನು ತಿರಸ್ಕರಿಸುತ್ತಾನೆ.

ಅಸಕೃಚ್ಚಾಪ್ಯುವಾಚೇದಂ ಹತಾಸ್ತೇ ಮಂದಚೇತಸಃ ॥೫॥

ಅಷ್ಟೇ ಅಲ್ಲದೆ ಬಹಳ ಬಾರಿ ಆ ಕೆಟ್ಟಬುದ್ಧಿಯುಳ್ಳವರು ಹತರಾದರು ಎಂದು ಹೇಳುತ್ತಿರುತ್ತಾನೆ.

ಅಥ ಭೀಮಃ ಸುಹೃನ್ಮಧ್ಯೇ ಬಾಹುಶಬ್ದಮಥಾऽಕರೋತ್ ।
ಸಂಶ್ರವೇ ಧೃತರಾಷ್ಟ್ರಸ್ಯ ಯುದ್ಧಂ ಸಂವರ್ಣಯನ್ನಿವ ॥೬॥

ಸ್ಮೃತ್ವಾ ದುರ್ಯೋಧನಂ ಶತ್ರುಂ ಕರ್ಣದುಃಶಾಸನಾವಪಿ ।
ಪ್ರೋವಾಚೇದಂ ಸುಸಂರಬ್ಧೋ ಭೀಮಃ ಸ ಪರುಷಂ ವಚಃ ॥೭॥

ಒಂದು ಬಾರಿ ಭೀಮಸೇನನು ತನ್ನ ಸ್ನೇಹಿತರ ಮಧ್ಯದಲ್ಲಿ ಧೃತರಾಷ್ಟ್ರನಿಗೆ ಚೆನ್ನಾಗಿ ಕೇಳಿಸುವಂತೆ ಯುದ್ಧವನ್ನು ವರ್ಣನೆ ಮಾಡುವ ನೆಪದಲ್ಲಿ ಬಾಹುಗಳನ್ನು ತಟ್ಟಿ ಶಬ್ದ ಮಾಡಿದನು. ಅದೇ ಸಮಯದಲ್ಲಿ ಶತ್ರುವಾದ ದುರ್ಯೋಧನನನ್ನು, ಕರ್ಣ, ದುಶ್ಶಾಸನನನ್ನು ಸ್ಮರಿಸುತ್ತಾ ಬಹಳ ಕೋಪಾವಿಷ್ಟನಾಗಿ ಭಯಂಕರನಾಗಿ ಮುಂದೆ ಹೇಳುವ ಕಠೋರವಾದ ಈ ಮಾತುಗಳನ್ನು ನುಡಿದನು.

ಭೀಮಃ

ಅಂಧಸ್ಯ ನೃಪತೇಃ ಪುತ್ರಾ ಮಯಾ ಪರಿಘಬಾಹುನಾ ।
ನೀತಾ ಲೋಕಮಮುಂ ಸರ್ವೇ ನಾನಾಶಸ್ತ್ರಾಸ್ತ್ರಯೋಧಿನಃ ॥೮॥

ಭೀಮ– ಅಂಧನಾದ ಈ ಧೃತರಾಷ್ಟ್ರರಾಜನ ಎಲ್ಲ ಮಕ್ಕಳು ಅನೇಕ ವಿಧವಾದ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡುತ್ತಿದ್ದರೂ ಉಕ್ಕಿನ ದಂಡಕ್ಕೆ ಸದೃಶವಾದ ಬಾಹುವುಳ್ಳ ನನ್ನಿಂದ ಪರಲೋಕಕ್ಕೆ ಒಯ್ಯಲ್ಪಟ್ಟಿದ್ದಾರೆ.

ಇಮೌ ತೌ ಪರಿಘಪ್ರಖ್ಯೌ ಭುಜೌ ಮಮ ದುರಾಸದೌ ।
ಯಯೋರಂತರಮಾಪನ್ನಾಃ ಧೃತರಾಷ್ಟ್ರಾಃ ಕ್ಷಯಂ ಗತಾಃ ॥೯॥

ಉಕ್ಕಿನ ದಂಡಕ್ಕೆ ಸದೃಶವಾದ ನನ್ನ ಈ ಎರಡು ಕೈಗಳು ಸಾಮಾನ್ಯರಿಂದ ಮುಟ್ಟಲೂ ಅಶಕ್ಯವಾದವು. ಈ ಎರಡು ಕೈಗಳ ಮಧ್ಯದಲ್ಲಿ ಸಿಕ್ಕಿಬಿದ್ದು ಧೃತರಾಷ್ಟ್ರನ ಮಕ್ಕಳು ನಾಶವಾಗಿ ಹೋದರು.

ಇಮೌ ಪೀನೌ ಸುವೃತ್ತೌ ಮೇ ನಾಗರಾಜಕರೋಪಮೌ ।
ಯಾವಾಸಾದ್ಯ ರಣೇ ಮೂಢಾ ಧಾರ್ತರಾಷ್ಟ್ರಾಃ ಕ್ಷಯಂ ಗತಾಃ ॥೧೦॥

ಗಜರಾಜನ ಸೊಂಡಿಲಿಗೆ ಸದೃಶವಾದ, ದಷ್ಟಪುಷ್ಟವಾಗಿ ಹೆಚ್ಚಾಗಿ ವೃತ್ತವಾಗಿರುವ ಈ ನನ್ನ ಎರಡು ಕೈಗಳನ್ನು ನೋಡಿರಿ. ಈ ಯಾವ ಎರಡು ಕೈಗಳನ್ನು ಹೊಂದಿ ಮೂಢರಾದ ಧೃತರಾಷ್ಟ್ರನ ಮಕ್ಕಳು ಯುದ್ಧದಲ್ಲಿ ನಾಶವಾದರು.

ತಾವಿಮೌ ಚಂದನೇನಾಕ್ತೌ ವಂದನೀಯೌ ಚ ಮೇ ಭುಜೌ ।
ಯಾಭ್ಯಾಂ ದುರ್ಯೋಧನೋ ನಿನ್ಯೇ ಕ್ಷಯಂ ಸಸುತಬಾಂಧವಃ ॥೧೧॥

ಯಾವೆರಡು ಕೈಗಳಿಂದ ಮಕ್ಕಳು ಹಾಗು ಬಾಂಧವರಿಂದ ಸಹಿತನಾದ ದುರ್ಯೋಧನನು ಹತನಾದನೋ ಅಂತಹ ಗಂಧದಿಂದ ಲೇಪಿಸಲ್ಪಟ್ಟ ಅದೇ ಈ ನನ್ನ ಎರಡು ಕೈಗಳು ಎಲ್ಲರೂ ನಮಸ್ಕರಿಸಲು ಯೋಗ್ಯವಾಗಿವೆ.

ವೈಶಂಪಾಯನಃ

ಏತಾಶ್ಚಾನ್ಯಾಶ್ಚ ವಿವಿಧಾಃ ಶಲ್ಯಭೂತಾ ಜನಾಧಿಪಃ ।
ಶ್ರುತ್ವಾ ನಿರ್ವೇದಮಾಪೇದೇ ಭೀಮವಾಗ್ಬಾಣಚೋದಿತಃ ॥೧೨॥

ವೈಶಂಪಾಯನ– ಜನಾಧಿಪನಾದ ಧೃತರಾಷ್ಟ್ರನು ಈ ಎಲ್ಲ ಮಾತುಗಳೊಡನೆ ಈಟಿಯಂತೆ ಇರಿಯುವ ಬೇರೆ ಬೇರೆ ಮಾತುಗಳನ್ನು ಕೇಳಿ ಈ ರೀತಿಯ ಭೀಮನ ವಾಗ್ಬಾಣಗಳಿಂದ ಪ್ರೇರಿತನಾಗಿ ವೈರಾಗ್ಯವನ್ನು ಹೊಂದಿದನು.

ಸಾ ಚ ಬುದ್ಧಿಮತೀ ದೇವೀ ಕಾಲಪರ್ಯಾಯವೇದಿನೀ ।
ಗಾಂಧಾರೀ ಸರ್ವಧರ್ಮಜ್ಞಾ ತಾನ್ಯಲೀಕಾನಿ ಶುಶ್ರುವೇ ॥೧೩॥

ಕುಂತ್ಯಾಂ ಸಪರ್ಯಾಂ ಸಾ ವೀಕ್ಷ್ಯ ಶಾಪೇ ನಾಸ್ಯಾಕರೋನ್ಮತಿಮ್ ॥೧೪॥

ಬುದ್ಧಿವಂತಳಾದ, ಕಾಲದ ಕ್ರಮವನ್ನು ಚೆನ್ನಾಗಿ ತಿಳಿದಿರುವ, ಸರ್ವಧರ್ಮ-ಗಳನ್ನೂ ಅರಿತ ಆ ಗಾಂಧಾರೀ ದೇವಿಯು ಭೀಮನ ವತಿಯಿಂದ ಉಂಟಾಗುವ ಅಪ್ರಿಯಕರ್ಮಗಳನ್ನು ಮತ್ತು ಅಪ್ರಿಯವಾಕ್ಯಗಳನ್ನು ಕೇಳಿದಳು. ಆದರೆ ಕುಂತಿಯ ಸೇವೆಯನ್ನು ನೋಡುತ್ತಾ ಭೀಮನಿಗೆ ಶಾಪ ನೀಡಲು ಬಯಸಲಿಲ್ಲ.

ತತಃ ಪಂಚದಶೇ ವರ್ಷೇ ಸಮತೀತೇ ನರಾಧಿಪಃ ।
ರಾಜಾ ನಿರ್ವೇದಮಾಪೇದೇ ಭೀಮವಾಗ್ಬಾಣಪೀಡಿತಃ ॥೧೫॥

ಹದಿನೈದು ವರ್ಷಗಳು ಕಳೆದ ನಂತರ ನರಾಧಿಪತಿಯಾದ ಧೃತರಾಷ್ಟ್ರ ರಾಜನು ಭೀಮನ ವಾಗ್ಬಾಣಗಳಿಂದ ಪೀಡಿತನಾಗಿ ವೈರಾಗ್ಯವನ್ನು ಹೊಂದಿದನು.

ಸುಖಾಸಕ್ತಂ ಕೃಚ್ಛ್ರಪರಂ ಜ್ಞಾತ್ವಾ ಚೈವ ಯುಧಿಷ್ಠಿರಮ್ ।
ತಪೋಯೋಗಾತ್ ತಪಸ್ತಪ್ತುಂ ಮನಶ್ಚಕ್ರೇ ಮಹಾಮತಿಃ ॥೧೬॥

ಅಲ್ಲದೆ ಯುಧಿಷ್ಠಿರನನ್ನು ನೋಡುತ್ತಾ ಅವನೂ ಸುಖದಲ್ಲಿ ಆಸಕ್ತನಾಗದೇ, ಕೃಚ್ಛ್ರಾದಿ ವ್ರತಗಳನ್ನು ನಡೆಸುವುದನ್ನು ತಿಳಿದು ಮಹಾಮತಿಯಾದ ಧೃತರಾಷ್ಟ್ರನು ತಪೋಯೋಗದಿಂದ ತಾನೂ ತಪಗೈಯ್ಯಬೇಕೆಂದು ಮನಸ್ಸು ಮಾಡಿದನು.

ನಾನ್ವಬುಧ್ಯತ ತದ್ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಶ್ವೇತಾಶ್ವೋ ವಾऽಥ ಕುಂತೀ ವಾ ದ್ರೌಪದೀ ವಾ ಯಶಸ್ವಿನೀ ॥೧೭॥

ಧೃತರಾಷ್ಟ್ರನ ಈ ಸಂಕಲ್ಪವನ್ನು ರಾಜನಾದ ಕುಂತೀಪುತ್ರ ಯುಧಿಷ್ಠಿರನು, ಶ್ವೇತಾಶ್ವವುಳ್ಳ ಅರ್ಜುನನು, ಕುಂತಿಯು ಮತ್ತು ಯಶಸ್ವಿನಿಯಾದ ದ್ರೌಪದಿಯರು ಅನುಮೋದಿಸಲಿಲ್ಲ.

ಮಾದ್ರೀಪುತ್ರೌ ಚ ಭೀಮಸ್ಯ ಚಿತ್ತಜ್ಞಾವನ್ವಮೋದತಾಮ್ ।
ರಾಜ್ಞಸ್ತು ಚಿತ್ತಂ ರಕ್ಷಂತೌ ನೋಚತುಃ ಸ್ವಯಮಪ್ರಿಯಮ್ ॥೧೮॥

ಮಾದ್ರೀಪುತ್ರರಾದ ನಕುಲ-ಸಹದೇವರಾದರೂ ಭೀಮನ ಮನಸ್ಸನ್ನು ತಿಳಿದವರಾದ್ದರಿಂದ ಇದನ್ನು ಅನುಮೋದಿಸಿದರೂ ರಾಜನಾದ ಯುಧಿಷ್ಠಿರನ ಇಂಗಿತವನ್ನು ರಕ್ಷಿಸುವುದಕ್ಕಾಗಿ ರಾಜನಿಗೆ ಅಪ್ರಿಯವಾದ ಈ ವಿಷಯವನ್ನು ಹೇಳಲಿಲ್ಲ.

ತತಃ ಸಮಾನಯತ್ ಸರ್ವಂ ಧೃತರಾಷ್ಟ್ರಃ ಸುಹೃಜ್ಜನಮ್ ।
ಬಾಷ್ಪಸಂದಿಗ್ಧಮತ್ಯರ್ಥಮ್ ಇದಮಾಹ ವಚೋ ಭೃಶಮ್ ॥೧೯॥

ಇಷ್ಟಾದ ನಂತರ ಧೃತರಾಷ್ಟ್ರನು ತನ್ನ ಎಲ್ಲ ಸ್ನೇಹಿತರನ್ನು ಕರೆಸಿದನು. ಅವರೆದುರು ಮತ್ತೆ ಮತ್ತೆ ಬಹಳವಾಗಿ ಕಣ್ಣೀರಿನಿಂದ ಗದ್ಗದಿತನಾಗಿ ಮುಂದೆ ಹೇಳುವ ಈ ಮಾತುಗಳನ್ನು ಆಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಭೀಮಸೇನವಚನಂ ನಾಮ ಚತುರ್ಥೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಎಲ್ಲ ಪೌರಜನರನ್ನೂ ಕರೆಸಿ ಧೃತರಾಷ್ಟ್ರನು ತಾನು ವನಕ್ಕೆ ಹೋಗಬೇಕೆಂದು ನಿಶ್ಚಯಿಸಿರುವುದನ್ನು ನಿವೇದಿಸುವುದು. ಯುಧಿಷ್ಠಿರನಲ್ಲಿ ವನಗಮನವನ್ನು ಕುರಿತು ಒಪ್ಪಿಗೆ ನೀಡಬೇಕೆಂದು ಪ್ರಾರ್ಥಿಸುವುದು.

ಧೃತರಾಷ್ಟ್ರಃ

ವಿದಿತಂ ಭವತಾಮೇತದ್ ಯಥಾ ವೃತ್ತಂ ಕುರುಕ್ಷಯಮ್ ।
ಮಮಾಪರಾಧಾತ್ ತತ್ ಸರ್ವಮಿತಿ ಜ್ಞೇಯಂ ತು ಕೌರವಾಃ ॥೧॥

ಧೃತರಾಷ್ಟ್ರ– ಹೇ ಕುರುದೇಶಜರೇ, ಕುರುಕುಲದ ಕ್ಷಯವು ಹೇಗಾಯಿತೆಂದು ನಿಮಗೆಲ್ಲರಿಗೂ ತಿಳಿದೇ ಇದೆ. ಆ ಎಲ್ಲವೂ ನನ್ನ ಅಪರಾಧದಿಂದಲೇ ಆಯಿತೆಂದು ತಿಳಿಯಿರಿ.

ಯೋಽಹಂ ದುಷ್ಟಮತಿಂ ಮೂರ್ಖಂ ಜ್ಞಾತೀನಾಂ ಭಯವರ್ಧನಮ್ ।
ದುರ್ಯೋಧನಂ ಕೌರವಾಣಾಮಾಧಿಪತ್ಯೇಽಭ್ಯಷೇಚಯಮ್ ॥೨॥

ಏಕೆಂದರೆ ದುಷ್ಟಮತಿಯಾದ, ಮೂರ್ಖನಾದ, ಬಂಧುಗಳ ಭಯವನ್ನು ಹೆಚ್ಚಿಸುವ ದುರ್ಯೋಧನನನ್ನು ಕೌರವರ ಅಧಿಪತಿಯನ್ನಾಗಿ ನಾನೇ ಅಭಿಷೇಕ ಮಾಡಿದ್ದೇನೆ.

ಯಚ್ಚಾಹಂ ವಾಸುದೇವಸ್ಯ ವಾಕ್ಯಂ ನಾಶ್ರೌಷಮರ್ಥವತ್ ।
ಬಧ್ಯತಾಂ ಸಾಧ್ವಯಂ ಪಾಪಃ ಸಾಮಾತ್ಯ ಇತಿ ದುರ್ಮತಿಃ ॥೩॥

ಪುತ್ರಸ್ನೇಹಾಭಿಭೂತಶ್ಚ ಹಿತಮುಕ್ತೋ ಹಿತೈಷಿಣಾ ॥೪॥

ವಿದುರೇಣಾಥ ಭೀಷ್ಮೇಣ ದ್ರೋಣೇನ ಚ ಕೃಪೇಣ ಚ ।
ಪದೇ ಪದೇ ಭಗವತಾ ವ್ಯಾಸೇನ ಚ ಮಹಾತ್ಮನಾ ॥೫॥

ಸಂಜಯೇನಾಥ ಗಾಂಧಾರ್ಯಾ ತದಿದಂ ತಪ್ಯತೇ ಮಯಾ ॥೬॥

ಅಷ್ಟೇ ಅಲ್ಲದೆ ನಾನು ಅರ್ಥವತ್ತಾದ ಶ್ರೀಕೃಷ್ಣನ ವಾಕ್ಯವನ್ನು ಕೇಳಲಿಲ್ಲ. ಹಿತೈಷಿಯಾದ ವಿದುರನು 'ಮಂತ್ರಿಗಳೊಡನೆ ಸಹಿತನಾದ ದುರ್ಮತಿಯಾದ, ಪಾಪಿಷ್ಠನಾದ ಈ ದುರ್ಯೋಧನನು ಬಂಧಿಸಲ್ಪಡಲಿ' ಎಂದು ಹಿತವನ್ನು ಹೇಳಿದ್ದರೂ ಪುತ್ರಸ್ನೇಹದಿಂದ ಮೋಹಿತನಾಗಿ ಅದನ್ನೂ ನಾನು ಕೇಳಲಿಲ್ಲ. ಅಲ್ಲದೆ ಭೀಷ್ಮರಿಂದ, ದ್ರೋಣರಿಂದ, ಕೃಪರಿಂದ, ಮಹಾತ್ಮನಾದ ಭಗವಾನ್ ವ್ಯಾಸದೇವನಿಂದ, ಅಲ್ಲದೆ ಸಂಜಯನಿಂದ, ಅಷ್ಟೇ ಅಲ್ಲದೆ ಗಾಂಧಾರೀ ದೇವಿಯಿಂದ ಹೆಜ್ಜೆ ಹೆಜ್ಜೆಗೂ ಹೇಳಲ್ಪಟ್ಟ ವಿಷಯವನ್ನು ನಾನು ಕೇಳಲಿಲ್ಲ. ಅದು ಈಗ ನನ್ನನ್ನು ಪರಿತಪಿಸುವಂತೆ ಮಾಡಿದೆ.

ಯಚ್ಚಾಹಂ ಪಾಂಡುಪುತ್ರೇಷು ಗುಣವತ್ಸು ಮಹಾತ್ಮಸು ।
ನ ನ್ಯಸ್ತವಾನ್ ಶ್ರಿಯಂ ದೀಪ್ತಾಂ ಪಿತೃಪೈತಾಮಹೀಮಿಮಾಮ್ ॥೭॥

ಅಷ್ಟೇ ಅಲ್ಲದೆ ಮಹಾತ್ಮರಾದ ಗುಣವಂತರಾದ ಪಾಂಡುಪುತ್ರರಲ್ಲಿ ಪಿತೃಪಿತಾಮಹಾದಿಗಳಿಂದ ಬಂದಿರುವ ಈ ತೇಜೋಮಯವಾದ ಸಂಪತ್ತಿನಿಂದ ಕೂಡಿದ ಭೂಮಿಯನ್ನು ನಾನು ಇರಿಸಲಿಲ್ಲ.

ಪಶ್ಯನ್ನಪಿ ವಿನಾಶಂ ಹಿ ಸರ್ವರಾಜ್ಞಾಂ ಗದಾಗ್ರಜಃ ।
ಏತಚ್ಛ್ರೇಯಃ ಸ ಪರಮಮ್ ಅಮನ್ಯತ ಜನಾರ್ದನಃ ॥೮॥

ಎಲ್ಲ ರಾಜರ ವಿನಾಶವನ್ನು ನೋಡುತ್ತಿದ್ದರೂ ಗದಾಗ್ರಜನಾದ, ಜನಾರ್ದನನೆಂಬ ಹೆಸರುಳ್ಳ ಆ ಶ್ರೀಕೃಷ್ಣನು 'ಪಾಂಡವರಿಗೆ ಸಂಪತ್ತು ನೀಡುವುದು ಬಹಳ ಶ್ರೇಯಸ್ಕರ' ಎಂದು ತಿಳಿಸಿದರೂ ನಾನು ಆ ರೀತಿ ಮಾಡಲಿಲ್ಲ.

ಸೋಽಹಮೇತಾನ್ಯತೀತಾನಿ ದುರ್ವೃತ್ತಾನ್ಯಾತ್ಮನಃ ಸದಾ ।
ಹೃದಯೇ ಶಲ್ಯಭೂತಾನಿ ಧಾರಯಾಮಿ ಸಹಸ್ರಶಃ ॥೯॥

ಅಂತಹ ನಾನು ಯಾವಾಗಲೂ ಹೃದಯದಲ್ಲಿ ಈಟಿಯಂತೆ ಚುಚ್ಚುತ್ತಿರುವ ನಾನೇ ಮಾಡಿದ, ಹಿಂದೆ ನಡೆದು ಹೋದ ಸಾವಿರಾರು ದುರ್ನಡತೆಗಳನ್ನು ಮನಸ್ಸಿನಲ್ಲಿ ಧರಿಸಿದ್ದೇನೆ.

ವಿಶೇಷತಸ್ತು ದಹ್ಯಾಮಿ ವರ್ಷೇ ಪಂಚದಶೇ ಹಿ ವೈ ।
ಅಸ್ಯ ಪಾಪಸ್ಯ ಶುದ್ಧ್ಯರ್ಥೇ ನಿಯತೋಽಸ್ಮಿ ಸುದುರ್ಮತಿಃ ॥೧೦॥

ಬಹಳ ಕೆಟ್ಟ ಬುದ್ಧಿಯುಳ್ಳ ನಾನು ವಿಶೇಷವಾಗಿ ಈ ಹದಿನೈದನೆಯ ವರ್ಷದಲ್ಲಿ ಹಿಂದಿನ ಪಾಪಗಳನ್ನು ನೆನೆಸಿಕೊಂಡು ಸುಟ್ಟುಹೋಗುತ್ತಿದ್ದೇನೆ. ಈ ಪಾಪದ ಶುದ್ಧಿಗಾಗಿ ನಿಯಮಪಾಲನೆಯನ್ನು ನಡೆಸುತ್ತಿದ್ದೇನೆ.

ಚತುರ್ಥೇ ನಿಯತೇ ಕಾಲೇ ಕದಾಚಿದಪಿ ಚಾಷ್ಟಮೇ ।
ತೃಷ್ಣಾವಿನಯನಂ ಭುಂಜೇ ಗಾಂಧಾರೀ ವೇದ ತನ್ಮಮ ॥೧೧॥

ಅದಕ್ಕಾಗಿ ನಾಲ್ಕು ಹೊತ್ತಿಗೊಮ್ಮೆ, ಕೆಲವು ಬಾರಿ ಎಂಟು ಹೊತ್ತಿಗೊಮ್ಮೆ ಕೇವಲ ಬಾಯಾರಿಕೆಯನ್ನು ಹೋಗಲಾಡಿಸುವಷ್ಟೇ ಆಹಾರವನ್ನು ಸೇವಿಸುತ್ತಿದ್ದೇನೆ. ಈ ನನ್ನ ನಿಯಮಪಾಲನೆಯನ್ನು ಗಾಂಧಾರೀದೇವಿಯು ತಿಳಿದಿದ್ದಾಳೆ.

ಕರೋತ್ಯಾಹಾರಮಿತಿ ಚ ಸರ್ವಃ ಪರಿಜನಃ ಸದಾ ।
ಯುಧಿಷ್ಠಿರಭಯಾದ್ವೇತ್ತಿ ಭೃಶಂ ತಪ್ಯೇತ ಪಾಂಡವಃ ॥೧೨॥

ನಾನು ಈ ರೀತಿಯ ನಿಯಮದಿಂದಿದ್ದೇನೆಂದು ತಿಳಿದರೆ ಯುಧಿಷ್ಠಿರನು ಬಹಳ ತಾಪಗೊಳ್ಳುವನು. ಆದಕ್ಕೋಸ್ಕರ ಯುಧಿಷ್ಠಿರನಿಗೆ ತಾಪವಾಗುವ ಭಯದಿಂದ ನನ್ನ ಎಲ್ಲ ಪರಿಜನರು ನಾನು ಹೊತ್ತು ಹೊತ್ತಿಗೆ ಆಹಾರವನ್ನು ಸ್ವೀಕರಿಸುವೆನೆಂದೇ ತಿಳಿದಿದ್ದಾರೆ (ನಾನೇ ಈ ವಿಷಯವನ್ನು ಗುಟ್ಟಾಗಿ ಇಟ್ಟಿದ್ದೇನೆ).

ಭೂಮೌ ಶಯೀ ಜಪ್ಯಪರೋ ದರ್ಭೇಷ್ವಜಿನಸಂವೃತಃ ।
ನಿಯಮವ್ಯಪದೇಶೇನ ಗಾಂಧಾರೀ ಚ ಯಶಸ್ವಿನೀ ॥೧೩॥

ನಿಯಮಪಾಲನೆಗೆ ಮುಖ್ಯವಾದುದರಿಂದ ನಾನು ಮತ್ತು ಯಶಸ್ವಿನಿಯಾದ ಗಾಂಧಾರೀ ದೇವಿಯು ಜಪದಲ್ಲೇ ಮನಸ್ಸನ್ನು ಇಟ್ಟು ಮೃಗಾಜಿನವನ್ನು ಉಟ್ಟುಕೊಂಡು ಭೂಮಿಯಲ್ಲಿ ದರ್ಭೆಯ ಮೇಲೆ ಮಲಗುತ್ತಿದ್ದೇವೆ.

ಹತಂ ಪುತ್ರಶತಂ ವೀರಂ ಸಂಗ್ರಾಮೇಷ್ವಪಲಾಯಿನಮ್ ।
ನಾನುತಪ್ಯೇ ಹ್ಯಹಂ ತಚ್ಚ ಕ್ಷತ್ರಧರ್ಮಂ ಹಿ ತಂ ವಿದುಃ ॥೧೪॥

ಯುದ್ಧದಲ್ಲಿ ಪಲಾಯನ ಮಾಡದೆ ವೀರಮರಣವನ್ನು ಹೊಂದಿದ ನೂರು ಮಂದಿ ಮಕ್ಕಳ ಬಗ್ಗೆ ನಾನು ಪರಿತಪಿಸುತ್ತಿಲ್ಲ. ಏಕೆಂದರೆ ಅದು ಕ್ಷತ್ರಿಯಧರ್ಮವೆಂದು ಜ್ಞಾನಿಗಳೆಲ್ಲರೂ ತಿಳಿದಿದ್ದಾರೆ.

ವೈಶಂಪಾಯನಃ

ಇತ್ಯುಕ್ತ್ವಾ ಧರ್ಮರಾಜಂ ಸೋಽಥಾಭ್ಯಭಾಷತ ವೀರ್ಯವಾನ್ ॥೧೫॥

ವೈಶಂಪಾಯನ– ಇಷ್ಟು ಹೇಳಿದ ನಂತರ ವೀರ್ಯವಂತನಾದ ಆ ಧೃತರಾಷ್ಟ್ರನು ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು.

ಧೃತರಾಷ್ಟ್ರಃ

ಭದ್ರಂ ತೇ ಯಾದವೀಮಾತಃ ವಾಕ್ಯಂ ಚೇದಂ ನಿಬೋಧ ಮೇ ॥೧೬॥

ಧೃತರಾಷ್ಟ್ರ– ಕುಂತಿಯೇ ತಾಯಿಯಾಗಿ ಉಳ್ಳ ಹೇ ಧರ್ಮರಾಜನೇ ನಿನಗೆ ಮಂಗಳವಾಗಲಿ. ನನ್ನ ಈ ವಾಕ್ಯವನ್ನು ಸರಿಯಾಗಿ ಗಮನಿಸು.

ಸುಖಮಸ್ಮ್ಯುಷಿತಃ ಪುತ್ರ ತ್ವಯಾ ಸುಪರಿಪಾಲಿತಃ ।
ಮಯಾ ದಾನಾನಿ ದತ್ತಾನಿ ಶ್ರಾದ್ಧಾನಿ ಚ ಪುನಃ ಪುನಃ ॥೧೭॥

ಪ್ರಕೃಷ್ಟಂ ಮೇ ವಯಃ ಪುತ್ರ ಪುಣ್ಯಂ ಪ್ರಾಪ್ತಂ ಯಥಾಬಲಮ್ ।
ಗಾಂಧಾರೀ ಹತಪುತ್ರೇಯಂ ಧೈರ್ಯೇಣಾವೇಕ್ಷತೇ ಚ ಮಾಮ್ ॥೧೮॥

ಹೇ ಮಗನೇ! ನಿನ್ನಿಂದ ಒಳ್ಳೆಯ ರೀತಿಯ ಪಾಲನೆಗೆ ಒಳಪಟ್ಟು ನಾನು ಸುಖವಾಗಿ ವಾಸವಾಗಿದ್ದೇನೆ. ನನ್ನಿಂದ ಮತ್ತೆ ಮತ್ತೆ ಅನೇಕ ದಾನಗಳು ಮಾಡಲ್ಪಟ್ಟಿವೆ ಹಾಗೂ ಅನೇಕ ಶ್ರಾದ್ಧಕರ್ಮಗಳನ್ನು ಆಚರಿಸಿದ್ದೇನೆ. ಹೇ ಮಗನೇ! ನನ್ನ ಈ ವಯಸ್ಸು ಉತ್ಕೃಷ್ಟವಾಗಿದ್ದು ನನ್ನ ಬಲಕ್ಕೆ ತಕ್ಕಂತೆ ಪುಣ್ಯವನ್ನೂ ಸಂಪಾದಿಸಿದ್ದೇನೆ. ಈ ಮಕ್ಕಳನ್ನು ಕಳೆದುಕೊಂಡ ಗಾಂಧಾರೀ ದೇವಿಯು ಧೈರ್ಯದಿಂದ ನನ್ನನ್ನು ನೋಡಿಕೊಳ್ಳುತ್ತಿದ್ದಾಳೆ.

ದ್ರೌಪದ್ಯಶುಭಕರ್ತಾರಸ್ತವ ಚೈಶ್ವರ್ಯಹಾರಿಣಃ ।
ಸಮತೀತಾ ನೃಶಂಸಾಸ್ತೇ ಧರ್ಮೇಣ ನಿಹತಾ ಯುಧಿ ॥೧೯॥

ದ್ರೌಪದಿಗೆ ಅಶುಭವನ್ನುಂಟು ಮಾಡಿದ ಅಲ್ಲದೆ ನಿನ್ನ ಐಶ್ವರ್ಯವನ್ನೂ ಅಪಹರಿಸಿದ ಹಿಂದೆ ಇದ್ದ ಕ್ರೂರಜನರು ನಿನ್ನ ಧರ್ಮದಿಂದಲೇ ಯುದ್ಧದಲ್ಲಿ ಹತರಾಗಿದ್ದಾರೆ.

ನ ತೇಷು ಪ್ರತಿಕರ್ತವ್ಯಂ ಪಶ್ಯಾಮಿ ಕುರುನಂದನ ।
ಸರ್ವೇ ಶಸ್ತ್ರಜಿತಾನ್ ಲೋಕಾನ್ ಗತಾ ಹ್ಯಭಿಮುಖಾ ಹತಾಃ ॥೨೦॥

ಅವರ ವಿಷಯದಲ್ಲಿ ಮಾಡಬೇಕಾದ ಯಾವುದನ್ನೂ ನಾನು ಕಾಣಲಾರೆ. ಹೇ ಕುರುನಂದನನೇ! ಅವರೆಲ್ಲರೂ ಯುದ್ಧದಲ್ಲಿ ಅಭಿಮುಖರಾಗಿ ಮರಣ ಹೊಂದಿ ಶಸ್ತ್ರದಿಂದ ಗೆಲ್ಲಲ್ಪಡುವ ಉತ್ತಮ ಲೋಕಗಳನ್ನು ಹೊಂದಿದ್ದಾರೆ.

ಆತ್ಮನಸ್ತು ಸತಾಂ ಮುಖ್ಯ ಪ್ರತಿಕರ್ತವ್ಯಮದ್ಯ ಮೇ ।
ಗಾಂಧಾರ್ಯಾಶ್ಚೈವ ರಾಜೇಂದ್ರ ತದನುಜ್ಞಾತುಮರ್ಹಸಿ ॥೨೧॥

ಹೇ ಸಜ್ಜನಮುಖ್ಯನೇ! ಇಂದು ನನಗೆ ನನಗಾಗಿ ಮಾಡಿಕೊಳ್ಳಬೇಕಾದ ಕರ್ತವ್ಯಗಳಿದೆ. ಹಾಗೆಯೇ ಗಾಂಧಾರಿಗೂ ಆತ್ಮೋದ್ಧಾರಕ್ಕಾಗಿ ನಡೆಸಬೇಕಾದ ಕರ್ತವ್ಯವಿದೆ. ಹೇ ರಾಜೇಂದ್ರನೇ! ಅದಕ್ಕಾಗಿ ನೀನು ಅನುಜ್ಞೆಯನ್ನು ಕೊಡುವವನಾಗು.

ತ್ವಂ ಹಿ ಧರ್ಮಭೃತಾಂ ಶ್ರೇಷ್ಠಃ ಸತತಂ ಧರ್ಮವತ್ಸಲಃ ।
ರಾಜಾ ಗುರುಃ ಪ್ರಾಣಭೃತಾಂ ತಸ್ಮಾದೇತದ್ ಬ್ರವೀಮ್ಯಹಮ್ ॥೨೨॥

ನೀನು ಧರ್ಮಾಚರಣೆಯನ್ನು ಮಾಡುವವರಲ್ಲಿ ಶ್ರೇಷ್ಠನಾಗಿದ್ದಿ. ಅಲ್ಲದೆ ಯಾವಾಗಲೂ ಧರ್ಮದ ಬಗ್ಗೆ ವಾತ್ಸಲ್ಯವನ್ನು ಹೊಂದಿರುವಿ. ಅಲ್ಲದೆ ರಾಜನಾದವನು

ಪ್ರಾಣಧರಿಸಿದ ಎಲ್ಲರಿಗೂ ಗುರುಸ್ಥಾನದಲ್ಲಿದ್ದಾನೆ. ಅದಕ್ಕಾಗಿ ನಿನ್ನಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅನುಜ್ಞಾತಸ್ತ್ವಯಾ ವೀರ ಸಂಶ್ರಯೇಯಂ ವನಾನ್ಯಹಮ್ ।
ಚೀರವಲ್ಕಲಭೃದ್ ರಾಜನ್ ಗಾಂಧಾರ್ಯಾ ಸಹಿತೋಽನಘ ॥೨೩॥

ಹೇ ವೀರರಾಜನೇ! ನಿನ್ನಿಂದ ಅನುಜ್ಞೆಯನ್ನು ಪಡೆದ ನಾನು ನಾರುಮಡಿಗಳನ್ನು ಧರಿಸಿ ಗಾಂಧಾರೀದೇವಿಯಿಂದ ಸಹಿತನಾಗಿ ಕಾಡನ್ನು ಆಶ್ರಯಿಸುತ್ತೇನೆ.

ತವಾಶಿಷಃ ಪ್ರಯುಂಜಾನೋ ಭವಿಷ್ಯಾಮಿ ವನೇಚರಃ ।
ಉಚಿತಂ ನಃ ಕುಲೇ ತಾತ ಸರ್ವೇಷಾಂ ಭರತರ್ಷಭ ॥೨೪॥

ಪುತ್ರೇಷ್ವೈಶ್ವರ್ಯಮಾಧಾಯ ವಯಸೋಽಂತೇ ವನಂ ನೃಪ ॥೨೫॥

ಹೇ ಶುದ್ಧನಾದ ಭರತರ್ಷಭನೇ! ನಾನು ನಿನಗೆ ಆಶೀರ್ವಾದವನ್ನು ಮಾಡುತ್ತಾ ಕಾಡಿನಲ್ಲಿ ಸಂಚರಿಸುವವನಾಗುತ್ತೇನೆ. ಮಗನೇ! ನಮ್ಮ ಕುಲದಲ್ಲಿ ಪುತ್ರರಲ್ಲಿ ಐಶ್ವರ್ಯವನ್ನರ್ಪಿಸಿ ಅಂತ್ಯವಯಸ್ಸಿನಲ್ಲಿ ವನವನ್ನು ಆಶ್ರಯಿಸುವುದು ಎಲ್ಲರಿಗೂ ಉಚಿತವೇ ತಾನೆ!

ತತ್ರಾಹಂ ವಾಯುಭಕ್ಷೋ ವಾ ನಿರಾಹಾರೋಽಪಿ ವಾ ವಸನ್ ।
ಪತ್ನ್ಯಾ ಸಹಾನಯಾ ವೀರ ಸಂಶ್ರಯೇಯಂ ವನಾನ್ಯಹಮ್ ।
ಪತ್ನ್ಯಾ ಸಹಾನಯಾ ವೀರ ಚರಿಷ್ಯಾಮಿ ತಪಃ ಪರಮ್ ॥೨೬॥

ಹೇ ರಾಜನೇ! ಆ ಕಾಡಿನಲ್ಲಿ ನಾನು ಕೇವಲ ವಾಯುವನ್ನೇ ಸ್ವೀಕರಿಸುತ್ತಾ ಅಥವಾ ನಿರಾಹಾರನಾಗಿ ವಾಸಮಾಡುತ್ತಾ ಈ ನನ್ನ ಪತ್ನಿಯೊಂದಿಗೆ ವನವನ್ನೇ ಆಶ್ರಯಿಸುತ್ತೇನೆ. ಹೇ ವೀರನೇ! ಈ ನನ್ನ ಪತ್ನಿಯೊಂದಿಗೆ ಅಲ್ಲಿ ಉತ್ತಮವಾದ ತಪಶ್ಚರ್ಯೆಯನ್ನು ನಡೆಸುತ್ತೇನೆ.

ತ್ವಂ ಚಾಪಿ ಫಲಭುಕ್ ತಾತ ತಪಸಾ ಪಾರ್ಥಿವೋ ಹ್ಯಸಿ ।
ಫಲಭಾಜೋ ಹಿ ರಾಜಾನಃ ಕಲ್ಯಾಣಸ್ಯೇತರಸ್ಯ ವಾ ॥೨೭॥

ಹೇ ಮಗನೇ! ಈ ನನ್ನ ತಪಸ್ಸಿನಿಂದ ನೀವೂ ಕೂಡ ಉತ್ತಮ ಫಲವನ್ನು ಪಡೆಯುವಿರಿ. ಏಕೆಂದರೆ ನೀನು ರಾಜನಾಗಿದ್ದಿ. ರಾಜ್ಯದಲ್ಲಿ ನಡೆಯುವ ಮಂಗಳ ಕಾರ್ಯಕ್ಕಾಗಲಿ ಅಥವಾ ಅಮಂಗಳಕಾರ್ಯಕ್ಕಾಗಲಿ ಫಲವನ್ನು ಪಡೆಯುವುದು ರಾಜರೇ ತಾನೆ!

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ವನವಾಸಪ್ರಾರ್ಥನಂ ನಾಮ ಪಂಚಮೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ಧೃತರಾಷ್ಟ್ರನ ವನಗಮನ ನಿರ್ಧಾರದಿಂದ ದುಃಖಿತನಾದ ಯುಧಿಷ್ಠಿರನು ಅದನ್ನು ತಡೆಯಲು ಪ್ರಯತ್ನ.

ಯುಧಿಷ್ಠಿರಃ

ನ ಮಾಂ ಪ್ರೀಣಯತೇ ರಾಜ್ಯಂ ತ್ವಯ್ಯೇವಂ ದುಃಖಿತೇ ನೃಪ ।
ಧಿಙ್ಮಾಮಸ್ತು ಸುದುರ್ಬುದ್ಧಿಂ ರಾಜ್ಯಲುಬ್ಧಂ ಪ್ರಮಾದಿನಮ್ ॥೧॥

ಯುಧಿಷ್ಠಿರ– ಹೇ ರಾಜನೇ! ನೀನು ಈ ರೀತಿಯಾಗಿ ದುಃಖಿತನಾಗಿದ್ದರೆ ಈ ರಾಜ್ಯವು ನನ್ನನ್ನು ಸಂತೋಷಗೊಳಿಸುವುದಿಲ್ಲ. ದುರ್ಬುದ್ಧಿಯುಳ್ಳ, ರಾಜ್ಯದಲ್ಲೇ ಆಸೆಯುಳ್ಳ, ಪ್ರಮಾದವನ್ನು ನಡೆಸುತ್ತಿರುವ ನನಗೆ ಧಿಕ್ಕಾರವಿರಲಿ.

ವನೇ ಭವಂತಂ ದುಃಖಾರ್ತಮುಪವಾಸಕೃಶಂ ನೃಪ ।
ಯತಾಹಾರಂ ಭೂಮಿಶಯಂ ನಾವಿಂದಂ ಭ್ರಾತೃಭಿಃ ಸಹ ॥೨॥

ಹೇ ರಾಜನೇ! ನಿವಾಸದಲ್ಲಿ ವಾಸವಾಗಿದ್ದರೂ ದುಃಖದಿಂದ ಕಷ್ಟಪಡುತ್ತಿರುವ, ಉಪವಾಸದಿಂದ ಕೃಶನಾಗಿರುವ, ಆಹಾರದಲ್ಲಿ ನಿಯಮವುಳ್ಳ, ನೆಲದ ಮೇಲೆ ಮಲಗುತ್ತಿರುವ ನಿನ್ನನ್ನು ಸಹೋದರರೂ ಕೂಡಿದಂತೆ ನಾನು ಗಮನಿಸಲಿಲ್ಲ.

ಅಹೋಽಸ್ಮಿ ವಂಚಿತೋ ಮೂಢೋ ಭವತಾ ಗೂಢಬುದ್ಧಿನಾ ।
ವಿಶ್ವಾಸಯಿತ್ವಾ ಪೂರ್ವಂ ಮಾಂ ಯದಿ ತ್ವಮಿದಮುಕ್ತವಾನ್ ॥೩॥

ಗೂಢಬುದ್ಧಿಯುಳ್ಳನಿನ್ನಿಂದ ಮೂಢನಾದ ನಾನು ವಂಚಿತನಾಗಿದ್ದೇನೆ. ಹಾ ಕಷ್ಟವೇ! ಮೊದಲು ನಾನು ವಿಶ್ವಾಸಗೊಳ್ಳುವಂತೆ ಮಾಡಿ ಈಗ ನೀನೇನು ಹೇಳುತ್ತಿರುವೆಯೋ ಇದು ವಂಚನೆಯೇ ಸರಿ.

ಕಿಂ ಮೇ ರಾಜ್ಯೇನ ಭೋಗೈರ್ವಾ ಕಿಂ ಯಜ್ಞೈಃ ಕಿಂ ಫಲೇನ ವಾ ।
ಯಸ್ಯ ಮೇ ತ್ವಂ ಮಹೀಪಾಲ ದುಃಖಾನ್ಯೇವಮವಾಪ್ತವಾನ್ ॥೪॥

ಹೇ ಮಹೀಪಾಲನೇ! ಯಾವ ಈ ನನ್ನ ರಾಜ್ಯದಲ್ಲಿ ನೀನು ಈ ರೀತಿ ದುಃಖಗೊಂಡಿರುವೆಯೋ ಅಂತಹ ರಾಜ್ಯದಿಂದಾಗಲಿ, ಭೋಗಗಳಿಂದಾಗಲಿ ಏನು ಉಪಯೋಗ? ಅಥವಾ ನಾನು ಮಾಡುವ ಯಜ್ಞದಿಂದಾಗಲಿ, ಆ ಯಜ್ಞದಿಂದ ಸಿಗುವ ಫಲದಿಂದಾಗಲಿ ಏನು ಉಪಯೋಗ?

ಪೀಡಿತಂ ಚಾಪಿ ಜಾನಾಮಿ ರಾಜ್ಯಮಾತ್ಮಾನಮೇವ ಚ ।
ಅನೇನ ವಚಸಾ ತೇಽದ್ಯ ದುಃಖಿತೋಽಸ್ಮಿ ಜನೇಶ್ವರ ॥೫॥

ಹೇ ಜನಾಧಿಪತಿಯೇ, ನಿನ್ನ ಈ ಮಾತಿನಿಂದ ಇಂದು ನಾನು ಬಹಳ ದುಃಖಿತನಾಗಿದ್ದೇನೆ. ಜೊತೆಗೆ ರಾಜ್ಯವನ್ನು, ನನ್ನನ್ನೂ ಪೀಡೆಗೊಳಗಾದಂತೆ ತಿಳಿಯುತ್ತಿದ್ದೇನೆ.

ಭವಾನ್ ಪಿತಾ ಭವಾನ್ ಮಾತಾ ಭವಾನ್ ನಃ ಪರಮೋ ಗುರುಃ ।
ಭವತಾ ವಿಪ್ರಹೀಣಾ ಹಿ ಕ್ವ ನು ತಿಷ್ಠಾಮಹೇ ವಯಮ್ ॥೬॥

ನಮಗೆ ನೀನೇ ತಂದೆ, ನೀನೇ ತಾಯಿ, ನೀನೇ ಪರಮಗುರುವೂ ಆಗಿರುವೆ. ನೀನೇ ಈ ರಾಜ್ಯದಲ್ಲಿ ಇಲ್ಲವಾದರೆ ನಾವು ಹೇಗೆ ಇರಬಲ್ಲೆವು?

ಔರಸೋ ಭವತಃ ಪುತ್ರೋ ಯುಯುತ್ಸುಸ್ತರುಣೋಽಪಿ ಸನ್ ।
ಅಸ್ತು ರಾಜಾ ಮಹಾರಾಜ ಯಂ ಚಾನ್ಯಂ ಮನ್ಯತೇ ಭವಾನ್ ॥೭॥

ನಿನ್ನ ಸ್ವಂತ ಮಗನಾದ, ಯುವಕನೂ ಆಗಿರುವ ಯುಯುತ್ಸುವು ರಾಜನಾಗಲಿ.

ಹೇ ಮಹಾರಾಜನೇ! ಅಥವಾ ಬೇರೆ ಯಾವಾತನನ್ನು ನೀನು ಒಪ್ಪಿಕೊಳ್ಳುವೆಯೋ ಅವನೇ ರಾಜನಾಗಲಿ.

ಅಹಂ ವನಂ ಗಮಿಷ್ಯಾಮಿ ಭವಾನ್ ರಾಜ್ಯಂ ಪ್ರಶಾಸ್ತಿ ದಮ್ ।
ನ ಮಾಮಯಶಸಾ ದಗ್ಧಂ ಭೂಯಸ್ತ್ವಂ ದಗ್ಧುಮರ್ಹಸಿ ॥೮॥

ನಾನು ಕಾಡಿಗೆ ಹೋಗುತ್ತೇನೆ. ಈ ರಾಜ್ಯವನ್ನು ನೀನೇ ನಿರ್ದೇಶಿಸು. ಮೊದಲೇ ಅಪಕೀರ್ತಿಯಿಂದ ದಗ್ಧನಾದ ನನ್ನನ್ನು ಮತ್ತೆ ನೀನು ಸುಡುವುದು ಯೋಗ್ಯವಲ್ಲ.

ನಾಹಂ ರಾಜಾ ಭವಾನ್ ರಾಜಾ ಭವತಾ ಪರವಾನಹಮ್ ।
ಕಥಂ ಗುರುಂ ಮಹಾರಾಜಮ್ ಅನುಜ್ಞಾತುಮಿಹೋತ್ಸಹೇ ॥೯॥

ಈ ರಾಜ್ಯಕ್ಕೆ ನಾನು ರಾಜನಲ್ಲ. ನೀನೇ ರಾಜ. ನಾನು ನಿನ್ನ ಸೇವಕನಂತೆ ಇರುವೆ. ಧರ್ಮಬೋಧಕನಾದ ಗುರುವಿನಂತೆ ಇರುವ ಮಹಾರಾಜನಾದ ನಿನಗೆ ಕಾಡಿಗೆ ಹೊರಡಲು ಒಪ್ಪಿಗೆ ಕೊಡುವುದರಲ್ಲಿ ನನಗೆ ಹೇಗೆ ಉತ್ಸಾಹ ಬಂದೀತು?

ನ ಮನ್ಯುರಿಹ ನಃ ಕಶ್ಚಿತ್ ಸುಯೋಧನಕೃತೇ ನೃಪ ।
ಭವಿತವ್ಯಂ ತಥಾ ತದ್ಧಿ ವಯಂ ತೇ ಚೈವ ಮೋಹಿತಾಃ ॥೧೦॥

ಹೇ ನೃಪನೇ! ಸುಯೋಧನನ ವಿಷಯದಲ್ಲಿ ನಮಗೆ ಯಾವ ಕೋಪವೂ ಇಲ್ಲ. ಅದು ಹಾಗೆಯೇ ಆಗಬೇಕಿತ್ತು. ನಾವು ಹಾಗೂ ಅವರು ಎರಡು ಪಕ್ಷದವರೂ ಮೋಹಕ್ಕೊಳಗಾಗಿದ್ದೆವು.

ವಯಂ ಹಿ ಪುತ್ರಾ ಭವತೋ ಯಥಾ ದುರ್ಯೋಧನಾದಯಃ ।
ಗಾಂಧಾರೀ ಚೈವ ಕುಂತೀ ಚ ನಿರ್ವಿಶೇಷೇ ಮತೇ ಮಮ ॥೧೧॥

ಹೇಗೆ ದುರ್ಯೋಧನಾದಿಗಳು ನಿನಗೆ ಮಕ್ಕಳೋ, ಹಾಗೆ ನಾವೂ ನಿನಗೆ ಮಕ್ಕಳೇ ತಾನೆ. ಗಾಂಧಾರೀ ದೇವಿಯಾಗಲಿ, ಕುಂತಿಯಾಗಲಿ ನನಗೆ ಇಬ್ಬರೂ ಯಾವುದೇ ವ್ಯತ್ಯಾಸವಿಲ್ಲದೆ ತಾಯಂದಿರೇ ಆಗಿದ್ದಾರೆ.

ಯದ್ಯೇವಮಪಿ ಮಾಂ ರಾಜನ್ ಪರಿತ್ಯಜ್ಯ ಗಮಿಷ್ಯಸಿ ।
ಪೃಷ್ಠತಸ್ತ್ವನುಯಾಸ್ಯಾಮಿ ಸತ್ಯೇನಾತ್ಮಾನಮಾಲಭೇ ॥೧೨॥

ಹೇ ರಾಜನೇ! ಹೀಗಿದ್ದರೂ ನನ್ನನ್ನು ಬಿಟ್ಟು ನೀನು ಕಾಡಿಗೆ ಹೋಗುವುದಾದರೆ ನಿನ್ನ ಹಿಂದೆ ನಾನೂ ಅನುಸರಿಸಿಕೊಂಡು ಬರುತ್ತೇನೆ. ಹೀಗೆ ಮಾಡುವ ಮೂಲಕ ನನ್ನ ಸತ್ಯವನ್ನು ಉಳಿಸಿಕೊಳ್ಳುತ್ತೇನೆ.

ಇಯಂ ಹಿ ವಸುಸಂಪೂರ್ಣಾ ಮಹೀ ಸಾಗರಮೇಖಲಾ ।
ಭವತಾ ವಿಪ್ರಹೀಣಸ್ಯ ನ ಮೇ ಪ್ರೀತಿಕರೀ ಭವೇತ್ ॥೧೩॥

ಸಂಪತ್ತಿನಿಂದ ಪೂರ್ಣವಾದ ಸಾಗರವೇ ಗಡಿಯಾಗಿ ಉಳ್ಳ ಈ ಭೂಮಿಯು ನಿನ್ನಿಂದ ಹೀನವಾಗಿದ್ದರೆ ನನಗೆ ಸಂತೋಷವನ್ನು ಉಂಟುಮಾಡಲಾರದು.

ಭವದೀಯಮಿದಂ ಸರ್ವಂ ಶಿರಸಾ ತ್ವಾಂ ಪ್ರಸಾದಯೇ ।
ತ್ವದಧೀನಾಃ ಸ್ಮ ರಾಜೇಂದ್ರ ವ್ಯೇತು ತೇ ಮಾನಸೋ ಜ್ವರಃ ॥೧೪॥

ಹೇ ರಾಜೇಂದ್ರನೇ! ಈ ಎಲ್ಲವೂ ನಿನ್ನದೆ. ತಲೆಬಾಗಿ ನಿನ್ನನ್ನು ಕೇಳಿಕೊಳ್ಳುತ್ತಿದ್ದೇನೆ. ನಾವೆಲ್ಲರೂ ನಿನ್ನ ಅಧೀನರಾಗಿದ್ದೇವೆ. ನಿನ್ನ ಈ ಮನಸ್ಸಿನ ಜ್ವರವು ಕಳೆದು ಹೋಗಲಿ.

ಭವಿತವ್ಯಮನುಪ್ರಾಪ್ತಂ ಮನ್ಯೇ ತ್ವೇತಜ್ಜನಾಧಿಪ ।
ದಿಷ್ಟ್ಯಾ ಶುಶ್ರೂಷಮಾಣಸ್ತ್ವಾಂ ಮೋಕ್ಷ್ಯಾಮಿ ಮನಸೋ ಜ್ವರಮ್ ॥

ಹೇ ಜನಾಧಿಪನೇ! ಈ ಪ್ರಸಂಗದ ಮೂಲಕ ಮುಂದೆ ನಡೆಯಬೇಕಾದ ವಿಷಯವು ನನಗೆ ತಿಳಿಯಿತೆಂದು ಭಾವಿಸುತ್ತೇನೆ. ಸಂತೋಷದಿಂದ ನಿನ್ನ ಸೇವೆಗೈಯ್ಯುತ್ತಾ ನಿನ್ನ ಮನಸ್ಸಿನ ವೇದನೆಯನ್ನು ಹೋಗಲಾಡಿಸುತ್ತೇನೆ.

ಧೃತರಾಷ್ಟ್ರಃ

ತಾಪಸ್ಯೇ ಮೇ ಮನಸ್ತಾತ ವರ್ತತೇ ಕುರುನಂದನ ।
ಉಚಿತಂ ಹಿ ಕುಲೇಽಸ್ಮಾಕಮ್ ಅರಣ್ಯಗಮನಂ ಪ್ರಭೋ ॥೧೬॥

ಧೃತರಾಷ್ಟ್ರ- ಹೇ ಮಗು, ಕುರುನಂದನನೇ! ನನ್ನ ಮನಸ್ಸು ತಪಸ್ಸಿನಿಂದ ಲಭಿಸುವ ಪುಣ್ಯದಲ್ಲಿ ಮಗ್ನವಾಗಿದೆ. ನಮ್ಮ ಕುಲದಲ್ಲಿ ವಯಸ್ಸಾದ ನಂತರ ಅರಣ್ಯಗಮನವು ಉಚಿತವೇ ತಾನೆ.

ಚಿರಮಸ್ಮ್ಯುಷಿತಃ ಪುತ್ರ ಚಿರಂ ಶುಶ್ರೂಷಿತಸ್ತ್ವಯಾ ।
ವೃದ್ಧಂ ಮಾಮಭ್ಯನುಜ್ಞಾತುಂ ರಾಜನ್ನರ್ಹಸಿ ಮಾ ಚಿರಮ್ ॥೧೭॥

ಹೇ ಮಗನೇ! ಬಹಳ ಕಾಲದಿಂದ ಇಲ್ಲೇ ವಾಸವಾಗಿದ್ದೇನೆ. ಅಲ್ಲದೆ ನಿನ್ನಿಂದ ಸೇವೆಗೈಯ್ಯಲ್ಪಟ್ಟಿದ್ದೇನೆ. ಹೇ ರಾಜನೇ! ತಡಮಾಡದೆ ವೃದ್ಧನಾದ ನನಗೆ ಕಾಡಿಗೆ ಹೊರಡಲು ಅನುಜ್ಞೆ ಕೊಡು.

ವೈಶಂಪಾಯನಃ

ಏವಮುಕ್ತ್ವಾ ವೇಪಮಾನಂ ಪಾಂಡುಪುತ್ರಂ ಕೃತಾಂಜಲಿಮ್ ।
ಉವಾಚ ವಿದುರಂ ರಾಜಾ ಧೃತರಾಷ್ಟ್ರೋಽಂಬಿಕಾಸುತಃ ॥೧೮॥

ವೈಶಂಪಾಯನ– ಕೈಮುಗಿದು ನಿಂತಿರುವ, ನಡುಗುತ್ತಿರುವ ಪಾಂಡುಪುತ್ರನಾದ ಯುಧಿಷ್ಠಿರನನ್ನು ಕುರಿತು ಇಷ್ಟನ್ನು ಹೇಳಿ ಅಂಬಿಕೆಯ ಮಗನಾದ ಧೃತರಾಷ್ಟ್ರ ರಾಜನು ವಿದುರನನ್ನು ನೋಡುತ್ತಾ ಮುಂದೆ ಹೇಳುವಂತೆ ಮಾತನಾಡಿದನು.

ಧೃತರಾಷ್ಟ್ರಃ

ಸಂಜಯಂ ಚ ಮಹಾಮಾತ್ಯಂ ಕೃಪಂ ಚಾಪಿ ಮಹಾರಥಮ್ ।
ಅನುನೇತುಮಿಹೇಚ್ಛಾಮಿ ಭವದ್ಭಿಃ ಪೃಥಿವೀಪತಿಮ್ ॥೧೯॥

ಧೃತರಾಷ್ಟ್ರ– ಮಂತ್ರಿಪ್ರಧಾನನಾದ ಸಂಜಯನನ್ನು, ಜೊತೆಗೆ ಮಹಾರಥಿಯಾದ ಕೃಪನನ್ನೂ ಕೂಡಿಕೊಂಡು ನೀವೆಲ್ಲರೂ ಪೃಥಿವೀಪತಿಯಾದ ಯುಧಿಷ್ಠಿರನನ್ನು ಈ ವಿಷಯದಲ್ಲಿ ಒಪ್ಪಿಸಬೇಕೆಂದು ಬಯಸುತ್ತಿದ್ದೇನೆ.

ಮ್ಲಾಯತೇ ಹಿ ಮನಸ್ತಾತ ಮುಖಂ ಚ ಪರಿಶುಷ್ಯತಿ ।
ವಯಸಾ ಚ ಪ್ರಕೃಷ್ಟೇನ ವ್ಯಾಯಾಮೇನಾಪ್ಯನೇನ ಚ ॥೨೦॥

ಮಗು ಯುಧಿಷ್ಠಿರನೇ! ವೃದ್ಧಾಪ್ಯದ ಈ ವಯಸ್ಸಿನಿಂದ ಹಾಗೂ ಈ ನನ್ನ ಉಪವಾಸಾದಿ ಶ್ರಮದಿಂದ ಮನಸ್ಸು ಬಾಡಿ ಹೋಗಿದೆ, ಬಾಯಿ ಒಣಗುತ್ತಿದೆ.

ವೈಶಂಪಾಯನಃ

ಇತ್ಯುಕ್ತ್ವಾ ಸ ತು ಧರ್ಮಾತ್ಮಾ ವೃದ್ಧೋ ರಾಜಾ ಕುರೂದ್ವಹಃ ।
ಗಾಂಧಾರೀಂ ಶಿಶ್ರಿಯೇ ಧೀಮಾನ್ ಸಹಸೈವ ಗತಾಸುವತ್ ॥೨೧॥

ವೈಶಂಪಾಯನ– ಇಷ್ಟು ಹೇಳುತ್ತಾ ಧರ್ಮಾತ್ಮನಾದ, ಕುರುವಂಶಜನಾದ, ವೃದ್ಧನಾದ ಆ ರಾಜನು ಕೂಡಲೇ ಧೀಮಂತನಾಗಿದ್ದರೂ ಪ್ರಾಣಹೋದವರಂತೆ ಗಾಂಧಾರೀ ದೇವಿಯನ್ನು ಆಧರಿಸಿ ನಿಂತನು.

ತಂ ತು ದೃಷ್ಟ್ವಾ ತಥಾऽऽಸೀನಂ ನಿಶ್ಚೇಷ್ಟಂ ಕುರುಪಾರ್ಥಿವಮ್ ।
ಆರ್ತಿಂ ರಾಜಾ ಯಯೌ ತೂರ್ಣಂ ಕೌಂತೇಯಃ ಪರವೀರಹಾ ॥೨೨॥

ಹಾಗೆ ನಿಶ್ಚೇಷ್ಟನಾಗಿ ಇದ್ದ ಕುರುರಾಜನನ್ನು ನೋಡಿ ಶತ್ರುಸಂಹಾರಕನಾದ, ಕುಂತೀಪುತ್ರನಾದ ಯುಧಿಷ್ಠಿರ ರಾಜನು ಬಹಳ ದುಃಖಗೊಂಡನು.

ಯುಧಿಷ್ಠಿರಃ

ಯಸ್ಯ ನಾಗಸಹಸ್ರೇಣ ದಶಸಂಖ್ಯೇನ ವೈ ಬಲಮ್ ।
ಸೋऽಯಂ ನಾರೀಂ ಸಮಾಶ್ರಿತ್ಯ ಶೇತೇ ರಾಜಾ ಗತಾಸುವತ್ ॥೨೩॥

ಯುಧಿಷ್ಠಿರ– ಯಾವನಿಗೆ ಹತ್ತುಸಾವಿರ ಆನೆಗಳಷ್ಟು ಬಲವಿದೆಯೋ ಅಂತಹ ಈ ರಾಜನು ಪ್ರಾಣವಿಲ್ಲದವನಂತೆ ಸ್ತ್ರೀಯನ್ನು ಆಧರಿಸಿಕೊಂಡು ಮಲಗಿದ್ದಾನೆ.

ಆಯಸೀ ಪ್ರತಿಮಾ ಯೇನ ಭೀಮಸೇನಸ್ಯ ವೈ ಪುರಾ ।
ಚೂರ್ಣೇಕೃತಾ ಬಲವತಾ ಸ ಬಲಾರ್ಧೇऽಶ್ರಯತ್ ಸ್ತ್ರಿಯಮ್ ॥೨೪॥

ಈ ಹಿಂದೆ ಬಲಿಷ್ಠನಾದ ಯಾವನಿಂದ ಭೀಮಸೇನನ ಕಬ್ಬಿಣದ ಪ್ರತಿಮೆಯು ಪುಡಿಪುಡಿಯಾಗಿದೆಯೋ ಅಂತಹ ಧೃತರಾಷ್ಟ್ರನು ಬಲಕ್ಕೋಸ್ಕರ ಸ್ತ್ರೀಯನ್ನು ಆಶ್ರಯಿಸಿದ್ದಾನೆ.

ಧಿಗಸ್ತು ಮಾಮಧರ್ಮಜ್ಞಂ ಧಿಗ್ ಬುದ್ಧಿಂ ಧಿಗ್ ಬಹುಶ್ರುತಮ್ ।
ಯತ್ಕೃತೇ ಪೃಥಿವೀಪಾಲಃ ಶೇತೇऽಯಮತಥೋಚಿತಃ ॥೨೫॥

ಯಾವನಿಂದಾಗಿ ರಾಜನಾದ ಈ ಧೃತರಾಷ್ಟ್ರನು ಈ ರೀತಿ ಕುಸಿದು ಬೀಳುವುದು ಉಚಿತವಲ್ಲದಿದ್ದರೂ ಮಲಗಿದ್ದಾನೋ ಅಂತಹ ಧರ್ಮವನ್ನು ತಿಳಿಯದ ನನಗೆ ಧಿಕ್ಕಾರವಿರಲಿ! ನನ್ನ ಬುದ್ಧಿಗೂ ಧಿಕ್ಕಾರವಿರಲಿ! ನಾನು ಕೇಳಿಸಿಕೊಂಡ ವಿದ್ಯೆಗೂ ಧಿಕ್ಕಾರವಿರಲಿ!

ಅಹಮಪ್ಯುಪವತ್ಸ್ಯಾಮಿ ಯಥೈವಾಯಂ ಗುರುರ್ಮಮ ।
ಯದಿ ರಾಜಾ ನ ಭುಂಕ್ತೇಯಂ ಗಾಂಧಾರೀ ಚ ಯಶಸ್ವಿನೀ ॥೨೬॥

ಒಂದು ವೇಳೆ ಈ ರಾಜನಾದ ಧೃತರಾಷ್ಟ್ರನು, ಯಶಸ್ವಿನಿಯಾದ ಗಾಂಧಾರೀ ದೇವಿಯು ಉಣ್ಣುವುದಿಲ್ಲವಾದರೆ ನನಗೆ ಗುರುವಾದ ಇವನು ಹೇಗಿರುವನೋ ಹಾಗೆಯೇ ನಾನು ಉಪವಾಸ ಮಾಡುವೆ.

ವೈಶಂಪಾಯನಃ

ತತೋಽಸ್ಯ ಪಾಣಿನಾ ರಾಜಾ ಜಲಶೀತೇನ ಪಾಂಡವಃ ।
ಉರೋ ಮುಖಂ ಚೈವ ಶನೈಃ ಪರ್ಯಮಾರ್ಜತ ಧರ್ಮವಿತ್ ॥೨೭॥

ವೈಶಂಪಾಯನ– ಅನಂತರ ಧರ್ಮಜ್ಞನಾದ ರಾಜನಾದ ಪಾಂಡವನು ನೀರಿನಂತೆ ತಂಪಾದ ತನ್ನ ಕೈಯಿಂದ ಈ ಧೃತರಾಷ್ಟ್ರನ ಎದೆ ಹಾಗೂ ಮುಖಗಳನ್ನು ನಿಧಾನವಾಗಿ ನೇವರಿಸಿದನು.

ತೇನ ರತ್ನೌಷಧಿಮತಾ ಪುಣ್ಯೇನ ಸುಖಗಂಧಿನಾ ।
ಪಾಣಿಸ್ಪರ್ಶೇನ ರಾಜ್ಞಸ್ತು ತಥಾ ಸುಖಮವಾಪ ಹ ॥೨೮॥

ರತ್ನ ಹಾಗೂ ಔಷಧಿಗಳಿಂದ ಕೂಡಿದ, ಪುಣ್ಯಮಯವಾದ, ಮಧುರವಾದ ಸುವಾಸನೆಯುಳ್ಳ ರಾಜನ ಆ ಕೈಸ್ಪರ್ಶದಿಂದ ಧೃತರಾಷ್ಟ್ರನು ಹಾಗೆಯೇ ಸುಖವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಯುಧಿಷ್ಠಿರಧೃತರಾಷ್ಟ್ರಸಂವಾದೋ ನಾಮ ಷಷ್ಠೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ಧರ್ಮಜನು ಧೃತರಾಷ್ಟ್ರನನ್ನು ಆಲಂಗಿಸಿ ಸಮಾಧಾನಪಡಿಸಿದುದು. ಧೃತರಾಷ್ಟ್ರನ ವನಗಮನದ ನಿರ್ಧಾರವನ್ನು ಧರ್ಮಜನು ತಡೆಯಲು ಯತ್ನಿಸಿದಾಗ ವೇದವ್ಯಾಸರ ಆಗಮನ.

ಧೃತರಾಷ್ಟ್ರಃ

ಸ್ಪೃಶ ಮಾಂ ಪಾಣಿನಾ ಭೂಯಃ ಪರಿಷ್ವಜ ಚ ಪಾಂಡವ ।
ಜೀವಾಮೀವ ಹಿ ಸಂಸ್ಪರ್ಶಾತ್ ತವ ರಾಜೀವಲೋಚನ ॥೧॥

ಧೃತರಾಷ್ಟ್ರ– ಹೇ ಕಮಲದಂತೆ ಕಣ್ಣುಳ್ಳ ಪಾಂಡವನೇ, ಹಾಗೆಯೇ ನನ್ನನ್ನು ನೇವರಿಸು. ಜೊತೆಗೆ ಮತ್ತೆ ಮತ್ತೆ ನನ್ನನ್ನು ಆಲಿಂಗಿಸು. ನಿನ್ನ ಈ ಸ್ಪರ್ಶದಿಂದ ನಾನು ಬದುಕುವವನಂತೆ ಕಾಣುತ್ತಿದ್ದೇನೆ.

ಮೂರ್ಧಾನಂ ಚ ತವಾಘ್ರಾತುಮಿಚ್ಛಾಮಿ ಮನುಜಾಧಿಪ ।
ಪಾಣಿಭ್ಯಾಂ ಚ ಪರಿಸ್ಪೃಷ್ಟುಂ ಪ್ರಾಣೇನ ಮಮ ಚಾತ್ಮನಿ ॥೨॥

ಹೇ ಮನುಜಾಧಿಪನೇ, ನಿನ್ನ ನೆತ್ತಿಯನ್ನು ಆಘ್ರಾಣಿಸಲು ಹಾಗೂ ನಿನ್ನನ್ನು ಕೈಯಿಂದ ಮುಟ್ಟಲು ಬಯಸುತ್ತೇನೆ. ಇದರಿಂದ ನನ್ನಲ್ಲಿ ಪ್ರಾಣವನ್ನು ಉಳಿಸಿಕೊಳ್ಳುತ್ತೇನೆ.

ಅಷ್ಟಮೋ ಹ್ಯದ್ಯ ಕಾಲೋಽಯಮಾಹಾರಸ್ಯ ಕೃತಸ್ಯ ಮೇ ।
ಯೇನಾಹಂ ಕುರುಶಾರ್ದೂಲ ನ ಶಕ್ನೋಮಿ ವಿಚೇಷ್ಟಿತುಮ್ ॥೩॥

ಹೇ ಕುರುಶಾರ್ದೂಲನೇ, ನಾನು ಆಹಾರವನ್ನು ಸ್ವೀಕರಿಸಿ ಎಂಟು ಹೊತ್ತು ಕಳೆಯಿತು. ಹಾಗಾಗಿ ಅಲುಗಾಡಲೂ ಶಕ್ತಿಯಿಲ್ಲದವನಾಗಿದ್ದೇನೆ.

ವ್ಯಾಯಾಮಶ್ಚಾಯಮತ್ಯಂತಂ ಕೃತಸ್ತಾ ವ್ವಮಭಿಯಾಚತಾ ।
ತತೋ ಗ್ಲಾನಮನಾ ರಾಜನ್ ನಷ್ಟಸಂಜ್ಞ ಇವಾಭವಮ್ ॥೪॥

ನಿನ್ನ ಅನುಜ್ಞೆಯನ್ನು ಯಾಚಿಸುವ ಈ ಕ್ರಿಯೆಯು ಅತ್ಯಂತ ಶ್ರಮದಾಯಕವಾಗಿದೆ. ಅಲ್ಲದೆ ನೀನು ಒಪ್ಪುತ್ತಿಲ್ಲವೆಂಬ ಮನೋವೇದನೆಯಿಂದ ಮೂರ್ಛಿತನಾದೇನು!

ತವಾಮೃತಸುಖಸ್ಪರ್ಶಂ ಹಸ್ತಸ್ಪರ್ಶಮಿಮಂ ಪ್ರಭೋ ।
ಲಬ್ಧ್ವಾ ಸಂಜೀವಿತೋಽಸ್ಮೀತಿ ಮನ್ಯೇ ಕುರುಕುಲೋದ್ವಹ ॥೫॥

ಹೇ ಪ್ರಭುವೇ, ಕುರುಕುಲೋದ್ವಹನೇ, ಅಮೃತದಂತೆ ಸುಖಮಯವಾದ ಸ್ಪರ್ಶವನ್ನು ನೀಡುವ ಈ ನಿನ್ನ ಹಸ್ತಸ್ಪರ್ಶವನ್ನು ಪಡೆದು ನಾನು ಬದುಕಿಸಲ್ಪಟ್ಟೆನೆಂದು ತಿಳಿಯುತ್ತಿದ್ದೇನೆ.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯಃ ಪಿತ್ರಾ ಜ್ಯೇಷ್ಠೇನ ಭಾರತ ।
ಪಸ್ಪರ್ಶ ಸರ್ವಗಾತ್ರೇಷು ಸ್ನೇಹಾರ್ದ್ರಂ ತಂ ಶನೈಸ್ತಥಾ ॥೬॥

ವೈಶಂಪಾಯನ– ಹೇ ಭರತವಂಶದಲ್ಲಿ ಬಂದ ಜನಮೇಜಯನೇ, ದೊಡ್ಡಪ್ಪನಿಂದ ಈ ರೀತಿ ಹೇಳಲ್ಪಟ್ಟ ಯುಧಿಷ್ಠಿರನು ಆ ಧೃತರಾಷ್ಟ್ರನನ್ನು ನಿಧಾನವಾಗಿ ಸ್ನೇಹಪೂರಿತನಾಗಿ ಸರ್ವಾಂಗಗಳಲ್ಲಿಯೂ ಸ್ಪರ್ಶಿಸಿದನು.

ಉಪಲಭ್ಯ ತತಃ ಪ್ರಾಣಾನ್ ಧೃತರಾಷ್ಟ್ರೋ ಮಹೀಪತಿಃ ।
ಬಾಹುಭ್ಯಾಂ ಸಂಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ಪಾಂಡವಮ್ ॥೭॥

ಅನಂತರ ರಾಜನಾದ ಧೃತರಾಷ್ಟ್ರನು ಬಲವನ್ನು ಒಗ್ಗೂಡಿಸಿಕೊಂಡು ಯುಧಿಷ್ಠಿರನನ್ನು ಬಾಹುಗಳಿಂದ ಆಲಿಂಗಿಸಿ ಶಿರಸ್ಸನ್ನು ಆಘ್ರಾಣಿಸಿದನು.

ವಿದುರಾದಯಶ್ಚ ತೇ ಸರ್ವೇ ರುರುದುರ್ದುಃಖಿತಾ ಭೃಶಮ್ ।
ಅತಿದುಃಖಾತ್ತು ರಾಜಾನಂ ನೋಚುಃ ಕಿಂಚನ ಪಾಂಡವಾಃ ॥೮॥

ವಿದುರನೇ ಮೊದಲಾದ ಅಲ್ಲಿರುವ ಎಲ್ಲರೂ ಬಹಳ ದುಃಖಗೊಂಡವರಾಗಿ ಅಳುತ್ತಾ ನಿಂತರು. ಪಾಂಡವರಾದರೂ ಬಹಳವಾದ ದುಃಖದಿಂದ ರಾಜನನ್ನು ಕುರಿತು ಯಾವ ಮಾತನ್ನೂ ಆಡಲಿಲ್ಲ.

ಗಾಂಧಾರೀ ತ್ವೇವ ಧರ್ಮಜ್ಞಾ ಮನಸೋದ್ವಹತೀ ತದಾ ।
ದುಃಖಾನ್ಯವಾರಯದ್ ರಾಜನ್ ಮೈವಮಿತ್ಯೇವ ಚಾಬ್ರವೀತ್ ॥೯॥

ಹೇ ರಾಜನೇ! ಆಗ ಧರ್ಮಜ್ಞಳಾದ ಗಾಂಧಾರೀ ದೇವಿಯಾದರೂ ಮನಸ್ಸಿನಲ್ಲಿ ದುಃಖವುಳ್ಳವಳಾದರೂ ಆ ದುಃಖವನ್ನು ಕಳೆದುಕೊಂಡು 'ಈ ರೀತಿ ಮಾಡದಿರಿ' ಎಂದಷ್ಟೇ ಹೇಳಿದಳು.

ಇತರಾಸ್ತು ಸ್ತ್ರಿಯಃ ಸರ್ವಾಃ ಕುಂತ್ಯಾ ಸಹ ಸುದುಃಖಿತಾಃ ।
ನೇತ್ರೈಸ್ತಾಃ ಸಾಸ್ರವಿಕ್ಲೇದೈಃ ಪರಿವಾರ್ಯ ಸ್ಥಿತಾ ಭವನ್ ॥೧೦॥

ಕುಂತಿಯೊಂದಿಗೆ ಅಲ್ಲಿರುವ ಬೇರೆ ಎಲ್ಲ ಸ್ತ್ರೀಯರೂ ಕಣ್ಣೀರಿನಿಂದ ಒದ್ದೆಯಾದ ಕಣ್ಣುಗಳಿಂದ ಕೂಡಿಕೊಂಡು ತುಂಬಾ ದುಃಖಗೊಂಡವರಾಗಿ ಮುಖವನ್ನು ಮುಚ್ಚಿಕೊಂಡು ನಿಂತರು.

ತದಾಽಬ್ರವೀತ್ ಪುನರ್ವಾಕ್ಯಂ ಧೃತರಾಷ್ಟ್ರೋ ಯುಧಿಷ್ಠಿರಮ್ ॥೧೧॥

ಆಗ ಧೃತರಾಷ್ಟ್ರನು ಯುಧಿಷ್ಠಿರನನ್ನು ಕುರಿತು ಮತ್ತೆ ಈ ಮಾತನ್ನು ಹೇಳಿದನು.

ಧೃತರಾಷ್ಟ್ರಃ

ಅನುಜಾನೀಹಿ ಮಾಂ ರಾಜನ್ ತಪಸೇ ಭರತರ್ಷಭ ॥೧೨॥

ಗ್ಲಾಯತೇ ಮೇ ಮನಸ್ತಾತ ಭೂಯೋ ಭೂಯಃ ಪ್ರಜಲ್ಪತಃ ।
ನ ಮಾಮಿತಃ ಪರಂ ಪುತ್ರ ಪರಿಕ್ಲೇಷ್ಟುಮಿಹಾರ್ಹಸಿ ॥೧೩॥

ಧೃತರಾಷ್ಟ್ರ– ಹೇ ಭರತರ್ಷಭನೇ, ರಾಜನೇ, ನನಗೆ ತಪಸ್ಸಿಗೆ ಒಪ್ಪಿಗೆ ಕೊಡು. ಮಗು, ಮತ್ತೆ ಮತ್ತೆ ಮಾತನಾಡುವುದರಿಂದ ನನ್ನ ಮನಸ್ಸು ಮತ್ತೂ ನೋಯುತ್ತದೆ. ಪುತ್ರನೇ, ಈಗಾಗಲೇ ದುಃಖಗೊಂಡ ನನ್ನನ್ನು ಮತ್ತೂ ದುಃಖಗೊಳಿಸುವುದು ನಿನಗೆ ತರವಲ್ಲ.

ವೈಶಂಪಾಯನಃ

ತಸ್ಮಿಂಸ್ತು ಕೌರವಶ್ರೇಷ್ಠೇ ತಥಾ ಬ್ರುವತಿ ಪಾಂಡವಮ್ ।
ಸರ್ವೇಷಾಮವರೋಧಾನಾಮ್ ಆರ್ತನಾದೋ ಮಹಾನಭೂತ್ ॥

ವೈಶಂಪಾಯನ– ಕೌರವಶ್ರೇಷ್ಠನಾದ ಆ ಧೃತರಾಷ್ಟ್ರನು ಪಾಂಡವನನ್ನು ಕುರಿತು ಹೀಗೆ ಹೇಳುತ್ತಿರಲು ಎಲ್ಲ ಅಂತಃಪುರ ಸ್ತ್ರೀಯರೂ ಬಹುವಾಗಿ ಆರ್ತನಾದಗೈದರು.

ದೃಷ್ಟ್ವಾ ಕೃಶಂ ವಿವರ್ಣಂ ಚ ರಾಜಾನಮತಥೋಚಿತಮ್ ।
ಸರ್ವೇಷಾಮವರೋಧಾನಾಮ್ ಆರ್ತನಾದೋ ಮಹಾನಭೂತ್ ॥

ಕೃಶನಾಗಿ ಬಿಳಿಚಿಕೊಂಡಿರುವ, ಆ ರೀತಿಯಿರಲು ಯೋಗ್ಯನಲ್ಲದ ರಾಜನನ್ನು ನೋಡಿ ಎಲ್ಲ ಅಂತಃಪುರ ಸ್ತ್ರೀಯರ ಬಹುವಾದ ಆರ್ತನಾದವು ಕೇಳಿಬಂತು.

ಉಪವಾಸಪರಿಕ್ಲಾಂತಂ ತ್ವಗಸ್ಥಿಪರಿವಾರಿತಮ್ ॥೧೬॥

ಧರ್ಮಪುತ್ರಃ ಸ್ವಪಿತರಂ ಪರಿಷ್ವಜ್ಯ ಮಹಾಭುಜಃ ।
ಶೋಕಜಂ ಬಾಷ್ಪಮುತ್ಸೃಜ್ಯ ಪುನರ್ವಚನಮಬ್ರವೀತ್ ॥೧೭॥

ಧರ್ಮಪುತ್ರನಾದ ಯುಧಿಷ್ಠಿರನು ಉಪವಾಸದಿಂದ ಆಯಾಸಗೊಂಡಿರುವ ಕೇವಲ ಚರ್ಮಮೂಳೆಗಳಿಂದ ಕೂಡಿರುವ ತನ್ನ ತಂದೆಯನ್ನು ಚೆನ್ನಾಗಿ ಆಲಿಂಗಿಸಿ ದುಃಖದಿಂದ ಉಂಟಾದ ಕಣ್ಣೀರನ್ನು ಒರೆಸಿಕೊಂಡು ಮತ್ತೆ ಈ ಮಾತನ್ನು ಹೇಳಿದನು.

ಯುಧಿಷ್ಠಿರಃ

ನ ಕಾಮಯೇ ನರಶ್ರೇಷ್ಠ ಜೀವಿತಂ ಪೃಥಿವೀಂ ತಥಾ ।
ಯಥಾ ತವ ಪ್ರಿಯಂ ರಾಜನ್ ಚಿಕೀರ್ಷಾಮಿ ಪ್ರಯತ್ನತಃ ॥೧೮॥

ಯುಧಿಷ್ಠಿರ– ಹೇ ರಾಜನೇ! ಪ್ರಯತ್ನಪೂರ್ವಕವಾಗಿ ನಿನಗೆ ಪ್ರಿಯವಾದುದನ್ನು ಹೇಗೆ ಮಾಡಲಿಚ್ಛಿಸುವೆನೋ ಹಾಗೆ ಬದುಕನ್ನಾಗಲಿ, ಭೂಮಿಯನ್ನಾಗಲಿ ನಾನು ಬಯಸುವುದಿಲ್ಲ.

ಯದಿ ತ್ವಹಮನುಗ್ರಾಹ್ಯೋ ಭವತೋ ದಯಿತೋಽಪಿ ವಾ ।
ಕ್ರಿಯತಾಂ ತಾವದಾಹಾರಸ್ತತೋ ವೇತ್ಸ್ಯಾಮಹೇ ಪರಮ್ ॥೧೯॥

ಒಂದು ವೇಳೆ ನಾನು ನಿನಗೆ ಅನುಗ್ರಹಯೋಗ್ಯನಾಗಿದ್ದರೆ ಅಥವಾ ನಿನಗೆ ಪ್ರೀತಿಪಾತ್ರನಾಗಿದ್ದರೆ ಮೊದಲು ಆಹಾರವನ್ನು ಸ್ವೀಕರಿಸು. ಉಳಿದದ್ದನ್ನು ನಂತರ ನೋಡೋಣ.

ವೈಶಂಪಾಯನಃ

ತತೋಽಬ್ರವೀನ್ಮಹಾರಾಜೋ ಧರ್ಮರಾಜಂ ಸ ಕೌರವಃ ॥೨೦॥

ವೈಶಂಪಾಯನ– ಅನಂತರ ಕೌರವ ಮಹಾರಾಜನು ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು.

ಧೃತರಾಷ್ಟ್ರಃ

ಅನುಜ್ಞಾತಸ್ತ್ವಯಾ ಪುತ್ರ ಭುಂಜೀಯೇತಿ ಮತಿರ್ಮಮ ॥೨೧॥

ಧೃತರಾಷ್ಟ್ರ– ಮಗನೇ, ನಿನ್ನ ಒಪ್ಪಿಗೆಯನ್ನು ಪಡೆದೇ ಆಹಾರವನ್ನು ಸ್ವೀಕರಿಸುವೆನೆಂದು ನಾನು ನಿಶ್ಚಯಿಸಿದ್ದೇನೆ.

ವೈಶಂಪಾಯನಃ

ಇತಿ ಬ್ರುವತಿ ರಾಜೇಂದ್ರೇ ಧೃತರಾಷ್ಟ್ರೇ ಯುಧಿಷ್ಠಿರಮ್ ।
ಋಷಿಃ ಸತ್ಯವತೀಪುತ್ರೋ ವ್ಯಾಸೋಽಭ್ಯೇತ್ಯ ವಚೋಽಬ್ರವೀತ್ ॥೨೨॥

ವೈಶಂಪಾಯನ– ಹೀಗೆ ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೇಳುತ್ತಿರುವಾಗಲೇ ಸತ್ಯವತೀಸುತರಾದ ವೇದವ್ಯಾಸಋಷಿಗಳು ಅಲ್ಲಿಗೆ ಬಂದು, ಮುಂದೆ ಹೇಳುವ ಮಾತುಗಳನ್ನು ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ವ್ಯಾಸಾಗಮನಂ ನಾಮ ಸಪ್ತಮೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ವೇದವ್ಯಾಸರು ಯುಧಿಷ್ಠಿರನನ್ನು ಕುರಿತು ಸಕಾರಣವಾಗಿ ಕಾಡಿಗೆ ಹೋಗಲು ಧೃತರಾಷ್ಟ್ರನಿಗೆ ಒಪ್ಪಿಗೆ ನೀಡಬೇಕೆಂದು ವಿವರಿಸಿ ಆಶ್ರಮಕ್ಕೆ ಹಿಂದಿರುಗುವುದು. ಯುಧಿಷ್ಠಿರನು ಕಷ್ಟದಿಂದ ಧೃತರಾಷ್ಟ್ರನಿಗೆ ಒಪ್ಪಿಗೆ ನೀಡುವುದು.

ವ್ಯಾಸಃ

ಯುಧಿಷ್ಠಿರ ಮಹಾಬಾಹೋ ಯಥಾಽಽಹ ಕುರುನಂದನಃ ।
ಧೃತರಾಷ್ಟ್ರೋ ಮಹಾತ್ಮಾ ತ್ವಂ ತತ್ ಕುರುಷ್ವಾವಿಚಾರಯನ್ ॥೧॥

ವ್ಯಾಸರು– ಹೇ ಮಹಾಬಾಹುವಾದ ಯುಧಿಷ್ಠಿರನೇ, ಕುರುನಂದನನಾದ, ಮಹಾತ್ಮನಾದ ಧೃತರಾಷ್ಟ್ರನು ಹೇಗೆ ಹೇಳುತ್ತಾನೋ ಹಾಗೆ ನೀನು ವಿಚಾರಿಸದೆ ಅದನ್ನು ಪೂರೈಸುವವನಾಗು.

ಅಯಂ ಹಿ ವೃದ್ಧೋ ನೃಪತಿರ್ಹತಪುತ್ರೋ ವಿಶೇಷತಃ ।
ನೇದಂ ಕೃಚ್ಛ್ರಂ ಚಿರಗತಃ ಸಹೇದಿತಿ ಮತಿರ್ಮಮ ॥೨॥

ಈ ರಾಜನು ಈಗಾಗಲೇ ವೃದ್ಧನಾಗಿದ್ದಾನೆ. ಅಲ್ಲದೆ ವಿಶೇಷವಾಗಿ ಮಕ್ಕಳನ್ನೂ ಕಳೆದುಕೊಂಡಿದ್ದಾನೆ. ಅವನು ಬಹಳ ಕಾಲ ಇಲ್ಲೇ ಇದ್ದರೆ ಈ ಕಷ್ಟವನ್ನು ಸಹಿಸಿಕೊಳ್ಳಲಾರನೆಂದು ನನಗೆ ಅನಿಸುತ್ತದೆ.

ಗಾಂಧಾರೀ ಸಾ ಮಹಾಭಾಗಾ ಪ್ರಾಜ್ಞಾ ಕರುಣವೇದಿನೀ ।
ಪುತ್ರಶೋಕಂ ಮಹಾರಾಜ ಧೈರ್ಯೇಣೋದ್ವಹತೇ ಭೃಶಮ್ ॥೩॥

ಹೇ ಮಹಾರಾಜನೇ! ಮಹಾತ್ಮಳಾದ ಆ ಗಾಂಧಾರಿಯೂ ಕೂಡ ಬುದ್ಧಿವಂತಳಾಗಿದ್ದು, ದಯನೀಯ ಪರಿಸ್ಥಿತಿಯನ್ನು ಹೊಂದಿದ್ದರೂ ಬಹಳ ಧೈರ್ಯದಿಂದ ಪುತ್ರಶೋಕವನ್ನು ಸಹಿಸಿಕೊಂಡಿದ್ದಾಳೆ.

ಅಹಮಪ್ಯೇತದೇವ ತ್ವಾಂ ಬ್ರವೀಮಿ ಕುರು ಮೇ ವಚಃ ।
ಅನುಜ್ಞಾಂ ಲಭತಾಂ ರಾಜಾ ಮಾ ವೃಥೇಹ ಮರಿಷ್ಯತಿ ॥೪॥

ನಾನೂ ಕೂಡ ನಿನ್ನಲ್ಲಿ ಇದನ್ನೇ ಹೇಳುತ್ತಿದ್ದೇನೆ. ನನ್ನ ಮಾತನ್ನು ನಡೆಸಿಕೊಡು. ರಾಜನಾದ ಧೃತರಾಷ್ಟ್ರನು ವ್ಯರ್ಥವಾಗಿ ಇಲ್ಲೇ ಸಾಯದೆ ಕಾಡಿಗೆ ಹೋಗಲು ಅನುಜ್ಞೆಯನ್ನು ಪಡೆಯಲಿ.

ಸ್ವಸ್ಥೋ ಭವತ್ಯಯಂ ಧೀಮಾನ್ ವನೇಷು ಮಧುಗಂಧಿಷು ।
ರಾಜರ್ಷೀಣಾಂ ಪುರಾಣಾನಾಮನುಯಾತು ಗತಿಂ ನೃಪಃ ॥೫॥

ಬುದ್ಧಿವಂತನಾದ ಇವನು ಮಧುರವಾದ ಸುವಾಸನೆಯುಳ್ಳ ಕಾಡುಗಳಲ್ಲಿ ಚೆನ್ನಾಗಿ ಇರಬಲ್ಲ. ಈ ರಾಜನು ಹಿಂದಿನ ರಾಜರ್ಷಿಗಳು ನಡೆದ ದಾರಿಯನ್ನು ಅನುಸರಿಸಲಿ.

ರಾಜರ್ಷೀಣಾಂ ಹಿ ಸರ್ವೇಷಾಮಂತೇ ವನಮುಪಾಶ್ರಯಃ ॥೬॥

ಎಲ್ಲ ರಾಜರ್ಷಿಗಳಿಗೂ ಕೂಡ ಕೊನೆಗೆ ಕಾಡೇ ಆಶ್ರಯ ತಾನೆ?

ವೈಶಂಪಾಯನಃ

ಇತ್ಯುಕ್ತಃ ಸ ತತೋ ರಾಜಾ ವ್ಯಾಸೇನಾದ್ಭುತಕರ್ಮಣಾ ।
ಪ್ರತ್ಯುವಾಚ ಮಹಾತೇಜಾ ಧರ್ಮರಾಜೋ ಮಹಾಮುನಿಮ್ ॥೭॥

ವೈಶಂಪಾಯನ– ಅದ್ಭುತವಾದ ಕರ್ಮಗಳನ್ನು ನಡೆಸಿದ ವೇದವ್ಯಾಸರಿಂದ ಈ ರೀತಿ ಹೇಳಲ್ಪಟ್ಟ, ಆ ಮಹಾತೇಜಸ್ವಿಯಾದ ಮಹಾರಾಜನಾದ ಧರ್ಮರಾಜನು ಮಹಾಮುನಿಯನ್ನು ಕುರಿತು ಈ ರೀತಿ ಉತ್ತರಿಸಿದನು.

ಯುಧಿಷ್ಠಿರಃ

ಭಗವಾನೇವ ನೋ ಮಾನ್ಯೋ ಭಗವಾನೇವ ನೋ ಗುರುಃ ।
ಭಗವಾನಸ್ಯ ರಾಜ್ಯಸ್ಯ ಕುಲಸ್ಯ ಚ ಪರಾಯಣಮ್ ॥೮॥

ಅಹಂ ತು ಪುತ್ರೋ ಭಗವನ್ ಪಿತಾ ರಾಜಾ ಗುರುಶ್ಚ ಮೇ ।
ನಿದೇಶವರ್ತೀ ಚ ಪಿತುಃ ಪುತ್ರೋ ಭವತಿ ಧರ್ಮತಃ ॥೯॥

ಯುಧಿಷ್ಠಿರ– ಹೇ ಭಗವನ್ ವೇದವ್ಯಾಸರೇ, ನೀವೇ ನಮಗೆ ಮಾನ್ಯರಾಗಿರುವಿರಿ. ನೀವೇ ನಮ್ಮ ಗುರುಗಳು. ಈ ರಾಜ್ಯ ಹಾಗೂ ಕುಲಕ್ಕೆ ನೀವೇ ಆಶ್ರಯದಾತರು. ನಾನು ಮಗನಾಗಿದ್ದೇನೆ. ರಾಜನಾದ ಧೃತರಾಷ್ಟ್ರನು ನನಗೆ ತಂದೆಯೂ, ಗುರುವೂ ಆಗಿದ್ದಾನೆ. ಧರ್ಮದೃಷ್ಟಿಯಿಂದ ನೋಡುವಾಗ ಮಗನು ತಂದೆಯ ಆಜ್ಞೆಗೆ ವಶನಾಗಿರಬೇಕು (ಹಾಗಾಗಿ ನಾನು ಹೇಗೆ ಅನುಜ್ಞೆ ಕೊಡಲಿ?)

ವೈಶಂಪಾಯನಃ

ಇತ್ಯುಕ್ತಃ ಸ ತು ತಂ ಪ್ರಾಹ ವ್ಯಾಸೋ ಧರ್ಮಭೃತಾಂ ವರಃ ।
ಯುಧಿಷ್ಠಿರಂ ಮಹಾತೇಜಾಃ ಪುನರೇವ ವಿಶಾಂಪತೇ ॥೧೦॥

ವೈಶಂಪಾಯನ– ಹೇ-ವಿಶಾಂಪತಿಯೇ! ಧಾರ್ಮಿಕರಲ್ಲಿ ಶ್ರೇಷ್ಠರಾದ ಮಹಾತೇಜಸ್ವಿಯಾದ ಆ ವೇದವ್ಯಾಸರು ಯುಧಿಷ್ಠಿರನಿಂದ ಈ ರೀತಿ ಹೇಳಲ್ಪಟ್ಟಾಗ ಆ ಯುಧಿಷ್ಠಿರನನ್ನು ಕುರಿತು ಮತ್ತೆ ಹೀಗೆ ಹೇಳಿದರು.

ವ್ಯಾಸಃ

ಏವಮೇತನ್ಮಹಾಬಾಹೋ ಯಥಾ ವದಸಿ ಕೌರವ ।
ರಾಜಾऽಯಂ ವೃದ್ಧತಾಂ ಪ್ರಾಪ್ತಃ ಪ್ರಮಾಣೇ ಪರಮೇ ಸ್ಥಿತಃ ॥೧೧॥

ವ್ಯಾಸರು– ಹೇ ಕೌರವನೇ, ನೀನೇನು ಹೇಳುತ್ತಿರುವಿಯೋ ಅದು ಹಾಗೆಯೇ (ಸರಿಯಾಗಿದೆ). ಈ ರಾಜನು ವೃದ್ಧಾಪ್ಯವನ್ನು ಪಡೆದು ಉತ್ತಮವಾದ ಅಧ್ಯಾತ್ಮ ಚಿಂತನೆಯ ಮಾರ್ಗದಲ್ಲಿ ನಿಂತಿದ್ದಾನೆ.

ಸೋಽಯಂ ಮಯಾಽಭ್ಯನುಜ್ಞಾತಸ್ತ್ವಯಾ ಚ ಪೃಥಿವೀಪತಿಃ ।
ಕರೋತು ಸ್ವಮಭಿಪ್ರಾಯಂ ಮಾಽಸ್ಯ ವಿಘ್ನಕರೋ ಭವ ॥೧೨॥

ಅಂತಹ ಈ ಪೃಥಿವೀಪತಿಯು ನನ್ನಿಂದ ಅನುಜ್ಞೆಯನ್ನು ಪಡೆದು, ಹಾಗೆಯೇ ನಿನ್ನಿಂದಲೂ ಒಪ್ಪಿಗೆಯನ್ನು ಪಡೆದು ತನ್ನ ಆಶಯದಂತೆ ನಡೆಯಲಿ. ಇವನಿಗೆ ವಿಘ್ನವನ್ನುಂಟು ಮಾಡಬೇಡ.

ಏಷ ಏವ ಪರೋ ಧರ್ಮೋ ರಾಜರ್ಷೀಣಾಂ ಯುಧಿಷ್ಠಿರ ।
ಸಮರೇ ವಾ ಭವೇನ್ಮೃತ್ಯುರ್ವನೇ ವಾ ವಿಧಿಪೂರ್ವಕಮ್ ॥೧೩॥

ಹೇ ಯುಧಿಷ್ಠಿರನೇ, ರಾಜಶ್ರೇಷ್ಠರಿಗೆ ಯುದ್ಧದಲ್ಲಾಗಲಿ, ವಿಧಿಯುಕ್ತವಾದ ಆಚರಣೆಯಿಂದ ಕಾಡಿನಲ್ಲಾಗಲಿ ಮರಣವು ಒದಗಬೇಕು. ಇದೇ ಶ್ರೇಷ್ಠವಾದ ಧರ್ಮವಾಗಿದೆ.

ಪಿತ್ರಾಽಪಿ ತವ ರಾಜೇಂದ್ರ ಪಾಂಡುನಾ ಪೃಥಿವೀಕ್ಷಿತಾ ।
ಶಿಷ್ಯಭೂತೇನ ರಾಜಾಽಯಂ ಗುರುವತ್ ಪರ್ಯುಪಾಸಿತಃ ॥೧೪॥

ಹೇ ರಾಜೇಂದ್ರನೇ, ಈ ರಾಜನು, ಶಿಷ್ಯನಂತಿರುವ ನಿನ್ನ ತಂದೆಯಾದ ಪೃಥಿವೀಪತಿಯಾದ ಪಾಂಡುವಿನಿಂದಲೂ ಗುರುವಿನಂತೆ ಸೇವಿಸಲ್ಪಟ್ಟಿದ್ದಾನೆ.

ಕ್ರತುಭಿರ್ದಕ್ಷಿಣಾಭಿಶ್ಚ ರತ್ನಪರ್ವತಶೋಭಿತೈಃ ।
ಮಹದ್ಭಿರಿಷ್ಟಂ ಭೋಗಾಶ್ಚ ಭುಕ್ತಾಃ ಪುತ್ರಾಶ್ಚ ಲಾಲಿತಾಃ ॥೧೫॥

ಇವನಿಂದ ದೊಡ್ಡ ದೊಡ್ಡ ಯಜ್ಞಗಳು ನಡೆಸಲ್ಪಟ್ಟಿವೆ. ರತ್ನದ ರಾಶಿಗಳಿಂದ ಅಲಂಕೃತವಾದ ದಕ್ಷಿಣೆಗಳು ಕೊಡಲ್ಪಟ್ಟಿವೆ. ನಾನಾ ರೀತಿಯ ಭೋಗಗಳು ಅನುಭವಿಸಲ್ಪಟ್ಟಿವೆ. ಮಕ್ಕಳೂ ಲಾಲಿಸಲ್ಪಟ್ಟಿದ್ದಾರೆ.

ಅತ್ರ ಸಂಸ್ಥಂ ಚ ವಿಪುಲಂ ರಾಜ್ಯಂ ವಿಪ್ರೋಷಿತೇ ತ್ವಯಿ ।
ತ್ರಯೋದಶ ಸಮಾ ಭುಂಕ್ತ ದತ್ತಂ ಚ ವಿಪುಲಂ ವಸು ॥೧೬॥

ಹದಿಮೂರು ವರ್ಷಗಳ ಕಾಲ ನೀನು ವನವಾಸದಲ್ಲಿದ್ದಾಗ ಇಲ್ಲಿರುವ ಸಮೃದ್ಧವಾದ ರಾಜ್ಯವನ್ನು ಇವನು ಅನುಭವಿಸಿದ್ದಾನೆ. ವಿಪುಲವಾದ ಸಂಪತ್ತನ್ನೂ ದಾನ ಮಾಡಿದ್ದಾನೆ.

ತ್ವಯಾ ಚ ಪುರುಷವ್ಯಾಘ್ರ ಗುರುಶುಶ್ರೂಷಯಾ ನೃಪ ।
ಆರಾಧಿತಃ ಸಭೃತ್ಯೇನ ಗಾಂಧಾರೀ ಚ ಯಶಸ್ವಿನೀ ॥೧೭॥

ಹೇ ಪುರುಷವ್ಯಾಘ್ರನೇ, ಭೃತ್ಯರಿಂದೊಡಗೂಡಿದ ನಿನ್ನಿಂದಲೂ ನಡೆಸಲ್ಪಟ್ಟ ಗುರುಸೇವೆಯಿಂದ ಧೃತರಾಷ್ಟ್ರನು ಆರಾಧಿಸಲ್ಪಟ್ಟಿದ್ದಾನೆ. ಹೇ ನೃಪನೇ, ಯಶಸ್ವಿನಿಯಾದ ಗಾಂಧಾರಿಯೂ ನಿನ್ನಿಂದ ಆರಾಧಿತಳಾಗಿದ್ದಾಳೆ.

ಅನುಜಾನೀಹಿ ಪಿತರಂ ಸಮಯೋಽಸ್ಯ ತಪೋವಿಧೌ ।
ನ ಮನ್ಯುರ್ವಿದ್ಯತೇ ಚಾಸ್ಯ ಸುಸೂಕ್ಷ್ಮೋಽಪಿ ಯುಧಿಷ್ಠಿರ ॥೧೮॥

ಹೇ ಯುಧಿಷ್ಠಿರನೇ, ನಿನ್ನ ತಂದೆಗೆ ಅನುಜ್ಞೆ ನೀಡು. ತಪಸ್ಸನ್ನು ನಡೆಸಲು ಇದು ಯೋಗ್ಯವಾದ ಸಮಯವಾಗಿದೆ. ಇವನಿಗೆ ನಿನ್ನಲ್ಲಿ ಅತೀ ಸಣ್ಣಕೋಪವೂ ಇಲ್ಲ.

ವೈಶಂಪಾಯನಃ

ಏತಾವದುಕ್ತ್ವಾ ವಚನಮ್ ಅನುಜ್ಞಾಪ್ಯ ಚ ಪಾರ್ಥಿವಮ್ ।
ತಥಾಽಸ್ತ್ವಿತಿ ಚ ತೇನೋಕ್ತಃ ಕೌಂತೇಯೇನ ಯಯೌ ವನಮ್ ॥೧೯॥

ವೈಶಂಪಾಯನ– ಇಷ್ಟು ಮಾತನ್ನು ಹೇಳಿದ ವ್ಯಾಸರು ರಾಜನಿಗೆ ಕಾಡಿಗೆ ಹೋಗಲು ಅನುಜ್ಞೆ ನೀಡಿ, ಯುಧಿಷ್ಠಿರನಿಂದ 'ಹಾಗೆಯೇ ಆಗಲಿ' ಎಂದು ಹೇಳಿಸಿಕೊಂಡು ಕಾಡಿಗೆ ಹೊರಟರು.

ಗತೇ ಭಗವತಿ ವ್ಯಾಸೇ ರಾಜಾ ಪಾಂಡುಸುತಸ್ತತಃ ।
ಪ್ರೋವಾಚ ಪಿತರಂ ವೃದ್ಧಂ ಮಂದಂ ಮಂದಮಿವಾನತಃ ॥೨೦॥

ಭಗವಾನ್ ವ್ಯಾಸರು ಹೋದ ನಂತರ ರಾಜನಾದ ಪಾಂಡುಸುತನು ವೃದ್ಧನಾದ ತಂದೆಯನ್ನು ಕುರಿತು ತಲೆ ತಗ್ಗಿಸಿದವನಾಗಿ ಮೆಲ್ಲಮೆಲ್ಲನೆ ಹೀಗೆ ಹೇಳಿದನು.

ಯುಧಿಷ್ಠಿರಃ

ಯಥಾಽಽಹ ಭಗವಾನ್ ವ್ಯಾಸೋ ಯಚ್ಚಾಪಿ ಭವತೋ ಮತಮ್ ।
ಯಥಾಽಽಹ ಚ ಮಹೇಷ್ವಾಸಃ ಕೃಪೋ ವಿದುರ ಏವ ಚ ॥೨೧॥

ಯುಯುತ್ಸುಃ ಸಂಜಯಶ್ಚೈವ ತತ್ ಕರ್ತಾಸ್ಮ್ಯಹಮಂಜಸಾ ॥೨೨॥

ಸರ್ವೇ ತೇ ಹ್ಯನುಮಾನ್ಯಾ ಮೇ ಕುಲಸ್ಯಾಸ್ಯ ಹಿತೈಷಿಣಃ ॥೨೩॥

ಯುಧಿಷ್ಠಿರ– ಭಗವಾನ್ ವ್ಯಾಸರು ಹೇಗೆ ಹೇಳುವರೋ, ತಮಗೆ ಯಾವುದು ಒಪ್ಪಿಗೆಯೋ, ಮಹಾಧನುರ್ಧಾರಿಯಾದ ಕೃಪರೂ ಹಾಗೆಯೇ ವಿದುರನೂ, ಯುಯುತ್ಸುವೂ, ಸಂಜಯನೂ ಇವರೆಲ್ಲ ಏನು ಹೇಳುತ್ತಾರೋ ನಾನು ಅದನ್ನು ನಡೆಸಿಯೇ ತೀರುವೆನು. ಏಕೆಂದರೆ ಅವರೆಲ್ಲರೂ ನನಗೆ ಆದರಣೀಯರೇ ಆಗಿದ್ದಾರೆ. ಅಲ್ಲದೆ ನಮ್ಮ ಕುಲಕ್ಕೆ ಹಿತವನ್ನು ಬಯಸುವವರೂ ಆಗಿದ್ದಾರೆ.

ಇದಂ ತು ಯಾಚೇ ನೃಪತೇ ತ್ವಾಮಹಂ ಶಿರಸಾ ನತಃ ।
ಕ್ರಿಯತಾಂ ತಾವದಾಹಾರಸ್ತತೋ ಗಚ್ಛಾಶ್ರಮಂ ಪ್ರತಿ ॥೨೪॥

ಹೇ ನೃಪತಿಯೇ, ನಾನು ನಿನ್ನನ್ನು ತಲೆಬಾಗಿ ನಮಿಸಿ ಇಷ್ಟು ಮಾತ್ರ ಕೇಳಿಕೊಳ್ಳುವೆನು. ಮೊದಲು ಆಹಾರವನ್ನು ಸ್ವೀಕರಿಸು. ನಂತರ ಆಶ್ರಮಕ್ಕೆ ಹೊರಡಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರಸ್ಯ ಆಶ್ರಮವಾಸನಿಶ್ಚಯೋ ನಾಮ
ಅಷ್ಟಮೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಕಾಡಿಗೆ ಹೊರಟುನಿಂತ ಧೃತರಾಷ್ಟ್ರನು ಯುಧಿಷ್ಠಿರನಿಗೆ
ರಾಜನೀತಿಯನ್ನು ನಿರೂಪಿಸುವುದು.

ವೈಶಂಪಾಯನಃ

ತತೋ ರಾಜ್ಞಾऽಭ್ಯನುಜ್ಞಾತೋ ಧೃತರಾಷ್ಟ್ರೋ ಮಹಾಮನಾಃ ।
ಯಯೌ ಸ್ವಭವನಂ ರಾಜಾ ಗಾಂಧಾರ್ಯಾऽನುಗತಸ್ತದಾ ॥೧॥

ವೈಶಂಪಾಯನ– ರಾಜನಾದ ಯುಧಿಷ್ಠಿರನಿಂದ ಒಪ್ಪಿಗೆಯನ್ನು ಪಡೆದ ನಂತರ ಮಹಾಮನಸ್ವಿಯಾದ ಧೃತರಾಷ್ಟ್ರರಾಜನು ಗಾಂಧಾರಿಯಿಂದ ಅನುಸರಿಸಲ್ಪಟ್ಟವನಾಗಿ ತನ್ನ ಭವನಕ್ಕೆ ತೆರಳಿದನು.

ಮಂದಪ್ರಾಣಗತಿರ್ಧೀಮಾನ್ ಕೃಚ್ಛ್ರಾದಿವ ಸಮುದ್ಧರನ್ ।
ಪದಾತಿಃ ಸ ಮಹೀಪಾಲೋ ಜೀರ್ಣೋ ಗಜಪತಿರ್ಯಥಾ ॥೨॥

ಬುದ್ಧಿವಂತನಾದ ಆ ರಾಜನು ಬಲಹೀನತೆಯಿಂದ ನಿಧಾನವಾಗಿ ನಡೆಯುತ್ತಾ, ಕಷ್ಟದಿಂದ ಕಾಲನ್ನು ಎತ್ತುತ್ತಾ, ವಯಸ್ಸಾದ ಮದ್ದಾನೆಯು ಹೇಗೆ ನಡೆಯುವುದೋ ಹಾಗೆ ನಡೆದನು.

ತಮನ್ವಗಚ್ಛದ್ ವಿದುರೋ ವಿದ್ವಾನ್ ಸೂತಶ್ಚ ಸಂಜಯಃ ।
ಸ ಚೈವ ಪರಮೇಷ್ವಾಸಃ ಕೃಪಃ ಶಾರದ್ವತಸ್ತದಾ ॥೩॥

ಹೀಗೆ ಹೋಗುತ್ತಿರುವ ಆ ಧೃತರಾಷ್ಟ್ರನನ್ನು ವಿದ್ವಾಂಸನಾದ ವಿದುರನೂ, ಸಾರಥಿಯಾದ ಸಂಜಯನೂ, ಮಹಾಧನುರ್ಧಾರಿಯಾದ ಶಾರದ್ವತರಾದ ಕೃಪರೂ ಅನುಸರಿಸಿದರು.

ಪ್ರವಿಶ್ಯ ಚ ಗೃಹಂ ರಾಜಾ ಕೃತಪೂರ್ವಾಹ್ಣಿಕಕ್ರಿಯಃ ।
ತರ್ಪಯಿತ್ವಾ ದ್ವಿಜಶ್ರೇಷ್ಠಾನ್ ಆಹಾರಮಕರೋತ್ ತದಾ ॥೪॥

ರಾಜನು ತನ್ನ ಮನೆಯನ್ನು ಪ್ರವೇಶಿಸಿ, ಪ್ರಾತಃಕಾಲದ ನಿತ್ಯಕ್ರಿಯೆಗಳನ್ನು ನಡೆಸಿ, ಬ್ರಾಹ್ಮಣಶ್ರೇಷ್ಠರನ್ನು ಸಂತೋಷಗೊಳಿಸಿ ಆಹಾರವನ್ನು ಸ್ವೀಕರಿಸಿದನು.

ಗಾಂಧಾರೀ ಚೈವ ಧರ್ಮಜ್ಞಾ ಕುಂತ್ಯಾ ಸಹ ಮನಸ್ವಿನೀ ।
ವಧೂಭಿರುಪಚಾರೇಣ ಪೂಜಿತಾऽಭುಂಕ್ತ ಭಾರತ ॥೫॥

ಹೇ ಭಾರತನೇ, ಧರ್ಮಜ್ಞಳಾದ, ಮನಸ್ಥೈರ್ಯವುಳ್ಳ ಗಾಂಧಾರಿಯೂ ಕೂಡ ಕುಂತೀ ಹಾಗು ಅವಳ ಜೊತೆಗಿರುವ ಸೊಸೆಯರಿಂದ ನಾನಾ ರೀತಿಯ ಉಪಚಾರಗಳಿಂದ ಸೇವಿಸಲ್ಪಟ್ಟವಳಾಗಿ ಆಹಾರವನ್ನು ಸ್ವೀಕರಿಸಿದಳು.

ಕೃತಾಹಾರಂ ಕೃತಾಹಾರಾಃ ಸರ್ವೇ ತೇ ವಿದುರಾದಯಃ ।
ಪಾಂಡವಾಶ್ಚ ಕುರುಶ್ರೇಷ್ಠಮುಪಾತಿಷ್ಠಂತ ಭಾರತ ॥೬॥

ಹೇ ಭಾರತನೇ, ವಿದುರನೇ ಮೊದಲಾದ ಅಲ್ಲಿರುವ ಎಲ್ಲರೂ ಜೊತೆಗೆ ಪಾಂಡವರೂ ಕೂಡ ತಾವೂ ಆಹಾರವನ್ನು ಸ್ವೀಕರಿಸಿ, ಈ ಮೊದಲೇ ಉಂಡಿರುವ ಕುರುಶ್ರೇಷ್ಠನ ಸೇವೆಗಾಗಿ ನಿಂತರು.

ತತೋಽಬ್ರವೀನ್ಮಹಾರಾಜಃ ಕುಂತೀಪುತ್ರಮುಪಹ್ವರೇ ।
ನಿಷಣ್ಣಂ ಪಾಣಿನಾ ಪೃಷ್ಠೇ ಸಂಸ್ಪೃಶನ್ನಂಬಿಕಾಸುತಃ ॥೭॥

ಅನಂತರ ಅಂಬಿಕಾಸುತನಾದ ಮಹಾರಾಜನು ತನ್ನ ಸಮೀಪದಲ್ಲಿ ಕುಳಿತಿರುವ ಕುಂತೀಪುತ್ರನಾದ ಯುಧಿಷ್ಠಿರನನ್ನು ತನ್ನ ಕೈಯಿಂದ ಅವನ ಬೆನ್ನನ್ನು ನೇವರಿಸುತ್ತಾ ಹೀಗೆ ಹೇಳಿದನು.

ಧೃತರಾಷ್ಟ್ರಃ

ಅಪ್ರಮಾದಸ್ತ್ವಯಾ ಕಾರ್ಯಃ ಸರ್ವಥಾ ಕುರುನಂದನ ।
ಅಷ್ಟಾಂಗೇ ರಾಜಶಾರ್ದೂಲ ರಾಜ್ಯೇ ಧರ್ಮಪುರಸ್ಕೃತೇ ॥೮॥

ಧೃತರಾಷ್ಟ್ರ– ಹೇ ರಾಜಶಾರ್ದೂಲನಾದ ಕುರುನಂದನನೇ, ಧರ್ಮಪುರಸ್ಕೃತವಾದ ಅಷ್ಟಾಂಗಯುಕ್ತವಾದ ರಾಜ್ಯದಲ್ಲಿ ಯಾವುದೇ ಕಾರ್ಯದಲ್ಲೂ ನಿನ್ನಿಂದ ಪ್ರಮಾದವು ನಡೆಯಬಾರದು.

ವ್ಯಾಖ್ಯಾನ ವಿಶೇಷ– ರಾಜ್ಯದ ಅಷ್ಟಾಂಗಗಳು ಎಂದರೆ=ಸ್ವಾಮಿ ಅಂದರೆ ರಾಜ, ಅಮಾತ್ಯ ಎಂದರೆ ಮಂತ್ರಿ , ಸುಹೃತ್ ಎಂದರೆ ಭೃತ್ಯರು, ಕೋಶ ಎಂದರೆ ಧನ ಸಂಗ್ರಹ, ರಾಷ್ಟ್ರ ಎಂದರೆ ಭೂಪ್ರದೇಶ, ದುರ್ಗ ಎಂದರೆ ಕೋಟೆ, ಬಲಾನಿ ಎಂದರೆ ಸೈನ್ಯ – ಇವುಗಳು ಪ್ರಕೃತಿಭೂತವಾದ ರಾಜ್ಯದ ಏಳು ಅಂಗಗಳು. ಜೊತೆಗೆ ಪೌರಶ್ರೇಣಿ ಎಂದರೆ ರಾಜ್ಯದಲ್ಲಿ ವಾಸಿಸುವ ಜನರು. ಒಟ್ಟು ಎಂಟು ಅಂಗಗಳು ರಾಜನೀತಿಯಲ್ಲಿ ಸೇರಿವೆ.

ನನು ಶಕ್ಯಂ ಯಥಾ ತಾತ ರಕ್ಷಿತುಂ ಪಾಂಡುನಂದನ ।
ರಾಜ್ಯಂ ಧರ್ಮಂ ಚ ಕೌಂತೇಯ ವಿದ್ವಾನಸಿ ನಿಬೋಧ ತತ್ ॥೯॥

ಮಗು ಪಾಂಡುನಂದನನಾದ ಕೌಂತೇಯನೇ, ರಾಜ್ಯವನ್ನೂ, ಧರ್ಮವನ್ನೂ ನೀನು ಚೆನ್ನಾಗಿ ತಿಳಿದಿರುವಿ. ಹಾಗಿದ್ದರೂ ಹೇಗೆ ರಾಜ್ಯ ಹಾಗು ಧರ್ಮಗಳನ್ನು ರಕ್ಷಿಸುವುದು ಸುಲಭವಾಗುತ್ತದೋ ಅದನ್ನು ಹೇಳುತ್ತೇನೆ. ಸರಿಯಾಗಿ ಗಮನಿಸು.

ವಿದ್ಯಾವೃದ್ಧಾನ್ ಸದೈವ ತ್ವಮುಪಾಸೀಥಾ ಯುಧಿಷ್ಠಿರ ।
ಶೃಣುಯಾಸ್ತೇ ಹಿ ಯದ್ ಬ್ರೂಯುಃ ಕುರ್ಯಾಶ್ಚೈವಾವಿಚಾರಯನ್ ॥

ಹೇ ಯುಧಿಷ್ಠಿರನೇ, ಯಾವಾಗಲೂ ವಿದ್ಯಾವಂತರನ್ನು ಚೆನ್ನಾಗಿ ಸೇವೆ ಮಾಡು. ಅವರು ಏನನ್ನು ಹೇಳುತ್ತಾರೋ ಅದನ್ನು ಸರಿಯಾಗಿ ಕೇಳಿಸಿಕೊ ಮತ್ತು ವಿಚಾರ ಮಾಡದೆ ಅದನ್ನು ನಡೆಸು.

ಪ್ರಾತರುತ್ಥಾಯ ತಾನ್ ರಾಜನ್ ಪೂಜಯಿತ್ವಾ ಯಥಾವಿಧಿ ।
ಕೃಚ್ಛ್ರಕಾಲೇ ಸಮುತ್ಪನ್ನೇ ಪೃಚ್ಛೇಥಾಃ ಕಾರ್ಯಮಾತ್ಮನಃ ॥೧೧॥

ಹೇ ರಾಜನೇ, ಬೆಳಿಗ್ಗೆ ಎದ್ದು ಅವರನ್ನು ವಿಧಿಪ್ರಕಾರ ಗೌರವಿಸಿ, ಕಷ್ಟಕಾಲವು ಸಮೀಪಿಸಿದಾಗ ನಾನೇನು ಮಾಡಬೇಕು ಎಂದು ಅವರಲ್ಲಿ ಕೇಳು.

ತೇ ಸುಸಮ್ಮಾನಿತಾ ರಾಜನ್ ತ್ವಯಾ ರಾಜ್ಯೇ ಹಿತಾರ್ಥಿನಾ ।
ಪ್ರವಕ್ಷ್ಯಂತಿ ಹಿತಂ ತಾತ ಸರ್ವಂ ಕೌರವನಂದನ ॥೧೨॥

ಮಗು ಕೌರವನನಂದನನಾದ ರಾಜನೇ, ರಾಜ್ಯದ ಹಿತವನ್ನು ಬಯಸುವ ನಿನ್ನಿಂದ ಚೆನ್ನಾಗಿ ಗೌರವಿಸಲ್ಪಟ್ಟ ಅವರು ಎಲ್ಲ ರೀತಿಯ ಹಿತವಾದ ಮಾರ್ಗಗಳನ್ನು ಹೇಳುತ್ತಾರೆ.

ಇಂದ್ರಿಯಾಣಿ ಚ ಸರ್ವಾಣಿ ರಾಜ್ಯವತ್ ಪರಿಪಾಲಯ ।
ಹಿತಾಯ ವೈ ಭವಿಷ್ಯಂತಿ ರಕ್ಷಿತಂ ದ್ರವಿಣಂ ಯಥಾ ॥೧೩॥

ನಿನ್ನ ಎಲ್ಲ ಇಂದ್ರಿಯಗಳನ್ನು ರಾಜ್ಯವನ್ನು ಪರಿಪಾಲಿಸುವಂತೆಯೇ ಪಾಲಿಸು. ಆ ಇಂದ್ರಿಯಗಳು ಕೂಡಿಟ್ಟ ಸಂಪತ್ತಿನಂತೆ ಮುಂದೆ ಹಿತವನ್ನುಂಟು ಮಾಡುತ್ತವೆ.

ಅಮಾತ್ಯಾನುಪಧಾತೀತಾನ್ ಪಿತೃಪೈತಾಮಹಾನ್ ಶುಚೀನ್ ।
ದಾಂತಾನ್ ಕರ್ಮಸು ಸರ್ವೇಷು ಮುಖ್ಯಾನ್ ಮುಖ್ಯೇಷು ಯೋಜಯ ॥

ವಂಶಪಾರಂಪರ್ಯವಾಗಿ ಬಂದ, ಮೋಸ-ವಂಚನೆಗಳಿಲ್ಲದ, ಬಾಹ್ಯ ಆಭ್ಯಂತರಗಳಲ್ಲಿ ಶುದ್ಧರಾದ, ಇಂದ್ರಿಯನಿಗ್ರಹವುಳ್ಳ ಮುಖ್ಯರಾದ ಅಮಾತ್ಯರನ್ನು ಎಲ್ಲ ಮುಖ್ಯಕಾರ್ಯಗಳಲ್ಲಿಯೂ ಯೋಜಿಸಿಕೊ.

ಸಾಧಯೇಥಾಶ್ಚ ಸತತಂ ಚಾರೈರವಿದಿತೈಃ ಪರಾನ್ ।
ಪರೀಕ್ಷಿತೈರ್ಬಹುವಿಧೈಃ ಸ್ವರಾಷ್ಟ್ರೇಷು ಪರೇಷು ಚ ॥೧೫॥

ಬಹುವಿಧವಾಗಿ ಪರೀಕ್ಷೆಗೆ ಒಳಪಟ್ಟ, ತನ್ನ ರಾಷ್ಟ್ರದಲ್ಲೂ ಪರರಾಷ್ಟ್ರದಲ್ಲೂ ರಾಜನಿಗೋಸ್ಕರ ಕೆಲಸ ಮಾಡುವ ವ್ಯಕ್ತಿಗಳೆಂದು ಗುರುತಿಸಿಕೊಳ್ಳದ-ಚಾರರಿಂದ ಉತ್ಕೃಷ್ಟವಾದ ರಾಜಕರ್ಮಗಳನ್ನು ಯಾವಾಗಲೂ ಸಾಧಿಸಿಕೊ.

ಪುರಂ ಚ ತೇ ಸುಗುಪ್ತಂ ಸ್ಯಾದ್ ದೃಢಪ್ರಾಕಾರತೋರಣಮ್ ।
ಅಟ್ಟಾಟ್ಟಾಲಕಸಂಬಾಧಂ ಷಟ್‌ಪದಂ ಸರ್ವತೋ ದಿಶಮ್ ॥೧೬॥

ನಿನ್ನ ಪಟ್ಟಣವಾದರೂ ದೃಢವಾದ ಗೋಡೆ ಹಾಗೂ ಗೋಪುರಗಳಿಂದ ಕೂಡಿದ್ದು, ಎತ್ತರವಾದ ಗೋಡೆಯ ಮೇಲಿನ ಯುದ್ಧಗೃಹಗಳಿಂದ ಕೂಡಿದ್ದು, ಎಲ್ಲ ದಿಕ್ಕುಗಳಲ್ಲಿ ಆರು ಬಗೆಯ ದುರ್ಗಗಳಿಂದ ಕೂಡಿದ್ದರೆ ಒಳ್ಳೆಯ ರೀತಿಯಲ್ಲಿ ರಕ್ಷಿತವಾಗುತ್ತದೆ.

ತಸ್ಯ ದ್ವಾರಾಣಿ ಕಾರ್ಯಾಣಿ ಪರ್ಯಾಪ್ತಾನಿ ಬೃಹಂತಿ ಚ ।
ಸರ್ವತಃ ಸುವಿಭಕ್ತಾನಿ ಯಂತ್ರೈರಾರಕ್ಷಿತಾನಿ ಚ ॥೧೭॥

ಆ ಪಟ್ಟಣಕ್ಕೆ ಅವಶ್ಯಕತೆಗೆ ತಕ್ಕಂತೆ ದೊಡ್ಡ ದ್ವಾರಗಳನ್ನು ಮಾಡಬೇಕು. ಆ ದ್ವಾರಗಳು ಅನುಕೂಲತೆಗೆ ತಕ್ಕಂತೆ ವಿಭಾಗವುಳ್ಳವುಗಳಾಗಿದ್ದು ಎಲ್ಲ ಕಡೆ ರಕ್ಷಣಾಯಂತ್ರಗಳಿಂದ ರಕ್ಷಿತವಾಗಿಯೂ ಇರಬೇಕು.

ಪುರುಷೈರರ್ಥತತ್ತ್ವಜ್ಞೈರ್ವಿದಿತೈಃ ಕುಲಶೀಲತಃ ।
ಆತ್ಮಾ ಚ ರಕ್ಷ್ಯಃ ಸತತಂ ಭೋಜನಾದಿಷು ಭಾರತ ॥೧೮॥

ಹೇ ಭಾರತನೇ, ಅರ್ಥತತ್ತ್ವವನ್ನು ಬಲ್ಲ, ಕುಲ ಹಾಗೂ ನಡತೆಗಳಿಂದ ತನಗೆ ಚೆನ್ನಾಗಿ ತಿಳಿದಿರುವ ಪುರುಷರ ಸಹಾಯದಿಂದ ಆಹಾರ-ವಿಹಾರಾದಿಗಳಲ್ಲಿ ಯಾವಾಗಲೂ ತನ್ನನ್ನು ಚೆನ್ನಾಗಿ ರಕ್ಷಿಸಿಕೊಳ್ಳಬೇಕು.

ವಿಹಾರಾದಿಷು ಸರ್ವೇಷು ಮಾಲ್ಯಶಯ್ಯಾಸನೇಷು ಚ ॥೧೯॥

ಸ್ತ್ರಿಯಶ್ಚ ತೇ ಸುಗುಪ್ತಾಃ ಸ್ಯುರ್ವೃದ್ಧೈರಾಪ್ತೈರಧಿಷ್ಠಿತಾಃ ।
ಶೀಲವದ್ಭಿಃ ಕುಲೀನೈಶ್ಚ ವಿದ್ವದ್ಭಿಶ್ಚ ಯುಧಿಷ್ಠಿರ ॥೨೦॥

ಎಲ್ಲ ರೀತಿಯ ವಿಹಾರಗಳಲ್ಲಿ ಅಲ್ಲದೆ ಅಲಂಕಾರ, ಶಯ್ಯೆ, ಆಸನಾದಿಗಳಲ್ಲಿ ನಿನ್ನ ಅಂತಃಪುರದ ಸ್ತ್ರೀಯರು ಶೀಲಯುಕ್ತರಾದ, ಉತ್ತಮ ಕುಲದಲ್ಲಿ ಬಂದಿರುವ,

ವಿದ್ವಾಂಸರಾದ, ನಿನಗೆ ಆಪ್ತರಾದ ವೃದ್ಧರಿಂದ ಮೇಲ್ವಿಚಾರಿಕೆಗೆ ಒಳಪಟ್ಟಿದ್ದರೆ ಒಳ್ಳೆಯ ರೀತಿ ರಕ್ಷಿತರಾಗಿರುತ್ತಾರೆ.

ಮಂತ್ರಿಣಶ್ಚೈವ ಕುರ್ವೀಥಾ ದ್ವಿಜಾನ್ ವಿದ್ಯಾವಿಶಾರದಾನ್ ।
ವಿನೀತಾಂಶ್ಚ ಕುಲೀನಾಂಶ್ಚ ಧರ್ಮಾರ್ಥಕುಶಲಾನೃಜೂನ್ ॥೨೧॥

ಎಲ್ಲ ವಿದ್ಯೆಗಳಲ್ಲಿ ಪಾರಂಗತರಾದ, ವಿನಯಶೀಲರಾದ, ಒಳ್ಳೆಯ ಕುಲದಲ್ಲಿ ಜನಿಸಿರುವ, ಧರ್ಮ-ಅರ್ಥಗಳಲ್ಲಿ ಪ್ರವೀಣರಾದ, ನೇರವಾದ ನಡತೆಯುಳ್ಳ ಬ್ರಾಹ್ಮಣರನ್ನು ನಿನ್ನ ಮಂತ್ರಿಗಳನ್ನಾಗಿ ಮಾಡಿಕೊ.

ತೈಃ ಸಾರ್ಧಂ ಮಂತ್ರಯೇಥಾಸ್ತ್ವಂ ನಾತ್ಯರ್ಥಂ ಬಹುಭಿಃ ಸಹ ।
ಸಮಸ್ತೈರಪಿ ಚ ವ್ಯಸ್ತೈರ್ವ್ಯಪದೇಶೇನ ಕೇನಚಿತ್ ॥೨೨॥

ಸುಸಂವೃತಂ ಮಂತ್ರಗೃಹಂ ಸೌಧಂ ಚಾರುಹ್ಯ ಮಂತ್ರಯೇತ್ ।
ಅರಣ್ಯೇ ನಿಃಶಲಾಕೇ ವಾ ನ ಚ ರಾತ್ರೌ ಕದಾಚನ ॥೨೩॥

ಅಂತಹ ಮಂತ್ರಿಗಳೊಂದಿಗೆ ನೀನು ಮಂತ್ರಾಲೋಚನೆ ಮಾಡುವ ಸಂದರ್ಭದಲ್ಲಿ ತುಂಬಾ ಜನರೊಂದಿಗೆ ಬಹಳ ಕಾಲ ಮಂತ್ರಾಲೋಚನೆ ಮಾಡದಿರು. ಯಾವುದಾದರೂ ಮುಖ್ಯಕಾರ್ಯವಿದ್ದಾಗ ಎಲ್ಲಮಂತ್ರಿಗಳೊಂದಿಗೆ ಅಥವಾ ಕೆಲವೇ ಜನರೊಂದಿಗೆ ಮಂತ್ರಾಲೋಚನೆ ಮಾಡುವ ಸಂದರ್ಭದಲ್ಲಿ ಎಲ್ಲಕಡೆಯೂ ಚೆನ್ನಾಗಿ ಮರೆಮಾಡಲ್ಪಟ್ಟ ಎತ್ತರವಾದ ಪ್ರದೇಶದಲ್ಲಿ ನಿರ್ಮಿಸಿದ ಮಂತ್ರಗೃಹವನ್ನು ಪ್ರವೇಶಿಸಿಯೇ ಮಂತ್ರಾಲೋಚನೆ ಮಾಡಬೇಕು. ಯಾವುದೇ ಸಂದರ್ಭದಲ್ಲಿ ಕಾಡಿನಲ್ಲಾಗಲಿ, ಅಡೆತಡೆಗಳಿಲ್ಲದ ಬಯಲಿನಲ್ಲಾಗಲಿ, ರಾತ್ರಿಕಾಲದಲ್ಲಾಗಲಿ ಮಂತ್ರಾಲೋಚನೆ ಮಾಡಬಾರದು. ಅಥವಾ ದಟ್ಟವಾದ ಅರಣ್ಯದಲ್ಲಿ ಅಥವಾ ಹುಲ್ಲುಕಡ್ಡಿಗಳಿಲ್ಲದ ಬಯಲು ಪ್ರದೇಶದಲ್ಲಿ ಮಂತ್ರಾಲೋಚನೆ ಮಾಡಬೇಕು. ಯಾವುದೇ ಸಂದರ್ಭದಲ್ಲಿ ರಾತ್ರಿಯಲ್ಲಿ ಮಂತ್ರಾಲೋಚನೆ ಕೂಡದು.

ವಾನರಾಃ ಪಕ್ಷಿಣಶ್ಚೈವ ಯೇ ಮನುಷ್ಯಾನುಕಾರಿಣಃ ।
ಸರ್ವೇ ಮಂತ್ರಗೃಹೇ ವರ್ಜ್ಯಾ ಯೇ ಚಾಪಿ ಜಡಪಂಗವಃ ॥೨೪॥

ನಡೆನುಡಿಗಳಿಂದ ಮನುಷ್ಯರನ್ನು ಅನುಕರಣೆ ಮಾಡುವ ಯಾವುದೇ ರೀತಿಯ ಮಂಗಗಳು, ಪಕ್ಷಿಗಳು ಮೊದಲಾದ ಪ್ರಾಣಿಗಳು, ಅಲ್ಲದೇ ಬಾಯಿಬಾರದ, ಕಾಲಿಲ್ಲದ, ಅಂಗಹೀನ ವ್ಯಕ್ತಿಗಳು ಇಂತಹ ಯಾರೂ ಕೂಡ ಮಂತ್ರಗೃಹದಲ್ಲಿ ಇರಬಾರದು.

ಮಂತ್ರಭೇದೇ ಚ ಯೇ ದೋಷಾ ಭವಂತಿ ಪೃಥಿವೀಕ್ಷಿತಾಮ್ ।
ನ ತೇ ಶಕ್ಯಾಃ ಸಮಾಧಾತುಂ ಕಥಂಚಿದಿತಿ ಮೇ ಮತಿಃ ॥೨೫॥

ಏಕೆಂದರೆ ರಾಜರ ಮಂತ್ರಾಲೋಚನೆಯ ವಿಷಯವು ಬಹಿರಂಗವಾಗುವುದರಿಂದ ಏನು ಅನರ್ಥಗಳು ಉಂಟಾಗುವವೋ ಅವುಗಳನ್ನು ಯಾವುದೇ ರೀತಿಯಿಂದ ಸರಿಪಡಿಸಲು ಸಾಧ್ಯವಿಲ್ಲ ಎಂದು ನನ್ನ ಅನಿಸಿಕೆ.

ದೋಷಾಂಶ್ಚ ಮಂತ್ರಭೇದೇಷು ಬ್ರೂಯಾಸ್ತ್ವಂ ಮಂತ್ರಿಮಂಡಲೇ ।
ಅಭೇದೇ ಚ ಗುಣಾನ್ ರಾಜನ್ ಪುನಃ ಪುನರರಿಂದಮ ॥೨೬॥

ಪೌರಜಾನಪದಾನಾಂ ಚ ಶೌಚಾಶೌಚೇ ಯುಧಿಷ್ಠಿರ ॥೨೭॥

ಹೇ ಶತ್ರುಸಂಹಾರಕನಾದ ಯುಧಿಷ್ಠಿರನೇ, ನೀನು ಮಂತ್ರಿಗಳ ಸಮೂಹದಲ್ಲಿ ಮಂತ್ರಾಲೋಚನೆಯು ಬಹಿರಂಗವಾಗುವುದರಿಂದ ಉಂಟಾಗುವ ದೋಷಗಳನ್ನೂ, ಅವು ಗೌಪ್ಯವಾಗಿರುವುದರಿಂದ ಉಂಟಾಗುವ ಗುಣಗಳನ್ನೂ, ಅಲ್ಲದೆ ಪಟ್ಟಣಿಗರ ಮತ್ತು ಗ್ರಾಮಜನರ ಒಳ್ಳೆಯ ಹಾಗು ಕೆಟ್ಟ ನಡತೆಗಳನ್ನು ಆಗಾಗ್ಗೆ ಹೇಳುತ್ತಿರಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ರಾಜ್ಯರಕ್ಷಣೋಪಾಯಕಥನಂ ನಾಮ ನವಮೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ.

ವ್ಯವಹಾರಾಶ್ಚ ತೇ ತಾತ ನಿತ್ಯಮಂತ್ಯೈರನುಷ್ಠಿತಾಃ ।
ಯೋಜ್ಯಸ್ತುಷ್ಟೈರ್ಭರ್ತೃಭೈ ರಾಜನ್ ನಿತ್ಯಂ ಚಾರೈರನುಷ್ಠಿತೈಃ ॥೧॥

ಮಗೂ, ಹೇ ರಾಜನೇ, ನಿನ್ನ ಆಸ್ಥಾನದ ನ್ಯಾಯವ್ಯವಹಾರಗಳು ಯಾವಾಗಲೂ -ನಿನಗೆ ಆಪ್ತರಾದ, ಯೋಗ್ಯವಾದ ಸಂಭಾವನೆಯಿಂದ ಸಂತುಷ್ಟರಾದ, ನಿತ್ಯವೂ ಗೂಢಚಾರರಿಂದ ಪರಿಶೀಲಿತರಾದ- ನಿನ್ನ ಆಳುಗಳಿಂದ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು.

ಪರಿಮಾಣಂ ವಿದಿತ್ವಾ ಚ ದಂಡ ದಂಡ್ಯೇಷ್ಪು ಭಾರತ ।
ಪ್ರಾಣಯೇಯುರ್ಯತಾನ್ಯಾಯಂ ಪುರೂಷಾಸ್ತೇ ಯುಧಿಷ್ಠಿರೇ ॥೨॥

ಹೇ ಭಾರತ! ಯುಧಿಷ್ಠಿರನೇ! ಅಂಥ ಪುರುಷರು, ನಿನ್ನ ಆಸ್ಥಾನದಲ್ಲಿ ದಂಡನೆಗೊಳಗಾಗುವ ವ್ಯಕ್ತಿಗಳಲ್ಲಿ, ದಂಡನ ಪರಿಮಾಣವನ್ನು ಸರಿಯಾಗಿ ತಿಳಿದು, ಶಾಸ್ತ್ರನೀತಿಯನ್ನು ಮೀರದೇ (ಕಾರ್ಯವನ್ನು) ನಡೆಸುತ್ತಾರೆ.

ಆದಾನರುಚಯಶ್ಚೈವ ಚರಾ ಯೇ ಭೀಮದರ್ಶನಾಃ ।
ಉಗ್ರದಂಡಪ್ರಧಾನಾಶ್ಚ ಮಿಥ್ಯಾವ್ಯಾಹಾರಿಣಾಸ್ತಥಾ ॥೩॥

ಕ್ರೋಧಾರಶ್ಚೈವ ಲುಬ್ಧಾಶ್ಚ ಹಂತಾರಃ ಸಾಹಸಪ್ರಿಯಾಃ ।
ಹಿಂಸಾವಿಹಾರಭೋಕ್ತಾರೋ ವರ್ಣಾನಾಂ ಚ ಪ್ರದೂಷಕಾಃ ॥೪॥

ಹಿರಣ್ಯದಂಡ್ಯಾ ವಧ್ಯಾ ವಾ ಕರ್ತವ್ಯಾ ದೇಶಕಾಲತಃ ॥೫॥

ಯಾವ ವ್ಯಕ್ತಿಗಳು-ಲಂಚದಲ್ಲಿ ಆಸಕ್ತರಾಗಿರುವರೋ, ನೋಡುಗರನ್ನು ಭಯಪಡಿಸುವರೋ, ಉಗ್ರವಾದ ದಂಡನೆಯನ್ನೇ ಮುಖ್ಯವಾಗಿ ನೀಡುವರೋ, ಸುಳ್ಳು ಸುಳ್ಳಾದ ಮಾತುಗಳನ್ನು ಆಡುವರೋ, ಅನಗತ್ಯವಾಗಿ ಕಿರುಚುವರೋ, ಅತಿಯಾಗಿ ಆಸೆಬುರುಕರಾಗಿರುವರೋ, ಜನರನ್ನು ಹಿಂಸಿಸುವರೋ, ಅತಿಯಾಗಿ ಸಾಹಸವನ್ನು ಮೆಚ್ಚುವರೋ, ಹಿಂಸೆಯನ್ನು ವಿಹಾರದ ರೀತಿಯಲ್ಲಿ ಅನುಭವಿಸುವರೋ, ವರ್ಣ

ವ್ಯವಸ್ಥೆಯನ್ನು ಹಾಳುಗೆಡುವುವರೋ, ಅವರು ದೇಶ ಹಾಗೂ ಕಾಲವ್ಯವಸ್ಥೆಗೆ ಅನುಗುಣವಾಗಿ ಸಂಪತ್ತಿನಿಂದಾಗಲೀ, ವಧೆಯಿಂದಾಗಲೀ ದಂಡಿಸಲ್ಪಡಬೇಕು.

ಅವರೋಧಭೂಮೌ ಭೃತ್ಯೈಶ್ಚ ಪಾನಂ ಸಹ ವಿವರ್ಜಯೇತ್ ।
ಅಕ್ರೋಶಂತ್ಯನುಮತ್ತಾಸ್ತೇ ಕಲತ್ರಂ ವಾಽಪಿ ಗೃಹ್ಣತೇ ॥೬॥

ಅಂತಃಪುರ ಪ್ರದೇಶದಲ್ಲಿ ಭೃತ್ಯರೊಂದಿಗೆ ಜೊತೆಗೂಡಿ ಮದ್ಯಪಾನವನ್ನು ನಡೆಸಬಾರದು. ಏಕೆಂದರೆ ಪಾನದಿಂದ ಮತ್ತರಾದ ಅವರು ಗಟ್ಟಿಯಾಗಿ ಕಿರುಚಾಡುವರು ಅಥವಾ ನಿನ್ನ ಪತ್ನಿಯರನ್ನು ಸ್ವೀಕರಿಸುವರು.

ಜಿಘ್ರಾಂಸಂತ್ಯಪಿ ಶಸ್ತ್ರೇಣ ನಪ್ತಾಃ ಕ್ರೀಡಂತಿ ಚೋತ್ಕಟಾಃ ।
ನಾನಾಕ್ಷೇಪಾ ವ್ಯಾಹರಂತಿ ಗಮ್ಯಾಗಮ್ಯಂ ನ ಜಾನತೇ ॥೭॥

ಅಥವಾ ಬುದ್ಧಿಸ್ಥಿಮಿತವನ್ನು ಕಳೆದುಕೊಂಡು ಶಸ್ತ್ರದಿಂದ ನಿನ್ನನ್ನು ಕೊಲ್ಲಬಯಸುವರು ಅಥವಾ ಪಾನದಿಂದ ಉತ್ಕಟಾವಸ್ಥೆಯನ್ನು ತಲುಪಿ ನಿನ್ನ ಜೊತೆಗೆ ಆಡುವರು ಅಥವಾ ನಿನ್ನ ಕುರಿತು ನಾನಾ ರೀತಿಯ ಆಕ್ಷೇಪಗಳನ್ನು ಆಡಿಕೊಳ್ಳುವರು. ಅಲ್ಲದೇ ತಾವು ಹೋಗಬಹುದಾದ ಅಥವಾ ಹೋಗಬಾರದಾದ ಪ್ರದೇಶವನ್ನು ತಿಳಿಯುವುದಿಲ್ಲ.

ಅತಿಪಾನೇನ ರಾಜಾಽಪಿ ಸರ್ವಂ ಕೋಶಂ ವಿನಾಶಯೇತ್ ।
ವಿತರೇದ್ ಗಾಯಕೇಭ್ಯಶ್ಚ ಪ್ರಧಾನದ್ರವ್ಯಸಂಚಯಮ್ ॥೮॥

ರಾಜನೂ ಕೂಡ ಅತಿಯಾಗಿ ಮದ್ಯಪಾನ ಮಾಡುವುದರಿಂದ ತನ್ನ ಎಲ್ಲ ಕೋಶವನ್ನೂ ನಾಶಮಾಡಿಯಾನು. ಆದ್ದರಿಂದ ಆಸ್ಥಾನದಲ್ಲಿ ಮನಸ್ಸಂತೋಷಕ್ಕಾಗಿ ಹಾಡುವ ಗಾಯನಗಳಿಗೂ ಮಂತ್ರಿಗಳು ಸಂಗ್ರಹಿಸಿದ ದ್ರವ್ಯವನ್ನೇ ನೀಡಬೇಕೇ ಹೊರತು ಕೋಶದಲ್ಲಿಸಂಗ್ರಹಿಸಿದ ದ್ರವ್ಯವನ್ನು ನೀಡಬಾರದು.

ಶಬ್ದಮಾತ್ಮನಿ ದೋಷಾಂಶ್ಚ ಪಿಬೇದೇಕಃ ಸ್ವಜಾಯಯಾ ।
ಯುಕ್ತ್ಯಾ ಪ್ರಕಾಶಮಯತಿ ಸುವೀರ್ಯಸ್ಯ ವಿವೃದ್ಧಯೇ ॥೯॥

ದೇಹಬಲದ ವೃದ್ಧಿಗೋಸ್ಕರ ತನ್ನ ಪತ್ನಿಯೊಂದಿಗೆ ಒಬ್ಬನೇ ಪಾನ ಮಾಡುವ ಸಂದರ್ಭದಲ್ಲೂ ಶಬ್ದ ಸಹಿತವಾಗಿ ಪಾನ ಮಾಡಿದರೆ, ಯುಕ್ತಿಯಿಂದ ತನ್ನಲ್ಲಿ ದೋಷಗಳನ್ನು ಸೂಚಿಸುತ್ತದೆ.

ವ್ಯಾಖ್ಯಾನ ವಿಶೇಷ– 'ಶಬ್ದೇನಾಪಃ ಪಯಃ ಪೀತ್ವಾ ಶಬ್ದೇನ ಘೃತಪಾಯಸಮ್ । ಶಬ್ದೇನಾಪೋಶನಂ ಪೀತ್ವಾ ಸುರಾಪಾನಸಮಂ ಭವೇತ್ ॥' ಎಂಬ ವಚನದಂತೆ ನೀರನ್ನಾಗಲಿ, ಹಾಲನ್ನಾಗಲಿ ಶಬ್ದ ಸಹಿತವಾಗಿ ಕುಡಿದರೆ ಅಥವಾ ತುಪ್ಪ–ಪಾಯಸವನ್ನಾಗಲಿ ಅಥವಾ ಆಪೋಷಣವನ್ನಾಗಲಿ ಶಬ್ದ ಸಹಿತವಾಗಿ ಸ್ವೀಕರಿಸಿದರೆ ಅದು ಸುರಾಪಾನ ಸದೃಶವಾಗುತ್ತದೆ. ಈ ರೀತಿ ಧರ್ಮಶಾಸ್ತ್ರ ವಚನವಿರುವುದರಿಂದ ಮದ್ಯ , ಕ್ಷೀರ ಮೊದಲಾದವುಗಳ ಪಾನ ಮಾಡುವ ಸಂದರ್ಭದಲ್ಲಿ ಶಬ್ದ ಸಹಿತವಾಗಿ ಕುಡಿಯುವುದು ತನ್ನ ದೋಷಗಳು ಎಂದು ತಿಳಿದು ಶಬ್ದ ಮಾಡದೆಯೇ ಕುಡಿಯಬೇಕು.

ಪ್ರಾತರನ್ಯಾಂಶ್ಚ ಪಶ್ಯೇಥಾ ಯೇ ಕುರ್ಯುಃ ಪ್ರಿಯಕರ್ಮ ತೇ ।
ಅಲಂಕಾರಮಥೋ ಭೋಜ್ಯಮತ ಊರ್ಧ್ವಂ ಸಮಾಚರ ॥೧೦॥

ಬೆಳಗಿನ ಕಾಲದಲ್ಲಿ ಯಾರು ನಿನಗೆ ಅತಿಪ್ರಿಯವಾದ ಕರ್ಮಗಳನ್ನು ಮಾಡುವರೋ ಅಂತಹ ಬೇರೆ ಜನರನ್ನೂ ನೋಡಬೇಕು. ಆನಂತರ ದೇಹಾಲಂಕಾರವನ್ನು, ಆಹಾರವನ್ನು ಸ್ವೀಕರಿಸಬೇಕು.

ಪಶ್ಯೇಥಾಶ್ಚ ತತೋ ಯೋಧಾನ್ ಸತತಂ ಪರಿಹರ್ಷಯನ್ ।
ದೂತಾನಾಂ ಚ ಚರಾಣಾಂ ಚ ಪ್ರದೋಷಸ್ತೇ ಸದಾ ಭವೇತ್ ॥೧೧॥

ಅನಂತರ ಸೈನಿಕರನ್ನು ನೋಡಬೇಕು. ಸೈನಿಕರನ್ನು ನೋಡುವಾಗ ಅವರನ್ನು ಯಾವಾಗಲೂ ಸಂತೋಷಪಡಿಸುತ್ತಿರಬೇಕು. ದೂತರು ಹಾಗೂ ಗುಪ್ತಚರರ ವಿಚಾರಣೆಗೆ ಸೂರ್ಯಾಸ್ತಕಾಲವು ಯಾವಾಗಲೂ ಪ್ರಶಸ್ಥವಾಗಿದೆ.

ಸದಾ ಚಾಪರರಾತ್ರಾಂತೇ ಭವೇತ್ ಕಾರ್ಯವಿನಿರ್ಣಯಃ ।
ಮಧ್ಯರಾತ್ರೇ ವಿಹಾರಸ್ತೇ ಮಧ್ಯಾಹ್ನೇ ಚ ಸದಾ ಭವೇತ್ ॥೧೨॥

ಪ್ರತಿನಿತ್ಯವೂ ನಡೆಸುವ ಕಾರ್ಯಗಳ ನಿರ್ಣಯವು ಯಾವಾಗಲೂ ಅಪರರಾತ್ರಿಯ ಕೊನೆಯ ಭಾಗದಲ್ಲಿ ಅಂದರೆ ಬ್ರಾಹ್ಮೀ ಮುಹೂರ್ತದಲ್ಲಿ ನಡೆಯುವುದು ಉತ್ತಮವಾಗಿದೆ. ನಿನಗೆ ಸಂಬಂಧಿಸಿದ ವಿಹಾರವು ಮಧ್ಯಾಹ್ನದಲ್ಲೂ, ಮಧ್ಯರಾತ್ರಿಯಲ್ಲೂ ಉತ್ತಮವಾಗಿದೆ.

ಸರ್ವೇ ತ್ವಾತ್ಯಾಯಿಕೇ ಕಾಲೇ ಕಾರ್ಯಾಣಾಂ ಭರತರ್ಷಭ ।
ತಥೈವ ಚಾಚರನ್ ಕಾಲೇ ತಿಷ್ಠೇಥಾ ಭೂರಿದಕ್ಷಿಣಃ ॥೧೩॥

ಹೇ ಭರತರ್ಷಭನೇ, ಕಾರ್ಯಗಳು ನಾಶವಾಗುವ ಸಂದರ್ಭ ಒದಗಿದಾಗ ಎಲ್ಲ ಕಾಲದಲ್ಲೂ, ಎಲ್ಲರನ್ನೂ ನೋಡಬಹುದಾಗಿದೆ. ಹೀಗೆ ಎಲ್ಲವನ್ನೂ ಯೋಗ್ಯ ಕಾಲದಲ್ಲಿ ಆಚರಿಸುತ್ತಾ ಬಹಳ ಸರಳನಾಗಿ ವರ್ತಿಸಬೇಕು.

ಚಕ್ರವತ್ ಕರ್ಮಣಾಂ ತಾತ ಪರ್ಯಾಯೋ ಹ್ಯೇಷ ನಿತ್ಯಶಃ ॥೧೪॥

ಹೇ ಮಗನೇ, ನಿತ್ಯವೂ ಈಗ ಹೇಳಿದ ಕರ್ಮವು ಕ್ರಮಬದ್ಧವಾಗಿ ಸುತ್ತುವ ಚಕ್ರದಂತೆ ನಿನ್ನ ಕರ್ಮಗಳಿಗೆ ಇರಲಿ.

ಕೋಶಸ್ಯ ಸಂಚಯೇ ಯತ್ನಂ ಕುರ್ವೀಥಾ ನ್ಯಾಯತಃ ಸದಾ ।
ದ್ವಿವಿಧಸ್ಯ ಮಹಾರಾಜ ವಿಪರೀತಂ ವಿವರ್ಜಯೇಃ ॥೧೫॥

ಹೇ ಮಹಾರಾಜನೇ, ಕೋಶದ ಅಭಿವೃದ್ಧಿಯನ್ನು ಅಗತ್ಯವಾಗಿ ಮಾಡಬೇಕು. ಆ ಸಮಯದಲ್ಲಿ ಯತ್ನಪೂರ್ವಕವಾಗಿ ಕೋಶಾಭಿವೃದ್ಧಿ ಹಾಗೂ ನ್ಯಾಯಮಾರ್ಗ ಇವೆರಡನ್ನೂ ಉಳಿಸಿಕೊಳ್ಳಬೇಕು. ಇದಕ್ಕೆ ವಿಪರೀತವಾದುದನ್ನು ವಿವರ್ಜಿಸಬೇಕು.

ಚಾರೈರ್ವಿದಿತ್ವಾ ಶತ್ರೂಂಶ್ಚ ಯೇ ತೇ ರಾಜ್ಯಾಂತರಾಯಿಣಃ ।
ತಾನಾಪ್ತೈಃ ಪುರುಷೈರ್ದೂರಾದ್ ಘಾತಯೇಥಾಃ ಪರಸ್ಪರಮ್ ॥೧೬॥

ಗೂಢಚಾರರಿಂದ ಯಾರು ಶತ್ರುಗಳು, ಯಾರು ರಾಜ್ಯಕ್ಕೆ ತೊಂದರೆಯನ್ನು ಕೊಡುವವರು ಎಂದು ಚೆನ್ನಾಗಿ ತಿಳಿದು, ಅಂತಹ ವ್ಯಕ್ತಿಗಳನ್ನು ಆಪ್ತರಾದ ಪುರುಷರಿಂದ ಅವರು ದೂರದಲ್ಲಿರುವಾಗಲೇ ಪರಸ್ಪರವಾಗಿ ಹೊಡೆದಾಡಿಕೊಳ್ಳುವಂತೆ ಮಾಡು.

ಕರ್ಮ ದೃಷ್ಟ್ವಾ ತತೋಽಮಾತ್ಯಾನ್ ಸಂಗಹ್ಣೀಯಾಃ ಕುರೂದ್ವಹ ।
ಕಾರಯೇಥಾಶ್ಚ ಕರ್ಮಾಣಿ ಯುಕ್ತಾಯುಕ್ತೈರನುಷ್ಠಿತೈಃ ॥೧೭॥

ಹೇ ಕುರೂದ್ವಹನೇ, ಮಂತ್ರಿಗಳನ್ನು ಸ್ವೀಕರಿಸುವ ಮೊದಲು ಅವರು ಮಾಡುವ ಕೆಲಸಗಳನ್ನು ನೋಡಿ ನಂತರ ಮಂತ್ರಿಗಳನ್ನಾಗಿ ಸ್ವೀಕರಿಸು. ನಂತರವೂ ಕೂಡ ಗೂಢಚರ್ಯೆಯಿಂದ ಅವರ ಯುಕ್ತಾಯುಕ್ತ ಕರ್ಮಗಳನ್ನು ತಿಳಿದು ನಂತರ ರಾಜಕಾರ್ಯಗಳನ್ನು ಅವರಿಂದ ಮಾಡಿಸು.

ಸೇನಾಪ್ರಣೇತಾ ಚ ಭವೇತ್ ತವ ತಾತ ದೃಢವ್ರತಃ ।
ಶೂರಃ ಕ್ಲೇಶಸಹಶ್ಚೈವ ಪ್ರಿಯಶ್ಚ ತವ ಮಾನವಃ ॥೧೮॥

ಹೇ ತಾತನೇ, ನಿನ್ನ ಸೇನಾಧಿಪತಿಯೂ ಕೂಡ ದೃಢವಾದ ನಿಶ್ಚಯವುಳ್ಳ ಶೂರನಾದ ಕಷ್ಟಗಳನ್ನು ಸಹಿಸುವ ಸ್ವಭಾವವುಳ್ಳ, ನಿನಗೆ ಪ್ರಿಯನಾದ ಮನುಷ್ಯನೇ ಆಗಿರಲಿ.

ಸರ್ವೇ ಜನಪದಾಶ್ಚೈವ ತವ ಕರ್ಮಾಣಿ ಪಾಂಡವ ।
ಪೌರೋಗವಾಶ್ಚ ಸಭ್ಯಾಶ್ಚ ಕುರ್ಯುರ್ಯಾನವಿಹಾರಿಣಃ ॥೧೯॥

ಹೇ ಪಾಂಡವನೇ, ಜೈತ್ರಯಾತ್ರೆ ರೂಪವಾದ, ವಿಹಾರವನ್ನು ಕೈಗೊಂಡ ನಿನಗೆ ಗ್ರಾಮೀಣ ಜನರು, ಅಡುಗೆಯವರು, ಸಭಾಸದರು ಇವರೆಲ್ಲರೂ ಅಗತ್ಯವಾದ ಕರ್ಮಗಳನ್ನು ಮಾಡುವಂತಿರಬೇಕು.

ಸ್ವರಂಧ್ರಂ ಪರರಂಧ್ರಂ ಚ ಸ್ವೇಷು ಚೈವ ಪರೇಷು ಚ ।
ಉಪಲಕ್ಷಯಿತವ್ಯಂ ತೇ ನಿತ್ಯಮೇವ ಯುಧಿಷ್ಠಿರ ॥೨೦॥

ಹೇ ಯುಧಿಷ್ಠಿರನೇ, ನಿನ್ನ ಬಲಹೀನತೆಯನ್ನು ನಿನ್ನಲ್ಲೂ, ಪರರ ಬಲಹೀನತೆಯನ್ನು ಪರರಲ್ಲೂ ನಿತ್ಯವೂ ಸರಿಯಾಗಿ ಗಮನಿಸುತ್ತಿರಬೇಕು.

ದೇಶಾಂತರಸ್ಥಾಶ್ಚ ನರಾ ವಿಕ್ರಾಂತಾಃ ಸರ್ವಕರ್ಮಸು ।
ಮಾತ್ರಾಭಿರನುರೂಪಾಭಿರನುಗ್ರಾಹ್ಯಾ ಹಿತಾಸ್ತ್ವಯಾ ॥೨೧॥

ಎಲ್ಲ ರೀತಿಯ ಕರ್ಮಗಳಲ್ಲಿ ವಿಶೇಷ ಪರಿಶ್ರಮವುಳ್ಳ ಮನುಷ್ಯರು ಬೇರೆ ದೇಶದಲ್ಲಿದ್ದರೂ ಅಥವಾ ದೇಶದೊಳಗಿದ್ದರೂ ನಿನ್ನಿಂದ ಅವರು ಪಟ್ಟಣದಲ್ಲಿ ಇರಿಸಲ್ಪಟ್ಟು, ಅವರ ಯೋಗ್ಯತೆಗೆ ಅನುಸಾರಿಯಾದ ಪ್ರಮಾಣದಲ್ಲಿ ಸಂಪತ್ತು ಮೊದಲಾದ ಅನುಕೂಲತೆಗಳನ್ನು ಮಾಡಿಕೊಡುವ ಮೂಲಕ ಅನುಗ್ರಹಿಸಬೇಕು.

ಗುಣಾನುಸಮ್ಮತಂ ಕಾರ್ಯಂ ವಿದುಷಾಂ ರಾಜಸತ್ತಮ ।
ಅವಿಚಾಲ್ಯಶ್ಚ ದೇಶಃ ಸ್ಯಾದ್ ಯಥಾ ಮೇರುರ್ಮಹಾಗಿರಿಃ ॥೨೨॥

ಹೇ ರಾಜಶ್ರೇಷ್ಠನೇ, ವಿದ್ವಾಂಸರಿಗೆ ಅವರ ಗುಣಕ್ಕೆ ಅನುಸಾರವಾಗಿ ಅವರಿಗೆ ಇಷ್ಟವಾದುದನ್ನೇ ಮಾಡಬೇಕು. ಹೀಗೆ ಮಾಡುವುದರಿಂದ ಮಹಾಗಿರಿಯಾದ ಮೇರುಪರ್ವತವು ಹೇಗೋ ಹಾಗೆಯೇ ಈ ದೇಶವನ್ನು ಯಾರಿಂದಲೂ ಅಲುಗಾಡಿಸಲೂ ಆಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ರಾಜವೃತ್ತೋಪದೇಶೋ ನಾಮ ದಶಮೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ.

ಧೃತರಾಷ್ಟ್ರಃ

ಮಂಡಲಾನಿ ಚ ಬುದ್ಧ್ಯೇಥಾಃ ಪರೇಷಾಮಾತ್ಮನಸ್ತಥಾ ।
ಉದಾಸೀನಗುಣಾನಾಂ ಚ ಮಧ್ಯಮಾನಾಂ ತಥೈವ ಚ ॥೧॥

ಚತುರ್ಣಾಂ ಶತ್ರುಜಾತಾನಾಂ ಸರ್ವೇಷಾಮಾತತಾಯಿನಾಮ್ ।
ಮಿತ್ರಂ ಚಾಮಿತ್ರಮಿತ್ರಂ ಚ ಬೋದ್ಧವ್ಯಂ ಶತ್ರುಕರ್ಶನ ॥೨॥

ಧೃತರಾಷ್ಟ್ರ– ಹೇ ಶತ್ರುಕರ್ಶನನೇ, ನೀನು ಶತ್ರುಗಳ ಮತ್ತು ನಿನ್ನ ಪಕ್ಷದ ಹಾಗೆಯೇ ಉದಾಸೀನಗುಣವುಳ್ಳವರ ಪಕ್ಷದ ಮತ್ತು ಮಧ್ಯಮರ, ರಾಜಕೀಯಕ್ಕೆ ಸಂಬಂಧಿಸಿದ ಮಂಡಲಗಳನ್ನು ತಿಳಿಯಬೇಕು. ಅಲ್ಲದೇ ನಾಲ್ಕು ರೀತಿಯ ಶತ್ರುಗಳ ಎಲ್ಲ ರೀತಿಯ ಆತತಾಯಿಗಳ ವಿಷಯವನ್ನೂ, ಮಿತ್ರರನ್ನೂ, ಹಾಗೆಯೇ ನಿನ್ನ ಶತ್ರುಗಳಿಗೆ ಮಿತ್ರರಾದವರನ್ನೂ ತಿಳಿದುಕೊಳ್ಳತಕ್ಕದ್ದು.

ವ್ಯಾಖ್ಯಾನ ವಿಶೇಷ– ಶತ್ರು , ಶತ್ರುವಿನ ಮಿತ್ರ, ಇಬ್ಬರನ್ನೂ ಜಯಿಸ ಬಯಸುವವ, ನಮ್ಮನ್ನು ಮಾತ್ರ ಸೋಲಿಸ ಬಯಸುವವ ಹೀಗೆ ನಾಲ್ಕು ಮಂದಿ ಶತ್ರುಗಳು.

ಸೇನಾಪ್ರಣೇತಾ ಚ ಭವೇತ್ ತವ ತಾತ ದೃಢವ್ರತಃ ।
ಶೂರಃ ಕ್ಲೇಶಸಹಶ್ಚೈವ ಪ್ರಿಯಶ್ಚ ತವ ಮಾನವಃ ॥೧೮॥

ಹೇ ತಾತನೇ, ನಿನ್ನ ಸೇನಾಧಿಪತಿಯೂ ಕೂಡ ದೃಢವಾದ ನಿಶ್ಚಯವುಳ್ಳ ಶೂರನಾದ ಕಷ್ಟಗಳನ್ನು ಸಹಿಸುವ ಸ್ವಭಾವವುಳ್ಳ, ನಿನಗೆ ಪ್ರಿಯನಾದ ಮನುಷ್ಯನೇ ಆಗಿರಲಿ.

ಸರ್ವೇ ಜನಪದಾಶ್ಚೈವ ತವ ಕರ್ಮಾಣಿ ಪಾಂಡವ ।
ಪೌರೋಗವಾಶ್ಚ ಸಭ್ಯಾಶ್ಚ ಕುರ್ಯುರ್ಯಾನವಿಹಾರಿಣಃ ॥೧೯॥

ಹೇ ಪಾಂಡವನೇ, ಜೈತ್ರಯಾತ್ರೆ ರೂಪವಾದ, ವಿಹಾರವನ್ನು ಕೈಗೊಂಡ ನಿನಗೆ ಗ್ರಾಮೀಣ ಜನರು, ಅಡುಗೆಯವರು, ಸಭಾಸದರು ಇವರೆಲ್ಲರೂ ಅಗತ್ಯವಾದ ಕರ್ಮಗಳನ್ನು ಮಾಡುವಂತಿರಬೇಕು.

ಸ್ವರಂಧ್ರಂ ಪರರಂಧ್ರಂ ಚ ಸ್ವೇಷು ಚೈವ ಪರೇಷು ಚ ।
ಉಪಲಕ್ಷಯಿತವ್ಯಂ ತೇ ನಿತ್ಯಮೇವ ಯುಧಿಷ್ಠಿರ ॥೨೦॥

ಹೇ ಯುಧಿಷ್ಠಿರನೇ, ನಿನ್ನ ಬಲಹೀನತೆಯನ್ನು ನಿನ್ನಲ್ಲೂ, ಪರರ ಬಲಹೀನತೆಯನ್ನು ಪರರಲ್ಲೂ ನಿತ್ಯವೂ ಸರಿಯಾಗಿ ಗಮನಿಸುತ್ತಿರಬೇಕು.

ದೇಶಾಂತರಸ್ಥಾಶ್ಚ ನರಾ ವಿಕ್ರಾಂತಾಃ ಸರ್ವಕರ್ಮಸು ।
ಮಾತ್ರಾಭಿರನುರೂಪಾಭಿರನುಗ್ರಾಹ್ಯಾ ಹಿತಾಸ್ತ್ವಯಾ ॥೨೧॥

ಎಲ್ಲ ರೀತಿಯ ಕರ್ಮಗಳಲ್ಲಿ ವಿಶೇಷ ಪರಿಶ್ರಮವುಳ್ಳ ಮನುಷ್ಯರು ಬೇರೆ ದೇಶದಲ್ಲಿದ್ದರೂ ಅಥವಾ ದೇಶದೊಳಗಿದ್ದರೂ ನಿನ್ನಿಂದ ಅವರು ಪಟ್ಟಣದಲ್ಲಿ ಇರಿಸಲ್ಪಟ್ಟು, ಅವರ ಯೋಗ್ಯತೆಗೆ ಅನುಸಾರಿಯಾದ ಪ್ರಮಾಣದಲ್ಲಿ ಸಂಪತ್ತು ಮೊದಲಾದ ಅನುಕೂಲತೆಗಳನ್ನು ಮಾಡಿಕೊಡುವ ಮೂಲಕ ಅನುಗ್ರಹಿಸಬೇಕು.

ಗುಣಾನುಸಮ್ಮತಂ ಕಾರ್ಯಂ ವಿದುಷಾಂ ರಾಜಸತ್ತಮ ।
ಅವಿಚಾಲ್ಯಶ್ಚ ದೇಶಃ ಸ್ಯಾದ್ ಯಥಾ ಮೇರುರ್ಮಹಾಗಿರಿಃ ॥೨೨॥

ಹೇ ರಾಜಶ್ರೇಷ್ಠನೇ, ವಿದ್ವಾಂಸರಿಗೆ ಅವರ ಗುಣಕ್ಕೆ ಅನುಸಾರವಾಗಿ ಅವರಿಗೆ ಇಷ್ಟವಾದುದನ್ನೇ ಮಾಡಬೇಕು. ಹೀಗೆ ಮಾಡುವುದರಿಂದ ಮಹಾಗಿರಿಯಾದ ಮೇರುಪರ್ವತವು ಹೇಗೋ ಹಾಗೆಯೇ ಈ ದೇಶವನ್ನು ಯಾರಿಂದಲೂ ಅಲುಗಾಡಿಸಲೂ ಆಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ರಾಜವೃತ್ತೋಪದೇಶೋ ನಾಮ ದಶಮೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ.

ಧೃತರಾಷ್ಟ್ರಃ

ಮಂಡಲಾನಿ ಚ ಬುದ್ಧ್ಯೇಥಾಃ ಪರೇಷಾಮಾತ್ಮನಸ್ತಥಾ ।
ಉದಾಸೀನಗುಣಾನಾಂ ಚ ಮಧ್ಯಮಾನಾಂ ತಥೈವ ಚ ॥೧॥

ಚತುರ್ಣಾಂ ಶತ್ರುಜಾತಾನಾಂ ಸರ್ವೇಷಾಮಾತತಾಯಿನಾಮ್ ।
ಮಿತ್ರಂ ಚಾಮಿತ್ರಮಿತ್ರಂ ಚ ಬೋದ್ಧವ್ಯಂ ಶತ್ರುಕರ್ಶನ ॥೨॥

ಧೃತರಾಷ್ಟ್ರ– ಹೇ ಶತ್ರುಕರ್ಶನನೇ, ನೀನು ಶತ್ರುಗಳ ಮತ್ತು ನಿನ್ನ ಪಕ್ಷದ ಹಾಗೆಯೇ ಉದಾಸೀನಗುಣವುಳ್ಳವರ ಪಕ್ಷದ ಮತ್ತು ಮಧ್ಯಮರ, ರಾಜಕೀಯಕ್ಕೆ ಸಂಬಂಧಿಸಿದ ಮಂಡಲಗಳನ್ನು ತಿಳಿಯಬೇಕು. ಅಲ್ಲದೇ ನಾಲ್ಕು ರೀತಿಯ ಶತ್ರುಗಳ ಎಲ್ಲ ರೀತಿಯ ಆತತಾಯಿಗಳ ವಿಷಯವನ್ನೂ, ಮಿತ್ರರನ್ನೂ, ಹಾಗೆಯೇ ನಿನ್ನ ಶತ್ರುಗಳಿಗೆ ಮಿತ್ರರಾದವರನ್ನೂ ತಿಳಿದುಕೊಳ್ಳತಕ್ಕದ್ದು.

ವ್ಯಾಖ್ಯಾನ ವಿಶೇಷ– ಶತ್ರು , ಶತ್ರುವಿನ ಮಿತ್ರ, ಇಬ್ಬರನ್ನೂ ಜಯಿಸ ಬಯಸುವವ, ನಮ್ಮನ್ನು ಮಾತ್ರ ಸೋಲಿಸ ಬಯಸುವವ ಹೀಗೆ ನಾಲ್ಕು ಮಂದಿ ಶತ್ರುಗಳು.

ತಥಾऽಮಾತ್ಯಾ ಜನಪದಾ ದುರ್ಗಾಣಿ ವಿವಿಧಾನಿ ಚ ।
ಕುರುಶ್ರೇಷ್ಠ ಭವಂತ್ಯೇಷಾಂ ಯಥಾದೇಶಂ ಯಥಾಸ್ವಕಮ್ ॥೩॥

ಪಂಚ ದ್ವಾದಶ ಕೌಂತೇಯ ರಾಜಾನೋ ವಿವಿಧಾತ್ಮಕಾಃ ।
ಮಂತ್ರಿಪ್ರಧಾನಾಶ್ಚ ಗುಣಾಃ ಷಟ್ ಚ ದ್ವಾದಶ ಚ ಸ್ಮೃತಾಃ ॥೪॥

ಏತನ್ಮಂಡಲಮಿತ್ಯಾಹುರಾಚಾರ್ಯಾ ನೀತಿಕೋವಿದಾಃ ।
ಅತ್ರ ಷಾಡ್ಗುಣ್ಯಮಾಯತ್ತಂ ಯುಧಿಷ್ಠಿರ ನಿಬೋಧ ತತ್ ॥೫॥

ಹೇ ಕುರುಶ್ರೇಷ್ಠನೇ, ಅದೇ ರೀತಿ ಮಂತ್ರಿಗಳು, ಬೇರೆ ಬೇರೆ ರೀತಿ ಪ್ರದೇಶದ ಜನರ ವಿಷಯಗಳು, ನಾನಾ ರೀತಿಯ ದುರ್ಗಗಳು ಇವೆಲ್ಲವೂ ಆಯಾಯಾ ಪ್ರದೇಶಕ್ಕೆ ಅನುಗುಣವಾಗಿ, ರಾಜರ ಇಚ್ಛೆಗೆ ಅನುಸಾರವಾಗಿ ಇರುತ್ತವೆ. ಅವನ್ನೂ ತಿಳಿದುಕೊಳ್ಳಬೇಕು. ಹೇ ಕೌಂತೇಯನೇ, ರಾಜರುಗಳು ವಿವಿಧ ಗುಣಗಳಿಂದ ಕೂಡಿರುತ್ತಾರೆ. ಪ್ರಧಾನವಾಗಿ ಐದು ಹಾಗೂ ಹನ್ನೆರಡು ಗುಣಗಳಿಂದ ಕೂಡಿರುವರು. ಅದೇ ರೀತಿ ಮಂತ್ರಿಗಳಲ್ಲಿ ಆರು ಹಾಗೂ ಹನ್ನೆರಡು ಪ್ರಧಾನ ಗುಣಗಳಿರಬೇಕು. ರಾಜನೀತಿಯನ್ನು ಬಲ್ಲ ಆಚಾರ್ಯರು ಇವೆಲ್ಲವನ್ನೂ ಸೇರಿಸಿ ಮಂಡಲ ಎಂಬ ಶಬ್ದದಿಂದ ಕರೆದಿದ್ದಾರೆ. ಹೇ ಯುಧಿಷ್ಠಿರನೇ, ಈ ರಾಜನ ಹದಿನೇಳು ಗುಣಗಳು ಹಾಗೂ ಮಂತ್ರಿಗಳ ಹದಿನೆಂಟು ಗುಣಗಳಲ್ಲೇ ಷಾಡ್ಗುಣ್ಯವು ನಿಂತಿದೆ.

ವ್ಯಾಖ್ಯಾನ ವಿಶೇಷ– ಸಹಾಯಭೂತರಾದ ಮಂತ್ರಿಗಳು, ಸಾಧನಕ್ಕೆ ಉಪಾಯ ಭೂತವಾದ ತರ್ಕಗಳು, ದೇಶವಿಭಾಗ, ಕಾಲವಿಭಾಗ, ಆಪತ್ತಿನ ಪ್ರತೀಕಾರ – ಈ ಐದು ಕಾರ್ಯಸಿದ್ಧಿಯ ಐದು ಅಂಗಗಳು.

ಅಧ್ಯಯನ, ಯಜನ, ದಾನ, ಶಸ್ತ್ರಾಸ್ತ್ರಕೌಶಲ, ಯುದ್ದದಲ್ಲಿ ಪಲಾಯನ ಮಾಡದಿರುವುದು, ಬಾಹ್ಯ ಹಾಗೂ ಆಂತರ ಶತ್ರುಗಳ ಜಯ, ಕ್ಷಮಾಶೀಲತೆ, ದಯಾಗುಣ, ಗಾಂಭೀರ್ಯ, ಸ್ಥಿರತೆ, ಶೌರ್ಯ, ಅಹಂಕಾರ ಇಲ್ಲದಿರುವುದು – ಈ ಹನ್ನೆರಡು, ಹಿಂದಿನ ಐದು ಅಂಗಗಳು ಸೇರಿ ಒಟ್ಟು ಹದಿನೇಳು ರಾಜಗುಣಗಳು. **'ಷಟ್ ಚ ದ್ವಾದಶ ಚ'** ಎಂಬಲ್ಲಿ ಷಟ್ ಚ – ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ, ಆಶ್ರಯ. **ಸಂಧಿ** ಎಂದರೆ ಕೇಳಿದ ವಸ್ತುವನ್ನು ಅಥವಾ ಧನವನ್ನು ಕೊಟ್ಟು ಸಂಧಾನ ಮಾಡಿಕೊಳ್ಳುವುದು. **ವಿಗ್ರಹ** ಎಂದರೆ ತಾನು ಇದ್ದಲ್ಲೇ ಇದ್ದು ಶತ್ರುಪಕ್ಷದಲ್ಲಿ ದಾಹ, ಶೌರ್ಯಾದಿಗಳನ್ನು ನಡೆಸುವುದು. ಅಂದರೆ ಅವರ ಬಲವನ್ನು ಅಪಹರಿಸುವುದು. **ಯಾನ** ಅಂದರೆ ಯುದ್ಧಕ್ಕಾಗಿಯೇ ಹೊರಡುವುದು. **ಆಸನ** ಅಂದರೆ ಪರರು ಅತಿಬಲಗಳೆಂದು ತಿಳಿದು ಯುದ್ಧಕ್ಕೆ

ಹೋಗದೆ ಸುಮ್ಮನಿರುವುದು. **ದ್ವೈಧ** ಎಂದರೆ ಎರಡೂ ಕಡೆಯಿಂದ ಶತ್ರುಗಳ ಬರುವ ಸಂದರ್ಭವಿದ್ದರೆ ಒಬ್ಬರ ಜೊತೆಗೆ ಸಂಧಿ ಮಾಡಿ ಇನ್ನೊಬ್ಬರೊಡನೆ ಯುದ್ಧಮಾಡುವುದು. **ಆಶ್ರಯ** ಎಂದರೆ ಬಲಿಷ್ಠರಾದ ಧರ್ಮನಿಷ್ಠರಾದ ರಾಜರನ್ನು ಆಶ್ರಯಿಸುವುದು. ಈ ಆರು ಮಂತ್ರಿಗುಣಗಳು. **ದ್ವಾದಶ** ಎಂಬಲ್ಲಿ ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿ ಎಂಬ ಶಕ್ತಿತ್ರಯ; ಶತ್ರುಜಯಸಿದ್ಧಿ, ಸ್ಥಾನಸಿದ್ಧಿ, ಕೋಶವೃದ್ಧಿ ಎಂಬ ಸಿದ್ಧಿತ್ರಯ; ಧರ್ಮೋದಯ, ಕೀರ್ತ್ಯುದಯ, ಜಯೋದಯ ಎಂಬ ಉದಯತ್ರಯಗಳು; ಚಾರಸಂಚಾರಣ, ಚೋರನಿವಾರಣ, ನ್ಯಾಯಾನ್ಯಾಯ ವಿಚಾರಣ ಎಂಬ ನೀತಿತ್ರಯಗಳು. ಹೀಗೆ ಹನ್ನೆರಡು ಮಂತ್ರಿಗುಣಗಳು. ಹಿಂದಿನ ಆರು ಗುಣಗಳು ಸೇರಿ ಒಟ್ಟು ಹದಿನೆಂಟು ಮಂತ್ರಿ ಗುಣಗಳು.

ಷಾಡ್ಗುಣ್ಯಂ– ಸ್ವರಕ್ಷಣೆ, ತನ್ನ ದೇಶದ ರಕ್ಷಣೆ, ತನ್ನ ಮಿತ್ರರ ರಕ್ಷಣೆ, ಶತ್ರುಸಂಹಾರ, ಶತ್ರು ದೇಶದ ಅಪಹಾರ, ಶತ್ರುಗಳಿಗೆ ಮಿತ್ರರಾದವರ ಅಪಹಾರ – ಇವು ರಾಜ್ಯದ ಷಾಡ್ಗುಣ್ಯಗಳು.

ವೃದ್ಧಿಕ್ಷಯೌ ಚ ವಿಜ್ಞೇಯೌ ಸ್ಥಾನಂ ಚ ಕುರುನಂದನ ।
ದ್ವಿಸಪ್ತತ್ಯಾಂ ಮಹಾಬಾಹೋ ತತಃ ಷಾಡ್ಗುಣ್ಯಚಾರಣಾ ॥೬॥

ಹೇ ಕುರುನಂದನನೇ, ಮಹಾಬಾಹುವೇ, ತನ್ನ ವೃದ್ಧಿ ಹಾಗೂ ಶತ್ರುಗಳ ಕ್ಷಯವು, ಅಲ್ಲದೇ ಸ್ವರಾಜ್ಯದ ಸ್ಥಿತಿಯು ಈ ಮೂರು ಎಪ್ಪತ್ತೆರಡು ಕಾರಣಗಳಿಂದ ಉಂಟಾಗುತ್ತದೆ. ಇವೆಲ್ಲವೂ ಸರಿಯಾಗಿದ್ದರೆ ಅದರಿಂದಲೇ ಹಿಂದೆ ಹೇಳಿದ ಷಾಡ್ಗುಣ್ಯವು ಸರಿಯಾಗಿರುತ್ತದೆ.

ವ್ಯಾಖ್ಯಾನ ವಿಶೇಷ– ದ್ವಿಸಪ್ತತ್ಯಾಂ– ಅರವತ್ನಾಲ್ಕು ಕಲೆಗಳು, ನಾಲ್ಕು ಉಪಾಯಗಳು, ನಾಲ್ಕು ರೀತಿಯ ಸೇನಾಂಗಗಳು – ಇವು ಸೇರಿ ಎಪ್ಪತ್ತೆರಡು ರಾಜ್ಯವೃದ್ಧಿಕರ ಕಾರಣಗಳು.

ಯಥಾ ಸ್ವಪಕ್ಷೋ ಬಲವಾನ್ ಪರಪಕ್ಷಸ್ತಥಾऽವರಃ ।
ವಿಗೃಹ್ಯ ಶತ್ರೂನ್ ಕೌಂತೇಯ ಯಾಯಾತ್ ಕ್ಷಿತಿಪತಿಸ್ತದಾ ॥೭॥

ಹೇ ಕೌಂತೇಯನೇ, ಯಾವೆಲ್ಲ ರೀತಿಯಿಂದ ಸ್ವಪಕ್ಷವು ಬಲಿಷ್ಠವಾಗಿದ್ದು ಅದೇ ರೀತಿಯಲ್ಲಿ ಶತ್ರುಪಕ್ಷವು ನಿಕೃಷ್ಟವಾಗಿದ್ದರೆ ಆಗ ಶತ್ರುಗಳೊಡನೆ ಯುದ್ಧಮಾಡಿ ರಾಜನು ದಂಡಯಾತ್ರೆಯನ್ನು ಕೈಗೊಳ್ಳಬೇಕು.

ಯದಾ ಸ್ವಪಕ್ಷಸ್ತ್ವವರಃ ತದಾ ಸಂಧಿಂ ಸಮಾಶ್ರಯೇಃ ।
ದ್ರವ್ಯಾಣಾಂ ಸಂಚಯೇ ಚೈವ ಯತ್ನಃ ಕಾರ್ಯಸ್ತದಾ ಭವೇತ್ ॥೮॥

ಯಾವಾಗ ತನ್ನ ಪಕ್ಷವು ಶತ್ರುಪಕ್ಷಕ್ಕಿಂತ ಕಡಿಮೆ ಎನಿಸುವುದೋ, ಆಗ ಸಂಧಿಯನ್ನೇ ಆಶ್ರಯಿಸು. ಆ ಸಂದರ್ಭದಲ್ಲಿ ಅಗತ್ಯವಾದ ಮೂಲಭೂತ ದ್ರವ್ಯಗಳ ಸಂಗ್ರಹದಲ್ಲೂ ಪ್ರಯತ್ನವನ್ನು ಮಾಡುತ್ತಿರಬೇಕು.

ಯದಾ ಸಮರ್ಥೋ ಯಾನಾಯ ನಚಿರೇಣ ಚ ಭಾರತ ।
ತದಾ ಸರ್ವಂ ವಿಧಾತವ್ಯಂ ಸ್ಥಾನೇ ಚೈವ ವಿಧಾಯಕಃ ॥೯॥

ಹೇ ಭಾರತನೇ, ಯಾವಾಗ ಯುದ್ಧಕ್ಕೆ ಹೊರಡಲು ಸಮರ್ಥನಾಗುವೆಯೋ ಆಗ ಕೂಡಲೇ ಅಂದರೆ ವಿಳಂಬಿಸದೆ ಯೋಗ್ಯಸ್ಥಾನದಲ್ಲಿ ಯೋಗ್ಯವ್ಯಕ್ತಿಗಳನ್ನು ಇರಿಸಿ ಎಲ್ಲವನ್ನೂ ವ್ಯವಸ್ಥಿತವಾಗಿ ನಡೆಸಬೇಕು.

ಭೂಮಿರಲ್ಪಫಲಾ ದೇಯಾ ವಿಪರೀತಸ್ಯ ಭಾರತ ॥೧೦॥

ಹಿರಣ್ಯರೂಪ್ಯಭೂಯಿಷ್ಠಮಮಿತ್ರಂ ಕ್ಷೀಣಕೋಶವತ್ ।
ವಿಪರೀತಂ ನ ಗೃಹ್ಣೀಯಾತ್ ಸ್ವಯಂ ಸಂಧಿವಿಶಾರದಃ ॥೧೧॥

ಹೇ ಭಾರತನೇ, ಸಂಧಿ ಮಾಡುವ ಸಂದರ್ಭ ಒದಗಿದರೆ ಪರಪಕ್ಷದವನಿಗೆ ಬಹಳ ಫಲವತ್ತಾಗಿರದ ಭೂಮಿಯನ್ನೇ ಕೊಡಬೇಕು. ಇದಕ್ಕೆ ವಿಪರೀತವಾಗಿ ತಾನು ತೆಗೆದುಕೊಳ್ಳುವ ಸಂದರ್ಭ ಒದಗಿದರೆ ಸಂಧಿಯ ವಿಷಯದಲ್ಲಿ ಬುದ್ಧಿವಂತಿಕೆ ಉಳ್ಳವನಾಗಿ ಚಿನ್ನ ಹಾಗೂ ಬೆಳ್ಳಿಯಿಂದ ಸಮೃದ್ಧವಾದ ಸಂಪತ್ತನ್ನೇ ಸ್ವೀಕರಿಸಬೇಕು. ಕೋಶಬಲವಿಲ್ಲದ ಶತ್ರುವನ್ನು ಸಂಧಿಗಾಗಿ ಸ್ವೀಕರಿಸಬಾರದು.

ಸಖ್ಯಾರ್ಥಂ ರಾಜಪುತ್ರಂ ವಾ ಲಿಪ್ಸೇಥಾ ಭರತರ್ಷಭ ।
ವಿಪರೀತೇ ಕೃತೇ ದೇಯಃ ಪುತ್ರಃ ಕಸ್ಯಾಂಚಿದಾಪದಿ ॥೧೨॥

ಹೇ ಭರತರ್ಷಭನೇ, ಅಂತಹ ಸಂದರ್ಭದಲ್ಲೂ ಮೈತ್ರಿಯನ್ನು ಬಯಸಿ ಬಂದರೆ ರಾಜಪುತ್ರನನ್ನು ಹಿರಣ್ಯಕ್ಕೆ ಬದಲಾಗಿ ಕೇಳಬೇಕು. ವಿಪರೀತವಾಗಿ ಯಾವುದಾದರೂ ಆಪತ್ತಿನ ಸಂದರ್ಭದಲ್ಲಿ ತಾನೇ ಸಖ್ಯವನ್ನು ಬಯಸಿ ಹೋಗುವುದಿದ್ದರೆ ಮಗನನ್ನು ಕೊಡಬಹುದಾಗಿದೆ.

ತಸ್ಯ ಪ್ರಮೋಕ್ಷೇ ಯತ್ನಂ ಚ ಕುರ್ಯಾಃ ಸೋಪಾಯಮಾತ್ಮವತ್ ।
ಪ್ರಕೃತೀನಾಂ ಚ ಕೌಂತೇಯ ರಾಜಾ ದೀನಾನ್ ವಿಭಾವಯೇತ್ ॥೧೩॥

ಹೇ ಕೌಂತೇಯನೇ, ಮಗನನ್ನು ಸಂಧಿಗಾಗಿ ಕೊಟ್ಟಿದ್ದರೆ ಅವನನ್ನು ಬಿಡಿಸುವುದಕ್ಕಾಗಿ ಉತ್ತಮವಾದ ಸತ್ವವುಳ್ಳ, ಒಳ್ಳೆಯ ಉಪಾಯಗಳಿಂದ ಕೂಡಿರುವ ಪ್ರಯತ್ನವನ್ನೂ ಮಾಡಬೇಕು. ಪ್ರಕೃತಿಭೂತರಾದ ಪ್ರಜೆಗಳ ಮಧ್ಯದಲ್ಲಿ ದೀನ, ದಲಿತ, ದರಿದ್ರರನ್ನೂ ರಾಜನು ಆದರಿಸಬೇಕು.

ಕ್ರಮೇಣ ಯುಗಪದ್ ವೃದ್ಧಂ ವ್ಯಸನಾನಾಂ ಬಲಾಬಲಮ್ ।
ಪೀಡನಂ ಸ್ತಂಭನಂ ಚೈವ ಕೋಶಭಂಗಸ್ತಥೈವ ಚ ॥೧೪॥

ಕಾರ್ಯಂ ಯತ್ನೇನ ಶತ್ರೂಣಾಂ ಸ್ವರಾಷ್ಟ್ರಂ ರಕ್ಷತಾ ಸ್ವಯಮ್ ॥೧೫॥

ತನ್ನ ರಾಷ್ಟ್ರವನ್ನು ರಕ್ಷಿಸುವ ಹೊಣೆಯುಳ್ಳ ರಾಜನು ತಾನೇ ಸ್ವತಃ ಶತ್ರುಗಳಿಂದಾಗುವ ವಿಪತ್ತುಗಳ ಬಲಾಬಲವನ್ನು ತಿಳಿದು, ಅವರ ದಮನಕ್ಕೋಸ್ಕರ ಕ್ರಮವಾಗಿ ಅಥವಾ ಜೊತೆಯಾಗಿ ಬಹಳವಾದ ಪೀಡೆಯನ್ನಾಗಲಿ, ಬಲಸ್ತಂಭನವನ್ನಾಗಲಿ, ಕೋಶ ಭಂಗವನ್ನಾಗಲಿ ಪ್ರಯತ್ನಪೂರ್ವಕವಾಗಿ ಮಾಡಬೇಕು.

ನ ಚ ಹಿಂಸ್ಯೋಽಭ್ಯುಪಗತಃ ಸಾಮಂತೋ ವೃದ್ಧಿಮಿಚ್ಛತಾ ।
ಕೌಂತೇಯ ತದ್ಧಿತಂ ತೇ ಸ್ಯಾತ್ ಪೃಥಿವೀಂ ವಿಜಿಗೀಷತಃ ॥೧೬॥

ಹೇ ಕೌಂತೇಯನೇ, ವೃದ್ಧಿಯನ್ನು ಬಯಸುವ ನಿನ್ನಿಂದ ಸಾಮಂತರಾಜನು ಹಿಂಸೆಗೊಳಗಾಗುವುದು ಒಪ್ಪಿಗೆಯಾಗತಕ್ಕದ್ದಲ್ಲ. ಏಕೆಂದರೆ ಸಾಮಂತನಿಗೆ ಹಿತವಾಗುವುದರಿಂದ ಪೃಥಿವಿಯನ್ನು ಗೆಲ್ಲಬಯಸುವ ನಿನಗೂ ಹಿತವಾಗುವುದು.

ಗುಣಾಭೇದೇನ ವೈ ಯೋಗಂ ಗಚ್ಛೇಥಾಃ ಸಹ ಮಂತ್ರಿಭಿಃ ।
ಆತ್ಮಸಾತ್ಕರಣೇ ನಿತ್ಯಂ ಪಾಲನಾನಿ ಗೃಹೇ ತಥಾ ॥೧೭॥

ಮಂತ್ರಿಗಳ ಜೊತೆಗೆ ವ್ಯವಹರಿಸುವಾಗ ನಿತ್ಯವೂ ಅವರನ್ನು ಪೂರ್ತಿಯಾಗಿ ನಿನ್ನ ಅಧೀನದಲ್ಲಿ ಇರಿಸಿಕೊಳ್ಳುವುದಕ್ಕಾಗಿ ಅವರಲ್ಲಿರುವ ಗುಣಗಳಿಗೆ ಸರಿಯಾದ

ಗುಣಗಳನ್ನು ರೂಢಿಸಿಕೊಂಡು ಅವರ ಜೊತೆ ನೀನು ಮುಂದುವರೆಯಬೇಕು. ಮನೆಯ ಜನರನ್ನು ಪಾಲಿಸುವಾಗಲೂ ಇದೇ ರೀತಿ ನಡೆದುಕೊಳ್ಳಬೇಕು.

ದುಬರ್ಲಾಶ್ಚೈವ ಸತತಂ ನಾವಷ್ಟಭ್ಯಾ ಬಲೀಯಸಾ ।
ತಿಷ್ಠೇಥಾ ರಾಜಶಾರ್ದೂಲ ವೈತಸೀಂ ವೃತ್ತಿಮಾಶ್ರಿತಃ ॥೧೮॥

ಹೇ ರಾಜಶಾರ್ದೂಲನೇ, ನೀನು ದುರ್ಬಲನಾಗಿದ್ದಾಗ ಬಲಿಷ್ಠರ ಜೊತೆಗೆ ವಿರೋಧದಿಂದ ಕೂಡಿಕೊಂಡು ಯಾವತ್ತೂ ಇರಬಾರದು. ವೈತಸದಂತೆ ನಡತೆಯನ್ನು ರೂಢಿಸಿಕೊಂಡು ಇರಬೇಕು.

ವ್ಯಾಖ್ಯಾನ ವಿಶೇಷ– ವೈತಸ ಎಂದರೆ ಹಬ್ಬೇಗಿಡ. ನದಿಯ ಪ್ರವಾಹ ಜೋರಾಗಿ ಬಂದಾಗ ಹಬ್ಬೇ ಗಿಡವು ತಾನು ವಿನಮ್ರವಾಗಿ ತನ್ನನ್ನು ಉಳಿಸಿಕೊಳ್ಳುತ್ತದೆ. ಪ್ರವಾಹದಲ್ಲಿ ಕೊಚ್ಚಿ ಹೋಗುವುದಿಲ್ಲ. ಹಾಗೆಯೇ ಬಲಿಷ್ಠರೊಂದಿಗೆ ವಿನಮ್ರನಾಗಿದ್ದು, ಅವರಿಂದ ರಕ್ಷಣೆಯನ್ನು ಪಡೆಯಬೇಕು ಎಂದು ಭಾವ.

ಯದ್ಯೇವಮಭಿಯಾಯಾಸ್ತಾ ್ವಂ ಬಲವಾನ್ ದುರ್ಬಲಂ ನೃಪ ।
ಸಾಮಾದಿಭಿರುಪಾಯೈಸ್ತಂ ಕ್ರಮೇಣ ವಿನಿವರ್ತಯ ॥೧೯॥

ಹೇ ರಾಜನೇ, ನೀನು ವಿನಮ್ರನಾಗಿದ್ದಾಗಲೂ ದುರ್ಬಲನಾದ ನಿನ್ನನ್ನು ಬಲಿಷ್ಠನಾದ ರಾಜ ಯುದ್ಧದಲ್ಲಿ ಸೋಲಿಸಲಿಕ್ಕಾಗಿ ಬಂದರೆ ಕ್ರಮವಾಗಿ ಸಾಮವೇ ಮೊದಲಾದ ಉಪಾಯಗಳಿಂದ ಅವನನ್ನು ಹಿಂದಿರುಗಿಸು.

ಅಶಕ್ನುವಂಸ್ತು ಯುದ್ಧಾಯ ನಿಷ್ಪತೇಃ ಸಹ ಮಂತ್ರಿಭಿಃ ।
ಕೋಶೇನ ಪೌರೈರ್ದಂಡೇನ ಯೇ ಚಾನ್ಯೇ ಪ್ರಿಯಕಾರಿಣಃ ॥೨೦॥

ಯುದ್ಧಕ್ಕೆ ನೀನು ಶಕ್ತನಾಗಿಲ್ಲದಿದ್ದರೆ ಮಂತ್ರಿಗಳ ಜೊತೆಗೂಡಿ ವಿಮರ್ಶಿಸಿ ಕೋಶದಿಂದಾಗಲಿ, ಪೌರರಿಂದಾಗಲಿ, ಸೈನ್ಯದಿಂದಾಗಲಿ ಅಥವಾ ಪರರಾಜನಿಗೆ ಪ್ರಿಯವಾದ ಬೇರೆ ಯಾವ ವಸ್ತುಗಳಿವೆಯೋ ಅವುಗಳನ್ನು ನೀಡುವ ಮೂಲಕವಾಗಲಿ ಸಂಧಾನದ ಮೂಲಕ ಈ ಸಂಕಟದಿಂದ ಹೊರಗೆ ಬಾ.

ಅಸಂಭವೇ ತು ಸರ್ವಸ್ಯ ಯಥಾ ಮುಖ್ಯೇನ ನಿಷ್ಪತೇತ್ ।
ಕ್ರಮೇಣಾನೇನ ಮೋಕ್ಷಃ ಸ್ಯಾಚ್ಛರೀರಮಪಿ ಕೇವಲಮ್ ॥೨೧॥

ಯಾವುದೇ ರೀತಿಯ ಸಂಧಾನಯತ್ನವು ಅಸಂಭವವಾದಾಗ, ರಾಜ್ಯದಲ್ಲಿ ಸಾಮಾದಿಗಳಲ್ಲಿ ಮುಖ್ಯವಾದ ದಂಡದಿಂದಲೇ ಶರಣು ಹೊಂದಬೇಕು. ಅಂದರೆ ಯುದ್ಧವನ್ನೇ ಮಾಡಬೇಕು. ಈ ಕ್ರಮದಿಂದ ಮೋಕ್ಷವೇ ಆಗುವುದು. ಈ ಶರೀರವಾದರೂ ನಶ್ವರವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ರಾಜನೀತೌ ಏಕಾದಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ.

ಧೃತರಾಷ್ಟ್ರಃ

ಸಂಧಿವಿಗ್ರಹಮಪ್ಯತ್ರ ಪಶ್ಯೇಥಾ ರಾಜಸತ್ತಮ ।
ದ್ವಿಯೋನಿಂ ತ್ರಿವಿಧೋಪಾಯಂ ಬಹುಕಲ್ಪಂ ಯುಧಿಷ್ಠಿರ ॥೧॥

ಧೃತರಾಷ್ಟ್ರ- ಹೇ ರಾಜಸತ್ತಮನಾದ ಯುಧಿಷ್ಠಿರನೇ, ಈ ರಾಜಧರ್ಮದಲ್ಲಿ ಸಂಧಿ ಹಾಗೂ ವಿರೋಧ ಈ ಎರಡೂ ಕೂಡ ಎರಡು ರೀತಿಯ ಕಾರಣಗಳಿಂದ ಉಂಟಾಗುತ್ತದೆ ಹಾಗೂ ಮೂರು ರೀತಿಯ ಉಪಾಯಗಳಿಂದ ಕೂಡಿರುತ್ತದೆ. ಅಲ್ಲದೇ ನಾನಾ ರೀತಿಯ ಪ್ರಕಾರಗಳನ್ನು ಒಳಗೊಂಡಿರುತ್ತದೆ. ಇವೆಲ್ಲವನ್ನೂ ನೀನು ತಿಳಿದುಕೊಳ್ಳಬೇಕು.

ವ್ಯಾಖ್ಯಾನ ವಿಶೇಷ- ದ್ವಿಯೋನಿ - ಎರಡು ರೀತಿಯಾದ ಕಾರಣವುಳ್ಳದ್ದು. ಸಂಧಿಗೆ ಕಾರಣ ತಾನು ದುರ್ಬಲನಾಗಿರುವುದು, ಶತ್ರುವು ಪ್ರಬಲನಾಗಿರುವುದು ಇವೆರಡು. ಯುದ್ಧಕ್ಕೆ ಕಾರಣ ತಾನು ಪ್ರಬಲನಾಗಿದ್ದು, ಶತ್ರುವು ದುರ್ಬಲನಾಗಿರುವುದು ಇವೆರಡು. ತ್ರಿವಿಧೋಪಾಯಂ ಎಂದರೆ ಮೂರು ರೀತಿಯ ಉಪಾಯಗಳಿಂದ ಕೂಡಿದ್ದು. ಸಂಧಿಯಾಗಬೇಕಾದರೆ ಸಾಮವಚನ, ಕೇಳಿದ ದ್ರವ್ಯವನ್ನು ಕೊಡುವುದು ಹಾಗೂ ಸಂಬಂಧವನ್ನು ಉಂಟುಮಾಡಿಕೊಳ್ಳುವುದು. ಯುದ್ಧಕ್ಕೆ ಮೂರು ರೀತಿಯ ಉಪಾಯ- ಯುದ್ಧಕ್ಕೆ ಹೊರಡುವುದು, ಕಾಲದ ಪ್ರತೀಕ್ಷೆ ಮಾಡಿಕೊಂಡು ಇದ್ದಲ್ಲೇ ಇರುವುದು, ಅಸ್ತ್ರ-ಶಸ್ತ್ರಾದಿಗಳಿಂದ ದಂಡನೆ ನೀಡುವುದು ಹೀಗೆ ಮೂರು ಉಪಾಯಗಳು.

ರಾಜೇಂದ್ರ ಪರ್ಯುಪಾಸೀಥಾ ನೀತ್ವಾ ದ್ವಿವಿಧಮಾತ್ಮನಾ ।
ತುಷ್ಟಪುಷ್ಟಬಲಂ ಶತ್ರುಮ್ ಅರ್ಥವಾನಿತಿ ಚ ಸ್ಮರೇತ್ ॥೨॥

ಪರ್ಯುಪಾಸನಕಾಲೇ ತು ವಿಪರೀತಂ ವಿಧೀಯತೇ ।
ಆಮರ್ದಕಾಲೇ ರಾಜೇಂದ್ರ ವ್ಯವಸಾಯಸ್ತತೋಽಪರಃ ॥೩॥

ಹೇ ರಾಜೇಂದ್ರನೇ, ತನ್ನಿಂದ ನಡೆಸಲ್ಪಡಬೇಕಾದ ಎರಡಂಶವನ್ನೂ ಚೆನ್ನಾಗಿ ತಿಳಿದು ಪರರಾಜನೊಂದಿಗೆ ವ್ಯವಹರಿಸಬೇಕು. ಪರರು ತನ್ನೊಡನೆ ಶತ್ರುವಾಗಿಯೇ ಇರಲು ಬಯಸುವವನಾದರೆ ಅವನು ಪರಿಪುಷ್ಟವಾದ, ಸಂತುಷ್ಟವಾದ ಸೈನ್ಯಬಲವುಳ್ಳವನೆಂದೂ, ಹಾಗೆಯೇ ಬೇಕಾದಷ್ಟು ಸಂಪತ್ತುಳ್ಳವನೆಂದೂ ಚಿಂತಿಸಬೇಕು. ಪರರಾಜನನ್ನೇ ಸಂಧ್ಯಾದಿಗಳಿಂದ ಅನುಸರಿಸಿಕೊಂಡು ಹೋಗುವ ಸಂದರ್ಭ ಬಂದಾಗ ಅವನನ್ನು ಅನುಸರಿಸುವ ಕಾಲದಲ್ಲೇ ಅವನ ತುಷ್ಟಪುಷ್ಟವಾದ ಬಲವನ್ನೂ, ಅವನ ಸಂಪತ್ತನ್ನೂ ಕಡಿಮೆಗೊಳಿಸಲು ಪ್ರಯತ್ನಿಸಬೇಕು. ಹೀಗೆ ಅವನು ಬಲವನ್ನೂ, ಸಂಪತ್ತನ್ನೂ ಕಳೆದುಕೊಂಡ ಸಂದರ್ಭದಲ್ಲಿ ಅವನನ್ನು ಮರ್ದಿಸುವ ಕಾಲ ಬಂದಾಗ ಹೇ ರಾಜೇಂದ್ರನೇ, ಬೇರೆ ರೀತಿಯ ಪ್ರಯತ್ನವನ್ನೂ ಮಾಡಬೇಕು.

ವಮನಂ ಭೇದನಂ ಚೈವ ಶತ್ರೂಣಾಂ ಕಾರಯೇತ್ ತತಃ ।
ಕರ್ಷಣಂ ಭೀಷಣಂ ಚೈವ ಯುದ್ಧೇ ಚೈವ ಬಹುಕ್ಷಯಮ್ ॥೪॥

ಅನಂತರ ಶತ್ರುಗಳಿಗೆ ಪೀಡನೆಯನ್ನೂ, ಅವರ ಮತ್ತು ಅವರ ಮಿತ್ರರ ಜೊತೆಗಿರುವ ಸ್ನೇಹದ ಭೇದನವನ್ನೂ, ಅವರಲ್ಲಿರುವ ಸಂಪತ್ತುಗಳ ಅಪಹಾರವನ್ನೂ ಹಾಗೆಯೇ ನಮ್ಮ ಕುರಿತು ಅವರಲ್ಲಿ ಭಯಹುಟ್ಟಿಸುವಿಕೆಯನ್ನೂ ಅಲ್ಲದೇ ಯುದ್ಧದ ಮೂಲಕ ಅವರಿಗೆ ಬಹುವಾದ ನಷ್ಟವನ್ನೂ ಮಾಡಬೇಕು.

ಪ್ರಯಾಸ್ಯಮಾನಸ್ತು ನೃಪಃ ತ್ರಿವಿಧಂ ಪರಿಚಿಂತಯೇತ್ ।
ಆತ್ಮನಶ್ಚೈವ ಶತ್ರೋಶ್ಚ ಶಕ್ತಿಂ ಶಾಸ್ತ್ರವಿಶಾರದಃ ॥೫॥

ಶಾಸ್ತ್ರವಿಶಾರದನಾದ ರಾಜನು ಯುದ್ಧಕ್ಕಾಗಿ ಹೊರಡುವುದಿದ್ದರೆ ತನ್ನ ಮತ್ತು ಶತ್ರುವಿನ ಮೂರು ರೀತಿಯ ಶಕ್ತಿಗಳನ್ನು ಸರಿಯಾಗಿ ಪರಿಶೀಲಿಸಬೇಕು.

ಉತ್ಸಾಹಪ್ರಭುಶಕ್ತಿಭ್ಯಾಂ ಮಂತ್ರಶಕ್ತ್ಯಾ ಚ ಭಾರತ ।
ಉಪಪನ್ನೋ ನೃಪೋ ಯಾಯಾದ್ ವಿಪರೀತಮತೋಽನ್ಯಥಾ ॥೬॥

ಹೇ ಭಾರತನೇ, ಉತ್ಸಾಹಶಕ್ತಿ, ಪ್ರಭುಶಕ್ತಿ ಹಾಗೂ ಮಂತ್ರಶಕ್ತಿ - ಈ ಮೂರು ಶಕ್ತಿಗಳಿಂದ ಕೂಡಿಕೊಂಡ ರಾಜನೇ ಯುದ್ಧಕ್ಕೆ ಹೊರಡಬೇಕು. ಇವುಗಳಿಲ್ಲವಾದರೆ ಯುದ್ಧಕ್ಕೆ ಹೊರಡಲೇ ಬಾರದು.

ಆದದೀತ ಬಲಂ ರಾಜಾ ಮೌಲಂ ಮಿತ್ರಬಲಂ ತಥಾ ।
ಅಟವೀಬಲಂ ಭೃತಂ ಚೈವ ತಥಾ ಶ್ರೇಣೀಬಲಂ ಚ ಯತ್ ॥೭॥

ರಾಜನಾದವನು ಮೂಲಧನವಾದ ಧನಬಲವನ್ನೂ, ಮಿತ್ರರ ಬಲವನ್ನೂ, ಅರಣ್ಯದ ಬಲವನ್ನೂ, ವೇತನ ನೀಡುವುದರ ಮೂಲಕ ರಕ್ಷಿತವಾದ ಸೈನ್ಯ ಬಲವನ್ನೂ ಹಾಗೆಯೇ ಬೇರೆ ಬೇರೆ ಗ್ರಾಮಗಳಲ್ಲಿರುವ ಅವಾಂತರಸೈನ್ಯಬಲವನ್ನೂ ಸಂಗ್ರಹಿಸಿಕೊಳ್ಳಬೇಕು.

ಮಿತ್ರಾಮಿತ್ರಬಲಂ ರಾಜನ್ ಯಾಯಾದ್ ವೃದ್ಧ್ಯುದಯೇ ಧೃತಃ ।
ತತ್ರ ಮಿತ್ರಬಲಂ ರಾಜನ್ ಮೌಲೇನ ಚ ವಿಶಿಷ್ಯತೇ ।
ಶ್ರೇಣೀಬಲಂ ಭೃತಂ ಚೈವ ತುಲ್ಯ ಏವೇತಿ ಮೇ ಮತಿಃ ॥೮॥

ಹೇ ರಾಜನೇ, ಸಂಪತ್ತಿನ ವೃದ್ಧಿಯು ಪ್ರಾಪ್ತವಾದಾಗ ನಿಶ್ಚಯವಾಗಿಯೂ ತನಗೆ ಈಗಾಗಲೇ ಮಿತ್ರರಾಗಿರುವ ರಾಜರ ಮಿತ್ರರ ಸೈನ್ಯವನ್ನೂ ಹೊಂದಬೇಕು. ಈ ಹಿಂದೆ ಹೇಳಿದ ಬಲಗಳಲ್ಲಿ ಮಿತ್ರಬಲವು ಧನಬಲಕ್ಕಿಂತಲೂ ವಿಶಿಷ್ಟವಾಗಿದೆ. ಹೇ ರಾಜನೇ, ಅದೇ ರೀತಿ ಗ್ರಾಮೀಣ ಸೈನ್ಯಗಳ ಬಲವೂ, ವೇತನದಿಂದ ರಕ್ಷಿತವಾದ ಸೈನ್ಯಬಲವೂ ಸಮಾನವಾಗಿವೆ ಎಂದು ನನ್ನ ಅಭಿಪ್ರಾಯ.

ಚೋರಾಟವಿಬಲಂ ಚೈವ ಪರಸ್ಪರಬಲಂ ನೃಪ ।
ವಿಜ್ಞೇಯಂ ಬಲಕಾಲೇಷು ರಾಜ್ಞಾ ಕಾಲ ಉಪಸ್ಥಿತೇ ॥೯॥

ಚೋರಬಲ ಹಾಗೂ ಅರಣ್ಯಬಲಗಳು ಪರಸ್ಪರ ಬಲವನ್ನು ಪಡೆದುಕೊಂಡಿವೆ. ಹೇ ರಾಜನೇ, ಯುದ್ಧಕಾಲವು ಸಮೀಪಿಸಿದಾಗ ಬಲವನ್ನು ಒಗ್ಗೂಡಿಸುವ ಸಂದರ್ಭದಲ್ಲಿ ಇವೆಲ್ಲವನ್ನೂ ರಾಜನು ತಿಳಿದುಕೊಳ್ಳಬೇಕು.

ಆಪದಶ್ಚೈವ ಬೋದ್ಧವ್ಯಾ ಬಹುರೂಪಾ ನರಾಧಿಪ ।
ಭವಂತಿ ರಾಜನ್ ಕೌರವ್ಯ ಯಾಸ್ತಾಃ ಪ್ರಥಮತಃ ಶೃಣು ॥೧೦॥

ಹೇ ನರಾಧಿಪನಾದ ಕೌರವ್ಯನೇ, ರಾಜನೇ, ಆಪತ್ತುಗಳು ಬಹುರೂಪವಾಗಿವೆ. ಯಾವೆಲ್ಲ ಆಪತ್ತುಗಳು ಬರಬಹುದೋ ಅವೆಲ್ಲವನ್ನೂ ಮೊದಲಾಗಿ ಕೇಳಿ ತಿಳಿದುಕೊಳ್ಳಬೇಕು.

ವಿಕಲ್ಪಾ ಬಹವೋ ರಾಜನ್ನಾಪದಾಂ ಪಾಂಡುನಂದನ ।
ಸಾಮಾದಿಭಿರುಪನ್ಯಸ್ಯ ಗಮಯೇತ್ ತಾನ್ ನೃಪಃ ಸದಾ ॥೧೧॥

ಹೇ ಪಾಂಡುನಂದನನಾದ ರಾಜನೇ, ಆಪತ್ತುಗಳಿಗೆ ನಾನಾ ರೀತಿಯ ಪರಿಹಾರೋಪಾಯಗಳಿವೆ. ಅವೆಲ್ಲವನ್ನೂ ರಾಜನಾದವನು ಯಾವಾಗಲೂ ಸಾಮವೇ ಮೊದಲಾದ ಉಪಾಯಗಳಿಂದ ಹೋಗಲಾಡಿಸಬೇಕು.

ಯಾತ್ರಾಂ ಯಾಯಾದ್ ಬಲೈರ್ಯುಕ್ತೋ ರಾಜಾ ಷಡ್ಭಿಃ ಪರಂತಪ ।
ಸಂಯುಕ್ತೋ ದೇಶಕಾಲಾಭ್ಯಾಂ ಬಲೈರಾತ್ಮಗುಣೈಸ್ತಥಾ ॥೧೨॥

ಹೇ ಪರಂತಪನೇ, ರಾಜನಾದವನು ಆರು ರೀತಿಯ ಬಲಗಳಿಂದ ಕೂಡಿಕೊಂಡು ಸರಿಯಾದ ದೇಶ ಹಾಗೂ ಕಾಲಗಳಿಂದ ಕೂಡಿಕೊಂಡವನಾಗಿ, ತನ್ನಂತೆಯೇ ಹೋರಾಡುವ ಗುಣವುಳ್ಳ ಸೈನಿಕರಿಂದಲೂ ಕೂಡಿಕೊಂಡು ಯುದ್ಧಕ್ಕಾಗಿ ಹೊರಡಬೇಕು.

ವ್ಯಾಖ್ಯಾನ ವಿಶೇಷ– ಆರು ರೀತಿಯ ಬಲಗಳು ಎಂದರೆ ಹಸ್ತಿಬಲ, ಅಶ್ವಬಲ, ರಥಬಲ, ಪದಾತಿ ಬಲ, ಧನಬಲ ಹಾಗೂ ಬುದ್ಧಿ ಬಲ.

ತುಷ್ಟಪುಷ್ಟಬಲೋ ರಾಜಾ ಯಾಯಾದ್ ವೃದ್ಧ್ಯುದಯೇ ಧೃತಃ ।
ಆಹೂತಶ್ಚಾಪ್ಯಥೋ ಯಾಯಾದ್ ಅಮೃತಾದಪಿ ಪಾರ್ಥಿವ ॥೧೩॥

ಹೇ ಪಾರ್ಥಿವನೇ, ರಾಜನಾದವನು ಬಹುಮಾನಾದಿಗಳಿಂದ ತುಷ್ಟರಾದ, ದೈಹಿಕವಾಗಿ ಪುಷ್ಟರಾದ ಸೈನ್ಯವುಳ್ಳವನಾಗಿದ್ದು, ಅಗತ್ಯವಾದ ಎಲ್ಲ ಸಂಪತ್ತುಗಳೂ ಬಹಳವಾಗಿ ಪ್ರಾಪ್ತಿಯಾಗಿದ್ದಾಗ ಯುದ್ಧವನ್ನು ನಿಶ್ಚಯಿಸಿ ಹೊರಡಬೇಕು. ಆದರೆ ಶತ್ರುರಾಜರು ಯುದ್ಧಕ್ಕೋಸ್ಕರ ಆಹ್ವಾನಿಸಿದ್ದರೆ ಯಾವ ವಿಷಯವನ್ನೂ ಗಮನಿಸದೆ ಅಮೃತಸದೃಶವಾದ ಭೋಜನವನ್ನು ಬಿಟ್ಟಾದರೂ ಯುದ್ಧಕ್ಕೆ ಹೊರಡಬೇಕು.

ಸುಬಂಧಿನೀಂ ವಾಜಿರಥಪ್ರಧಾನೋ
ಮಹಾವೃಕ್ಷಾಂ ಸಂವೃತಃ ಕೂಲರೋಧಾಮ್ ।
ಪದಾತಿನಾಗೈರ್ಬಹುಕರ್ದಮಾಂ ಚ
ಸ್ಥೂಲಶ್ಮಕಾಂ ತೋಯವತೀಂ ಚ ಯಾಯಾತ್ ॥೧೪॥

ಮಾರ್ಗಮಧ್ಯದಲ್ಲಿ ದೊಡ್ಡ ದೊಡ್ಡ ವೃಕ್ಷಗಳಿಂದ ಕೂಡಿದ ತೀರಗಳುಳ್ಳ, ಬಹಳ ಕೆಸರಿನಿಂದ ಕೂಡಿದ ಅಥವಾ ದೊಡ್ಡ ದೊಡ್ಡ ಕಲ್ಲುಗಳಿಂದ ಕೂಡಿದ ನದಿಯು ಸಿಕ್ಕರೆ ಆ ನದಿಯನ್ನು ತಾತ್ಕಾಲಿಕವಾಗಿ ಉತ್ತಮವಾದ ಸೇತುವೆಯನ್ನು ನಿರ್ಮಿಸಿಯಾಗಲಿ, ವಾಯುವೇಗದಿಂದ ಹೋಗುವ ಕುದುರೆಯನ್ನು ಕಟ್ಟಿದ ರಥದಲ್ಲಾಗಲಿ, ಕಾಲಾಳುಗಳು, ಆನೆಗಳು, ಅಶ್ವಗಳು ಇವುಗಳಿಂದ ಕೂಡಿಯಾಗಲಿ, ಸಂದರ್ಭಾನುಸಾರವಾಗಿ ಗಮನಿಸಿಕೊಂಡು ದಾಟಿ ಮುಂದೆ ಹೋಗಬೇಕು.

ಯಥೋಪಪತ್ತ್ಯಾ ಶಕಟಂ ವಜ್ರಂ ಚಕ್ರಂ ಚ ಭಾರತ ।
ಉಶನಾ ವೇದ ಯಚ್ಚಾಸ್ತ್ರಂ ತತ್ಕೃತದ್ವಿಹಿತಂ ವಿಭೋ ॥೧೫॥

ಹೇ ಭಾರತನೇ, ವಿಭುವೇ, ಅವಶ್ಯಕತೆಗೆ ಅನುಸಾರವಾಗಿ ಶಕಟವ್ಯೂಹವನ್ನಾಗಲಿ, ವಜ್ರವ್ಯೂಹವನ್ನಾಗಲಿ, ಚಕ್ರವ್ಯೂಹವನ್ನಾಗಲಿ ರಚಿಸಿ ಯುದ್ಧ ಮಾಡಬೇಕು. ಯಾವ ಯುದ್ಧನೀತಿಯನ್ನು ಶುಕ್ರನು ತಿಳಿಸಿಕೊಟ್ಟಿದ್ದಾನೋ ಆ ಶುಕ್ರನೀತಿ ಶಾಸ್ತ್ರದಲ್ಲಿ ಇದನ್ನು ಸರಿಯಾಗಿ ವಿವರಿಸಿದ್ದಾರೆ.

ಸಾಧಯಿತ್ವಾ ಪರಬಲಂ ಕೃತ್ವಾ ಚ ಬಲಕರ್ಷಣಮ್ ।
ಸ್ವಭೂಮೌ ಯೋಜಯೇದ್ ಯುದ್ಧಂ ಪರಭೂಮೌ ತಥೈವ ಚ ॥೧೬॥

ತನ್ನ ಸೈನ್ಯವನ್ನು ಉತ್ಕೃಷ್ಟವಾದ ರೀತಿಯಲ್ಲಿ ಸಿದ್ಧಪಡಿಸಿಕೊಂಡು ಹಣ ಮೊದಲಾದ ಆಮಿಷಗಳಿಂದ ಶತ್ರುಸೈನಿಕರನ್ನು ಆಕರ್ಷಿಸುವ ಮೂಲಕ ಅವರ ಬಲವನ್ನು ಕ್ಷಯಿಸುವಂತೆ ಮಾಡಿ ತನ್ನ ಭೂಮಿಯಲ್ಲಾಗಲಿ, ಪರರ ಭೂಮಿಯಲ್ಲಾಗಲಿ ಯುದ್ಧವನ್ನು ಆಯೋಜಿಸಬೇಕು.

ಬಲಂ ಪ್ರಶಮಯೇದ್ ರಾಜಾ ನಿಕ್ಷಿಪೇದ್ ಧನಿನೋ ನರಾನ್ ।
ಜ್ಞಾತ್ವಾ ಸುವಿಷಯಂ ತಂ ಚ ಸಾಮಾದಿಭಿರುಪಕ್ರಮೇತ್ ॥೧೭॥

ಯುದ್ಧಕ್ಕೆ ನಿಂತಿರುವ ಸಂದರ್ಭದಲ್ಲೂ ರಾಜನು ಪರರ ಬಲವನ್ನು ಹಣ ಮೊದಲಾದವುಗಳನ್ನು ನೀಡುವ ಮೂಲಕ ಕೋಪಬಾರದಂತೆ ಸಮಾಧಾನ ಪಡಿಸಬೇಕು. ಅದಕ್ಕೋಸ್ಕರವೇ ಸಿರಿವಂತರಾದ ಮನುಷ್ಯರನ್ನು ಅಲ್ಲಿ ಇರಿಸಿಕೊಳ್ಳಬೇಕು. ಹೀಗೆ ಪರಬಲವು ಭೋಗಾದಿಗಳಿಂದ ಪ್ರಸನ್ನತೆಯನ್ನು ಪಡೆದಿದ್ದನ್ನು ತಿಳಿದು ಸಾಮ ಮೊದಲಾದ ಉಪಾಯಗಳಿಂದ ಅವರ ಜೊತೆ ವ್ಯವಹರಿಸಬೇಕು.

ಸರ್ವಮೇತನ್ಮಹಾರಾಜ ಶರೀರಂ ಧಾರಯೇದಿಹ ।
ಪ್ರೇತ್ಯೈವ ಚೇಹ ಕರ್ತವ್ಯಮಾತ್ಮನಿಃಶ್ರೇಯಸಂ ಪರಮ್ ॥೧೮॥

ಹೇ ಮಹಾರಾಜನೇ, ಈ ಸಂಧಾನಾದಿ ಎಲ್ಲವೂ ಕೂಡ ಈ ಲೋಕದಲ್ಲಿ ಶರೀರವನ್ನು ಸರಿಯಾಗಿ ಧಾರಣೆ ಮಾಡುವುದಕ್ಕಾಗಿಯೇ ಇದೆ. ಏಕೆಂದರೆ ಪರಲೋಕದಲ್ಲೂ, ಇಲ್ಲೂ ಆತ್ಮನಿಗೆ ಮಂಗಳವಾಗಬೇಕಾದರೆ ಉತ್ತಮವಾದುದನ್ನು ಇಲ್ಲೇ ಮಾಡಬೇಕು.

ಏವಂ ಕುರ್ವನ್ ಶುಭಾಚಾರೋ ಲೋಕೇಽಸ್ಮಿನ್ ಶೃಣುತೇ ನೃಪ ।
ಪ್ರೇತ್ಯ ಸ್ವರ್ಗಂ ತಥಾऽऽಪ್ನೋತಿ ಪ್ರಜಾ ಧರ್ಮೇಣ ಪಾಲಯನ್ ॥೧೯॥

ಹೇ ನೃಪನೇ, ಈ ರೀತಿ ವ್ಯವಹಾರಗಳನ್ನು ನಡೆಸುತ್ತಾ ಉತ್ತಮವಾದ ಆಚಾರವುಳ್ಳವನಾಗಿ ಪ್ರಜೆಗಳನ್ನು ಧರ್ಮದಿಂದ ರಕ್ಷಿಸುತ್ತಿದ್ದರೆ ಈ ಲೋಕದಲ್ಲಿ ಒಳ್ಳೆಯದನ್ನೇ ಕೇಳುತ್ತಾನೆ. ಹಾಗೆಯೇ ಪರಲೋಕದಲ್ಲಿ ಸ್ವರ್ಗವನ್ನೂ ರಾಜನು ಪಡೆಯುತ್ತಾನೆ.

ಏವಂ ತ್ವಯಾ ಕುರುಶ್ರೇಷ್ಠ ವರ್ತಿತವ್ಯಂ ಪ್ರಜಾಸು ವೈ ।
ಉಭಯೋರ್ಲೋಕಯೋಸ್ತಾತ ಪ್ರಾಪ್ತಯೇ ನಿತ್ಯಮೇವ ಚ ॥೨೦॥

ಮಗು ಕುರುಶ್ರೇಷ್ಠನೇ, ಉಭಯ ಲೋಕಗಳ ಪ್ರಾಪ್ತಿಗಾಗಿ ನೀನು ನಿತ್ಯವೂ ಇದೇ ರೀತಿಯಾಗಿ ಪ್ರಜೆಗಳ ವಿಷಯದಲ್ಲಿ ವರ್ತಿಸಬೇಕು.

ಭೀಷ್ಮೇಣ ಪೂರ್ವಮುಕ್ತೋಽಸಿ ಕೃಷ್ಣೇನ ವಿದುರೇಣ ಚ ।
ಮಯಾऽಪ್ಯವಶ್ಯಂ ವಕ್ತವ್ಯಂ ಪ್ರೀತ್ಯಾ ಸ್ನೇಹೇನ ಚಾಭಿಭೋ ॥೨೧॥

ಹೇ ಶತ್ರುಗಳನ್ನು ಸೋಲಿಸುವವನೇ, ಈ ಮೊದಲೇ ಭೀಷ್ಮರಿಂದ ನೀನು ಉಪದಿಷ್ಟನಾಗಿರುವಿ. ಹಾಗೆಯೇ ಕೃಷ್ಣನಿಂದಲೂ, ವಿದುರನಿಂದಲೂ ನೀತಿಯ ಉಪದೇಶಗಳನ್ನು ಪಡೆದಿರುವಿ. ಹೀಗಿದ್ದರೂ ನಿನ್ನ ಮೇಲಿನ ಪ್ರೀತಿಯಿಂದ ಹಾಗೂ ಸ್ನೇಹದಿಂದ ನನ್ನಿಂದ ಹೇಳಲೇಬೇಕಾದ ವಿಷಯಗಳು ಹೇಳಲ್ಪಟ್ಟಿವೆ.

ಏತತ್ಸರ್ವಂ ಯಥಾನ್ಯಾಯಂ ಕುರ್ವೀಥಾ ಭೂರಿದಕ್ಷಿಣಃ ।
ಪ್ರಿಯಂ ಪ್ರಜಾನಾಂ ಧರ್ಮಜ್ಞ ಸ್ವರ್ಗಂ ಸುಖಮವಾಪ್ಸ್ಯಸಿ ॥೨೨॥

ಹೇ ಧರ್ಮಜ್ಞನೇ, ಇಲ್ಲಿ ಹೇಳಿದ ಎಲ್ಲವನ್ನೂ ನ್ಯಾಯಕ್ಕೆ ಅನುಸಾರವಾಗಿ ಬಹಳವಾದ ಸರಳತೆಯುಳ್ಳವನಾಗಿ ತಿಳಿದುಕೊಂಡು ಪ್ರಜೆಗಳಿಗೆ ಪ್ರಿಯವನ್ನು ಉಂಟು ಮಾಡು. ಇದರಿಂದ ಪರಲೋಕದಲ್ಲಿ ಸ್ವರ್ಗವನ್ನೂ, ಇಲ್ಲಿ ಸುಖವನ್ನೂ ಪಡೆಯುವಿ.

ಅಶ್ವಮೇಧಸಹಸ್ರೇಣ ಯೋ ಯಜೇತ್ ಪೃಥಿವೀಪತಿಃ ।
ಪಾಲಯೇದ್ವಾಽಪಿ ಧರ್ಮೇಣ ಪ್ರಜಾಸ್ತುಲ್ಯಂ ಫಲಂ ಭವೇತ್ ॥೨೩॥

ಯಾವ ರಾಜನು ಸಾವಿರ ಬಾರಿ ಅಶ್ವಮೇಧಯಾಗವನ್ನು ನಡೆಸುವನೋ ಅಥವಾ ಧರ್ಮಮಾರ್ಗದಲ್ಲಿ ಪ್ರಜೆಗಳನ್ನು ಪಾಲಿಸುವನೋ ಇವೆರಡಕ್ಕೂ ಸಮಾನವಾದ ಫಲವು ಲಭಿಸುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರವಚನಂ ನಾಮ ದ್ವಾದಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಧೃತರಾಷ್ಟ್ರನು ಯುಧಿಷ್ಠಿರನ ಮೂಲಕ ಎಲ್ಲ ಜನರನ್ನೂ ಕರೆಯಿಸಿ, ತಾನು ಕಾಡಿಗೆ ತೆರಳುವುದಾಗಿ ನಿವೇದಿಸುತ್ತಾ ಅವರಲ್ಲಿ ಒಪ್ಪಿಗೆಯನ್ನು ಯಾಚಿಸುವುದು.

ಯುಧಿಷ್ಠಿರಃ

ಏವಮೇತತ್ ಕರಿಷ್ಯಾಮಿ ಯಥಾऽऽತ್ಥ ಪೃಥಿವೀಪತೇ ।
ಭೂಯಶ್ಚೈವಾನುಶಾಸ್ಯೋऽಹಂ ಭವತಾ ಪಾರ್ಥಿವರ್ಷಭ ॥೧॥

ಯುಧಿಷ್ಠಿರ– ಹೇ ಪೃಥಿವೀಪತಿಯೇ, ನೀನು ಹೇಗೆ ಹೇಳುವೆಯೋ ಅದೇ ರೀತಿ ಎಲ್ಲವನ್ನೂ ನಡೆಸುವೆ. ಹೇ ಪಾರ್ಥಿವಶ್ರೇಷ್ಠನೇ, ನಾನು ನಿನ್ನಿಂದ ಮತ್ತೂ ಕೂಡ ಉಪದೇಶವನ್ನು ಪಡೆಯಲು ಯೋಗ್ಯನಾಗಿದ್ದೇನೆ.

ಭೀಷ್ಮೇ ಸ್ವರ್ಗಮನುಪ್ರಾಪ್ತೇ ಗತೇ ಚ ಮಧುಸೂದನೇ ।
ವಿದುರೇ ಸಂಜಯೇ ಚೈವ ಕೋऽನ್ಯೋ ಮಾಂ ವಕ್ತುಮರ್ಹತಿ ॥೨॥

ಯಸ್ತು ಮಾಮನುಶಾಸ್ಯೇವಂ ಭವಾನದ್ಯ ಹಿತೇ ಸ್ಥಿತಃ ।
ಕರ್ತಾಸ್ಮಿ ತನ್ಮಹೀಪಾಲ ನಿರ್ವ್ಯತೋ ಭವ ಭಾರತ ॥೩॥

ಹೇ ಭಾರತನೇ, ಮಹೀಪಾಲನೇ, ಭೀಷ್ಮರು ಸ್ವರ್ಗಕ್ಕೆ ತೆರಳಿದ ನಂತರ, ಶ್ರೀಕೃಷ್ಣನು ದ್ವಾರಕೆಗೆ ಹೋದಮೇಲೆ, ವಿದುರ ಹಾಗೂ ಸಂಜಯರು ನಿನ್ನ ಜೊತೆಗೇ ಸದಾ ಇರುವಾಗ ಬೇರೆ ಯಾರು ತಾನೇ ನನಗೆ ಹೇಳಿಯಾರು? ಯಾರು ನನಗೆ ಉಪದೇಶವನ್ನು ನೀಡುತ್ತಿರುವಿರೋ ಅಂತಹ ನೀವೂ ಕೂಡ ನನ್ನ ಹಿತಕ್ಕಾಗಿಯೇ ಉಪದೇಶ ನೀಡುತ್ತಿರುವಿರಿ. ಆದ್ದರಿಂದ ಅವೆಲ್ಲವನ್ನೂ ನಾನು ನಡೆಸುತ್ತೇನೆ. ನೀನು ಸಂತೋಷವಾಗಿರು.

ವೈಶಂಪಾಯನಃ

ಏವಮುಕ್ತಃ ಸ ರಾಜರ್ಷಿರ್ಧರ್ಮರಾಜೇನ ಭಾರತ ।
ಕೌಂತೇಯಂ ಸಮನುಜ್ಞಾತುಮಿಯೇಷ ಭರತರ್ಷಭ ॥೪॥

ವೈಶಂಪಾಯನ– ಹೇ ಭರತಶ್ರೇಷ್ಠನಾದ ಭಾರತನೇ, ಧರ್ಮರಾಜನಿಂದ ಈ ರೀತಿ ಹೇಳಲ್ಪಟ್ಟ ಆ ರಾಜರ್ಷಿಯಾದ ಧೃತರಾಷ್ಟ್ರನು ಕೌಂತೇಯನನ್ನು ಮನೆಗೆ ತೆರಳಲು ಅಪ್ಪಣೆ ಕೊಡಲು ಬಯಸಿದನು.

ಧೃತರಾಷ್ಟ್ರಃ

ಪುತ್ರ ವಿಶ್ರಮ್ಯತಾಂ ತಾವನ್ಮಮಾಪಿ ಬಲವಾನ್ ಶ್ರಮಃ ॥೫॥

ಧೃತರಾಷ್ಟ್ರ– ಮಗನೇ, ಮನೆಗೆ ತೆರಳಿ ವಿಶ್ರಾಂತಿ ತೆಗೆದುಕೊ. ನನಗೂ ಬಹಳವಾಗಿ ಆಯಾಸವಾಗಿದೆ.

ವೈಶಂಪಾಯನಃ

ಇತ್ಯುಕ್ತ್ವಾ ಪ್ರಾವಿಶದ್ ರಾಜಾ ಗಾಂಧಾರ್ಯಾ ಭವನಂ ತದಾ ॥೬॥

ವೈಶಂಪಾಯನ– ಇಷ್ಟು ಹೇಳಿ ರಾಜನಾದ ಧೃತರಾಷ್ಟ್ರನು ಆಗ ಗಾಂಧಾರಿಯ ಭವನವನ್ನು ಪ್ರವೇಶಿಸಿದನು.

ತಮಾಸನಗತಂ ದೇವೀ ಗಾಂಧಾರೀ ಧರ್ಮಚಾರಿಣೀ ।
ಉವಾಚ ಕಾಲೇ ಕಾಲಜ್ಞಾ ಪ್ರಜಾಪತಿಸಮಂ ಪತಿಮ್ ॥೭॥

ಸದಾ ಧರ್ಮನಿಷ್ಠಳಾಗಿರುವ, ಯಾವ ಕಾಲದಲ್ಲಿ ಏನು ಮಾಡಬೇಕೆಂದು ಸರಿಯಾಗಿ ತಿಳಿದಿರುವ ಗಾಂಧಾರೀ ದೇವಿಯು ಆಸನದಲ್ಲಿ ಕುಳಿತಿರುವ ಪ್ರಜಾಪತಿಗೆ ಸದೃಶನಾದ ತನ್ನ ಪತಿಯನ್ನು ಕುರಿತು ಯೋಗ್ಯವಾದ ಕಾಲದಲ್ಲಿ ಹೀಗೆ ಹೇಳಿದಳು.

ಗಾಂಧಾರೀ

ಅನುಜ್ಞಾತಃ ಸ್ವಯಂ ತೇನ ವ್ಯಾಸೇನಾಪಿ ಮಹರ್ಷಿಣಾ ।
ಯುಧಿಷ್ಠಿರಸ್ಯಾನುಮತೇ ಕದಾऽರಣ್ಯಂ ಗಮಿಷ್ಯಸಿ ॥೮॥

ಗಾಂಧಾರೀ– ಪ್ರಸಿದ್ಧರಾದ ಆ ವ್ಯಾಸ ಮಹರ್ಷಿಗಳಿಂದಲೇ ಸ್ವತಃ ಅನುಜ್ಞೆಯನ್ನು ಪಡೆದು ಯುಧಿಷ್ಠಿರನ ಅನುಮತಿಯಂತೆ ಯಾವಾಗ ಕಾಡಿಗೆ ಹೊರಡುವಿ?

ಧೃತರಾಷ್ಟ್ರಃ

ಗಾಂಧಾರ್ಯಹಮನುಜ್ಞಾತಃ ಸ್ವಯಂ ಪಿತ್ರಾ ಮಹಾತ್ಮನಾ ।
ಯುಧಿಷ್ಠಿರಸ್ಯಾನುಮತೇರ್ಗಂತಾಸ್ಮಿ ನಚಿರಾದಿವ ॥೯॥

ಧೃತರಾಷ್ಟ್ರ– ಗಾಂಧಾರಿಯೇ, ಸ್ವತಃ ಮಹಾತ್ಮನಾದ ತಂದೆಯಿಂದಲೇ ಅನುಜ್ಞೆಯನ್ನು ಪಡೆದ ನಾನು ಯುಧಿಷ್ಠಿರನ ಅನುಮತಿಯಂತೆ ತಡಮಾಡದೆ ಹೊರಡಲಿರುವೆ.

ಅಹಂ ತು ತವ ಪುತ್ರಾಣಾಂ ತೇಷಾಂ ದುರ್ದ್ಯೂತದೇವಿನಾಮ್ ।
ಸರ್ವೇಷಾಂ ದಾತುಮಿಚ್ಛಾಮಿ ಪ್ರೇತ್ಯಭಾವಾನುಗಂ ವಸು ॥೧೦॥

ಸರ್ವಪ್ರಕೃತಿಸಾನ್ನಿಧ್ಯಂ ಕಾರಯಿತ್ವಾ ಸ್ವವೇಶ್ಮನಿ ॥೧೧॥

ನಾನಾದರೂ ನಿನ್ನ ಪುತ್ರರಾದ, ಆ ಕೆಟ್ಟ ದ್ಯೂತವನ್ನು ಆಡಿರುವ ಎಲ್ಲರಿಗೂ ಪರಲೋಕದಲ್ಲಿ ಸುಖಪ್ರಾಪ್ತಿಗಾಗಿ ನಮ್ಮ ಮನೆಯಲ್ಲಿ ಎಲ್ಲ ಪ್ರಜೆಗಳನ್ನು ಒಟ್ಟುಸೇರಿಸಿ ಹಣವನ್ನು ದಾನ ಮಾಡಲು ಬಯಸುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ಪ್ರೇಷಯಾಮಾಸ ಧರ್ಮರಾಜಾಯ ಪಾರ್ಥಿವ ।
ಸ ಚ ತದ್ವಚನಾತ್ ಸರ್ವಂ ಸಮಾನಿನ್ಯೇ ಮಹೀಪತಿಃ ॥೧೨॥

ವೈಶಂಪಾಯನ– ಹೇ ಪಾರ್ಥಿವನೇ, ಹೀಗೆ ಹೇಳಿ ಧರ್ಮರಾಜನ ಅವಗಾಹನೆಗಾಗಿ ಜನರನ್ನು ಕಳುಹಿಸಿದನು. ಆ ಮಹೀಪತಿಯಾದ ಧರ್ಮರಾಜನು ಧೃತರಾಷ್ಟ್ರನ ಮಾತಿನಂತೆ ಎಲ್ಲರನ್ನೂ ಒಟ್ಟುಸೇರಿಸಿದನು.

ತತೋ ನಿಷ್ಕ್ರಮ್ಯ ನೃಪತಿಸ್ತಸ್ಮಾದಂತಃಪುರಾತ್ ತದಾ ।
ಸರ್ವಂ ಸುಹೃಜ್ಜನಂ ಚೈವ ಸರ್ವಾಃ ಪ್ರಕೃತಯಸ್ತಥಾ ॥೧೩॥

ಸಮವೇತಾಂಶ್ಚ ತಾನ್ ಸರ್ವಾನ್ ಪೌರಜಾನಪದಾನಥ ।
ಬ್ರಾಹ್ಮಣಾಂಶ್ಚ ಮಹೀಪಾಲಾನ್ ನಾನಾದೇಶಸಮಾಗತಾನ್ ॥೧೪॥

ತತಃ ಪ್ರಾಹ ಮಹಾತೇಜಾ ಧೃತರಾಷ್ಟ್ರೋ ಮಹೀಪತಿಃ ॥೧೫॥

ಅನಂತರ ರಾಜನು ಆ ಅಂತಃಪುರದಿಂದ ಹೊರಬಂದು ಅಲ್ಲಿ ನೆರೆದಿರುವ ಎಲ್ಲ ಸ್ನೇಹಿತರನ್ನೂ, ಹಾಗೆಯೇ ಎಲ್ಲಾ ಪ್ರಜೆಗಳನ್ನೂ ಎಲ್ಲ ಪಟ್ಟಣಿಗರನ್ನೂ, ಎಲ್ಲ ಗ್ರಾಮೀಣ ಜನರನ್ನೂ, ಬ್ರಾಹ್ಮಣರನ್ನೂ, ಬೇರೆ ಬೇರೆ ದೇಶಗಳಿಂದ ಬಂದಿರುವ ಬ್ರಾಹ್ಮಣರನ್ನೂ ನೋಡಿದನು. ಅನಂತರ ಮಹಾತೇಜಸ್ವಿಯಾದ ಧೃತರಾಷ್ಟ್ರರಾಜನು ಹೀಗೆ ಹೇಳಿದನು.

ಧೃತರಾಷ್ಟ್ರಃ

ಶೃಣ್ವಂತ್ವೇಕಾಗ್ರಮನಸೋ ಬ್ರಾಹ್ಮಣಾಃ ಕುರುಜಾಂಗಲಾಃ ।
ಕ್ಷತ್ರಿಯಾಶ್ಚೈವ ವೈಶ್ಯಾಶ್ಚ ಶೂದ್ರಾಶ್ಚೈವ ಸಮಾಗತಾಃ ॥೧೬॥

ಧೃತರಾಷ್ಟ್ರ– ಹೇ ಕುರುಜಾಂಗಲಪ್ರದೇಶದ ಬ್ರಾಹ್ಮಣರೇ, ಕ್ಷತ್ರಿಯರೇ, ವೈಶ್ಯರೇ, ಬಂದಿರುವ ಎಲ್ಲ ಶೂದ್ರರೇ, ಏಕಾಗ್ರಚಿತ್ತರಾಗಿ ಕೇಳಿರಿ.

ಭವಂತಃ ಕುರವಶ್ಚೈವ ಬಹುಕಾಲಂ ಸಹೋಷಿತಾಃ ।
ಪರಸ್ಪರಸ್ಯ ಸುಹೃದಃ ಪರಸ್ಪರಹಿತೇ ರತಾಃ ॥೧೭॥

ನೀವು ಹಾಗೂ ಕುರುವಂಶದ ರಾಜರು ಬಹಳ ಕಾಲದಿಂದ ಜೊತೆಯಾಗಿ ವಾಸವಾಗಿರುವಿರಿ ಹಾಗೂ ಪರಸ್ಪರ ಸ್ನೇಹಿತರಾಗಿದ್ದು, ಪರಸ್ಪರ ಹಿತಕ್ಕೆ ಆಸಕ್ತರಾಗಿರುವಿರಿ.

ಯದಿದಾನೀಮಹಂ ಬ್ರೂಯಾಮಸ್ಮಿನ್ ಕಾಲ ಉಪಸ್ಥಿತೇ ।
ತಥಾ ಭವದ್ಭಿಃ ಕರ್ತವ್ಯಮವಿಚಾರ್ಯ ವಚೋ ಮಮ ॥೧೮॥

ಉಪಸ್ಥಿತವಾದ ಈ ಕಾಲದಲ್ಲಿ ನಾನು ಏನನ್ನು ಹೇಳುವೆನೋ ಅದನ್ನು ಹೆಚ್ಚಾಗಿ ವಿಮರ್ಶಿಸದೇ ನೀವು ನನ್ನ ಮಾತನ್ನು ನಡೆಸಿಕೊಡಬೇಕು.

ಅರಣ್ಯಗಮನೇ ಬುದ್ಧಿಂ ಗಾಂಧಾರೀಸಹಿತಸ್ಯ ಮೇ ।
ವ್ಯಾಸಸ್ಯಾನುಮತೇ ರಾಜ್ಞಸ್ತಥಾ ಕುಂತೀಸುತಸ್ಯ ಚ ॥೧೯॥

ಭವಂತೋಽಪ್ಯನುಜಾನಂತು ಮಾ ವೋ ಭೂಯಾದ್ ವಿಚಾರಣಾ ॥

ಗಾಂಧಾರೀ ದೇವಿಯಿಂದ ಸಹಿತನಾದ ನನಗೆ ವೇದವ್ಯಾಸರ ಅನುಮತಿಯಂತೆ ಹಾಗೂ ರಾಜನಾದ ಕುಂತೀಸುತನ ಅನುಮತಿಯಂತೆ ಅರಣ್ಯಗಮನದಲ್ಲಿ ಬುದ್ಧಿ ಉಂಟಾಗಿದೆ. ಆ ಬುದ್ಧಿಯನ್ನು ನೀವೆಲ್ಲರೂ ಒಪ್ಪಿಕೊಂಡು ನನಗೆ ಅನುಮತಿ ನೀಡಿರಿ. ಈ ವಿಷಯದಲ್ಲಿ ಹೆಚ್ಚು ವಿಚಾರಿಸದಿರಿ.

ಅಸ್ಮಾಕಂ ಭವತಾಂ ಚೈವ ಯೇಯಂ ಪ್ರೀತಿರ್ಹಿ ಶಾಶ್ವತೀ ।
ನ ಚಾನ್ಯೇಷ್ವಪಿ ದೇಶೇಷು ರಾಜ್ಞಾಮಿತಿ ಮತಿರ್ಮಮ ॥೨೧॥

ರಾಜರಾದ ನಮಗೂ, ಪ್ರಜೆಗಳಾದ ನಿಮಗೂ ಮಧ್ಯದಲ್ಲಿ ಯಾವ ಶಾಶ್ವತವಾದ ಪ್ರೀತಿ ಇದೆಯೋ ಇಂತಹ ಪ್ರೀತಿಯು ಬೇರೆ ದೇಶಗಳಲ್ಲೂ ರಾಜ ಹಾಗೂ ಪ್ರಜೆಗಳ ಮಧ್ಯದಲ್ಲಿ ಇಲ್ಲ ಎಂದು ನನ್ನ ಅನಿಸಿಕೆ.

ಶ್ರಾಂತೋಽಸ್ಮಿ ವಯಸಾಽನೇನ ತಥಾ ಪುತ್ರೈರ್ವಿನಾಕೃತಃ ।
ಉಪವಾಸಕೃಶಶ್ಚಾಸ್ಮಿ ಗಾಂಧಾರೀಸಹಿತೋಽನಘಃ ॥೨೨॥

ನಾನು ಈ ವೃದ್ಧಾಪ್ಯದಿಂದ ಆಯಾಸಗೊಂಡಿರುವೆ. ಹಾಗೆಯೇ ಮಕ್ಕಳನ್ನು ಕಳೆದುಕೊಂಡಿರುವೆ. ಜೊತೆಗೆ ಉಪವಾಸದಿಂದ ಕೃಶನೂ ಆಗಿ ಗಾಂಧಾರೀ ಸಹಿತನಾಗಿ ಶುದ್ಧನಾಗಿರುವೆ.

ಯುಧಿಷ್ಠಿರಗತೇ ರಾಜ್ಯೇ ಪ್ರಾಪ್ತಶ್ಚಾಸ್ಮಿ ಫಲಂ ಮಹತ್ ।
ಮನ್ಯೇ ದುರ್ಯೋಧನೈಶ್ವರ್ಯಾದ್ ವಿಶಿಷ್ಟಂ ಬಹುಭಿರ್ಗುಣೈಃ ॥೨೩॥

ರಾಜ್ಯವು ಯುಧಿಷ್ಠಿರನಿಗೆ ಸೇರಿದಾಗಲೂ ನಾನು ಮಹತ್ತಾದ ಫಲವನ್ನು ಪಡೆದುಕೊಂಡಿರುವೆ. ದುರ್ಯೋಧನನ ಕೈಯಲ್ಲಿ ಐಶ್ವರ್ಯವಿದ್ದಾಗ ಏನೆಲ್ಲ ಪಡೆದಿರುವೆನೋ ಬಹುಗುಣಗಳಿಂದ ಅದಕ್ಕಿಂತಲೂ ವಿಶಿಷ್ಟವಾದ ಫಲ ನನಗೆ ಸಿಕ್ಕಿದೆ ಎಂದು ಹೇಳಬಯಸುತ್ತೇನೆ.

ಮಮ ತ್ವಂಧಸ್ಯ ವೃದ್ಧಸ್ಯ ಹತಪುತ್ರಸ್ಯ ಕಾ ಗತಿಃ ।
ಋತೇ ವನಂ ಮಹಾಭಾಗಾಃ ತದನುಜ್ಞಾತುಮರ್ಹಥ ॥೨೪॥

ಕುರುಡನಾದ, ಮುದಿ ವಯಸ್ಸಿನಲ್ಲಿರುವ, ಮಕ್ಕಳನ್ನು ಕಳೆದುಕೊಂಡಿರುವ ನನಗೆ ಕಾಡನ್ನು ಬಿಟ್ಟು ಬೇರೆ ಯಾವ ಗತಿಯಿದೆ? ಆದ್ದರಿಂದ ಹೇ ಮಹಾಭಾಗರೇ, ಕಾಡಿಗೆ ಹೋಗಲು ನೀವು ಅನುಜ್ಞೆ ನೀಡಬೇಕು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಸರ್ವೇ ತೇ ಕುರುಜಾಂಗಲಾಃ ।
ಬಾಷ್ಪಸಂದಿಗ್ಧವಚನಾ ರುರುದುರ್ಭರತರ್ಷಭ ॥೨೫॥

ವೈಶಂಪಾಯನ– ಹೇ ಭರತರ್ಷಭನೇ, ಧೃತರಾಷ್ಟ್ರನ ಆ ಮಾತನ್ನು ಕೇಳಿ ಕುರುಜಾಂಗಲ ಪ್ರದೇಶದ ಅಲ್ಲಿ ಸೇರಿದವರೆಲ್ಲರೂ ಕಣ್ಣೀರಿನಿಂದ ಮಾತೇ ಹೊರಡದೇ ಜೋರಾಗಿ ಅತ್ತರು.

ತಾಂಸ್ತು ವಿಬ್ರುವತಃ ಕಿಂಚಿತ್ ದುಃಖಶೋಕಪರಾಯಣಾನ್ ।
ಪುನರೇವ ಮಹಾರಾಜೋ ಧೃತರಾಷ್ಟ್ರೋಽಬ್ರವೀದಿದಮ್ ॥೨೬॥

ದುಃಖ ಹಾಗೂ ಶೋಕದಿಂದ ತುಂಬಿಕೊಂಡು ಏನನ್ನೂ ಹೇಳದಿರುವ ಅವರನ್ನು ಕುರಿತು ಮಹಾರಾಜನಾದ ಧೃತರಾಷ್ಟ್ರನು ಮತ್ತೆ ಈ ಮಾತುಗಳನ್ನು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ತ್ರಯೋದಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಧೃತರಾಷ್ಟ್ರನು ಜನರಲ್ಲಿ, ತಾನು ದುರ್ಯೋಧನನ ಪಕ್ಷಪಾತದಿಂದ ಮಾಡಿದ ಅನ್ಯಾಯಗಳ ಬಗ್ಗೆ ಕ್ಷಮೆಯಾಚನೆ ಮಾಡುವುದು ಹಾಗೂ ಯುಧಿಷ್ಠಿರನನ್ನು ಅವರಲ್ಲಿ ನ್ಯಾಸರೂಪವಾಗಿ ಸಮರ್ಪಿಸಿ, ಅವರಿಂದ ತನ್ನ ವನಗಮನದ ಕುರಿತು ಒಪ್ಪಿಗೆಯನ್ನು ಯಾಚಿಸುವುದು.

ಧೃತರಾಷ್ಟ್ರಃ

ಶಂತನುಃ ಪಾಲಯಾಮಾಸ ಯಥಾವದ್ ವಸುಧಾಮಿಮಾಮ್ ।
ತಥಾ ವಿಚಿತ್ರವೀರ್ಯಶ್ಚ ಭೀಷ್ಮೇಣ ಪರಿಪಾಲಿತಃ ॥೧॥

ಪಾಲಯಾಮಾಸ ನಸ್ತಾತೋ ವಿದಿತಂ ವೋ ನ ಸಂಶಯಃ ॥೨॥

ಧೃತರಾಷ್ಟ್ರ– ಹೇ ಪ್ರಜೆಗಳೇ, ಶಂತನುರಾಜನು ಈ ಭೂಮಿಯನ್ನು ಯಥಾಯೋಗ್ಯವಾಗಿ ಪಾಲಿಸಿದನು. ಹಾಗೆಯೇ ಭೀಷ್ಮರಿಂದ ರಕ್ಷಿಸಲ್ಪಟ್ಟ ನನ್ನ ತಂದೆಯಾದ ವಿಚಿತ್ರವೀರ್ಯರಾಜನೂ ಈ ಭೂಮಿಯನ್ನು ಪಾಲಿಸಿದನು. ನಿಮಗೆ ಇದೆಲ್ಲ ತಿಳಿದಿದೆ. ಇದರಲ್ಲಿ ಯಾವುದೇ ಸಂಶಯವಿಲ್ಲ.

ಯಥಾ ಚ ಪಾಂಡುರ್ಭ್ರಾತಾ ಮೇ ದಯಿತೋ ಭವತಾಮಭೂತ್ ।
ಸ ಚಾಪಿ ಪಾಲಯಾಮಾಸ ಯಥಾವತ್ತಚ್ಚ ವೇತ್ಥ ಹ ॥೩॥

ಹಾಗೆಯೇ ನನ್ನ ಸಹೋದರನಾದ ನಿಮ್ಮೆಲ್ಲರಿಗೂ ಅತ್ಯಂತ ಪ್ರೀತಿಪಾತ್ರನಾದ ಪಾಂಡುವೂ ಕೂಡ ಈ ಭೂಮಿಯನ್ನು ಯಥಾವತ್ತಾಗಿ ಪಾಲಿಸಿದ್ದಾನೆ. ಅದನ್ನೂ ನೀವು ತಿಳಿದಿದ್ದೀರಿ.

ಅನಂತರಂ ಹಿ ಪಿತರೌ ಅನುಜ್ಞಾತೋ ಯುಧಿಷ್ಠಿರಃ ।
ನಾತ್ರ ಕಿಂಚಿನ್ಮೃಷಾ ಜಾತು ಭವಿತೇತಿ ಮತಿರ್ಮಮ ॥೪॥

ಅನಂತರ ತಂದೆ-ತಾಯಿಯರಾದ ಗಾಂಧಾರಿ ಮತ್ತು ನನ್ನಿಂದ ಅನುಜ್ಞಾತನಾದ ಯುಧಿಷ್ಠಿರನು ರಾಜ್ಯವಾಳುತ್ತಿದ್ದಾನೆ. ಇದರಲ್ಲಿ ಯಾವುದೇ ಸುಳ್ಳಿರಲಾರದು ಎಂದು ನನ್ನ ಅನಿಸಿಕೆ.

ಮಯಾ ಚ ಭವತಾಂ ಸಮ್ಯಕ್ ಶುಶ್ರೂಷಾ ಯಾ ಕೃತಾऽನಘಾಃ ।
ಅಸಮ್ಯಗ್ ವಾ ಮಹಾಭಾಗಾಸ್ತತ್ ಕ್ಷಂತವ್ಯಮತಂದ್ರಿತೈಃ ॥೫॥

ಹೇ ಸಜ್ಜನರೇ, ನನ್ನಿಂದಲೂ ನಿಮ್ಮ ಸೇವೆಯೂ ಚೆನ್ನಾಗಿ ಮಾಡಲ್ಪಟ್ಟಿದೆ ಅಥವಾ ನಾನು ಮಾಡಿದ ಸೇವೆಯು ಸರಿಯಾಗಿಲ್ಲದಿದ್ದರೆ ಮಹಾತ್ಮರಾದ ತಾವೆಲ್ಲರೂ ಯಾವುದೇ ಬೇಸರವಿಲ್ಲದೇ ಕ್ಷಮಿಸಬೇಕು.

ಯದಾ ದುರ್ಯೋಧನೇನೇದಂ ಭುಕ್ತಂ ರಾಜ್ಯಮಕಂಟಕಮ್ ।
ಅಪಿ ತತ್ರ ನ ವೋ ಮಂದೋ ದುರ್ಬುದ್ಧಿರಪರಾದ್ಧವಾನ್ ॥೬॥

ಯಾವಾಗ ದುರ್ಯೋಧನನಿಂದ ಕಂಟಕರಹಿತವಾದ ಈ ರಾಜ್ಯವು ಅನುಭವಿಸಲ್ಪಟ್ಟಿತೋ ಆಗ ಮಂದನಾದ ದುರ್ಬುದ್ಧಿಯಾದ ಅವನು ನಿಮಗೆ ಅಪರಾಧ ಮಾಡಿರಲಾರನೇ? (ಅವನು ಅಪರಾಧವನ್ನು ಮಾಡಿಯೇ ಇದ್ದಾನೆ).

ತಸ್ಯಾಪರಾಧಾದ್ ದುರ್ಬುದ್ಧೇರಭಿಮಾನಾನ್ಮಹೀಕ್ಷಿತಾಮ್ ।
ವಿಮರ್ದಃ ಸುಮಹಾನಾಸೀದನಯಾತ್ ಸ್ವಕೃತಾದಥ ॥೭॥

ಆ ದುರ್ಯೋಧನನ ಅಪರಾಧದಿಂದ, ಅವನ ದುರ್ಬುದ್ಧಿಯಿಂದ, ಅವನ ಆತ್ಮಾಭಿಮಾನದಿಂದ ಮತ್ತು ಸ್ವಯಂಕೃತವಾದ ಅನೀತಿಯಿಂದ ಅನೇಕ ರಾಜರ ಮಹಾನಾಶವು ಸಂಭವಿಸಿತು.

ಘಾತಿತಾಃ ಕೌರವೇಯಾಶ್ಚ ಪೃಥಿವೀ ಚ ವಿನಾಶಿತಾ ॥೮॥

ಅದೇ ಸಂದರ್ಭದಲ್ಲಿ ಕೌರವವಂಶಜರೂ ಘಾಸಿಗೊಂಡರು. ಪೃಥಿವಿಯೂ ಕೂಡ ವಿನಾಶಗೊಂಡಿತು.

ತನ್ಮಯಾ ಸಾಧು ವಾऽಪೀದಂ ಯದಿ ವಾऽಸಾಧು ವೈ ಕೃತಮ್ ।
ತದ್ವೋ ಹೃದಿ ನ ಕರ್ತವ್ಯಂ ಮಯಾ ಬದ್ಧೋऽಯಮಂಜಲಿಃ ॥೯॥

ಆ ಸಮಯದಲ್ಲಿ ನಾನು ಸರಿಯಾಗಿದ್ದೆನೋ ಅಥವಾ ಅನ್ಯಾಯವೆಸಗಿದೆನೋ ತಿಳಿಯದಾಗಿದೆ. ಅವೆಲ್ಲವನ್ನೂ ನೀವು ಹೃದಯದಲ್ಲಿ ಇರಿಸಿಕೊಳ್ಳಬೇಡಿ. ಅದಕ್ಕಾಗಿ ಕೈಮುಗಿದು ನಿಮ್ಮಲ್ಲಿ ಪ್ರಾರ್ಥಿಸುತ್ತಿದ್ದೇನೆ.

ವೃದ್ಧೋऽಯಂ ಹತಪುತ್ರೋऽಯಂ ದುಃಖಿತೋऽಯಂ ನರಾಧಿಪಃ ।
ಪೂರ್ವರಾಜ್ಞಾಂ ಚ ಪುತ್ರೋऽಯಮಿತಿ ಕೃತ್ವಾऽನುಜಾನಥ ॥೧೦॥

ಈ ನರಾಧಿಪತಿಯು ವೃದ್ಧನಾಗಿದ್ದಾನೆ, ಮಕ್ಕಳನ್ನು ಕಳೆದುಕೊಂಡಿದ್ದಾನೆ ಹಾಗೂ ದುಃಖಿತನಾಗಿದ್ದಾನೆ. ಅಲ್ಲದೇ ಹಿಂದೆ ಬಂದ ರಾಜರ ಮಗನಾಗಿದ್ದಾನೆ ಎಂದು ಮನಸ್ಸಿನಲ್ಲಿರಿಸಿಕೊಂಡು ನನಗೆ ಅನುಜ್ಞೆ ನೀಡಿ.

ಇಯಂ ಚ ಕೃಪಣಾ ವೃದ್ಧಾ ಹತಪುತ್ರಾ ತಪಸ್ವಿನೀ ।
ಗಾಂಧಾರೀ ಪುತ್ರಶೋಕಾರ್ತಾ ತುಲ್ಯಂ ಯಾಚತಿ ವೋ ಮಯಾ ॥೧೧॥

ಈ ಗಾಂಧಾರೀ ದೇವಿಯೂ ಕೂಡ ದೀನಳಾಗಿ, ವೃದ್ಧಳಾಗಿ, ತಪಸ್ಸಿನಿಂದ ಕೂಡಿಕೊಂಡು, ಪುತ್ರರನ್ನು ಕಳೆದುಕೊಂಡು ಪುತ್ರಶೋಕದಿಂದ ಕಂಗೆಟ್ಟವಳಾಗಿ ನಾನು ಪ್ರಾರ್ಥಿಸಿದಂತೆಯೇ ನಿಮ್ಮಲ್ಲಿ ಯಾಚಿಸುತ್ತಿದ್ದಾಳೆ.

ಹತಪುತ್ರಾವಿಮೌ ವೃದ್ಧೌ ವಿದಿತ್ವಾ ದುಃಖಿತೌ ತಥಾ ।
ಅನುಜಾನೀತ ಭದ್ರಂ ವೋ ವ್ರಜಾವ ಶರಣಂ ಚ ವಃ ॥೧೨॥

ಈ ವೃದ್ಧ ದಂಪತಿಗಳು ಪುತ್ರರನ್ನು ಕಳೆದುಕೊಂಡು ದುಃಖಿತರಾಗಿದ್ದಾರೆ. ಹಾಗಾಗಿ ನಮಗೆ ಕಾಡಿಗೆ ಹೋಗಲು ಅನುಜ್ಞೆ ನೀಡಿರಿ. ನಾವು ನಿಮಗೆ ಶರಣು ಹೊಂದಿದ್ದೇವೆ. ನಿಮಗೆ ಮಂಗಳವಾಗಲಿ.

ಅಯಂ ಚ ಕೌರವೋ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಸರ್ವೈರ್ಭವದ್ಭಿರ್ದ್ರಷ್ಟವ್ಯಃ ಸಮೇಷು ವಿಷಮೇಷು ಚ ॥೧೩॥

ಈ ಕೌರವವಂಶದಲ್ಲಿ ಬಂದ ಕುಂತೀಪುತ್ರನಾದ ಯುಧಿಷ್ಠಿರರಾಜನು ನಿಮ್ಮೆಲ್ಲರಿಂದಲೂ ಶುಭಸಂದರ್ಭದಲ್ಲೂ, ಕಷ್ಟಸಂದರ್ಭದಲ್ಲೂ ಕಾಣಲ್ಪಡಬೇಕು.

ನ ಜಾತು ವಿಷಮಂ ಚೈವ ಗಮಿಷ್ಯತಿ ಕದಾಚನ ॥೧೪॥

ಇವನು ಯಾವುದೇ ಸಂದರ್ಭದಲ್ಲಿ ನಿಮ್ಮಲ್ಲಿ ವಿಷಮವಾಗಿ ನಡೆದುಕೊಳ್ಳಲಾರನು.

ಚತ್ವಾರಃ ಸಚಿವಾ ಯಸ್ಯ ಭ್ರಾತರೋ ವಿಪುಲೌಜಸಃ ।
ಲೋಕಪಾಲಸಮಾ ಹ್ಯೇತೇ ಸರ್ವಧರ್ಮಾರ್ಥದರ್ಶಿನಃ ॥೧೫॥

ಚತುರ್ಣಾಂ ಲೋಕಪಾಲಾನಾಂ ಮಧ್ಯೇ ವಿಪರಿವರ್ತತೇ ।
ಬ್ರಹ್ಮೇವ ಭಗವಾನೇಷ ಸರ್ವಭೂತಜಗತ್ಪತಿಃ ॥೧೬॥

ಯಾವ ಯುಧಿಷ್ಠಿರನ ಅಣ್ಣ-ತಮ್ಮಂದಿರು ನಾಲ್ಕು ಮಂದಿ ಸಚಿವರಾಗಿರುವರೋ ಅವರು ವಿಪುಲವಾದ ತೇಜಸ್ಸಿನಿಂದ ಕೂಡಿ, ಸರ್ವಧರ್ಮಗಳ ಅರ್ಥವನ್ನು ತಿಳಿದುಕೊಂಡವರಾಗಿ ಲೋಕಪಾಲರಿಗೆ ಸದೃಶರಾಗಿದ್ದಾರೆ. ಹಾಗಾಗಿ ಈ ಯುಧಿಷ್ಠಿರನು ನಾಲ್ಕು ಲೋಕಪಾಲರ ಮಧ್ಯದಲ್ಲಿ ಸಂಚರಿಸುವ ಎಲ್ಲ ಪ್ರಾಣಿಜಗತ್ತಿಗೆ ಪತಿಯಾದ ಭಗವಾನ್ ಬ್ರಹ್ಮನಂತೆ ಕಾಣುತ್ತಿದ್ದಾನೆ.

ಏವಮೇವ ಮಹಾಬಾಹುರ್ಭೀಮಾರ್ಜುನಯಮೈರ್ವೃತಃ ।
ಯುಧಿಷ್ಠಿರೋ ಮಹಾತೇಜಾ ಭವತಃ ಪಾಲಯಿಷ್ಯತಿ ॥೧೭॥

ಮಹಾತೇಜಸ್ವಿಯಾದ, ಮಹಾಪರಾಕ್ರಮಿಯಾದ ಈ ಯುಧಿಷ್ಠಿರನು ಭೀಮಾರ್ಜುನರೊಂದಿಗೆ, ನಕುಲ-ಸಹದೇವರೊಂದಿಗೆ ಕೂಡಿಕೊಂಡು ನಿಮ್ಮನ್ನು ಪಾಲಿಸುತ್ತಾನೆ.

ಅವಶ್ಯಮೇವ ವಕ್ತವ್ಯಮಿತಿ ಕೃತ್ವಾ ಬ್ರವೀಮಿ ವಃ ।
ಏಷ ನ್ಯಾಸೋ ಮಯಾ ದತ್ತಃ ಸರ್ವೇಷಾಂ ವೋ ಯುಧಿಷ್ಠಿರಃ ॥೧೮॥

ಅವಶ್ಯವಾಗಿ ಹೇಳಲೇಬೇಕಾಗಿದೆ ಎಂದು ಅನಿಸಿ ನಿಮ್ಮಲ್ಲಿ ಹೇಳುತ್ತಿದ್ದೇನೆ. ಈ ಯುಧಿಷ್ಠಿರನು ನಿಮ್ಮೆಲ್ಲರ ಮಧ್ಯದಲ್ಲಿ ನ್ಯಾಸರೂಪವಾಗಿ ಅಂದರೆ ಆಪತ್ಕಾಲದಲ್ಲಿ ಅನುಕೂಲಕ್ಕಾಗಿ ಹಣವನ್ನು ಎತ್ತಿಡುವಂತೆ ನನ್ನಿಂದ ಇಡಲ್ಪಟ್ಟಿದ್ದಾನೆ.

ಭವಂತೋ ಹ್ಯಸ್ಯ ಧೀರಸ್ಯ ನ್ಯಾಸಭೂತಾಃ ಮಯಾ ಕೃತಾಃ ॥೧೯॥

ಹಾಗೆಯೇ ನೀವೆಲ್ಲರೂ ಧೀರನಾದ ಈ ಯುಧಿಷ್ಠಿರನಿಗೆ ನ್ಯಾಸರೂಪರಾಗಿ ನನ್ನಿಂದ ಇರಿಸಲ್ಪಡುತ್ತಿದ್ದೀರಿ.

ಯದ್ಯೇವಂ ತೈಃ ಕೃತಂ ಕಿಂಚಿದ್ ವ್ಯಲೀಕಂ ವಾ ಸುತೈರ್ಮಮ ।
ಯದ್ಯನ್ಯೇನ ಮದೀಯೇನ ತದನುಜ್ಞಾತುಮರ್ಹಥ ॥೨೦॥

ಹೀಗಿರುವಾಗ ನನ್ನ ಮಕ್ಕಳಾದ ಅವರಿಂದ ಏನಾದರೂ ಅಪ್ರಿಯವಾದುದು ನಡೆದರೆ ಅಥವಾ ನನಗೆ ಸಂಬಂಧಿಸಿದ ಬೇರೆ ಯಾರಿಂದಲಾದರೂ ಅಪ್ರಿಯವಾದುದು ನಡೆದರೆ ಅದೆಲ್ಲವನ್ನೂ ಕ್ಷಮಿಸಲು ಅರ್ಹರಾಗಿರುವಿರಿ.

ಭವದ್ಭಿರ್ಹಿ ನ ಮೇ ಮನ್ಯುಃ ಕೃತಪೂರ್ವಃ ಕಥಂಚನ ।
ಅತ್ಯಂತಗುರುಭಕ್ತಾನಾಮೇಷೋಽಂಜಲಿರಿದಂ ನಮಃ ॥೨೧॥

ನಿಮ್ಮಿಂದ ಯಾವುದೇ ರೀತಿಯಾಗಿ ನನ್ನ ವಿಷಯದಲ್ಲಿ ಕೋಪವು ಈ ಮೊದಲು ತೋರಿಸಲ್ಪಟ್ಟಿಲ್ಲ. ಹೀಗೆ ಅತ್ಯಂತವಾಗಿ ರಾಜಭಕ್ತರಾದ ನಿಮಗೆ ಇದೋ ನಮಸ್ಕರಿಸುತ್ತಿದ್ದೇನೆ.

ತೇಷಾಮಪಿ ವಿಬುದ್ಧೀನಾಂ ಲುಬ್ಧಾನಾಂ ಕಾಮಚಾರಿಣಾಮ್ ।
ಕೃತೇ ಯಾಚಾಮಿ ವಃ ಸರ್ವಾನ್ ಗಾಂಧಾರೀಸಹಿತೋ ದ್ವಿಜಾಃ ॥೨೨॥

ಹೇ ಬ್ರಾಹ್ಮಣರೇ, ಗಾಂಧಾರೀಸಹಿತನಾದ ನಾನು ನಿಮ್ಮ ವಿಷಯದಲ್ಲಿ ತಪ್ಪೆಸಗಿದ, ಬುದ್ಧಿಯಿಲ್ಲದ, ಜಿಪುಣರಾದ, ಮನಸ್ಸಿಗೆ ಬಂದಂತೆ ವರ್ತಿಸುವ ಆ ವ್ಯಕ್ತಿಗಳ ವಿಷಯದಲ್ಲೂ ನಿಮ್ಮಲ್ಲಿ ಕ್ಷಮೆಯಾಚಿಸುತ್ತಿದ್ದೇನೆ.

ವೈಶಂಪಾಯನಃ

ಇತ್ಯುಕ್ತಾಸ್ತೇನ ತೇ ಸರ್ವೇ ಪೌರಜಾನಪದಾ ಜನಾಃ ।
ನೋಚುರ್ಬಾಷ್ಪಕಲಾಃ ಕಿಂಚಿದ್ ವೀಕ್ಷಾಂಚಕ್ರುಃ ಪರಸ್ಪರಮ್ ॥೨೩॥

ವೈಶಂಪಾಯನ– ಹೀಗೆ ಧೃತರಾಷ್ಟ್ರನಿಂದ ಹೇಳಲ್ಪಟ್ಟ ಆ ಎಲ್ಲ ಪಟ್ಟಣಿಗರು ಹಾಗೂ ಗ್ರಾಮವಾಸಿಗಳಾದ ಜನರು ಕಣ್ಣೀರನ್ನು ತುಂಬಿಕೊಂಡವರಾಗಿ ಏನನ್ನೂ ಹೇಳದೆ ಪರಸ್ಪರ ಮುಖ ಮುಖ ನೋಡಿಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಚತುರ್ದಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ಪೌರಜನರು ಬ್ರಾಹ್ಮಣನನ್ನು ಮುಂದೆ ಮಾಡಿಕೊಂಡು ಧೃತರಾಷ್ಟ್ರನಿಗೆ ಸಮಾಧಾನ ಪಡಿಸಿ ಕಷ್ಟದಿಂದ ಅವನಿಗೆ ಒಪ್ಪಿಗೆ ನೀಡುವುದು.

ವೈಶಂಪಾಯನಃ

ಏವಮುಕ್ತಾಸ್ತು ತೇ ತೇನ ಪೌರಜಾನಪದಾ ಜನಾಃ ।
ವೃದ್ಧೇನ ರಾಜ್ಞಾ ಕೌರವ್ಯ ನಷ್ಟಸಂಜ್ಞಾ ಇವಾಭವನ್ ॥೧॥

ವೈಶಂಪಾಯನ– ಹೇ ಕೌರವ್ಯನೇ, ವೃದ್ಧನಾದ ಧೃತರಾಷ್ಟ್ರರಾಜನಿಂದ ಈ ರೀತಿ ಹೇಳಲ್ಪಟ್ಟ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶ ಪ್ರಜೆಗಳು ಗರಬಡಿದವರಂತೆ ಆದರು.

ತೂಷ್ಣೀಂಭೂತಾನ್ ತತಸ್ತಾಂಸ್ತು ಬಾಷ್ಪಕಂಠಾನ್ ಮಹೀಪತಿಃ ।
ಧೃತರಾಷ್ಟ್ರೋ ಮಹೀಪಾಲಃ ಪುನರೇವಾಭ್ಯಭಾಷತ ॥೨॥

ಕಣ್ಣೀರಿನಿಂದ ಗಂಟಲು ತುಂಬಿ ಬಂದು ಮೌನರಾಗಿದ್ದ ಅವರನ್ನು ಕುರಿತು ಮಹೀಪತಿಯಾದ ಧೃತರಾಷ್ಟ್ರರಾಜನು ಮತ್ತೆ ತಾನೇ ಮಾತನಾಡಿದನು.

ಧೃತರಾಷ್ಟ್ರಃ

ವೃದ್ಧಯಾ ಹತಪುತ್ರ್ಯಾ ಚ ಧರ್ಮಪತ್ನ್ಯಾ ಸಹಾನಯಾ ।
ವಿಲಪಂತಂ ಬಹುವಿಧಂ ಕೃಪಣಂ ಚೈವ ಸತ್ತಮಾಃ ॥೩॥

ಪಿತ್ರಾ ಚೈವಾಭ್ಯನುಜ್ಞಾತಂ ಕೃಷ್ಣದ್ವೈಪಾಯನೇನ ವೈ ।
ವನವಾಸಾಯ ಧರ್ಮಜ್ಞಾ ಧರ್ಮಜೇನ ನೃಪೇಣ ಚ ॥೪॥

ಸೋಽಹಂ ಪುನಃ ಪುನರ್ಯಾಚೇ ಶಿರಸಾ ಚ ನತೋಽನಘಾಃ ।
ಗಾಂಧಾರೀಸಹಿತಂ ತಸ್ಮಾತ್ ಸಮನುಜ್ಞಾತುಮರ್ಹಥ ॥೫॥

ಧೃತರಾಷ್ಟ್ರ– ಹೇ ಸಜ್ಜನರೇ, ವೃದ್ಧಳಾದ, ಮಕ್ಕಳನ್ನು ಕಳೆದುಕೊಂಡಿರುವ ಈ ನನ್ನ ಧರ್ಮಪತ್ನಿಯ ಜೊತೆಗೆ ಬಹುವಾಗಿ ದೀನತೆಯಿಂದ ಅಳುತ್ತಿರುವ, ತಂದೆಯಾದ ಕೃಷ್ಣದ್ವೈಪಾಯನರಿಂದ ವನವಾಸಕ್ಕೆ ಒಪ್ಪಿಗೆಯನ್ನು ಪಡೆದಿರುವ, ಹಾಗೆಯೇ ರಾಜನಾದ ಧರ್ಮಜನಿಂದಲೂ ಅನುಜ್ಞಾತನಾದ ನಾನು ತಲೆ ಬಗ್ಗಿಸಿ ಮತ್ತೆ ಮತ್ತೆ

ನಿಮ್ಮಲ್ಲಿ ಪ್ರಾರ್ಥಿಸುತ್ತಿದ್ದೇನೆ. ಹೇ ಧರ್ಮಜ್ಞರೇ, ಶುದ್ಧ ವ್ಯಕ್ತಿತ್ವವುಳ್ಳವರೇ, ಗಾಂಧಾರೀ ಸಹಿತನಾದ ನನಗೆ ಕಾಡಿಗೆ ಹೋಗಲು ಅನುಜ್ಞೆ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

ವೈಶಂಪಾಯನಃ

ಶ್ರುತ್ವಾ ತು ಕುರುರಾಜಸ್ಯ ವಾಕ್ಯಾನಿ ಕರುಣಾನಿ ತೇ ।
ರುರುದುಃ ಸರ್ವತೋ ರಾಜನ್ ಸಮೇತಾಃ ಕುರುಜಾಂಗಲಾಃ ॥೬॥

ವೈಶಂಪಾಯನ– ಕುರುರಾಜನ ಕರುಣಾಜನಕವಾದ ಈ ಮಾತುಗಳನ್ನು ಕೇಳಿ ಹೇ ಜನಮೇಜಯ ರಾಜನೇ, ಕುರುಜಾಂಗಲ ಪ್ರದೇಶದಿಂದ ಒಟ್ಟುಸೇರಿರುವ ಎಲ್ಲ ಪ್ರಜೆಗಳು ಸಂಪೂರ್ಣವಾಗಿ ಅತ್ತೇಬಿಟ್ಟರು.

ಉತ್ತರೀಯೈಃ ಕರೈಶ್ಚಾಪಿ ಸಂಛಾದ್ಯ ವದನಾನಿ ತೇ ।
ಕುರವಃ ಶೋಕಸಂತಪ್ತಾ ಮುಹೂರ್ತಂ ಪಿತೃಮಾತೃವತ್ ॥೭॥

ಕುರುಪ್ರದೇಶದ ಆ ಎಲ್ಲ ಜನರು ಉತ್ತರೀಯಗಳಿಂದಲೂ, ಕೈಗಳಿಂದಲೂ ತಮ್ಮ ಮುಖಗಳನ್ನು ಮುಚ್ಚಿಕೊಂಡು, ಒಂದು ಕ್ಷಣ ತಂದೆ-ತಾಯಿಗಳ ವಿಯೋಗದಿಂದ ಅಳುವಂತೆ ಶೋಕಸಂತಪ್ತರಾಗಿ ಅತ್ತರು.

ಹೃದಯೈಃ ಶೂನ್ಯಭೂತೈಸ್ತೇ ಧೃತರಾಷ್ಟ್ರಪ್ರವಾಸಜಮ್ ।
ದುಃಖಂ ಸಂಧಾರಯಂತಿ ಸ್ಮ ನಷ್ಟಸಂಜ್ಞಾಃ ಸಮಾಹಿತಾಃ ॥೮॥

ಶೂನ್ಯವಾದ ಹೃದಯಗಳಿಂದ ಕೂಡಿದ ಅವರು ಪ್ರಜ್ಞಾಹೀನರಾದ ಸ್ಥಿತಿಗೆ ಬಂದಿದ್ದರೂ ಧೃತರಾಷ್ಟ್ರನ ವನವಾಸದಿಂದ ಉಂಟಾಗುವ ದುಃಖವನ್ನು ಕಷ್ಟದಿಂದ ಸಹಿಸಿಕೊಳ್ಳುತ್ತಿದ್ದರು.

ತೇ ವಿನೀಯ ತಮಾಯಾಸಂ ಕುರುರಾಜವಿಯೋಗಜಮ್ ।
ಶನೈಃ ಶನೈಸ್ತದಾऽನ್ಯೋನ್ಯಮಬ್ರುವನ್ ಸ್ವಮತಾನ್ಯುತ ॥೯॥

ಅನಂತರ ಅವರು ಕುರುರಾಜನ ವಿಯೋಗದಿಂದ ಉಂಟಾದ ಆ ಆಯಾಸವನ್ನು ನಿಧಾನವಾಗಿ ಕಡಿಮೆ ಮಾಡಿಕೊಂಡು ತಮ್ಮ ಅಭಿಪ್ರಾಯಗಳನ್ನು ಪರಸ್ಪರ ಹೇಳಿಕೊಂಡರು.

ತತಃ ಸಂಚಿಂತ್ಯ ತೇ ಸರ್ವೇ ವಾಕ್ಯಾನ್ಯಥ ಸಮಾಸತಃ ।
ಏಕಸ್ಮಿನ್ ಬ್ರಾಹ್ಮಣೇ ಕಾರ್ಯಮಾವೇಶ್ಯೋಚುರ್ನರಾಧಿಪಮ್ ॥೧೦॥

ಅನಂತರ ಅವರೆಲ್ಲರೂ ಸೇರಿಕೊಂಡು ಒಟ್ಟಾಗಿ ಎಲ್ಲರ ಮಾತುಗಳನ್ನೂ ಆಲೋಚಿಸಿ ಒಬ್ಬ ಬ್ರಾಹ್ಮಣನಲ್ಲಿ ಮಾಡಬೇಕಾದ ಎಲ್ಲವನ್ನೂ ತಿಳಿಸಿ, ಅವನ ಮೂಲಕ ರಾಜನಿಗೆ ಹೇಳಿದರು.

ತತ್ರ ಸ್ಮೇ ಚರಣೇ ವೃದ್ಧಃ ಸಮ್ಮತೋಽರ್ಥವಿಶಾರದಃ ।
ಶಾಕಲ್ಯೋ ಬಹ್ವೃಚೋ ರಾಜನ್ ವಕ್ತುಂ ಸಮುಪಚಕ್ರಮೇ ॥೧೧॥

ಹೇ ರಾಜನೇ, ಅನಂತರ ಅಲ್ಲಿ ಇರುವವರಲ್ಲಿ ಜ್ಞಾನವೃದ್ಧನಾದ, ತನ್ನ ಆಚಾರಗಳಿಂದ ಮತ್ತು ವಿಚಾರಗಳಿಂದ ಎಲ್ಲರಿಗೂ ಸಮ್ಮತನಾದ, ಅರ್ಥಗಳಲ್ಲಿ ವಿಶಾರದನಾದ ಶಾಕಲ್ಯನೆಂಬ ಋಗ್ವೇದಿಯಾದ ಬ್ರಾಹ್ಮಣನು ರಾಜನನ್ನು ಕುರಿತು ಹೇಳಲು ಆರಂಭಿಸಿದನು.

ಅನುಮಾನ್ಯ ಮಹಾರಾಜಂ ಸದಃ ಸಮನುಭಾಷ್ಯ ಚ ।
ವಿಪ್ರಃ ಪ್ರಗಲ್ಭೋ ಮೇಧಾವೀ ಸ ರಾಜಾನಮುವಾಚ ಹ ॥೧೨॥

ಪ್ರೌಢನೂ, ಮೇಧಾವಿಯೂ ಆದ ಆ ಬ್ರಾಹ್ಮಣನು ಮಹಾರಾಜನನ್ನು ಯೋಗ್ಯತೆಗೆ ತಕ್ಕಂತೆ ಗೌರವಿಸಿ, ಸಭಾಸದರನ್ನೂ ಸಂಬೋಧಿಸಿ, ರಾಜನನ್ನು ಕುರಿತು ಈ ರೀತಿ ಹೇಳಿದನು.

ಶಾಕಲ್ಯಃ

ರಾಜನ್ ವಾಕ್ಯಂ ಜನಸ್ಯಾಸ್ಯ ಮಯಿ ಸರ್ವಂ ಸಮರ್ಪಿತಮ್ ।
ವಕ್ಷ್ಯಾಮಿ ತದಹಂ ವೀರ ತಜ್ಜುಷಸ್ವ ನರಾಧಿಪ ॥೧೩॥

ಶಾಕಲ್ಯ– ಹೇ ನರಾಧಿಪತಿಯಾದ ವೀರರಾಜನೇ, ಈ ಎಲ್ಲ ಜನರ ಮಾತುಗಳೂ ನನ್ನಲ್ಲಿ ಸಮರ್ಪಿತವಾಗಿವೆ. ಅದನ್ನು ನಾನು ಹೇಳುತ್ತಿದ್ದೇನೆ. ನೀನು ಆಲಿಸುವವನಾಗು.

ಯಥಾ ವದಸಿ ರಾಜೇಂದ್ರ ಸರ್ವಮೇತತ್ ತಥಾ ವಿಭೋ ।
ನಾತ್ರ ಮಿಥ್ಯಾ ವಚಃ ಕಿಂಚಿತ್ ಸುಹೃತ್ತ್ವಂ ನಃ ಪರಸ್ಪರಮ್ ॥೧೪॥

ಹೇ ರಾಜಶ್ರೇಷ್ಠನಾದ ಸ್ವಾಮಿಯೇ, ಈವರೆಗೆ ನೀನು ಏನೆಲ್ಲ ಹೇಳಿದೆಯೋ ಅದೆಲ್ಲವೂ ಸರಿಯಾಗಿಯೇ ಇದೆ. ಇಲ್ಲಿ ಸುಳ್ಳು ಮಾತು ಯಾವುದೂ ಇಲ್ಲ. ನಮ್ಮೆಲ್ಲರಿಗೂ ಪರಸ್ಪರವಾಗಿ ಮಿತ್ರಭಾವವು ಇದ್ದೇ ಇದೆ.

ನ ಜಾತ್ವಸ್ಯ ತು ವಂಶಸ್ಯ ರಾಜ್ಞಾಂ ಕಿಂಚಿತ್ ಕದಾಚನ ।
ರಾಜಾऽऽಸೀದ್ ಯಃ ಪ್ರಜಾಪಾಲಃ ಪ್ರಜಾನಾಂ ನ ಪ್ರಿಯೋऽಭವತ್ ॥

ಪಿತೃವನ್ಮಾತೃವಚ್ಚೈವ ಭವಂತಃ ಪಾಲಯಂತಿ ನಃ ।
ನ ಚ ದುರ್ಯೋಧನಃ ಕಿಂಚಿದಯುಕ್ತಂ ಕೃತವಾನ್ ನೃಪ ॥೧೬॥

ಈ ವಂಶದ ರಾಜರ ಸಣ್ಣ ಮಾತೂ ಕೂಡ ಯಾವತ್ತೂ ಸುಳ್ಳಾದುದಿಲ್ಲ. ಅಲ್ಲದೇ, ಯಾವುದೇ ರಾಜನು ಪ್ರಜೆಗಳಿಗೆ ಇಷ್ಟವಾಗದಂತೆ ಪ್ರಜಾಪಾಲನೆಯನ್ನೂ ಮಾಡಿಲ್ಲ. ಅಲ್ಲದೇ, ಎಂತಹ ರಾಜನು ಪ್ರಜೆಗಳಿಗೆ ಇಷ್ಟವಾಗಲಾರನೋ ಅಂತಹ ಯಾವ ರಾಜನೂ ಈ ವಂಶದಲ್ಲಿ ಬಂದಿಲ್ಲ. ನೀವೆಲ್ಲರೂ ನಮ್ಮನ್ನು ತಂದೆ- ತಾಯಿಗಳಂತೆ ಸಾಕುತ್ತಿದ್ದೀರಿ. ಹೇ ರಾಜನೇ, ದುರ್ಯೋಧನನೂ ಕೂಡ ಸ್ವಲ್ಪವೂ ಅಯೋಗ್ಯವಾದುದನ್ನು ನಮ್ಮ ವಿಷಯದಲ್ಲಿ ನಡೆಸಲಿಲ್ಲ.

ಪ್ರಿಯಾಣಿ ಕುರ್ವನ್ ಸರ್ವೇಷಾಮನುವೃತ್ತ್ಯರ್ಥಮುದ್ಯತಃ ।
ಯಥಾऽಬ್ರವೀತ್ತು ಧರ್ಮಜ್ಞೋ ಮುನಿಃ ಸತ್ಯವತೀಸುತಃ ॥೧೭॥

ತಥಾ ಕುರು ಮಹಾರಾಜ ಸ ಹಿ ನಃ ಪರಮೋ ಗುರುಃ ॥೧೮॥

ಅವನು ಎಲ್ಲರಿಗೂ ಪ್ರಿಯವಾದುದನ್ನೇ ಮಾಡುತ್ತಾ ನಮ್ಮೆಲ್ಲರ ಸೇವೆಗಾಗಿ ಪ್ರಯತ್ನ ಪಡುತ್ತಿದ್ದನು. ಹಾಗಾಗಿ ಧರ್ಮಜ್ಞರಾದ, ಸತ್ಯವತೀಸುತನಾದ ವೇದವ್ಯಾಸ ಮುನಿಯು ಹೇಗೆ ಹೇಳಿರುವರೋ ಅದೇ ರೀತಿ ಮಾಡು. ಹೇ ಮಹಾರಾಜನೇ, ಆ ಮುನಿಯು ನಮ್ಮೆಲ್ಲರಿಗೂ ಉತ್ಕೃಷ್ಟವಾದ ಗುರುವಾಗಿದ್ದಾರೆ.

ತ್ಯಕ್ತಾ ವಯಂ ತು ಭವತಾ ದುಃಖಶೋಕಪರಾಯಣಾಃ ।
ಭವಿಷ್ಯಾಮಶ್ಚಿರಂ ರಾಜನ್ ಭವದ್ಗುಣಶತೈರ್ಹೃತಾಃ ॥೧೯॥

ಹೇ ರಾಜನೇ, ನಿನ್ನ ನೂರಾರು ಸದ್ಗುಣಗಳಿಂದ ಅಪಹೃತರಾದ ನಾವೆಲ್ಲರೂ ನಿನ್ನಿಂದ ಪರಿತ್ಯಕ್ತರಾಗಿ ಬಹುಕಾಲ ದುಃಖ ಹಾಗೂ ಶೋಕಗಳಲ್ಲಿ ಮುಳುಗಿರುವವರಾಗುತ್ತೇವೆ.

ಯಥಾ ಶಂತನುನಾ ಗುಪ್ತಾ ರಾಜ್ಞಾ ಚಿತ್ರಾಂಗದೇನ ಚ ।
ಭೀಷ್ಮವೀರ್ಯೋಪಗೂಢೇನ ಪಿತ್ರಾ ಚ ತವ ಪಾರ್ಥಿವ ॥೨೦॥

ಭವದ್ಬುದ್ಧಿಯುಜಾ ಚೈವ ಪಾಂಡುನಾ ಪೃಥಿವೀಕ್ಷಿತಾ ।
ತಥಾ ದುರ್ಯೋಧನೇನಾಪಿ ರಾಜ್ಞಾ ಸ್ಮ ಪರಿಪಾಲಿತಾಃ ॥೨೧॥

ನ ನಃ ಸೋಽಣ್ವಪಿ ಪುತ್ರಸ್ತೇ ವ್ಯಲೀಕಂ ಕೃತವಾನ್ ನೃಪ ॥೨೨॥

ಹೇ ಪಾರ್ಥಿವನೇ, ನಾವೆಲ್ಲರೂ ರಾಜನಾದ ಶಂತನುವಿನಿಂದ ರಕ್ಷಿತರಾಗಿದ್ದೆವೋ, ಹೇಗೆ ನಿನ್ನ ತಂದೆಯಾದ ಮತ್ತು ಭೀಷ್ಮರ ಬಲದಿಂದಲೂ ಆಲಿಂಗಿತನಾದ ಚಿತ್ರಾಂಗದನಿಂದ ಹೇಗೆ ರಕ್ಷಿತರಾಗಿದ್ದೆವೋ, ಹೇಗೆ ನಿನ್ನ ಬುದ್ಧಿಯನ್ನು ಸೇರಿಸಿಕೊಂಡ ರಾಜನಾದ ಪಾಂಡುವಿನಿಂದ ರಕ್ಷಿತರಾಗಿದ್ದೆವೋ, ಹಾಗೆಯೇ ರಾಜನಾದ ದುರ್ಯೋಧನನಿಂದಲೂ ಪರಿಪಾಲಿತರಾಗಿದ್ದೇವೆ. ಆ ನಿನ್ನ ಮಗನು ನಮಗೆ ಸ್ವಲ್ಪವೂ ಅಪ್ರಿಯವಾದುದನ್ನು ಮಾಡಲಿಲ್ಲ.

ಪಿತರೀವ ಸುವಿಶ್ವಸ್ತಾಸ್ತಸ್ಮಿನ್ನಪಿ ನರಾಧಿಪೇ ।
ವಯಮಾಸ್ಮ ಯಥಾ ಸಮ್ಯಗ್ಭವತೋ ವಿದಿತಂ ತಥಾ ॥೨೩॥

ರಾಜನಾದ ದುರ್ಯೋಧನನಲ್ಲೂ ಹೇಗೆ ನಾವು ತಂದೆಯಂತೆ ವಿಶ್ವಾಸವನ್ನಿಟ್ಟವರಾಗಿದ್ದೆವೋ ಅದು ನಿಮಗೂ ಚೆನ್ನಾಗಿ ತಿಳಿದಿದೆ.

ತಥಾ ವರ್ಷಸಹಸ್ರಾಣಿ ಕುಂತೀಪುತ್ರೇಣ ಧೀಮತಾ ।
ಪಾಲ್ಯಮಾನಾ ಧೃತಿಮತಾ ಸುಖಂ ವಿಂದಾಮಹೇ ನೃಪ ॥೨೪॥

ಸಹಸ್ರಾರು ವರ್ಷಗಳಿಂದ ನಿನ್ನ ಪೂರ್ವಜರು ಹೇಗೆ ರಾಜ್ಯವಾಳಿರುವರೋ ಅಂತೆಯೇ ಬುದ್ಧಿವಂತನಾದ, ಧೈರ್ಯಶಾಲಿಯಾದ ಕುಂತೀಪುತ್ರನಿಂದಲೂ ರಕ್ಷಿಸಲ್ಪಡುವ ನಾವು ಸುಖವನ್ನೇ ಪಡೆಯುತ್ತೇವೆ.

ರಾಜರ್ಷೀಣಾಂ ಪುರಾಣಾನಾಂ ಭವತಾಂ ಪುಣ್ಯಕರ್ಮಣಾಮ್ ।
ಕುರುಸಂವರಣಾದೀನಾಂ ಭರತಸ್ಯ ಚ ಧೀಮತಃ ॥೨೫॥

ವೃತ್ತಂ ಸಮನುಯಾತ್ಯೇಷ ಧರ್ಮಾತ್ಮಾ ಭೂರಿದಕ್ಷಿಣಃ ॥೨೬॥

ಬಹಳ ಸರಳನಾಗಿದ್ದು ಧರ್ಮಾತ್ಮನಾದ ಇವನು ಪುಣ್ಯಕರ್ಮಗಳನ್ನು ಮಾಡಿರುವ ನಿಮ್ಮ ಪೂರ್ವಜರಾದ ಕುರು-ಸಂವರಣನೇ ಮೊದಲಾದ, ಹಾಗೆಯೇ ಧೀಮಂತನಾದ ಭರತನೇ ಮೊದಲಾದ ರಾಜರ್ಷಿಗಳ ನಡತೆಯನ್ನು ಅನುಸರಿಸುತ್ತಿದ್ದಾನೆ.

ನಾತ್ರ ವಾಚ್ಯಂ ಮಹಾರಾಜ ಸುಸೂಕ್ಷ್ಮಮಪಿ ವಿದ್ಯತೇ ॥೨೭॥

ಹೇ ಮಹಾರಾಜನೇ, ಈ ವಿಷಯದಲ್ಲಿ ನಿಂದಾರೂಪವಾಗಿ ಆಡಿಕೊಳ್ಳಬೇಕಾದ ಸಣ್ಣ ಅಂಶವೂ ಇರುವುದಿಲ್ಲ.

ಉಷಿತಾಃ ಸ್ಮ ಸುಖಂ ನಿತ್ಯಂ ಭವತಾ ಪರಿಪಾಲಿತಾಃ ।
ಸುಸೂಕ್ಷ್ಮಂ ಚ ವ್ಯಲೀಕಂ ತೇ ಸಪುತ್ರಸ್ಯ ನ ವಿದ್ಯತೇ ॥೨೮॥

ನಿನ್ನಿಂದ ಪಾಲಿಸಲ್ಪಡುತ್ತಿರುವಾಗಲೂ ನಾವು ನಿತ್ಯವೂ ಸುಖವಾಗಿಯೇ ವಾಸವಾಗಿದ್ದೆವು. ಪುತ್ರಸಹಿತನಾದ ನಿನ್ನ ಆಳ್ವಿಕೆಯಲ್ಲೂ ಅತೀ ಸಣ್ಣ ಅಪರಾಧವೂ ಇಲ್ಲ.

ಯತ್ತು ಜ್ಞಾತಿವಿಮರ್ದೇऽಸ್ಮಿನ್ನಾತ್ಥ ದುರ್ಯೋಧನಂ ಪ್ರತಿ ।
ಭವಂತಮನುನೇಷ್ಯಾಮಿ ತತ್ರಾಪಿ ಕುರುನಂದನ ॥೨೯॥

ಹೇ ಕುರುನಂದನನೇ, ದುರ್ಯೋಧನನ ಕುರಿತು ಬಂಧುಗಳ ಕಲಹ ನಿಮಿತ್ತವಾದ ಯುದ್ಧದ ವಿಷಯದಲ್ಲಿ ನೀನೇನು ಹೇಳಿರುವೆಯೋ ಆ ವಿಷಯದಲ್ಲೂ ನಿನಗೆ ಸಮಾಧಾನವನ್ನು ಹೇಳುತ್ತೇನೆ.

ನ ತದ್ ದುರ್ಯೋಧನಕೃತಂ ನ ಚ ತದ್ಭವತಾ ಕೃತಮ್ ।
ನ ಕರ್ಣಸೌಬಲಾಭ್ಯಾಂ ಚ ಕುರವೋ ಯತ್ ಕ್ಷಯಂ ಗತಾಃ ॥೩೦॥

ಯುದ್ಧದಲ್ಲಿ ಕುರುವಂಶಜರೆಲ್ಲರೂ ಏನು ನಾಶವಾಗಿದ್ದಾರೋ ಆ ನಾಶವು ದುರ್ಯೋಧನನಿಂದ ಕೃತವಾದದ್ದೂ ಅಲ್ಲ, ನಿನ್ನಿಂದಲೂ ಮಾಡಲ್ಪಟ್ಟಿಲ್ಲ, ಅಥವಾ ಕರ್ಣ-ಶಕುನಿಗಳೂ ಅದನ್ನು ಮಾಡಿಲ್ಲ.

ದೈವಂ ತತ್ತು ವಿಜಾನೀಮೋ ಯನ್ನ ಶಕ್ಯಂ ಪ್ರಬಾಧಿತುಮ್ ।
ದೈವಂ ಪುರುಷಕಾರೇಣ ನ ಶಕ್ಯಮಪಿ ಬಾಧಿತುಮ್ ॥೩೧॥

ಅದೆಲ್ಲದಕ್ಕೂ ತಡೆಯಲು ಸಾಧ್ಯವಿಲ್ಲದ ಭಗವತ್ಸಂಕಲ್ಪವೇನಿದೆಯೋ ಅದೇ ಕಾರಣವೆಂದು ತಿಳಿದಿದ್ದೇವೆ. ಏಕೆಂದರೆ ಭಗವತ್ಸಂಕಲ್ಪವು ಮನುಷ್ಯರ ಯಾವ ಪ್ರಯತ್ನದಿಂದಲೂ ತಡೆಯಲ್ಪಡುವುದಿಲ್ಲ.

ಅಕ್ಷೌಹಿಣ್ಯೋ ಮಹಾರಾಜ ದಶಾಷ್ಟೌ ಚ ಸಮಾಗತಾಃ ।
ಅಷ್ಟಾದಶಾಹೇನ ಹತಾ ದಶಭಿರ್ಯೋಧಪುಂಗವೈಃ ॥೩೨॥

ಹೇ ಮಹಾರಾಜನೇ, ಯುದ್ಧಕ್ಕಾಗಿ ಬಂದಿರುವ ಹದಿನೆಂಟು ಅಕ್ಷೌಹಿಣಿ ಸೇನೆಯವರು ಹದಿನೆಂಟು ದಿನಗಳಲ್ಲಿ ಕೇವಲ ಹತ್ತೇ ಯೋಧಶ್ರೇಷ್ಠರಿಂದ ಹತರಾಗಿದ್ದಾರೆ.

ಭೀಷ್ಮದ್ರೋಣಕೃಪೈ ರಾಜನ್ ಕರ್ಣೇನ ಚ ಮಹಾತ್ಮನಾ ।
ಯುಯುಧಾನೇನ ವೀರೇಣ ಧೃಷ್ಟದ್ಯುಮ್ನೇನ ಚಾಹವೇ ॥೩೩॥

ಚತುರ್ಭಿಃ ಪಾಂಡುಪುತ್ರೈಶ್ಚ ಭೀಮಾರ್ಜುನಯಮೈರ್ನೃಪ ।
ಜನಕ್ಷಯೋಽಯಂ ನೃಪತೇ ಕೃತೋ ದೈವಬಲಾತ್ ಕೃತೈಃ ॥೩೪॥

ಭೀಷ್ಮ, ದ್ರೋಣಾಚಾರ್ಯರು, ಕೃಪಾಚಾರ್ಯರು, ಮಹಾತ್ಮನಾದ ಕರ್ಣ, ಸಾತ್ಯಕಿ, ವೀರನಾದ ಧೃಷ್ಟದ್ಯುಮ್ನ, ಭೀಮ, ಅರ್ಜುನ, ನಕುಲ-ಸಹದೇವರೆಂಬ ನಾಲ್ಕು ಮಂದಿ ಪಾಂಡುಪುತ್ರರು - ಈ ಹತ್ತೇ ಜನರಿಂದ ಭಗವತ್ಸಂಕಲ್ಪದ ಬಲದಿಂದ ಇಷ್ಟೊಂದು ಜನರ ನಾಶವು ನಡೆದಿದೆ.

ಅವಶ್ಯಮೇವ ಸಂಗ್ರಾಮೇ ಕ್ಷತ್ರಿಯೇಣ ವಿಶೇಷತಃ ।
ಕರ್ತವ್ಯಂ ನಿಧನಂ ಲೋಕೇ ಕ್ಷತ್ರೇಣ ಹತಬಂಧುನಾ ॥೩೫॥

ಲೋಕದಲ್ಲಿ ಕ್ಷತ್ರಿಯನಿಂದ ವಿಶೇಷವಾಗಿ ಮಾಡಬೇಕಾದ ಅವಶ್ಯ ಕರ್ತವ್ಯ ಯಾವುದೆಂದರೆ ಯುದ್ಧದಲ್ಲಿ ಬಂಧುಗಳನ್ನು ಕಳೆದುಕೊಂಡ ಕ್ಷತ್ರಿಯನಿಂದ ಮರಣ ಹೊಂದುವುದಾಗಿದೆ.

ಯೈರಿಯಂ ಪುರುಷವ್ಯಾಘ್ರೈರ್ವಿದ್ಯಾಬಾಹುಬಲಾನ್ವಿತೈಃ ।
ಪೃಥಿವೀ ನಿಹತಾ ಸರ್ವಾ ಸರಥಾ ಸಹಯದ್ವಿಪಾ ॥೩೬॥

ನ ಚ ರಾಜಾऽಪರಾಧ್ನೋತಿ ಪುತ್ರಸ್ತವ ಮಹಾಮನಾಃ ।
ನ ಭವಾನ್ ನ ಚ ತೇ ಭೃತ್ಯಾ ನ ಕರ್ಣೋ ನ ಚ ಸೌಬಲಃ ॥೩೭॥

ವಿದ್ಯಾಬಲ ಹಾಗೂ ಬಾಹುಬಲದಿಂದ ಕೂಡಿದ ಪುರುಷಶ್ರೇಷ್ಠರಾದ ಯಾವ ರಾಜರಿಂದ ರಥ-ಕುದುರೆ-ಆನೆಗಳು ಇವುಗಳಿಂದ ಕೂಡಿದ ಈ ಎಲ್ಲ ಪೃಥಿವಿಯೂ ನಾಶವಾಯಿತೋ ಆ ವಿಷಯದಲ್ಲಿ ಮಹಾಮನಸ್ವಿಯಾದ ರಾಜನಾದ ನಿನ್ನ ಮಗನು ಅಪರಾಧಿಯಲ್ಲ. ಅಂತೆಯೇ ನೀನಾಗಲೀ, ನಿನ್ನ ಸೇವಕರಾಗಲೀ, ಕರ್ಣನಾಗಲೀ, ಶಕುನಿಯಾಗಲೀ ಯಾರೂ ಅಪರಾಧಿಗಳಲ್ಲ.

ಯದ್ವಿನಷ್ಟಾಃ ಕುರುಕ್ಷೇತ್ರೇ ರಾಜಾನಶ್ಚ ಸಹಸ್ರಶಃ ।
ಸರ್ವೇ ದೈವಕೃತೇ ಯದ್ವೈ ಕೋऽತ್ರ ಕಿಂ ವಕ್ತುಮರ್ಹತಿ ॥೩೮॥

ಕುರುಕ್ಷೇತ್ರದಲ್ಲಿ ಸಾವಿರಾರು ಮಂದಿ ರಾಜರೆಲ್ಲರೂ ಏನು ನಾಶವಾಗಿದ್ದಾರೋ, ಯಾವ ಈ ನಾಶವು ಭಗವತ್ಸಂಕಲ್ಪದಿಂದಲೇ ನಡೆದಿದೆಯೋ ಈ ವಿಷಯದಲ್ಲಿ ಯಾರೇನು ಹೇಳಲು ಸಾಧ್ಯ ?

ಗುರುರ್ಮತೋ ಭವಾನಸ್ಯ ಕೃತ್ಸ್ನಸ್ಯ ಜಗತಃ ಪ್ರಭುಃ ।
ಧರ್ಮಾತ್ಮಾನಮತಸ್ತುಭ್ಯಮನುಜಾನೀಮಹೇ ಸುತಮ್ ॥೩೯॥

ನೀನು ನಮಗೆಲ್ಲರಿಗೂ ಪೂಜನೀಯನಾಗಿರುವಿ. ಈ ಇಡೀ ಜಗತ್ತಿಗೆ ಪ್ರಭುವಾಗಿರುವಿ. ಆದ್ದರಿಂದ ನಿನ್ನ ಮಗನನ್ನು ಕುರಿತು ಈ ಸಮಾಧಾನದ ಮಾತುಗಳನ್ನು ಹೇಳುತ್ತಿದ್ದೇವೆ.

ಲಭತಾಂ ವೀರಲೋಕಂ ಸ ಸಸಹಾಯೋ ನರಾಧಿಪಃ ।
ದ್ವಿಜಾಗ್ರ್ಯೈಃ ಸಮನುಜ್ಞಾತಃ ತ್ರಿದಿವೇ ಮೋದತಾಂ ಸುಖಮ್ ॥೪೦॥

ಸಹಾಯಕರಿಂದ ಸಹಿತರಾದ ರಾಜನಾದ ಆ ದುರ್ಯೋಧನನು ವೀರಲೋಕವನ್ನು ಪಡೆಯಲಿ. ದ್ವಿಜಶ್ರೇಷ್ಠರಿಂದ ಆಶೀರ್ವದಿಸಲ್ಪಟ್ಟ ಅವನು ಸ್ವರ್ಗದಲ್ಲಿ ಸುಖವನ್ನು ಅನುಭವಿಸಲಿ.

ಪ್ರಾಪ್ಸ್ಯತೇ ಚ ಭವಾನ್ ಪುಣ್ಯಂ ಧರ್ಮೇಣ ಸತತಂ ಸ್ಥಿತಃ ।
ವೇದ ಧರ್ಮಂ ಮಹಾಬಾಹೋ ಲೌಕ್ಯಂ ವೈದಿಕಮೇವ ಚ ॥೪೧॥

ಹೇ ಮಹಾಬಾಹುವೇ, ಲೌಕಿಕ ಧರ್ಮವನ್ನೂ ಹಾಗೂ ವೈದಿಕ ಧರ್ಮವನ್ನೂ ತಿಳಿದಿರುವ, ಸತತವೂ ಧರ್ಮಮಾರ್ಗದಲ್ಲೇ ಇರುವ ನೀನೂ ಕೂಡ ಪುಣ್ಯಲೋಕವನ್ನೇ ಪಡೆಯುವೆ.

ದೃಷ್ಟಾಪದಾನಾಶ್ಚಾಸ್ಮಾಭಿಃ ಪಾಂಡವಾಃ ಪುರುಷರ್ಷಭಾಃ ।
ಸಮರ್ಥಾಸ್ತ್ರಿದಿವಸ್ಯಾಪಿ ಪಾಲನೇ ಕಿಂ ಪುನಃ ಕ್ಷಿತೇಃ ॥೪೨॥

ಪುರುಷಶ್ರೇಷ್ಠರಾದ ಪಾಂಡವರು ಪರಿಶುದ್ಧವಾದ ನಡತೆಯುಳ್ಳವರು ಎಂಬುದನ್ನು ನಾವು ಈಗಾಗಲೇ ನೋಡಿರುವೆವು. ಅವರು ಮೂರುಲೋಕಗಳನ್ನೂ ಪಾಲಿಸಲು ಸಮರ್ಥರಾಗಿದ್ದಾರೆ. ಮತ್ತೆ ಭೂಮಿಯ ವಿಷಯದಲ್ಲಿ ಹೇಳಬೇಕಾಗಿದ್ದೇನಿದೆ?

ಅನುವರ್ತ್ಸ್ಯಂತಿ ಕೌರವ್ಯಾಃ ಸಮೇಷು ವಿಷಮೇಷು ಚ ।
ಪ್ರಜಾಃ ಕುರುಕುಲಶ್ರೇಷ್ಠ ಪಾಂಡವಾನ್ ಶೀಲಭೂಷಣಾನ್ ॥೪೩॥

ಹೇ ಕುರುಕುಲಶ್ರೇಷ್ಠನೇ, ಕುರುದೇಶದ ಪ್ರಜೆಗಳು ಸಮ ಹಾಗೂ ವಿಷಮ ಪರಿಸ್ಥಿತಿಗಳೆರಡರಲ್ಲೂ ಶೀಲಭೂಷಣರಾದ ಪಾಂಡವರನ್ನು ಅನುಸರಿಸಿಕೊಂಡು ನಡೆಯುತ್ತಾರೆ.

ಬ್ರಹ್ಮದೇಯಾಗ್ರಹಾರಾಂಶ್ಚ ಪರಿಹಾರಾಂಶ್ಚ ಪಾರ್ಥಿವಃ ।
ಪೂರ್ವರಾಜನಿಸರ್ಗಾಂಶ್ಚ ಪಾಲಯತ್ಯೇವ ಪಾಂಡವಃ ॥೪೪॥

ರಾಜನಾದ ಪಾಂಡವನು ಬ್ರಾಹ್ಮಣರಿಗೆ ಕೊಡಬೇಕಾದ ಅಗ್ರಹಾರಗಳನ್ನೂ, ಕಷ್ಟ ಕಾಲದಲ್ಲಿ ನೀಡುವ ಪರಿಹಾರಗಳನ್ನೂ, ಹಿಂದಿನ ರಾಜರು ನೀಡಿದ ದಾನಗಳನ್ನೂ ನಿಶ್ಚಯವಾಗಿಯೂ ಪಾಲಿಸುತ್ತಾನೆ.

ದೀರ್ಘದರ್ಶೀ ಕೃತಪ್ರಜ್ಞಃ ಸದಾ ವೈಶ್ರವಣೋ ಯಥಾ ।
ಅಕ್ಷುದ್ರಸಚಿವಶ್ಚಾಯಂ ಕುಂತೀಪುತ್ರೋ ಮಹಾಮನಾಃ ॥೪೫॥

ಮಹಾಮನಸ್ವಿಯಾದ ಕುಂತೀಪುತ್ರನು ಕುಬೇರನಂತೆ ಯಾವಾಗಲೂ ದೂರದೃಷ್ಟಿಯುಳ್ಳವನೂ, ಪ್ರತಿಭಾಶಾಲಿಯೂ ಆಗಿದ್ದಾನೆ. ಅಲ್ಲದೇ ಉತ್ತಮರಾದ ಸಚಿವರಿಂದಲೂ ಇವನು ಕೂಡಿದ್ದಾನೆ.

ಅಪ್ಯಮಿತ್ರೇ ದಯಾವಾಂಶ್ಚ ಶುಚಿಶ್ಚ ಭರತರ್ಷಭ ।
ಋಜುಃ ಪಶ್ಯತಿ ಮೇಧಾವೀ ಪುತ್ರವತ್ ಪಾತಿ ನಃ ಸದಾ ॥೪೬॥

ಹೇ ಭರತರ್ಷಭನೇ, ಇವನು ಶತ್ರುಗಳಲ್ಲೂ ದಯೆಯನ್ನು ತೋರಿಸುವವನು. ಒಳಗೂ ಹೊರಗೂ ಶುಚಿಯಾಗಿರುವ ಇವನು ಮೇಧಾವಿಯಾಗಿದ್ದು ಎಲ್ಲರನ್ನೂ ಸರಳವಾಗಿ ನೋಡುವನು. ಆದ್ದರಿಂದ ನಮ್ಮನ್ನು ಯಾವಾಗಲೂ ತನ್ನ ಮಕ್ಕಳಂತೆ ರಕ್ಷಿಸುತ್ತಾನೆ.

ವಿಪ್ರಿಯಂ ಚ ಜನಸ್ಯಾಸ್ಯ ಸಂಸರ್ಗಾದ್ ಧರ್ಮಜಸ್ಯ ವೈ ।
ನ ಕರಿಷ್ಯತಿ ರಾಜರ್ಷೇ ತಥಾ ಭೀಮಾರ್ಜುನಾದಯಃ ॥೪೭॥

ಹೇ ರಾಜರ್ಷಿಯೇ, ಈತನು ಜನರಿಗೆ ಅಪ್ರಿಯವಾದುದನ್ನು ಎಂದೂ ಮಾಡಲಾರ. ಈ ಧರ್ಮಜನ ಸಂಸರ್ಗದಿಂದ ಭೀಮಾರ್ಜುನಾದಿಗಳೂ ಹಾಗೆಯೇ ನಡೆದುಕೊಳ್ಳುವರು.

ಮಂದಾ ಮೃದುಷು ಕೌರವ್ಯಾಸ್ತೀಕ್ಷ್ಣೇಷ್ವಾಶೀವಿಷೋಪಮಾಃ ।
ವೀರ್ಯವಂತೋ ಮಹಾತ್ಮಾನಃ ಪೌರಾಣಾಂ ಚ ಹಿತೇ ರತಾಃ ॥೪೮॥

ಮೃದುಸ್ವಭಾವದ ವ್ಯಕ್ತಿಗಳಲ್ಲಿ ಸಮಾಧಾನವಾಗಿದ್ದು, ತೀಕ್ಷ್ಣವ್ಯಕ್ತಿಗಳಲ್ಲಿ ಹಾವಿನಂತೆ ಇರುವ, ಪರಾಕ್ರಮಿಗಳಾದ, ಮಹಾತ್ಮರಾದ, ಕುರುವಂಶದಲ್ಲಿ ಬಂದಿರುವ ಇವರೆಲ್ಲರೂ ಪೌರ ಜನರ ಹಿತದಲ್ಲಿ ಸದಾ ಆಸಕ್ತರಾಗಿರುವರು.

ನ ಕುಂತೀ ನ ಚ ಪಾಂಚಾಲೀ ನ ಚೋಲೂಪೀ ನ ಸಾತ್ವತೀ ।
ಅಸ್ಮಿನ್ ಜನೇ ಕರಿಷ್ಯಂತಿ ಪ್ರತಿಕೂಲಾನಿ ಕರ್ಹಿಚಿತ್ ॥೪೯॥

ಕುಂತಿಯಾಗಲೀ, ದ್ರೌಪದಿಯಾಗಲೀ, ಉಲೂಪಿಯಾಗಲೀ, ಸುಭದ್ರೆಯಾಗಲೀ ಯಾವತ್ತೂ ಈ ಜನರಿಗೆ ಪ್ರತಿಕೂಲವಾದುದನ್ನು ಮಾಡಲಾರರು.

ಭವತ್ಕೃತಮಿದಂ ಸ್ನೇಹಂ ಯುಧಿಷ್ಠಿರವಿವರ್ಧಿತಮ್ ।
ನ ಪೃಷ್ಠತಃ ಕರಿಷ್ಯಂತಿ ಪೌರಜಾನಪದಾ ಜನಾಃ ॥೫೦॥

ನೀನು ನಮ್ಮ ಮೇಲೆ ಮಾಡಿದ ಈ ಸ್ನೇಹವನ್ನು ಯುಧಿಷ್ಠಿರನು ಮತ್ತೂ ಬೆಳೆಸಿದ್ದಾನೆ. ಇದನ್ನು ನಗರದ, ಗ್ರಾಮೀಣಪ್ರದೇಶದ ಜನರು ನಿಶ್ಚಯವಾಗಿಯೂ ಅಡಿಗೆ ಹಾಕಲಾರರು (ಮರೆಯಲಾರರು).

ಅಧರ್ಮಿಷ್ಠಾನಪಿ ಸತಃ ಕುಂತೀಪುತ್ರಾ ಮಹಾರಥಾಃ ।
ಮಾನವಾನ್ ಪಾಲಯಿಷ್ಯಂತಿ ಭೂತ್ವಾ ಧರ್ಮಪರಾಯಣಾಃ ॥೫೧॥

ಅಧರ್ಮಿಷ್ಠರಾಗಿರುವ ಮಾನವರನ್ನೂ ಮಹಾರಥರಾದ ಕುಂತೀಪುತ್ರರು ಧರ್ಮಪರಾಯಣರಾಗಿ ಪಾಲಿಸುತ್ತಾರೆ.

ಸ ರಾಜನ್ ಮಾನಸಂ ದುಃಖಮಪನೀಯ ಯುಧಿಷ್ಠಿರಾತ್ ।
ಕುರು ಕಾರ್ಯಾಣಿ ಧರ್ಮಾಣಿ ನಮಸ್ತೇ ಭರತರ್ಷಭ ॥೫೨॥

ಹೇ ಭರತರ್ಷಭ ರಾಜನೇ, ಯುಧಿಷ್ಠಿರನ ಬಗ್ಗೆ ನಿನಗಿರುವ ಮಾನಸ ದುಃಖವನ್ನು ಬದಿಗಿರಿಸಿ ಧಾರ್ಮಿಕ ಕಾರ್ಯಗಳನ್ನು ಮಾಡು. ನಿನಗೆ ನಮಸ್ಕಾರವು.

ವೈಶಂಪಾಯನಃ

ತಸ್ಯ ತದ್ವಚನಂ ಧರ್ಮ್ಯಮನುಮಾನ್ಯ ಗುಣೋತ್ತರಮ್ ।
ಸಾಧು ಸಾಧ್ವಿತಿ ಸರ್ವಃ ಸ ಜನಃ ಪ್ರತಿಗೃಹೀತವಾನ್ ॥೫೩॥

ವೈಶಂಪಾಯನ– ಆ ಶಾಕಲ್ಯನ ಧರ್ಮಾನುಸಾರಿಯಾದ, ಉತ್ಕೃಷ್ಟವಾದ ಗುಣಗಳಿಂದ ಕೂಡಿದ ಆ ಮಾತನ್ನು ಅನುಮೋದಿಸುತ್ತಾ ಎಲ್ಲ ಜನರು ಸಾಧು-ಸಾಧು ಎನ್ನುತ್ತಾ ಇದು ತಮ್ಮದೇ ಮಾತು ಎಂಬಂತೆ ಸ್ವೀಕರಿಸಿದರು.

ಧೃತರಾಷ್ಟ್ರಸ್ತು ತದಾ ವಾಕ್ಯಮಭಿಪೂಜ್ಯ ಪುನಃ ಪುನಃ ।
ವಿಸರ್ಜಯಾಮಾಸ ತದಾ ಸರ್ವಾಸ್ತು ಪ್ರಕೃತೀಃ ಶನೈಃ ॥೫೪॥

ಧೃತರಾಷ್ಟ್ರನು ಆ ಮಾತನ್ನು ಮತ್ತೆ ಮತ್ತೆ ಗೌರವಿಸಿ ಎಲ್ಲ ಪ್ರಜೆಗಳನ್ನು ನಿಧಾನವಾಗಿ ಬೀಳ್ಕೊಟ್ಟನು.

ಸ ತೈಃ ಸಂಪೂಜಿತೋ ರಾಜಾ ಶಿವೇನಾವೇಕ್ಷಿತಸ್ತದಾ ।
ಪ್ರಾಂಜಲಿಃ ಪೂಜಯಾಮಾಸ ತಂ ಜನಂ ಭರತರ್ಷಭ ॥೫೫॥

ಹೇಗೆ ಭರತಶ್ರೇಷ್ಠನೇ, ಆ ಧೃತರಾಷ್ಟ್ರರಾಜನು ಜನರಿಂದ ಪೂಜಿಸಲ್ಪಟ್ಟು, ಮಂಗಳಮಯವಾದ ದೃಷ್ಟಿಯಿಂದ ನೋಡಲ್ಪಟ್ಟವನಾಗಿ ಕೈಮುಗಿದು ಎಲ್ಲರನ್ನೂ ಗೌರವಿಸಿದನು.

ತತೋ ವಿವೇಶ ಭವನಂ ಗಾಂಧಾರೀಸಹಿತೋ ನೃಪಃ ।
ಆಗತಾಯಾಂ ಚ ಶರ್ವರ್ಯಾಂ ಸುಖಂ ಶೇತೇ ನರಾಧಿಪಃ ॥೫೬॥

ಅನಂತರ ಗಾಂಧಾರೀ ಸಹಿತನಾಗಿ ರಾಜನು ಅರಮನೆಯನ್ನು ಪ್ರವೇಶಿಸಿದನು. ರಾತ್ರಿಯಾಗುತ್ತಿರಲು ನರಾಧಿಪತಿಯು ಸುಖವಾಗಿ ನಿದ್ರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರತಪೋವಾಸಾಭ್ಯನುಜ್ಞಾ ನಾಮ
ಪಂಚದಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ಇತ್ಯುಕ್ತೋ ಧರ್ಮರಾಜಸ್ತಮನುಜಜ್ಞೇ ಸ ಚಾಶಿತಃ ।
ಶಿಕ್ಷಯಾಮಾಸ ಸದ್ಧರ್ಮಾನ್ ನೀತಿಂ ಚ ವಿದುಷೇऽಪ್ಯಲಮ್ ॥

ಕೇವಲಸ್ನೇಹತೋ ರಾಜ್ಞೇ ಶುಶ್ರಾವ ವಿನಯಾಯ ಸಃ ।
ಅನುಜ್ಞಾಯ ಗೃಹಂ ಪ್ರಾಪ್ತೇ ಧರ್ಮಜೇ ವಿದುರಂ ಪುನಃ ॥

ಶ್ರಾದ್ಧಾಯ ವಿತ್ತಮಾಕಾಂಕ್ಷನ್ ಪ್ರೇಷಯಾಮಾಸ ತದ್ವಚಃ ।
ಶ್ರುತ್ವಾ ಯುಧಿಷ್ಠಿರೋ ಭೀಮಮಾಹ ದಾತವ್ಯಮದ್ಯ ನಃ ॥

ಪುತ್ರಪೌತ್ರಾಪ್ತಬಂಧೂನಾಂ ಶ್ರಾದ್ಧೇಚ್ಛೋರ್ವಿತ್ತಮಂಜಸಾ ।
ತಮಾಹ ಭೀಮಃ ಪಾಪಾನಾಂ ವಿಮುಖಾನಾಂ ಮಧುದ್ವಿಷಃ ।
ಪಾರಲೌಕಿಕಸಾಹಾಯ್ಯಂ ನ ಕಾರ್ಯಮಿತರಾರ್ಥತಃ ॥

ದತ್ತೇನಾಪಿ ಹಿ ವಿತ್ತೇನ ಪುತ್ರಶ್ರಾದ್ಧಂ ಕರಿಷ್ಯತಿ ।
ತಜ್ಜ್ಞಾತ್ವಾ ದದತಾಂ ದೋಷೋ ಭವೇದಿತಿ ವಿಚಿಂತಯನ್ ॥

ಶ್ರೀವೇದವ್ಯಾಸರು ಹೀಗೆ ಹೇಳಿದಾಗ ಧರ್ಮರಾಜ ಧೃತರಾಷ್ಟ್ರನಿಗೆ ವನವಾಸಕ್ಕೆ ಒಪ್ಪಿಗೆಯಿತ್ತನು. ಧೃತರಾಷ್ಟ್ರನು ಭೋಜನ ಮಾಡಿದನು. ಧರ್ಮರಾಜನು ತಿಳಿದವನೇ ಆದರೂ ಕೇವಲ ಪ್ರೀತಿಯಿಂದ ರಾಜಾ ಧೃತರಾಷ್ಟ್ರ ಅವನಿಗೆ ಸದ್ಧರ್ಮಗಳನ್ನೂ, ನೀತಿಯನ್ನೂ ಉಪದೇಶಿಸಿದನು. ಅವನೂ ವಿನಯದಿಂದ ಅದನ್ನು ಕೇಳಿದನು. ಬಳಿಕ ವನವಾಸಕ್ಕೆ ಒಪ್ಪಿಗೆ ಕೊಟ್ಟು ಧರ್ಮರಾಜನು ತನ್ನ ಅರಮನೆಗೆ ಹಿಂತಿರುಗಿದಾಗ ಧೃತರಾಷ್ಟ್ರನು ಮಕ್ಕಳಿಗೆ ಶ್ರಾದ್ಧ ಮಾಡುವುದಕ್ಕಾಗಿ ಹಣವನ್ನು ಬಯಸಿ ವಿದುರನನ್ನು ಕಳಿಸಿಕೊಟ್ಟನು. ಧರ್ಮರಾಜನು ಅವನ ಮಾತನ್ನು ಕೇಳಿ ಭೀಮನಿಗೆ ಹೇಳಿದನು: 'ಪುತ್ರ ಪೌತ್ರರಿಗೂ, ಆಪ್ತರಿಗೂ, ಬಂಧುಗಳಿಗೂ ಶ್ರಾದ್ಧ ಮಾಡ ಬಯಸುವ ಧೃತರಾಷ್ಟ್ರನಿಗೆ ನಾವು ಇಂದು ಹಣಕೊಡಬೇಕು'. ಭೀಮನು ಆಲೋಚಿಸಿದನು: 'ಪಾಪಿಷ್ಠರೂ ಕೃಷ್ಣ ದ್ವೇಷಿಗಳೂ ಆದ ಕೌರವರಿಗೆ ಪಾರಲೌಕಿಕ ಸಹಾಯವನ್ನು ಮಾಡಕೂಡದು. ಭೀಷ್ಮಾದಿ ಬೇರೆ ಬಂಧುಗಳಿಗಾಗಿ ಧೃತರಾಷ್ಟ್ರನಿಗೆ ಹಣಕೊಟ್ಟರೂ ಅದರಿಂದ ಅವನು ಮಕ್ಕಳಿಗೆ ಶ್ರಾದ್ಧಮಾಡುವನು. ಅದನ್ನು ತಿಳಿದೂ ನಾವು ಹಣಕೊಟ್ಟರೆ ನಮಗೇ ಪಾಪ ಬರುತ್ತದೆ'. ಹೀಗೆ ಆಲೋಚಿಸಿ ಭೀಮನು ನುಡಿದನು.

ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ।
ಭೀಷ್ಮಾದೀನಾಂ ವಯಂ ಶ್ರಾದ್ಧಕರ್ತಾರಸ್ತೇನ ಕಿಂ ತತಃ ॥

'ದುರ್ಯೋಧನ ಮುಂತಾದವರು ಎಲ್ಲರೂ ಕಷ್ಟಕ್ಕಿಂತ ಅಧಿಕ ಕಷ್ಟಕರವಾದ ದುರ್ಗತಿಯನ್ನೇ ಹೊಂದಲಿ. ಭೀಷ್ಮ ಮುಂತಾದವರಿಗೆ ನಾವು ಶ್ರಾದ್ಧ ಮಾಡುವೆವು. ಅದಕ್ಕಾಗಿ ನಾವು ಧೃತರಾಷ್ಟ್ರನಿಗೆ ಹಣ ಕೊಟ್ಟು ಏನು ಪ್ರಯೋಜನ?'

ಕಾನೀನತ್ವಾತ್ತು ಕರ್ಣಸ್ಯ ಸಹಾಸ್ಮಾಭಿಃ ಪೃಥೈವ ಹಿ ।
ಶ್ರಾದ್ಧಕರ್ಮಣ್ಯಧಿಕೃತಾ ಕಿಂ ತಸ್ಮೈ ದೀಯತೇ ಧನಮ್ ॥

ಕರ್ಣ ಕನ್ಯಾಪುತ್ರನಾದ್ದರಿಂದ ಅವನಿಗೆ ನಮ್ಮೊಂದಿಗೆ ಕುಂತಿಯೇ ಶ್ರಾದ್ಧ ಮಾಡುವಲ್ಲಿ ಅಧಿಕಾರ ಹೊಂದಿರುತ್ತಾಳೆ. ಅವನಿಗೆ ಶ್ರಾದ್ಧ ಮಾಡಲು ಧೃತರಾಷ್ಟ್ರನಿಗೆ ಏಕೆ ಹಣ ನೀಡಬೇಕು?

ಇತ್ಯುಕ್ತವಂತಂ ನೃಪತಿರರ್ಜುನಶ್ಚೋಚತುಃ ಪುನಃ ।
ಯಿಯಾಸೋರ್ಯಾಚಮಾನಾಯ ನಿಜಬಾಹುಬಲಾರ್ಜಿತಮ್ ॥

ದೇಹಿ ವಿತ್ತಂ ಪರಮತಃ ಕಿಂ ತ್ವಾಮೇಷೋऽಭಿಯಾಚತೇ ।
ಇತ್ಯುಕ್ತಮಪಿ ನೇತ್ಯೇವ ಬ್ರುವಾಣಂ ಶುದ್ಧಧಾರ್ಮಿಕಮ್ ॥

ಅಪ್ರೀತ್ಯಾ ಜೋಷಮಾಸ್ಸ್ವೇತಿ ಪ್ರೋಚ್ಯೋವಾಚ ಯುಧಿಷ್ಠಿರಃ ।
ಕೋಶತೋ ಯದ್ ಬಹಿರ್ವಿತ್ತಂ ದಾನಭೋಗಾದಿಕಾರಣಮ್ ॥

ಮಮ ಸನ್ನಿಹಿತಂ ಸರ್ವಂ ತತ್ತ್ವೈತ್ರೇऽದ್ಯಾರ್ಪಿತಂ ಮಯಾ ।
ಏವಮೇವಾರ್ಜುನೋऽಪ್ಯಾಹ ವಿದುರಂ ಪುನರೂಚತುಃ ॥

ಮುಖ್ಯಧರ್ಮರತೇ ಭೀಮೇ ನ ಪಿತಾ ಕ್ರೋದ್ಧುಮರ್ಹತಿ ॥

ಭೀಮನು ಹೀಗೆ ಹೇಳಿದಾಗ ಧರ್ಮರಾಜನೂ ಅರ್ಜುನನೂ ಪುನಃ ಹೇಳಿದರು: 'ಧೃತರಾಷ್ಟ್ರ ವನವಾಸಕ್ಕೆ ಹೋಗಲು ಬಯಸಿ ಶ್ರಾದ್ಧಕ್ಕೆ ಹಣವನ್ನು ಕೇಳುತ್ತಿರುವಾಗ ಅವನ ಬಾಹುಬಲದಿಂದ ಆರ್ಜಿತವಾದ ಹಣವನ್ನೇ ಅವನಿಗೆ ಕೊಡು. ಇನ್ನು ಮುಂದೆ ಅವನು ನಿನ್ನನ್ನು ಕೇಳುವನೆ?' ಹೀಗೆ ಹೇಳಿದರೂ ಶುದ್ಧ ಧಾರ್ಮಿಕನಾದ ಭೀಮನು 'ಕೊಡಲಾರೆ' ಎಂದಾಗ ಧರ್ಮರಾಜನು ಅಸಮಾಧಾನದಿಂದ 'ಹಾಗಾದರೆ ಸುಮ್ಮನಿರು' ಎಂದು ಹೇಳಿ ಪುನಃ ಹೇಳಿದನು: 'ಕೋಶಕ್ಕೆ ಸೇರದೆ ಹೊರಗಿರುವ, ನನ್ನ ದಾನ ಭೋಗಾದಿಗಳಿಗೆ ಉಪಯುಕ್ತವಾದ, ನನ್ನ ಬಳಿ ಇರುವ ಎಲ್ಲ ಹಣವನ್ನೂ ನಾನು ತಂದೆಯಾದ ಧೃತರಾಷ್ಟ್ರನಿಗೆ ಕೊಡುತ್ತೇನೆ'. ಇದೇ ರೀತಿ ಅರ್ಜುನನೂ ಹೇಳಿದನು. ಬಳಿಕ ಇಬ್ಬರೂ ವಿದುರನಿಗೆ ಹೇಳಿದರು- 'ಮುಖ್ಯಧರ್ಮದಲ್ಲಿ ನಿರತನಾದ ಭೀಮನಲ್ಲಿ ತಂದೆ ಕೋಪಗೊಳ್ಳಬಾರದು'.

★ ★ ★ ★ ★

ಹದಿನಾರನೆಯ ಅಧ್ಯಾಯ

ಧೃತರಾಷ್ಟ್ರನು ಭೀಷ್ಮ-ದುರ್ಯೋಧನಾದಿಗಳಿಗೆ ಶ್ರಾದ್ಧ ಮಾಡಲು ಬಯಸಿ, ವಿದುರನ ಮುಖಾಂತರ ಯುಧಿಷ್ಠಿರನಲ್ಲಿ ಸಂಪತ್ತನ್ನು ಯಾಚಿಸುವುದು. ಇದನ್ನು ಕೇಳಿ ವಿಮನಸ್ಕನಾದ ಭೀಮನಲ್ಲಿ ಅವನ ಅಭಿಪ್ರಾಯವನ್ನು ಬಲ್ಲ ಅರ್ಜುನನು ದ್ರವ್ಯವನ್ನು ಯಾಚಿಸಿದಾಗ, ಭೀಮನು ಧೃತರಾಷ್ಟ್ರನ ಅನ್ಯಾಯಗಳನ್ನು ಸ್ಮರಿಸುತ್ತಾ, ಹಣವನ್ನು ನೀಡುವ ಬಗ್ಗೆ ತನ್ನ ಸಮ್ಮತಿ ಇಲ್ಲವೆನ್ನುವುದು.

ವೈಶಂಪಾಯನಃ

ವ್ಯುಷಿತಾಯಾಂ ರಜನ್ಯಾಂ ತು ಧೃತರಾಷ್ಟ್ರೋಽಂಬಿಕಾಸುತಃ ।
ವಿದುರಂ ಪ್ರೇಷಯಾಮಾಸ ಯುಧಿಷ್ಠಿರನಿವೇಶನಮ್ ॥೧॥

ವೈಶಂಪಾಯನ– ರಾತ್ರಿ ಕಳೆದ ನಂತರ ಅಂಬಿಕಾಸುತನಾದ ಧೃತರಾಷ್ಟ್ರನು ಯುಧಿಷ್ಠಿರನ ಮಂದಿರಕ್ಕೆ ವಿದುರನನ್ನು ಕಳುಹಿಸಿದನು.

ಸ ಗತ್ವಾ ರಾಜವಚನಾದ್ ಉವಾಚಾಚ್ಯುತಮೀಶ್ವರಮ್ ।
ಯುಧಿಷ್ಠಿರಂ ಮಹಾತೇಜಾಃ ಸರ್ವಬುದ್ಧಿಮತಾಂ ವರಃ ॥೨॥

ಮಹಾತೇಜಸ್ವಿಯಾದ, ಬುದ್ಧಿವಂತರಾದ ಎಲ್ಲರಲ್ಲೂ ಶ್ರೇಷ್ಠನಾದ ಆ ವಿದುರನು ರಾಜನ ಮಾತಿನಂತೆ ಅಲ್ಲಿಗೆ ಹೋಗಿ ಸ್ಥಿರಬುದ್ಧಿಯುಳ್ಳ ರಾಜನಾದ ಯುಧಿಷ್ಠಿರನನ್ನುದ್ದೇಶಿಸಿ ಹೀಗೆ ಹೇಳಿದನು.

ವಿದುರಃ

ಧೃತರಾಷ್ಟ್ರೋ ಮಹಾತೇಜಾ ವನವಾಸಾಯ ದೀಕ್ಷಿತಃ ।
ಗಮಿಷ್ಯತಿ ವನಂ ರಾಜಾ ಕಾರ್ತಿಕೀಮಾಗತಾಮಿಮಾಮ್ ॥೩॥

ವಿದುರ– ಮಹಾತೇಜಸ್ವಿಯಾದ ಧೃತರಾಷ್ಟ್ರ ರಾಜನು ವನವಾಸಕ್ಕೆ ಹೊರಡಲು ದೀಕ್ಷಾಬದ್ಧನಾಗಿದ್ದಾನೆ. ಇದೇ ಬರುವ ಕಾರ್ತಿಕ ಹುಣ್ಣಿಮೆಯಂದು ಕಾಡಿಗೆ ಹೊರಡಲಿದ್ದಾನೆ.

ಸ ತ್ವಾಂ ಕುರುಕುಲಶ್ರೇಷ್ಠ ಕಿಂಚಿದರ್ಥಮಭೀಪ್ಸತಿ ।
ಶ್ರಾದ್ಧಮಿಚ್ಛತಿ ದಾತುಂ ಸ ಗಾಂಗೇಯಸ್ಯ ಮಹಾತ್ಮನಃ ॥೪॥

ದ್ರೋಣಸ್ಯ ಸೋಮದತ್ತಸ್ಯ ಬಾಹ್ಲೀಕಸ್ಯ ಚ ಧೀಮತಃ ।
ಪುತ್ರಾಣಾಂ ಚೈವ ಸರ್ವೇಷಾಂ ಯೇ ಚಾನ್ಯೇ ಸುಹೃದೋ ಹತಾಃ ॥೫॥

ಯದಿ ವಾऽಪ್ಯನುಜಾನೀಷೇ ಸೈಂಧವಾಪಸದಸ್ಯ ಚ ॥೬॥

ಹೇ ಕುರುಕುಲಶ್ರೇಷ್ಠನೇ, ಆ ಧೃತರಾಷ್ಟ್ರನು ನಿನ್ನಲ್ಲಿ ಸ್ವಲ್ಪ ಸಂಪತ್ತನ್ನು ಇಚ್ಛೆ ಪಡುತ್ತಿದ್ದಾನೆ. ಏಕೆಂದರೆ ಅವನು ಮಹಾತ್ಮನಾದ ಗಂಗಾಪುತ್ರ ಭೀಷ್ಮನಿಗೂ, ದ್ರೋಣನಿಗೂ, ಸೋಮದತ್ತನಿಗೂ, ಬುದ್ಧಿಶಾಲಿಯಾದ ಬಾಹ್ಲೀಕ ರಾಜನಿಗೂ, ಅಲ್ಲದೆ ತನ್ನ ಎಲ್ಲ ಪುತ್ರರಿಗೂ, ಅಲ್ಲದೆ ಯುದ್ಧದಲ್ಲಿ ಮಡಿದ ಎಲ್ಲ ಮಿತ್ರರಿಗೂ, ಅಷ್ಟಲ್ಲದೆ ನೀನು ಒಪ್ಪುವಿಯಾದರೆ ನೀಚನಾದ ಆ ಸೈಂಧವನಿಗೂ ಶ್ರಾದ್ಧವನ್ನು ಮಾಡಲು ಬಯಸುತ್ತಿದ್ದಾನೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ವಿದುರಸ್ಯ ಯುಧಿಷ್ಠಿರಃ ।
ಹೃಷ್ಟಃ ಸಂಪೂಜಯಾಮಾಸ ಗುಡಾಕೇಶಶ್ಚ ಪಾಂಡವಃ ॥೭॥

ವೈಶಂಪಾಯನ– ವಿದುರನ ಈ ಮಾತನ್ನು ಕೇಳಿ ಯುಧಿಷ್ಠಿರನೂ, ಪಾಂಡುಪುತ್ರನಾದ ಗುಡಾಕೇಶನಾದ ಅರ್ಜುನನೂ ಸಂತೋಷಪಟ್ಟು ಗೌರವಿಸಿದರು.

ನ ತು ಭೀಮೋ ದೃಢಕ್ರೋಧಃ ತದ್ವಚೋ ಜಗೃಹೇ ತದಾ ।
ವಿದುರಸ್ಯ ಮಹಾತೇಜಾ ದುರ್ಯೋಧನಕೃತಂ ಸ್ಮರನ್ ॥೮॥

ಆದರೆ ಇನ್ನೂ ಆರದ ಕೋಪವುಳ್ಳ, ಮಹಾತೇಜಸ್ವಿಯಾದ ಭೀಮನು ದುರ್ಯೋಧನನು ಮಾಡಿಕೊಂಡಿದ್ದನ್ನು ಸ್ಮರಿಸಿಕೊಳ್ಳುತ್ತಾ ವಿದುರನ ಆ ಮಾತನ್ನು ಆಗ ಸ್ವೀಕರಿಸಲಿಲ್ಲ.

ಅಭಿಪ್ರಾಯಂ ವಿದಿತ್ವಾ ತು ಭೀಮಸೇನಸ್ಯ ಫಲ್ಗುನಃ ।
ಕಿರೀಟೀ ಕಿಂಚಿದಾನಮ್ಯ ಭೀಮಂ ವಚನಮಬ್ರವೀತ್ ॥೯॥

ಭೀಮಸೇನನ ಆ ಅಭಿಪ್ರಾಯವನ್ನು ತಿಳಿದ ಕಿರೀಟಿಯಾದ ಅರ್ಜುನನು ತಲೆಯನ್ನು ಸ್ವಲ್ಪ ಬಗ್ಗಿಸಿ ಭೀಮನನ್ನು ಕುರಿತು ಈ ಮಾತನ್ನು ಹೇಳಿದನು.

ಅರ್ಜುನಃ

ಭೀಮ ರಾಜಾ ಪಿತಾ ವೃದ್ಧೋ ವನವಾಸಾಯ ದೀಕ್ಷಿತಃ ।
ದಾತುಮಿಚ್ಛತಿ ಸರ್ವೇಷಾಂ ಸುಹೃದಾಮೌರ್ಧ್ವದೈಹಿಕಮ್ ॥೧೦॥

ಅರ್ಜುನ– ಹೇ ಭೀಮನೇ, ವೃದ್ಧನಾದ, ನಮ್ಮ ತಂದೆಯಾದ ರಾಜನು ವನವಾಸಕ್ಕೋಸ್ಕರ ದೀಕ್ಷಿತನಾಗಿದ್ದಾನೆ. ಅವನು ತನ್ನೆಲ್ಲ ಸ್ನೇಹಿತರಿಗೂ ಪರಲೋಕದಲ್ಲಿ ಸುಖಪ್ರಾಪ್ತಿಗಾಗಿ ದಾನವನ್ನು ನೀಡಲು ಬಯಸುತ್ತಿದ್ದಾನೆ.

ಭವತಾ ನಿರ್ಜಿತಂ ವಿತ್ತಂ ದಾತುಮಿಚ್ಛತಿ ಕೌರವಃ ।
ಭೀಷ್ಮಾದೀನಾಂ ಮಹಾಬಾಹೋ ತದನುಜ್ಞಾತುಮರ್ಹಸಿ ॥೧೧॥

ನೀನು ಗೆದ್ದಿರುವ ಸಂಪತ್ತನ್ನು ಭೀಷ್ಮಾದಿಗಳಿಗೋಸ್ಕರ ಕೌರವನು ನೀಡಲು ಬಯಸುತ್ತಿದ್ದಾನೆ. ಹೇ ಮಹಾಬಾಹುವೇ, ಅದನ್ನು ನೀನು ಅನುಮತಿಸಬೇಕಾಗಿದೆ.

ದಿಷ್ಟ್ಯಾ ತ್ವದ್ಯ ಮಹಾಬಾಹೋ ಧೃತರಾಷ್ಟ್ರಃ ಪ್ರಯಾಚತಿ ।
ಯಾಚಿತೋಽಯಂ ಪುರಾಽಸ್ಮಾಭಿಃ ಪಶ್ಯ ಕಾಲಸ್ಯ ಪರ್ಯಯಮ್ ॥

ಹೇ ಮಹಾಬಾಹುವೇ, ಕಾಲದ ವೈಪರೀತ್ಯವನ್ನು ನೋಡು. ಹಿಂದೆ ನಮ್ಮಿಂದ ಯಾಚಿತನಾದ ಈ ಧೃತರಾಷ್ಟ್ರನು ಭಾಗ್ಯವಶಾತ್ ಇಂದು ನಮ್ಮನ್ನು ಯಾಚಿಸುತ್ತಿದ್ದಾನೆ.

ಯೋಽಸೌ ಪೃಥಿವ್ಯಾಃ ಕೃತ್ಸ್ನಾಯಾ ಭರ್ತಾ ಭೂತ್ವಾ ನರಾಧಿಪಃ ।
ಪರೈರ್ವಿನಿಹತಾಮಾತ್ಮೋ ವನಂ ಗಂತುಮಭೀಪ್ಸತಿ ॥೧೩॥

ಯಾವನು ಇಡೀ ಭೂಮಿಯ ಸಂರಕ್ಷಕನಾಗಿ ರಾಜನಾಗಿದ್ದನೋ ಅಂತಹ ಇವನು ಶತ್ರುಗಳಿಂದ ತನ್ನೆಲ್ಲ ಒಡನಾಡಿಗಳನ್ನು ಕಳೆದುಕೊಂಡು ಕಾಡಿಗೆ ಹೋಗಲು ಬಯಸುತ್ತಿದ್ದಾನೆ.

ಮಾ ತೇಽನ್ಯತ್ ಪುರುಷವ್ಯಾಘ್ರ ದಾನಾದ್ ಭವತು ದರ್ಶನಮ್ ।
ಅಯಶಸ್ಯಮತೋಽನ್ಯತ್ ಸ್ಯಾದ್ ಅಧರ್ಮ್ಯಂ ಚ ಮಹಾಭುಜ ॥೧೪॥

ಹೇ ಪುರುಷವ್ಯಾಘ್ರನೇ, ದಾನವನ್ನು ನೀಡುವುದಕ್ಕಿಂತ ಬೇರೆಯಾದುದು ನಿನ್ನ ಸಿದ್ಧಾಂತ ಆಗದಿರಲಿ. ಏಕೆಂದರೆ ಅದಕ್ಕಿಂತ ಬೇರೆಯಾದುದು ನಮಗೆ ಅಪಕೀರ್ತಿಯನ್ನು

ಉಂಟು ಮಾಡುವುದು. ಹೇ ಮಹಾಭುಜನೇ, ಅದರಿಂದ ಅಧರ್ಮವೂ ಉಂಟಾದೀತು.

ರಾಜಾನಮುಪತಿಷ್ಠಸ್ವ ಜ್ಯೇಷ್ಠಂ ಭ್ರಾತರಮೀಶ್ವರಮ್ ।
ಅರ್ಹಸ್ತ್ವಮಸಿ ದಾತುಂ ವೈ ನಾದಾತುಂ ಭರತರ್ಷಭ ॥೧೫॥

ಹೇ ಭರತರ್ಷಭನೇ, ಸಮರ್ಥನಾದ ನಿನ್ನ ಹಿರಿಯಣ್ಣನಾದ ರಾಜನನ್ನು ಒಮ್ಮನಸ್ಸಿನಿಂದ ಕೂಡಿಕೊ. ನೀನು ಕೊಡಲು ಯೋಗ್ಯನಾದವನೇ ಹೊರತು ಕೊಡದಿರಲು ಅಲ್ಲ.

ವೈಶಂಪಾಯನಃ

ಏವಂ ಬ್ರುವಾಣಂ ಕೌಂತೇಯಂ ಧರ್ಮರಾಜೋಭ್ಯಪೂಜಯತ್ ।
ಭೀಮಸೇನಸ್ತು ಸಕ್ರೋಧಮುವಾಚ ವಿಜಯಂ ತದಾ ॥೧೬॥

ವೈಶಂಪಾಯನ– ಹೀಗೆ ಹೇಳುತ್ತಿರುವ ಕೌಂತೇಯನಾದ ಅರ್ಜುನನನ್ನು ಧರ್ಮರಾಜನು ಅಭಿನಂದಿಸಿದನು. ಆಗ ಭೀಮಸೇನನು ಅರ್ಜುನನನ್ನು ಕುರಿತು ಕೋಪಾವಿಷ್ಟನಾಗಿ ಹೀಗೆ ಹೇಳಿದನು.

ಭೀಮಃ

ವಯಂ ಭೀಷ್ಮಸ್ಯ ಕುರ್ಮೋ ಹಿ ಪ್ರೇತಕಾರ್ಯಾಣಿ ಫಲ್ಗುನ ।
ಸೋಮದತ್ತಸ್ಯ ನೃಪತೇರ್ಭೂರಿಶ್ರವಸ ಏವ ಚ ॥೧೭॥

ಬಾಹ್ಲಿಕಸ್ಯ ಚ ರಾಜರ್ಷೇರ್ದ್ರೋಣಸ್ಯ ಚ ಮಹಾತ್ಮನಃ ।
ಅನ್ಯೇಷಾಂ ಚೈವ ಸುಹೃದಾಂ ಕುಂತೀ ಕರ್ಣಾಯ ದಾಸ್ಯತಿ ॥೧೮॥

ಭೀಮ– ಹೇ ಫಲ್ಗುನನೇ, ಭೀಷ್ಮನಿಗೆ, ರಾಜನಾದ ಸೋಮದತ್ತನಿಗೆ, ಅಲ್ಲದೇ ಭೂರಿಶ್ರವನಿಗೆ, ರಾಜರ್ಷಿಯಾದ ಬಾಹ್ಲೀಕನಿಗೆ, ಮಹಾತ್ಮನಾದ ದ್ರೋಣನಿಗೆ ಮತ್ತು ಬೇರೆಲ್ಲಸ್ನೇಹಿತರಿಗೆ ಪ್ರೇತಕಾರ್ಯಗಳನ್ನು ನಾವೇ ಮಾಡೋಣ. ಕರ್ಣನಿಗೆ ಕುಂತಿಯು ಶ್ರಾದ್ಧ-ದಾನಗಳನ್ನು ಮಾಡುತ್ತಾಳೆ.

ಶ್ರಾದ್ಧಾನಿ ಪುರುಷವ್ಯಾಘ್ರ ಮಾ ದಾತ್ ಕೌರವಕೋ ನೃಪಃ ।
ಏವಂ ತೇ ವರ್ತತಾಂ ಬುದ್ಧಿರ್ಮಾ ವೋ ನಂದಂತು ಶತ್ರವಃ ॥೧೯॥

ಹೇ ಪುರುಷವ್ಯಾಘ್ರನೇ, ಇವರಿಗೆ ಶ್ರಾದ್ಧ ಮತ್ತು ದಾನಗಳನ್ನು ಈ ಕೆಟ್ಟ ಕೌರವ ರಾಜನು ನೀಡದಿರಲಿ. ಹೀಗೆ ನಿನ್ನ ಬುದ್ಧಿ ಇರಬೇಕೇ ಹೊರತು ನಿಮಗೆ ಶತ್ರುಗಳಾದ ದುರ್ಯೋಧನಾದಿಗಳು ಆನಂದ ಪಡಲಿ ಎಂದು ಇರಬಾರದು.

ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ।
ಯೈರಿಯಂ ಪೃಥಿವೀ ಸರ್ವಾ ಘಾತಿತಾ ಕುಲಪಾಂಸನೈಃ ॥೨೦॥

ಯಾವ ಕುಲಧ್ವಂಸಕರಿಂದ ಈ ಇಡೀ ಭೂಮಿಯು ಹಿಂಸಿಸಲ್ಪಟ್ಟಿತೋ ಅಂತಹ ದುರ್ಯೋಧನನೇ ಮೊದಲಾದ ಎಲ್ಲರೂ ಕಷ್ಟಕ್ಕಿಂತಲೂ ಕಷ್ಟಕರವಾದ ನರಕಗಳನ್ನು ಹೊಂದಲಿ.

ಕುತಸ್ತ್ವಮದ್ಯ ವಿಸ್ಮೃತ್ಯ ವೈರಂ ದ್ವಾದಶವಾರ್ಷಿಕಮ್ ।
ಅಜ್ಞಾತವಾಸಗಮನಂ ದ್ರೌಪದೀಶೋಕವರ್ಧನಮ್ ॥೨೧॥

ನೀನು ಹನ್ನೆರಡು ವರ್ಷಗಳ ವೈರವನ್ನು ಮರೆತು ಹೇಗಿರುವಿ? ಅಲ್ಲದೇ ದ್ರೌಪದಿಯ ಶೋಕವನ್ನು ಹೆಚ್ಚಿಸುವ ಅಜ್ಞಾತವಾಸಗಮನವನ್ನು ಹೇಗೆ ಮರೆಯುವಿ?

ಕ್ವ ತದಾ ಧೃತರಾಷ್ಟ್ರಸ್ಯ ಸ್ನೇಹೋऽಸ್ಮಾಸ್ವಭವತ್ ತಥಾ ।
ಕೃಷ್ಣಾಜಿನೋಪಸಂವೀತೋ ಹೃತಾಭರಣಭೂಷಣಃ ॥೨೨॥

ಸಾರ್ಧಂ ಪಾಂಚಾಲಪುತ್ರ್ಯಾ ತ್ವಂ ರಾಜಾನಮುಪಜಗ್ಮಿವಾನ್ ॥೨೩॥

ಕ್ವ ತದಾ ದ್ರೋಣಭೀಷ್ಮೌ ತೌ ಸೋಮದತ್ತೋऽಪಿ ವಾऽಭವತ್ ।
ಯತ್ರ ದ್ವಾದಶ ವರ್ಷಾಣಿ ವನೇ ವನ್ಯೇನ ಜೀವಸಿ ॥೨೪॥

ನ ತದಾ ತ್ವತ್ಪಿತಾ ಜ್ಯೇಷ್ಠಃ ಪಿತೃತ್ವೇನಾಭಿವೀಕ್ಷತಿ ॥೨೫॥

ಆ ಸಂದರ್ಭದಲ್ಲಿ ನಮ್ಮ ಮೇಲೆ ಧೃತರಾಷ್ಟ್ರನಿಗೆ ಸ್ನೇಹವುಂಟಾಗಿತ್ತೇನು? ಹಾಗೆಯೇ ಆಭರಣ ಹಾಗೂ ಅಲಂಕಾರಗಳನ್ನು ಕಳೆದುಕೊಂಡು ಕೃಷ್ಣಾಜಿನವನ್ನು ಉಟ್ಟುಕೊಂಡು ಪಾಂಚಾಲ ಪುತ್ರಿಯಾದ ದ್ರೌಪದಿಯೊಂದಿಗೆ ನೀನು ರಾಜನನ್ನು ಅನುಸರಿಸಿಕೊಂಡು ನಡೆದೆ. ಆಗ ದ್ರೋಣ-ಭೀಷ್ಮರು ಎಲ್ಲಿದ್ದರು? ಅಥವಾ ಸೋಮದತ್ತನು ಇದ್ದನೇನು? ಯಾವ ಕಾಡಿನಲ್ಲಿ ಹನ್ನೆರಡು ವರ್ಷಗಳ ಕಾಲ ಕಾಡಿನ ಉತ್ಪನ್ನಗಳಿಂದ ಪ್ರಾಣಗಳನ್ನು ಧರಿಸಿರುವೆಯೋ ಆಗ ನಿನ್ನ ದೊಡ್ಡಪ್ಪನು ತಂದೆಯಂತೆ ನಮ್ಮನ್ನು ನೋಡಲಿಲ್ಲ.

ಕಿಂ ನು ತದ್ವಿಸ್ಮೃತಂ ತೇಽದ್ಯ ಯದೇಷ ಕುಲಪಾಂಸನಃ ।
ದುರ್ವೃತ್ತೋ ವಿದುರಂ ಪ್ರಾಹ ದ್ಯೂತೇ ಕಿಂ ಜಿತಮಿತ್ಯುತ ॥೨೬॥

ಕುಲದೂಷಕನಾದ, ಕೆಟ್ಟ ನಡತೆಯ ಇವನು ದ್ಯೂತದ ಸಮಯದಲ್ಲಿ ವಿದುರನೊಂದಿಗೆ ಏನನ್ನು ಗೆದ್ದರು? ಏನನ್ನು ಗೆದ್ದರು? ಎಂದೇನು ಹೇಳಿದನೋ ಅದು ಈಗ ನಿನಗೆ ಮರೆತಿದೆಯೇನು?

ವೈಶಂಪಾಯನಃ

ತಮೇವಂವಾದಿನಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಉವಾಚ ಭ್ರಾತರಂ ಧೀಮಾನ್ ಜೋಷಮಾಸ್ಸ್ವೇತಿ ಭರ್ತ್ಸಯನ್ ॥೨೭॥

ವೈಶಂಪಾಯನ– ಹೀಗೆ ಮಾತನಾಡುತ್ತಿರುವ ಆ ಭೀಮನನ್ನು ಕುರಿತು ಧೀಮಂತನಾದ ಕುಂತೀಪುತ್ರನಾದ ಯುಧಿಷ್ಠಿರ ರಾಜನು ಗದರಿಸಿವವನಂತೆ 'ಸುಮ್ಮನಿರು' ಎಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಭೀಮವಾಕ್ಯಂ ನಾಮ ಷೋಡಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಭೀಮನು ದುರ್ಯೋಧನಾದಿಗಳ ಉದ್ದೇಶದಿಂದ ಶ್ರಾದ್ಧ ಮಾಡಲು ಸಂಪತ್ತನ್ನು ನೀಡಬಾರದೆಂದು ಅಭಿಪ್ರಾಯ ಪಟ್ಟಾಗ, ಯುಧಿಷ್ಠಿರನು ವಿದುರನಲ್ಲಿ ತನ್ನ ವೈಯಕ್ತಿಕ ಭಂಡಾರದಿಂದ ಹಣವನ್ನು ನೀಡುವೆನೆಂದು ತಿಳಿಸುವುದು.

ಅರ್ಜುನಃ

ಭೀಮ ಜ್ಯೇಷ್ಠೋ ಗುರುರ್ಮೇ ತ್ವಂ ನಾತೋಽನ್ಯದ್ ವಕ್ತುಮುತ್ಸಹೇ ।
ಧೃತರಾಷ್ಟ್ರೋಽಪಿ ರಾಜರ್ಷಿಃ ಸರ್ವಥಾ ಮಾನಮರ್ಹತಿ ॥೧॥

ಅರ್ಜುನ– ಹೇ ಭೀಮನೇ, ನೀನು ನನಗೆ ಹಿರಿಯನಾಗಿದ್ದು ಗುರುವೂ ಆಗಿರುವಿ. ಆದ್ದರಿಂದ ನಾನು ಬೇರೇನನ್ನೂ ಹೇಳಲು ಬಯಸುವುದಿಲ್ಲ. ಹಾಗಿದ್ದರೂ ರಾಜಶ್ರೇಷ್ಠನಾದ ಧೃತರಾಷ್ಟ್ರನು ಎಲ್ಲ ವಿಷಯದಲ್ಲೂ ಗೌರವಾರ್ಹನಾಗಿರುವನು.

ನ ಸ್ಮರಂತ್ಯಪರಾದ್ಧಾನಿ ಸ್ಮರಂತಿ ಸುಕೃತಾನಿ ಚ ।
ಅಸಂಭಿನ್ನಾರ್ಥಮರ್ಯಾದಾಃ ಸಾಧವಃ ಪುರುಷೋತ್ತಮಾಃ ॥೨॥

ವಸ್ತು ಮರ್ಯಾದೆಗಳನ್ನು ಮೀರದಿರುವ ಪುರುಷಶ್ರೇಷ್ಠನಾದ ಸಜ್ಜನರು ಅಪರಾಧಗಳನ್ನು ಎಂದೂ ನೆನಪಿಸಿಕೊಳ್ಳುವುದಿಲ್ಲ. ಸುಕೃತಗಳನ್ನು ಮಾತ್ರ ಸ್ಮರಿಸುವರು.

ಯುಧಿಷ್ಠಿರಃ

ಇದಂ ಮದ್ವಚನಾತ್ ಕ್ಷತ್ತಃ ಕೌರವಂ ಬ್ರೂಹಿ ಪಾರ್ಥಿವಮ್ ।
ಯಾವದಿಚ್ಛತಿ ಪುತ್ರಾಣಾಂ ದಾತುಂ ತಾವದ್ ದದಾಮ್ಯಹಮ್ ॥೩॥

ಯುಧಿಷ್ಠಿರ– ಹೇ ವಿದುರನೇ, ಕೌರವ ರಾಜನನ್ನು ಕುರಿತು ನಾನು ಮಾತು ಕೊಟ್ಟಂತೆ ಹೀಗೆ ಹೇಳು. ಅವನು ಮಕ್ಕಳ ಶ್ರಾದ್ಧಕ್ಕಾಗಿ ಎಷ್ಟು ಸಂಪತ್ತನ್ನು ಬಯಸುವನೋ ಅಷ್ಟನ್ನು ನಾನು ಕೊಡುತ್ತೇನೆ.

ಭೀಷ್ಮಾದೀನಾಂ ತು ಸರ್ವೇಷಾಂ ಸುಹೃದಾಮುಪಕಾರಿಣಾಮ್ ।
ಮಮ ಕೋಶಾದಿವಿಭವೇ ಮಾಭೂದ್ ಭೀಮಃ ಸುದುರ್ಮನಾಃ ॥೪॥

ಭೀಷ್ಮನೇ ಮೊದಲಾದ ಎಲ್ಲ ಮಿತ್ರರಿಗೂ, ಉಪಕಾರಿಗಳಿಗೂ ನನ್ನ ಸ್ವಯಾರ್ಜಿತ ಸಂಪತ್ತಿನಲ್ಲೇ ಶ್ರಾದ್ಧವಾಗಲಿ, ಭೀಮನಿಗೆ ಬೇಸರವಾಗುವುದು ಬೇಡ.

ವೈಶಂಪಾಯನಃ

ಇತ್ಯುಕ್ತ್ವಾ ಧರ್ಮರಾಜಸ್ತಮರ್ಜುನಂ ಪ್ರತ್ಯಪೂಜಯತ್ ।
ಭೀಮಸೇನಃ ಕಟಾಕ್ಷೇಣ ವೀಕ್ಷಾಂಚಕ್ರೇ ಧನಂಜಯಮ್ ॥೫॥

ತತಃ ಸ ವಿದುರಂ ಧೀಮಾನ್ ವಾಕ್ಯಮಾಹ ಯುಧಿಷ್ಠಿರಃ ॥೬॥

ವೈಶಂಪಾಯನ– ಹೀಗೆ ಹೇಳಿ ಧರ್ಮರಾಜನು ಆ ಅರ್ಜುನನನ್ನು ಅಭಿನಂದಿಸಿದನು. ಭೀಮಸೇನನು ಅರ್ಜುನನನ್ನು ತನ್ನ ಕಡೆಗಣ್ಣಿನಿಂದ ನೋಡಿದನು.

ಅನಂತರ ಬುದ್ಧಿಶಾಲಿಯಾದ ಯುಧಿಷ್ಠಿರನು ವಿದುರನನ್ನು ಕುರಿತು ಈ ಮಾತನ್ನು ಹೇಳಿದನು.

ಯುಧಿಷ್ಠಿರಃ

ನ ಭೀಮಸೇನೇ ಕೋಪಂ ಸ ನೃಪತಿಃ ಕರ್ತುಮರ್ಹತಿ ॥೭॥

ಪರಿಕ್ಲಿಷ್ಟೋ ಹಿ ಭೀಮಸ್ತು ಹಿಮವಾತಾತಪಾದಿಭಿಃ ।
ದುಃಖೈರ್ಬಹುವಿಧೈರ್ಧೀಮಾನ್ ಅರಣ್ಯೇ ವಿದಿತಂ ತವ ॥೮॥

ಯುಧಿಷ್ಠಿರ– ಆ ಧೃತರಾಷ್ಟ್ರರಾಜನು ಭೀಮಸೇನನ ವಿಷಯದಲ್ಲಿ ಸಿಟ್ಟನ್ನು ತಾಳುವುದು ಯೋಗ್ಯವಲ್ಲ. ಏಕೆಂದರೆ ಭೀಮನು ಅರಣ್ಯದಲ್ಲಿ ಚಳಿ, ಗಾಳಿ, ಬಿಸಿಲು ಇವುಗಳೇ ಮೊದಲಾದ ನಾನಾ ರೀತಿಯ ದುಃಖಗಳಿಂದ ಜರ್ಝರಿತನಾಗಿದ್ದಾನೆ. ಇದು ನಿನಗೆ ಗೊತ್ತೇ ಇದೆ.

ಕಿಂ ತು ಮದ್ವಚನಾದ್ ಬ್ರೂಹಿ ರಾಜಾನಂ ಭರತರ್ಷಭಮ್ ।
ಯದ್ಯದಿಚ್ಛತಿ ಯಾವಚ್ಚ ಗೃಹ್ಯತಾಂ ಮೇ ಗೃಹಾದಿತಿ ॥೯॥

ಭರತಶ್ರೇಷ್ಠನಾದ ರಾಜನನ್ನು ಕುರಿತು ಈ ನನ್ನ ಮಾತನ್ನು ಹೇಳು. ಅವನು ಯಾವುದನ್ನೆಲ್ಲ ಎಷ್ಟು ಪ್ರಮಾಣದಲ್ಲಿ ಬಯಸುವನೋ ಅವೆಲ್ಲವನ್ನೂ ನನ್ನ ಮನೆಯಿಂದ ಸ್ವೀಕರಿಸಲಿ.

ಯನ್ಮಾತ್ಸರ್ಯಮಯಂ ಭೀಮಃ ಕರೋತಿ ಭೃಶದುಃಖಿತಃ ।
ನ ತನ್ಮನಸಿ ಕರ್ತವ್ಯಮಿತಿ ವಾಚ್ಯಃ ಸ ಪಾರ್ಥಿವಃ ॥೧೦॥

ಹಿಂದೆ ಬಹಳ ಕಷ್ಟಪಟ್ಟ ಈ ಭೀಮನು ಏನು ಮಾತ್ಸರ್ಯವನ್ನು ತೋರಿಸುತ್ತಿದ್ದಾನೋ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದೆಂದು ರಾಜನಿಗೆ ಹೇಳಬೇಕು.

ಯನ್ಮಮಾಸ್ತಿ ಧನಂ ಕಿಂಚಿದ್ ಅರ್ಜುನಸ್ಯ ಚ ವೇಶ್ಮನಿ ।
ತಸ್ಯ ಸ್ವಾಮೀ ಮಹಾರಾಜ ಇತಿ ವಾಚ್ಯಶ್ಚ ಪಾರ್ಥಿವಃ ॥೧೧॥

ನನ್ನ ಹಾಗೂ ಅರ್ಜುನನ ಮನೆಯಲ್ಲಿ ಏನೆಲ್ಲ ಸಂಪತ್ತಿದೆಯೋ ಅವೆಲ್ಲಕ್ಕೂ ಧೃತರಾಷ್ಟ್ರನೇ ಒಡೆಯ ಎಂದು ರಾಜನಿಗೆ ಹೇಳಬೇಕು.

ದದಾತು ರಾಜಾ ವಿಪ್ರೇಭ್ಯೋ ಯಥೇಷ್ಟಂ ಕ್ರಿಯತಾಮಿತಿ ।
ಪುತ್ರಾಣಾಂ ಸುತರಾಂ ಚೈವ ಗಚ್ಛತ್ವಾನೃಣ್ಯಮದ್ಯ ಸಃ ॥೧೨॥

ರಾಜನು ಬ್ರಾಹ್ಮಣರಿಗೆ ಇಷ್ಟ ಬಂದಷ್ಟು ದಾನ ಮಾಡಲಿ. ತನ್ನ ಇಷ್ಟದಂತೆ ಶ್ರಾದ್ಧಾದಿಗಳನ್ನೂ ನಡೆಸಲಿ. ನಿಶ್ಚಯವಾಗಿಯೂ ಮಕ್ಕಳ ಋಣದಿಂದ ಇಂದು ಅವನು ಮುಕ್ತಿ ಹೊಂದಲಿ.

ಇದಂ ಚಾಪಿ ಶರೀರಂ ಮೇ ತತ್ರಾಯತ್ತಂ ಜನಾಧಿಪ ।
ಧನಾನಿ ಚೇತಿ ವಿದ್ಧಿ ತ್ವಂ ಕ್ಷತ್ತರ್ನಾಸ್ತ್ಯತ್ರ ಸಂಶಯಃ ॥೧೩॥

ಹೇ ಜನಾದಿಪತಿಯಾದ ವಿದುರನೇ, ಈ ನನ್ನ ಶರೀರವು ಹಾಗೂ ನನ್ನ ಎಲ್ಲ ಸಂಪತ್ತು ಅವರ ಅಧೀನವಾಗಿದೆ ಎಂದು ನೀನು ತಿಳಿಯಬೇಕು. ಇದರಲ್ಲಿ ಯಾವುದೇ ಸಂಶಯಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಯುಧಿಷ್ಠಿರವಚನಂ ನಾಮ ಸಪ್ತದಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ಇತ್ಯುಕ್ತೋ ವಿತ್ತಮಾದಾಯ ಗತ್ವಾ ಕ್ಷತ್ತಾಽಗ್ರಜೇಽಬ್ರವೀತ್ ।
ಯುಧಿಷ್ಠಿರಾರ್ಜುನೌ ಭಕ್ತಿಂ ನಿತರಾಂ ತ್ವಯಿ ಚಕ್ರತುಃ ॥

ಯುಧಿಷ್ಠಿರ, ಅರ್ಜುನರು ಹೀಗೆ ಹೇಳಿದಾಗ ವಿದುರ ಹಣವನ್ನು ತೆಗೆದುಕೊಂಡು ಹೋಗಿ ಧೃತರಾಷ್ಟ್ರನ ಬಳಿಯಲ್ಲಿ ಹೇಳಿದ- 'ಯುಧಿಷ್ಠಿರ, ಅರ್ಜುನರು ನಿನ್ನಲ್ಲಿ ಬಹಳ ಭಕ್ತಿ ತೋರಿದರು.

ನಾತಿಹೃಷ್ಟಸ್ತ್ವದಾಜ್ಞಾಯಾಂ ಭೀಮಸ್ತನ್ಮಾ ಕ್ರುಧೋಽತ್ರ ಚ ।
ಶುದ್ಧೇ ಕ್ಷತ್ರಿಯಧರ್ಮೇ ಹಿ ನಿರತೋಽಯಂ ವೃಕೋದರಃ ॥

ನಿನ್ನಾಜ್ಞೆ ಪಾಲಿಸುವುದರಲ್ಲಿ ಭೀಮ ಹೆಚ್ಚು ಉತ್ಸಾಹ ತೋರುವುದಿಲ್ಲ. ಅವನು ಶುದ್ಧಕ್ಷತ್ರಿಯಧರ್ಮದಲ್ಲಿ ನಿರತನಾಗಿದ್ದಾನೆ. ಅದರಿಂದ ಅವನಲ್ಲಿ ಕೋಪ ಮಾಡಬೇಡ.

ನೃಪಾರ್ಜುನೌ ಧರ್ಮರತಾವಪಿ ಲೋಕಕೃಪಾಪರೌ ।
ಅಜಾತಕೋಪಸ್ತಚ್ಛ್ರುತ್ವಾ ಧೃತರಾಷ್ಟ್ರಃ ಪ್ರಶಾಂತಧೀಃ ॥

'ಯುಧಿಷ್ಠಿರ- ಅರ್ಜುನರೂ ಕ್ಷತ್ರಿಯಧರ್ಮದಲ್ಲಿ ನಿರತರೇ, ಆದರೆ ಅವರು ಲೋಕದ ಮೇಲೆ ಕೃಪೆ ಮಾಡುವರು'. ವಿದುರ ಹೀಗೆ ಹೇಳಿದ್ದನ್ನು ಕೇಳಿ ಧೃತರಾಷ್ಟ್ರನು ಶಾಂತಬುದ್ಧಿಯವನಾದ. ಅವನಲ್ಲಿ ಭೀಮನ ಬಗ್ಗೆ ಕೋಪ ಉಂಟಾಗಲಿಲ್ಲ.

ಕೃತ್ವಾ ಶ್ರಾದ್ಧಾನಿ ಸರ್ವೇಷಾಂ ಮಹಾದಾನಾನ್ಯನಾರತಮ್ ।
ದಶರಾತ್ರಂ ದದೌ ಶುದ್ಧಮನಸಾ ನಿರ್ಋಣತ್ವಧೀಃ ॥

ಪುತ್ರರ ಋಣ ಪರಿಹಾರವಾಗಲಿ ಎಂಬ ಅಭಿಪ್ರಾಯ ಉಳ್ಳ ಧೃತರಾಷ್ಟ್ರನು ಶುದ್ಧ ಮನಸ್ಸಿನಿಂದ ಎಲ್ಲರಿಗೂ ಶ್ರಾದ್ಧ ಮಾಡಿ, ಹತ್ತು ದಿನಗಳ ಕಾಲ ನಿರಂತರವಾಗಿ ಮಹಾದಾನಗಳನ್ನು ಮಾಡಿದನು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ವಿದುರನು ಧೃತರಾಷ್ಟ್ರನಲ್ಲಿ ಭೀಷ್ಮಾದಿಗಳಿಗೆ ಶ್ರಾದ್ಧ ಮಾಡಲು ಯುಧಿಷ್ಠಿರನು ಧನವನ್ನು ನೀಡಲು ಒಪ್ಪಿದ್ದಾನೆ ಎಂದು ನಿವೇದಿಸುವುದು.

ವೈಶಂಪಾಯನಃ

ಏವಮುಕ್ತಸ್ತು ರಾಜ್ಞಾ ಸ ವಿದುರೋ ಬುದ್ಧಿಸತ್ತಮಃ ।
ಧೃತರಾಷ್ಟ್ರಮುಪೇತ್ಯೈವಂ ವಾಕ್ಯಮಾಹ ಯಥಾರ್ಥವತ್ ॥೧॥

ವೈಶಂಪಾಯನ– ರಾಜನಾದ ಯುಧಿಷ್ಠಿರನಿಂದ ಈ ರೀತಿಯಾಗಿ ಹೇಳಲ್ಪಟ್ಟ ಬುದ್ಧಿವಂತರಲ್ಲಿ ಶ್ರೇಷ್ಠನಾದ ಆ ವಿದುರನು ಧೃತರಾಷ್ಟ್ರನ ಬಳಿ ಸಾಗಿ ಈ ರೀತಿಯಾಗಿ ಯಥಾರ್ಥವಾದ ಮಾತುಗಳನ್ನು ಆಡಿದನು.

ದದಾತು ರಾಜಾ ವಿಪ್ರೇಭ್ಯೋ ಯಥೇಷ್ಟಂ ಕ್ರಿಯತಾಮಿತಿ ।
ಪುತ್ರಾಣಾಂ ಸುತರಾಂ ಚೈವ ಗಚ್ಛತ್ವಾನೃಣ್ಯಮದ್ಯ ಸಃ ॥೧೨॥

ರಾಜನು ಬ್ರಾಹ್ಮಣರಿಗೆ ಇಷ್ಟ ಬಂದಷ್ಟು ದಾನ ಮಾಡಲಿ. ತನ್ನ ಇಷ್ಟದಂತೆ ಶ್ರಾದ್ಧಾದಿಗಳನ್ನೂ ನಡೆಸಲಿ. ನಿಶ್ಚಯವಾಗಿಯೂ ಮಕ್ಕಳ ಋಣದಿಂದ ಇಂದು ಅವನು ಮುಕ್ತಿ ಹೊಂದಲಿ.

ಇದಂ ಚಾಪಿ ಶರೀರಂ ಮೇ ತತ್ರಾಯತ್ತಂ ಜನಾಧಿಪ ।
ಧನಾನಿ ಚೇತಿ ವಿದ್ಧಿ ತ್ವಂ ಕ್ಷತ್ತರ್ನಾಸ್ತ್ಯತ್ರ ಸಂಶಯಃ ॥೧೩॥

ಹೇ ಜನಾದಿಪತಿಯಾದ ವಿದುರನೇ, ಈ ನನ್ನ ಶರೀರವು ಹಾಗೂ ನನ್ನ ಎಲ್ಲ ಸಂಪತ್ತು ಅವರ ಅಧೀನವಾಗಿದೆ ಎಂದು ನೀನು ತಿಳಿಯಬೇಕು. ಇದರಲ್ಲಿ ಯಾವುದೇ ಸಂಶಯಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಯುಧಿಷ್ಠಿರವಚನಂ ನಾಮ ಸಪ್ತದಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ಇತ್ಯುಕ್ತೋ ವಿತ್ತಮಾದಾಯ ಗತ್ವಾ ಕ್ಷತ್ತಾಽಗ್ರಜೇಽಬ್ರವೀತ್ ।
ಯುಧಿಷ್ಠಿರಾರ್ಜುನೌ ಭಕ್ತಿಂ ನಿತರಾಂ ತ್ವಯಿ ಚಕ್ರತುಃ ॥

ಯುಧಿಷ್ಠಿರ, ಅರ್ಜುನರು ಹೀಗೆ ಹೇಳಿದಾಗ ವಿದುರ ಹಣವನ್ನು ತೆಗೆದುಕೊಂಡು ಹೋಗಿ ಧೃತರಾಷ್ಟ್ರನ ಬಳಿಯಲ್ಲಿ ಹೇಳಿದ- 'ಯುಧಿಷ್ಠಿರ, ಅರ್ಜುನರು ನಿನ್ನಲ್ಲಿ ಬಹಳ ಭಕ್ತಿ ತೋರಿದರು.

ನಾತಿಹೃಷ್ಟಸ್ತ್ವದಾಜ್ಞಾಯಾಂ ಭೀಮಸ್ತನ್ಮಾ ಕ್ರುಧೋಽತ್ರ ಚ ।
ಶುದ್ಧೇ ಕ್ಷತ್ರಿಯಧರ್ಮೇ ಹಿ ನಿರತೋಽಯಂ ವೃಕೋದರಃ ॥

ನಿನ್ನಾಜ್ಞೆ ಪಾಲಿಸುವುದರಲ್ಲಿ ಭೀಮ ಹೆಚ್ಚು ಉತ್ಸಾಹ ತೋರುವುದಿಲ್ಲ. ಅವನು ಶುದ್ಧಕ್ಷತ್ರಿಯಧರ್ಮದಲ್ಲಿ ನಿರತನಾಗಿದ್ದಾನೆ. ಅದರಿಂದ ಅವನಲ್ಲಿ ಕೋಪ ಮಾಡಬೇಡ.

ನೃಪಾರ್ಜುನೌ ಧರ್ಮರತಾವಪಿ ಲೋಕಕೃಪಾಪರೌ ।
ಅಜಾತಕೋಪಸ್ತಚ್ಛ್ರುತ್ವಾ ಧೃತರಾಷ್ಟ್ರಃ ಪ್ರಶಾಂತಧೀಃ ॥

'ಯುಧಿಷ್ಠಿರ- ಅರ್ಜುನರೂ ಕ್ಷತ್ರಿಯಧರ್ಮದಲ್ಲಿ ನಿರತರೇ, ಆದರೆ ಅವರು ಲೋಕದ ಮೇಲೆ ಕೃಪೆ ಮಾಡುವರು'. ವಿದುರ ಹೀಗೆ ಹೇಳಿದ್ದನ್ನು ಕೇಳಿ ಧೃತರಾಷ್ಟ್ರನು ಶಾಂತಬುದ್ಧಿಯವನಾದ. ಅವನಲ್ಲಿ ಭೀಮನ ಬಗ್ಗೆ ಕೋಪ ಉಂಟಾಗಲಿಲ್ಲ.

ಕೃತ್ವಾ ಶ್ರಾದ್ಧಾನಿ ಸರ್ವೇಷಾಂ ಮಹಾದಾನಾನ್ಯನಾರತಮ್ ।
ದಶರಾತ್ರಂ ದದೌ ಶುದ್ಧಮನಸಾ ನಿರ್ಋಣತ್ವಧೀಃ ॥

ಪುತ್ರರ ಋಣ ಪರಿಹಾರವಾಗಲಿ ಎಂಬ ಅಭಿಪ್ರಾಯ ಉಳ್ಳ ಧೃತರಾಷ್ಟ್ರನು ಶುದ್ಧ ಮನಸ್ಸಿನಿಂದ ಎಲ್ಲರಿಗೂ ಶ್ರಾದ್ಧ ಮಾಡಿ, ಹತ್ತು ದಿನಗಳ ಕಾಲ ನಿರಂತರವಾಗಿ ಮಹಾದಾನಗಳನ್ನು ಮಾಡಿದನು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ವಿದುರನು ಧೃತರಾಷ್ಟ್ರನಲ್ಲಿ ಭೀಷ್ಮಾದಿಗಳಿಗೆ ಶ್ರಾದ್ಧ ಮಾಡಲು ಯುಧಿಷ್ಠಿರನು ಹಣವನ್ನು ನೀಡಲು ಒಪ್ಪಿದ್ದಾನೆ ಎಂದು ನಿವೇದಿಸುವುದು.

ವೈಶಂಪಾಯನಃ

ಏವಮುಕ್ತಸ್ತು ರಾಜ್ಞಾ ಸ ವಿದುರೋ ಬುದ್ಧಿಸತ್ತಮಃ ।
ಧೃತರಾಷ್ಟ್ರಮುಪೇತ್ಯೈವಂ ವಾಕ್ಯಮಾಹ ಯಥಾರ್ಥವತ್ ॥೧॥

ವೈಶಂಪಾಯನ– ರಾಜನಾದ ಯುಧಿಷ್ಠಿರನಿಂದ ಈ ರೀತಿಯಾಗಿ ಹೇಳಲ್ಪಟ್ಟ ಬುದ್ಧಿವಂತರಲ್ಲಿ ಶ್ರೇಷ್ಠನಾದ ಆ ವಿದುರನು ಧೃತರಾಷ್ಟ್ರನ ಬಳಿ ಸಾಗಿ ಈ ರೀತಿಯಾಗಿ ಯಥಾರ್ಥವಾದ ಮಾತುಗಳನ್ನು ಆಡಿದನು.

ವಿದುರಃ

ಉಕ್ತೋ ಯುಧಿಷ್ಠಿರೋ ರಾಜಾ ಭವದ್ವಚನಮಾದಿತಃ ।
ಸ ಚ ಸಂಶ್ರುತ್ಯ ವಾಕ್ಯಂ ತೇ ಪ್ರಶಶಂಸ ಮಹೀಪತಿಃ ॥೨॥

ವಿದುರ– ರಾಜನಾದ ಯುಧಿಷ್ಠಿರನಿಗೆ ಮೊದಲಿನಿಂದ ಆರಂಭಿಸಿ ನಿನ್ನ ಎಲ್ಲ ಮಾತುಗಳನ್ನು ಹೇಳಿದೆನು. ಮಹೀಪತಿಯಾದ ಅವನು ನಿನ್ನ ಮಾತುಗಳನ್ನು ಕೇಳಿ ಬಹುವಾಗಿ ಪ್ರಶಂಸಿಸಿದನು.

ಬೀಭತ್ಸುಶ್ಚ ಮಹಾತೇಜಾ ನಿವೇದಯತಿ ತೇ ಗೃಹಾನ್ ।
ವಸು ತಚ್ಚ ಗೃಹೇ ಯಚ್ಚ ಪ್ರಾಣಾನಪಿ ಚ ಕೇವಲಾನ್ ॥೩॥

ಮಹಾತೇಜಸ್ವಿಯಾದ ಬೀಭತ್ಸುವಾದ ಅರ್ಜುನನೂ ಕೂಡ ನಿನಗೆ ಮನೆಯನ್ನೂ, ಮನೆಯಲ್ಲಿ ಏನೆಲ್ಲ ಸಂಪತ್ತಿದೆಯೋ ಅದೆಲ್ಲ ಸಂಪತ್ತನ್ನೂ ಮತ್ತು ತನ್ನ ಪ್ರಾಣಗಳನ್ನೂ ಅರ್ಪಿಸುತ್ತಾನೆ.

ಧರ್ಮರಾಜಸ್ತು ಪುತ್ರಸ್ತೇ ರಾಜ್ಯಂ ಪ್ರಾಣಾನ್ ಧನಾನಿ ಚ ।
ಅನುಜಾನಾತಿ ರಾಜರ್ಷೇ ಯಚ್ಚಾನ್ಯದಪಿ ಕಿಂಚನ ॥೪॥

ಹೇ ರಾಜರ್ಷಿಯೇ, ನಿನ್ನ ಪುತ್ರನಾದ ಧರ್ಮರಾಜನೂ ಕೂಡ ರಾಜ್ಯವನ್ನೂ, ತನ್ನ ಪ್ರಾಣವನ್ನೂ, ಸಂಪತ್ತುಗಳನ್ನೂ ಅವನ ಬಳಿ ಇನ್ನೂ ಏನೇನಿದೆಯೋ ಅವೆಲ್ಲವನ್ನೂ ನಿನಗೆ ನೀಡಲು ಒಪ್ಪಿರುವನು.

ಭೀಮಸ್ತು ಸರ್ವದುಃಖಾನಿ ಸಂಸ್ಮೃತ್ಯ ಬಹುಲಾನ್ಯುತ ।
ಕೃಚ್ಛ್ರಾದಿವ ಮಹಾಬಾಹುರನುಜಜ್ಞೇ ವಿನಿಃಶ್ವಸನ್ ॥೫॥

ಆದರೆ ಮಹಾಬಲಶಾಲಿಯಾದ ಭೀಮನು ಹಿಂದೆ ಅನುಭವಿಸಿದ ಬಹುಪ್ರಕಾರವಾದ ಎಲ್ಲರೀತಿಯ ದುಃಖಗಳನ್ನೂ ಸ್ಮರಿಸಿಕೊಂಡು ನಿಟ್ಟುಸಿರು ಬಿಡುತ್ತಾ ಬಹಳ ಕಷ್ಟದಿಂದ ಎಂಬಂತೆ ಒಪ್ಪಿದನು.

ಸ ರಾಜ್ಞಾ ಧರ್ಮಶೀಲೇನ ಭ್ರಾತ್ರಾ ಬೀಭತ್ಸುನಾ ತಥಾ ।
ಅನುನೀತೋ ಮಹಾಬಾಹುಃ ಸೌಹೃದೇ ಸ್ಥಾಪಿತೋಽಪಿ ಚ ॥೬॥

ನಂತರ ಮಹಾಬಾಹುವಾದ ಅವನು ಧರ್ಮಶೀಲನಾದ ರಾಜನಿಂದಲೂ, ಸಹೋದರನಾದ ಅರ್ಜುನನಿಂದಲೂ ಸಮಾಧಾನಗೊಂಡವನಾಗಿ ಸೌಹಾರ್ದದಿಂದಲೇ ಇದ್ದಾನೆ.

ನ ಚ ಮನ್ಯುಸ್ತ್ವಯಾ ಕಾರ್ಯ ಇತಿ ತ್ವಾಂ ಪ್ರಾಹ ಧರ್ಮರಾಟ್ ।
ಸಂಸ್ಮೃತ್ಯ ಭೀಮಸ್ತದ್ವೈರಂ ಯದನ್ಯಾಯವದಾಚರೇತ್ ॥೭॥

ಭೀಮನು ಆ ಹಿಂದಿನ ವೈರವನ್ನು ಸ್ಮರಿಸಿಕೊಂಡು ಅನ್ಯಾಯವೆಸಗುವಂತೆ ಏನು ವರ್ತಿಸಿರುವನೋ ಆ ವಿಷಯದಲ್ಲಿ ನೀನು ಕೋಪಗೊಳ್ಳಬಾರದು ಎಂದು ಧರ್ಮರಾಜನು ಹೇಳಿ ಕಳುಹಿಸಿದ್ದಾನೆ.

ಏವಂಪ್ರಾಯೋ ಹಿ ಧರ್ಮೋಽಯಂ ಕ್ಷತ್ರಿಯಾಣಾಂ ನರಾಧಿಪ ।
ಶುದ್ಧೇನ ಕ್ಷತ್ರಧರ್ಮೇಣ ನಿರತೋಽಯಂ ವೃಕೋದರಃ ॥೮॥

ಏಕೆಂದರೆ ಹೆಚ್ಚಾಗಿ ಕ್ಷತ್ರಿಯರ ಮನೋಧರ್ಮವೇ ಹೀಗಿದೆ. ಹೇ ನರಾಧಿಪನೇ, ಈ ವೃಕೋದರನು ಶುದ್ಧವಾದ ಕ್ಷತ್ರಧರ್ಮವನ್ನು ಆಸಕ್ತಿಯಿಂದ ನಡೆಸುವವನು.

ವೃಕೋದರಕೃತೇ ಚಾಹಮರ್ಜುನಶ್ಚ ಪುನಃ ಪುನಃ ।
ಪ್ರಸಾದಯಾವ ನೃಪತೇ ಭವಾನ್ ಪ್ರಭುರಿಹಾಸ್ತಿ ಯಃ ॥೯॥

ವೃಕೋದರನು ಮಾಡಿದ ಆ ಕೆಲಸಕ್ಕಾಗಿ ನಾನು ಮತ್ತು ಅರ್ಜುನನು ಮತ್ತೆ ಮತ್ತೆ ನಿನ್ನಲ್ಲಿ ಕ್ಷಮೆ ಯಾಚಿಸುತ್ತಿದ್ದೇವೆ. ಹೇ ರಾಜನೇ, ಇಲ್ಲಿ ಯಾರೆಲ್ಲ ಇರುವರೋ ಅವರೆಲ್ಲರಿಗೂ ನೀನು ಪ್ರಭುವಾಗಿರುವಿ.

ಪ್ರದದಾತು ಭವಾನ್ ವಿತ್ತಂ ಯಾವದಿಚ್ಛತಿ ಪಾರ್ಥಿವ ।
ತ್ವಮೀಶ್ವರೋ ನೋ ರಾಜ್ಯಸ್ಯ ಪ್ರಾಣಾನಾಂ ಚೈವ ಭಾರತ ॥೧೦॥

ಹೇ ಪಾರ್ಥಿವನೇ, ನೀನು ಎಷ್ಟು ಕೊಡಬೇಕೆಂದು ಬಯಸಿರುವೆಯೋ ಅಷ್ಟೂ ಸಂಪತ್ತನ್ನು ದಾನ ಮಾಡು. ಹೇ ಭಾರತನೇ, ನಮ್ಮ ಪ್ರಾಣಕ್ಕೂ, ರಾಜ್ಯಕ್ಕೂ ನೀನೇ ಈಶ್ವರನಾಗಿರುವಿ.

ಬ್ರಹ್ಮದೇಯಾಗ್ರಹಾರಾಂಶ್ಚ ಪುತ್ರಾಣಾಂ ಚೌರ್ಧ್ವದೇಹಿಕೇ ।
ಇತೋ ರತ್ನಾನಿ ಗಾಶ್ಚೈವ ದಾಸೀದಾಸಮಜಾವಿಕಮ್ ॥೧೧॥

ಅರ್ಚಯಿತ್ವಾ ಕುರುಶ್ರೇಷ್ಠೋ ಬ್ರಾಹ್ಮಣೇಭ್ಯಃ ಪ್ರಯಚ್ಛತು ।
ದೀನಾಂಧಕೃಪಣೇಭ್ಯಶ್ಚ ತತ್ರ ತತ್ರ ನೃಪಾಜ್ಞಯಾ ॥೧೨॥

ಬಹ್ವನ್ನರಸಪಾನಾಢ್ಯಂ ಸರ್ವಂ ವಿದುರ ಕಾರಯ ।
ಗವಾಂ ನಿಪಾನಾನ್ಯನ್ಯಚ್ಚ ವಿವಿಧಂ ಪುಣ್ಯಕರ್ಮ ಯತ್ ॥೧೩॥

ಇತಿ ಮಾಮಬ್ರವೀದ್ ರಾಜಾ ಪಾರ್ಥಶ್ಚೈವ ಧನಂಜಯಃ ।
ಯದತ್ರಾನಂತರಂ ಕಾರ್ಯಂ ತದ್ ಭವಾನ್ ವಕ್ತುಮರ್ಹತಿ ॥೧೪॥

ತನ್ನ ಮಕ್ಕಳ ಔರ್ಧ್ವದೈಹಿಕ ಕ್ರಿಯೆಯಲ್ಲಿ ಬ್ರಾಹ್ಮಣರಿಗೆ ಕೊಡಬೇಕಾದ ಅಗ್ರಹಾರಗಳನ್ನೂ ಮತ್ತು ಇಲ್ಲಿಂದ ರತ್ನಗಳನ್ನೂ, ಗೋವುಗಳನ್ನೂ, ದಾಸಿಯರನ್ನೂ, ದಾಸರನ್ನೂ, ಆಡು-ಕುರಿಗಳನ್ನೂ ಕುರುಶ್ರೇಷ್ಠನು ಬ್ರಾಹ್ಮಣರನ್ನು ಪೂಜಿಸಿ ಅವರಿಗೆ ಕೊಡಲಿ. ಹಾಗೆಯೇ ರಾಜನ ಆಜ್ಞೆಯಂತೆ ಅಲ್ಲಲ್ಲಿ ದೀನ-ಅಂಧ-ಕೃಪಣರಿಗೂ ಕೂಡ ಬಹಳವಾದ ರಸಭರಿತವಾದ ಅನ್ನ-ಪಾನಗಳಿಂದ ಕೂಡಿದ ಎಲ್ಲ ರೀತಿಯ ಅನ್ನಗಳನ್ನೂ ನೀಡಲಿ. ಅಲ್ಲದೇ ಹೇ ವಿದುರನೇ, ಹಸುಗಳಿಗೆ ಅನುಕೂಲಕರವಾದ ನೀರಿನ ತೊಟ್ಟಿಗಳನ್ನೂ, ಇನ್ನು ಬೇರೇನು ಪುಣ್ಯಕರ್ಮಗಳಿವೆಯೋ ಆ ಎಲ್ಲ ಪುಣ್ಯಕರ್ಮಗಳನ್ನೂ ನೀನು ಮಾಡಿಸು. ಹೀಗೆ ರಾಜನಾದ ಯುಧಿಷ್ಠಿರನು, ಪಾರ್ಥನಾದ ಧನಂಜಯನೂ ನನಗೆ ತಿಳಿಸಿದ್ದಾರೆ. ಇಷ್ಟಾದ ನಂತರ ಏನು ಮಾಡಬೇಕಾಗಿದೆಯೋ ಅದನ್ನು ನೀನು ತಿಳಿಸುವವನಾಗು.

ವೈಶಂಪಾಯನಃ

ಇತ್ಯುಕ್ತೋ ವಿದುರೇಣಾಥ ಧೃತರಾಷ್ಟ್ರೋಽಭಿನಂದ್ಯ ತಮ್ ।
ಮನಶ್ಚಕ್ರೇ ಮಹಾದಾನೇ ಕಾರ್ತಿಕ್ಯಾಂ ಜನಮೇಜಯ ॥೧೫॥

ವೈಶಂಪಾಯನ– ಹೇ ಜನಮೇಜಯನೇ, ವಿದುರನು ಹೀಗೆ ಹೇಳಿದಾಗ ಧೃತರಾಷ್ಟ್ರನು ವಿದುರನನ್ನು ಅಭಿನಂದಿಸಿ ಕಾರ್ತಿಕ ಪೂರ್ಣಿಮೆಯಂದು ಮಹಾದಾನಗಳನ್ನು ನಡೆಸಬೇಕೆಂದು ಮನಸ್ಸು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ವಿದುರವಾಕ್ಯಂ ನಾಮ ಅಷ್ಟಾದಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಧೃತರಾಷ್ಟ್ರನು ಭೀಷ್ಮ-ದುರ್ಯೋಧನಾದಿಗಳ ಉದ್ದೇಶದಿಂದ ಶ್ರಾದ್ಧ ಮಾಡುತ್ತಾ, ಹಣ-ವಸ್ತ್ರ ಹಾಗೂ ಅನ್ನಾದಿಗಳನ್ನು ನೀಡುವ ಮೂಲಕ ಬ್ರಾಹ್ಮಣರನ್ನು ಸಂತೋಷಪಡಿಸುವುದು.

ವೈಶಂಪಾಯನಃ

ವಿದುರೇಣೈವಮುಕ್ತಸ್ತು ಧೃತರಾಷ್ಟ್ರೋ ಜನಾಧಿಪಃ ।
ಪ್ರೀತಿಮಾನಭವದ್ ರಾಜಾ ರಾಜ್ಞೋ ಜಿಷ್ಣೋಶ್ಚ ಕರ್ಮಣಾ ॥೧॥

ವೈಶಂಪಾಯನ- ಜನಾಧಿಪತಿಯಾದ ಧೃತರಾಷ್ಟ್ರನಿಗೆ ವಿದುರನು ಹೀಗೆ ಹೇಳಿದಾಗ ರಾಜನು ರಾಜರಾದ ಯುಧಿಷ್ಠಿರ ಮತ್ತು ಅರ್ಜುನರ ಈ ಕೆಲಸದಿಂದ ಸಂತೋಷಗೊಂಡನು.

ತತೋಽಭಿರೂಪಾನ್ ಭೀಷ್ಮಾಯ ಬ್ರಾಹ್ಮಣಾನೃಷಿಸತ್ತಮಾನ್ ।
ಪುತ್ರಾರ್ಥೇ ಸುಹೃದಾಂ ಚೈವ ಸ ಸಮೀಕ್ಷ್ಯ ಸಹಸ್ರಶಃ ॥೨॥

ಕಾರಯಿತ್ವಾಽನ್ನಪಾನಾನಿ ಯಾನಾನ್ಯಾಚ್ಛಾದನಾನಿ ಚ ।
ಸುವರ್ಣಮಣಿರತ್ನಾನಿ ದಾಸೀದಾಸಪರಿಚ್ಛದಾನ್ ॥೩॥

ಕಂಬಲಾನಿ ಚ ರತ್ನಾನಿ ಗ್ರಾಮಾನ್ ಕ್ಷೇತ್ರಾಣ್ಯಜಾವಿಕಾನ್ ।
ಅಲಂಕಾರಾನಥಾಶ್ವಾಂಶ್ಚ ಕಾಮ್ಯಾಶ್ಚೈವ ವರಸ್ತ್ರಿಯಃ ॥೪॥

ಆದಿಶ್ಯಾದಿಶ್ಯ ವಿಪ್ರೇಭ್ಯೋ ಸ ದದೌ ನೃಪಸತ್ತಮಃ ॥೫॥

ಅನಂತರ ರಾಜಶ್ರೇಷ್ಠನಾದ ಆ ಧೃತರಾಷ್ಟ್ರನು ಭೀಷ್ಮರಿಗಾಗಿ, ತನ್ನ ಮಕ್ಕಳಿಗಾಗಿ ಹಾಗೆ ತನ್ನೆಲ್ಲ ಮಿತ್ರರಿಗಾಗಿ ಶ್ರಾದ್ಧ ಮಾಡುವುದಕ್ಕಾಗಿ ಪಂಡಿತರಾದ ಬ್ರಾಹ್ಮಣರನ್ನೂ, ಶ್ರೇಷ್ಠ ಋಷಿಗಳನ್ನೂ ಚೆನ್ನಾಗಿ ಪರೀಕ್ಷಿಸಿ ಸಾವಿರಾರು ಸಂಖ್ಯೆಯಲ್ಲಿ ಕರೆಸಿದನು. ಅನ್ನ-ಪಾನಾದಿಗಳನ್ನು ಸಿದ್ಧಪಡಿಸಿ ಅವುಗಳನ್ನು, ವಾಹನಗಳನ್ನು, ಮನೆಗಳನ್ನು, ಬಂಗಾರ ಹಾಗೂ ಮಣಿ-ರತ್ನಗಳನ್ನು, ದಾಸಿಯರನ್ನು, ದಾಸರನ್ನು, ಹಾಸುವ ವಸ್ತ್ರಗಳನ್ನು, ಕಂಬಳಿಗಳನ್ನು, ನಾನಾ ರೀತಿಯ ರತ್ನಗಳನ್ನು, ಗ್ರಾಮಗಳನ್ನು, ತೋಟ-ಗದ್ದೆಗಳನ್ನು, ಆಡು-ಕುರಿಗಳನ್ನು, ಅಲಂಕಾರ ಸಾಮಗ್ರಿಗಳನ್ನು, ಕುದುರೆಗಳನ್ನು, ಸುಂದರಿಯರಾದ ಶ್ರೇಷ್ಠ ಸ್ತ್ರೀಯರನ್ನೂ ಕರೆದು ಕರೆದು ಬ್ರಾಹ್ಮಣರಿಗೆ ನೀಡಿದನು.

ದ್ರೋಣಂ ಸಂಕೀರ್ತ್ಯ ಭೀಷ್ಮಂ ಚ ಸೋಮದತ್ತಂ ಚ ಬಾಹ್ಲಿಕಮ್ ।
ದುರ್ಯೋಧನಂ ಚ ರಾಜಾನಂ ಪುತ್ರಾಂಶ್ಚೈವ ಪೃಥಕ್ ಪೃಥಕ್ ॥೬॥

ಜಯದ್ರಥಪುರೋಗಾಣಾಂ ಸುಹೃದಾಂ ಚೈವ ಸರ್ವಶಃ ।
ಸ ಶ್ರಾದ್ಧಯಜ್ಞೋ ವವೃತೇ ಬಹುಗೋಪಶುದಕ್ಷಿಣಃ ॥೭॥

ದ್ರೋಣರನ್ನೂ, ಭೀಷ್ಮರನ್ನೂ, ಸೋಮದತ್ತನನ್ನೂ, ಬಾಹ್ಲೀಕರಾಜನನ್ನೂ, ರಾಜನಾದ ದುರ್ಯೋಧನನನ್ನೂ, ಅವನ ಉಳಿದ ಮಕ್ಕಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಅವರ ಹೆಸರು, ಗೋತ್ರಗಳನ್ನು ಹೇಳಿ, ಅದೇ ರೀತಿ ಜಯದ್ರಥನೇ ಮೊದಲಾದ ಸ್ನೇಹಿತರಿಗೂ ಕೂಡ ಎಲ್ಲ ರೀತಿಯಿಂದ ಯೋಗ್ಯವಾಗಿ ನಡೆಸಲ್ಪಟ್ಟ ಆ ಶ್ರಾದ್ಧಯಜ್ಞವು ಅನೇಕ ರೀತಿಯ ಗೋವುಗಳು, ಪಶುಗಳೇ ದಕ್ಷಿಣೆಯಾಗಿ ಉಳ್ಳದ್ದಾಗಿ ಶೋಭಿಸಿತು.

ಅನೇಕಧನರತ್ನೌಘೋ ಯುಧಿಷ್ಠಿರಮತೇ ತದಾ ॥೮॥

ಅನಿಶಂ ಯತ್ರ ಪುರುಷಾ ಗಣಕಾ ಲೇಖಕಾಸ್ತಥಾ ।
ಯುಧಿಷ್ಠಿರಸ್ಯ ವಚನಾದಾಪೃಚ್ಛಂತಿ ಸ್ಮ ತಂ ನೃಪಮ್ ॥೯॥

ಆ ಸಮಯದಲ್ಲಿ ಯುಧಿಷ್ಠಿರನ ಅಭಿಪ್ರಾಯದಂತೆ ನಾನಾ ರೀತಿಯ ಹಣ ಹಾಗೂ ರತ್ನಗಳ ರಾಶಿಯೇ ಅಲ್ಲಿತ್ತು. ಯುಧಿಷ್ಠಿರನ ಆಜ್ಞೆಯಂತೆ ಅಲ್ಲಿ ಲೆಕ್ಕಿಗರು ಮತ್ತು ಬರವಣಿಗೆಯ ವ್ಯಕ್ತಿಗಳು ನಿರಂತರವಾಗಿ ರಾಜನನ್ನು ಈ ರೀತಿ ಕೇಳುತ್ತಿದ್ದರು.

ಆಜ್ಞಾಪಯ ತ್ವಮೇತೇಭ್ಯಃ ಪ್ರದೇಯಂ ದೀಯತಾಮಿತಿ ॥೧೦॥

ತದುಪಸ್ಥಿತಮೇವಾತ್ರ ವಚನಾಂತೇ ಪ್ರದೃಶ್ಯತೇ ॥೧೧॥

'ಈಗ ಬಂದ ವ್ಯಕ್ತಿಗಳಿಗೆ ಏನನ್ನು ಕೊಡಲಿ? ನೀನು ಹೇಳಬಹುದಾದ ಎಲ್ಲವೂ ಇಲ್ಲಿಸಿದ್ಧವಾಗಿದೆ. ನೀನು ಹೇಳಿದೊಡನೆ ಅದನ್ನು ಮುಂದೆ ತರಲಾಗುತ್ತದೆ. ಹಾಗಾಗಿ ಆಜ್ಞಾಪಿಸು' ಎನ್ನುತ್ತಿದ್ದರು.

ಶತೇ ದೇಯೇ ದಶಶತಂ ಸಹಸ್ರೇ ಚಾಯುತಂ ತಥಾ ।
ದೀಯತೇ ವಚನಾದ್ ರಾಜ್ಞಃ ಕುಂತೀಪುತ್ರಸ್ಯ ಧೀಮತಃ ॥೧೨॥

ಏವಂ ಸ ವಸುಧಾರಾಭಿರ್ವರ್ಷಮಾಣೋ ನೃಪಾಂಬುದಃ ।
ತರ್ಪಯಾಮಾಸ ವಿಪ್ರಾಂಸ್ತಾನ್ ವರ್ಷಾದ್ ಭೂಮಿಮಿವಾಂಬುದಃ ॥

ಧೀಮಂತನಾದ ರಾಜನಾದ ಕುಂತೀಪುತ್ರನ ಆಜ್ಞೆಯಂತೆ ನೂರು ಕೊಡಬೇಕಾಗಿದ್ದಲ್ಲಿ ಸಾವಿರವನ್ನು, ಸಾವಿರ ಕೊಡಬೇಕಾಗಿದ್ದಲ್ಲಿ ಹತ್ತು ಸಾವಿರವನ್ನು ಆ ಜನರು ದಾನ ಮಾಡುತ್ತಿದ್ದರು. ಹೀಗೆ ಧಾರಾಕಾರವಾಗಿ ಸಂಪತ್ತನ್ನು ಸುರಿಯುತ್ತಿರುವ ಆ ರಾಜನೆಂಬ ಮೋಡವು ನೀರ್ದುಂಬಿದ ಮೋಡವು ಮಳೆಯಿಂದ ಭೂಮಿಯನ್ನು ಹೇಗೋ ಹಾಗೆ ಆ ಬ್ರಾಹ್ಮಣರನ್ನು ಸಂತೃಪ್ತಿಪಡಿಸಿತು.

ತತೋಽನಂತರಮೇವಾತ್ರ ಸರ್ವವರ್ಣಾನ್ ಮಹಾಮತಿಃ ।
ಅನ್ನಪಾನರಸೌಘೇಣ ಪ್ಲಾವಯಾಮಾಸ ಪಾರ್ಥಿವಃ ॥೧೪॥

ಹೀಗೆ ದಾನ ಮಾಡಿದ ಸ್ವಲ್ಪ ಹೊತ್ತಿನಲ್ಲೇ ಮಹಾಮತಿಯಾದ ಆ ರಾಜನು ಎಲ್ಲ ವರ್ಣದವರನ್ನೂ ಅನ್ನ-ಪಾನರಸಗಳ ಪ್ರವಾಹದಿಂದ ಮೀಯಿಸಿಬಿಟ್ಟನು.

ಸವಸ್ತ್ರೌಘೇನ ರತ್ನೌಘೋ ಮೃದಂಗನಿನದಧ್ವನಿಃ ।
ಗವಾಶ್ವಮಹಿಷಾವರ್ತೋ ನಾನಾರತ್ನಮಹಾಕರಃ ॥೧೫॥

ಗ್ರಾಮಾಗ್ರಹಾರಕುಲ್ಯಾಢ್ಯೋ ಮಣಿಹೇಮಜಲಾರ್ಣವಃ ।
ಜಗತ್ ಸಂಪ್ಲಾವಯಾಮಾಸ ಧೃತರಾಷ್ಟ್ರೋಡುಪೋ ಧ್ರುವಮ್ ॥೧೬॥

ವಸ್ತ್ರಗಳ ಸಮೂಹದಿಂದ ಕೂಡಿದ, ರತ್ನಗಳೇ ಪ್ರವಾಹವಾಗಿ ಉಳ್ಳ, ಮೃದಂಗ ಮೊದಲಾದ ಮಂಗಳವಾದ್ಯಗಳ ಧ್ವನಿಯೇ ಭೋರ್ಗರೆತವಾಗಿ ಉಳ್ಳ, ಗೋವು ಅಶ್ವಗಳು, ಕೋಣಗಳು ಇವುಗಳೇ ಸುಳಿಗಳಾಗಿ ಉಳ್ಳ, ನಾನಾ ರೀತಿಯ ರತ್ನಗಳಿಗೆ ಬಹುದೊಡ್ಡ ಉತ್ಪತ್ತಿ ಸ್ಥಾನವಾದ, ಗ್ರಾಮ-ಅಗ್ರಹಾರಗಳೆಂಬ ನದಿಗಳಿಂದ ಕೂಡಿದ, ಮಣಿ ಹಾಗೂ ಚಿನ್ನಗಳೇ ನೀರಾಗಿ ಉಳ್ಳ ಸಮುದ್ರವನ್ನು ಬಳಸಿಕೊಂಡು ಧೃತರಾಷ್ಟ್ರನೆಂಬ ಚಂದ್ರನು ನಿಶ್ಚಯವಾಗಿಯೂ ಇಡೀ ಜಗತ್ತನ್ನು ತೋಯಿಸಿಬಿಟ್ಟನು.

ಏವಂ ಸ ಪುತ್ರಪೌತ್ರಾಣಾಂ ಪಿತೄಣಾಮಾತ್ಮನಸ್ತದಾ ।
ಗಾಂಧಾರ್ಯಪಿ ಮಹಾರಾಜ ಪ್ರದದೌ ಚೌರ್ಧ್ವದೇಹಿಕಮ್ ॥೧೭॥

ಹೇ ಮಹಾರಾಜ ಜನಮೇಜಯನೇ, ಈ ರೀತಿ ಧೃತರಾಷ್ಟ್ರನು ಪುತ್ರ-ಪೌತ್ರರಿಗೂ, ಪಿತೃಗಳಿಗೂ ಶ್ರಾದ್ಧ ಮಾಡುವ ಸಂದರ್ಭದಲ್ಲೇ ಗಾಂಧಾರಿಯು ತನ್ನ ಪಿತೃಗಳಿಗೂ, ಪುತ್ರಪೌತ್ರರಿಗೂ ಪರಲೋಕದಲ್ಲಿ ತೃಪ್ತಿಯನ್ನು ನೀಡುವ ದಾನಾದಿಗಳನ್ನು ಮಾಡಿದಳು.

ಪರಿಶ್ರಾಂತೋ ಯದಾಸೀತ್ ಸ ದದದ್ದಾನಾನ್ಯನೇಕಶಃ ।
ತತೋ ನಿವರ್ತಯಾಮಾಸ ದಾನಯಜ್ಞಂ ಕುರೂದ್ವಹಃ ॥೧೮॥

ಹೀಗೆ ಕುರುವಂಶಜನಾದ ಆ ಧೃತರಾಷ್ಟ್ರನು ಅನೇಕ ರೀತಿಯಲ್ಲಿ ದಾನಗಳನ್ನು ಮಾಡುತ್ತಾ ಯಾವಾಗ ಆಯಾಸಗೊಂಡನೋ ಆಗ ಆ ದಾನಯಜ್ಞವನ್ನು ಸಮಾಪ್ತಿಗೊಳಿಸಿದನು.

ಏವಂ ಸ ರಾಜಾ ಕೌರವ್ಯಶ್ಚಕ್ರೇ ದಾನಮಹೋತ್ಸವಮ್ ।
ನಟನರ್ತಪ್ರಗೀತಾಢ್ಯಂ ಬಹ್ವನ್ನರಸದಕ್ಷಿಣಮ್ ॥೧೯॥

ಹೀಗೆ ಕುರುವಂಶಜನಾದ ಆ ಧೃತರಾಷ್ಟ್ರರಾಜನು ನಾಟಕ, ನರ್ತನ, ಸಂಗೀತಗಳ ವೈಭವದಿಂದ ಕೂಡಿದ, ಬಹಳವಾದ ಅನ್ನದಾನ ಮತ್ತು ದಕ್ಷಿಣೆಗಳಿಂದ ಕೂಡಿದ ದಾನ ಮಹೋತ್ಸವವನ್ನು ನಡೆಸಿದನು.

ದಶಾಹಮೇವಂ ದಾನಾನಿ ದತ್ತ್ವಾ ರಾಜಾऽಂಬಿಕಾಸುತಃ ।
ಬಭೂವ ಪುತ್ರಪೌತ್ರಾಣಾಮಾನೃಣ್ಯೋ ಭರತರ್ಷಭ ॥೨೦॥

ಹೇ ಭರತರ್ಷಭ ಜನಮೇಜಯನೇ, ಅಂಬಿಕಾಸುತನಾದ ಧೃತರಾಷ್ಟ್ರರಾಜನು ಹೀಗೆ ಹತ್ತು ದಿನಗಳ ಕಾಲ ದಾನಗಳನ್ನು ಮಾಡಿ ತನ್ನ ಪುತ್ರ ಹಾಗೂ ಪೌತ್ರರ ಋಣದಿಂದ ಮುಕ್ತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರೇಣ ಭೀಷ್ಮಾದೀನಾಂ ಶ್ರಾದ್ಧದಾನಕಥನಂ ನಾಮ ಏಕೋನವಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ಸರ್ವಂ ಸಮರ್ಪ್ಯ ಗೋವಿಂದೇ ಪಾರ್ಥೇಭ್ಯೋಽನ್ಯೇಭ್ಯ ಏವ ಚ ।
ಸ್ವಜನೇಭ್ಯಃ ಸಮಾದಾಯ ಸ್ರವನ್ನೇತ್ರೇಭ್ಯ ಉಚ್ಚಧೀಃ ॥

ಅನುಜ್ಞಾಂ ನಿರ್ಗತಃ ಪ್ರಾಹ ಪೌರಜಾನಪದಾನ್ ನೃಪಃ ।
ಧರ್ಮತೋ ರಕ್ಷಿತಾ ಯೂಯಮಸ್ಮತ್ಪೂರ್ವೈರ್ಮಹಾತ್ಮಭಿಃ ॥

ನ ಚಾಹಂ ಪರಮಸ್ನೇಹಾದ್ ಯುಷ್ಮಾಭಿಃ ಸುಕೃಪಾಲುಭಿಃ ।
ಅರಕ್ಷಿತೇತಿ ಕಥಿತಃ ಪ್ರಮಾದಾದಪಿ ಸಜ್ಜನಾಃ ॥

ಉತ್ತಮ ಬುದ್ಧಿಯುಳ್ಳ ಧೃತರಾಷ್ಟ್ರ ಎಲ್ಲ ಕರ್ಮವನ್ನೂ ಶ್ರೀಹರಿಗೆ ಸಮರ್ಪಿಸಿ, ಕಣ್ಣೀರು ಸುರಿಸಿದ ಪಾಂಡವರಿಂದಲೂ ಬೇರೆ ಬಂಧುಗಳಿಂದಲೂ ಒಪ್ಪಿಗೆ ಪಡೆದು ಕಾಡಿಗೆ ಹೊರಟು ಪೌರರಿಗೂ ಗ್ರಾಮೀಣ ಜನರಿಗೂ ಹೇಳಿದ: 'ಸಜ್ಜನರೇ! ಮಹಾತ್ಮರಾದ ನಮ್ಮ ಪೂರ್ವಿಕರು ನಿಮ್ಮನ್ನು ಧರ್ಮದಿಂದ ಕಾಪಾಡಿದರು. ನಾನು ಹಾಗೆ ಮಾಡಲಿಲ್ಲ. ಆದರೂ ಬಹಳ ಕೃಪಾಳುಗಳಾದ ನೀವು ಬಹಳ ಪ್ರೀತಿ ಇದ್ದ ಕಾರಣ, ತಪ್ಪಿಯೂ ಕೂಡ ನನ್ನನ್ನು ನಿಮ್ಮ ರಕ್ಷಕನಲ್ಲವೆಂದು ಹೇಳಲಿಲ್ಲ.

ಇಷ್ಟಂ ಚ ಯಜ್ಞೈಃ ಪೂರ್ತೈಶ್ಚ ಚರಿತಂ ಯುಷ್ಮದಾಶ್ರಯಾತ್ ।
ಪುತ್ರಸ್ತು ಮಮ ಪಾಪಾತ್ಮಾ ಸರ್ವಕ್ಷತ್ರವಿನಾಶಕಃ ॥

ಸರ್ವಾತಿಶಂಕೀ ಮೂಢಶ್ಚ ವೃದ್ಧಾನಾಂ ಶಾಸನಾತಿಗಃ ।
ಸೌಭ್ರಾತ್ರಂ ಯೇನ ಸಂತ್ಯಜ್ಯ ಪಾಂಡವೇಷು ಮಹಾತ್ಮಸು ।
ಕೃತಂ ವಿರೂಪಂ ಸುಮಹತ್ ಕುರ್ಯಾದ್ ಯನ್ನಾಪರಃ ಕ್ವಚಿತ್ ॥

ನಿಮ್ಮ ಆಶ್ರಯದಿಂದ ನಾನು ಯಾಗಗಳನ್ನು ನಡೆಸಿದೆ. ಜಲಾಶಯಾದಿಗಳನ್ನು ನಿರ್ಮಿಸಿದೆ. ನನ್ನ ಮಗನು ಮಾತ್ರ ಪಾಪಾತ್ಮ, ಸಕಲ ಕ್ಷತ್ರಿಯರ ನಾಶಕ್ಕೆ ಕಾರಣನಾದ. ಎಲ್ಲರಲ್ಲಿಯೂ ಸಂದೇಹಪಡುವವನು, ಮೂಢ, ಹಿರಿಯರ ಮಾತನ್ನು ಉಲ್ಲಂಘಿಸುವವನು, ಅವನು ಮಹಾತ್ಮರಾದ ಪಾಂಡವರಲ್ಲಿ ಪ್ರೀತಿ ಮಾಡದೆ ಇನ್ನಾರೂ ಎಲ್ಲಿಯೂ ಮಾಡದಿದ್ದಂಥ ಮಹಾದ್ವೇಷವನ್ನೇ ಮಾಡಿದನು.

ಅಪ್ರಿಯಾಣಿ ಚ ಕೃಷ್ಣಸ್ಯ ಸುಬಹೂನ್ಯಾಚರತ್ ಕುಧೀಃ ।
ಪ್ರಾಯಸ್ತೇನಾಪಿ ಮಂದೇನ ನ ಯುಷ್ಮಾಸ್ವಶಿವಂ ಕೃತಮ್ ॥

ಭ್ರಾತರೋಽಸ್ಯ ಚ ಸರ್ವೇಽಪಿ ತಚ್ಛೀಲಮನುವರ್ತಿನಃ ।
ಹತಾಶ್ಚ ಸ್ವೇನ ಪಾಪೇನ ಸಸುತಾಮಾತ್ಯಬಾಂಧವಾಃ ॥

ದುರ್ಬುದ್ಧಿಯಾದ ನನ್ನ ಮಗ, ಕೃಷ್ಣನಿಗೆ ಅಪ್ರಿಯವಾದ ಬಹಳ ದುಷ್ಕರ್ಮಗಳನ್ನು ನಡೆಸಿದ. ಮೂರ್ಖನಾದ ಅವನು ನಿಮ್ಮಲ್ಲಿಯೂ ಬಹಳ ಕೆಟ್ಟದ್ದನ್ನು ಮಾಡಿರುತ್ತಾನೆ. ಅವನ ಸೋದರರು ಎಲ್ಲರೂ ಅವನ ಶೀಲವನ್ನೇ ಅನುಸರಿಸಿದವರು. ತಮ್ಮ ಪಾಪದಿಂದ ಮಕ್ಕಳು ಮಿತ್ರರು ಬಾಂಧವರೊಂದಿಗೆ ಹತರಾದರು.

ಸೋಽಹಂ ವಯೋಗತಶ್ಚೈವ ಪುತ್ರಾದಿಭಿರಭಿಪ್ಲುತಃ ॥

ತತ್ಸಂಬಂಧಕೃತಂ ಪಾಪಂ ಸ್ವಕೃತಂ ಚಾಪ್ಯಪೇಶಲಮ್ ।
ಪಾಂಡವೇಷು ಸಕೃಷ್ಣೇಷು ತಪಸಾ ಮಾರ್ಷ್ಟುಮುದ್ಯತಃ ॥

ನಾನು ವೃದ್ಧನಾಗಿದ್ದೇನೆ. ಪುತ್ರರು ಉಂಟು ಮಾಡಿದ ಮನೋವ್ಯಥೆಗಳಿಂದ ಪೀಡೆಗೊಳಗಾಗಿದ್ದೇನೆ. ಅವರ ಸಂಸರ್ಗದಿಂದ ನಾನು ಪಾಂಡವರಲ್ಲಿಯೂ ಕೃಷ್ಣನಲ್ಲಿಯೂ ಮಾಡಿದ ಪಾಪಕರ್ಮ ಕ್ರೂರವಾದುದು. ತಪಸ್ಸಿನಿಂದ ಆ ಪಾಪಕರ್ಮವನ್ನು ತೊಳೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ.

ತತ್ರ ಮಾಮನುಜಾನೀಧ್ವಂ ಕೃಪಯಾ ಮಿತ್ರವತ್ಸಲಾಃ ।
ಮತ್ಪ್ರಿಯಾರ್ಥಮಪಿ ಸ್ನೇಹಃ ಪಾಂಡವೇಷು ಮಹಾತ್ಮಸು ।
ಕ್ರಿಯಮಾಣೋಽಪಿ ಕರ್ತವ್ಯೋ ಭೂಯ ಏವ ಸದಾಽಚಲಃ ॥

ಮಿತ್ರರಲ್ಲಿ ಪ್ರೀತಿಯುಳ್ಳ ನೀವು ಕೃಪೆಯಿಂದ ನನಗೆ ಅನುಮತಿ ನೀಡಿರಿ. ನೀವು ಮಹಾತ್ಮರಾದ ಪಾಂಡವರಲ್ಲಿ ಪ್ರೀತಿ ಮಾಡುತ್ತಲೇ ಇರುವಿರಿ. ನನ್ನ ಸಂತೋಷಕ್ಕಾಗಿ ಅದನ್ನು ಇನ್ನೂ ಹೆಚ್ಚಾಗಿ ಸದಾ ಅಚಲವಾಗಿ ಮಾಡುತ್ತಿರಬೇಕು.

ತೇ ಹಿ ಮೇ ಪುತ್ರಕಾಃ ಸಂತ ಇಹಾಮುತ್ರ ಚ ಸೌಖ್ಯದಾಃ ।
ಇತ್ಯುಕ್ತೇ ಸ್ವಗುಣಾನುಚ್ಚೈಃ ಕೀರ್ತಯದ್ಭಿಃ ಸುದುಃಖಿತೈಃ ॥

ಪರ್ಯಶ್ರುನಯನೈಃ ಕೃಚ್ಛ್ರಾತ್ ಪೌರಜಾನಪದೈಶ್ಚಿರಾತ್ ।
ಅನುಜ್ಞಾತೋ ಯಯೌ ಪಾರ್ಥೈರನುಯಾತಃ ಸುದೂರತಃ ॥

'ಏಕೆಂದರೆ ಅವರು ನನ್ನ ಒಳ್ಳೆಯ ಮಕ್ಕಳು. ಇಹದಲ್ಲಿಯೂ ಪರದಲ್ಲಿಯೂ ಸೌಖ್ಯ ನೀಡುವವರು'. ಧೃತರಾಷ್ಟ್ರ ಹೀಗೆ ಹೇಳಿದಾಗ ಪೌರರೂ ಗ್ರಾಮಸ್ಥರೂ ಕಣ್ಣೀರು ಸುರಿಸಿದರು. ಬಹಳ ದುಃಖಿಸಿದರು. ಧೃತರಾಷ್ಟ್ರನ ಗುಣಗಳನ್ನು ಗಟ್ಟಿಯಾಗಿ ಪ್ರಶಂಸೆ ಮಾಡಿದರು. ಬಹು ಹೊತ್ತಾದ ಬಳಿಕ ಕಷ್ಟದಿಂದ ವನಕ್ಕೆ ಹೋಗಲು ಅವರು ಅನುಮತಿ ನೀಡಿದಾಗ ಧೃತರಾಷ್ಟ್ರನಡೆದನು. ಬಲು ದೂರದವರೆಗೆ ಪಾಂಡವರು ಹಿಂಬಾಲಿಸಿದರು.

ಸಂಜಯೋ ವಿದುರಶ್ಚೈನಂ ಸಭಾರ್ಯಮನುಜಗ್ಮತುಃ ।
ಅನುವವ್ರಾಜ ತಂ ಕುಂತೀ ವನಾಯ ಕೃತನಿಶ್ಚಯಾ ॥

ಸಂಜಯನೂ, ವಿದುರನೂ, ಗಾಂಧಾರೀಸಮೇತನಾದ ಧೃತರಾಷ್ಟ್ರನನ್ನು ಹಿಂಬಾಲಿಸಿದರು. ಕುಂತಿಯೂ ವನವಾಸಕ್ಕೆ ನಿಶ್ಚಯ ಮಾಡಿ, ಧೃತರಾಷ್ಟ್ರನನ್ನು ಹಿಂಬಾಲಿಸಿದಳು.

ವಾರ್ಯಮಾಣಾಽಪಿ ತನಯೈಃ ಸಭಾರ್ಯೈರ್ಭೃಶದುಃಖಿತೈಃ ।
ಸಂಸ್ಥಾಪ್ಯ ತಾನ್ ಸುಕೃಚ್ಛ್ರೇಣ ಯಯೌ ಸಾಽನ್ವೇವ ತಂ ನೃಪಮ್ ॥

ಮಕ್ಕಳು ಪತ್ನೀಸಮೇತರಾಗಿ ಬಹಳ ದುಃಖಿತರಾಗಿ ಕುಂತಿಯನ್ನು ತಡೆದರೂ ಅವಳು ಅವರನ್ನು ಬಹಳ ಕಷ್ಟದಿಂದ ಹಿಂದೆ ನಿಲ್ಲಿಸಿ ಧೃತರಾಷ್ಟ್ರನನ್ನು ಹಿಂಬಾಲಿಸಿಯೇ ಹೋದಳು.

ಸಂದರ್ಶಿತಪಥೋ ರಾಜಾ ಕುಂತೀವಿದುರಸಂಜಯೈಃ ।
ಗಾಂಧಾರೀಸಹಿತಃ ಪ್ರಾಪ ಕುರುಕ್ಷೇತ್ರೇ ಜಗದ್ಗುರೋಃ ।
ಕ್ರಮೇಣೈವಾಶ್ರಮಂ ವ್ಯಾಸದೇವಸ್ಯ ಸುರಪೂಜಿತಮ್ ॥

ಗಾಂಧಾರೀಸಹಿತನಾದ ಧೃತರಾಷ್ಟ್ರನಿಗೆ ಕುಂತಿ ವಿದುರ ಸಂಜಯರು ದಾರಿ ತೋರಿದರು. ಅವನು ಕ್ರಮವಾಗಿ ಕುರುಕ್ಷೇತ್ರವನ್ನು ಸೇರಿದನು. ಜಗದ್ಗುರು ವೇದವ್ಯಾಸರ, ದೇವಪೂಜಿತವಾದ ಆಶ್ರಮವನ್ನು ಸೇರಿದರು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕುಂತಿಯ ಹೆಗಲ ಮೇಲೆ ಕೈಯನ್ನಿರಿಸಿದ ಗಾಂಧಾರೀ ದೇವಿಯ ಹೆಗಲನ್ನು ಆಧರಿಸಿರುವ ಧೃತರಾಷ್ಟ್ರನು, ಶೋಕಾವಿಷ್ಟರಾದ ಪೌರರು ಹಾಗೂ ಯುಧಿಷ್ಠಿರಾದಿಗಳ ಜೊತೆಗೆ ಕಾಡಿಗೆ ಹೊರಡುವುದು.

ವೈಶಂಪಾಯನಃ

ತತಃ ಪ್ರಭಾತೇ ರಾಜಾ ಸ ಧೃತರಾಷ್ಟ್ರೋಽಂಬಿಕಾಸುತಃ ।
ಆದಾಯ ಪಾಂಡವಾನ್ ವೀರಾನ್ ವನವಾಸೇ ಕೃತಕ್ಷಣಃ ॥೧॥

ಗಾಂಧಾರೀಸಹಿತೋ ಧೀಮಾನ್ ಅಭಿನಂದ್ಯ ಯಥಾವಿಧಿ ।
ಕಾರ್ತಿಕ್ಯಾಂ ಕಾರಯಿತ್ವೇಷ್ಟಿಂ ಬ್ರಾಹ್ಮಣೈರ್ವೇದಪಾರಗೈಃ ॥೨॥

ಅಗ್ನಿಹೋತ್ರಂ ಪುರಸ್ಕೃತ್ಯ ವಲ್ಕಲಾಜಿನಸಂವೃತಃ ।
ವಧೂಪರಿವೃತೋ ರಾಜಾ ನಿರ್ಯಯೌ ಭವನಾತ್ ತತಃ ॥೩॥

ವೈಶಂಪಾಯನ– ಅನಂತರ ಹನ್ನೊಂದನೆಯ ದಿನ ಪ್ರಾತಃಕಾಲದಲ್ಲಿ ಅಂಬಿಕಾ ಸುತನಾದ ಆ ಧೃತರಾಷ್ಟ್ರರಾಜನು ವನವಾಸಕ್ಕೆ ಸಿದ್ಧನಾಗಿ ವೀರರಾದ ಪಾಂಡವರನ್ನು ಕರೆಸಿ, ಗಾಂಧಾರಿಸಹಿತನಾಗಿ ಅವರನ್ನು ಯಥಾಯೋಗ್ಯವಾಗಿ ಅಭಿನಂದಿಸಿದನು. ಧೀಮಂತನಾದ ಅವನು ಕಾರ್ತೀಕ ಹುಣ್ಣಿಮೆಯಾದ ಅಂದು ವೇದಪಾರಗರಾದ ಬ್ರಾಹ್ಮಣರಿಂದ ಆ ಪ್ರಯಾಣಕಾಲಕ್ಕೆ ಯೋಗ್ಯವಾದ ಇಷ್ಟಿಯನ್ನು ಮಾಡಿಸಿ ಅಗ್ನಿಹೋತ್ರವನ್ನು ಮುಂದೆ ಮಾಡಿಕೊಂಡು ನಾರು ಮಡಿ ಹಾಗೂ ಕೃಷ್ಣಾಜಿನಗಳನ್ನು ತೊಟ್ಟು, ತನ್ನ ಸೊಸೆಯರಿಂದ ಕೂಡಿಕೊಂಡು ಆ ರಾಜಭವನದಿಂದ ಹೊರಟನು.

ತತಃ ಸ್ತ್ರಿಯಃ ಕೌರವಪಾಂಡವಾನಾಂ
ಯಾಶ್ಚಾಪ್ಯನ್ಯಾಃ ಕೌರವರಾಜವಂಶ್ಯಾಃ ।
ತಾಸಾಂ ನಾದಃ ಪ್ರಾದುರಾಸೀತ್ ತದಾನೀಂ
ವೈಚಿತ್ರವೀರ್ಯೇ ನೃಪತೌ ಪ್ರಯಾತೇ ॥೪॥

ಅನಂತರ ಕೌರವ ಹಾಗೂ ಪಾಂಡವರ ಸ್ತ್ರೀಯರು, ಅಲ್ಲದೇ ಕೌರವ ರಾಜವಂಶದಲ್ಲಿ ಬಂದ ಬೇರೆ ಯಾರೆಲ್ಲ ಸ್ತ್ರೀಯರಿರುವರೋ ಅವರೆಲ್ಲ ಅಲ್ಲಿ ನೆರೆದರು. ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರರಾಜನು ಹೊರಡುವ ಆ ಕಾಲದಲ್ಲಿ ಆ ಸ್ತ್ರೀಯರ ಆರ್ತನಾದವು ಕೇಳಿಬರತೊಡಗಿತು.

ತತೋ ಲಾಜೈಃ ಸುಮನೋಭಿಶ್ಚ ರಾಜಾ
ವಿಚಿತ್ರಾಭಿಸ್ತದ್ ಗೃಹಂ ಪೂಜಯಿತ್ವಾ ।
ಸಂಯೋಜ್ಯಾರ್ಥೈರ್ಭೃತ್ಯಜನಂ ಚ ಸರ್ವಂ
ಸಮುತ್ಸೃಜ್ಯ ಪ್ರಯಯೌ ಕೌರವೇಯಃ ॥೫॥

ಅನಂತರ ಕುರುವಂಶಜನಾದ ರಾಜನು ಅರಳು ಹಾಗೂ ವಿಚಿತ್ರವಾದ ಪುಷ್ಪಗಳಿಂದ ಆ ಮನೆಯನ್ನು ಪೂಜಿಸಿ, ಜೊತೆಗೆ ಪರಿಚಾರಕ ಜನರನ್ನು ಬಹುಮಾನದಿಂದ ಸಂತೋಷಪಡಿಸಿ ನಂತರ ಎಲ್ಲವನ್ನೂ ಬಿಟ್ಟು ಅಲ್ಲಿಂದ ನಡೆದನು.

ತತೋ ರಾಜಾ ಪ್ರಾಂಜಲಿರ್ವೇಪಮಾನೋ
ಯುಧಿಷ್ಠಿರಃ ಸಂಸ್ಮರನ್ ಬಾಷ್ಪಕಂಠಃ ।
ವಿನದ್ಯೋಚ್ಚೈರ್ಹಾ ಮಹಾರಾಜ ಸಾಧೋ
ಕ್ವ ಗಂತಾಸೀತ್ಯಪತತ್ ತತ್ರ ಭೂಮೌ ॥೬॥

ಆಗ ರಾಜನಾದ ಯುಧಿಷ್ಠಿರನು ಕೈಮುಗಿದುಕೊಂಡು, ನಡುಗುವ ಶರೀರವುಳ್ಳವನಾಗಿ, ಗಂಟಲು ತುಂಬಿ ಬಂದವನಾಗಿ, ರಾಜನ ಅಗಲಿಕೆಯನ್ನು ಸ್ಮರಿಸಿಕೊಳ್ಳುತ್ತಾ, 'ಮಹಾರಾಜನೇ, ಸತ್ಪುರುಷನೇ, ಹಾ! ಎಲ್ಲಿಗೆ ಹೋಗುತ್ತಿರುವಿ?' ಹೀಗೆ ಗಟ್ಟಿಯಾಗಿ ಹೇಳುತ್ತಾ ಭೂಮಿಯಲ್ಲಿ ಬಿದ್ದನು.

ತತೋಽರ್ಜುನಸ್ತೀವ್ರದುಃಖಾಭಿತಪ್ತೋ
ಮುಹುರ್ಮುಹುರ್ನಿಃಶ್ವಸನ್ ಭಾರತಾಗ್ರ್ಯಃ ।
ಯುಧಿಷ್ಠಿರಂ ಮೈವಮಿತ್ಯೇವಮುಕ್ತ್ವಾ
ಪ್ರಗೃಹ್ಯಾಥೋ ದೀನತರೋ ಬಭೂವ ॥೭॥

ಅನಂತರ ಭಾರತಶ್ರೇಷ್ಠನಾದ ಅರ್ಜುನನು ತೀವ್ರವಾದ ದುಃಖದಿಂದ ಬೆಂದವನಾಗಿ, ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತಾ, ಯುಧಿಷ್ಠಿರನಿಗೆ ಹೀಗೆ ಬೀಳಬೇಡ ಎಂದೆನ್ನುತ್ತಾ ಅವನನ್ನು ಹಿಡಿದು ದೈನ್ಯತೆಯನ್ನು ಅನುಭವಿಸಿದನು.

ವೃಕೋದರಃ ಫಲ್ಗುನಶ್ಚೈವ ವೀರೌ
ಮಾದ್ರೀಪುತ್ರೌ ವಿದುರಃ ಸಂಜಯಶ್ಚ ।

ವೇಶ್ಯಾಪುತ್ರಃ ಸಹಿತೋ ಗೌತಮೇನ
ಧೌಮ್ಯೋ ವಿಪ್ರಾಶ್ಚಾನ್ವಯುರ್ಬಾಷ್ಪಕಂಠಾಃ ॥೮॥

ಭೀಮ, ಅರ್ಜುನ, ಅಲ್ಲದೇ ವೀರರಾದ ಮಾದ್ರೀಪುತ್ರರು, ವಿದುರ, ಸಂಜಯ, ವೇಶ್ಯಾಪುತ್ರನಾದ ಯುಯುತ್ಸು, ಗೌತಮರಿಂದ ಸಹಿತನಾದ ಧೌಮ್ಯ ಹಾಗೂ ಅನೇಕ ಬ್ರಾಹ್ಮಣರು ಬಾಷ್ಪಗದ್ಗದವಾದ ಕಂಠದಿಂದ ಕೂಡಿದವರಾಗಿ ಧೃತರಾಷ್ಟ್ರನನ್ನು ಹಿಂಬಾಲಿಸಿದರು.

ಕುಂತೀ ಗಾಂಧಾರೀಮನುಭರ್ತ್ಯ ವ್ರಜಂತೀಂ
ಸ್ಕಂಧಾಸಕ್ತಂ ಹಸ್ತಮಥೋದ್ವಹಂತೀ ।
ರಾಜಾ ಗಾಂಧಾರೀಸ್ಕಂಧದೇಶೇऽವಸಜ್ಯ
ಪಾಣಿಂ ಯಯೌ ಧೃತರಾಷ್ಟ್ರಃ ಪ್ರತೀತಃ ॥೯॥

ಕುಂತಿಯು ಭರ್ತ್ರನಿನ ಜೊತೆಗೆ ನಡೆದು ಹೋಗುತ್ತಿರುವ ತನ್ನ ಹೆಗಲ ಮೇಲೆ ಕೈಯನ್ನಿಟ್ಟಿರುವ ಗಾಂಧಾರೀ ದೇವಿಯನ್ನು ಅನುಸರಿಸಿ, ಅವಳ ಕೈಯನ್ನು ಹೊತ್ತು ನಡೆದಳು. ರಾಜನಾದ ಧೃತರಾಷ್ಟ್ರನು ಆದರಪೂರ್ವಕವಾಗಿ ತನ್ನ ಕೈಯನ್ನು ಗಾಂಧಾರೀ ದೇವಿಯ ಹೆಗಲಿನಲ್ಲಿ ಆಧರಿಸಿ ನಡೆದನು.

ತಥಾ ಕೃಷ್ಣಾ ದ್ರೌಪದೀ ಯಾದವೀ ಚ
ಬಾಲಾಪತ್ಯಾ ಚೋತ್ತರಾ ಕೌರವೀ ಚ ।
ಚಿತ್ರಾಂಗದಾ ಯಾಶ್ಚ ಕಾಶ್ಚಿತ್ ಕುರೂಣಾಂ
ಸಾರ್ಧಂ ರಾಜ್ಞಾ ಪ್ರಸ್ಥಿತಾಸ್ತಾ ವಧೂಭಿಃ ॥೧೦॥

ಹಾಗೆಯೇ ಕೃಷ್ಣಾ ಎನಿಸಿದ ದ್ರೌಪದೀ ದೇವಿಯೂ, ಯಾದವಿಯಾದ ಸುಭದ್ರೆಯೂ, ಸಣ್ಣ ಮಗುವನ್ನೆತ್ತಿಕೊಂಡ ಕೌರವಿಯಾದ ಉತ್ತರೆಯೂ, ಚಿತ್ರಾಂಗದೆಯೂ ಮತ್ತು ಕುರುವಂಶಜರ ಯಾರೆಲ್ಲ ಸ್ತ್ರೀಯರಿದ್ದರೋ ಅವರೆಲ್ಲರೂ ರಾಜನೊಂದಿಗೆ ತಮ್ಮ ಸೊಸೆಯಂದಿರನ್ನು ಕೂಡಿಕೊಂಡು ಹಿಂಬಾಲಿಸಿ ಹೊರಟರು.

ತಾಸಾಂ ನಾದೋ ರುದತೀನಾಂ ತದಾऽऽಸೀದ್
ರಾಜನ್ ದುಃಖಾತ್ ಕುರರೀಣಾಮಿವೋಚ್ಚೈಃ ।
ತತೋ ನಿಷ್ಪೇತುರ್ಬ್ರಾಹ್ಮಣಕ್ಷತ್ರಿಯಾಣಾಂ
ವಿಟ್‌ಶೂದ್ರಾಣಾಂ ಚೈವ ನಾರ್ಯಃ ಸಮಂತಾತ್ ॥೧೧॥

ಹೇ ರಾಜನೇ, ಆ ಕಾಲದಲ್ಲಿ ಗಟ್ಟಿಯಾಗಿ ಅಳುತ್ತಿರುವ ಅವರ ಸ್ವರವು ದುಃಖದಿಂದ ಬೊಬ್ಬಿಡುವ ಹೆಣ್ಣುಜಿಂಕೆಗಳ ಸ್ವರದಂತೆ ಕೇಳಿಬರುತ್ತಿತ್ತು. ಆ ಸ್ವರವನ್ನು ಕೇಳಿ ಸುತ್ತಮುತ್ತಲೂ ಎಲ್ಲ ಕಡೆಯಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಜಾತಿಯ ಅನೇಕ ಸ್ತ್ರೀಯರು ಅಲ್ಲಿ ನೆರೆದರು.

ತನ್ನಿರ್ಯಾಣೇ ದುಃಖಿತಃ ಪೌರವರ್ಗೋ
ಗಜಾಹ್ವಯೇಽತೀವ ಬಭೂವ ರಾಜನ್ ।
ಯಥಾಪೂರ್ವಂ ಗಚ್ಛತಾಂ ಪಾಂಡವಾನಾಂ
ದ್ಯೂತೇ ರಾಜನ್ ಕೌರವಾಣಾಂ ಸಭಾಯಾಮ್ ॥೧೨॥

ಹೇ ರಾಜನೇ, ಧೃತರಾಷ್ಟ್ರನು ಹೊರಡುವ ಸಮಯದಲ್ಲಿ ಹಸ್ತಿನಾಪುರದಲ್ಲಿದ್ದ ಪೌರವರ್ಗವು ಹಿಂದೆ ಪಾಂಡವರು ದ್ಯೂತದಲ್ಲಿ ಸೋತು, ಕೌರವರ ಸಭೆಯಿಂದ ಕಾಡಿಗೆ ಹೊರಡುವಾಗ ಹೇಗೋ ಹಾಗೆ ಬಹಳ ದುಃಖಿತವಾಯಿತು.

ಯಾ ನಾಪಶ್ಯಚ್ಚಂದ್ರಮಾ ನೈವ ಸೂರ್ಯೋ
ರಾಮಾಃ ಕಾಶ್ಚಿತ್ ತಾಸ್ತು ತಸ್ಮಿನ್ ನರೇಂದ್ರೇ ।
ಮಹಾವನಂ ಗಚ್ಛತಿ ಕೌರವೇಂದ್ರೇ
ಶೋಕೇನಾರ್ತಾ ರಾಜಮಾರ್ಗಂ ಪ್ರಪೇದುಃ ॥೧೩॥

ಯಾವ ಸ್ತ್ರೀಯರನ್ನು ಚಂದ್ರನಾಗಲೀ, ಸೂರ್ಯನಾಗಲೀ ಈ ಹಿಂದೆ ನೋಡಿರಲಿಲ್ಲವೋ ಅಂತಹ ಸ್ತ್ರೀಯರೂ ಕೂಡ ಕೌರವೇಂದ್ರನಾದ ಆ ರಾಜ ಧೃತರಾಷ್ಟ್ರನು ಮಹಾವನಕ್ಕೆ ಹೊರಟು ನಿಂತಾಗ ಶೋಕಾರ್ತರಾಗಿ ರಾಜಬೀದಿಯಲ್ಲಿ ಸೇರಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರವನಪ್ರಸ್ಥಾನಂ ನಾಮ ವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಧೃತರಾಷ್ಟ್ರನು ಕಾಡಿಗೆ ಹೊರಟು ನಿಂತಾಗ ವಿದುರ ಹಾಗೂ ಸಂಜಯರೂ ವನವಾಸಕ್ಕಾಗಿ ಅವನೊಂದಿಗೆ ಹೊರಡುವುದು. ಹಾಗೆಯೇ ಯುಧಿಷ್ಠಿರಾದಿಗಳು ಬಹುರೀತಿಯಿಂದ ಪ್ರಾರ್ಥಿಸಿ ತಡೆಯುತ್ತಿದ್ದರೂ ಅವರನ್ನು ಸಮಾಧಾನಗೊಳಿಸಿ ಕುಂತಿಯೂ ಗಾಂಧಾರಿಯೊಂದಿಗೆ ಕಾಡಿಗೆ ಹೊರಡುವುದು.

ವೈಶಂಪಾಯನಃ

ತತಃ ಪ್ರಾಸಾದಹರ್ಮ್ಯೇಷು ವಸುಧಾಯಾಂ ಚ ಪಾರ್ಥಿವ ।
ಸ್ತ್ರೀಣಾಂ ಚ ಪುರುಷಾಣಾಂ ಚ ಸುಮಹಾನ್ ನಿಃಸ್ವನೋಽಭವತ್ ॥೧॥

ವೈಶಂಪಾಯನ– ಹೇ ಪಾರ್ಥಿವನೇ, ಅನಂತರ ಅರಮನೆ ಮತ್ತು ಧನಿಕರ ಮನೆಗಳ ಉಪ್ಪರಿಗೆಗಳಲ್ಲಿ ಹಾಗೂ ನೆಲದ ಮೇಲೂ ಸೇರಿದ ಅನೇಕ ಮಂದಿ ಸ್ತ್ರೀಯರ ಹಾಗೂ ಪುರುಷರ ಬಹಳವಾದ ರೋದನದ ಶಬ್ದವು ಕೇಳತೊಡಗಿತು.

ಸ ರಾಜಾ ರಾಜಮಾರ್ಗೇಣ ನೃನಾರೀಸಂಕುಲೇನ ಚ ।
ಕಥಂಚಿನ್ನಿರ್ಯಯೌ ಧೀಮಾನ್ ವೇಪಮಾನಃ ಕೃತಾಂಜಲಿಃ ॥೨॥

ಧೀಮಂತನಾದ ಆ ರಾಜನು ಪುರುಷರು ಹಾಗೂ ಸ್ತ್ರೀಯರಿಂದ ನಿಬಿಡವಾಗಿದ್ದ ರಾಜಮಾರ್ಗದಲ್ಲಿ ಕೈಮುಗಿದುಕೊಂಡು ನಡುಗುತ್ತಾ ಕಷ್ಟದಿಂದ ಮುಂದೆ ಸಾಗಿದನು.

ಸ ವರ್ಧಮಾನದ್ವಾರೇಣ ನಿರ್ಯಯೌ ಗಜಸಾಹ್ವಯಾತ್ ।
ವಿಸರ್ಜಯಾಮಾಸ ತದಾ ತಂ ಜನೌಘಂ ಮುಹುರ್ಮುಹುಃ ॥೩॥

ಅವನು 'ವರ್ಧಮಾನ' ಎಂಬ ಹೆಸರುಳ್ಳ ಮುಖ್ಯದ್ವಾರದಿಂದ ಹಸ್ತಿನಪುರದಿಂದ ಹೊರ ಹೊರಟನು. ಆಗ ತನ್ನ ಹಿಂದೆ ಬರುತ್ತಿದ್ದ ಆ ಜನರ ಸಮೂಹವನ್ನು ಮತ್ತೆ ಮತ್ತೆ ಹಿಂದೆ ಕಳುಹಿಸಿದನು.

ರಾಜ್ಞಾ ಸಹ ವನಂ ಗಂತುಂ ವಿದುರೋ ಧೃತನಿಶ್ಚಯಃ ।
ಸಂಜಯಶ್ಚ ಮಹಾಮಾತ್ಯಃ ಸೂತೋ ಗಾವಲ್ಗಣಿಸ್ತಥಾ ॥೪॥

ರಾಜನ ಜೊತೆಗೆ ಕಾಡಿಗೆ ಹೋಗಲು ವಿದುರನು ದೃಢವಾಗಿ ನಿಶ್ಚಯಿಸಿದ್ದನು. ಹಾಗೆಯೇ ಗಾವಲ್ಗಣನ ಮಗನಾದ, ಮಹಾಮಂತ್ರಿಯೂ, ಶೂರನೂ ಆಗಿದ್ದ ಸಂಜಯನೂ ಕೂಡ ನಿಶ್ಚಯಿಸಿದ್ದನು.

ಕೃಪಂ ನಿವರ್ತಯಾಮಾಸ ಯುಯುತ್ಸುಂ ಚ ಮಹಾರಥಮ್ ।
ಧೃತರಾಷ್ಟ್ರೋ ಮಹಾರಾಜ ಕುಂತೀಪುತ್ರಂ ಯುಧಿಷ್ಠಿರಮ್ ॥೫॥

ಹೇ ಮಹಾರಾಜನೇ, ಧೃತರಾಷ್ಟ್ರನು ಕೃಪನನ್ನೂ, ಮಹಾರಥನಾದ ಯುಯುತ್ಸುವನ್ನೂ, ಕುಂತೀಪುತ್ರನಾದ ಯುಧಿಷ್ಠಿರನನ್ನೂ ಮುಂದಕ್ಕೆ ಬರದಂತೆ ತಡೆದು ಹಿಂದೆ ಕಳುಹಿಸಿದನು.

ನಿವೃತ್ತೇ ಪೌರವರ್ಗೇ ತು ರಾಜಾ ಸಾಂತಃಪುರಸ್ತದಾ ।
ಧೃತರಾಷ್ಟ್ರಾಭ್ಯನುಜ್ಞಾತೋ ನಿವರ್ತಿತುಮಿಯೇಷ ಸಃ ॥೬॥

ಸೋಽಬ್ರವೀನ್ಮಾತರಂ ಕುಂತೀಮುಪೇತ್ಯ ಭರತರ್ಷಭ ॥೭॥

ಹೇ ಭರತರ್ಷಭನೇ, ಪೌರವರ್ಗವು ಹಿಂದಿರುಗಿದ ನಂತರ ಅಂತಃಪುರದ ಜನರೊಂದಿಗೆ ಕೂಡಿಕೊಂಡು ರಾಜನಾದ ಯುಧಿಷ್ಠಿರನು ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದುಕೊಂಡು ಹಿಂದಿರುಗಬಯಸಿದನು. ಅನಂತರ ತನ್ನ ತಾಯಿಯಾದ ಕುಂತಿಯ ಬಳಿ ಸಾಗಿ ಹೀಗೆ ಹೇಳಿದನು.

ಯುಧಿಷ್ಠಿರಃ

ಅಹಂ ರಾಜಾನಮನ್ವಿಷ್ಯೇ ಭವತೀ ನಿವರ್ತತಾಮ್ ।
ವಧೂಪರಿವೃತಾ ರಾಜ್ಞಿ ನಗರಂ ಗಂತುಮರ್ಹಸಿ ॥೮॥

ರಾಜಾ ಯಾತ್ವೇಷ ಧರ್ಮಾತ್ಮಾ ತಪಸೇ ಧೃತನಿಶ್ಚಯಃ ॥೯॥

ಯುಧಿಷ್ಠಿರ– ಹೇ ರಾಜಮಾತೆಯೇ, ನಾನು ರಾಜನನ್ನು ಇನ್ನೂ ಸ್ವಲ್ಪ ದೂರ ಅನುಸರಿಸಿ ಹೋಗುತ್ತೇನೆ. ನೀನು ಸೊಸೆಯರೊಂದಿಗೆ ಕೂಡಿಕೊಂಡು ಹಿಂದಿರುಗಿ ನಗರಕ್ಕೆ ಹೋಗುವುದೇ ಉಚಿತವಾಗಿದೆ. ಧರ್ಮಾತ್ಮನಾದ ತಪಸ್ಸಿಗಾಗಿ ದೃಢನಿಶ್ಚಯವನ್ನು ಕೈಗೊಂಡ ಈ ರಾಜನು ಮುಂದುವರೆಯಲಿ.

ವೈಶಂಪಾಯನಃ

ಇತ್ಯುಕ್ತಾ ಧರ್ಮರಾಜೇನ ಬಾಷ್ಪವ್ಯಾಕುಲಲೋಚನಾ ।
ಜಗಾದೈವಂ ತದಾ ಕುಂತೀ ಗಾಂಧಾರೀಂ ಪರಿಗೃಹ್ಯ ಹ ॥೧೦॥

ವೈಶಂಪಾಯನ– ಹೀಗೆ ಧರ್ಮರಾಜನು ಹೇಳಿದಾಗ, ಕಣ್ಣೀರಿನಿಂದ ತೊಯ್ದ ಕಣ್ಣುಗಳುಳ್ಳ ಕುಂತಿಯು ಗಾಂಧಾರಿಯನ್ನು ಹಿಡಿದುಕೊಂಡು ಈ ರೀತಿಯಾಗಿ ಹೇಳಿದಳು.

ಕುಂತೀ

ಸಹದೇವೇ ಮಹಾರಾಜ ಮಾ ಪ್ರಮಾದಂ ಕೃಥಾಃ ಕ್ವಚಿತ್ ।
ಏಷ ಮಾಮನುರಕ್ತೋ ಹಿ ರಾಜಂಸ್ತ್ವಾಂ ಚೈವ ಸರ್ವದಾ ॥೧೧॥

ಕುಂತೀ– ಹೇ ಮಹಾರಾಜನೇ, ಸಹದೇವನ ವಿಷಯದಲ್ಲಿ ಯಾವತ್ತೂ ಪ್ರಮಾದವೆಸಗಬೇಡ. ಈತನು ಸದಾ ನನ್ನ ಬಗ್ಗೆ ಪ್ರೀತಿಯುಳ್ಳವನಾಗಿದ್ದಾನೆ ಹಾಗೂ ಸದಾ ನಿನ್ನನ್ನೂ ಪ್ರೀತಿಸುವವನಾಗಿದ್ದಾನೆ.

ಕರ್ಣಂ ಸ್ಮರೇಥಾಃ ಸತತಂ ಸಂಗ್ರಾಮೇಷ್ವಪಲಾಯಿನಮ್ ।
ಅವಕೀರ್ಣೋ ಹಿ ಸ ಮಯಾ ವೀರೋ ದುಷ್ಪ್ರಜ್ಞಯಾ ತದಾ ॥೧೨॥

ಯಾವಾಗಲೂ ಯುದ್ಧದಲ್ಲಿ ಓಡಿ ಹೋಗದೆ ಹೋರಾಡಿದ ಕರ್ಣನನ್ನು ಸ್ಮರಿಸುತ್ತಿರು. ಆ ವೀರನಾದ ಕರ್ಣನು ಪ್ರಸವಕಾಲದಲ್ಲಿ ಕೆಟ್ಟ ಬುದ್ಧಿಯುಳ್ಳ ನನ್ನಿಂದ ಪರಿತ್ಯಕ್ತನಾಗಿದ್ದಾನೆ.

ಆಯಸಂ ಹೃದಯಂ ನೂನಂ ಮಂದಾಯಾ ಮಮ ಪುತ್ರಕ ।
ಯತ್ ಸೂರ್ಯಜಮಪಶ್ಯಂತ್ಯಾಃ ಶತಶೋ ಯನ್ನ ದೀರ್ಯತೇ ॥೧೩॥

ಹೇ ಮಗು, ಸೂರ್ಯಜನಾದ ಕರ್ಣನನ್ನು ನೋಡದೆಯೂ (ಅವನು ಯುದ್ಧದಲ್ಲಿ ಮಡಿದಿರುವನೆಂದು ತಿಳಿದೂ ಕೂಡ) ಹತಭಾಗ್ಯಳಾದ ನನ್ನ ಹೃದಯವು ನೂರಾಗಿ ಸೀಳುವುದಿಲ್ಲವಾದರೆ ಅದು ನಿಜಕ್ಕೂ ಉಕ್ಕಿನದೇ ಇರಬೇಕು.

ಏವಂ ಕೃತೇ ತು ಕಿಂ ಶಕ್ಯಂ ಮಯಾ ಕರ್ತುಮರಿಂದಮ ।
ಮಮ ದೋಷೋऽಯಮತ್ಯರ್ಥಂ ಖ್ಯಾಪಿತೋ ಯನ್ನ ಸೂರ್ಯಜಃ ॥

ಹೇ ಶತ್ರುನಾಶಕನೇ, ಹೀಗೆ ಎಲ್ಲ ಮುಗಿದ ಮೇಲೆ ನಾನೇನು ಮಾಡಲು ಸಾಧ್ಯ ? ಮೊದಲೇ ಸೂರ್ಯಜನಾದ ಕರ್ಣನನ್ನು ನಿಮಗೆ ಅಣ್ಣನನ್ನಾಗಿ ತಿಳಿಸದಿರುವುದು ನನ್ನದೇ ದೊಡ್ಡ ದೋಷವಾಗಿದೆ.

ತನ್ನಿಮಿತ್ತಂ ಮಹಾಬಾಹೋ ದಾನಂ ದದ್ಯಾಸ್ತ್ವಮುತ್ತಮಮ್ ।
ಸದೈವ ಭ್ರಾತೃಭಿಃ ಸಾರ್ಧಮಗ್ರಜಸ್ಯಾರಿಮರ್ದನ ॥೧೫॥

ಹೇ ಮಹಾಬಾಹುವೇ, ಅರಿಮರ್ದನನೇ, ನೀನು ಯಾವಾಗಲೂ ಸಹೋದರರೊಂದಿಗೆ ಸೇರಿಕೊಂಡು ಹಿರಿಯಣ್ಣನಾದ ಅವನನ್ನು ನಿಮಿತ್ತ ಮಾಡಿಕೊಂಡು ಉತ್ತಮವಾದ ದಾನಗಳನ್ನು ಮಾಡಬೇಕು.

ದ್ರೌಪದ್ಯಾಶ್ಚ ಪ್ರಿಯೇ ನಿತ್ಯಂ ಸ್ಥಾತವ್ಯಮರಿಕರ್ಶನ ॥೧೬॥

ಹೇ ಶತ್ರುಕರ್ಶನನೇ, ಯಾವಾಗಲೂ ದ್ರೌಪದಿಗೆ ಪ್ರಿಯವಾಗುವಂತೆಯೇ ನೀನು ಇರಬೇಕು.

ಭೀಮಸೇನಾರ್ಜುನೌ ಚೈವ ನಕುಲಶ್ಚ ಕುರೂದ್ವಹ ।
ಸಮಾಧೇಯಾಸ್ತ್ವಯಾ ಧೀಮನ್ ತ್ವಂ ಹ್ಯೇವ ಕುಲಧೂರ್ಗತಃ ॥೧೭॥

ಹೇ ಕುರೂದ್ವಹನೇ, ಧೀಮಂತನೇ, ಭೀಮಸೇನ ಮತ್ತು ಅರ್ಜುನರು, ಜೊತೆಗೆ ನಕುಲನು ಇವರೆಲ್ಲರೂ ನಿನ್ನಿಂದಲೇ ಪಾಲಿಸಲ್ಪಡಬೇಕು. ಏಕೆಂದರೆ ನೀನೇ ಕುಲಕ್ಕೆ ಅಗ್ರಗಣ್ಯನಾಗಿರುವಿ.

ಶ್ವಶ್ರ್ವಾಶ್ವಶುರಯೋಃ ಪಾದೌ ಶುಶ್ರೂಷಂತೀ ವನೇ ತ್ವಹಮ್ ।
ಗಾಂಧಾರೀಸಹಿತಾ ವತ್ಸ್ಯೇ ತಾಪಸೀ ಮಲಪಂಕಿನೀ ॥೧೮॥

ನಾನಾದರೂ ಅತ್ತೆ-ಮಾವಂದಿರ ಸ್ಥಾನದಲ್ಲಿರುವ ಗಾಂಧಾರಿ ಹಾಗೂ ಧೃತರಾಷ್ಟ್ರರ ಪಾದಗಳನ್ನು ಸೇವಿಸುತ್ತಾ, ಕಾಡಿನಲ್ಲಿ ಕೊಳಕು ಬಟ್ಟೆಗಳನ್ನುಟ್ಟ ತಾಪಸಿಯಂತೆ ಗಾಂಧಾರಿಯ ಜೊತೆಗೆ ವಾಸ ಮಾಡುವೆನು.

ವೈಶಂಪಾಯನಃ

ಏವಮುಕ್ತಃ ಸ ಧರ್ಮಾತ್ಮಾ ಭ್ರಾತೃಭಿಃ ಸಹಿತೋ ವಶೀ ।
ವಿಷಾದಮಗಮತ್ ತೀವ್ರಂ ನ ಚ ಕಿಂಚಿದುವಾಚ ತಾಮ್ ॥೧೯॥

ವೈಶಂಪಾಯನ– ಹೀಗೆ ಕುಂತಿಯು ಹೇಳಿದಾಗ ಸಹೋದರರೊಂದಿಗೆ ಕೂಡಿದ, ಇಂದ್ರಿಯನಿಗ್ರಹವುಳ್ಳ, ಧರ್ಮಾತ್ಮನಾದ ಆ ಯುಧಿಷ್ಠಿರನು ತೀವ್ರವಾದ ವಿಷಾದವನ್ನು ಹೊಂದಿದನು ಹಾಗೂ ಕುಂತಿಗೆ ಏನನ್ನೂ ಹೇಳದೆ ಹಾಗೇ ನಿಂತನು.

ಸ ಮುಹೂರ್ತಮಿವ ಧ್ಯಾತ್ವಾ ಧರ್ಮರಾಜೋ ಯುಧಿಷ್ಠಿರಃ ।
ಉವಾಚ ಮಾತರಂ ದೀನಶ್ಚಿಂತಾಶೋಕಪರಾಯಣಃ ॥೨೦॥

ಧರ್ಮರಾಜನಾದ ಆ ಯುಧಿಷ್ಠಿರನು ಸ್ವಲ್ಪ ಹೊತ್ತು ಹಾಗೆ ಆಲೋಚಿಸಿ, ದೀನನಾಗಿ ಚಿಂತೆ ಹಾಗೂ ಶೋಕಗಳಿಂದ ಜರ್ಝರಿತನಾಗಿ, ತಾಯಿಯನ್ನು ಕುರಿತು ಹೀಗೆ ಹೇಳಿದನು.

ಯುಧಿಷ್ಠಿರಃ

ಕಿಮಿದಂ ತೇ ವ್ಯವಸಿತಂ ನೈವ ತ್ವಂ ವಕ್ತುಮರ್ಹಸಿ ।
ನ ತ್ವಾಮಭ್ಯನುಜಾನಾಮಿ ಪ್ರಸಾದಂ ಕರ್ತುಮರ್ಹಸಿ ॥೨೧॥

ಯುಧಿಷ್ಠಿರ– ಇದೇನು ನಿನ್ನ ನಿಶ್ಚಯ? ನೀನೇನೂ ಮಾತನಾಡಬೇಡ. ನಾನು ನಿನ್ನನ್ನು ಅನುಮತಿಸುವುದಿಲ್ಲ. ನಮ್ಮ ಬಗ್ಗೆ ನೀನು ಪ್ರಸನ್ನಳಾಗು.

ವ್ಯರೋಚಯಃ ಪುರಾಽಸ್ಮಾಕಮುತ್ಸಾಹಂ ಶುಭದರ್ಶನೇ ।
ವಿದುಲಾಯಾ ವಚೋಭಿಸ್ತ್ವಂ ನಾಸ್ಮಾನ್ ಸಂತ್ಯಕ್ತುಮರ್ಹಸಿ ॥೨೨॥

ಹೇ ಶುಭದರ್ಶನಳೇ, ಹಿಂದೆ ನೀನು ವಿದುಲೆಯ ಮಾತುಗಳನ್ನು ಉದಾಹರಿಸುವ ಮೂಲಕ ನಮ್ಮ ಉತ್ಸಾಹವನ್ನು ಉದ್ದೀಪನಗೊಳಿಸಿರುವಿ. ಅಂತಹ ನೀನು ನಮ್ಮನ್ನು ಬಿಟ್ಟು ಹೊರಡುವುದು ಸರಿಯಲ್ಲ.

ನಿಹತ್ಯ ಪೃಥಿವೀಪಾಲಾನ್ ರಾಜ್ಯಂ ಪ್ರಾಪ್ತಮಿದಂ ಮಯಾ ।
ತವ ಪ್ರಜ್ಞಾಮುಪಶ್ರುತ್ಯ ವಾಸುದೇವಾನ್ನರರ್ಷಭಾತ್ ॥೨೩॥

ನರಶ್ರೇಷ್ಠನಾದ ವಾಸುದೇವ ಕೃಷ್ಣನ ಮುಖಾಂತರ ನಿನ್ನ ಬುದ್ಧಿಮಾತುಗಳನ್ನು ಕೇಳಿ ರಾಜರನ್ನು ಯುದ್ಧದಲ್ಲಿ ಸಂಹರಿಸಿ ಈ ರಾಜ್ಯವು ನನ್ನಿಂದ ಪಡೆಯಲ್ಪಟ್ಟಿದೆ.

ಕ್ವ ಸಾ ಬುದ್ಧಿರಿಯಂ ಚಾದ್ಯ ಭವತ್ಯಾ ಯಾ ಶ್ರುತಾ ಮಯಾ ।
ಕ್ಷತ್ರಧರ್ಮೇ ಸ್ಥಿತಂ ತ್ಯಕ್ತ್ವಾ ನ ಪ್ರಯಾತುಮಿಹಾರ್ಹಸಿ ॥೨೪॥

ಅಂದು ನಮಗೆ ಕೃಷ್ಣನಿಂದ ತಿಳಿಹೇಳಿಸಿದ ನಿನ್ನ ಆ ಬುದ್ಧಿಯು ಇಂದು ಎಲ್ಲಿ ಹೋಯಿತು? ನೀನು ತಿಳಿಯಪಡಿಸಿದಂತೆ ಕ್ಷತ್ರಧರ್ಮದಲ್ಲಿ ನಿಂತಿರುವ ನನ್ನನ್ನು ಬಿಟ್ಟು ನೀನು ಹೊರಟು ಹೋಗುವುದು ಉಚಿತವಲ್ಲ.

ಅಸ್ಮಾನುತ್ಸೃಜ್ಯ ರಾಜ್ಯಂ ಚ ಸ್ನುಷಾಂ ಚೇಮಾಂ ಯಶಸ್ವಿನೀಮ್ ।
ಕಥಂ ವತ್ಸ್ಯಸಿ ಶೂನ್ಯೇಷು ವನೇಷ್ವಂಬ ಪ್ರಸೀದ ಮೇ ॥೨೫॥

ನಮ್ಮನ್ನು ಬಿಟ್ಟು, ರಾಜ್ಯವನ್ನೂ ಬಿಟ್ಟು, ಈ ನಿನ್ನ ಯಶಸ್ವಿನಿಯಾದ ಸೊಸೆಯನ್ನೂ ಬಿಟ್ಟು, ನಾವಾರೂ ಇಲ್ಲದ ಕಾಡಿನಲ್ಲಿ ಹೇಗೆ ವಾಸ ಮಾಡುವಿ? ಅಮ್ಮಾ! ಪ್ರಸನ್ನಳಾಗು.

ವೈಶಂಪಾಯನಃ

ಇತಿ ಬಾಷ್ಪಕಲಾ ವಾಚಃ ಕುಂತೀ ಪುತ್ರಸ್ಯ ಶೃಣ್ವತೀ ।
ಜಗಾಮೈವಾಶ್ರುಪೂರ್ಣಾಕ್ಷೀ ಭೀಮಸ್ತಾಮಿದಮಬ್ರವೀತ್ ॥೨೬॥

ವೈಶಂಪಾಯನ– ಹೀಗೆ ಮಗನ ಕಣ್ಣೀರಿನಿಂದ ತುಂಬಿದ ಮಾತುಗಳನ್ನು ಕೇಳುತ್ತಿದ್ದರೂ ಕುಂತೀದೇವಿಯು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಹೊರಟೇ ಬಿಟ್ಟಳು. ಆಗ ಭೀಮನು ಈ ಮಾತುಗಳನ್ನು ಹೇಳಿದನು.

ಭೀಮಃ

ಯದಾ ರಾಜ್ಯಮಿದಂ ಕುಂತೀ ಭೋಕ್ತವ್ಯಂ ಪುತ್ರಸಾದ್ಗತಮ್ ।
ಪ್ರಾಪ್ತವ್ಯಾ ದಾನಧರ್ಮಾಶ್ಚ ಯಥೇಯಂ ತೇ ಕುತೋ ಮತಿಃ ॥೨೭॥

ಭೀಮ– ಯಾವಾಗ ಕುಂತೀದೇವಿಯು ಮಕ್ಕಳ ಅಧೀನವಾಗಿರುವ ಈ ರಾಜ್ಯವನ್ನು ಅನುಭವಿಸಬೇಕೋ ಹಾಗೂ ದಾನ-ಧರ್ಮಗಳನ್ನು ಯಥೇಷ್ಟವಾಗಿ ನಡೆಸಬೇಕೋ, ಆ ಕಾಲಕ್ಕೆ ನಿನಗೆ ಈ ರೀತಿಯ ಬುದ್ಧಿಯು ಹೇಗೆ ಬಂದಿತು?

ಕಿಂ ವಯಂ ಕಾರಿತಾಃ ಪೂರ್ವಂ ಭವತ್ಯಾ ಪೃಥಿವೀಕ್ಷಯಮ್ ।
ಕಸ್ಯ ಹೇತೋಃ ಪರಿತ್ಯಜ್ಯ ರಾಜ್ಯಂ ಗಂತುಮಿಹಾರ್ಹಸಿ ॥೨೮॥

ಈ ಹಿಂದೆ ನಿನ್ನಿಂದಲೇ ನಾವು ಈ ಪೃಥಿವಿಯ ನಾಶವನ್ನು ಏತಕ್ಕಾಗಿ ನಡೆಸಿದೆವು? ಯಾವ ಕಾರಣಕ್ಕಾಗಿ ರಾಜ್ಯವನ್ನು ಬಿಟ್ಟು ನೀನು ಹೊರಡ ಬಯಸಿರುವಿ?

ವನಾತ್ ತಸ್ಮಾತ್ ಕಿಮಾನೀತಾ ಭವತ್ಯಾ ಬಾಲಕಾ ವಯಮ್ ।
ದುಃಖಶೋಕಸಮಾವಿಷ್ಟೌ ಮಾದ್ರೀಪುತ್ರಾವಿಮೌ ತದಾ ॥೨೯॥

ಬಾಲಕರಾದ ನಾವು ಕಾಡಿನಲ್ಲೇ ಬೆಳೆಯುತ್ತಿದ್ದೆವು. ನಮ್ಮನ್ನು ನೀನು ಕಾಡಿನಿಂದ ಏಕೆ ಕರೆದುಕೊಂಡು ಬಂದಿ? ಅಲ್ಲದೇ ದುಃಖ ಹಾಗೂ ಶೋಕಗಳಿಂದ ಕೂಡಿದ ಈ ಮಾದ್ರೀಪುತ್ರರನ್ನು ಏಕೆ ಕರೆತಂದಿ?'

ಪ್ರಸೀದ ಮಾತರ್ಮಾ ಗಾಸ್ತ್ವಂ ವನಮದ್ಯ ಯಶಸ್ವಿನಿ ।
ಶ್ರಿಯಂ ಯೌಧಿಷ್ಠಿರೀಂ ತಾವದ್ ಭುಂಕ್ಷ್ವ ಪಾರ್ಥಬಲಾರ್ಜಿತಾಮ್ ॥

ಯಶಸ್ವಿನಿಯಾದ ಹೇ ಅಮ್ಮಾ! ನೀನು ನಮ್ಮನ್ನು ಬಿಟ್ಟು ಇಂದು ಕಾಡಿಗೆ ಹೊರಡದಿರು. ನಮ್ಮಲ್ಲಿ ಪ್ರಸನ್ನಳಾಗು. ನಿನ್ನ ಮಕ್ಕಳ ಬಲದಿಂದಲೇ ಸಂಪಾದಿಸಲ್ಪಟ್ಟ ಈ ಯುಧಿಷ್ಠಿರನ ರಾಜ್ಯದ ಸಂಪತ್ತನ್ನು ಪೂರ್ಣವಾಗಿ ಅನುಭವಿಸು.

ವೈಶಂಪಾಯನಃ

ಇತಿ ಸಾ ನಿಶ್ಚಿತ್ಯೈವಾಥ ವನವಾಸಕೃತಕ್ಷಣಾ ।
ಲಾಲಪ್ಯತಾಂ ಬಹುವಿಧಂ ಪುತ್ರಾಣಾಂ ನಾಕರೋದ್ ವಚಃ ॥೩೧॥

ವೈಶಂಪಾಯನ– ವನವಾಸವನ್ನು ನಡೆಸಲೇಬೇಕೆಂದು ನಿಶ್ಚಯಿಸಿರುವ ಆ ಕುಂತಿಯು ಹೀಗೆ ನಾನಾ ರೀತಿಯಿಂದ ಕೇಳಿಕೊಳ್ಳುತ್ತಿರುವ ಮಕ್ಕಳಿಗೆ ಯಾವುದೇ ಮಾತನ್ನೂ ಆಡಲಿಲ್ಲ.

ದ್ರೌಪದೀ ಚಾನ್ವಯಾಚ್ಛ್ವಶ್ರ್ಯಾಂ ವಿಷಣ್ಣವದನಾ ತದಾ ।
ವನವಾಸಾಯ ಗಚ್ಛಂತೀಂ ರುದಂತೀ ಭದ್ರಯಾ ಸಹ ॥೩೨॥

ಆಗ ದ್ರೌಪದೀ ದೇವಿಯು ಸುಭದ್ರೆಯ ಜೊತೆಗೆ ವಿಷಣ್ಣವದನಳಾಗಿ ಅಳುತ್ತಾ ವನವಾಸಕ್ಕಾಗಿ ಹೋಗುತ್ತಿರುವ ಅತ್ತೆಯನ್ನು ಹಿಂಬಾಲಿಸಿದಳು.

ಸಾ ಪುತ್ರಾನ್ ರುದತಃ ಸರ್ವಾನ್ ಮುಹುರ್ಮುಹುರುದೀಕ್ಷತೀ ।
ಜಗಾಮೈವ ಮಹಾಭಾಗಾ ವನಾಯ ಧೃತನಿಶ್ಚಯಾ ॥೩೩॥

ಮಹಾತ್ಮಳಾದ ಆ ಕುಂತಿಯು ಅಳುತ್ತಿರುವ ಎಲ್ಲ ಮಕ್ಕಳನ್ನೂ ಮತ್ತೆ ಮತ್ತೆ ದಿಟ್ಟಿಸಿ ನೋಡುತ್ತಾ, ವನವಾಸ ಮಾಡಲೇಬೇಕೆಂಬ ದೃಢವಾದ ನಿಶ್ಚಯದಿಂದ ಹೊರಟೇಬಿಟ್ಟಳು.

ಅನ್ವಯುಃ ಪಾಂಡವಾಸ್ತತ್ರ ಸಭೃತ್ಯಾಂತಃಪುರಾಸ್ತದಾ ।
ತತಃ ಪ್ರಮೃಜ್ಯ ಸಾಽಶ್ರೂಣಿ ಪುತ್ರಾನ್ ವಚನಮಬ್ರವೀತ್ ॥೩೪॥

ಆಗ ಭೃತ್ಯರೂ ಹಾಗೂ ಅಂತಃಪುರದ ಸ್ತ್ರೀಯರಿಂದ ಕೂಡಿದ ಪಾಂಡವರೂ ಅವಳ ಹಿಂದೆಯೇ ಹೊರಟರು. ಅನಂತರ ಕುಂತಿಯು ಮಕ್ಕಳ ಕಣ್ಣೀರನ್ನು ಒರೆಸಿ, ಮಕ್ಕಳನ್ನು ಕುರಿತು ಈ ಮಾತುಗಳನ್ನು ಹೇಳಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಕುಂತೀವನಪ್ರಸ್ಥಾನಂ ನಾಮ ಏಕವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ತನ್ನ ವನವಾಸನಿಶ್ಚಯದಿಂದ ದಿಗ್ಭ್ರಾಂತರಾದ ಯುಧಿಷ್ಠಿರಾದಿಗಳನ್ನು
ಕುಂತಿಯು ಸಕಾರಣವಾಗಿ ಸಮಾಧಾನಗೊಳಿಸುವುದು.

ಕುಂತೀ

ಏವಮೇತನ್ಮಹಾಬಾಹೋ ಯಥಾ ವದಸಿ ಪಾಂಡವ ।
ಕೃತಮುದ್ಧರ್ಷಣಂ ಪೂರ್ವಂ ಮಯಾ ವಃ ಸೀದತಾಂ ನೃಪ ॥೧॥

ಕುಂತೀ– ಹೇ ಮಹಾಬಾಹುವೇ, ಪಾಂಡವನೇ, ರಾಜನೇ, ನೀನು ಹೇಗೆ ಹೇಳುತ್ತಿರುವೆಯೋ ಅದು ಸರಿಯಾಗಿಯೇ ಇದೆ. ಈ ಹಿಂದೆ ನೀವು ಪತನವನ್ನು ಹೊಂದುತ್ತಿದ್ದಾಗ ನಾನು ನಿಮ್ಮಲ್ಲಿ ಉತ್ಸಾಹವನ್ನು ಉಂಟು ಮಾಡಿದೆನು.

ದ್ಯೂತಾಪಹೃತರಾಜ್ಯಾನಾಂ ಪತಿತಾನಾಂ ಸುಖಾದಪಿ ।
ಜ್ಞಾತಿಭಿಃ ಪರಿಭೂತಾನಾಂ ಕೃತಮುದ್ಧರಣಂ ಮಯಾ ॥೨॥

ರಾಜ್ಯವನ್ನು ದ್ಯೂತದಲ್ಲಿ ಕಳೆದುಕೊಂಡು, ಸುಖದಿಂದಲೂ ಹೀನರಾಗಿ, ದಾಯಾದಿಗಳೆದುರು ಸೋತು ನಿಂತಾಗ ನಾನು ನಿಮ್ಮನ್ನು ಉದ್ಧರಿಸಿದೆನು.

ಕಥಂ ಪಾಂಡೋರ್ನ ನಶ್ಯೇದ್ಧಿ ಸಂತತಿಃ ಪುರುಷರ್ಷಭ ।
ಯಶಶ್ಚ ವೋ ನ ನಶ್ಯೇದ್ಧಿ ಇತಿ ಚೋದ್ಧರಣಂ ಕೃತಮ್ ॥೩॥

ಹೇ ಪುರುಷರ್ಷಭನೇ, ಪಾಂಡುವಿನ ಸಂತತಿಯು ಹೇಗೆ ನಾಶವಾಗುವುದಿಲ್ಲವೋ ಹೇಗೆ ನಿಮ್ಮ ಯಶಸ್ಸು ನಾಶವಾಗುವುದಿಲ್ಲವೋ ಆ ರೀತಿಯಾಗಿ ನನ್ನಿಂದ ನಿಮ್ಮ ಉದ್ಧಾರವು ನಡೆಸಲ್ಪಟ್ಟಿದೆ.

ಯೂಯಮಿಂದ್ರಸಮಾಃ ಸರ್ವೇ ದೇವತುಲ್ಯಪರಾಕ್ರಮಾಃ ।
ಮಾ ಪರೇಷಾಂ ಮುಖಪ್ರೇಕ್ಷಾಃ ಸ್ಯುರಿತ್ಯೇವಂ ಕೃತಂ ಮಯಾ ॥೪॥

ನೀವೆಲ್ಲರೂ ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳವರಾಗಿದ್ದು ಇಂದ್ರರಿಗೆ ಸದೃಶರಾಗಿರುವಿರಿ. ಅಂತಹ ನೀವು ಜೀವನವೃತ್ತಿಗಾಗಿ ಇನ್ನೊಬ್ಬರ ಮುಖವನ್ನು ಎದುರು ನೋಡಬಾರದು. ಇದಕ್ಕಾಗಿ ನಾನು ನಿಮ್ಮನ್ನು ಉದ್ಧರಿಸಿದೆ.

ಕಥಂ ಧರ್ಮಭೃತಾಂ ಶ್ರೇಷ್ಠೋ ರಾಜಾ ತ್ವಂ ವಾಸವೋಪಮಃ ।
ಪುನರ್ವನಂ ನ ಗಚ್ಛೇಥಾ ಇತಿ ಚೋದ್ಧರಣಂ ಕೃತಮ್ ॥೫॥

ಧಾರ್ಮಿಕರಲ್ಲಿ ಶ್ರೇಷ್ಠರಾದ ಇಂದ್ರನಿಗೆ ಸದೃಶನಾದ ರಾಜನಾದ ನೀನು ಮತ್ತೆ ಹೇಗೆ ಕಾಡಿಗೆ ಹೋಗಲಾರೆಯೋ ಆ ರೀತಿ ನಾನು ಉದ್ಧಾರ ಮಾಡಬೇಕಾಯಿತು.

ನಾಗಾಯುತಸಮಪ್ರಾಣಃ ಖ್ಯಾತವಿಕ್ರಮಪೌರುಷಃ ।
ನಾಯಂ ಭೀಮೋಽತ್ಯಯಂ ಗಚ್ಛೇದ್ ಇತಿ ಚೋದ್ಧರಣಂ ಕೃತಮ್ ॥೬॥

ಹತ್ತು ಸಾವಿರ ಆನೆಗಳಿಗೆ ಸಮಾನವಾದ ಬಲವುಳ್ಳ, ವಿಕ್ರಮ ಹಾಗೂ ಪೌರುಷಗಳಿಂದ ಪ್ರಸಿದ್ಧನಾದ ಈ ಭೀಮನು ಸಂಕಟವನ್ನು ಹೊಂದಬಾರದು ಎಂಬುದಕ್ಕಾಗಿ ನಾನು ನಿಮ್ಮನ್ನು ಉದ್ಧರಿಸಿದೆ.

ಭೀಮಸೇನಾದವರಜಸ್ತಥಾಽಯಂ ವಾಸವೋಪಮಃ ।
ವಿಜಯೋ ನಾವಸೀದೇತ ಇತಿ ಚೋದ್ಧರಣಂ ಕೃತಮ್ ॥೭॥

ಭೀಮಸೇನನ ನಂತರ ಜನಿಸಿದ, ಇಂದ್ರನಿಗೆ ಸದೃಶನಾದ ಈ ವಿಜಯನು ವಿಷಾದ ಪಡದಿರಲಿ ಎಂದು ನಾನು ಉದ್ಧರಿಸಬೇಕಾಯಿತು.

ನಕುಲಃ ಸಹದೇವಶ್ಚ ತಥೇಮೌ ಗುರುವರ್ತಿನೌ ।
ಕ್ಷುಧಾ ಕಥಂ ನ ಸೀದೇತಾಮಿತಿ ಚೋದ್ಧರಣಂ ಕೃತಮ್ ॥೮॥

ಹಿರಿಯರನ್ನು ಅನುಸರಿಸಿಕೊಂಡು ನಡೆಯುವ ಈ ನಕುಲ-ಸಹದೇವರು ಹಸಿವಿನಿಂದ ಕಂಗೆಡಬಾರದು ಎಂಬುದಕ್ಕಾಗಿ ನಾನು ಉದ್ಧರಿಸಬೇಕಾಯಿತು.

ಇಯಂ ಚ ಬೃಹತೀ ಶ್ಯಾಮಾ ಶ್ರೀಮತ್ಯಾಯತಲೋಚನಾ ।
ತಥಾ ಸಭಾತಳೇ ಕ್ಲಿಷ್ಟಾ ಮಾ ಭೂದಿತಿ ಚ ತತ್ಕೃತಮ್ ॥೯॥

ಗುಣಸಂಪನ್ನಳಾದ, ಅಗಲವಾದ ಕಣ್ಣುಗಳುಳ್ಳ ಈ ಹಿರಿ ಸೊಸೆಯಾದ ಕೃಷ್ಣೆಯು ಅಂದಿನಂತೆ ಸಭೆಯ ಮಧ್ಯದಲ್ಲಿ ಕಷ್ಟಪಡದಿರಲಿ ಎಂಬುದಕ್ಕಾಗಿ ಹಾಗೆ ಮಾಡಿದೆ.

ಪಶ್ಯಂತ್ಯಾ ಮೇ ತಥಾ ಹೀಮಾಂ ವೇಪಂತೀಂ ಕದಲೀಮಿವ ।
ಸ್ತ್ರೀಧರ್ಮಿಣೀಮನಿಂದ್ಯಾಂಗೀಂ ತಥಾ ದ್ಯೂತಪರಾಜಿತಾಮ್ ॥೧೦॥

ದುಃಶಾಸನಸ್ತಾಂ ಮೌಖ್ಯಾತ್ತು ದಾಸೀವತ್ ಪರ್ಯಕರ್ಷತ ।
ತದೈವ ವಿದಿತಂ ಮಹ್ಯಂ ಪರಿಭೂತಮಿದಂ ಕುಲಮ್ ॥೧೧॥

ಹಾಗೆಯೇ ನಾನು ನೋಡುತ್ತಿರುವಂತೆಯೇ ಬಾಳೆಯ ಸಸಿಯಂತೆ ನಡುಗುತ್ತಿರುವ, ಸ್ತ್ರೀಧರ್ಮವನ್ನು ನಡೆಸುತ್ತಿರುವ, ಸುಲಕ್ಷಣವಾದ ಅಂಗಗಳನ್ನು ಹೊಂದಿರುವ, ದ್ಯೂತದಲ್ಲಿ ಪರಾಜಿತಳಾಗಿರುವ, ಈ ಯಾವ ದ್ರೌಪದಿಯನ್ನು ದುಶ್ಶಾಸನನು ಮೂರ್ಖತನದಿಂದ ದಾಸಿಯಂತೆ ಎಳೆದುಕೊಂಡು ಬಂದನೋ ಆಗಲೇ ಈ ಕುಲವು ತಿರಸ್ಕೃತವಾಯಿತೆಂದು ನನಗೆ ತಿಳಿಯಿತು.

ವಿಷಣ್ಣಾಃ ಕುರವಶ್ಚೈವ ತದಾ ಮೇ ಶ್ವಶುರಾದಯಃ ।
ಯಥೈಷಾ ನಾಥಮಿಚ್ಛಂತೀ ಪ್ರಾಲಪತ್ ಕುರರೀ ಯಥಾ ॥೧೨॥

ಕೇಶಪಕ್ಷೇ ಪರಾಮೃಷ್ಟಾ ಪಾಪೇನ ಹತಬುದ್ಧಿನಾ ।
ಯದಾ ದುಃಶಾಸನೇನೈಷಾ ತದಾ ಮುಹ್ಯಾಮ್ಯಹಂ ನೃಪ ॥೧೩॥

ಇವಳು ರಕ್ಷಕರನ್ನು ಬಯಸುತ್ತಾ ಹೆಣ್ಣುಜಿಂಕೆಯಂತೆ ಯಾವ ರೀತಿಯಾಗಿ ಅತ್ತಳೋ ಆಗಲೇ ನನ್ನ ಮಾವನೇ ಮೊದಲಾಗಿ ಎಲ್ಲ ಕುರುವಂಶಜರು ವಿಷಣ್ಣರಾದರು.

ಪಾಪಿಯಾದ, ಬುದ್ಧಿಶೂನ್ಯನಾದ ದುಶ್ಶಾಸನನನಿಂದ ಯಾವಾಗ ಇವಳು ತಲೆಗೂದಲಿನಲ್ಲಿ ಹಿಡಿಯಲ್ಪಟ್ಟಳೋ ಹೇ ರಾಜನೇ, ಆಗಲೇ ನಾನು ಮೂರ್ಛೆಗೊಂಡೆ.

ಯುಷ್ಮತ್ತೇಜೋವಿವೃದ್ಧ್ಯರ್ಥಂ ಮಯಾ ಹ್ಯುದ್ಧರಣಂ ಕೃತಮ್ ।
ತದಾನೀಂ ವಿದುಲಾವಾಕ್ಯೈರಿತಿ ತದ್ವಿತ್ತ ಪುತ್ರಕಾಃ ॥೧೪॥

ಹೇ ಮಕ್ಕಳೇ! ನಿಮ್ಮ ತೇಜಸ್ಸಿನ ಅಭಿವೃದ್ಧಿಗಾಗಿ ಆಗ ನಾನು ವಿದುಲೆಯ ವಾಕ್ಯಗಳನ್ನು ಉದಾಹರಿಸಿ ನಿಮ್ಮನ್ನು ಉದ್ಧರಿಸಿದೆ. ಅದನ್ನು ಇಂದು ತಿಳಿಯಿರಿ.

ಕಥಂ ನ ರಾಜವಂಶೋಽಯಂ ನಶ್ಯೇತ್ ಪ್ರಾಪ್ಯ ಸುತಾನ್ ಮಮ ।
ಪಾಂಡೋರಿತಿ ಮಯಾ ಪುತ್ರಾಸ್ತಸ್ಮಾದುದ್ಧರಣಂ ಕೃತಮ್ ॥೧೫॥

ಹೇ ಮಕ್ಕಳೇ! ನನ್ನಿಂದ ಮಕ್ಕಳನ್ನು ಪಡೆದ ಪಾಂಡುವಿನ ಈ ರಾಜವಂಶವು ಯಾವುದೇ ರೀತಿಯಲ್ಲಿ ನಾಶವಾಗಬಾರದು. ಅದಕ್ಕಾಗಿ ನನ್ನಿಂದ ನಿಮ್ಮೆಲ್ಲರ ಉದ್ಧಾರವು ನಡೆಸಲ್ಪಟ್ಟಿತು.

ನ ತಸ್ಯ ಪುತ್ರಾಃ ಪೌತ್ರಾ ವಾ ಕುತ ಏವ ಸ ಪಾರ್ಥಿವಃ ।
ಲಭತೇ ಸುಕೃತಾನ್ ಲೋಕಾನ್ ಯಸ್ಮಾದ್ವಂಶಃ ಪ್ರಣಶ್ಯತಿ ॥೧೬॥

ಒಂದು ವೇಳೆ ಈ ವಂಶವು ನಾಶವಾದರೆ ಆ ಪಾಂಡುರಾಜನಾಗಲೀ, ಅವನ ಮಕ್ಕಳು, ಮೊಮ್ಮಕ್ಕಳಾಗಲೀ ಪುಣ್ಯಲೋಕಗಳನ್ನು ಪಡೆಯಲಾರರು.

ಭುಕ್ತಂ ರಾಜ್ಯಫಲಂ ತಾತ ಭರ್ತುರ್ಮೇ ವಿಪುಲಂ ಪುರಾ ।
ಮಹಾದಾನಾನಿ ದತ್ತಾನಿ ಪೀತಾಃ ಸೋಮಾ ಯಥಾವಿಧಿ ॥೧೭॥

ಹಿಂದೆ ನನ್ನ ಗಂಡನಿರುವಾಗಲೇ ರಾಜ್ಯದಲ್ಲಿ ಸಿಗಬೇಕಾದ ಫಲಗಳನ್ನು ನಾನು ಅನುಭವಿಸಿರುವೆನು. ಹೇ ಮಗನೇ! ಅದೇ ಕಾಲದಲ್ಲಿ ಮಹಾದಾನಗಳೂ ಮಾಡಲ್ಪಟ್ಟಿವೆ. ವಿಧಿಪ್ರಕಾರವಾಗಿ ಸೋಮಪಾನವನ್ನೂ ಮಾಡಿರುವೆನು.

ಸಾಽಹಂ ನಾತ್ಮಫಲಾರ್ಥಂ ವೈ ವಾಸುದೇವಮಚೂಚುದಮ್ ।
ವಿದುಲಾಯಾಃ ಪ್ರಲಾಪೈಸ್ತೈಃ ಪ್ಲಾವನಾರ್ಥಂ ತು ತತ್ಕೃತಮ್ ॥೧೮॥

ಅಂತಹ ನಾನು ನನ್ನ ಸ್ವಾರ್ಥಕ್ಕೋಸ್ಕರ ಕೃಷ್ಣನನ್ನು ಕಳುಹಿಸಿ, ವಿದುಲೆಯ ಆ ಮಾತುಗಳಿಂದ ನಿಮ್ಮನ್ನು ಪ್ರೇರಿಸಲಿಲ್ಲ. ಕುಲವು ಮುಳುಗದಿರುವಂತೆ ಅದನ್ನು ನಡೆಸಬೇಕಾಯಿತು.

ನಾಹಂ ರಾಜ್ಯಫಲಂ ಪುತ್ರಾಃ ಕಾಮಯೇ ಭರ್ತೃವರ್ಜಿತಮ್ ।
ಪತಿಲೋಕಾನಹಂ ಪುಣ್ಯಾನ್ ಕಾಮಯೇ ತಪಸಾ ವಿಭೋ ॥೧೯॥

ಹೇ ಮಕ್ಕಳೇ! ಗಂಡನಿಲ್ಲದ ರಾಜ್ಯಸುಖವನ್ನು ನಾನು ಬಯಸುವುದಿಲ್ಲ. ತಪಸ್ಸಿನಿಂದ ಗಂಡನು ಸೇರಿದ ಪುಣ್ಯಲೋಕಗಳನ್ನು ಪಡೆಯಲು ಬಯಸುತ್ತಿರುವೆ.

ಶ್ವಶ್ರ್ವಾಶ್ವಶುರಯೋಃ ಕೃತ್ವಾ ಶುಶ್ರೂಷಾಂ ವನವಾಸಿನೋಃ ।
ತಪಸಾ ಶೋಷಯಿಷ್ಯಾಮಿ ಯುಧಿಷ್ಠಿರ ಕಲೇಬರಮ್ ॥೨೦॥

ಹೇ ಯುಧಿಷ್ಠಿರನೇ, ವನವಾಸವನ್ನು ಬಯಸುತ್ತಿರುವ ಅತ್ತೆ- ಮಾವಂದಿರ ಸೇವೆಯನ್ನು ನಡೆಸುತ್ತಾ ಈ ಶರೀರವನ್ನು ತಪಸ್ಸಿನಿಂದ ಒಣಗಿಸುವೆ.

ನಿವರ್ತಸ್ವ ಕುರುಶ್ರೇಷ್ಠ ಭೀಮಸೇನಾದಿಭಿಃ ಸಹ ।
ಧರ್ಮೇ ತೇ ಧೀಯತಾಂ ಬುದ್ಧಿರ್ಮನಸೋ ಮಹದಸ್ತು ತೇ ॥೨೧॥

ಆದ್ದರಿಂದ ಹೇ ಕುರುಶ್ರೇಷ್ಠನೇ, ಭೀಮಸೇನನೇ ಮೊದಲಾದವರನ್ನು ಕೂಡಿಕೊಂಡು ಹಿಂದಿರುಗು. ನಿನ್ನ ಬುದ್ಧಿಯು ಧರ್ಮದಲ್ಲೇ ಇರಲಿ. ನಿನ್ನ ಮನಸ್ಸಿಗೆ ಸಮಾಧಾನ ಸಿಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಕುಂತೀವಚನಂ ನಾಮ ದ್ವಾವಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಕುಂತಿಯು ಬಹುಪ್ರಯತ್ನಪೂರ್ವಕವಾಗಿ ಯುಧಿಷ್ಠಿರಾದಿಗಳನ್ನು ಹಿಂದಿರುಗುವಂತೆ ಸೂಚಿಸಿದಾಗ, ಅವರು ಕಷ್ಟದಿಂದಲೇ ನಗರಕ್ಕೆ ಹಿಂದಿರುಗುವುದು. ಧೃತರಾಷ್ಟ್ರಾದಿಗಳು ವಿದುರನ ಜೊತೆ ಕಾಡನ್ನು ಪ್ರವೇಶಿಸಿ ಗಂಗಾತೀರದಲ್ಲಿ ಸಂಧ್ಯಾದಿಗಳನ್ನು ಪೂರೈಸಿ ರಾತ್ರಿಯನ್ನು ಕಳೆಯುವುದು.

ವೈಶಂಪಾಯನಃ

ಕುಂತ್ಯಾಸ್ತು ವಚನಂ ಶ್ರುತ್ವಾ ಪಾಂಡವಾ ರಾಜಸತ್ತಮ ।
ವ್ರೀಡಿತಾಃ ಸನ್ನ್ಯವರ್ತಂತ ಪಾಂಚಾಲ್ಯಾ ಸಹ ಭಾರತ ॥೧॥

ವೈಶಂಪಾಯನ– ಹೇ ಭಾರತನೇ, ರಾಜಶ್ರೇಷ್ಠನೇ, ಕುಂತಿಯ ವಚನವನ್ನು ಕೇಳಿ ಪಾಂಡವರು ದ್ರೌಪದಿಯೊಂದಿಗೆ ನಾಚಿಕೆಗೊಂಡು ಹಿಂದಿರುಗಿದರು.

ತತಃ ಶಬ್ದೋ ಮಹಾನಾಸೀತ್ ಸರ್ವೇಷಾಮೇವ ಭಾರತ ।
ಅಂತಃಪುರಾಣಾಂ ರುದತಾಂ ದೃಷ್ಟ್ವಾ ಕುಂತೀಂ ತಥಾ ಗತಾಮ್ ॥೨॥

ಹೇ ಭಾರತನೇ, ಹಾಗೆ ಹೊರಟಿರುವ ಕುಂತಿಯನ್ನು ನೋಡಿ ಅಂತಃಪುರದಲ್ಲಿರುವ ಎಲ್ಲ ಸ್ತ್ರೀಯರ ಅಳುವ ಶಬ್ದವು ಜೋರಾಗಿ ಕೇಳಿಸುತ್ತಿತ್ತು.

ಪ್ರದಕ್ಷಿಣಮುಪಾವೃತ್ಯ ರಾಜಾನಂ ಪಾಂಡವಾಸ್ತದಾ ।
ಅಭಿವಾದ್ಯ ನಿವರ್ತಂತ ಪೃಥಾಂ ತಾಮನಿವರ್ತ್ಯ ತೇ ॥೩॥

ಆಗ ಪಾಂಡವರೆಲ್ಲರೂ ರಾಜನಾದ ಧೃತರಾಷ್ಟ್ರನನ್ನು ಪ್ರದಕ್ಷಿಣೆ ಬಂದು ನಮಸ್ಕರಿಸಿ ಕುಂತಿಯನ್ನು ಹಿಂದಿರುಗಿಸಲಾರದೆ ತಾವು ಹಿಂದಿರುಗಿದರು.

ತಾಮಬ್ರವೀನ್ಮಹಾರಾಜೋ ಧೃತರಾಷ್ಟ್ರೋಽಂಬಿಕಾಸುತಃ ।
ಗಾಂಧಾರೀಂ ವಿದುರಂ ಚೈವ ಸಮಾಭಾಷ್ಯ ನಿಗೃಹ್ಯ ಚ ॥೪॥

ಆಗ ಅಂಬಿಕಾಸುತನಾದ ಧೃತರಾಷ್ಟ್ರಮಹಾರಾಜನು ಗಾಂಧಾರಿಯನ್ನೂ ಮತ್ತು ವಿದುರನನ್ನೂ ಸೇರಿಸಿಕೊಂಡು, ಅವರ ಜೊತೆ ಮಾತುಕತೆ ನಡೆಸಿ, ಸ್ವಯಂ ಪರಾಮರ್ಶಿಸಿ ಕುಂತಿಯನ್ನು ಕುರಿತು ಹೀಗೆ ಹೇಳಿದನು.

ಧೃತರಾಷ್ಟ್ರಃ

ಯುಧಿಷ್ಠಿರಸ್ಯ ಜನನೀ ದೇವೀ ಸಾಽಪಿ ನಿವರ್ತ್ಯತಾಮ್ ।
ತಥಾ ಯುಧಿಷ್ಠಿರಃ ಪ್ರಾಹ ತತ್ಸರ್ವಂ ಸತ್ಯಮೇವ ಹಿ ॥೫॥

ಧೃತರಾಷ್ಟ್ರ– ಯುಧಿಷ್ಠಿರನ ತಾಯಿಯಾದ ಕುಂತೀ ದೇವಿಯು ಹಿಂದಿರುಗಲಿ. ಯುಧಿಷ್ಠಿರನೂ ಅದನ್ನೇ ಆಡಿದ್ದಾನೆ. ಅವನು ಹೇಳಿದುದೆಲ್ಲವೂ ಸತ್ಯವಾಗಿಯೇ ಇದೆ.

ಪುತ್ರೈಶ್ವರ್ಯಂ ಮಹದಿದಮಪಹಾಯ ಮಹಾಫಲಮ್ ।
ಕಾ ಗಚ್ಛೇತ ವನಂ ದುರ್ಗಂ ಪುತ್ರಾನುತ್ಸೃಜ್ಯ ಮೂಢವತ್ ॥೬॥

ಮಹತ್ತಾದ ಫಲವನ್ನು ಕೊಡುವ ಮಕ್ಕಳ ಈ ಮಹಾ ಐಶ್ವರ್ಯವನ್ನು ಬಿಟ್ಟು, ಮೂಢಳಂತೆ ಮಕ್ಕಳನ್ನೂ ಬಿಟ್ಟು ದುರ್ಗಮವಾದ ಕಾಡಿಗೆ ಯಾವಳು ತಾನೇ ಹೋದಾಳು!

ರಾಜ್ಯಸ್ಥಯಾ ತಪಶ್ಚರ್ತುಂ ನಾನಾವ್ರತಕೃತಂ ಮಹತ್ ।
ಅನಯಾ ಶಕ್ಯಮದ್ಯೇಹ ಶ್ರೂಯತಾಂ ಚ ವಚೋ ಮಮ ॥೭॥

ಇವಳು ರಾಜ್ಯದಲ್ಲಿದ್ದುಕೊಂಡೆ ನಾನಾ ವ್ರತಗಳನ್ನು ನಡೆಸುತ್ತಾ ತಪಸ್ಸನ್ನು ಆಚರಿಸಲು ಯೋಗ್ಯಳಾಗಿದ್ದಾಳೆ. ಇಂದು ನನ್ನ ಮಾತನ್ನು ಇವಳು ಕೇಳಬೇಕು.

ಗಾಂಧಾರಿ ಪರಿತುಷ್ಟೋಽಸ್ಮಿ ವಧ್ವಾಃ ಶುಶ್ರೂಷಣೇನ ವೈ ।
ತಸ್ಮಾತ್ ತ್ವಮೇನಾಂ ಧರ್ಮಜ್ಞೇ ಸಮನುಜ್ಞಾತುಮರ್ಹಸಿ ॥೮॥

ಧರ್ಮಜ್ಞಳಾದ ಹೇ ಗಾಂಧಾರಿಯೇ, ಸೊಸೆಯಂತೆ ಇವಳು ಮಾಡಿದ ಸೇವೆಯಿಂದ ನಾನು ಸಂತುಷ್ಟನಾಗಿದ್ದೇನೆ. ಆದ್ದರಿಂದ ಹಿಂದಿರುಗಲು ಇವಳಿಗೆ ನೀನು ಅನುಜ್ಞೆ ನೀಡಬೇಕು.

ವೈಶಂಪಾಯನಃ

ಇತ್ಯುಕ್ತಾ ಸೌಬಲೇಯೀ ತು ರಾಜ್ಞಾ ಕುಂತೀಮುವಾಚ ಹ ।
ತತ್ಸರ್ವಂ ರಾಜವಚನಂ ಸ್ವಂ ಚ ವಾಕ್ಯಂ ವಿಶೇಷವತ್ ॥೯॥

ವೈಶಂಪಾಯನ– ಹೀಗೆ ಧೃತರಾಷ್ಟ್ರನು ಗಾಂಧಾರಿಯೊಂದಿಗೆ ಹೇಳಿದಾಗ, ಆ ಗಾಂಧಾರಿಯು ರಾಜನು ಹೇಳಿದ ಆ ಎಲ್ಲ ಮಾತುಗಳನ್ನೂ ಜೊತೆಗೆ ವಿಶೇಷವಾಗಿ ತನ್ನ ಮಾತುಗಳನ್ನೂ ಸೇರಿಸಿಕೊಂಡು ಕುಂತಿಗೆ ತಿಳಿ ಹೇಳಲು ಪ್ರಯತ್ನಿಸಿದಳು.

ನ ಚ ಸಾ ವನವಾಸಾಯ ದೇವೀ ಕೃತಮತಿಸ್ತದಾ ।
ಶಕ್ತಾ ಹ್ಯುಪಾವರ್ತಯಿತುಂ ಕುಂತೀ ಧರ್ಮಪರಾ ಸತೀ ॥೧೦॥

ಆದರೆ ವನವಾಸದಲ್ಲಿ ಮನಸ್ಸನ್ನು ಇರಿಸಿದ, ಧರ್ಮಪರಳಾದ ಸಾಧ್ವಿಯಾದ ಆ ಕುಂತೀದೇವಿಯನ್ನು ಹಿಂದಿರುಗಿಸಲು ಶಕ್ತಳಾಗಲಿಲ್ಲ.

ತಸ್ಯಾಸ್ತು ತಂ ಸ್ಥಿರಂ ಜ್ಞಾತ್ವಾ ವ್ಯವಸಾಯಂ ಕುರುಸ್ತ್ರಿಯಃ ।
ನಿವೃತ್ತಾಶ್ಚ ಕುರುಶ್ರೇಷ್ಠ ದೃಷ್ಟ್ವಾ ಪ್ರರುರುದುಸ್ತದಾ ॥೧೧॥

ಹೇ ಕುರುಶ್ರೇಷ್ಠನೇ, ಅವಳ ಆ ಸ್ಥಿರಬುದ್ಧಿಯನ್ನು ತಿಳಿದು ಕುರುಸ್ತ್ರೀಯರು ಹಿಂದಕ್ಕೆ ಹೊರಟವರಾಗಿದ್ದರೂ ಅವಳನ್ನು ನೋಡಿ ಮತ್ತೆ ಅತ್ತರು.

ಉಪಾವೃತ್ತೇಷು ಪಾರ್ಥೇಷು ಸರ್ವೇಷ್ವಂತಃಪುರೇಷು ಚ ।
ಯಯೌ ರಾಜಾ ಮಹಾಪ್ರಾಜ್ಞೋ ಧೃತರಾಷ್ಟ್ರೋ ವನಂ ತದಾ ॥೧೨॥

ಪಾಂಡವರೂ ಹಾಗೂ ಎಲ್ಲ ಅಂತಃಪುರದ ಜನರು ಹಿಂದಿರುಗಿದಾಗ ಮಹಾಪ್ರಾಜ್ಞನಾದ ಧೃತರಾಷ್ಟ್ರನು ನೇರವಾಗಿ ಕಾಡಿಗೆ ಹೋದನು.

ಪಾಂಡವಾ ಅಪಿ ದೀನಾಸ್ತೇ ದುಃಖಶೋಕಪರಾಯಣಾಃ ।
ಯಾನೈಃ ಸ್ತ್ರೀಸಹಿತಾಃ ಸರ್ವೇ ಪುರಂ ಪ್ರವಿವಿಶುಸ್ತದಾ ॥೧೩॥

ಪಾಂಡವರಾದರೂ ದೀನರಾಗಿ, ದುಃಖ ಹಾಗೂ ಶೋಕಗಳಿಂದ ತುಂಬಿದವರಾಗಿ ಸ್ತ್ರೀಯರೊಂದಿಗೆ ತಮ್ಮ ವಾಹನಗಳಿಂದ ಪುರವನ್ನು ಪ್ರವೇಶಿಸಿದರು.

ತದಹೃಷ್ಟಮಿವಾಕೂಜಂ ಗತೋತ್ಸವಮಿವಾಭವತ್ ।
ನಗರಂ ಹಸ್ತಿನಪುರಂ ಸಸ್ತ್ರೀವೃದ್ಧಕುಮಾರಕಮ್ ॥೧೪॥

ಆಗ ಸ್ತ್ರೀಯರೂ, ವೃದ್ಧರೂ, ಮಕ್ಕಳೂ ಸೇರಿದಂತೆ ಇಡೀ ಹಸ್ತಿನಾಪುರ ನಗರವು ಉತ್ಸವವು ನಿಂತುಹೋಗಿ, ಸಂತೋಷವಿಲ್ಲದೆ ಸಣ್ಣ ಧ್ವನಿಯಲ್ಲಿ ಅಳುವಂತೆ ಭಾಸವಾಯಿತು.

ಸರ್ವೇ ಚಾಸನ್ ನಿರುತ್ಸಾಹಾಃ ಪಾಂಡವಾ ಜಾತಮನ್ಯವಃ ।
ಕುಂತ್ಯಾ ಹೀನಾಃ ಸುದುಃಖಾರ್ತಾ ವತ್ಸಾ ಇವ ನಿವಾರಿತಾಃ ॥೧೫॥

ಎಲ್ಲ ಪಾಂಡವರೂ ಶೋಕಗೊಂಡವರಾಗಿ ಉತ್ಸಾಹವಿಲ್ಲದವರಾದರು. ಕುಂತಿ ಇಲ್ಲದ ದುಃಖದಿಂದ ವ್ಯಥೆಗೊಂಡವರಾಗಿ ತಾಯಿಯಿಂದ ದೂರದಬ್ಬಲ್ಪಟ್ಟ ಮಕ್ಕಳಂತೆ ಭಾಸವಾದರು.

ಧೃತರಾಷ್ಟ್ರಸ್ತು ತೇನಾಹ್ನಾ ಗತ್ವಾ ಸುಮಹದಂತರಮ್ ।
ತತೋ ಭಾಗೀರಥೀತೀರೇ ನಿವಾಸಮಕರೋತ್ ಪ್ರಭುಃ ॥೧೬॥

ಧೃತರಾಷ್ಟ್ರನಾದರೂ ಆ ದಿನ ಬಹಳ ದೂರದವರೆಗೆ ಹೋಗಿ, ಅನಂತರ ಭಾಗೀರಥಿಯ ತೀರದಲ್ಲಿ ವಾಸಸ್ಥಾನವನ್ನು ಆಣಿಗೊಳಿಸಿದನು.

ಪ್ರಾದುಷ್ಕೃತಾ ಯಥಾನ್ಯಾಯಮಗ್ನಯೋ ವೇದಪಾರಗೈಃ ।
ವ್ಯರಾಜಂತ ದ್ವಿಜಶ್ರೇಷ್ಠೈಸ್ತತ್ರ ತತ್ರ ತಪೋಧನೈಃ ॥೧೭॥

ಪ್ರಾದುಷ್ಕೃತಾಗ್ನಿರಭವತ್ಸ ಚ ವೃದ್ಧೋ ನರಾಧಿಪಃ ॥೧೮॥

ವೇದಪಾರಂಗತರಾದ ಬ್ರಾಹ್ಮಣರಿಂದ ಶಾಸ್ತ್ರನೀತಿಗೆ ಅನುಸಾರವಾಗಿ ಮೂರು ರೀತಿಯ ಅಗ್ನಿಗಳು ಪ್ರಾದುರ್ಭಾವ ಮಾಡಲ್ಪಟ್ಟವು. ಆ ಸಮಯದಲ್ಲಿ ಅಲ್ಲಲ್ಲಿ ತಪೋಧನರಾದ ಬ್ರಾಹ್ಮಣರು ವಿರಾಜಿಸಿದರು. ಹೀಗೆ ವೃದ್ಧನಾದ ಆ ರಾಜನು ವಾನಪ್ರಸ್ಥಾಶ್ರಮಕ್ಕೆ ಬೇಕಾದ ಅಗ್ನಿಯ ಪ್ರಾದುರ್ಭಾವವುಳ್ಳವನಾದನು.

ಸ ರಾಜಾಽಗ್ನೀನ್ ಪರ್ಯುಪಾಸ್ಯ ಹುತ್ವಾ ಚ ವಿಧಿವತ್ ತದಾ ।
ಸಂಧ್ಯಾಗತಸಹಸ್ರಾಂಶುಮುಪಾತಿಷ್ಠತ ಭಾರತ ॥೧೯॥

ಹೇ ಭಾರತನೇ, ಆಗ ಆ ರಾಜನು ಅಗ್ನಿಗಳ ಉಪಾಸನೆಯನ್ನು ಮಾಡಿ, ವಿಧಿವತ್ತಾಗಿ ಅವುಗಳಲ್ಲಿ ಹೋಮಿಸಿ, ಸಾಯಂಸಂಧ್ಯಾಗತನಾದ ಸೂರ್ಯನ ಉಪಾಸನೆಯನ್ನೂ ಮಾಡಿದನು.

ವಿದುರಃ ಸಂಜಯಶ್ಚೈವ ರಾಜ್ಞಃ ಶಯ್ಯಾಂ ಕುಶೈಸ್ತತಃ ।
ಚಕ್ರತುಃ ಕುರುವೀರಸ್ಯ ಗಾಂಧಾರ್ಯಾಶ್ಚಾವಿದೂರತಃ ॥೨೦॥

ರಾಜನ ಸಂಧ್ಯಾವಂದನೆಯು ಮುಗಿದ ನಂತರ ವಿದುರ ಮತ್ತು ಸಂಜಯರು ಸೇರಿಕೊಂಡು ಕುರುವೀರನಾದ ರಾಜನಿಗೆ ದರ್ಭೆಗಳಿಂದ ಹಾಸಿಗೆಯನ್ನು ತಯಾರಿಸಿದರು. ಸ್ವಲ್ಪವೇ ದೂರದಲ್ಲಿ ಗಾಂಧಾರಿಗೂ ಹಾಸಿಗೆಯನ್ನು ತಯಾರಿಸಿದರು.

ಗಾಂಧಾರ್ಯಾಃ ಸನ್ನಿಕರ್ಷೇ ತು ನಿಷಸಾದ ಕುಶೇಷ್ವಥ ।
ಯುಧಿಷ್ಠಿರಸ್ಯ ಜನನೀ ಕುಂತೀ ಸಾಧುವ್ರತೇ ಸ್ಥಿತಾ ॥೨೧॥

ಯುಧಿಷ್ಠಿರನ ತಾಯಿಯಾದ ಕುಂತೀದೇವಿಯು ಯೋಗ್ಯವಾದ ಅನುಷ್ಠಾನದಲ್ಲಿ ಇರುವವಳಾಗಿ ಗಾಂಧಾರಿಯ ಸಮೀಪದಲ್ಲೇ ದರ್ಭೆಗಳ ಮೇಲೆ ಕುಳಿತಳು.

ತೇಷಾಂ ಸಂಶ್ರಯಣೇ ಚಾಪಿ ನಿಷೇದುರ್ವಿದುರಾದಯಃ ।
ಯಾಜಕಾಶ್ಚ ಯಥೋದ್ದೇಶಂ ದ್ವಿಜಾ ಯೇ ಚಾನುಯಾಯಿನಃ ॥೨೨॥

ಅವರ ಸಮೀಪದಲ್ಲಿ ವಿದುರಾದಿಗಳೂ ವಾನಪ್ರಸ್ಥಾಶ್ರಮವನ್ನು ನೀಡುವ ಉದ್ದೇಶದಿಂದಲೇ ಬಂದ ಯಾಜಕರು ಮತ್ತು ಅವರ ಅನುಯಾಯಿಗಳಾದ ಬ್ರಾಹ್ಮಣರೂ ವಿಶ್ರಾಂತಿ ಪಡೆದರು.

ಪ್ರಧೀತದ್ವಿಜಮುಖ್ಯಾ ಸಾ ಸಂಪ್ರಜ್ವಲಿತಪಾವಕಾ ।
ಬಭೂವ ತೇಷಾಂ ರಜನೀ ಬ್ರಾಹ್ಮೀವ ಪ್ರೀತಿವರ್ಧನೀ ॥೨೩॥

ಚೆನ್ನಾಗಿ ಅಧ್ಯಯನ ಮಾಡಿದ ಬ್ರಾಹ್ಮಣರಿಗೆ ಪ್ರಾಧಾನ್ಯವನ್ನು ನೀಡಿದ, ಚೆನ್ನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯುಳ್ಳ ಅವರ ಆ ರಾತ್ರಿಯು ಬ್ರಾಹ್ಮೀ ರಾತ್ರಿಯಂತೆ ಪ್ರೀತಿಯನ್ನು ಹೆಚ್ಚಿಸುವಂಥದ್ದಾಯಿತು.

ತತೋ ರಾತ್ರ್ಯಾಂ ವ್ಯತೀತಾಯಾಂ ಕೃತಪೂರ್ವಾಹ್ಣಕ್ರಿಯಾಃ ।
ಹುತ್ವಾಽಗ್ನಿಂ ವಿಧಿವತ್ ಸರ್ವೇ ಪ್ರಯಯುಸ್ತೇ ಯಥಾಕ್ರಮಮ್ ॥೨೪॥

ಉದಙ್ಮುಖಾ ನಿರೀಕ್ಷಂತ ಉಪವಾಸಪರಾಯಣಾಃ ॥೨೫॥

ಅನಂತರ ರಾತ್ರಿ ಕಳೆದು ಬೆಳಗಾಗುತ್ತಿರಲು ಎಲ್ಲರೂ ತಮ್ಮ ಪ್ರಾತಃಕಾಲೀನ ಕ್ರಿಯೆಗಳನ್ನು ನಡೆಸಿ, ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಗಳನ್ನು ನಡೆಸಿ, ಉಪವಾಸಾದಿ ವ್ರತನಿಷ್ಠರಾಗಿ ಕ್ರಮವಾಗಿ ಉತ್ತರ ದಿಕ್ಕಿನಲ್ಲಿ ಯೋಗ್ಯ ಸ್ಥಳವನ್ನು ಅರಸುತ್ತಾ ಹೊರಟರು.

ಸ ತೇಷಾಮತಿದುಃಖೋಽಭೂನ್ನಿವಾಸಃ ಪ್ರಥಮೇಽಹನಿ ।
ಶೋಚತಾಂ ವದತಾಂ ಚಾಪಿ ಪೌರಜಾನಪದಾನಪಿ ॥೨೬॥

ಆ ಮೊದಲ ದಿನದಲ್ಲಿ ಕಾಡಿನಲ್ಲಿ ಅವರ ವಾಸವು - ಪಟ್ಟಣಿಗರ ಹಾಗೂ ಗ್ರಾಮೀಣ ಜನರ ಶೋಕವನ್ನು ಆಡಿಕೊಳ್ಳುತ್ತಾ, ಅತಿಯಾದ ದುಃಖವನ್ನು ಉಂಟು ಮಾಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರಸ್ಯ ಆಶ್ರಮವಾಸೋ ನಾಮ ತ್ರಯೋವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾಲ್ಕನೆಯ ಅಧ್ಯಾಯ

ಧೃತರಾಷ್ಟ್ರನು ವಿದುರಾದಿಗಳ ಜೊತೆಗೆ ಗಂಗಾತೀರದಿಂದ ಕುರುಕ್ಷೇತ್ರಕ್ಕೆ ತೆರಳಿ, ಅಲ್ಲಿ ಶತಯೂಪರ ಆಶ್ರಮದಲ್ಲಿ ವೇದವ್ಯಾಸರ ಆಜ್ಞೆಯಂತೆ ಅವರು ಉಪದೇಶಿಸಿದ ಕ್ರಮದಂತೆ ತಪಸ್ಸನ್ನು ಆಚರಿಸುವುದು.

ವೈಶಂಪಾಯನಃ

ತತೋ ಭಾಗೀರಥೀತೀರೇ ಮಧ್ಯೇ ಪುಣ್ಯಜನೋಚಿತೇ ।
ನಿವಾಸಮಕರೋದ್ ರಾಜಾ ವಿದುರಸ್ಯ ಮತೇ ಸ್ಥಿತಃ ॥೧॥

ವೈಶಂಪಾಯನ– ಅನಂತರ ರಾಜನಾದ ಧೃತರಾಷ್ಟ್ರನು ಪುಣ್ಯಾತ್ಮರಿಗೆ ಯೋಗ್ಯವಾದ ಭಾಗೀರಥಿಯ ತೀರದ ಮಧ್ಯದಲ್ಲಿ ವಿದುರನ ಅಭಿಪ್ರಾಯಕ್ಕೆ ಅನುಗುಣವಾಗಿ ವಾಸಸ್ಥಾನವನ್ನು ಏರ್ಪಡಿಸಿದನು.

ತತ್ರೈನಂ ಪರ್ಯುಪಾತಿಷ್ಠನ್ ಬ್ರಾಹ್ಮಣಾ ರಾಷ್ಟ್ರವಾಸಿನಃ ।
ಕ್ಷತ್ರವಿಟ್-ಶೂದ್ರಸಂಘಾಶ್ಚ ಬಹವೋ ಭರತರ್ಷಭ ॥೨॥

ಹೇ ಭರತರ್ಷಭನೇ, ಆ ವಾಸಸ್ಥಾನದಲ್ಲಿ ಈ ರಾಜನನ್ನು ರಾಷ್ಟ್ರವಾಸಿಗಳಾದ ಅನೇಕ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರ ಸಮೂಹದವರೂ ಸೇರಿದರು.

ಸ ತೈಃ ಪರಿವೃತೋ ರಾಜಾ ಕಥಾಭಿರಭಿನಂದ್ಯ ತಾನ್ ।
ಅನುಜಜ್ಞೇ ಸಶಿಷ್ಯಾನ್ ವೈ ವಿಧಿವತ್ ಪ್ರತಿಪೂಜ್ಯ ಚ ॥೩॥

ರಾಷ್ಟ್ರವಾಸಿಗಳಿಂದ ಸುತ್ತುವರಿಯಲ್ಪಟ್ಟ ಆ ರಾಜನು ತಮ್ಮ ಶಿಷ್ಯರೊಂದಿಗೆ ಬಂದ ಅವರೆಲ್ಲರನ್ನೂ ಮಾತನಾಡಿಸಿ, ಅಭಿನಂದಿಸಿ, ವಿಧಿವತ್ತಾಗಿ ಅವರನ್ನು ಗೌರವಿಸಿ ತನ್ನೊಂದಿಗೆ ಇರಲು ಅನುಮತಿಸಿದನು.

ಸಾಯಾಹ್ನೇ ಸ ಮಹೀಪಾಲಸ್ತತೋ ಗಂಗಾಮುಪೇತ್ಯ ಚ ।
ಚಕಾರ ವಿಧಿವಚ್ಚೌಚಂ ಗಾಂಧಾರೀ ಚ ಯಶಸ್ವಿನೀ ॥೪॥

ಸಾಯಂಕಾಲದ ಹೊತ್ತಿನಲ್ಲಿ ಆ ರಾಜನು ಗಂಗೆಯನ್ನು ಸಮೀಪಿಸಿ ವಿಧಿವತ್ತಾಗಿ ಶೌಚವನ್ನು ಆಚರಿಸಿದನು. ಯಶಸ್ವಿನಿಯಾದ ಗಾಂಧಾರಿಯೂ ಕೂಡ ಶೌಚವನ್ನು ನಡೆಸಿದಳು.

ತಥೈವಾನ್ಯೇ ಪೃಥಕ್ ಸರ್ವೇ ತೀರ್ಥೇಷ್ವಾಪ್ಲುತ್ಯ ಭಾರತ ।
ಚಕ್ರುಃ ಸರ್ವಾಃ ಕ್ರಿಯಾಸ್ತತ್ರ ಪುರುಷಾ ವಿದುರಾದಯಃ ॥೫॥

ಹೇ ಭಾರತನೇ, ಅದೇ ರೀತಿಯಾಗಿ ವಿದುರನೇ ಮೊದಲಾದ ಎಲ್ಲ ಪುರುಷರೂ ತೀರ್ಥದಲ್ಲಿ ಮುಳುಗಿ ಪ್ರತ್ಯೇಕವಾಗಿ ಶುದ್ಧೀಕರಣಕ್ಕೆ ಸಂಬಂಧಿಸಿದ ಎಲ್ಲ ಕ್ರಿಯೆಗಳನ್ನೂ ನಡೆಸಿದರು.

ಕೃತಶೌಚಂ ತತೋ ವೃದ್ಧಂ ಶ್ವಶುರಂ ಕುಂತಿಭೋಜಜಾ ।
ಗಾಂಧಾರೀಂ ಚ ಪೃಥಾ ರಾಜನ್ ಗಂಗಾತೀರಮುಪಾನಯತ್ ॥೬॥

ಹೇ ರಾಜನೇ, ಸ್ನಾನಾದಿ ಶೌಚ ಕ್ರಿಯೆಗಳನ್ನು ಮುಗಿಸಿದ ವೃದ್ಧನಾದ ಮಾವನನ್ನು ಮತ್ತು ಗಾಂಧಾರಿಯನ್ನೂ ಕುಂತೀಭೋಜನ ಮಗಳಾದ ಪೃಥೆಯು ಗಂಗಾತೀರಕ್ಕೆ ಕರೆತಂದಳು.

ರಾಜ್ಞಸ್ತು ಯಾಜಕೈಸ್ತತ್ರ ಕೃತೋ ವೇದೀಪರಿಸ್ತರಃ ।
ಜುಹಾವ ತತ್ರ ವಹ್ನೀನ್ ಸ ನೃಪತಿಃ ಸತ್ಯಸಂಗರಃ ॥೭॥

ಆ ಗಂಗಾತೀರದಲ್ಲಿ ಯಜ್ಞಕ್ರಿಯೆಗಳನ್ನು ಬಲ್ಲವರು ರಾಜನಿಗಾಗಿ ಯಜ್ಞವೇದಿಯನ್ನು ನಿರ್ಮಾಣ ಮಾಡಿ, ಸಕಲ ಸಾಮಗ್ರಿಗಳನ್ನೂ ಒಗ್ಗೂಡಿಸಿದರು. ಸತ್ಯಪ್ರತಿಜ್ಞೆಯುಳ್ಳ ಆ ರಾಜನು ಅಲ್ಲಿ ವಹ್ನಿಗಳನ್ನು ಪ್ರತಿಷ್ಠಾಪನೆ ಮಾಡಿ ಹೋಮಿಸಿದನು.

ತತೋ ಭಾಗೀರಥೀತೀರಾತ್ ಕುರುಕ್ಷೇತ್ರಂ ಜಗಾಮ ಸಃ ।
ಸಾನುಗೋ ನೃಪತಿರ್ವಿದ್ವಾನ್ ನಿಯತಃ ಸಂಯತೇಂದ್ರಿಯಃ ॥೮॥

ಅನಂತರ ಪರಿವಾರದಿಂದ ಸಹಿತನಾದ, ವಿದ್ವಾಂಸನಾದ, ನಿಯಮಗಳನ್ನು ಮೈಗೂಡಿಸಿಕೊಂಡು ಇಂದ್ರಿಯನಿಗ್ರಹವನ್ನು ಸಂಪಾದಿಸಿದ ಆ ರಾಜನು ಭಾಗೀರಥೀ ತೀರದಿಂದ ಕುರುಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದನು.

ತತ್ರಾಶ್ರಮಪದಂ ಶ್ರೀಮಾನ್ ಅಭಿಗಮ್ಯ ಸ ಪಾರ್ಥಿವಃ ।
ಆಸಸಾದಾಥ ರಾಜರ್ಷಿಂ ಶತಯೂಪಂ ಮನೀಷಿಣಮ್ ॥೯॥

ಶ್ರೀಮಂತನಾದ ಆ ರಾಜನು ಕುರುಕ್ಷೇತ್ರದಲ್ಲಿರುವ ಒಂದು ಆಶ್ರಮವನ್ನು ಪ್ರವೇಶಿಸಿ ಬುದ್ಧಿಶಾಲಿಯಾದ ಶತಯೂಪನೆಂಬ ರಾಜರ್ಷಿಯನ್ನು ಸೇರಿಕೊಂಡನು.

ಸ ಹಿ ರಾಜಾ ಮಹಾನಾಸೀತ್ ಕೇಕಯೇಷು ಪರಂತಪಃ ।
ಸ್ವಪುತ್ರಂ ಮನುಜೈಶ್ವರ್ಯೇ ನಿವೇಶ್ಯ ವನಮಾವಿಶತ್ ॥೧೦॥

ಆ ಶತಯೂಪರಾಜನು ಕೇಕಯದೇಶದಲ್ಲಿ ಪರಾಕ್ರಮಶಾಲಿಯಾದ ದೊಡ್ಡ ರಾಜನಾಗಿದ್ದನು. ಅವನು ಲೌಕಿಕವಾದ ಐಶ್ವರ್ಯದಲ್ಲಿ ತನ್ನ ಮಗನನ್ನು ಇರಿಸಿ ತಾನೂ ಕಾಡಿಗೆ ಪ್ರವೇಶಿಸಿದ್ದನು.

ತೇನಾಸೌ ಸಹಿತೋ ರಾಜಾ ಯಯೌ ವ್ಯಾಸಾಶ್ರಮಂ ತದಾ ।
ತತ್ರೈವ ವಿಧಿವದ್ ರಾಜನ್ ಪ್ರತ್ಯಗೃಹ್ಣಾತ್ ಕುರೂದ್ವಹಮ್ ॥೧೧॥

ಹೇ ರಾಜನೇ, ಅಂತಹ ಈ ಶತಯೂಪ ರಾಜನು ಧೃತರಾಷ್ಟ್ರನಿಂದ ಸಹಿತನಾಗಿ ವೇದವ್ಯಾಸ ದೇವರ ಆಶ್ರಮಕ್ಕೆ ಹೋಗಿ, ಅಲ್ಲಿಯೇ ವಿಧಿವತ್ತಾಗಿ ಕುರುವಂಶದಲ್ಲಿ ಜನಿಸಿದ ಧೃತರಾಷ್ಟ್ರನನ್ನು ದೀಕ್ಷೆಗಾಗಿ ಒಪ್ಪಿಸಿದನು.

ಸ ದೀಕ್ಷಾಂ ತತ್ರ ಸಂಪ್ರಾಪ್ಯ ರಾಜಾ ಕೌರವನಂದನಃ ।
ಶತಯೂಪಾಶ್ರಮೇ ತಸ್ಮಿನ್ ನಿವಾಸಮಕರೋತ್ ತದಾ ॥೧೨॥

ಕೌರವರಿಗೆ ಸಂತೋಷವನ್ನುಂಟು ಮಾಡಿದ ಆ ರಾಜನು ಅಲ್ಲಿ ದೀಕ್ಷೆಯನ್ನು ಪಡೆದು ಶತಯೂಪ ರಾಜರ್ಷಿಯ ಆಶ್ರಮದಲ್ಲಿ ಸ್ವಲ್ಪ ಕಾಲ ವಾಸ ಮಾಡಿದನು.

ತಸ್ಮೈ ಸರ್ವಂ ವಿಧಿಂ ರಾಜನ್ನಾಚಖ್ಯೌ ಸ ನೃಪಸ್ತದಾ ।
ಆರಣ್ಯಕಂ ಮಹಾರಾಜ ವ್ಯಾಸಸ್ಯಾನುಮತೇ ತದಾ ॥೧೩॥

ಹೇ ರಾಜನೇ, ಆ ಸಮಯದಲ್ಲೇ ಆ ಶತಯೂಪರಾಜನು ವೇದವ್ಯಾಸರ ಅನುಮತಿಯಂತೆ ವಾನಪ್ರಸ್ಥಾಶ್ರಮಕ್ಕೆ ಸಂಬಂಧಿಸಿದ ಎಲ್ಲ ನಿಯಮಗಳನ್ನೂ ತಿಳಿಸಿದನು.

ಏವಂ ಸ ತಪಸಾ ರಾಜಾ ಧೃತರಾಷ್ಟ್ರೋ ಮಹಾಮನಾಃ ।
ಯೋಜಯಾಮಾಸ ಚಾತ್ಮಾನಂ ತಾಂಶ್ಚಾಪ್ಯನುಚರಾಂಸ್ತದಾ ॥೧೪॥

ಹೀಗೆ ಮಹಾಮನಸ್ವಿಯಾದ ಧೃತರಾಷ್ಟ್ರರಾಜನು ತನ್ನನ್ನು ತಪಸ್ಸಿನಲ್ಲಿ ತೊಡಗಿಸಿಕೊಂಡು ತನ್ನ ಅನುಚರರನ್ನೂ ಕೂಡ ತಪಸ್ಸಿನಲ್ಲಿ ತೊಡಗುವಂತೆ ಮಾಡಿದನು.

ತಥೈವ ದೇವೀ ಗಾಂಧಾರೀ ವಲ್ಕಲಾಜಿನವಾಸಿನೀ ।
ಕುಂತ್ಯಾ ಸಹ ಮಹಾರಾಜ ಸಮಾನವ್ರತಚಾರಿಣೀ ॥೧೫॥

ಹೇ ಮಹಾರಾಜನೇ, ಆ ರಾಜನಂತೆಯೇ ಗಾಂಧಾರೀದೇವಿಯೂ ಕೂಡ ನಾರುಮಡಿಗಳನ್ನು ತೊಟ್ಟುಕೊಂಡು ಕುಂತಿಯೊಂದಿಗೆ ಸಮಾನವಾದ ವ್ರತವನ್ನು ನಡೆಸಿದಳು.

ಕರ್ಮಣಾ ಮನಸಾ ವಾಚಾ ಚಕ್ಷುಷಾ ಚಾಪಿ ತೇ ನೃಪ ।
ಸನ್ನಿಯಮ್ಯೇಂದ್ರಿಯಗ್ರಾಮಮಾಸ್ಥಿತಾಃ ಪರಮಂ ತಪಃ ॥೧೬॥

ಧೃತರಾಷ್ಟ್ರನನ್ನೂ ಕೂಡಿಕೊಂಡು ಆ ಎಲ್ಲರೂ ಕೂಡ ತಾವು ಮಾಡುವ ಕೆಲಸಗಳಿಂದ, ಮನಸ್ಸಿನಿಂದ, ಮಾತಿನಿಂದ, ಕಣ್ಣುಗಳಿಂದ ಸರ್ವ ಇಂದ್ರಿಯಗಳನ್ನು ಹತೋಟಿಯಲ್ಲಿರಿಸಿಕೊಂಡು ಉತ್ತಮವಾದ ತಪಸ್ಸನ್ನು ಆಚರಿಸಿದರು.

ತ್ವಗಸ್ಥಿಶೇಷಃ ಪರಿಶುಷ್ಕಮಾಂಸೋ
ಜಟಾಜಿನೀ ವಲ್ಕಲಸಂವೃತಾಂಗಃ ।
ಸ ಪಾರ್ಥಿವಸ್ತತ್ರ ತಪಶ್ಚಚಾರ
ರಾಜರ್ಷಿವತ್ ತೀವ್ರಮಪೇತಮೋಹಃ ॥೧೭॥

ಮೋಹವನ್ನು ಬಿಟ್ಟ ಆ ಧೃತರಾಷ್ಟ್ರರಾಜನು ಶತಯೂಪನ ಆಶ್ರಮದಲ್ಲಿ ಜಟೆಯನ್ನು ಬಿಟ್ಟು, ಅಜಿನ-ವಲ್ಕಲಗಳನ್ನು ಧರಿಸಿ, ಶರೀರದ ಮಾಂಸವೆಲ್ಲ ಒಣಗಿ ಕೇವಲ ಚರ್ಮ, ಮೂಳೆಗಳನ್ನು ಮಾತ್ರ ಇರಿಸಿಕೊಂಡು, ಶತಯೂಪರಾಜನಂತೆಯೇ ತೀವ್ರವಾದ ತಪಸ್ಸನ್ನು ಆಚರಿಸಿದನು.

ಕ್ಷತ್ತಾ ಚ ಧರ್ಮಾರ್ಥವಿದಗ್ರ್ಯಬುದ್ಧಿಃ
ಸಸಂಜಯಸ್ತಂ ನೃಪತಿಂ ಸದಾರಮ್ ।
ಉಪಾಚರದ್ ಘೋರತಪಾ ಮಹಾತ್ಮಾ
ತದಾ ಕೃಶೋ ವಲ್ಕಲಚೀರವಾಸಾಃ ॥೧೮॥

ಧರ್ಮ-ಅರ್ಥಗಳನ್ನು ಚೆನ್ನಾಗಿ ತಿಳಿದ ಶ್ರೇಷ್ಠವಾದ ಬುದ್ಧಿಯುಳ್ಳ ವಿದುರನೂ ಕೂಡ ಸಂಜಯನೊಂದಿಗೆ ನಾರುಮಡಿಗಳನ್ನುಟ್ಟುಕೊಂಡು ಘೋರವಾದ ತಪಸ್ಸಿನಿಂದ ಕೃಶನಾಗಿ ಆ ಧೃತರಾಷ್ಟ್ರರಾಜನನ್ನು ಆದರಪೂರ್ವಕವಾಗಿ ಉಪಚರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರತಪಶ್ಚರ್ಯೋ ನಾಮ ಚತುರ್ವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಶತಯೂಪರ ಆಶ್ರಮಕ್ಕೆ ಧೃತರಾಷ್ಟ್ರನನ್ನು ನೋಡಬಯಸಿದ ನಾರದ-ಪರ್ವತಾದಿಗಳ ಆಗಮನ. ನಾರದರು ಧೃತರಾಷ್ಟ್ರನಿಗೆ 'ಆ ತಪೋವನವು ಸಹಸ್ರ ಚಿತ್ಯನೇ ಮೊದಲಾದ ರಾಜರ್ಷಿಗಳಿಗೆ ಸ್ವರ್ಗವನ್ನು ತಂದುಕೊಟ್ಟಿದೆ' ಎಂಬ ಮಹಿಮೆಯನ್ನು ವಿವರಿಸಿ, ವಿದುರಾದಿಗಳ ಜೊತೆ ಅವನಿಗೂ ಅಲ್ಲಿ ಉತ್ತಮ ಸಿದ್ಧಿಯಾಗುವುದೆಂದು ತಿಳಿಸುವುದು.

ವೈಶಂಪಾಯನಃ

ತತಸ್ತಸ್ಮಿನ್ ಮುನಿಶ್ರೇಷ್ಠಾ ರಾಜಾನಂ ದ್ರಷ್ಟುಮಭ್ಯಯುಃ ।
ನಾರದಃ ಪರ್ವತಶ್ಚೈವ ದೇವಲಶ್ಚ ಮಹಾತಪಾಃ ॥೧॥

ದ್ವೈಪಾಯನಃ ಸಶಿಷ್ಯಶ್ಚ ಸಿದ್ಧಾಶ್ಚಾನ್ಯೇ ಮಹರ್ಷಯಃ ।
ಶತಯೂಪಶ್ಚ ರಾಜರ್ಷಿರ್ವೃದ್ಧಃ ಪರಮಧಾರ್ಮಿಕಃ ॥೨॥

ವೈಶಂಪಾಯನ– ಅನಂತರ ಆ ಧೃತರಾಷ್ಟ್ರನ ಆಶ್ರಮಕ್ಕೆ ಮುನಿಶ್ರೇಷ್ಠರಾದ ನಾರದರು, ಪರ್ವತನು, ಮಹಾತಪಸ್ವಿಯಾದ ದೇವಲನು, ಶಿಷ್ಯರೊಂದಿಗೆ ಕೂಡಿದ ದ್ವೈಪಾಯನರು, ಬೇರೆ ಸಿದ್ಧರಾದ ಮಹರ್ಷಿಗಳೂ ಸೇರಿದಂತೆ ಮುನಿಶ್ರೇಷ್ಠರೂ ಜೊತೆಗೆ ಪರಮಧಾರ್ಮಿಕನಾದ ವೃದ್ಧನಾದ ರಾಜರ್ಷಿಯಾದ ಶತಯೂಪನೂ ರಾಜನನ್ನು ನೋಡಲು ಆಗಮಿಸಿದರು.

ತೇಷಾಂ ಕುಂತೀ ಮಹಾರಾಜ ಪೂಜಾಂ ಚಕ್ರೇ ಯಥಾವಿಧಿ ।
ತಸ್ಯಾಸ್ತೇ ತುಷ್ಟುವುಃ ಸರ್ವೇ ತಾಪಸಾಃ ಪರಿಚರ್ಯಯಾ ॥೩॥

ಹೇ ಮಹಾರಾಜನೇ, ಅವರೆಲ್ಲರಿಗೂ ಕುಂತಿಯು ಶಾಸ್ತ್ರೋಕ್ತವಾಗಿ ಪೂಜೆಯನ್ನು ನೆರವೇರಿಸಿದಳು. ಅವಳ ಆ ಸೇವೆಯಿಂದ ಎಲ್ಲ ಮುನಿಗಳು ಸಂತೋಷಪಟ್ಟರು.

ತತ್ರ ಧರ್ಮ್ಯಾಃ ಕಥಾಸ್ತಾತ ಚಕ್ರುಸ್ತೇ ಪರಮರ್ಷಯಃ ।
ರಮಯಂತೋ ಮಹಾತ್ಮಾನಂ ಧೃತರಾಷ್ಟ್ರಂ ಜನಾಧಿಪಮ್ ॥೪॥

ಹೇ ರಾಜನೇ, ಅಲ್ಲಿ ಆ ಮುನಿಶ್ರೇಷ್ಠರು ಧಾರ್ಮಿಕವಾದ ಮಾತುಕತೆಗಳನ್ನು, ಜನಾಧಿಪತಿಯಾದ ಮಹಾತ್ಮನಾದ ಧೃತರಾಷ್ಟ್ರನನ್ನು ಸಂತೋಷಗೊಳಿಸುತ್ತಾ ನಡೆಸಿದರು.

ಕಥಾಂತರೇ ತು ಕಸ್ಮಿಂಶ್ಚಿದ್ ದೇವರ್ಷಿರ್ನಾರದಸ್ತದಾ ।
ಕಥಾಮಿಮಾಮಕಥಯತ್ ಸರ್ವಪ್ರತ್ಯಕ್ಷದರ್ಶಿವಾನ್ ॥೫॥

ಯಾವುದೋ ಒಂದು ಮಾತುಕತೆಯ ಮಧ್ಯದಲ್ಲಿ, ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಬಲ್ಲ ದೇವರ್ಷಿಯಾದ ನಾರದನು ಈ ಕಥೆಯನ್ನು ಹೇಳಿದನು.

ನಾರದಃ

ಪುರಾ ಪ್ರಜಾಪತಿಸಮೋ ರಾಜಾऽऽಸೀದಕುತೋಭಯಃ ।
ಸಹಸ್ರಚಿತ್ಯ ಇತ್ಯುಕ್ತಃ ಶತಯೂಪಪಿತಾಮಹಃ ॥೬॥

ನಾರದರು– ಹಿಂದೆ ಪ್ರಜಾಪತಿಗೆ ಸದೃಶನಾದ, ಯಾವುದೇ ರೀತಿಯ ಭಯವಿಲ್ಲದ ಈ ಶತಯೂಪನ ಅಜ್ಜನಾದ ಸಹಸ್ರಚಿತ್ಯ ಎಂಬ ಹೆಸರುಳ್ಳ ರಾಜನಿದ್ದನು.

ಸ ಪುತ್ರೇ ರಾಜ್ಯಮಾಸಜ್ಜ್ಯ ಜ್ಯೇಷ್ಠೇ ಪರಮಧಾರ್ಮಿಕೇ ।
ವನಂ ವಿವೇಶ ಧರ್ಮಾತ್ಮಾ ಶತಚಿತ್ಯೋ ಮಹೀಪತಿಃ ॥೭॥

ಆ ಧರ್ಮಾತ್ಮನಾದ ಶತಚಿತ್ಯ ಎಂಬ ರಾಜನು ಪರಮಧಾರ್ಮಿಕನಾದ ಹಿರಿಯ ಮಗನಲ್ಲಿ ರಾಜ್ಯವನ್ನು ಒಪ್ಪಿಸಿ ವನವನ್ನು ಪ್ರವೇಶಿಸಿದನು.

ಸ ಗತ್ವಾ ತಪಸಃ ಪಾರಂ ದೀಪ್ತಃ ಸ ಪೃಥಿವೀಪತಿಃ ।
ಪುರಂದರಸ್ಯ ಸಂಸ್ಥಾನಂ ಪ್ರತಿಪೇದೇ ಮಹಾಮನಾಃ ॥೮॥

ಮಹಾಮನಸ್ವಿಯಾದ ಆ ಮಹಾರಾಜನು ತಪಸ್ಸಿನ ಅಂತಿಮ ಘಟ್ಟವನ್ನು ತಲುಪಿ ದೇದೀಪ್ಯಮಾನನಾಗಿ ಇಂದ್ರಪದವಿಯನ್ನು ಪಡೆದನು.

ದೃಷ್ಟಪೂರ್ವಃ ಸ ಬಹುಶೋ ರಾಜಾ ಸಂಪತತಾ ಮಯಾ ।
ಮಹೇಂದ್ರಸದನೇ ರಾಜಾ ತಪಸಾ ದಗ್ಧಕಿಲ್ಬಿಷಃ ॥೯॥

ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡ ಆ ರಾಜನನ್ನು ಅನೇಕ ಬಾರಿ ಸ್ವರ್ಗಕ್ಕೆ ಹೋದಾಗ ಇಂದ್ರನ ಅರಮನೆಯಲ್ಲಿ ನಾನು ಕಂಡಿರುವೆನು.

ತಥಾ ಶೈಲಾಲಯೋ ರಾಜಾ ಭಗದತ್ತಪಿತಾಮಹಃ ।
ತಪೋಬಲೇನೈವ ನೃಪೋ ಮಹೇಂದ್ರಸದನಂ ಗತಃ ॥೧೦॥

ಹಾಗೆಯೇ ಭಗದತ್ತನ ಅಜ್ಜನಾದ ಶೈಲಾಲಯನೆಂಬ ರಾಜನೂ ತಪಸ್ಸಿನ ಬಲದಿಂದಲೇ ಇಂದ್ರನ ಅರಮನೆಯನ್ನು ಸೇರಿಕೊಂಡಿದ್ದಾನೆ.

ತಥಾ ಪೃಷಧ್ರೋ ನಾಮಾಸೀದ್ ರಾಜಾ ವಜ್ರಧರೋಪಮಃ ।
ಸ ಚಾಪಿ ತಪಸಾ ಲೇಭೇ ನಾಕಪೃಷ್ಠಮಿತೋ ಗತಃ ॥೧೧॥

ಅದೇ ರೀತಿಯಾಗಿ ಇಂದ್ರನಿಗೆ ಸದೃಶನಾದ ಪೃಷಧ್ರನೆಂಬ ರಾಜನಿದ್ದನು. ಅವನೂ ಕೂಡ ಇಲ್ಲಿಂದ ಹೋಗಿ ತಪಸ್ಸಿನಿಂದಲೇ ಸ್ವರ್ಗವನ್ನು ಪಡೆದಿದ್ದಾನೆ.

ಅಸ್ಮಿನ್ನರಣ್ಯೇ ನೃಪತಿಃ ಮಾಂಧಾತುರನಘಾತ್ಮಜಃ ।
ಪುರುಕುತ್ಸಸ್ತಪಃ ಸಿದ್ಧಿಂ ಮಹತೀಂ ಸಮವಾಪ್ತವಾನ್ ॥೧೨॥

ಹಾಗೆಯೇ ಇದೇ ಅರಣ್ಯದಲ್ಲಿಯೇ ಮಾಂಧಾತೃರಾಜನ ಮಗನಾದ, ಪರಿಶುದ್ಧನಾದ ಪುರುಕುತ್ಸರಾಜನು ಹೆಚ್ಚಿನ ತಪಸ್ಸಿದ್ಧಿಯನ್ನು ಪಡೆದಿರುವನು.

ಭಾರ್ಯಾ ಸಮಭವದ್ಯಸ್ಯ ನರ್ಮದಾ ಸರಿತಾಂ ವರಾ ।
ಸೋಽಸ್ಮಿನ್ನರಣ್ಯೇ ನೃಪತಿಸ್ತಪಸ್ತಪ್ತ್ವಾ ದಿವಂ ಗತಃ ॥೧೩॥

ನದಿಗಳಲ್ಲಿ ಶ್ರೇಷ್ಠಳಾದ ನರ್ಮದೆಯು ಯಾವನ ಪತ್ನಿಯಾಗಿದ್ದಳೋ ಅಂತಹ ಇಕ್ಷ್ವಾಕು ವಂಶಜನಾದ ದುರ್ಯೋಧನನೆಂಬ ರಾಜನೂ ಕೂಡ ಇದೇ ಅರಣ್ಯದಲ್ಲಿ ತಪಸ್ಸನ್ನು ನಡೆಸಿ ಸ್ವರ್ಗವನ್ನು ಪಡೆದಿದ್ದಾನೆ.

ಶಶಲೋಮಾ ಚ ರಾಜಾऽऽಸೀದ್ ರಾಜನ್ ಪರಮಧಾರ್ಮಿಕಃ ।
ಸ ಚಾಪ್ಯಸ್ಮಿನ್ ವನೇ ತಪ್ತ್ವಾ ತತೋ ದಿವಮವಾಪ್ತವಾನ್ ॥೧೪॥

ಹೇ ರಾಜನೇ, ಪರಮಧಾರ್ಮಿಕನಾದ ಶತಲೋಮ ಎಂಬ ರಾಜನೂ ಹಿಂದೆ ಇದ್ದನು. ಅವನೂ ಕೂಡ ಇದೇ ಕಾಡಿನಲ್ಲಿ ತಪಸ್ಸನ್ನು ಆಚರಿಸಿ ಸ್ವರ್ಗವನ್ನು ಪಡೆದಿದ್ದಾನೆ.

ದ್ವೈಪಾಯನಪ್ರಸಾದಾಚ್ಚ ತ್ವಮಪೀದಂ ತಪೋವನಮ್ ।
ರಾಜನ್ನವಾಪ್ಯ ದುಷ್ಪ್ರಾಪಾಂ ಸಿದ್ಧಿಮಗ್ರ್ಯಾಂ ಗಮಿಷ್ಯಸಿ ॥೧೫॥

ಹೇ ರಾಜನೇ, ನೀನೂ ಕೂಡ ಈ ತಪೋವನವನ್ನು ಆಶ್ರಯಿಸಿ, ವೇದವ್ಯಾಸ ದೇವರ ಅನುಗ್ರಹದಿಂದ ಸಾಮಾನ್ಯ ಜನರು ಗಳಿಸಲು ಅಶಕ್ಯವಾದ ಉತ್ತಮವಾದ ಸಿದ್ಧಿಯನ್ನು ಹೊಂದುವಿ.

ತ್ವಂ ಚಾಪಿ ರಾಜೇಂದ್ರ ತಥಾ ತಪಸೋಽಂತೇ ಶ್ರಿಯಾ ವೃತಃ ।
ಗಾಂಧಾರೀಸಹಿತೋ ಗಂತಾ ಗತಿಂ ತೇಷಾಂ ಮಹಾತ್ಮನಾಮ್ ॥೧೬॥

ಹೇ ರಾಜೇಂದ್ರನೇ, ನೀನೂ ಕೂಡ ಅವರಂತೆಯೇ ತಪಸ್ಸಿನ ಕೊನೆಯಲ್ಲಿ ಪುಣ್ಯಮಯವಾದ ಸಂಪತ್ತಿನಿಂದ ಕೂಡಿಕೊಂಡು ಆ ಮಹಾತ್ಮರು ಪಡೆದ ಗತಿಯನ್ನೇ ಗಾಂಧಾರೀಸಹಿತನಾಗಿ ಹೊಂದುವಿ.

ಪಾಂಡುಃ ಸ್ಮರತಿ ನಿತ್ಯಂ ಚ ಬಲಹಂತುಃ ಸಮೀಪತಃ ।
ತ್ವಾಂ ಸದೈವ ಮಹೀಪಾಲಃ ಸ ತ್ವಾ ಶ್ರೇಯಸಿ ಯೋಕ್ಷ್ಯತೇ ॥೧೭॥

ನಿನ್ನ ತಮ್ಮನಾದ ಪಾಂಡುವೂ ಕೂಡ ಇಂದ್ರನ ಸಮೀಪದಲ್ಲಿದ್ದುಕೊಂಡು ನಿತ್ಯವೂ ನಿನ್ನನ್ನು ಸ್ಮರಿಸುತ್ತಿದ್ದಾನೆ. ರಾಜನಾದ ಅವನು, ನೀನು ಪುಣ್ಯಮಯ ಲೋಕಗಳನ್ನು ಪಡೆದಾಗ ಸದಾ ನಿನ್ನೊಂದಿಗಿರುವನು.

ತವ ಶುಶ್ರೂಷಯಾ ಚೈವ ಗಾಂಧಾರ್ಯಾಶ್ಚ ಯಶಸ್ವಿನೀ ।
ಭರ್ತುಃ ಸಲೋಕತಾಂ ಕುಂತೀ ಗಮಿಷ್ಯತಿ ವಧೂಸ್ತವ ॥೧೮॥

ಯುಧಿಷ್ಠಿರಸ್ಯ ಜನನೀ ಸ ಹಿ ಧರ್ಮಃ ಸನಾತನಃ ॥೧೯॥

ವಯಮೇವಂ ಪ್ರಪಶ್ಯಾಮೋ ನೃಪತೇ ದಿವ್ಯಚಕ್ಷುಷಾ ॥೨೦॥

ಯುಧಿಷ್ಠಿರನ ಜನನಿಯಾದ, ನಿನ್ನ ಸೊಸೆಯಾದ ಕುಂತಿಯೂ ಕೂಡ ನಿನ್ನ ಹಾಗೂ ಗಾಂಧಾರಿಯ ಸೇವೆ ಮಾಡುವುದರಿಂದಲೇ ಯಶಸ್ಸನ್ನು ಪಡೆದು ಪತಿಯ ಲೋಕವನ್ನೇ ಪಡೆಯುತ್ತಾಳೆ. ಇದೇ ಸನಾತನವಾದ ಧರ್ಮವಾಗಿದೆ. ಹೇ ರಾಜನೇ, ನಾವು ದಿವ್ಯವಾದ ಚಕ್ಷುಸ್ಸಿನಿಂದ ಇವೆಲ್ಲವನ್ನೂ ನೋಡಬಲ್ಲೆವು.

ಪ್ರವೇಕ್ಷ್ಯತಿ ಸ್ವಮಾತ್ಮಾನಂ ವಿದುರಸ್ತು ಯುಧಿಷ್ಠಿರಮ್ ।
ಸಂಜಯಸ್ತದನುಧ್ಯಾನಾತ್ ಪೂತಃ ಸ್ವರ್ಗಮವಾಪ್ಸ್ಯತಿ ॥೨೧॥

ವಿದುರನಾದರೂ ತನ್ನ ಸ್ವರೂಪನಾದ ಯುಧಿಷ್ಠಿರನನ್ನು ಪ್ರವೇಶಿಸಲಿದ್ದಾನೆ. ಅನಂತರ ಸಂಜಯನೂ ಧ್ಯಾನದಿಂದ ಪವಿತ್ರನಾಗಿ ಸ್ವರ್ಗವನ್ನು ಪಡೆಯಲಿರುವನು.

ವೈಶಂಪಾಯನಃ

ಏತಚ್ಛ್ರುತ್ವಾ ಕೌರವೇಂದ್ರೋ ಮಹಾತ್ಮಾ
ಸಹೈವ ಪತ್ನ್ಯಾ ಪ್ರೀತಿಮಾನ್ ಪ್ರತ್ಯಗೃಹ್ಣಾತ್ ।
ವಿದ್ವಾನ್ ವಾಕ್ಯಂ ನಾರದಸ್ಯ ಪ್ರಶಸ್ಯ
ಚಕ್ರೇ ಪೂಜಾಂ ಚಾತುಲಾಂ ನಾರದಾಯ ॥೨೨॥

ವೈಶಂಪಾಯನ– ಇದನ್ನು ಕೇಳಿ ಮಹಾತ್ಮನಾದ ಕೌರವೇಂದ್ರನು ಪತ್ನಿಯ ಜೊತೆಗೆ ನಾರದರ ವಾಕ್ಯವನ್ನು ಪ್ರೀತಿಯಿಂದ ಗೌರವಪೂರ್ವಕವಾಗಿ ಸ್ವೀಕರಿಸಿದನು. ಆ ವಾಕ್ಯದ ಭಾವವನ್ನು ತಿಳಿದು ನಾರದರಿಗೆ ಎಣೆಯಿಲ್ಲದ ರೀತಿಯಲ್ಲಿ ಗೌರವವನ್ನು ಸಲ್ಲಿಸಿದನು.

ತದಾ ಸರ್ವೇ ನಾರದಂ ವಿಪ್ರಸಂಘಾಃ
ಸಂಪೂಜಯಾಮಾಸುರತೀವ ರಾಜನ್ ।
ರಾಜ್ಞಃ ಪ್ರೀತಾ ಧೃತರಾಷ್ಟ್ರಸ್ಯ ತೇ ವೈ
ಪುನಃ ಪುನಃ ಸಂಪ್ರಹೃಷ್ಟಾಸ್ತದಾನೀಮ್ ॥೨೩॥

ಆಗ ಅಲ್ಲಿ ಸೇರಿದ ಎಲ್ಲ ಬ್ರಾಹ್ಮಣರ ಸಮೂಹದವರು ನಾರದರನ್ನು ಅತಿಯಾಗಿ ಪೂಜಿಸಿದರು. ಹೇ ರಾಜನೇ, ಧೃತರಾಷ್ಟ್ರ ರಾಜನ ಬಗ್ಗೆ ಪ್ರೀತಿಯುಳ್ಳ ಅವರೆಲ್ಲರೂ ಮತ್ತೆ ಮತ್ತೆ ಸಂತೋಷಗೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ನಾರದವಚನಂ ನಾಮ ಪಂಚವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಶತಯೂಪನ ಪ್ರಶ್ನೆಗೆ ಉತ್ತರಿಸುತ್ತಾ ನಾರದರು ಧೃತರಾಷ್ಟ್ರನಿಗೆ
ಮೂರು ವರ್ಷದ ನಂತರ ಗಾಂಧಾರಿಯೊಂದಿಗೆ ಕುಬೇರ
ಲೋಕಪ್ರಾಪ್ತಿಯಾಗುವುದೆಂದು ತಿಳಿಸುವುದು.

ವೈಶಂಪಾಯನಃ

ನಾರದಸ್ಯ ತು ತದ್ವಾಕ್ಯಂ ಪ್ರಶಶಂಸುರ್ದ್ವಿಜೋತ್ತಮಾಃ ।
ಶತಯೂಪಸ್ತು ರಾಜರ್ಷಿರ್ನಾರದಂ ವಾಕ್ಯಮಬ್ರವೀತ್ ॥೧॥

ವೈಶಂಪಾಯನ– ನಾರದರ ಆ ವಾಕ್ಯವನ್ನು ದ್ವಿಜಶ್ರೇಷ್ಠರೆಲ್ಲರೂ ಪ್ರಶಂಸೆ ಮಾಡಿದರು. ರಾಜರ್ಷಿಯಾದ ಶತಯೂಪನು ನಾರದರನ್ನು ಕುರಿತು ಮುಂದೆ ಹೇಳುವ ಮಾತುಗಳನ್ನು ಹೇಳಿದನು.

ಶತಯೂಪಃ

ಅಹೋ ಭಗವತಾ ರಾಜ್ಞಃ ಪ್ರೀತಿರಸ್ಯ ವಿವರ್ಧಿತಾ ।
ಸರ್ವಸ್ಯ ಚ ಜನಸ್ಯಾಸ್ಯ ಮಮ ಚೈವ ಮಹಾದ್ಯುತೇ ॥೨॥

ಶತಯೂಪ– ಆಹಾ ಮಹಾಕಾಂತಿಮಯರಾದ ನಾರದರೇ, ಸಂಪನ್ನರಾದ ತಮ್ಮಿಂದ ಈ ರಾಜನ ಬಗ್ಗೆ ಈ ಎಲ್ಲ ಜನರಿಗೂ, ನನಗೂ ಪ್ರೀತಿಯು ಅಧಿಕವಾಗಿದೆ.

ಅಸ್ತಿ ಕಾಚಿದ್ವಿವಕ್ಷಾ ತು ಮಮ ತಾಂ ಗದತಃ ಶೃಣು ।
ಧೃತರಾಷ್ಟ್ರಂ ಪ್ರತಿ ನೃಪಂ ದೇವರ್ಷೇ ಲೋಕಪೂಜಿತಮ್ ॥೩॥

ಹೇ ದೇವರ್ಷಿಯೇ, ಲೋಕಪೂಜಿತನಾದ ರಾಜನಾದ ಧೃತರಾಷ್ಟ್ರನನ್ನು ಕುರಿತು ನನಗೆ ತಿಳಿದುಕೊಳ್ಳಬೇಕಾಗಿರುವುದು ಏನೋ ಇದೆ. ನಾನು ಹೇಳುವುದನ್ನು ಕೇಳಿರಿ.

ಲೋಕವೃತ್ತಾಂತತತ್ತ್ವಜ್ಞೋ ಭವಾನ್ ದಿವ್ಯೇನ ಚಕ್ಷುಷಾ ।
ಯುಕ್ತಃ ಪಶ್ಯತು ದೇವರ್ಷೇ ಗತಯೋ ವಿವಿಧಾ ನೃಣಾಮ್ ॥೪॥

ಹೇ ದೇವರ್ಷಿಯೇ, ತಾವು ದಿವ್ಯವಾದ ಚಕ್ಷುಸ್ಸಿನಿಂದ ಕೂಡಿದವರಾಗಿ, ಲೋಕ ವೃತ್ತಾಂತದ ತತ್ತ್ವಗಳನ್ನು ತಿಳಿದವರಾಗಿ ಮನುಷ್ಯರ ನಾನಾ ರೀತಿಯ ಗತಿಗಳನ್ನು ನೋಡಬಲ್ಲಿರಿ.

ಉಕ್ತವಾನ್ ನೃಪತೀಶಾನ್ ತ್ವಂ ಮಹೇಂದ್ರಸಮಲೋಕಗಾನ್ ।
ನ ತ್ವಸ್ಯ ನೃಪತೇರ್ಲೋಕಾಃ ಕಥಿತಾಸ್ತೇ ಮಹಾಮುನೇ ॥೫॥

ಮಹಾಮುನಿಗಳೇ, ಇಂದ್ರಲೋಕಕ್ಕೆ ಸದೃಶವಾದ ಲೋಕಗಳನ್ನು ಪಡೆದಿರುವ ರಾಜಶ್ರೇಷ್ಠರ ಬಗ್ಗೆ ನೀವು ಹೇಳಿದಿರಿ. ಆದರೆ ಈ ಧೃತರಾಷ್ಟ್ರರಾಜನಿಗೆ ಯಾವ ಲೋಕಗಳು ಸಿಗುವುದೆಂದು ಹೇಳಲಿಲ್ಲ.

ಸ್ಥಾನಮಸ್ಯ ಕ್ಷಿತಿಪತೇಃ ಶ್ರೋತುಮಿಚ್ಛಾಮ್ಯಹಂ ವಿಭೋ ।
ತತ್ತಃ ಕೀದೃಕ್ ಕದಾ ಚೇತಿ ತನ್ಮಾಚಕ್ಷ್ವ ಪೃಚ್ಛತಃ ॥೬॥

ಹೇ ವಿಭೋ, ನಿಮ್ಮಿಂದ ಈ ಧೃತರಾಷ್ಟ್ರರಾಜನಿಗೆ ಎಂತಹ ಸ್ಥಾನವು ಸಿಗುವುದು? ಮತ್ತು ಯಾವಾಗ ಸಿಗುವುದು? ಎಂಬುದನ್ನು ಕೇಳಬಯಸುತ್ತೇನೆ. ಆ ಬಗ್ಗೆ ನಮಗೆ ತಿಳಿಸಿರಿ.

ವೈಶಂಪಾಯನಃ

ಇತ್ಯುಕ್ತೋ ನಾರದಸ್ತೇನ ವಾಕ್ಯಂ ಸರ್ವಮನೋನುಗಮ್ ।
ವ್ಯಾಜಹಾರ ಸತಾಂ ಮಧ್ಯೇ ದಿವ್ಯದರ್ಶೀ ಮಹಾತಪಾಃ ॥೭॥

ವೈಶಂಪಾಯನ– ಈ ರೀತಿ ಎಲ್ಲರ ಮನಸ್ಸಿನಲ್ಲಿರುವ ಮಾತನ್ನು ಶತಯೂಪನು ಕೇಳಿದಾಗ ಮಹಾತಪಸ್ವಿಯಾದ, ದಿವ್ಯದೃಷ್ಟಿಯುಳ್ಳ ನಾರದರು ಈ ಬಗ್ಗೆ ತಿಳಿಸಿದರು.

ನಾರದಃ

ಯದೃಚ್ಛಯಾ ಶಕ್ರಸದೋ ಗತ್ವಾ ಶಕ್ರಂ ಶಚೀಪತಿಮ್ ।
ದೃಷ್ಟವಾನಸ್ಮಿ ರಾಜೇಂದ್ರ ತತ್ರ ಪಾಂಡುಂ ನೃಪಂ ತದಾ ॥೮॥

ನಾರದರು– ಹೇ ರಾಜೇಂದ್ರನೇ, ಸ್ವಚ್ಛಂದವಾಗಿ ಸಂಚರಿಸುವ ನಾನೊಮ್ಮೆ ಇಂದ್ರಸಭೆಗೆ ಹೋಗಿ, ಅಲ್ಲಿ ಶಚೀಪತಿಯಾದ ಇಂದ್ರನನ್ನೂ, ಅದೇ ಸಮಯದಲ್ಲಿ ರಾಜನಾದ ಪಾಂಡುವನ್ನೂ ನೋಡಿರುವೆನು.

ತತ್ರೇಯಂ ಧೃತರಾಷ್ಟ್ರಸ್ಯ ಕಥಾ ಸಮಭವನ್ನೃಪ ।
ತಪಸೋ ದುಶ್ಚರಸ್ಯಾಸ್ಯ ಯದಯಂ ತಪ್ಸ್ಯತೇ ನೃಪಃ ॥೯॥

ಹೇ ನೃಪನೇ, ಅಲ್ಲಿ ಧೃತರಾಷ್ಟ್ರನ ಬಗ್ಗೆ ಮತ್ತು ಈ ರಾಜನು ಮಾಡಲಿರುವ ಕಷ್ಟಕರವಾದ ಈ ತಪಸ್ಸಿನ ಬಗ್ಗೆ ಮಾತುಕತೆ ನಡೆದಿತ್ತು.

ತತ್ರಾಹಮಿದಮಶ್ರೌಷಂ ಶಕ್ರಸ್ಯ ವದತೋ ದಿವಿ ।
ವರ್ಷಾಣಿ ತ್ರೀಣಿ ಶಿಷ್ಟಾನಿ ರಾಜ್ಞೋಽಸ್ಯ ಪರಮಾಯುಷಃ ॥೧೦॥

ಆ ದೇವಲೋಕದಲ್ಲಿ ಇಂದ್ರನು ಹೇಳುವ ಇದನ್ನು ನಾನು ಕೇಳಿರುವೆನು. ಈ ರಾಜನ ಪೂರ್ಣಾಯುಷ್ಯದಲ್ಲಿ ಮೂರು ವರ್ಷಗಳು ಉಳಿದಿವೆ.

ತತಃ ಕುಬೇರಭವನಂ ಗಾಂಧಾರೀಸಹಿತೋ ನೃಪಃ ।
ವಿಹರ್ತಾ ಧೃತರಾಷ್ಟ್ರೋಽಯಂ ರಾಜರಾಜಾಭಿಪೂಜಿತಃ ॥೧೧॥

ಅನಂತರ ಗಾಂಧಾರೀಸಹಿತನಾದ ಈ ಧೃತರಾಷ್ಟ್ರರಾಜನು ಕುಬೇರನಿಂದ ಗೌರವಿಸಲ್ಪಟ್ಟವನಾಗಿ ಕುಬೇರನ ಅರಮನೆಯಲ್ಲಿ ವಿಹರಿಸುತ್ತಾನೆ.

ಕಾಮಗೇನ ವಿಮಾನೇನ ದಿವ್ಯಾಭರಣಭೂಷಿತಃ ।
ಋಷಿಪುತ್ರೋ ಮಹಾಭಾಗಸ್ತಪಸಾ ದಗ್ಧಕಿಲ್ಬಿಷಃ ॥೧೨॥

ಸಂಚರಿಷ್ಯತಿ ಲೋಕಾಂಶ್ಚ ದೇವಗಂಧರ್ವರಕ್ಷಸಾಮ್ ।
ಸ್ವಚ್ಛಂದೇನೇತಿ ಧರ್ಮಾತ್ಮಾ ವ್ಯಾಸಸ್ಯ ತು ತಪೋಬಲಾತ್ ॥೧೩॥

ಮಹಾತ್ಮನಾದ ವೇದವ್ಯಾಸ ಋಷಿಗಳ ಮಗನಾದ, ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡ ಧರ್ಮಾತ್ಮನಾದ ಇವನು ದಿವ್ಯಾಭರಣಗಳಿಂದ ಭೂಷಿತನಾಗಿ ವೇದವ್ಯಾಸರ ತಪೋಬಲದಿಂದ ಬಯಸಿದಲ್ಲಿ ಕೊಂಡೊಯ್ಯುವ ವಿಮಾನದಿಂದ ದೇವ-ಗಂಧರ್ವ-ರಾಕ್ಷಸರ ಲೋಕಗಳನ್ನೂ ಸ್ವಚ್ಛಂದವಾಗಿ ಸಂಚರಿಸುತ್ತಾನೆ.

ದೇವಗುಹ್ಯಮಿದಂ ಪ್ರೀತ್ಯಾ ಮಯಾ ವಃ ಕಥಿತಂ ಮಹತ್ ।
ಭವಂತೋ ಹಿ ಶ್ರುತಧನಾಸ್ತಪಸಾ ದಗ್ಧಕಿಲ್ಬಿಷಾಃ ॥೧೪॥

ನೀವು ವೇದವಿದ್ಯೆಯನ್ನು ಚೆನ್ನಾಗಿ ಅಧ್ಯಯನ ಮಾಡಿ, ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡಿರುವಿರಿ. ಹಾಗಾಗಿ ನಿಮ್ಮ ಮೇಲಿನ ಪ್ರೀತಿಯಿಂದ ಈ ಮಹತ್ತಾದ ವೇದಗುಹ್ಯವನ್ನು ನಾನು ಹೇಳಿದ್ದೇನೆ.

ವೈಶಂಪಾಯನಃ

ಇತಿ ತೇ ತಸ್ಯ ತಚ್ಛ್ರುತ್ವಾ ದೇವರ್ಷೇರ್ಮಧುರಂ ವಚಃ ।
ಸರ್ವೇ ಸುಮನಸಃ ಪ್ರೀತಾ ಬಭೂವುಃ ಸ ಚ ಪಾರ್ಥಿವಃ ॥೧೫॥

ವೈಶಂಪಾಯನ– ಹೀಗೆ ದೇವರ್ಷಿಯಾದ ನಾರದರು ಹೇಳಿದ ಈ ಮಧುರವಾದ ಮಾತುಗಳನ್ನು ಕೇಳಿ, ಅಲ್ಲಿರುವ ಎಲ್ಲರೂ ಸಮಾಧಾನ ಮತ್ತು ಸಂತೋಷದಿಂದ ಕೂಡಿದರು. ಆ ರಾಜನೂ ಕೂಡ ಸಂತೋಷಪಟ್ಟನು.

ಏವಂ ಕಥಾಭಿರನ್ವಾಸ್ಯ ಧೃತರಾಷ್ಟ್ರಂ ಮನೀಷಿಣಮ್ ।
ವಿಪ್ರಜಗ್ಮುರ್ಯಥಾಕಾಮಂ ತೇ ಸಿದ್ಧಗತಿಮಾಸ್ಥಿತಾಃ ॥೧೬॥

ಹೀಗೆ ಅಲ್ಲಿ ಸೇರಿದ ಎಲ್ಲರೂ ಮಾತುಕತೆಗಳಿಂದ ಬುದ್ಧಿವಂತನಾದ ಧೃತರಾಷ್ಟ್ರನನ್ನು ಸಂತೋಷಗೊಳಿಸಿ, ಸಿದ್ಧ-ಚಾರಣರ ಗತಿಯನ್ನು ಅನುಸರಿಸುವವರಾಗಿ ತಾವು ಇಚ್ಛೆಪಟ್ಟಲ್ಲಿಗೆ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ನಾರದವಚನಂ ನಾಮ ಷಟ್‌ವಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಷಟ್‌ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಕುಂತಿ ಹಾಗೂ ಧೃತರಾಷ್ಟ್ರಾದಿಗಳ ವನಗಮನದಿಂದ ಕಂಗೆಟ್ಟ ಯುಧಿಷ್ಠಿರಾದಿಗಳು ಅದರ ಜೊತೆಗೆ ಅಭಿಮನ್ಯುವೇ ಮೊದಲಾದ ಬಂಧುಜನರನ್ನು ಸ್ಮರಿಸಿ, ಶೋಕಾವಿಷ್ಟರಾಗಿ ತಮ್ಮ ತಮ್ಮ ನಿತ್ಯಕರ್ಮಗಳಲ್ಲೂ ಅನಾಸಕ್ತಿಯನ್ನು ತೋರುವುದು.

ವೈಶಂಪಾಯನಃ

ಏವಂ ಗತೇ ಕೌರವೇಂದ್ರೇ ದುಃಖಶೋಕಸಮಾಹತಾಃ ।
ಬಭೂವುಃ ಪಾಂಡವಾ ರಾಜನ್ ಮಾತೃಶೋಕೇನ ಚಾರ್ದಿತಾಃ ॥೧॥

ತಥಾ ಪೌರಜನಾಃ ಸರ್ವೇ ಶೋಚಂತಸ್ತಂ ನರಾಧಿಪಮ್ ॥೨॥

ವೈಶಂಪಾಯನ– ಹೀಗೆ ಕೌರವೇಂದ್ರನಾದ ಧೃತರಾಷ್ಟ್ರನು ಕಾಡಿಗೆ ಹೋದ ನಂತರ ಪಾಂಡವರು ದುಃಖ ಹಾಗೂ ಶೋಕಗಳಿಂದ ಕಂಗೆಟ್ಟರು. ಜೊತೆಗೆ ತಾಯಿಯನ್ನು ಕಳೆದುಕೊಂಡ ಶೋಕದಿಂದಲೂ ತತ್ತರಿಸಿದವರಾದರು. ಅಂತೆಯೇ ಎಲ್ಲ ಪುರಜನರೂ ಆ ರಾಜನ ವಿಷಯವಾಗಿ ಚಿಂತೆಗೀಡಾದರು.

ತತ್ರ ತತ್ರ ಕಥಾ ಹ್ಯಾಸನ್ ದ್ವಿಜಾನಾಂ ಕೌರವಾನ್ ಪ್ರತಿ ॥೩॥

ಹಾಗೆಯೇ ಅಲ್ಲಲ್ಲಿ ಬ್ರಾಹ್ಮಣರು ಕೌರವರ ಕುರಿತಾಗಿ ಮಾತುಕತೆಗಳನ್ನು ಆಡಿಕೊಂಡರು.

ದ್ವಿಜಾಃ

ಕಥಂ ನು ರಾಜಾ ವೃದ್ಧಃ ಸ ವನೇ ವಸತಿ ನಿರ್ಜನೇ ।
ಗಾಂಧಾರೀ ಚ ಮಹಾಭಾಗಾ ಸಾ ಚ ಕುಂತೀ ಪೃಥಾ ಕಥಮ್ ॥೪॥

ಬ್ರಾಹ್ಮಣರು– ವೃದ್ಧನಾದ ಧೃತರಾಷ್ಟ್ರರಾಜನು ನಿರ್ಜನವಾದ ಕಾಡಿನಲ್ಲಿ ಹೇಗೆ ತಾನೇ ವಾಸಮಾಡಬಲ್ಲ? ಹಾಗೆಯೇ ಮಹಾತ್ಮಳಾದ ಗಾಂಧಾರಿಯೂ, ಪೃಥೆ ಎನಿಸಿದ ಕುಂತೀದೇವಿಯೂ ಹೇಗೆ ತಾನೇ ಇರಬಲ್ಲರು?

ಸುಖಾರ್ಹಃ ಸ ಹಿ ರಾಜರ್ಷಿಃ ಅಸುಖೀ ತನ್ಮಹಾವನಮ್ ।
ಕಿಮವಸ್ಥಃ ಸಮಾಸಾದ್ಯ ಪ್ರಜ್ಞಾಚಕ್ಷುರ್ಮಹಾಮನಾಃ ॥೫॥

ಸುಖಪಡಲು ಯೋಗ್ಯನಾದ ಆ ರಾಜರ್ಷಿಯು ಸುಖವನ್ನು ಬಿಟ್ಟು ಕೇವಲ ಪ್ರಜ್ಞೆಯೇ ಕಣ್ಣುಗಳುಳ್ಳವನಾಗಿ, ಮನೋನಿಗ್ರಹವುಳ್ಳವನಾಗಿ ಆ ದೊಡ್ಡ ಕಾಡನ್ನು ಹೊಂದಿ ಯಾವ ಅವಸ್ಥೆಯಲ್ಲಿರುವನು?

ಸುದುಷ್ಕರಂ ಕೃತವತೀ ಕುಂತೀ ಪುತ್ರಾನಪಾಸ್ಯ ಸಾ ।
ರಾಜ್ಯಶ್ರಿಯಂ ಚ ಸಂತ್ಯಜ್ಯ ವನವಾಸಮರೋಚಯತ್ ॥೬॥

ಆ ಕುಂತಿಯಾದರೂ ಮಕ್ಕಳನ್ನು ಬಿಟ್ಟು ಬಹಳ ಕಷ್ಟಕರವಾದ ನಿರ್ಧಾರವನ್ನು ಮಾಡಿರುವಳು. ಏಕೆಂದರೆ ರಾಜ್ಯದ ಸಂಪತ್ತನ್ನು ಬಿಟ್ಟು ವನವಾಸವನ್ನು ಅವಳು ಇಚ್ಛೆ ಪಟ್ಟಿರುವಳು.

ವಿದುರಃ ಕಿಮವಸ್ಥಶ್ಚ ಭ್ರಾತುಃ ಶುಶ್ರೂಷುರಾತ್ಮವಾನ್ ।
ಸ ವೈ ಗಾವಲ್ಗಣಿರ್ಧೀಮಾನ್ ಭರ್ತೃಪಿಂಡಾನುಪಾಲಕಃ ॥೭॥

ಸಹೋದರನನ್ನು ಸೇವೆಗೈಯ್ಯುವ ಆತ್ಮವಂತನಾದ ಆ ವಿದುರನು ಈಗ ಯಾವ ಅವಸ್ಥೆಯಲ್ಲಿರುವನು? ಅಲ್ಲದೇ ಧೀಮಂತನಾದ, ಯಜಮಾನನ ಆಜ್ಞೆಯನ್ನು ಚಾಚೂ ತಪ್ಪದೇ ಪಾಲಿಸುವ, ಗಾವಲ್ಗಣಿಯಾದ ಆ ಸಂಜಯನಾದರೂ ಹೇಗಿರುವನು?

ವೈಶಂಪಾಯನಃ

ಅಕುಮಾರಂ ಚ ಪೌರಾಸ್ತೇ ಚಿಂತಾಶೋಕಪರಾಯಣಾಃ ।
ತತ್ರ ತತ್ರ ಕಥಾಂಚಕ್ರುಃ ಸಮಾಸಾದ್ಯ ಪರಸ್ಪರಮ್ ॥೮॥

ವೈಶಂಪಾಯನ– ಮಕ್ಕಳಾದಿಯಾಗಿ ಆ ಎಲ್ಲ ಪುರಜನರು ಚಿಂತೆ ಮತ್ತು ಶೋಕದಲ್ಲಿ ಮುಳುಗಿದವರಾಗಿ ಪರಸ್ಪರವಾಗಿ ಇದೇ ವಿಷಯವನ್ನೇ ಆಡುತ್ತಿದ್ದರು.

ಪಾಂಡವಶ್ಚಾಪಿ ತೇ ಸರ್ವೇ ಭೃಶಂ ಶೋಕಪರಾಯಣಾಃ ।
ಶೋಚಂತೋ ಮಾತರಂ ವೃದ್ಧಾಮೂಷುರ್ನಾತಿಚಿರಂ ಪುರೇ ॥೯॥

ಆ ಎಲ್ಲ ಪಾಂಡವರಾದರೂ ಅತಿಯಾದ ಶೋಕದಿಂದ ತತ್ತರಿಸಿದವರಾಗಿ ವಯಸ್ಸಾದ ತಾಯಿಯ ಕುರಿತು ದುಃಖಪಡುತ್ತಾ ಬಹಳ ಕಾಲ ಪಟ್ಟಣದಲ್ಲಿ ವಾಸ ಮಾಡಲು ಶಕ್ತರಾಗಲಿಲ್ಲ.

ತಥೈವ ವೃದ್ಧಂ ಪಿತರಂ ಹತಪುತ್ರಂ ಜನೇಶ್ವರಮ್ ।
ಗಾಂಧಾರೀಂ ಚ ಮಹಾಭಾಗಾಂ ವಿದುರಂ ಚ ಮಹಾಮತಿಮ್ ॥೧೦॥

ಹಾಗೆಯೇ ಮಕ್ಕಳನ್ನು ಕಳೆದುಕೊಂಡ ವೃದ್ಧನಾದ ರಾಜನಾಗಿದ್ದ ತಂದೆಯನ್ನೂ, ಮಹಾತ್ಮಳಾದ ಗಾಂಧಾರಿಯನ್ನೂ, ಬಹುಬುದ್ಧಿಶಾಲಿಯಾದ ವಿದುರನನ್ನೂ ನೆನಪಿಸಿಕೊಂಡು ಕಷ್ಟಪಟ್ಟರು.

ತೇಷಾಂ ಭೋಗೇಷ್ವಭೂತ್ ಪ್ರೀತಿರ್ನ ತಾಂಶ್ಚಿಂತಯತಾಂ ತದಾ ।
ನ ರಾಜ್ಯೇ ನ ಚ ನಾರೀಷು ನ ವೇದಾಧ್ಯಯನೇ ತಥಾ ॥೧೧॥

ಹೀಗೆ ವನವಾಸಕ್ಕೆ ತೆರಳಿದವರ ಬಗ್ಗೆಯೇ ಚಿಂತಿಸುತ್ತಿರುವ ಅವರಿಗೆ ಆ ಸಮಯದಲ್ಲಿ ಭೋಗಗಳ ಮೇಲಾಗಲೀ, ರಾಜ್ಯದಲ್ಲಾಗಲೀ, ಸ್ತ್ರೀಯರಲ್ಲಾಗಲೀ ಹಾಗೆಯೇ ವೇದಾಧ್ಯಯನದಲ್ಲಾಗಲೀ ಆಸಕ್ತಿಯೇ ಉಳಿಯಲಿಲ್ಲ.

ಪರಂ ನಿರ್ವೇದಮಗಮನ್ ಚಿಂತಯಂತೋ ನರಾಧಿಪಮ್ ।
ತಂ ಚ ಜ್ಞಾತಿವಧಂ ಘೋರಂ ಸಂಸ್ಮರಂತಃ ಪುನಃ ಪುನಃ ॥೧೨॥

ಅಭಿಮನ್ಯೋಶ್ಚ ಬಾಲಸ್ಯ ವಿನಾಶಂ ರಣಮೂರ್ಧನಿ ।
ಕರ್ಣಸ್ಯ ಚ ಮಹಾಬಾಹೋಃ ಸಂಗ್ರಾಮೇಷ್ವಪಲಾಯಿನಃ ॥೧೩॥

ರಾಜನ ಬಗ್ಗೆಯೇ ಚಿಂತಿಸುತ್ತಾ ಮತ್ತು ಘೋರವಾದ ಬಂಧುಗಳ ಮರಣವನ್ನೂ ಚಿಂತಿಸುತ್ತಾ, ಮತ್ತೆ ಮತ್ತೆ ರಣಾಂಗಣದಲ್ಲಿ ಬಾಲನಾದ ಅಭಿಮನ್ಯುವಿನ ಮರಣವನ್ನೂ ಚಿಂತಿಸುತ್ತಾ, ಅಲ್ಲದೇ ಯುದ್ಧದಲ್ಲಿ ಪಲಾಯನಗೈಯ್ಯದ ಮಹಾಬಾಹುವಾದ ಕರ್ಣನ ಬಗ್ಗೆ ಚಿಂತಿಸುತ್ತಾ ಬಹುವಾದ ವೈರಾಗ್ಯವನ್ನು ತಾಳಿದರು.

ತಥೈವ ದ್ರೌಪದೇಯಾನಾಮನ್ಯೇಷಾಂ ಸುಹೃದಾಮಪಿ ।
ವಧಂ ಸಂಸ್ಮೃತ್ಯ ತೇ ವೀರಾ ನಾತಿಪ್ರಮನಸೋಽಭವನ್ ॥೧೪॥

ಹಾಗೆಯೇ ದ್ರೌಪದಿಯ ಮಕ್ಕಳ ಹಾಗೂ ಬೇರೆ ಸ್ನೇಹಿತರ ಮರಣವನ್ನು ಸ್ಮರಿಸಿಕೊಂಡ ಆ ವೀರರು ಮನಶ್ಶಾಂತಿಯನ್ನೇ ಕಳೆದುಕೊಂಡರು.

ಹತಪ್ರವೀರಾಂ ಪೃಥಿವೀಂ ಹೃತರತ್ನಾಂ ಚ ಭಾರತ ।
ಸದೈವ ಚಿಂತಯಂತಸ್ತೇ ನ ನಿದ್ರಾಮುಪಲೇಭಿರೇ ॥೧೫॥

ಹೇ ಭಾರತನೇ, ಉತ್ತಮ ವೀರರನ್ನು ಕಳೆದುಕೊಂಡ, ರತ್ನಗಳನ್ನು ಕಳೆದುಕೊಂಡ ಈ ಪೃಥಿವಿಯನ್ನು ಸದಾ ಚಿಂತಿಸುತ್ತಾ ಅವರು ಸರಿಯಾಗಿ ನಿದ್ರೆಯನ್ನೂ ಮಾಡಲಿಲ್ಲ.

ದ್ರೌಪದೀ ಹತಪುತ್ರಾ ಚ ಸುಭದ್ರಾ ಚೈವ ಭಾಮಿನೀ ।
ನಾತಿಪ್ರೀತಿಯುತೇ ದೇವ್ಯೌ ತದಾऽऽಸ್ತಾಮಪ್ರಹೃಷ್ಟವತ್ ॥೧೬॥

ಮಕ್ಕಳನ್ನು ಕಳೆದುಕೊಂಡ ದ್ರೌಪದಿಯೂ ಹಾಗೂ ಮಗನನ್ನು ಕಳೆದುಕೊಂಡ ಭಾಮಿನಿಯಾದ ಸುಭದ್ರೆಯೂ ಸಂಸಾರದಲ್ಲಿ ಪ್ರೀತಿಯನ್ನು ಕಳೆದುಕೊಂಡು ಆಗ ದುಃಖಿತರಾಗಿಯೇ ಇದ್ದರು.

ವೈರಾಟ್ಯಾಸ್ತು ಸುತಂ ದೃಷ್ಟ್ವಾ ಪಿತರಂ ತೇ ಪರೀಕ್ಷಿತಮ್ ।
ಧಾರಯಂತಿ ಸ್ಮ ತೇ ಪ್ರಾಣಾಂಸ್ತವ ಪೂರ್ವಪಿತಾಮಹಾಃ ॥೧೭॥

ಆ ನಿನ್ನ ಅಜ್ಜಂದಿರು ನಿನ್ನ ತಂದೆಯಾದ- ವಿರಾಟರಾಜನ ಮಗಳಾದ ಉತ್ತರೆಯ ಮಗನಾದ ಪರೀಕ್ಷಿತನನ್ನು ನೋಡುತ್ತಾ ತಮ್ಮ ಪ್ರಾಣಗಳನ್ನು ಧರಿಸುವವರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಪಾಂಡವಶೋಕೋ ನಾಮ ಸಪ್ತವಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಕಾಡಿನಲ್ಲಿರುವ ಕುಂತೀ-ಧೃತರಾಷ್ಟ್ರಾದಿಗಳನ್ನು ನೋಡಬೇಕೆಂಬ ಬಯಕೆಯಿಂದ ಯುಧಿಷ್ಠಿರನು ದ್ರೌಪದಿಯೇ ಮೊದಲಾದವರೊಂದಿಗೆ ಹಾಗೂ ಪೌರರು ಮತ್ತು ಸಹೋದರರೊಂದಿಗೆ ಕಾಡಿಗೆ ಹೊರಡುವುದು.

ವೈಶಂಪಾಯನಃ

ಏವಂ ತೇ ಪುರುಷವ್ಯಾಘ್ರಾಃ ಪಾಂಡವಾ ಮಾತೃನಂದನಾಃ ।
ಸ್ಮರಂತೋ ಮಾತರಂ ವೀರಾ ಬಭೂವುರ್ಭೃಶದುಃಖಿತಾಃ ॥೧॥

ವೈಶಂಪಾಯನ– ಹೀಗೆ ಪುರುಷಶ್ರೇಷ್ಠರಾದ, ವೀರರಾದ, ತಾಯಿಯ ಬಗ್ಗೆ ಬಹಳ ಪ್ರೀತಿಯುಳ್ಳ ಆ ಪಾಂಡವರು ತಾಯಿಯನ್ನು ಸ್ಮರಿಸುತ್ತಾ ಬಹಳ ದುಃಖಿತರಾಗಿದ್ದರು.

ಯೇ ರಾಜಕಾರ್ಯೇಷು ಪುರಾ ನಾಮಾದ್ಯಂತ ಕ್ವಚಿನ್ನೃಪ ।
ತೇ ರಾಜಕಾರ್ಯಾಣಿ ತದಾ ನಾಕಾರ್ಷುರ್ಮನಸಾ ಪುರೇ ॥೨॥

ಹೇ ನೃಪನೇ, ಯಾವ ಪಾಂಡವರು ಹಿಂದೆ ರಾಜಕಾರ್ಯಗಳಲ್ಲಿ ಯಾವುದೇ ಕಾರಣಕ್ಕೂ ಪ್ರಮಾದವನ್ನೆಸಗುತ್ತಿರಲಿಲ್ಲವೋ, ಅವರು ತಾಯಿಯ ದುಃಖವುಳ್ಳವರಾಗಿ ಪಟ್ಟಣದಲ್ಲಿ ರಾಜಕಾರ್ಯಗಳನ್ನೂ ಮನಸ್ಸಿಟ್ಟು ಮಾಡಲಿಲ್ಲ.

ಆವಿಷ್ಟಾ ಇವ ಶೋಕೇನ ನಾಭ್ಯನಂದಂತ ಕಿಂಚನ ।
ಸಂಭಾಷ್ಯಮಾಣಾ ಅಪಿ ತೇ ನ ಕಿಂಚಿತ್ ಪ್ರತ್ಯಪೂಜಯನ್ ॥೩॥

ಅವರು ಶೋಕದಿಂದ ಕೂಡಿದವರಾಗಿ ಏನನ್ನೂ ಅಭಿನಂದಿಸಲಿಲ್ಲ. ಯಾರೇ ಬಂದು ಮಾತನಾಡಿಸಿದರೂ ಪ್ರತ್ಯುತ್ತರವನ್ನೂ ನೀಡಲಿಲ್ಲ.

ತೇ ಸ್ಮ ವೀರಾ ದುರಾಧರ್ಷಾ ಗಾಂಭೀರ್ಯೇ ಸಾಗರೋಪಮಾಃ ।
ಶೋಕೋಪಹತವಿಜ್ಞಾನಾ ನಷ್ಟಸಂಜ್ಞಾ ಇವಾಭವನ್ ॥೪॥

ಅನುಸ್ಮರಂತೋ ಜನನೀಂ ತತಸ್ತೇ ಕುರುನಂದನಾಃ ॥೫॥

ವೀರರಾದ ಅವರು ಸಾಗರದಂತೆ ಗಾಂಭೀರ್ಯವುಳ್ಳವರಾಗಿ ಯಾರೂ ತೆಗಳಲು ಸಾಧ್ಯವಾಗದಂತೆ ನಡೆಯುತ್ತಿದ್ದರು. ಅಂತಹ ಕುರುಶ್ರೇಷ್ಠರಾದ ಅವರು ತಾಯಿಯನ್ನು ಮತ್ತೆ ಮತ್ತೆ ಸ್ಮರಿಸುತ್ತಾ ಶೋಕದಿಂದ ವಿವೇಕವನ್ನು ಕಳೆದುಕೊಂಡವರಾಗಿ ಬುದ್ಧಿಯಿಲ್ಲದವರಂತೆ ಆದರು.

ಪಾಂಡವಾಃ

ಕಥಂ ನು ವೃದ್ಧಮಿಥುನಂ ವಹತ್ಯದ್ಯ ಪೃಥಾ ಕೃಶಾ ॥೬॥

ಪಾಂಡವರು– ಉಪವಾಸಾದಿಗಳಿಂದ ಕೃಶಳಾದ ನಮ್ಮ ತಾಯಿಯಾದ ಪೃಥೆಯು ಆ ವೃದ್ಧ ಜೋಡಿಯನ್ನು ಹೇಗೆ ತಾನೇ ಇಂದು ಸಂಭಾಳಿಸಿಯಾಳು?

ಕಥಂ ಚ ಸ ಮಹೀಪಾಲೋ ಹತಪುತ್ರೋ ನಿರಾಶ್ರಯಃ ।
ಪತ್ನ್ಯಾ ಸಹ ವಸತ್ಯೇಕೋ ವನೇ ಶ್ವಾಪದಸೇವಿತೇ ॥೭॥

ಮಕ್ಕಳನ್ನು ಕಳೆದುಕೊಂಡು ಆಶ್ರಯವಿಲ್ಲದಂತಿರುವ ಆ ಧೃತರಾಷ್ಟ್ರನು ಹಿಂಸ್ರಪ್ರಾಣಿಗಳಿಂದ ಕೂಡಿದ ಕಾಡಿನಲ್ಲಿ ಪತ್ನಿಯ ಜೊತೆಯಲ್ಲಿ ಒಬ್ಬನೇ ಹೇಗೆ ವಾಸ ಮಾಡಿಯಾನು?

ಸಾ ಚ ದೇವೀ ಮಹಾಭಾಗಾ ಗಾಂಧಾರೀ ಹತಬಾಂಧವಾ ।
ಪತಿಮಂಧಂ ಕಥಂ ವೃದ್ಧಮನ್ವೇತಿ ವಿಜನೇ ವನೇ ॥೮॥

ಬಾಂಧವರನ್ನು ಕಳೆದುಕೊಂಡ ಮಹಾತ್ಮಳಾದ ಆ ಗಾಂಧಾರೀ ದೇವಿಯು ನಿರ್ಜನವಾದ ಕಾಡಿನಲ್ಲಿ ಕಣ್ಣು ಕಾಣದ ವೃದ್ಧನಾದ ತನ್ನ ಪತಿಯನ್ನು ಹೇಗೆ ತಾನೇ ಅನುಸರಿಸುವಳು?

ವೈಶಂಪಾಯನಃ

ಏವಂ ತೇಷಾಂ ಕಥಯತಾಮೌತ್ಸುಕ್ಯಮಭವತ್ ತದಾ ।
ಗಮನೇ ಚಾಭವದ್ ಬುದ್ಧಿರ್ಧೃತರಾಷ್ಟ್ರದಿದೃಕ್ಷಯಾ ॥೯॥

ವೈಶಂಪಾಯನ– ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ಆ ಪಾಂಡವರಿಗೆ ಧೃತರಾಷ್ಟ್ರಾದಿಗಳನ್ನು ನೋಡಲು ಉತ್ಸುಕತೆಯುಂಟಾಯಿತು ಮತ್ತು ನೋಡಲು ಹೋಗಬೇಕೆಂಬ ಮನಸ್ಸೂ ಉಂಟಾಯಿತು.

ಸಹದೇವಸ್ತು ರಾಜಾನಂ ಪ್ರಣಿಪತ್ಯೇದಮಬ್ರವೀತ್ ॥೧೦॥

ಅದೇ ಸಂದರ್ಭದಲ್ಲಿ ಸಹದೇವನು ರಾಜನಾದ ಯುಧಿಷ್ಠಿರನನ್ನು ನಮಸ್ಕರಿಸಿ ಹೀಗೆ ಹೇಳಿದನು.

ಸಹದೇವಃ

ಅಹೋ ನು ಭವತೋ ದೃಷ್ಟಂ ಹೃದಯಂ ಗಮನಂ ಪ್ರತಿ ॥೧೧॥

ನ ಹಿ ತ್ವಾ ಗೌರವೇಣಾಹಮ್ ಅಶಕಂ ವಕ್ತುಮಾತ್ಮನಾ ।
ಗಮನಂ ಪ್ರತಿ ರಾಜೇಂದ್ರ ತದಿದಂ ಪ್ರತ್ಯುಪಸ್ಥಿತಮ್ ॥೧೨॥

ಸಹದೇವ– ಆಹಾ! ಧೃತರಾಷ್ಟ್ರಾದಿಗಳನ್ನು ನೋಡಲು ಹೋಗಬೇಕೆಂಬ ವಿಷಯದಲ್ಲಿ ನಿಮಗೂ ಮನಸ್ಸಿದೆ ಎಂದು ತಿಳಿಯಿತು. ನನಗೆ ಹೋಗಲು ಮನಸ್ಸಿದ್ದರೂ ನಿಮ್ಮ ಮೇಲಿನ ಗೌರವದಿಂದ ನಾನು ಅದನ್ನು ಹೇಳಲು ಅಸಮರ್ಥನಾಗಿದ್ದೆನು. ಹೇ ರಾಜೇಂದ್ರನೇ, ಈಗ ತಮಗೂ ಮನಸ್ಸಿರುವುದನ್ನು ಕಂಡು ನನಗೂ ಹೋಗಬೇಕೆಂಬ ಆಸೆಯುಂಟಾಗಿದೆ.

ದಿಷ್ಟ್ಯಾ ದ್ರಕ್ಷ್ಯಾಮಿ ತಾಂ ಕುಂತೀಂ ವರ್ತಮಾನಾಂ ತಪಸ್ವಿನೀಮ್ ।
ಜಟಿಲಾಂ ತಾಪಸೀಂ ವೃದ್ಧಾಂ ಕುಶಕಾಶಪರಿಕ್ಷತಾಮ್ ॥೧೩॥

ಜಟೆಯನ್ನು ಧರಿಸಿ ತಾಪಸಿಯ ವೇಷದಲ್ಲಿರುವ, ವೃದ್ಧಳಾದ, ದರ್ಭೆ ಮೊದಲಾದ ಹುಲ್ಲುಗಳಿಂದ ಗಾಯಗೊಂಡಿರುವ, ತಪಸ್ಸನ್ನೂ ನಡೆಸುತ್ತಿರುವ ಆ ನನ್ನ ತಾಯಿಯಾದ ಕುಂತಿಯನ್ನು ಅದೃಷ್ಟವಶಾತ್ ನಾನು ನೋಡಲಿದ್ದೇನೆ.

ಪ್ರಾಸಾದಹರ್ಮ್ಯಸಂವೃದ್ಧಾಮತ್ಯಂತಸುಖಭಾಗಿನೀಮ್ ।
ಕದಾ ನು ಜನನೀಂ ಶ್ರಾಂತಾಂ ದ್ರಕ್ಷ್ಯಾಮಿ ಭೃಶದುಃಖಿತಾಮ್ ॥೧೪॥

ಒಂದು ಕಾಲದಲ್ಲಿ ಸುಖದ ಸುಪತ್ತಿಗೆಯನ್ನು ಅನುಭವಿಸಿ, ಅರಮನೆಯ ಉಪ್ಪರಿಗೆಯಲ್ಲಿ ಬೆಳೆದ, ಈಗ ತಪಸ್ಸಿನಿಂದ ಆಯಾಸಗೊಂಡ, ತುಂಬಾ ದುಃಖಿತಳಾದ ನನ್ನ ತಾಯಿಯನ್ನು ಯಾವಾಗ ನೋಡಿಯೇನು?

ಅನಿತ್ಯಾಃ ಖಲು ಮರ್ತ್ಯಾನಾಂ ಗತಯೋ ಭರತರ್ಷಭ ।
ಕುಂತೀ ರಾಜಸುತಾ ಯತ್ರ ವಸತ್ಯಸುಖಿನೀ ವನೇ ॥೧೫॥

ಹೇ ಭರತಶ್ರೇಷ್ಠನೇ, ಮನುಷ್ಯರ ಸ್ಥಿತಿ-ಗತಿಗಳು ಅನಿತ್ಯ ತಾನೆ? ಏಕೆಂದರೆ ಯಾವಾಗ ಮಕ್ಕಳು ರಾಜರಾಗಿರುವರೋ ಆಗ ಕುಂತಿಯು ದುಃಖಪಡುತ್ತಾ ಕಾಡಿನಲ್ಲಿ ವಾಸವಾಗಿದ್ದಾಳೆ.

ವೈಶಂಪಾಯನಃ

ಸಹದೇವವಚಃ ಶ್ರುತ್ವಾ ದ್ರೌಪದೀ ಯೋಷಿತಾಂ ವರಾ ।
ಉವಾಚ ದೇವೀ ರಾಜಾನಮಭಿಪೂಜ್ಯಾಭಿನಂದ್ಯ ಚ ॥೧೬॥

ವೈಶಂಪಾಯನ– ಸಹದೇವನ ಮಾತುಗಳನ್ನು ಕೇಳಿ ಸ್ತ್ರೀಯರಲ್ಲಿ ಶ್ರೇಷ್ಠಳಾದ ದ್ರೌಪದೀದೇವಿಯು ರಾಜನನ್ನು ಗೌರವಪೂರ್ವಕವಾಗಿ ಅಭಿನಂದಿಸಿ, ಹೀಗೆ ಹೇಳಿದಳು.

ದ್ರೌಪದೀ

ದ್ರಕ್ಷ್ಯಾಮಿ ತಾಂ ಕದಾ ದೇವೀಂ ಯದಿ ಜೀವತಿ ಸಾ ಪೃಥಾ ।
ಜೀವಂತ್ಯಾ ಹ್ಯದ್ಯ ನಃ ಪ್ರೀತಿರ್ಭವಿಷ್ಯತಿ ನರಾಧಿಪ ॥೧೭॥

ದ್ರೌಪದೀ– ಹೇ ನರಾಧಿಪನೇ, ದೇವಿಯಾದ ಆ ಕುಂತಿಯನ್ನು ಯಾವಾಗ ನೋಡಬಲ್ಲೆನು? ಆ ಪೃಥೆಯು ಈಗ ಬದುಕಿರುವಳು ತಾನೇ? ಅವಳು ಬದುಕಿದ್ದರೆ ನಮಗೆ ಬಹಳ ಸಂತೋಷವಾಗುವುದು.

ಏಷಾ ತೇಽಸ್ತು ಮತಿರ್ನಿತ್ಯಂ ಧರ್ಮೇ ತೇ ರಮತಾಂ ಮನಃ ।
ಯೋಽದ್ಯ ತ್ವಮಸ್ಮಾನ್ ರಾಜೇಂದ್ರ ಶ್ರೇಯಸಾ ಯೋಜಯಿಷ್ಯಸಿ ॥೧೮॥

ಹೇ ರಾಜೇಂದ್ರನೇ, ನಿನ್ನ ಮನಸ್ಸು ಸದಾ ಧರ್ಮದಲ್ಲೇ ಸಂತೋಷಪಡಲಿ. ಇಂದು ನೀನು ನಮಗೆ ಹಿರಿಯರನ್ನು ನೋಡುವ ಮಂಗಳಮಯವಾದ ಸನ್ನಿವೇಶವನ್ನು ಒದಗಿಸುವೆ ಎಂದಾದರೆ ಈ ಬುದ್ಧಿ ನಿನಗೆ ಯಾವಾಗಲೂ ಇರಲಿ.

ಅಗ್ರಪಾದಸ್ಥಿತಮಿದಂ ವಿದ್ಧಿ ರಾಜನ್ ವಧೂಜನಮ್ ।
ಕಾಂಕ್ಷಿತಂ ದರ್ಶನಂ ಕುಂತ್ಯಾ ಗಾಂಧಾರ್ಯಾಃ ಶ್ವಶುರಸ್ಯ ಚ ॥೧೯॥

ಹೇ ರಾಜನೇ, ಅಂತಃಪುರದ ಎಲ್ಲ ಸ್ತ್ರೀ ಸಮೂಹವು ಕುಂತಿಯ, ಗಾಂಧಾರಿಯ ಹಾಗೂ ಮಾವನ ದರ್ಶನವನ್ನು ಅಪೇಕ್ಷಿಸುತ್ತಾ ತುದಿಗಾಲಿನಲ್ಲಿ ನಿಂತಿದೆ.

ವೈಶಂಪಾಯನಃ

ಇತ್ಯುಕ್ತಃ ಸ ನೃಪೋ ದೇವ್ಯಾ ಪಾಂಚಾಲ್ಯಾ ಭರತರ್ಷಭ ।
ಸೇನಾಧ್ಯಕ್ಷಾನ್ ಸಮಾನಾಯ್ಯ ಸರ್ವಾನಿದಮಥಾಬ್ರವೀತ್ ॥೨೦॥

ವೈಶಂಪಾಯನ– ಭರತರ್ಷಭನೇ, ಹೀಗೆ ದೇವಿಯಾದ ಪಾಂಚಾಲಿಯೂ ಹೇಳಿದಾಗ ಆ ಯುಧಿಷ್ಠಿರ ರಾಜನು ಎಲ್ಲ ಸೇನಾಧ್ಯಕ್ಷರನ್ನೂ ಕರೆಸಿ ಹೀಗೆ ಹೇಳಿದನು.

ಯುಧಿಷ್ಠಿರಃ

ನಿರ್ಯಾಪಯತ ಸೇನಾಂ ಮೇ ಪ್ರಭೂತರಥಕುಂಜರಾಮ್ ।
ದ್ರಕ್ಷ್ಯಾಮೋ ವನವಾಸಸ್ಥಂ ಧೃತರಾಷ್ಟ್ರಂ ಮಹೀಪತಿಮ್ ॥೨೧॥

ಯುಧಿಷ್ಠಿರ– ಹೇ ಸೇನಾಧ್ಯಕ್ಷರೇ, ಅನೇಕ ರಥ ಮತ್ತು ಆನೆಗಳಿಂದ ಕೂಡಿದ ನನ್ನ ಸೇನೆಯನ್ನು ಅಣಿಗೊಳಿಸಿರಿ. ವನವಾಸದಲ್ಲಿ ರಾಜನಾದ ಧೃತರಾಷ್ಟ್ರನನ್ನು ನಾವೆಲ್ಲರೂ ನೋಡೋಣ.

ವೈಶಂಪಾಯನಃ

ಅಧ್ಯಕ್ಷಾಂಶ್ಚಾಬ್ರವೀದ್ ರಾಜಾ ಯಾನಾನಿ ವಿವಿಧಾನಿ ಮೇ ।
ಸಜ್ಜೀಕ್ರಿಯಂತಾಂ ಸರ್ವಾಣಿ ಶಿಬಿಕಾಶ್ಚ ಸಹಸ್ರಶಃ ॥೨೨॥

ವೈಶಂಪಾಯನ– ರಾಜನು ಎಲ್ಲಮೇಲ್ವಿಚಾರಕರನ್ನೂ ಕರೆದು, ನನ್ನ ನಾನಾ ರೀತಿಯ ವಾಹನಗಳನ್ನು, ಎಲ್ಲಸಾವಿರಾರು ಪಲ್ಲಕ್ಕಿಗಳನ್ನೂ ಸಜ್ಜುಗೊಳಿಸಿರಿ ಎಂದು ಹೇಳಿದನು.

ಶಕಟಾಪಣವೇಶಾಶ್ಚ ಕೋಶಾಃ ಶಿಲ್ಪಿನ ಏವ ಚ ।
ನಿರ್ಯಾಂತು ಕೋಶಪಾಲಾಶ್ಚ ಕುರುಕ್ಷೇತ್ರಾಶ್ರಮಂ ಪ್ರತಿ ॥೨೩॥

ಗಾಡಿಹೊಡೆಯುವವರು, ಅಂಗಡಿ ಮತ್ತು ವಸ್ತ್ರಗೃಹಗಳಲ್ಲಿ ಕೆಲಸ ಮಾಡುವವರು, ಕೋಶಗಳಲ್ಲಿ ಕೆಲಸ ಮಾಡುವವರು, ಶಿಲ್ಪಿಗಳು, ಕೋಶರಕ್ಷಕರು ಇವರೆಲ್ಲರೂ ಕುರುಕ್ಷೇತ್ರದಲ್ಲಿರುವ ಆಶ್ರಮಕ್ಕೆ ಹೊರಡಲಿ.

ಯಶ್ಚ ಪೌರಜನಃ ಕಶ್ಚಿದ್ ದ್ರಷ್ಟುಮಿಚ್ಛತಿ ಪಾರ್ಥಿವಮ್ ।
ಅನಾವೃತಃ ಸುವಿಹಿತಃ ಸ ಚ ಯಾತು ಸುರಕ್ಷಿತಃ ॥೨೪॥

ಮನೆ ಇರದ, ಒಳ್ಳೆಯ ಮನೆಗಳುಳ್ಳ ಯಾವುದೇ ಪುರಜನರಾಗಲೀ ಯಾರು ರಾಜನಾದ ಧೃತರಾಷ್ಟ್ರನನ್ನು ನೋಡಬಯಸುವರೋ ಅಂತಹ ಎಲ್ಲರೂ ಸುರಕ್ಷಿತರಾಗಿ ಹೊರಡಲಿ.

ಸೂದಾಃ ಪೌರೋಗವಾಶ್ಚೈವ ಸರ್ವಂ ಚೈವ ಮಹಾನಸಮ್ ।
ವಿವಿಧಂ ಭಕ್ಷ್ಯಭೋಜ್ಯಂ ಚ ಶಕಟೈರುಹ್ಯತಾಂ ಮಮ ॥೨೫॥

ಅನ್ನಕಾರರು, ದಧಿ ಮೊದಲಾದ ರಸ ಪದಾರ್ಥಗಳನ್ನು ನೋಡಿಕೊಳ್ಳುವವರು ಹೀಗೆ ಇಡೀ ಅಡುಗೆ ಮನೆಯೇ ಹಾಗೂ ನಾನಾ ರೀತಿಯ ಭಕ್ಷ್ಯ ಭೋಜ್ಯಗಳೂ ನನ್ನ ಜೊತೆಗೆ ಗಾಡಿಗಳೊಂದಿಗೆ ಹೊರಡಲಿ.

ಪ್ರಯಾಣಂ ಘುಷ್ಯತಾಮದ್ಯ ಶ್ವೋಭೂತ ಇತಿ ಮಾ ಚಿರಮ್ ।
ಕ್ರಿಯತಾಂ ಪಥಿ ಚಾಪ್ಯತ್ರ ವೇಶ್ಮಾನಿ ವಿವಿಧಾನಿ ಚ ॥೨೬॥

ನಾಳೆಯೇ ಪ್ರಯಾಣ ಎಂಬುದಾಗಿ ಇಂದೇ ಘೋಷಣೆಯಾಗಲಿ. ತಡ ಮಾಡದಿರಿ. ಮಾರ್ಗಮಧ್ಯದಲ್ಲಿ ನಾನಾ ರೀತಿಯ ವಿಶ್ರಾಂತಿಮನೆಗಳನ್ನೂ ಸಜ್ಜುಗೊಳಿಸಿರಿ.

ಏವಮಾಜ್ಞಾಪ್ಯ ರಾಜಾ ಸ ಭ್ರಾತೃಭಿಃ ಸಹ ಪಾಂಡವಃ ।
ಶ್ವೋಭೂತೇ ನಿರ್ಯಯೌ ರಾಜಾ ಸಸ್ತ್ರೀಬಾಲಪುರಸ್ಕೃತಃ ॥೨೭॥

ಹೀಗೆ ರಾಜನಾದ ಯುಧಿಷ್ಠಿರನು ಆಜ್ಞಾಪಿಸಿ ತನ್ನ ಸಹೋದರರೊಂದಿಗೆ ಕೂಡಿಕೊಂಡು (ಪಾಂಡುನಂದನನಾದ) ಸ್ತ್ರೀಯರನ್ನೂ, ಮಕ್ಕಳನ್ನೂ ಮುಂದೆ ಮಾಡಿಕೊಂಡು ಮಾರನೆಯ ದಿನವೇ ಹೊರಟನು.

ಸ ಬಹಿರ್ದಿವಸಾನೇವ ಜನೌಘಂ ಪರಿಪಾಲಯನ್ ।
ನ್ಯವಸನ್ನೃಪತಿಃ ಪಂಚ ತತೋಽಗಚ್ಛದ್ವನಂ ಪ್ರತಿ ॥೨೮॥

ಹೀಗೆ ಅವನು ಪಟ್ಟಣದ ಹೊರಭಾಗದಲ್ಲಿ ಎಲ್ಲರೂ ಬಂದು ಸೇರುವುದಕ್ಕಾಗಿ ಸೇರಿದ ಜನರನ್ನು ಪರಿರಕ್ಷಿಸುತ್ತಾ ಐದು ದಿನಗಳ ಕಾಲ ವಾಸ ಮಾಡಿದನು. ಅನಂತರ ಎಲ್ಲರನ್ನೂ ಕೂಡಿಸಿಕೊಂಡು ಕಾಡಿಗೆ ಪ್ರಯಾಣ ಬೆಳೆಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಯುಧಿಷ್ಠಿರವನಪ್ರವೇಶೋ ನಾಮ ಅಷ್ಟಾವಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ನಾನಾ ವಿಧವಾದ ವಾಹನಗಳಲ್ಲಿ ಬಂದಿರುವ ಪೌರರು ಹಾಗೂ ಸಹೋದರರೊಂದಿಗೆ ಯುಧಿಷ್ಠಿರನು ಧೃತರಾಷ್ಟ್ರಾದಿಗಳನ್ನು ನೋಡಲು ಶತಯೂಪರ ಆಶ್ರಮವನ್ನು ಪ್ರವೇಶಿಸುವುದು.

ವೈಶಂಪಾಯನಃ

ತತ ಆಜ್ಞಾಪಯಾಮಾಸ ಸೇನಾಂ ಭರತಸತ್ತಮಃ ।
ಅರ್ಜುನಪ್ರಮುಖೈರ್ಗುಪ್ತಾಂ ಲೋಕಪಾಲೋಪಮೈರ್ನರೈಃ ॥೧॥

ವೈಶಂಪಾಯನ– ಅನಂತರ ಭರತಶ್ರೇಷ್ಠನಾದ ಯುಧಿಷ್ಠಿರನು ಅರ್ಜುನನೇ ಪ್ರಮುಖನಾಗಿ ಉಳ್ಳ, ಲೋಕಪಾಲಕರಿಗೆ ಸದೃಶರಾದ ಮನುಷ್ಯರಿಂದ ರಕ್ಷಿಸಲ್ಪಟ್ಟ ಸೇನೆಯನ್ನು ಕುರಿತು ಹೊರಡಲು ಆಜ್ಞಾಪಿಸಿದನು.

ಯೋಗೋ ಯೋಗ ಇತಿ ಪ್ರೀತ್ಯಾ ತತಃ ಶಬ್ದೋ ಮಹಾನಭೂತ್ ।
ಕ್ರೋಶತಾಂ ಸಾದಿನಾಂ ತತ್ರ ಯುಜ್ಯತಾಂ ಯುಜ್ಯತಾಮಿತಿ ॥೨॥

ಅನಂತರ ''ಒಟ್ಟಾಗಿರಿ, ಒಟ್ಟಾಗಿರಿ'' ಎಂಬ ಪ್ರೀತಿಯಿಂದ ಕೂಡಿದ ದೊಡ್ಡದಾದ ಶಬ್ದವು ಕೇಳಿ ಬರತೊಡಗಿತು. ಜೊತೆಗೆ ರಥ-ಅಶ್ವಾದಿಗಳನ್ನು ನಡೆಸುವವರ ''ಸಿದ್ಧರಾಗಿ ಸಿದ್ಧರಾಗಿ'' ಎಂಬ ಶಬ್ದವು ಕೇಳಿಬರತೊಡಗಿತು.

ಕೇಚಿದ್ಯಾನೈರ್ಜನಾ ಜಗ್ಮುಃ ಕೇಚಿದಶ್ವೈರ್ಮನೋಜವೈಃ ।
ರಥೈಶ್ಚ ನಗರಾಕಾರೈಃ ಪ್ರದೀಪ್ತಜ್ವಲನೋಪಮೈಃ ॥೩॥

ಕೆಲವು ಜನರು ಪಲ್ಲಕ್ಕಿಗಳಲ್ಲಿ ಹೊರಟರು. ಮತ್ತೆ ಕೆಲವರು ಮನೋವೇಗವುಳ್ಳ ಕುದುರೆಗಳಲ್ಲಿ ಕುಳಿತು ಹೊರಟರು. ಮತ್ತೆ ಕೆಲವರು ದೊಡ್ಡ ಪಟ್ಟಣಗಳಂತಿರುವ ಜ್ವಲಿಸುವ ಬೆಂಕಿಯಂತೆ ಪ್ರಜ್ವಲಿಸುತ್ತಿರುವ ರಥಗಳಲ್ಲಿ ಕುಳಿತು ಹೊರಟರು.

ಗಜೇಂದ್ರೈರ್ಗರ್ಜಿತೈಃ ಕೇಚಿದ್ ಕೇಚಿದುಷ್ಟ್ರೈರ್ನರಾಧಿಪ ।
ಪದಾತಯಶ್ಚ ಪುರುಷಾಃ ನಖರಪ್ರಾಸಯೋಧಿನಃ ॥೪॥

ಕೆಲವರು ಮದೋನ್ಮತ್ತವಾದ ಶ್ರೇಷ್ಠ ಆನೆಗಳಲ್ಲಿ ಹೊರಟರೆ ಮತ್ತೆ ಕೆಲವರು ಒಂಟೆಗಳಿಂದ ಕೂಡಿಕೊಂಡು ಹೊರಟರು. ಹೇ ರಾಜಶ್ರೇಷ್ಠನೇ, ಉಗುರು ಮತ್ತು ಪ್ರಾಸಗಳಿಂದ ಯುದ್ಧ ಮಾಡುವ ಮನುಷ್ಯರು ನಡಿಗೆಗಳಿಂದಲೇ ಹೊರಟರು.

ಪೌರಜಾನಪದಾಶ್ಚೈವ ಯಾನೈರ್ಬಹುವಿಧೈಸ್ತಥಾ ।
ಅನ್ವಯುಃ ಕುರುರಾಜಾನಂ ಧೃತರಾಷ್ಟ್ರದಿದೃಕ್ಷಯಾ ॥೫॥

ಹಾಗೆಯೇ ಪಟ್ಟಣಿಗರು ಹಾಗೂ ಗ್ರಾಮ್ಯಜನರು ನಾನಾ ರೀತಿಯ ವಾಹನಗಳಿಂದ ಪ್ರಯಾಣ ಬೆಳೆಸಿದರು. ಹೀಗೆ ಧೃತರಾಷ್ಟ್ರನನ್ನು ನೋಡುವ ಬಯಕೆಯಿಂದ ಕುರುರಾಜನಾದ ಯುಧಿಷ್ಠಿರನನ್ನು ಜನರು ಹಿಂಬಾಲಿಸಿದರು.

ಸ ಚಾಪಿ ರಾಜವಚನಾದ್ ಆಚಾರ್ಯೋ ಗೌತಮಃ ಕೃಪಃ ।
ಸೇನಾಮಾದಾಯ ಸೇನಾನೀಃ ಪ್ರಯಯಾವಾಶ್ರಮಂ ಪ್ರತಿ ॥೬॥

ರಾಜನಾದ ಯುಧಿಷ್ಠಿರನ ಮಾತಿನಂತೆ ಆಚಾರ್ಯನಾದ ಗೌತಮ ವಂಶದಲ್ಲಿ ಬಂದ ಕೃಪನೂ ಕೂಡ ಸೇನೆಯನ್ನು ಮುನ್ನಡೆಸುವವನಾಗಿ ಸೇನೆಯ ಜೊತೆಗೆ ಆಶ್ರಮಕ್ಕೆ ಹೊರಟನು.

ತತೋ ದ್ವಿಜೈರ್ವೃತಃ ಶ್ರೀಮಾನ್ ಕುರುರಾಜೋ ಯುಧಿಷ್ಠಿರಃ ।
ಸಂಸ್ತೂಯಮಾನೋ ಮುನಿಭಿಃ ಸೂತಮಾಗಧವಂದಿಭಿಃ ॥೭॥

ಅನಂತರ ಬ್ರಾಹ್ಮಣರಿಂದ ಕೂಡಿಕೊಂಡ ಶ್ರೀಮಂತನಾದ ಕುರುರಾಜನಾದ ಯುಧಿಷ್ಠಿರನು ಸೂತ, ಮಾಗಧ ಮೊದಲಾದ ಹೊಗಳುಭಟರಿಂದಲೂ, ಮುನಿಗಳಿಂದಲೂ ಹೊಗಳಿಸಿಕೊಳ್ಳುತ್ತಾ ಹೊರಟನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ರಥಾನೀಕೇನ ಮಹತಾ ನಿರ್ಯಯೌ ಕುರುನಂದನಃ ॥೮॥

ಕುರುನಂದನನಾದ ಯುಧಿಷ್ಠಿರನು ನೆತ್ತಿಯ ಮೇಲೆ ಬಿಳಿಯಾದ ಛತ್ರದಿಂದ ಶೋಭಿಸುತ್ತಾ ಬಹಳವಾದ ರಥಸಮೂಹದೊಂದಿಗೆ ಕಾಡಿಗೆ ಹೊರಟು ನಿಂತನು.

ಗಜೈಶ್ಚಾಚಲಸಂಕಾಶೈರ್ಭೀಮಕರ್ಮಾ ಮಹಾಭುಜಃ ।
ಸಜ್ಜಯಂತ್ರಾಯುಧೋಪೇತೈಃ ಪ್ರಯಯೌ ಮಾರುತಾತ್ಮಜಃ ॥೯॥

ಅದ್ಭುತವಾದ ಕರ್ಮಗಳನ್ನು ನಡೆಸಿರುವ ಮಹಾಪರಾಕ್ರಮಶಾಲಿಯಾದ ವಾಯುಪುತ್ರನಾದ ಭೀಮನು ಆಪತ್ತನ್ನು ಎದುರಿಸಲು ಸನ್ನದ್ಧವಾದ ಯಂತ್ರಾಯುಧದಿಂದ ಕೂಡಿದ ಬೆಟ್ಟದಂತಿರುವ ಆನೆಗಳ ಜೊತೆಗೆ ಹೊರಟನು.

ಮಾದ್ರೀಪುತ್ರಾವಪಿ ತಥಾ ಹಯಾರೋಹೌ ಸುಸಂವೃತೌ ।
ಜಗ್ಮತುಃ ಶೀಘ್ರಗಮನೌ ಸನ್ನದ್ಧಕವಚಧ್ವಜೌ ॥೧೦॥

ಮಾದ್ರೀಪುತ್ರರಾದ ನಕುಲ-ಸಹದೇವರೂ ಕೂಡ ಕವಚ ಹಾಗೂ ಧ್ವಜಗಳನ್ನು ಧರಿಸಿಕೊಂಡು ಉತ್ತಮವಾದ ವೇಷ-ಭೂಷಣಗಳುಳ್ಳವರಾಗಿ ಕುದುರೆಯ ಮೇಲೇರಿ ಶೀಘ್ರವಾಗಿ ಮುಂದುವರೆಯುವುದಕ್ಕಾಗಿ ಹೊರಟರು.

ಅರ್ಜುನಶ್ಚ ಮಹಾತೇಜಾ ರಥೇನಾದಿತ್ಯವರ್ಚಸಾ ।
ವಶೀ ಶ್ವೇತೈರ್ಹಯೈರ್ದಿವ್ಯೈರ್ಯುಕ್ತೇನಾನ್ವಗಮನ್ನೃಪಮ್ ॥೧೧॥

ಮಹಾತೇಜಸ್ವಿಯಾದ ಇಂದ್ರಿಯನಿಗ್ರಹವುಳ್ಳ ಅರ್ಜುನನೂ ಕೂಡ ಬಿಳಿಯಾದ ದಿವ್ಯವಾದ ಕುದುರೆಗಳಿಂದ ಕೂಡಿದ ಸೂರ್ಯನಂತೆ ಶೋಭಿಸುವ ರಥದಿಂದ ರಾಜನಾದ ಯುಧಿಷ್ಠಿರನನ್ನು ಹಿಂಬಾಲಿಸಿದನು.

ದ್ರೌಪದೀಪ್ರಮುಖಾಶ್ಚಾಪಿ ಸ್ತ್ರೀಸಂಘಾಃ ಶಿಬಿಕಾಗತಾಃ ।
ಸ್ತ್ರ್ಯಧ್ಯಕ್ಷಗುಪ್ತಾಃ ಪ್ರಯಯುರ್ವಿಸೃಜಂತೋऽಮಿತಂ ವಸು ॥೧೨॥

ದ್ರೌಪದಿಯೇ ಮೊದಲಾದ ಸ್ತ್ರೀಯರ ಸಮೂಹಗಳೂ ಕೂಡ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಸ್ತ್ರೀಯರನ್ನು ರಕ್ಷಿಸುವ ಭಟರ ರಕ್ಷಣೆಯೊಂದಿಗೆ ಅತಿಶಯವಾದ ಸಂಪತ್ತನ್ನು ದಾನ ಮಾಡುತ್ತಾ ಹೊರಟರು.

ಸಮೃದ್ಧರಥನಾಗಾಶ್ವಂ ವೇಣುವೀಣಾನುನಾದಿತಮ್ ।
ಶುಶುಭೇ ಪಾಂಡವಂ ಸೈನ್ಯಂ ತತ್ ತದಾ ಭರತರ್ಷಭ ॥೧೩॥

ಹೇ ಭರತರ್ಷಭನೇ, ಆ ಸಮಯದಲ್ಲಿ ಆ ಪಾಂಡವರ ಸೈನ್ಯವು ರಥ-ಆನೆ-ಕುದುರೆಗಳಿಂದ ಸಮೃದ್ಧವಾಗಿ ಕೊಳಲು, ವೀಣೆ ಮೊದಲಾದ ಮಂಗಳ ಧ್ವನಿಯಿಂದ ಕೂಡಿದ್ದಾಗಿ ಚೆನ್ನಾಗಿ ಶೋಭಿಸಿತು.

ನದೀತೀರೇಷು ರಮ್ಯೇಷು ಸರಸ್ಸು ಚ ವಿಶಾಂಪತೇ ।
ವಾಸಂ ಕೃತ್ವಾ ಕ್ರಮೇಣಾಥ ಜಗ್ಮುಸ್ತೇ ಕುರುಪುಂಗವಾಃ ॥೧೪॥

ಹೇ ರಾಜನೇ, ಆ ಕುರುಶ್ರೇಷ್ಠರು ನದಿಯ ತೀರಗಳಲ್ಲಿ ರಮ್ಯವಾದ ಸರೋವರಗಳ ಸಮೀಪದಲ್ಲಿ ಮಧ್ಯೆ-ಮಧ್ಯೆ ವಾಸವನ್ನು ಮಾಡುತ್ತಾ ಕ್ರಮವಾಗಿ ಮುಂದೆ ಸಾಗಿದರು.

ಯುಯುತ್ಸುಶ್ಚ ಮಹಾತೇಜಾ ಧೌಮ್ಯಶ್ಚೈವ ಪುರೋಹಿತಃ ।
ಯುಧಿಷ್ಠಿರಸ್ಯ ವಚನಾತ್ ಪುರಗುಪ್ತಿಂ ಪ್ರಚಕ್ರತುಃ ॥೧೫॥

ಮಹಾತೇಜಸ್ವಿಯಾದ ಯುಯುತ್ಸುವೂ, ಪುರೋಹಿತರಾದ ಧೌಮ್ಯರೂ ಯುಧಿಷ್ಠಿರನ ಆಪ್ಪಣೆಯಂತೆ ಪುರದ ರಕ್ಷಣೆಯನ್ನು ವಹಿಸಿಕೊಂಡರು.

ತತೋ ಯುಧಿಷ್ಠಿರೋ ರಾಜಾ ಕುರುಕ್ಷೇತ್ರಮವಾತರತ್ ।
ಕ್ರಮೇಣೋತ್ತೀರ್ಯ ಯಮುನಾಂ ನದೀಂ ಪರಮಪಾವನೀಮ್ ॥೧೬॥

ಅನಂತರ ರಾಜನಾದ ಯುಧಿಷ್ಠಿರನು ಪರಮ ಪಾವನವಾದ ಯಮುನಾ ನದಿಯನ್ನು ಪ್ರಯಾಣಕ್ರಮದಿಂದ ದಾಟಿ ಕುರುಕ್ಷೇತ್ರಕ್ಕೆ ಬಂದಿಳಿದನು.

ಸ ದದರ್ಶಾಶ್ರಮಂ ದೂರಾದ್ ರಾಜರ್ಷೇಸ್ತಸ್ಯ ಧೀಮತಃ ।
ಶತಯೂಪಸ್ಯ ಕೌರವ್ಯ ಧೃತರಾಷ್ಟ್ರಸ್ಯ ಚೈವ ಹಿ ॥೧೭॥

ಹೇ ಕುರುವಂಶಜನೇ, ಆ ಯುಧಿಷ್ಠಿರನು ಧೀಮಂತನಾದ ಆ ಶತಯೂಪನೆಂಬ ರಾಜರ್ಷಿಯ ಆಶ್ರಮವನ್ನು ಮತ್ತು ಧೃತರಾಷ್ಟ್ರನ ಆಶ್ರಮವನ್ನು ದೂರದಿಂದಲೇ ನೋಡಿ ಗುರುತಿಸಿದನು.

ತತಃ ಪ್ರಮುದಿತಃ ಸರ್ವೋ ಜನಸ್ತದ್ವನಮಂಜಸಾ ।
ವಿವೇಶ ಸುಮಹಾನಾದೈರಾಪೂರ್ಯ ಭರತರ್ಷಭ ॥೧೮॥

ಹೇ ಭರತರ್ಷಭನೇ, ಅನಂತರ ಎಲ್ಲ ಜನರೂ ಬಹಳ ಸಂತೋಷಗೊಂಡವರಾಗಿ ಗಟ್ಟಿಯಾದ ಉತ್ಸಾಹ ಕೇಕೆಗಳಿಂದ ಕಾಡನ್ನು ತುಂಬಿಸುತ್ತಾ ಒಳ್ಳೆಯ ರೀತಿಯಿಂದ ಕಾಡಿಗೆ ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಪಾಂಡವೈಃ ತಪೋವನಪ್ರವೇಶೋ ನಾಮ
ಏಕೋನತ್ರಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಯುಧಿಷ್ಠಿರಾದಿಗಳು ಶತಯೂಪಾಶ್ರಮದಲ್ಲಿ ಧೃತರಾಷ್ಟ್ರನನ್ನು ಸಮೀಪಿಸಿ, ತಮ್ಮ ತಮ್ಮ ಹೆಸರನ್ನು ಹೇಳುತ್ತಾ ಅವನಿಗೆ ವಂದಿಸುವುದು. ಧೃತರಾಷ್ಟ್ರನು ತನ್ನ ಅವಸ್ಥೆಯನ್ನು ನೋಡಿ ದುಃಖಿಸುವ ಅವರನ್ನು ಸಮಾಧಾನ ಪಡಿಸುವುದು.

ವೈಶಂಪಾಯನಃ

ತತಸ್ತೇ ಪಾಂಡವಾ ದೂರಾದ್ ಅವತೀರ್ಯ ಪದಾತಯಃ ।
ಅಭಿಜಗ್ಮುರ್ನರಪತೇರಾಶ್ರಮಂ ವಿನಯಾನ್ವಿತಾಃ ॥೧॥

ವೈಶಂಪಾಯನ– ಅನಂತರ ಪಾಂಡವರು ದೂರದಲ್ಲಿಯೇ ವಾಹನಗಳಿಂದ ಕೆಳಗಿಳಿದು ವಿನಯಪೂರ್ವಕವಾಗಿ ಕಾಲುನಡಿಗೆಯಿಂದಲೇ ರಾಜನ ಆಶ್ರಮವನ್ನು ಪ್ರವೇಶಿಸಿದರು.

ಸ ಚ ಸೇನಾಜನಃ ಸರ್ವೋ ಯೇ ಚ ರಾಷ್ಟ್ರನಿವಾಸಿನಃ ।
ಸ್ತ್ರಿಯಶ್ಚ ಕುರುಮುಖ್ಯಾನಾಂ ಪದ್ಭಿರೇವಾನ್ವಯುಸ್ತದಾ ॥೨॥

ಆಗ ಎಲ್ಲ ಸೈನಿಕರೂ ಮತ್ತು ಬಂದಿರುವ ಎಲ್ಲ ರಾಷ್ಟ್ರನಿವಾಸಿಗಳು ಜೊತೆಗೆ ಕುರುಶ್ರೇಷ್ಠರ ಪತ್ನಿಯರೂ ಕಾಲುನಡಿಗೆಯಿಂದಲೇ ಪಾಂಡವರನ್ನು ಹಿಂಬಾಲಿಸಿದರು.

ತತ್ರಾಶ್ರಮಮುಪಾಜಗ್ಮುರ್ಧೃತರಾಷ್ಟ್ರಸ್ಯ ಪಾಂಡವಾಃ ।
ಶೂನ್ಯಂ ಮೃಗಗಣಾಕೀರ್ಣಂ ಕದಲೀವನಶೋಭಿತಮ್ ॥೩॥

ಅನಂತರ ಪಾಂಡವರು ಜಿಂಕೆಗಳ ಸಮೂಹದಿಂದ ತುಂಬಿರುವ, ಬಾಳೆಗಿಡಗಳ ಕಾಡಿನಿಂದ ಶೋಭಿಸುತ್ತಿರುವ ಧೃತರಾಷ್ಟ್ರನ ಆ ಆಶ್ರಮವನ್ನು ಪ್ರವೇಶಿಸಿದರು. ಆದರೆ ಪ್ರವೇಶಕಾಲದಲ್ಲಿ ಆಶ್ರಮವು ಶೂನ್ಯವಾಗಿದ್ದಿತು.

ತತಸ್ತತ್ರ ಸಮಾಜಗ್ಮುಸ್ತಾಪಸಾ ವಿವಿಧವ್ರತಾಃ ।
ಪಾಂಡವಾನಾಗತಾನ್ ದ್ರಷ್ಟುಂ ಕೌತೂಹಲಸಮನ್ವಿತಾಃ ॥೪॥

ಆಗ ಅಲ್ಲಿಗೆ ಬಂದಿರುವ ಪಾಂಡವರನ್ನು ನೋಡಬೇಕೆಂಬ ಕುತೂಹಲದಿಂದ ಕೂಡಿದ, ನಾನಾ ರೀತಿಯ ವ್ರತಗಳಲ್ಲಿ ನಿರತರಾದ ತಾಪಸ ಜನರು ಆಗಮಿಸಿದರು.

ತಾನಪೃಚ್ಛತ್ ತತೋ ರಾಜಾ ಕ್ವಾಸೌ ಕೌರವವಂಶಭೃತ್ ।
ಪಿತಾ ಜ್ಯೇಷ್ಠೋ ಗತೋಽಸ್ಮಾಕಮಿತಿ ಬಾಷ್ಪಪರಿಪ್ಲುತಃ ॥೫॥

ಆಗ ಕೌರವವಂಶವನ್ನು ಬೆಳೆಸುವ ರಾಜನಾದ ಯುಧಿಷ್ಠಿರನು, ನಮ್ಮ ಹಿರಿಯ ತಂದೆಯು ಇಲ್ಲಿ ಕಾಣುತ್ತಿಲ್ಲ. ಅವನು ಎಲ್ಲಿ ಹೋದನು? ಎಂದು ಕಣ್ಣೀರಿನಿಂದ ಕೂಡಿದವನಾಗಿ ಆ ತಾಪಸರನ್ನು ಕೇಳಿದರು.

ತಮೂಚುಸ್ತೇ ತತೋ ವಾಕ್ಯಂ ಯಮುನಾಮವಗಾಹಿತುಮ್ ।
ಪುಷ್ಪಾಣಾಮುದಕುಂಭಸ್ಯ ಚಾರ್ಥೇ ಗತ ಇತಿ ಪ್ರಭೋ ॥೬॥

ಆಗ ಅವರು ಹೇ ಪ್ರಭುವೇ, ಯಮುನೆಯಲ್ಲಿ ಮುಳುಗಿ ಸ್ನಾನ ಮಾಡಿ, ಹೂವುಗಳನ್ನು, ನೀರನ್ನು ತರಲೋಸುಗ ರಾಜನು ಹೋಗಿರುವನು ಎಂದು ತಿಳಿಸಿದರು.

ತೈರಾಖ್ಯಾತೇನ ಮಾರ್ಗೇಣ ತತಸ್ತೇ ಪ್ರಯಯುಸ್ತದಾ ।
ದದೃಶುಶ್ಚಾವಿದೂರೇ ತಾನ್ ಸರ್ವಾನಥ ಪದಾತಯಃ ॥೭॥

ಆಗ ಅವರೆಲ್ಲರೂ ಕಾಲ್ನಡಿಗೆಯಿಂದಲೇ ತಾಪಸರು ಸೂಚಿಸಿದ ಮಾರ್ಗದಿಂದ ಮುಂದೆ ನಡೆದು ಸ್ವಲ್ಪ ದೂರದಲ್ಲೇ ಆ ಎಲ್ಲರನ್ನೂ ಕಂಡರು.

ತತಸ್ತೇ ಸತ್ವರಾ ಜಗ್ಮುಃ ಪಿತುರ್ದರ್ಶನಕಾಂಕ್ಷಿಣಃ ।
ಸಹದೇವಸ್ತು ವೇಗೇನ ಪ್ರಾಧಾವದ್ಯತ್ರ ಸಾ ಪೃಥಾ ॥೮॥

ಅನಂತರ ಅವರೆಲ್ಲರೂ ಹಿರಿಯರನ್ನು ನೋಡುವ ಕುತೂಹಲದಿಂದ ಬೇಗ ಬೇಗನೆ ನಡೆದರು. ಸಹದೇವನಾದರೂ ಎಲ್ಲಿ ಕುಂತಿ ಇರುವಳೋ ಅಲ್ಲಿ ವೇಗವಾಗಿ ಓಡಿಬಂದನು.

ಸಸ್ವರಂ ಪ್ರಾರುದದ್ ಧೀಮಾನ್ ಮಾತುಃ ಪಾದಾವುಪಸ್ಪೃಶನ್ ।
ಸಾ ತು ಬಾಷ್ಪಾಕುಲಮುಖೀ ತಂ ದದರ್ಶ ಪ್ರಿಯಂ ಸುತಮ್ ॥೯॥

ಧೀಮಂತನಾದ ಆ ಸಹದೇವನು ತಾಯಿಯ ಪಾದಗಳನ್ನು ನಮಸ್ಕರಿಸುತ್ತಾ ಸ್ವರ ಸಹಿತವಾಗಿ ಅತ್ತನು. ಆ ಕುಂತಿಯಾದರೂ ಕಣ್ಣೀರನ್ನು ತುಂಬಿಕೊಂಡವಳಾಗಿ ಪ್ರಿಯನಾದ ಸುತನನ್ನು ನೋಡಿದಳು.

ಬಾಹುಭ್ಯಾಂ ಸಂಪರಿಷ್ವಜ್ಯ ಸಮುನ್ನಾಮ್ಯ ಚ ಭಾರತ ।
ಗಾಂಧಾರ್ಯೈ ಕಥಯಾಮಾಸ ಸಹದೇವಮುಪಸ್ಥಿತಮ್ ॥೧೦॥

ಹೇ ಭಾರತನೇ, ಅವನನ್ನು ಮೇಲಕ್ಕೆತ್ತಿ, ಬಾಹುಗಳಿಂದ ಆಲಿಂಗಿಸಿಕೊಂಡು ಸಹದೇವನು ಬಂದಿರುವನೆಂದು ಗಾಂಧಾರಿಗೆ ತಿಳಿಸಿದಳು.

ಅನಂತರಂ ಚ ರಾಜಾನಂ ಭೀಮಸೇನಮಥಾರ್ಜುನಮ್ ।
ನಕುಲಂ ಚ ಪೃಥಾ ದೃಷ್ಟ್ವಾ ತ್ವರಮಾಣೋಪಚಕ್ರಮೇ ॥೧೧॥

ಅನಂತರ ಕುಂತಿಯು ರಾಜನಾದ ಯುಧಿಷ್ಠಿರನನ್ನೂ, ಭೀಮಸೇನನನ್ನೂ, ಅರ್ಜುನನನ್ನೂ ಅಂತೆಯೇ ನಕುಲನನ್ನೂ ನೋಡಿ ಸಂಭ್ರಮದಿಂದ ಮುಂದೆ ಬಂದಳು.

ಸಾ ಹ್ಯಗ್ರೇ ಗಚ್ಛತಿ ತಯೋರ್ದಂಪತ್ಯೋರ್ಹತಪುತ್ರಯೋಃ ।
ಕರ್ಷಂತೀ ತೌ ತತಸ್ತೇ ತಾಂ ದೃಷ್ಟ್ವೈವ ನ್ಯಪತನ್ ಭುವಿ ॥೧೨॥

ತಯೋಸ್ತು ಪಾದಯೋ ರಾಜನ್ ನ್ಯಪತನ್ ಹತಪುತ್ರಯೋಃ ॥೧೩॥

ಹೇ ರಾಜನೇ, ಆ ಕುಂತಿಯು ಮಕ್ಕಳನ್ನು ಕಳೆದುಕೊಂಡ ಆ ದಂಪತಿಗಳ ಮುಂಭಾಗದಲ್ಲಿನಡೆಯುತ್ತಾ ಅವರನ್ನು ಎಳೆದುಕೊಂಡು ಮುಂದೆ ಮುಂದೆ ಬಂದಳು. ಅಂತಹ ಕುಂತಿಯನ್ನು ನೋಡಿ ಅವರೆಲ್ಲರೂ ಭೂಮಿಯಲ್ಲಿ ಬಿದ್ದರು ಹಾಗೂ ಮಕ್ಕಳನ್ನು ಕಳೆದುಕೊಂಡ ಅವರಿಬ್ಬರ ಪಾದಗಳಿಗೆ ನಮಸ್ಕರಿಸಿದರು.

ತಾನ್ ರಾಜಾ ಸ್ವರಯೋಗೇನ ಸ್ಪರ್ಶೇನ ಚ ಮಹಾಮನಾಃ ।
ಪ್ರತ್ಯಭಿಜ್ಞಾಯ ಮೇಧಾವೀ ಸಮಾಶ್ವಾಸಯತ ಪ್ರಭುಃ ॥೧೪॥

ರಾಜನಾದ, ಮನಸ್ವಿಯಾದ, ಮೇಧಾವಿಯಾದ ಧೃತರಾಷ್ಟ್ರನು ಸ್ವರದಿಂದ ಹಾಗೂ ಸ್ಪರ್ಶದಿಂದ ಅವರನ್ನು ಪಾಂಡವರೆಂದು ತಿಳಿದುಕೊಂಡು ಸಮಾಧಾನಗೊಳಿಸಿದನು.

ತತಸ್ತೇ ಬಾಷ್ಪಮುತ್ಸೃಜ್ಯ ಗಾಂಧಾರೀಸಹಿತಂ ನೃಪಮ್ ।
ಉಪತಸ್ಥುರ್ಮಹಾತ್ಮಾನೋ ಮಾತರಂ ಚ ಯಥಾವಿಧಿ ॥೧೫॥

ಅನಂತರ ಮಹಾತ್ಮರಾದ ಆ ಪಾಂಡವರು ಕಣ್ಣೀರು ಸುರಿಸುತ್ತಾ, ಗಾಂಧಾರಿಯೊಂದಿಗೆ ಕೂಡಿಕೊಂಡ ರಾಜನನ್ನು ಮತ್ತು ತಾಯಿಯನ್ನು ವಿಧಿ ಪ್ರಕಾರವಾಗಿ ನಮಸ್ಕರಿಸಿದರು.

ಸರ್ವೇಷಾಂ ತೋಯಕಲಶಾನ್ ಜಗೃಹುಸ್ತೇ ಸ್ವಯಂ ತಥಾ ।
ಪಾಂಡವಾ ಲಬ್ಧಸಂಜ್ಞಾಸ್ತೇ ಮಾತ್ರಾ ಚಾಶ್ವಾಸಿತಾ ಭೃಶಮ್ ॥೧೬॥

ತಾಯಿಯಿಂದ ಚೆನ್ನಾಗಿ ಸಮಾಧಾನಗೊಂಡ ಆ ಪಾಂಡವರು ಎಚ್ಚರಗೊಂಡು ಎಲ್ಲರ ನೀರಿನ ಬಿಂದಿಗೆಗಳನ್ನು ತಾವೇ ಸ್ವೀಕರಿಸಿದರು.

ತತೋ ನಾರ್ಯೋ ನೃಸಿಂಹಾನಾಂ ಸ ಚ ಯೋಧಜನಸ್ತಥಾ ।
ಪೌರಜಾನಪದಾಶ್ಚೈವ ದದೃಶುಸ್ತಂ ನರಾಧಿಪಮ್ ॥೧೭॥

ಅನಂತರ ಪುರುಷಶ್ರೇಷ್ಠರಾದ ಪಾಂಡವರ ಪತ್ನಿಯರೂ ಹಾಗೆಯೇ ಸೈನಿಕ ಜನರು ಮತ್ತು ಪಟ್ಟಣಿಗರು ಮತ್ತು ಗ್ರಾಮೀಣ ಜನರು ಆ ಧೃತರಾಷ್ಟ್ರ ರಾಜನನ್ನು ನೋಡಿದರು.

ನಿವೇದಯಾಮಾಸ ತತೋ ಜನಂ ತಂ ಗೋತ್ರನಾಮತಃ ।
ಯುಧಿಷ್ಠಿರೋ ನರಪತಿಃ ಸ ಚೈನಾನ್ ಪ್ರತ್ಯಪೂಜಯತ್ ॥೧೮॥

ಅನಂತರ ರಾಜನಾದ ಯುಧಿಷ್ಠಿರನು ಆ ಎಲ್ಲರನ್ನೂ ಪ್ರತ್ಯೇಕವಾಗಿ ಹೆಸರು ಮತ್ತು ಗೋತ್ರಗಳನ್ನು ಹೇಳುವ ಮೂಲಕ ಪರಿಚಯಿಸಿದನು. ಧೃತರಾಷ್ಟ್ರನು ಆ ಎಲ್ಲರನ್ನೂ ಅಭಿನಂದಿಸಿದನು.

ಸ ತೈಃ ಪರಿವೃತೋ ಮೇನೇ ಹರ್ಷಬಾಷ್ಪಾವಿಲೇಕ್ಷಣಃ ।
ರಾಜಾऽऽತ್ಮಾನಂ ಗೃಹಗತಂ ಪುರೇವ ಗಜಸಾಹ್ವಯೇ ॥೧೯॥

ಆ ಎಲ್ಲ ಜನರಿಂದ ಸುತ್ತುವರಿಯಲ್ಪಟ್ಟ ರಾಜನು ಸಂತೋಷ ಹಾಗೂ ಕಣ್ಣೀರಿನಿಂದ ಕೂಡಿದ ಕಣ್ಣುಳ್ಳವನಾಗಿ, ತನ್ನನ್ನು ಹಸ್ತಿನಾಪುರದಲ್ಲಿ ಮನೆಯಲ್ಲಿ ಇರುವವನನ್ನಾಗಿ ಭಾವಿಸಿದನು.

ಅಭಿವಾದಿತೋ ವಧೂಭಿಶ್ಚ ಕೃಷ್ಣಾದ್ಯಾಭಿಃ ಸ ಪಾರ್ಥಿವಃ ।
ಗಾಂಧಾರೀಸಹಿತೋ ಧೀಮಾನ್ ಕುಂತ್ಯಾ ಚ ಪ್ರತ್ಯನಂದತ ॥೨೦॥

ದ್ರೌಪದಿಯೇ ಮೊದಲಾದ ಎಲ್ಲ ಸೊಸೆಯಂದಿರೂ ನಮಸ್ಕರಿಸಿದಾಗ ಧೀಮಂತನಾದ ಆ ರಾಜನು ಗಾಂಧಾರಿ ಮತ್ತು ಕುಂತಿಯರೊಂದಿಗೆ ಕೂಡಿಕೊಂಡು ಅವರೆಲ್ಲರನ್ನೂ ಅಭಿನಂದಿಸಿದನು.

ತತಸ್ತಾ ಶ್ರಮಮಾಗಚ್ಛತ್ ಸಿದ್ಧಚಾರಣಸೇವಿತಮ್ ।
ದಿದೃಕ್ಷುಭಿಃ ಸಮಾಕೀರ್ಣಂ ನಭಸ್ತಾರಾಗಣೈರಿವ ॥೨೧॥

ಇಷ್ಟಾದ ನಂತರ ಅವರೆಲ್ಲರೂ ಸೇರಿಕೊಂಡು ಸಿದ್ಧ-ಚಾರಣರಿಂದ ಸೇವಿತವಾದ ಆಶ್ರಮವನ್ನು ನಕ್ಷತ್ರಸಮೂಹದಿಂದ ಕೂಡಿಕೊಂಡ ಆಕಾಶದಂತೆ ಧೃತರಾಷ್ಟ್ರನನ್ನು ನೋಡುವ ಬಯಕೆಯಿಂದ ಬಂದಿರುವ ಜನರಿಂದ ತುಂಬಿಕೊಂಡ ಆಶ್ರಮವನ್ನು ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಪಾಂಡವಧೃತರಾಷ್ಟ್ರದರ್ಶನಂ ನಾಮ ತ್ರಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಸಂಜಯನು ಅಲ್ಲಿರುವ ತಾಪಸರಿಗೆ ಯುಧಿಷ್ಠಿರಾದಿಗಳನ್ನು ಹಾಗೂ ದ್ರೌಪದಿಯೇ ಮೊದಲಾದ ಸ್ತ್ರೀಯರನ್ನು ಬೊಟ್ಟುಮಾಡಿ ತೋರಿಸುತ್ತಾ ಪರಿಚಯಿಸುವುದು.

ವೈಶಂಪಾಯನಃ

ಸ ತೈಃ ಸಹ ನರವ್ಯಾಘ್ರೈರ್ಭ್ರಾತೃಭಿರ್ಭರತರ್ಷಭ ।
ರಾಜಾ ರುಚಿರಪದ್ಮಾಕ್ಷೈರಾಸಾಂಚಕ್ರೇ ತದಾಶ್ರಮೇ ॥೧॥

ತಾಪಸೈಶ್ಚ ಮಹಾಭಾಗೈರ್ನಾನಾದೇಶಸಮಾಗತೈಃ ।
ದ್ರಷ್ಟುಂ ಕುರುಪತೇಃ ಪುತ್ರಾನ್ ಪಾಂಡವಾನ್ ಪೃಥುವಕ್ಷಸಃ ॥೨॥

ವೈಶಂಪಾಯನ– ಹೇ ಭರತರ್ಷಭನೇ, ಆ ಧೃತರಾಷ್ಟ್ರನು ತಾವರೆಯಂತೆ ಕಂಗೊಳಿಸುವ ಕಣ್ಣುಗಳುಳ್ಳ ಪುರುಷಶ್ರೇಷ್ಠರಾದ ಆ ಅಣ್ಣ-ತಮ್ಮಂದಿರೊಂದಿಗೆ ಹಾಗೂ ಕುರುರಾಜನ ಮಕ್ಕಳಾದ ಅಗಲವಾದ ಎದೆಯುಳ್ಳ ಪಾಂಡವರನ್ನು ನೋಡುವುದಕ್ಕಾಗಿ ನಾನಾ ದೇಶಗಳಿಂದ ಬಂದಿರುವ ಮಹಾತ್ಮರಾದ ತಾಪಸ ಜನರೊಂದಿಗೆ ಕೂಡಿಕೊಂಡು ಆ ಆಶ್ರಮದಲ್ಲಿ ಕುಳಿತುಕೊಂಡನು.

ತೇऽಬ್ರುವನ್ ಜ್ಞಾತುಮಿಚ್ಛಾಮಃ ಕತಮೋऽತ್ರ ಯುಧಿಷ್ಠಿರಃ ।
ಭೀಮಾರ್ಜುನಯಮಾಶ್ಚೈವ ದ್ರೌಪದೀ ಸಾ ಯಶಸ್ವಿನೀ ॥೩॥

ಅವರೆಲ್ಲರೂ ಈ ಇಷ್ಟುಮಂದಿಯಲ್ಲಿ ಯುಧಿಷ್ಠಿರನು ಯಾರು? ಭೀಮಾರ್ಜುನರು, ನಕುಲ-ಸಹದೇವರು ಯಾರು? ಯಶಸ್ವಿನಿಯಾದ ಆ ದ್ರೌಪದಿಯು ಯಾರು? ಇದೆಲ್ಲವನ್ನೂ ನಾವು ತಿಳಿಯಬಯಸುತ್ತೇವೆ ಎಂದರು.

ತಾನಾಚಖ್ಯೌ ತದಾ ಸೂತಸ್ತೇಷಾಂ ನಾಮ ಪ್ರಧಾನತಃ ।
ಸಂಜಯೋ ದ್ರೌಪದೀಂ ಚೈವ ಸರ್ವಾಶ್ಚ ಭರತಸ್ತ್ರಿಯಃ ॥೪॥

ಆಗ ಸೂತನಾದ ಸಂಜಯನು ಅವರೆಲ್ಲರ ಹೆಸರುಗಳನ್ನು ಹೇಳುತ್ತಾ, ಪ್ರಧಾನರಾದ ಎಲ್ಲರನ್ನೂ, ದ್ರೌಪದಿಯನ್ನೂ ಹಾಗೂ ಪಾಂಡವರ ಎಲ್ಲ ಪತ್ನಿಯರನ್ನೂ ಪರಿಚಯಿಸಿದನು.

ಸಂಜಯಃ

ಯ ಏಷ ಜಾಂಬೂನದಶುದ್ಧಗೌರ-
ತನುರ್ಮಹಾಸಿಂಹ ಇವ ಪ್ರವೃದ್ಧಃ ।
ಪ್ರಚಂಡಘೋಣಃ ಪೃಥುದೀರ್ಘನೇತ್ರಃ
ತಾಮ್ರಾಯತಾಕ್ಷಃ ಕುರುರಾಜ ಏಷಃ ॥೫॥

ಸಂಜಯ– ಇವರೆಲ್ಲರ ಮಧ್ಯದಲ್ಲಿ ಚಿನ್ನದಂತೆ ಶುಭ್ರವಾದ ಬಣ್ಣವುಳ್ಳ ಶರೀರವಿರುವವನು, ದೊಡ್ಡ ಸಿಂಹದಂತೆ ಕಂಗೊಳಿಸುವವನು, ದೀರ್ಘವಾದ ನಾಸಿಕವುಳ್ಳವನು, ವಿಸ್ತಾರವಾದ ಹಾಗೂ ಅಗಲವಾದ ಕಣ್ಣುಗಳುಳ್ಳವನು ಹಾಗೂ ನಸುಗೆಂಪಿನ ಕಣ್ಣುಳ್ಳವನು ಯಾರೋ ಅವನೇ ಕುರುರಾಜನು.

ಅಯಂ ಬೃಹನ್ಮತ್ತಗಜೇಂದ್ರಗಾಮೀ
ವಿಶುದ್ಧಚಾಮೀಕರರಾಶಿಗೌರಃ ।
ಪೀನಾಯತಾಂಸೋ ಗುರುದೀರ್ಘಬಾಹುಃ
ವೃಕೋದರಃ ಪಶ್ಯತ ಪಶ್ಯತೈನಮ್ ॥೬॥

ಮದಭರಿತವಾದ ಶ್ರೇಷ್ಠ ಆನೆಯಂತೆ ನಡಿಗೆಯುಳ್ಳ, ಶುದ್ಧವಾದ ಚಿನ್ನದ ರಾಶಿಯಂತೆ ಕಂಗೊಳಿಸುವ, ದಷ್ಟಪುಷ್ಟವಾದ ಅಗಲವಾದ ಭುಜಗಳುಳ್ಳ, ಪರಿಪುಷ್ಟವಾದ ಉದ್ದನೆಯ ಕೈಗಳುಳ್ಳ ಇವನು ಭೀಮಸೇನನು. ಇವನನ್ನು ಮತ್ತೆ ಮತ್ತೆ ನೋಡಿರಿ.

ಯ ಏಷ ಪಾರ್ಶ್ವೇऽಸ್ಯ ಮಹಾಧನುಷ್ಮಾನ್
ಶ್ಯಾಮೋ ಯುವಾ ವಾರಣಯೂಥಪಾಭಃ ।
ಸಿಂಹೋನ್ನತಾಂಸೋ ಗಜಖೇಲಗಾಮೀ
ಪದ್ಮಾಯತಾಕ್ಷೋऽರ್ಜುನ ಏಷ ವೀರಃ ॥೭॥

ಈ ಭೀಮನ ಪಾರ್ಶ್ವದಲ್ಲಿರುವ, ದೊಡ್ಡದಾದ ಬಿಲ್ಲನ್ನು ಧರಿಸಿರುವ, ನಸುಗಪ್ಪು ಬಣ್ಣವುಳ್ಳ, ಆನೆಗಳ ಹಿಂಡಿನ ನಾಯಕನಂತೆ ಕಂಗೊಳಿಸುವ, ಯುವಕನಾದ, ಸಿಂಹದ ಹೆಗಲಿನಂತೆ ಎತ್ತರವಾದ ಹೆಗಲುಳ್ಳ, ಆನೆಯಂತೆ ವಿಲಾಸವಾದ ನಡಿಗೆಯುಳ್ಳ, ಪದ್ಮದ ಎಸಳಿನಂತೆ ಅಗಲವಾದ ಕಣ್ಣುಳ್ಳ ಇವನೇ ವೀರನಾದ ಅರ್ಜುನನು.

ಕುಂತೀಸಮೀಪೇ ಪುರುಷೋತ್ತಮೌ ತು
ಯಮಾವಿಮೌ ವಿಷ್ಣುಮಹೇಂದ್ರಕಲ್ಪೌ ।
ಮನುಷ್ಯಲೋಕೇ ವಪುಷಾ ಸಮೋऽಸ್ತಿ
ಯಯೋರ್ನ ರೂಪೇ ನ ಬಲೇ ನ ಶೀಲೇ ॥೮॥

ಕುಂತಿಯ ಸಮೀಪದಲ್ಲಿರುವ ವಿಷ್ಣು ಹಾಗೂ ಇಂದ್ರರಂತೆ ಶೋಭಿಸುವ ಪುರುಷೋತ್ತಮರಾದ, ಯಾವ ಇಬ್ಬರಿಗೆ ಮನುಷ್ಯಲೋಕದಲ್ಲಿ ಶರೀರದಿಂದಾಗಲಿ, ರೂಪ-ಬಲ-ಶೀಲದಿಂದಾಗಲಿ ಸಮಾನರಾದವರು ಇಲ್ಲವೋ ಅಂತಹ ಇವರು ಅವಳಿ ಮಕ್ಕಳಾದ ನಕುಲ-ಸಹದೇವರು.

ಇಯಂ ಪುನಃ ಪದ್ಮದಲಾಯತಾಕ್ಷೀ
ಮಧ್ಯಂ ವಯಃ ಕಿಂಚಿದಿವ ಸ್ಪೃಶಂತೀ ।
ನೀಲೋತ್ಪಲಾಭಾ ಪುರದೇವತೇವ
ಕೃಷ್ಣಾ ಸ್ಥಿತಾ ಮೂರ್ತಿಮತೀವ ಲಕ್ಷ್ಮೀಃ ॥೯॥

ಅನಂತರ ಇರುವ, ಕಮಲದ ಎಸಳಿನಂತೆ ಕಂಗಳುಳ್ಳ, ಮಧ್ಯ ವಯಸ್ಸನ್ನು ಸ್ವಲ್ಪ ಮಾತ್ರವೇ ಸ್ಪರ್ಶಿಸಿರುವ, ನೀಲಕಮಲದಂತೆ ಬಣ್ಣವುಳ್ಳ, ಪುರದೇವತೆಯಂತೆ ಮೂರ್ತಿಮತ್ತಾದ ಲಕ್ಷ್ಮೀದೇವಿಯಂತೆ ಇರುವ ಇವಳೇ ಕೃಷ್ಣೆ ಎಂಬ ದ್ರೌಪದಿಯು.

ಅಸ್ಯಾಸ್ತು ಪಾರ್ಶ್ವೇ ಕನಕೋಪಮತ್ವಗ್
ಏಷಾ ಸ್ಥಿತಾ ಮೂರ್ತಿಮತೀವ ಗೌರೀ ।
ಸತ್ಯೇ ಸ್ಥಿತೈಷಾ ಭಗಿನೀ ದ್ವಿಜಾಗ್ಯಾಃ
ಚಕ್ರಾಯುಧಸ್ಯಾಪ್ರತಿಮಸ್ಯ ತಸ್ಯ ॥೧೦॥

ಹೇ ದ್ವಿಜಶ್ರೇಷ್ಠರೇ, ಇವಳ ಸಮೀಪದಲ್ಲಿಯೇ ಬಂಗಾರದಂತಿರುವ ಚರ್ಮವುಳ್ಳ ಮೂರ್ತಿಮತ್ತಾದ ಗೌರಿಯಂತೆ ಕಂಗೊಳಿಸುವ, ಸತ್ಯಮಾರ್ಗದಲ್ಲಿಯೇ ಸದಾ ಇರುವ, ಈಕೆಯು ಅಪ್ರತಿಮನಾದ ಚಕ್ರಾಯುಧಧಾರಿಯಾದ ಆ ಕೃಷ್ಣನ ತಂಗಿಯಾದ ಸುಭದ್ರೆಯು.

ಇಯಂ ಚ ಜಾಂಬೂನದಶುದ್ಧಗೌರೀ
ಪಾರ್ಥಸ್ಯ ಭಾರ್ಯಾ ಭುಜಗೇಂದ್ರಕನ್ಯಾ ।
ಚಿತ್ರಾಂಗದಾ ಚೈವ ನರೇಂದ್ರಕನ್ಯಾ
ಯೈಷಾ ಸವರ್ಣಾऽऽರ್ದ್ರಮಧೂಕಪುಷ್ಪೈಃ ॥೧೧॥

ಇವಳಾದರೂ ಶುದ್ಧವಾದ ಚಿನ್ನದಂತೆ ಕಂಗೊಳಿಸುವ ಸರ್ಪರಾಜನ ಮಗಳಾದ, ಅರ್ಜುನನ ಹೆಂಡತಿಯಾದ ಉಲೂಪಿಯು. ಆನಂತರದವಳು ಹಸಿಯಾದ ಹಿಪ್ಪೆಯ ಪುಷ್ಪಗಳಿಗೆ ಸದೃಶವಾದ ಬಣ್ಣವುಳ್ಳ ಮಣಲೂರ ರಾಜನ ಮಗನಾದ ಚಿತ್ರಾಂಗದೆಯು.

ಇಯಂ ಸ್ವಸಾ ರಾಜಚಮೂಪತೇಸ್ತು
ಪ್ರಬುದ್ಧನೀಲೋತ್ಪಲದಾಮವರ್ಣಾ ।
ಪಸ್ಪರ್ಧ ಕೃಷ್ಣೇನ ನೃಪಃ ಸದಾ ಯೋ
ವೃಕೋದರಸ್ಯೈಷ ಪರಿಗ್ರಹೋऽಗ್ಯಃ ॥೧೨॥

ಯಾವ ರಾಜನು ಕೃಷ್ಣನೆಂಬ ಹೆಸರುಳ್ಳ ಅರ್ಜುನನೊಂದಿಗೆ ಸದಾ ಸ್ಪರ್ಧೆಯಲ್ಲಿದ್ದನೋ ಅಂತಹ, ಯುಧಿಷ್ಠಿರನ ಸೇನಾಧಿಪತಿಯಾದ, ಧೃಷ್ಟದ್ಯುಮ್ನನ ಸಹೋದರಿಯಾದ ಈಕೆಯು ಭೀಮಸೇನನ ಪತ್ನಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯು.

ಇಯಂ ಚ ರಾಜ್ಞೋ ಮಗಧಾಧಿಪಸ್ಯ
ಸುತಾ ಜರಾಸಂಧ ಇತಿ ಶ್ರುತಸ್ಯ ।
ಯವೀಯಸೋ ಮಾದ್ರವತೀಸುತಸ್ಯ
ಭಾರ್ಯಾ ಮತಾ ಚಂಪಕದಾಮಗೌರೀ ॥೧೩॥

ಮಗಧಾದಿಪತಿಯಾದ, ಜರಾಸಂಧನೆಂಬ ಹೆಸರುಳ್ಳ ರಾಜನ ಮಗಳಾದ, ಸಂಪಿಗೆಯ ಮಾಲೆಯಂತೆ ಗೌರವರ್ಣವುಳ್ಳ ಇವಳಾದರೂ ಮಾದ್ರಿಯ ಮಕ್ಕಳಲ್ಲಿ ಚಿಕ್ಕವನಾದ ಸಹದೇವನ ಪತ್ನಿಯಾಗಿದ್ದಾಳೆ.

ಇಂದೀವರಶ್ಯಾಮತನುಃ ಸ್ಥಿತಾ ತು
ಯೈಷಾ ಪರಾऽऽಸನ್ನತರೋರ್ಲತೇವ ।
ಭಾರ್ಯಾ ಮತಾ ಮಾದ್ರವತೀಸುತಸ್ಯ
ಯಾऽಸೌ ವಿಶುದ್ಧಾಂಬುಜಪತ್ರನೇತ್ರಾ ॥೧೪॥

ನೈದಿಲೆಯಂತೆ ಶ್ಯಾಮಲವರ್ಣದ ಶರೀರವುಳ್ಳ, ಸಮೀಪದಲ್ಲಿರುವ ಮರಕ್ಕೆ ಬಳ್ಳಿಯಂತೆ ನಿಂತಿರುವ, ಸಹದೇವನ ಪತ್ನಿಯ ನಂತರವಿರುವ, ಶುದ್ಧವಾದ ಕಮಲದ ಪತ್ರದಂತೆ ಕಣ್ಣುಗಳುಳ್ಳ ಈಕೆಯು ಮಾದ್ರೀಸುತನಾದ ನಕುಲನ ಪತ್ನಿಯಾಗಿದ್ದಾಳೆ.

ಇಯಂ ತು ನಿಷ್ಪ್ತಪ್ತಸುವರ್ಣಗೌರೀ
ರಾಜ್ಞೋ ವಿರಾಟಸ್ಯ ಸುತಾ ಸಪುತ್ರಾ ।
ಭಾರ್ಯಾऽಭಿಮನ್ಯೋರ್ನಿಹತೋ ರಣೇ ಯೋ
ದ್ರೋಣಾದಿಭಿಸ್ತೈರ್ವಿರಥೋ ರಥಸ್ಥೈಃ ॥೧೫॥

ಚೆನ್ನಾಗಿ ಕಾಯಿಸಿದ ಚಿನ್ನದಂತೆ ಗೌರವರ್ಣವುಳ್ಳ, ವಿರಾಟರಾಜನ ಮಗಳಾದ, ಮಗುವಿನೊಂದಿಗೆ ನಿಂತಿರುವ ಈಕೆಯಾದರೂ ರಥದಲ್ಲಿರುವ ದ್ರೋಣಾದಿಗಳಿಂದ ವಿರಥನಾಗಿ ಯುದ್ಧದಲ್ಲಿ ಯಾರು ಮಡಿದನೋ ಅಂತಹ ಅಭಿಮನ್ಯುವಿನ ಪತ್ನಿಯಾದ ಉತ್ತರೆಯು.

ಏತಾಸ್ತು ಸೀಮಂತಶಿರೋರುಹಾ ಯಾಃ
ಶುಕ್ಲೋತ್ತರೀಯಾ ನರರಾಜಕನ್ಯಾಃ ।

ರಾಜ್ಞೋಽಸ್ಯ ವೃದ್ಧಸ್ಯ ಪರಂ ಶತಾಖ್ಯಾಃ
ಸ್ನುಷಾ ನೃವೀರಾಹತಪುತ್ರನಾಥಾಃ ॥೧೬॥

ಅನಂತರ ನಿಂತಿರುವ, ತಲೆಯಲ್ಲಿ ಕೇವಲ ಬೈತಲೆಗಳನ್ನು ಮಾತ್ರ ಧರಿಸಿರುವ, ಬಿಳಿಯಾದ ಬಟ್ಟೆಯನ್ನು ಧರಿಸಿರುವ, ರಾಜಶ್ರೇಷ್ಠರ ಕನ್ಯೆಯರಾದ ಇವರು ವೃದ್ಧನಾದ ಈ ಧೃತರಾಷ್ಟ್ರರಾಜನ ಸೊಸೆಯಂದಿರಾಗಿದ್ದು, ವೀರಭಟರಿಂದ ತಮ್ಮ ಮಕ್ಕಳನ್ನೂ, ಗಂಡಂದಿರನ್ನೂ ಕಳೆದುಕೊಂಡ ನೂರಕ್ಕೂ ಹೆಚ್ಚು ಮಂದಿ ಇರುವರು.

ಏತಾ ಯಥಾಮುಖ್ಯಮುದಾಹೃತಾ ವೋ
ಬ್ರಹ್ಮಣ್ಯಭಾವಾದ್ ಋಜುಬುದ್ಧಿಸತ್ವಾತ್ ।
ಸರ್ವೇ ಭವಂತೋಽಪಿ ತಪೋಬಲಾಗ್ರ್ಯಾಃ
ಕ್ಷಾಂತಾಶ್ಚ ದಾಂತಾಶ್ಚ ಕುಲೋದ್ಗತಾಶ್ಚ ॥೧೭॥

ಹೇ ಬ್ರಾಹ್ಮಣಶ್ರೇಷ್ಠರೇ, ತಾವೆಲ್ಲರೂ ಭಗವಂತನಲ್ಲಿ ಮನಸ್ಸನ್ನು ನೆಟ್ಟು ನೇರವಾದ ಬುದ್ಧಿ ಮತ್ತು ನಡತೆಯುಳ್ಳವರಾದುದರಿಂದ ತಪಸ್ಸು ಮತ್ತು ಬಲಗಳಿಂದ ಶ್ರೇಷ್ಠರಾಗಿರುವಿರಿ. ಅಲ್ಲದೇ ಸಹನಶೀಲರಾಗಿದ್ದು, ಇಂದ್ರಿಯನಿಗ್ರಹವುಳ್ಳವರಾಗಿದ್ದು ಉತ್ತಮವಾದ ಕುಲದಲ್ಲಿ ಬಂದಿರುವಿರಿ. ಅಂತಹ ತಮಗೆ ಇಲ್ಲಿರುವ ಸ್ತ್ರೀಯರನ್ನು ಮುಖ್ಯತೆಗೆ ಅನುಸಾರವಾಗಿ ಪರಿಚಯಿಸಿದ್ದೇನೆ.

ವೈಶಂಪಾಯನಃ

ಏವಂ ಸ ರಾಜಾ ಕುರುವೃದ್ಧವರ್ಯಃ
ಸಮಾಗತಸ್ತೈರ್ನರದೇವಪುತ್ರೈಃ ।
ಪಪ್ರಚ್ಛ ಚೈನಾನ್ ಕುಶಲಂ ತದಾನೀಂ
ಗತೇಷು ಸರ್ವೇಷ್ವಥ ತಾಪಸೇಷು ॥೧೮॥

ವೈಶಂಪಾಯನ– ಅನಂತರ ಎಲ್ಲ ತಾಪಸರೂ ತಮ್ಮ ತಮ್ಮ ಆಶ್ರಮಕ್ಕೆ ತೆರಳಿದೊಡನೆ ಕುರುಗಳಲ್ಲಿ ಶ್ರೇಷ್ಠನಾದ ಆ ಧೃತರಾಷ್ಟ್ರನು ಬಂದು ಸೇರಿರುವ ಎಲ್ಲ ನರದೇವಪುತ್ರರಲ್ಲಿ ಕುಶಲವನ್ನು ಪ್ರಶ್ನಿಸಿದನು.

ಯೋಧೇಷು ಚಾಪ್ಯಾಶ್ರಮಮಂಡಲಂ ತ-
ನ್ಮತ್ವಾ ನಿವಿಷ್ಟೇಷು ವಿಮುಚ್ಯ ಪಾರ್ಥಾನ್ ।

ಸ್ತ್ರೀಬಾಲವೃದ್ಧಾಂಶ್ಚ ಸುಸನ್ನಿವಿಷ್ಟಾನ್
ಯಥಾರ್ಹತಸ್ತಾನ್ ಕುಶಲಂ ಹ್ಯಪೃಚ್ಛತ್ ॥೧೯॥

ಯೋಧರೆಲ್ಲರೂ ಆ ಸ್ಥಳವು ಆಶ್ರಮಗಳ ಮಂಡಲವೆಂದು ತಿಳಿದು ಪಾಂಡವರನ್ನು ಬಿಟ್ಟು ದೂರದಲ್ಲಿ ಕುಳಿತರು. ಬಂದಿರುವ ಸ್ತ್ರೀ-ಬಾಲ-ವೃದ್ಧರೂ ಕೂಡ ಯಥಾಯೋಗ್ಯವಾಗಿ ಸರಿಯಾದ ಸ್ಥಳದಲ್ಲಿ ಕುಳಿತರು. ಅನಂತರ ಧೃತರಾಷ್ಟ್ರರಾಜನು ಯೋಗ್ಯತಾನುಸಾರವಾಗಿ ಅವರೆಲ್ಲರನ್ನೂ ಕುಶಲಪ್ರಶ್ನೆ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಸಂಜಯವಚನಂ ನಾಮ ಏಕತ್ರಿಂಶೋಽಧ್ಯಾಯಃ ॥

॥ ಆಶ್ರಮವಾಸಪರ್ವಣಿ ಏಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದಆಶ್ರಮವಾಸಿಕಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಧೃತರಾಷ್ಟ್ರ ಮತ್ತು ಯುಧಿಷ್ಠಿರನ ಉಭಯ ಕುಶಲೋಪರಿ ಮಾತುಕತೆ. ಯುಧಿಷ್ಠಿರನು ಧೃತರಾಷ್ಟ್ರನನ್ನು ವಿದುರನೆಲ್ಲೆಂದು ಪ್ರಶ್ನಿಸಿದಾಗ ಅಲ್ಲಿರುವ ವ್ಯಕ್ತಿಯೊಬ್ಬ ಆಕಸ್ಮಿಕವಾಗಿ ಧೃತರಾಷ್ಟ್ರನ ಸಮೀಪಕ್ಕೆ ಬರುತ್ತಿರುವ ಜನಸಂಪರ್ಕವನ್ನು ನೋಡಿ ಹಿಂದಿರುಗಲು ಬಯಸಿದ ವಿದುರನನ್ನು ತೋರಿಸುವುದು. ನಂತರ ಯುಧಿಷ್ಠಿರನು ಅವನನ್ನು ಹಿಂಬಾಲಿಸುವುದು. ವಿದುರನು ಯೋಗಬಲದಿಂದ ತನ್ನ ಶರೀರವನ್ನು ಬಿಟ್ಟು ಯುಧಿಷ್ಠಿರನ ಶರೀರದಲ್ಲಿ ಪ್ರವೇಶಿಸುವುದು. ಯುಧಿಷ್ಠಿರನು ಧೃತರಾಷ್ಟ್ರಾದಿಗಳಲ್ಲಿ ಆ ಅದ್ಭುತ ಪ್ರಸಂಗವನ್ನು ವಿವರಿಸುವುದು.

ಧೃತರಾಷ್ಟ್ರಃ

ಯುಧಿಷ್ಠಿರ ಮಹಾಬಾಹೋ ಕಚ್ಚಿತ್ ತಾತ ಕುಶಲ್ಯಸಿ ।
ಸಹಿತೋ ಭ್ರಾತೃಭಿಃ ಸರ್ವೈಃ ಪೌರಜಾನಪದೈಸ್ತಥಾ ॥೧॥

ಧೃತರಾಷ್ಟ್ರ– ಮಗು ಮಹಾಬಾಹುವಾದ ಯುಧಿಷ್ಠಿರನೇ, ಸಹೋದರರೊಂದಿಗೆ ಹಾಗೂ ಎಲ್ಲ ಪಟ್ಟಣ, ಗ್ರಾಮೀಣ ಜನರೊಂದಿಗೆ ಕೂಡಿರುವ ನೀನು ಕುಶಲಿಯಾಗಿರುವೆ ತಾನೇ?

ಯೇ ಚ ತ್ವಾಮನುಜೀವಂತಿ ಕಚ್ಚಿತ್ ತೇಽಪಿ ನಿರಾಮಯಾಃ ।
ಸಚಿವಾ ಭೃತ್ಯವರ್ಗಾಶ್ಚ ಗುರವಶ್ಚೈವ ತೇ ವಿಭೋ ॥೨॥

ಹೇ ವಿಭುವೇ, ಯಾರೆಲ್ಲ ನಿನ್ನನ್ನು ಆಶ್ರಯಿಸಿ ಜೀವಿಸುವರೋ ಮಂತ್ರಿಗಳು, ಸೇವಕ ವರ್ಗದವರು ಮತ್ತು ಗುರುಗಳು ಅವರೆಲ್ಲರೂ ಆರೋಗ್ಯದಿಂದ ಇರುವರು ತಾನೇ?

ಕಚ್ಚಿದ್ವರ್ತಸಿ ಪೌರಾಣೀಂ ವೃತ್ತಿಂ ರಾಜರ್ಷಿಸೇವಿತಾಮ್ ।
ಕಚ್ಚಿದಾಯಾನನುಚ್ಛಿದ್ಯ ಕೋಶಸ್ತೇಽಭಿಪ್ರಪೂರ್ಯತೇ ॥೩॥

ಹಿಂದಿನ ರಾಜರ್ಷಿಗಳು ನಡೆದು ತೋರುವ ನಡತೆಯಲ್ಲಿಯೇ ಇರುವೆ ತಾನೆ? ನಿನ್ನ ಕೋಶವು ನ್ಯಾಯಮಾರ್ಗವನ್ನು ಬಿಡದೆ ತುಂಬುತ್ತಿದೆ ತಾನೆ?

ಅರಿಮಧ್ಯಸ್ಥಮಿತ್ರೇಷು ವರ್ತಸೇ ಚಾನುರೂಪತಃ ।
ಬ್ರಹ್ಮಣಾನಗ್ರಹಾರೈರ್ವಾ ಯಥಾವದನುಪಶ್ಯಸಿ ॥೪॥

ಶತ್ರುಗಳು, ಉದಾಸೀನರು ಮತ್ತು ಮಿತ್ರರಲ್ಲಿ ಅವರವರಿಗೆ ಯೋಗ್ಯವಾದ ಕ್ರಮದಲ್ಲೇ ವರ್ತಿಸುವಿ ತಾನೆ? ಹಾಗೂ ಯಥಾವತ್ತಾಗಿ ಬ್ರಾಹ್ಮಣರನ್ನು, ಅಗ್ರಹಾರಾದಿಗಳನ್ನು ನೀಡುವ ಮೂಲಕ ನೋಡಿಕೊಳ್ಳುತ್ತಿರುವೆ ತಾನೆ?

ಕಚ್ಚಿತ್ ತೇ ಪರಿತುಷ್ಯಂತಿ ಶೀಲೇನ ಭರತರ್ಷಭ ।
ಶತ್ರವೋಽಪಿ ಕುತಃ ಪೌರಾ ಭೃತ್ಯಾ ವಾ ಸ್ವಜನೋಽಪಿ ವಾ ॥೫॥

ಹೇ ಭರತರ್ಷಭನೇ! ನಿನ್ನ ನಡವಳಿಕೆಯಿಂದ ಪಟ್ಟಣಿಗರು, ಸೇವಕಜನರು ಹಾಗೂ ಆತ್ಮೀಯ ಜನರು ಅಷ್ಟೇ ಏಕೆ, ಶತ್ರುಗಳೂ ಸಂತೋಷಗೊಳ್ಳುತ್ತಿದ್ದಾರೆ ತಾನೆ?

ಕಚ್ಚಿದರ್ಚಸಿ ರಾಜೇಂದ್ರ ಶ್ರದ್ಧಾವಾನ್ ಪಿತೃದೇವತಾಃ ।
ಅತಿಥೀಂಶ್ಚಾನ್ನಪಾನೇನ ಕಚ್ಚಿದರ್ಹಸಿ ಭಾರತ ॥೬॥

ಹೇ ರಾಜೇಂದ್ರನೇ, ಶ್ರದ್ಧೆಯುಳ್ಳವನಾಗಿ ಪಿತೃದೇವತೆಗಳನ್ನು ಅರ್ಚಿಸುತ್ತಿರುವೆ ತಾನೆ? ಹೇ ಭಾರತನೇ, ಅನ್ನ-ಪಾನಾದಿಗಳಿಂದ ಅತಿಥಿಗಳನ್ನು ಪೂಜಿಸುತ್ತಿರುವೆ ತಾನೆ?

ಕಚ್ಚಿಚ್ಚ ವಿಷಯೇ ವಿಪ್ರಾಃ ಸ್ವಕರ್ಮನಿರತಾಸ್ತವ ।
ಕ್ಷತ್ರಿಯಾ ವೈಶ್ಯವರ್ಣಾ ವಾ ಶೂದ್ರಾ ವಾऽಪಿ ಕುಟುಂಬಿನಃ ॥೭॥

ನಿನ್ನ ರಾಜ್ಯದಲ್ಲಿ ಸಂಸಾರವಂದಿಗಳಾದ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯವರ್ಣದವರು ಅಥವಾ ಶೂದ್ರರೂ ಕೂಡ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿರುವರು ತಾನೆ?

ಕಚ್ಚಿತ್ ಸ್ತ್ರೀಬಾಲವೃದ್ಧಂ ತೇ ನ ಶೋಚತಿ ನ ಯಾಚತಿ ।
ಜಾಮಯಃ ಪೂಜಿತಾಃ ಕಚ್ಚಿತ್ ತವ ಗೇಹೇ ಚ ಪಾರ್ಥಿವ ॥೮॥

ಹೇ ಪಾರ್ಥಿವನೇ, ನಿನ್ನ ರಾಜ್ಯದಲ್ಲಿ ಸ್ತ್ರೀಯರು, ಬಾಲರು, ವೃದ್ಧರು ದುಃಖಪಡದೆ, ಪರರನ್ನು ಯಾಚಿಸದೆ ಬದುಕುತ್ತಿದ್ದಾರೆ ತಾನೆ? ಅಲ್ಲದೇ ನಿನ್ನ ಅರಮನೆಯಲ್ಲಿ ನಿನ್ನ ಸಮೀಪದ ಬಂಧುಗಳು ಗೌರವದಿಂದ ಬದುಕುತ್ತಿದ್ದಾರೆ ತಾನೆ?

ಕಚ್ಚಿದ್ ರಾಜರ್ಷಿವಂಶೋऽಯಂ ತ್ವಾಮಾಸಾದ್ಯ ನರಾಧಿಪ ।
ಯಥೋಚಿತಂ ಮಹಾರಾಜ ಯಶಸೋ ನಾವಸೀದತಿ ॥೯॥

ಹೇ ನರಾಧಿಪನೇ, ಮಹಾರಾಜನೇ, ಈ ನಮ್ಮ ರಾಜಶ್ರೇಷ್ಠರ ವಂಶವು ನಿನ್ನ ಆಳ್ವಿಕೆಯನ್ನು ಪಡೆದು ಕೀರ್ತಿಯನ್ನು ಕಳೆದುಕೊಳ್ಳುತ್ತಿಲ್ಲ ತಾನೆ?

ವೈಶಂಪಾಯನಃ

ಇತ್ಯೇವಂವಾದಿನಂ ಸಂತಂ ನ್ಯಾಯವತ್ ಪ್ರತ್ಯಭಾಷತ ।
ಕುಶಲಪ್ರಶ್ನಸಂಯುಕ್ತಂ ಕುಶಲೋ ವಾಕ್ಯಮಬ್ರವೀತ್ ॥೧೦॥

ವೈಶಂಪಾಯನ– ಹೀಗೆ ನ್ಯಾಯಯುತವಾಗಿ ಪ್ರಶ್ನೆಗಳನ್ನು ಕೇಳುತ್ತಿರುವ ಧೃತರಾಷ್ಟ್ರನನ್ನು ಕುರಿತು ಕುಶಲನಾದ ಯುಧಿಷ್ಠಿರನು ಕುಶಲಪ್ರಶ್ನೆಯೊಂದಿಗೆ ಮುಂದೆ ಹೇಳುವಂತೆ ಮಾತನಾಡಿದನು.

ಯುಧಿಷ್ಠಿರಃ

ಅಪಿ ತೇ ವರ್ಧತೇ ರಾಜನ್ ತಪೋ ಮಂದ್ರಃ ಶಮಶ್ಚ ತೇ ॥೧೧॥

ಯುಧಿಷ್ಠಿರ– ಹೇ ರಾಜನೇ, ನಿನ್ನ ತಪಸ್ಸು, ತಪಸ್ಸಿನಿಂದಾದ ಸಂತೋಷವು ಮತ್ತು ಭಗವನ್ನಿಷ್ಠೆಯು ಬೆಳೆಯುತ್ತಿದೆ ತಾನೆ?

ಅಪಿ ಮಜ್ಜನನೀ ಚೇಯಂ ಶುಶ್ರೂಷುರ್ವಿಗತಕ್ಲಮಾ ।
ಅಪ್ಯಸ್ಯಾಃ ಸಫಲೋ ರಾಜನ್ ವನವಾಸೋ ಭವಿಷ್ಯತಿ ॥೧೨॥

ಈ ನನ್ನ ತಾಯಿಯಾದ ಕುಂತೀದೇವಿಯು ಯಾವುದೇ ರೀತಿಯ ಸಂಕಟವಿಲ್ಲದೆ ನಿಮ್ಮ ಸೇವೆಯನ್ನು ನಡೆಸುವಳು ತಾನೆ? ಹೇ ರಾಜನೇ, ಇವಳ ವನವಾಸವು ಸಫಲವಾಗುವುದಲ್ಲವೆ ?

ಇಯಂ ಚ ಮಾತಾ ಜ್ಯೇಷ್ಠಾ ಮೇ ಶೀತವಾತಾಧ್ವಕರ್ಶಿತಾ ।
ಘೋರೇಣ ತಪಸಾ ಯುಕ್ತಾ ದೇವೀ ಕಚ್ಚಿನ್ನ ಶೋಚತಿ ॥೧೩॥

ಈ ನನ್ನ ಹಿರಿ ತಾಯಿಯು ಚಳಿ, ಗಾಳಿ ಹಾಗೂ ನಡಿಗೆಗಳಿಂದ ಕೃಶಳಾಗಿ ಘೋರವಾದ ತಪಸ್ಸಿನಿಂದ ಕೂಡಿಕೊಂಡು ದುಃಖಪಡುತ್ತಿಲ್ಲ ತಾನೆ?

ಗತಾನ್ ಪುತ್ರಾನ್ ಮಹಾವೀರ್ಯಾನ್ ಕ್ಷತ್ರಧರ್ಮಪರಾಯಣಾನ್ ॥
ನಾಧ್ಯಾಪಯತಿ ವಾ ಕಚ್ಚಿದ್ ಅಸ್ಮಾನ್ ಪಾಪಕೃತಃ ಸದಾ ॥೧೫॥

ಮಹಾಬಲಿಷ್ಠರಾದ, ಕ್ಷತ್ರಧರ್ಮದಲ್ಲಿ ನಿಯತರಾದ, ಮರಣ ಹೊಂದಿದ ತನ್ನ ಮಕ್ಕಳನ್ನು ಚಿಂತಿಸುತ್ತಾ ನಮ್ಮನ್ನು ಪಾಪಿಗಳನ್ನಾಗಿ ಯಾವಾಗಲೂ ಚಿಂತಿಸುತ್ತಿಲ್ಲ ತಾನೆ?

ಕ್ವ ಚಾಸೌ ವಿದುರೋ ರಾಜನ್ ನೈನಂ ಪಶ್ಯಾಮಹೇ ವಯಮ್ ।
ಸಂಜಯಃ ಕುಶಲೀ ಚಾಪಿ ಕಚ್ಚಿತ್ ತಪಸಿ ಚ ಸ್ಥಿರಃ ॥೧೬॥

ಹೇ ರಾಜನೇ, ಈ ವಿದುರನು ಎಲ್ಲಿರುವನು? ನಾವು ಅವನನ್ನು ಕಾಣುತ್ತಿಲ್ಲವಷ್ಟೆ! ಅಲ್ಲದೆ ಸಂಜಯನು ತಪಸ್ಸಿನಲ್ಲಿ ಸ್ಥಿರನಾಗಿ ಕುಶಲಿಯಾಗಿರುವನು ತಾನೆ?

ವೈಶಂಪಾಯನಃ

ಇತ್ಯುಕ್ತಃ ಪ್ರತ್ಯುವಾಚೈನಂ ಧೃತರಾಷ್ಟ್ರೋ ಜನಾಧಿಪಃ ॥೧೭॥

ವೈಶಂಪಾಯನ– ಹೀಗೆ ಯುಧಿಷ್ಠಿರನು ಹೇಳಿದಾಗ ಜನಾಧಿಪತಿಯಾದ ಧೃತರಾಷ್ಟ್ರನು ಅವನಿಗೆ ಉತ್ತರ ನೀಡಿದನು.

ಧೃತರಾಷ್ಟ್ರಃ

ಕುಶಲೀ ವಿದುರಃ ಪುತ್ರ ತಪೋ ಘೋರಂ ಸಮಾಸ್ಥಿತಃ ॥೧೮॥

ವಾಯುಭಕ್ಷೋ ನಿರಾಹಾರಃ ಕೃಶೋ ಧಮನಿಸಂತತಃ ॥೧೯॥

ಕದಾಚಿದ್ ದೃಶ್ಯತೇ ವಿಪ್ರೈಃ ಶೂನ್ಯೇಽಸ್ಮಿನ್ ಕಾನನೇ ಕ್ವಚಿತ್ ॥೨೦॥

ಧೃತರಾಷ್ಟ್ರ– ಮಗನೇ, ವಿದುರನು ಘೋರವಾದ ತಪಸ್ಸನ್ನು ನಡೆಸುತ್ತಾ ಕುಶಲಿಯಾಗಿರುವನು. ಅವನು ಕೇವಲ ವಾಯುವನ್ನು ಸೇವಿಸುವವನಾಗಿ ಬೇರೆ ಯಾವುದೇ ಆಹಾರವಿಲ್ಲದೆ ಅತ್ಯಂತ ಕೃಶನಾಗಿ, ದೇಹದ ನರನಾಡಿಗಳೆಲ್ಲ ಹೊರಗೆ ಕಾಣುವಂತೆ ಇರುವನು. ಅವನು ಈ ನಿರ್ಜನವಾದ ಕಾಡಿನಲ್ಲಿ ಕೆಲವು ಕಡೆ ಕೆಲವೊಮ್ಮೆ ಬ್ರಾಹ್ಮಣರ ಕಣ್ಣಿಗೆ ಬೀಳುವನು.

ವೈಶಂಪಾಯನಃ

ಇತ್ಯೇವಂ ವದತಸ್ತಸ್ಯ ಜಟಾದಿಗ್ಧಮುಖಃ ಕೃಶಃ ।
ದಿಗ್ವಾಸಾ ಮಲದಿಗ್ಧಾಂಗೋ ವನರೇಣುಸಮುಕ್ಷಿತಃ ॥೨೧॥

ದೂರಾದಾಲಕ್ಷಿತಃ ಕ್ಷತ್ತಾ ತತ್ರಾಖ್ಯಾತೋ ಮಹೀಪತೇ ।
ವಿದುರಸ್ತ್ವೇಷ ಧರ್ಮಾತ್ಮಾ ಜನಂ ದೃಷ್ಟ್ವಾ ನಿವರ್ತತೇ ॥೨೨॥

ವೈಶಂಪಾಯನ– ಹೀಗೆ ಅವನು ಹೇಳುತ್ತಿರುವಾಗಲೇ ಜಡೆಯಿಂದ ಮುಚ್ಚಿದ ಮುಖವುಳ್ಳ, ಕೃಶವಾದ ಶರೀರವುಳ್ಳ, ದಿಗಂಬರನಾದ, ಕೊಳಕು ಮೆತ್ತಿಕೊಂಡ ಅಂಗಗಳುಳ್ಳ, ಕಾಡಿನ ಧೂಳಿನಿಂದ ಮುಚ್ಚಿಹೋದ ವಿದುರನು ದೂರದಲ್ಲಿ ಕಾಣಿಸಿದನು. ಹೇ ರಾಜನೇ, ಆಗ ಅಲ್ಲಿರುವ ವ್ಯಕ್ತಿಗಳು 'ಇವನು ಧರ್ಮಾತ್ಮನಾದ ವಿದುರನು, ಜನರನ್ನು ನೋಡಿ ಎದುರು ಬಾರದೆ ಹಿಂದಿರುಗುವನು' ಎಂದರು.

ನಿವರ್ತಮಾನಂ ಸಹಸಾ ಜನಂ ದೃಷ್ಟ್ವಾಽಽಶ್ರಮಂ ಪ್ರತಿ ।
ತಮನ್ವಧಾವನ್ನೃಪತಿರೇಕ ಏವ ಯುಧಿಷ್ಠಿರಃ ॥೨೩॥

ಆಶ್ರಮದ ಸಮೀಪದಲ್ಲಿ ಜನರನ್ನು ನೋಡಿ ಕೂಡಲೇ ಹಿಂದಿರುಗತೊಡಗಿದ ಆ ವಿದುರನನ್ನು ಯುಧಿಷ್ಠಿರನೊಬ್ಬನೇ ಹಿಂಬಾಲಿಸಿದನು.

ಪ್ರವಿಶಂತಂ ವನಂ ಘೋರಂ ಲಕ್ಷ್ಯಾಲಕ್ಷ್ಯಂ ಕ್ವಚಿತ್ ಕ್ವಚಿತ್ ॥೨೪॥

ಭೋ ಭೋ ವಿದುರ ರಾಜಾऽಹಂ ದಯಿತಸ್ತೇ ಯುಧಿಷ್ಠಿರಃ ।
ಇತಿ ಬ್ರುವನ್ ನರಪತಿರ್ಯತ್ನಾತ್ ತಮನುಜಗ್ಮಿವಾನ್ ॥೨೫॥

ಘೋರವಾದ ಕಾಡಿನೊಳಗೆ ಪ್ರವೇಶಿಸುತ್ತಿರುವ ಒಮ್ಮೆ ಕಂಡು, ಇನ್ನೊಮ್ಮೆ ಕಾಣದಿರುವ ಆ ವಿದುರನನ್ನು 'ಹೇ ವಿದುರನೇ, ನಾನು ನಿನಗೆ ಪ್ರೀತಿಪಾತ್ರನಾದ ರಾಜನಾದ ಯುಧಿಷ್ಠಿರನಾಗಿದ್ದೇನೆ' ಹೀಗೆ ಹೇಳುತ್ತಾ ರಾಜನು ಪ್ರಯತ್ನಪೂರ್ವಕವಾಗಿ ಅವನನ್ನು ಹಿಂಬಾಲಿಸಿದನು.

ತತೋ ವಿವಿಕ್ತ ಏಕಾಂತೇ ತಸ್ಥೌ ಬುದ್ಧಿಮತಾಂ ವರಃ ।
ವಿದುರೋ ವೃಕ್ಷಮಾಶ್ರಿತ್ಯ ಕಂಚಿತ್ ತಸ್ಮಿನ್ ವನಾಂತರೇ ॥೨೬॥

ಅನಂತರ ಬುದ್ಧಿವಂತರಲ್ಲಿ ಶ್ರೇಷ್ಠನಾದ ವಿದುರನು ಅದೇ ಕಾಡಿನೊಳಗೆ ಯಾವುದೋ ಒಂದು ಮರದ ಬುಡದಲ್ಲಿ ಏಕಾಂತದಲ್ಲಿ ಬೇರೆ ಯಾರಿಗೂ ಕಾಣದಂತೆ ನಿಂತನು.

ತಂ ರಾಜಾ ಕ್ಷೀಣಭೂಯಿಷ್ಠಮಾಕೃತೀಮಾತ್ರಸೂಚಿತಮ್ ।
ಅಭಿಜಜ್ಞೇ ಮಹಾಬುದ್ಧಿಂ ಮಹಾಬುದ್ಧಿರ್ಯುಧಿಷ್ಠಿರಃ ॥೨೭॥

ಮಹಾಬುದ್ಧಿಯುಳ್ಳ ಯುಧಿಷ್ಠಿರರಾಜನು ತುಂಬಾ ಕ್ಷೀಣನಾದ, ಮನುಷ್ಯಾಕೃತಿಯಂತೆ ಮಾತ್ರ ಕಾಣುವ ಆ ವ್ಯಕ್ತಿಯನ್ನು ಮಹಾಬುದ್ಧಿಯಾದ ವಿದುರನೆಂಬುದಾಗಿ ತಿಳಿದನು.

ಯುಧಿಷ್ಠಿರೋऽಹಮಸ್ಮೀತಿ ವಾಕ್ಯಮುಕ್ತ್ವಾऽಗ್ರತಃ ಸ್ಥಿತಃ ।
ವಿದುರಸ್ಯಾಶ್ರಮೇ ರಾಜಾ ಸ ಚ ಪ್ರತ್ಯಾಹ ಸಂಜ್ಞಯಾ ॥೨೮॥

ರಾಜನು 'ನಾನು ಯುಧಿಷ್ಠಿರನು' ಎಂಬುದಾಗಿ ಒಂದು ವಾಕ್ಯವನ್ನು ಮಾತ್ರ ಹೇಳಿ ವಿದುರಾಶ್ರಮದಲ್ಲಿ ಅವನ ಮುಂಭಾಗದಲ್ಲಿ ನಿಂತನು. ಆ ವಿದುರನು ಸಂಜ್ಞೆಯಿಂದಲೇ ಉತ್ತರಿಸಿದನು.

ತತಃ ಸೋऽನಿಮಿಷೋ ಭೂತ್ವಾ ರಾಜಾನಂ ಸಮುದೈಕ್ಷತ ।
ಸಂಯೋಜ್ಯ ವಿದುರಸ್ತಸ್ಮಿನ್ ದೃಷ್ಟ್ವಾ ದೃಷ್ಟಿಂ ಸಮಾಹಿತಃ ॥೨೯॥

ಅನಂತರ ಆ ವಿದುರನು ಸಮಾಧಾನಚಿತ್ತನಾಗಿ ಯುಧಿಷ್ಠಿರನ ಮುಂಭಾಗದಲ್ಲಿ ದೃಷ್ಟಿಗೆ ದೃಷ್ಟಿಯನ್ನು ಕೂಡಿಸಿ, ರೆಪ್ಪೆಯನ್ನು ಮಿಟುಕಿಸದೆ ರಾಜನನ್ನು ದಿಟ್ಟಿಸಿ ನೋಡಿದನು.

ವಿವೇಶ ವಿದುರೋ ಧೀಮಾನ್ ಗಾತ್ರೈರ್ಗಾತ್ರಾಣಿ ಚೈವ ಹಿ ।
ಪ್ರಾಣಾನ್ ಪ್ರಾಣೇಷು ಚ ದಧದ್ ಇಂದ್ರಿಯಾಣೀಂದ್ರಿಯೇಷು ಚ ॥

ಸ ಯೋಗಬಲಮಾಸ್ಥಾಯ ವಿವೇಶ ನೃಪತೇಸ್ತನುಮ್ ।
ವಿದುರೋ ಧರ್ಮರಾಜಸ್ಯ ತೇಜಸಾ ಪ್ರಜ್ವಲನ್ನಿವ ॥೩೧॥

ಅನಂತರ ಧೀಮಂತನಾದ ವಿದುರನು ತನ್ನ ಪ್ರಾಣಗಳನ್ನು ಯುಧಿಷ್ಠಿರನ ಪ್ರಾಣಗಳಲ್ಲೂ, ತನ್ನ ಇಂದ್ರಿಯಗಳನ್ನು ಯುಧಿಷ್ಠಿರನ ಇಂದ್ರಿಯಗಳಲ್ಲೂ ಇರಿಸಿ, ಯೋಗಬಲದಿಂದ ತನ್ನ ಶರೀರದಿಂದ ಯುಧಿಷ್ಠಿರನ ಶರೀರವನ್ನು ಪ್ರವೇಶಿಸುವವನಾಗಿ ತೇಜಸ್ಸಿನಿಂದ ಉರಿಯುತ್ತಿರುವ ಬೆಂಕಿಯಂತೆ ರಾಜನಾದ ಧರ್ಮರಾಜನ ಶರೀರವನ್ನು ಪ್ರವೇಶಿಸಿದನು.

ವಿದುರಸ್ಯ ಶರೀರಂ ತು ತಥೈವ ಸ್ತಬ್ಧಲೋಚನಮ್ ।
ವೃಕ್ಷಾಶ್ರಿತಂ ತದಾ ರಾಜಾ ದದರ್ಶ ಗತಚೇತನಮ್ ॥೩೨॥

ಆಗ ರಾಜನಾದ ಯುಧಿಷ್ಠಿರನು ವಿದುರನ ಶರೀರವು ಮರಕ್ಕೆ ಒರಗಿದಂತೆಯೇ ಕಣ್ಣುಗಳು ಸ್ತಬ್ಧವಾಗಿ ಚೇತನವು ಹೊರಟು ಹೋಗಿರುವುದನ್ನಾಗಿ ಗಮನಿಸಿದನು.

ಬಲಸ್ಥಮಪಿ ಚಾತ್ಮಾನಂ ಮೇನೇ ಬಹುಗುಣಂ ತದಾ ।
ಧರ್ಮರಾಜೋ ಮಹಾರಾಜಸ್ತಂ ಚ ಸಸ್ಮಾರ ಪಾಂಡವಃ ॥೩೩॥

ಪೌರಾಣಮಾತ್ಮನಃ ಸರ್ವಂ ಭವಿಷ್ಯಂ ಚ ನರಾಧಿಪ ।
ಯೋಗಧರ್ಮಂ ಮಹಾತೇಜಾ ವ್ಯಾಸೇನ ಕಥಿತಂ ತಥಾ ॥೩೪॥

ಆಗ ಮಹಾತೇಜಸ್ವಿಯಾದ ಪಾಂಡವನಾದ ಮಹಾರಾಜನಾದ ಧರ್ಮರಾಜನು ತಾನು ಅತ್ಯಂತ ಬಲಿಷ್ಠನಾದಂತೆಯೂ, ಬಹಳ ಗುಣಗಳಿಂದ ಕೂಡಿದವನನ್ನಾಗಿಯೂ ತಿಳಿದುಕೊಂಡನು. ಜೊತೆಗೆ ಈ ಹಿಂದೆ ವೇದವ್ಯಾಸರು ಹೇಳಿದ ತನ್ನ ಎಲ್ಲ ಭವಿಷ್ಯವನ್ನೂ, ಯೋಗಧರ್ಮದಿಂದ ವಿದುರನು ತನ್ನಲ್ಲಿ ಪ್ರವೇಶಿಸುವ ವಿಷಯವನ್ನೂ ಸ್ಮರಿಸಿಕೊಂಡನು.

ಧರ್ಮರಾಜಸ್ತು ತತ್ಶೈನಂ ಸಂಚಸ್ಕಾರಯಿಷುಸ್ತದಾ ।
ದಗ್ಧುಕಾಮೋಽಭವದ್ ವಿದ್ವಾನ್ ಅಥಾಕಾಶೇ ವಚೋಽಬ್ರವೀತ್ ॥೩೫॥

ಆಗ ಧರ್ಮರಾಜನು ಈ ವಿದುರನ ಶರೀರಕ್ಕೆ ಸಂಸ್ಕಾರ ಮಾಡಲು ಇಚ್ಛಿಸುತ್ತಾ, ಶರೀರವನ್ನು ದಹನ ಮಾಡಲು ಬಯಸಿದನು. ಆಗ ಆಕಾಶದಲ್ಲಿ ಮಾತು ಕೇಳಿ ಬಂದಿತು.

ವಾಕ್

ಭೋ ಭೋ ರಾಜನ್ ನ ದಗ್ಧವ್ಯಮ್ ಏತದ್ವಿದುರಸಂಜ್ಞಕಮ್ ।
ಕಲೇವರಮಿಹೈತತ್ ತೇ ನೈಷ ಧರ್ಮಃ ಸನಾತನಃ ॥೩೬॥

ಅಶರೀರವಾಣಿ– ಹೇ ರಾಜನೇ, ಈ ವಿದುರನ ಶರೀರವು ದಹನಕ್ಕೆ ಯೋಗ್ಯವಾಗಿಲ್ಲ. ಇದು ಸನಾತನವಾದ ಧರ್ಮವಲ್ಲ.

ಲೋಕವೈಕರ್ಮಣಾ ನಾಮ ಭವಿಷ್ಯತ್ಯಸ್ಯ ಪಾರ್ಥಿವ ।
ಯತಿಧರ್ಮಮವಾಪ್ತೋಽಸೌ ನ ಶೋಚ್ಯೋ ಭರತರ್ಷಭ ॥೩೭॥

ಹೇ ರಾಜನೇ, ಈ ಶರೀರವು ಲೋಕದಲ್ಲಿ ಪ್ರವೃತ್ತಿಕರ್ಮವನ್ನು ಬಿಟ್ಟ, ಶಾಂತರಾದ ಮುನಿಗಳ ಶರೀರದಂತೆಯೇ. ಏಕೆಂದರೆ ಈ ವಿದುರನು ಯತಿಧರ್ಮವನ್ನು ಸ್ವೀಕರಿಸಿದ್ದಾನೆ. ಆದ್ದರಿಂದ ಇವನ ವಿಷಯದಲ್ಲಿ ನೀನು ದುಃಖ ಪಡಬೇಡ.

ವೈಶಂಪಾಯನಃ

ಇತ್ಯುಕ್ತೋ ಧರ್ಮರಾಜಸ್ತು ವಿನಿವೃತ್ಯ ಮಹಾಮನಾಃ ।
ರಾಜ್ಞೋ ವೈಚಿತ್ರವೀರ್ಯಸ್ಯ ತತ್ಸರ್ವಂ ಪ್ರತ್ಯವೇದಯತ್ ॥೩೮॥

ವೈಶಂಪಾಯನ– ಹೀಗೆ ಅಶರೀರವಾಣಿಯು ಹೇಳಿದಾಗ, ಮಹಾಮನಸ್ವಿಯಾದ ಧರ್ಮರಾಜನು ಅಲ್ಲಿಂದ ಹಿಂದಿರುಗಿ, ಧೃತರಾಷ್ಟ್ರರಾಜನಿಗೆ ಆ ಎಲ್ಲವನ್ನೂ ನಿವೇದಿಸಿದನು.

ತತಃ ಸ ರಾಜಾ ಧೃತಿಮಾನ್ ಸ ಚ ಸರ್ವೋ ಜನಸ್ತದಾ ।
ಭೀಮಸೇನಾದಯಶ್ಚೈವ ಪರಂ ವಿಸ್ಮಯಮಾಗತಾಃ ॥೩೯॥

ಇದನ್ನು ಕೇಳಿದ ಧೈರ್ಯಶಾಲಿಯಾದ ಆ ಧೃತರಾಷ್ಟ್ರರಾಜನೂ, ಅಲ್ಲಿರುವ ಎಲ್ಲ ಜನಸಮೂಹಗಳೂ, ಭೀಮಸೇನಾದಿಗಳೂ ಆಶ್ಚರ್ಯಚಕಿತರಾದರು.

ತಚ್ಛ್ರುತ್ವಾ ಪ್ರೀತಿಮಾನ್ ರಾಜಾ ಭೂತ್ವಾ ಧರ್ಮಜಮಬ್ರವೀತ್ ॥೪೦॥

ಎಲ್ಲವನ್ನೂ ಕೇಳಿದ ನಂತರ ಸಂತೋಷಗೊಂಡ ರಾಜನು ಧರ್ಮರಾಜನನ್ನುಕುರಿತು ಹೀಗೆ ಹೇಳಿದನು.

ಧೃತರಾಷ್ಟ್ರಃ

ಆಪೋ ಮೂಲಂ ಫಲಂ ಚೈವ ಮಮೈವ ಪ್ರತಿಗೃಹ್ಯತಾಮ್ ।
ಯದನ್ನೋ ಹಿ ನರೋ ರಾಜನ್ ತದನ್ನೋಽಸ್ಯಾತಿಥಿರ್ಮತಃ ॥೪೧॥

ಧೃತರಾಷ್ಟ್ರ– ಹೇ ರಾಜನೇ, ಮನುಷ್ಯನು ತಾನು ಯಾವ ಅನ್ನವನ್ನು ಉಣ್ಣುವನೋ ಅವನ ಅತಿಥಿಗೂ ಅದೇ ಅನ್ನವಾಗಿದೆ. ನಾನು ನೀರು ಹಾಗೂ ಮೂಲ-ಫಲಗಳನ್ನು ಸ್ವೀಕರಿಸುವವನು. ಆದ್ದರಿಂದ ನೀವೆಲ್ಲರೂ ನನ್ನಿಂದ ನೀರು, ಮೂಲಫಲಗಳನ್ನು ಸ್ವೀಕರಿಸಿ.

ವೈಶಂಪಾಯನಃ

ಇತ್ಯುಕ್ತಃ ಸ ತಥೇತ್ಯೇವಂ ಪ್ರಾಹ ಧರ್ಮಾತ್ಮಜೋ ನೃಪಮ್ ।
ಫಲಮೂಲಂ ಚ ಬುಭುಜೇ ರಾಜ್ಞಾ ದತ್ತಂ ಸಹಾನುಜಃ ॥೪೨॥

ವೈಶಂಪಾಯನ– ಧೃತರಾಷ್ಟ್ರನು ಹೀಗೆ ಹೇಳಿದಾಗ ಧರ್ಮರಾಜನು 'ಹಾಗೇ ಆಗಲಿ' ಎಂದು ರಾಜನಿಗೆ ಉತ್ತರಿಸಿದನು. ನಂತರ ರಾಜನು ನೀಡಿದ ಫಲ ಹಾಗೂ ಮೂಲಗಳನ್ನು ಸಹೋದರರೊಂದಿಗೆ ಸ್ವೀಕರಿಸಿದನು.

ತತಸ್ತೇ ವೃಕ್ಷಮೂಲೇಷು ಕೃತವಾಸಪರಿಗ್ರಹಾಃ ।
ತಾಂ ರಾತ್ರಿಂ ನ್ಯವಸನ್ ಸರ್ವೇ ಫಲಮೂಲಕೃತವ್ರತಾಃ ॥೪೩॥

ಅನಂತರ ಅವರೆಲ್ಲರೂ ಮರದ ಬುಡಗಳಲ್ಲಿ ವಾಸವನ್ನು ಪರಿಕಲ್ಪಿಸಿಕೊಂಡು ಫಲ-ಮೂಲಾದಿಗಳಿಂದ ಆಹಾರವನ್ನು ಸ್ವೀಕರಿಸಿ ಆ ರಾತ್ರಿಯನ್ನು ಕಳೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ವಿದುರಸ್ಯ ಧರ್ಮರಾಜಪ್ರವೇಶೋ ನಾಮ
ದ್ವಾತ್ರಿಂಶೋಽಧ್ಯಾಯಃ ॥
॥ ಆಶ್ರಮವಾಸಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದ ಯುಧಿಷ್ಠಿರನು ಸಹೋದರರೊಂದಿಗೆ ಮಹರ್ಷಿಗಳ ಆಶ್ರಮವನ್ನು ಸಂದರ್ಶಿಸುವುದು. ಶತಯೂಪಾದಿ ಮಹರ್ಷಿಗಳು ಮತ್ತು ಶಿಷ್ಯರೊಂದಿಗೆ ಕೂಡಿದ ವೇದವ್ಯಾಸರು- ಯುಧಿಷ್ಠಿರಾದಿಗಳ ಜೊತೆಗಿರುವ ಧೃತರಾಷ್ಟ್ರನ ಆಶ್ರಮಕ್ಕೆ ಆಗಮಿಸುವುದು. ವೇದವ್ಯಾಸರು ಧೃತರಾಷ್ಟ್ರನಿಗೆ ಕುಶಲಪ್ರಶ್ನೆಯೊಂದಿಗೆ ವಿದುರನ ನಿಜಸ್ವರೂಪವನ್ನು ವಿವರಿಸುವುದು ಹಾಗೂ ''ಇತರ ಋಷಿಗಳಿಗೆ ಅಸಾಧ್ಯವಾದ ನಿಮಗೆ ಇಷ್ಟವಾದ ಆಶ್ಚರ್ಯಕರ್ಮವನ್ನು ನಡೆಸುವೆನೆಂದು'' ಶಪಥಗೈಯ್ಯುವುದು.

ವೈಶಂಪಾಯನಃ

ಏವಂ ಸಾ ರಜನೀ ತೇಷಾಮಾಶ್ರಮೇ ಪುಣ್ಯಕರ್ಮಣಾಮ್ ।
ಶಿವಾ ನಕ್ಷತ್ರವಿದ್ಯೋತಾ ವ್ಯತಿಯಾತಾ ಕುರೂದ್ವಹ ॥೧॥

ವೈಶಂಪಾಯನ– ಹೇ ಕುರೂದ್ವಹನೇ, ಪುಣ್ಯಕರ್ಮವುಳ್ಳ ಆ ಪಾಂಡವರು ಮಂಗಳಮಯವಾದ, ನಕ್ಷತ್ರಗಳ ಮಂದ ಬೆಳಕುಳ್ಳ ಆ ರಾತ್ರಿಯನ್ನು ಸುಖವಾಗಿ ಕಳೆದರು.

ತತ್ರ ತತ್ರ ಕಥಾಶ್ಚಾಸನ್ ತೇಷಾಂ ಧರ್ಮಾರ್ಥಲಕ್ಷಣಾಃ ।
ವಿಚಿತ್ರಪದಸಂಚಾರಾ ನಾನಾಶ್ರುತಿಭಿರನ್ವಿತಾಃ ॥೨॥

ಆ ರಾತ್ರಿಕಾಲದಲ್ಲಿ ಅಲ್ಲಲ್ಲಿ ಅವರ ನಡುವೆ ವಿಚಿತ್ರವಾದ ಪದಗಳ ಬಳಕೆಯುಳ್ಳ, ನಾನಾ ರೀತಿಯ ವೇದವಾಕ್ಯಗಳಿಂದ ಕೂಡಿದ ಧರ್ಮ ಮತ್ತು ಪುರುಷಾರ್ಥಗಳಿಗೆ ಸಂಬಂಧಿಸಿದ ಮಾತುಕತೆಗಳು ನಡೆದವು.

ಪಾಂಡವಾಸ್ತ್ವಭಿತೋ ಮಾತುರ್ಧರಣ್ಯಾಂ ಸುಷುಪುಸ್ತದಾ ।
ಉತ್ಸೃಜ್ಯ ಸುಮಹಾರ್ಹಾಣಿ ಶಯನಾನಿ ನರಾಧಿಪ ॥೩॥

ಹೇ ನರಾಧಿಪನೇ, ಪಾಂಡವರಾದರೂ ಬಹಳ ಬೆಲೆಬಾಳುವ ಹಾಸಿಗೆಗಳನ್ನು ಬಿಟ್ಟು ತಾಯಿಯ ಸುತ್ತಲೂ ನೆಲದಲ್ಲಿ ಮಲಗಿದರು.

ಯದಾಹಾರೋऽಭವದ್ ರಾಜಾ ಧೃತರಾಷ್ಟ್ರೋ ಮಹಾಮನಾಃ ।
ತದಾಹಾರಾ ನೃವೀರಾಸ್ತೇ ನ್ಯವಸಂಸ್ತಾಂ ನಿಶಾಂ ತದಾ ॥೪॥

ಮಹಾಮನಸ್ವಿಯಾದ ಧೃತರಾಷ್ಟ್ರರಾಜನು ಯಾವ ಆಹಾರವನ್ನು ಸ್ವೀಕರಿಸಿದನೋ ಅದೇ ಆಹಾರವನ್ನು ಆ ರಾತ್ರಿಯಲ್ಲಿ ವೀರರಾದ ಪಾಂಡವರು ಸ್ವೀಕರಿಸಿ ಆ ರಾತ್ರಿಯನ್ನು ಕಳೆದರು.

ವ್ಯತೀತಾಯಾಂ ತು ಶರ್ವರ್ಯಾಂ ಕೃತಪೌರ್ವಾಹ್ಣಿಕಕ್ರಿಯಃ ।
ಭ್ರಾತೃಭಿಃ ಸಹಿತೋ ರಾಜಾ ದದರ್ಶಾಶ್ರಮಮಂಡಲಮ್ ॥೫॥

ಸಾಂತಃಪುರಪರೀವಾರಃ ಸಭೃತ್ಯಃ ಸಪುರೋಹಿತಃ ।
ಯಥಾಮುಖಂ ಯಥೋದ್ದೇಶಂ ಧೃತರಾಷ್ಟ್ರಾಭ್ಯನುಜ್ಞಯಾ ॥೬॥

ಆ ರಾತ್ರಿ ಕಳೆದ ನಂತರ ಪೂರ್ವಾಹ್ಣಿಕ ಕ್ರಿಯೆಗಳನ್ನು ನಡೆಸಿದ ಸಹೋದರರಿಂದ ಸಹಿತರಾದ ಯುಧಿಷ್ಠಿರರಾಜನು ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು, ಅಂತಃಪುರ ಪರಿವಾರ, ಭೃತ್ಯರು, ಪುರೋಹಿತರೊಡನೆ ಕೂಡಿಕೊಂಡು ಇಷ್ಟಬಂದ ಕಡೆಯಲ್ಲಿ, ಇಷ್ಟ ಬಂದ ರೀತಿಯಲ್ಲಿ ಆಶ್ರಮ ಪರಿಸರವನ್ನು ಸಂದರ್ಶಿಸಿದನು.

ದದರ್ಶ ತತ್ರ ವೇದೀಶ್ಚ ಸಂಪ್ರಜ್ವಲಿತಪಾವಕಾಃ ।
ಕೃತಾಭಿಷೇಕೈರ್ಮುನಿಭಿರ್ಹುತಾಗ್ನಿಭಿರುಪಸ್ಥಿತಾಃ ॥೭॥

ಅಲ್ಲಿ ಅಭಿಷೇಕಾದಿಗಳನ್ನು ನಡೆಸುತ್ತಿರುವ ಮುನಿಗಳಿಂದ ಕೂಡಿದ, ಔಪಾಸನಾದಿಗಳಿಂದ ಅಗ್ನಿಯನ್ನು ಅರ್ಚಿಸಿ ಅಗ್ನಿಗೆ ನಮಸ್ಕರಿಸುತ್ತಿರುವ ಮುನಿಗಳಿಂದ ಕೂಡಿದ ಜ್ವಲಿಸುವ ಅಗ್ನಿಗಳುಳ್ಳ ವೇದಿಕೆಗಳನ್ನು ನೋಡಿದನು.

ವನೇಷು ಪುಷ್ಪನಿಕರೈಃ ರಾಜನ್ ಧೂಮೋದ್ಗಮೈರಪಿ ।
ಬ್ರಾಹ್ಮೇಣ ವಪುಷಾ ಯುಕ್ತಾ ಯುಕ್ತಾ ಮುನಿಗಣಸ್ಯ ತಾಃ ॥೮॥

ಆ ವೇದಿಕೆಗಳ ಸುತ್ತಲೂ ಧೂಪದ ಧೂಮವು ದಟ್ಟವಾಗಿ ಹರಡುತ್ತಿತ್ತು. ಆ ಧೂಮದಂತೆಯೇ ಕಾಡಿನಲ್ಲಿ ಪುಷ್ಪಗಳು ಅರಳಿ ನಿಂತಿದ್ದವು. ಅಲ್ಲದೇ ಆ ವೇದಿಕೆಗಳಲ್ಲಿ ಮುನಿಜನರೂ, ಬ್ರಾಹ್ಮಣಜನರೂ ಸೇರಿಕೊಂಡ ವೇದಿಕೆಯು ಸುಂದರವಾಗಿ ಕಾಣುತ್ತಿತ್ತು.

ಮೃಗಯೂಥೈರನುದ್ವಿಗ್ನೈಸ್ತತ್ರತತ್ರ ಸಮಾಶ್ರಿತೈಃ ।
ಅಶಂಕಿತೈಃ ಪಕ್ಷಿಗಣೈಃ ಪ್ರಗೀತೈರಿವ ಚ ಪ್ರಭೋ ॥೯॥

ಅಲ್ಲಲ್ಲಿ ಜಿಂಕೆಗಳ ಸಮೂಹಗಳು ಯಾವುದೇ ಉದ್ವೇಗವಿಲ್ಲದೆ ಆಶ್ರಯಿಸಿಕೊಂಡಿದ್ದವು. ಹಾಗೆಯೇ ಹೇ ಪ್ರಭುವೇ, ಪಕ್ಷಿಗಣಗಳು ಶಂಕೆಯಿಲ್ಲದೆ ಅಲ್ಲಲ್ಲಿ ಹಾರುತ್ತಿದ್ದವು.

ಕೇಕಾಭಿರ್ನೀಲಕಂಠಾನಾಂ ದಾತ್ಯೂಹಾನಾಂ ಚ ಕೂಜಿತೈಃ ।
ಕೋಕಿಲಾನಾಂ ಕುಹುರವೈಃ ಸುಖೈಃ ಶ್ರುತಿಮನೋಹರೈಃ ॥೧೦॥

ನವಿಲುಗಳ ಕೇಕೆಗಳಿಂದ, ನೀರುಕೋಳಿಗಳ ಕೂಗುಗಳಿಂದ, ಕೇಳಲು ಇಂಪಾದ ಮತ್ತು ಸುಖಕರವಾದ ಕೋಗಿಲೆಗಳ ಕುಹು ಎಂಬ ಶಬ್ದಗಳಿಂದ ಆ ಪ್ರದೇಶವು ಕೂಡಿತ್ತು.

ಪ್ರಾಧೀತದ್ವಿಜಘೋಷೈಶ್ಚ ಕ್ವಚಿತ್ಕ್ವಚಿದಲಂಕೃತಮ್ ।
ಫಲಮೂಲಸಮಾಹಾರೈರ್ಮಹದ್ಭಿಶ್ಚೋಪಶೋಭಿತಮ್ ॥೧೧॥

ಅಲ್ಲದೇ ಆ ಪ್ರದೇಶವು ಕೆಲವು ಕಡೆ ಚೆನ್ನಾಗಿ ಅಧ್ಯಯನ ಮಾಡಿದ ಬ್ರಾಹ್ಮಣರ ಮಂತ್ರಘೋಷಗಳಿಂದ ಅಲಂಕೃತವಾಗಿತ್ತು. ಜೊತೆಗೆ ಫಲ-ಮೂಲಾದಿಗಳನ್ನು ಹುಡುಕಿ ತಂದಿರುವ ಹಿರಿಯ ಜನರಿಂದ ಶೋಭಿತವಾಗಿತ್ತು.

ತತಃ ಸ ರಾಜಾ ಪ್ರದದೌ ತಾಪಸಾರ್ಥಮುಪಾಹೃತಾನ್ ।
ಕಲಶಾನ್ ಕಾಂಚನಾನ್ ರಾಜನ್ ತಥೈವೌದುಂಬರಾನಪಿ ॥೧೨॥

ಹೇ ರಾಜನೇ, ಅನಂತರ ಆ ಧರ್ಮರಾಜನು ತಾಪಸ ಜನರಿಗೋಸ್ಕರ ತಂದಿರುವ ಚಿನ್ನದ ಕಲಶಗಳನ್ನು, ಅಂತೆಯೇ ಅತ್ತಿಯ ಮರದಿಂದ ಮಾಡಿದ ಕಲಶಗಳನ್ನೂ ವಿತರಿಸಿದನು.

ಅಜಿನಾನಿ ಪ್ರವೇಣೀಶ್ಚ ಸ್ರುಕ್ಸ್ರುವಂ ಚ ಮಹೀಪತಿಃ ।
ಕಮಂಡಲೂಂಶ್ಚ ಸ್ಥಾಲೀಶ್ಚ ಪಿಠರಾಣಿ ಚ ಭಾರತ ॥೧೩॥

ಹೇ ಭಾರತನೇ, ಮಹೀಪತಿಯಾದ ಧರ್ಮರಾಜನು ನಾನಾ ರೀತಿಯ ಅಜಿನಗಳನ್ನೂ, ಚಿತ್ರಗಳಿಂದ ಕೂಡಿದ ಆಸನರೂಪವಾದ ಕಂಬಳಿಗಳನ್ನೂ, ಯಜ್ಞಕ್ಕಾಗಿ ಉಪಯೋಗಿಸುವ ಸ್ರುಕ್-ಸ್ರುವಗಳನ್ನೂ, ಕಮಂಡಲುಗಳನ್ನೂ, ಪಾತ್ರೆಗಳನ್ನೂ, ಕಡಗೋಲುಗಳನ್ನೂ ವಿತರಿಸಿದನು.

ಭಾಜನಾನಿ ಚ ಲೌಹಾನಿ ಪಾತ್ರೀಶ್ಚ ವಿವಿಧಾ ನೃಪ ।
ಯದ್ಯದಿಚ್ಛತಿ ಯಾವಚ್ಚ ಯದನ್ಯದಪಿ ಕಾಂಕ್ಷಿತಮ್ ॥೧೪॥

ಹೇ ರಾಜನೇ, ಅಷ್ಟೇ ಅಲ್ಲದೆ ಲೋಹದ ಪಾತ್ರೆಗಳನ್ನೂ, ನಾನಾ ರೀತಿಯ ಚಿಕ್ಕ ಚಿಕ್ಕ ಪಾತ್ರೆಗಳನ್ನೂ, ಹೀಗೆ ಯಾರು ಯಾರು ಯಾವೆಲ್ಲವನ್ನು ಎಷ್ಟು ಬಯಸುವರೋ ಅವೆಲ್ಲವನ್ನೂ ವಿತರಿಸಿದನು.

ಏವಂ ಸ ರಾಜಾ ಧರ್ಮಾತ್ಮಾ ಪರೀತ್ಯಾಶ್ರಮಮಂಡಲಮ್ ।
ವಸು ವಿಶ್ರಾಣ್ಯ ತತ್ಸರ್ವಂ ಪುನರಾಯಾನ್ಮಹೀಪತಿಃ ॥೧೫॥

ಹೀಗೆ ಧರ್ಮಾತ್ಮನಾದ ಆ ರಾಜನು ಆಶ್ರಮ ಪ್ರದೇಶವನ್ನು ಸುತ್ತುತ್ತಾ ಆಶ್ರಮವಾಸಿಗಳಿಗೆ ಅಗತ್ಯವಾದ ವಸ್ತುಗಳೆಲ್ಲವನ್ನೂ ವಿತರಿಸಿ ಮತ್ತೆ ಹಿಂದಿರುಗಿ ಬಂದನು.

ಕೃತಾಹ್ನಿಕಂ ಚ ರಾಜಾನಂ ಧೃತರಾಷ್ಟ್ರಂ ಮಹೀಪತಿಮ್ ।
ದದರ್ಶಾಸೀನಮವ್ಯಗ್ರಂ ಗಾಂಧಾರೀಸಹಿತಂ ತದಾ ॥೧೬॥

ಆಗ ಮಹೀಪತಿಯಾದ ಧೃತರಾಷ್ಟ್ರರಾಜನು ಆಹ್ನಿಕವನ್ನು ಪೂರೈಸಿ, ಗಾಂಧಾರೀ ಸಹಿತನಾಗಿ ಸಮಾಧಾನಚಿತ್ತನಾಗಿ ಕುಳಿತಿರುವುದನ್ನು ಕಂಡನು.

ಮಾತರಂ ಚಾವಿದೂರಸ್ಥಾಂ ಶಿಷ್ಯವತ್ಪ್ರಣತಾಂ ಸ್ಥಿತಾಮ್ ।
ಕುಂತೀಂ ದದರ್ಶ ಧರ್ಮಾತ್ಮಾ ಶಿಷ್ಟಾಚಾರಸಮನ್ವಿತಾಮ್ ॥೧೭॥

ಅವರ ಜೊತೆಗೆ ಅವರ ಸಮೀಪದಲ್ಲಿಯೇ ಶಿಷ್ಯರಂತೆ ಕೈಮುಗಿದು ಕುಳಿತ, ಶಿಷ್ಟಾಚಾರದಿಂದ ಕೂಡಿದ ತನ್ನ ತಾಯಿಯಾದ ಕುಂತೀದೇವಿಯನ್ನೂ ಕಂಡನು.

ಸ ತಮಭ್ಯರ್ಚ್ಯ ರಾಜಾನಂ ನಾಮ ಸಂಶ್ರಾವ್ಯ ಚಾತ್ಮನಃ ।
ನಿಷೀದೇತ್ಯಭ್ಯನುಜ್ಞಾತೋ ಬೃಸ್ಯಾಮುಪವಿವೇಶ ಹ ॥೧೮॥

ಅನಂತರ ಅವನು ರಾಜನಾದ ಧೃತರಾಷ್ಟ್ರನನ್ನು ಗೌರವಿಸಿ ತನ್ನ ಹೆಸರನ್ನು ತಿಳಿಸಿದನು. ಧೃತರಾಷ್ಟ್ರನಿಂದ ''ಕುಳಿತುಕೋ'' ಎಂದು ಅಪ್ಪಣೆ ಪಡೆದು, ಋಷಿಗಳು ಕೂಡುವ ದರ್ಭಾಸನದ ಮೇಲೆ ಕುಳಿತನು.

ಭೀಮಸೇನಾದಯಶ್ಚೈವ ಪಾಂಡವಾ ಭರತರ್ಷಭ ।
ಅಭಿವಾದ್ಯೋಪಸಂಗೃಹ್ಯ ನಿಷೇದುಃ ಪಾರ್ಥಿವಾಜ್ಞಯಾ ॥೧೯॥

ಹೇ ಭರತರ್ಷಭನೇ, ಭೀಮಸೇನನೇ ಮೊದಲಾದ ಪಾಂಡವರೂ ಧೃತರಾಷ್ಟ್ರನಿಗೆ ಅಭಿವಾದನೆಯನ್ನು ಮಾಡಿ ರಾಜನ ಆಜ್ಞೆಯಂತೆ ಕುಳಿತರು.

ಸ ತೈಃ ಪರಿವೃತೋ ರಾಜಾ ಶುಶುಭೇಽತೀವ ಕೌರವಃ ।
ಬಿಭ್ರದ್ ಬ್ರಾಹ್ಮೀಂ ಶ್ರಿಯಂ ದೀಪ್ತಾಂ ದೇವೈರಿವ ಬೃಹಸ್ಪತಿಃ ॥೨೦॥

ಆ ಪಾಂಡವರಿಂದ ಸುತ್ತುವರಿಯಲ್ಪಟ್ಟ ಕುರುವಂಶಜನಾದ ಧೃತರಾಷ್ಟ್ರ ರಾಜನು ಜ್ವಲಿಸುತ್ತಿರುವ ಬ್ರಾಹ್ಮೀಸಂಪತ್ತನ್ನು ಪಡೆದ ಬೃಹಸ್ಪತಿಯು ದೇವತೆಗಳಿಂದ ಸುತ್ತುವರಿಯಲ್ಪಟ್ಟು ಶೋಭಿಸುವಂತೆ ಅತಿಯಾಗಿ ಶೋಭಿಸಿದನು.

ತಥಾ ತೇಷೂಪವಿಷ್ಟೇಷು ಸಮಾಜಗ್ಮುರ್ಮಹರ್ಷಯಃ ।
ಶತಯೂಪಪ್ರಭೃತಯಃ ಕುರುಕ್ಷೇತ್ರನಿವಾಸಿನಃ ॥೨೧॥

ಹೀಗೆ ಅವರೆಲ್ಲರೂ ಕುಳಿತುಕೊಂಡ ಸಮಯಕ್ಕೆ ಸರಿಯಾಗಿ ಕುರುಕ್ಷೇತ್ರದಲ್ಲಿ ವಾಸವಾಗಿರುವ ಶತಯೂಪನೇ ಮೊದಲಾದ ಮಹರ್ಷಿಗಳು ಅಲ್ಲಿ ಬಂದು ಸೇರಿದರು.

ವ್ಯಾಸಶ್ಚ ಭಗವಾನ್ ವಿಪ್ರೋ ದೇವರ್ಷಿಗಣಸೇವಿತಃ ।
ವೃತಃ ಶಿಷ್ಯೈರ್ಮಹಾತೇಜಾ ದರ್ಶಯಾಮಾಸ ಪಾರ್ಥಿವಮ್ ॥೨೨॥

ಅದೇ ಸಮಯಕ್ಕೆ ಸರಿಯಾಗಿ ದೇವರ್ಷಿಗಳಿಂದ ಸೇವಿತನಾದ, ಮಹಾತೇಜಸ್ವಿಯಾದ, ಶಿಷ್ಯರಿಂದ ಸುತ್ತುವರಿದ ವಿಪ್ರರಾದ ಭಗವಾನ್ ವೇದವ್ಯಾಸರು ರಾಜನಿಗೆ ದರ್ಶನ ನೀಡಿದರು.

ತತಃ ಸ ರಾಜಾ ಕೌರವ್ಯಃ ಕುಂತೀಪುತ್ರಶ್ಚ ಧರ್ಮರಾಟ್ ।
ಭೀಮಸೇನಾದಯಶ್ಚೈವ ಪ್ರತ್ಯುತ್ಥಾಯಾಭ್ಯವಾದಯನ್ ॥೨೩॥

ಅನಂತರ ಆ ಕುರುಶ್ರೇಷ್ಠನಾದ ಧೃತರಾಷ್ಟ್ರರಾಜನೂ, ಕುಂತೀಪುತ್ರನಾದ ಧರ್ಮರಾಜನೂ ಅಂತೆಯೇ ಭೀಮಸೇನಾದಿಗಳು ಎದ್ದು ನಿಂತು ವೇದವ್ಯಾಸರಿಗೆ ಅಭಿವಂದಿಸಿದರು.

ಸಮಾಗತಸ್ತತೋ ವ್ಯಾಸಃ ಶತಯೂಪಾದಿಭಿರ್ವೃತಃ ।
ಧೃತರಾಷ್ಟ್ರಂ ಮಹೀಪಾಲಮಾಸ್ಯತಾಮಿತ್ಯಭಾಷತ ॥೨೪॥

ಅಲ್ಲಿಗೆ ಬಂದಿರುವ ವ್ಯಾಸರು ಶತಯೂಪಾದಿಗಳೊಂದಿಗೆ ಕೂಡಿಕೊಂಡು ಧೃತರಾಷ್ಟ್ರನ ಸಮೀಪಕ್ಕೆ ಬಂದು, ರಾಜನಾದ ಧೃತರಾಷ್ಟ್ರನಿಗೆ ಕುಳಿತುಕೊಳ್ಳುವಂತೆ ಹೇಳಿದರು.

ವರಂ ತು ವಿಷ್ಟರಂ ಕೌಶ್ಯಂ ಕೃಷ್ಣಾಜಿನಕುಶೋತ್ತರಮ್ ।
ಪ್ರತಿಪೇದೇ ತದಾ ವ್ಯಾಸಸ್ತದರ್ಘಮುಪಕಲ್ಪಿತಮ್ ॥೨೫॥

ಅನಂತರ ವೇದವ್ಯಾಸರು ಅವರಿಗೋಸ್ಕರ ಹಾಸಿದ ಕೃಷ್ಣಾಜಿನ ಮತ್ತು ಕುಶಗಳ ಮೇಲೆ ಹರಡಿರುವ ರೇಷ್ಮೆಯ ಉತ್ತಮವಾದ ಆಸನವನ್ನು ಸ್ವೀಕರಿಸಿದರು (ಕುಳಿತರು).

ತೇ ಚ ಸರ್ವೇ ದ್ವಿಜಶ್ರೇಷ್ಠಾ ವಿಷ್ಟರೇಷು ಸಮಂತತಃ ।
ದ್ವೈಪಾಯನಾಭ್ಯನುಜ್ಞಾತಾ ನಿಷೇದುರ್ವಿಪುಲೌಜಸಃ ॥೨೬॥

ವಿಪುಲತೇಜಸ್ವಿಗಳಾದ ಆ ಎಲ್ಲ ಬ್ರಾಹ್ಮಣಶ್ರೇಷ್ಠರು ವೇದವ್ಯಾಸರಿಂದ ಅನುಜ್ಞೆಯನ್ನು ಪಡೆದು ಅವರ ಸುತ್ತಲೂ ಆಸನಗಳಲ್ಲಿ ಕುಳಿತುಕೊಂಡರು.

ಜನಮೇಜಯಃ

ತಥಾ ತೇಷೂಪವಿಷ್ಟೇಷು ವ್ಯಾಸೋ ವೇದವಿದಾಂ ವರಃ ।
ಕಿಮುವಾಚ ಮಹಾತೇಜಾ ಧೃತರಾಷ್ಟ್ರಂ ಸಪಾಂಡವಮ್ ॥೨೭॥

ಜನಮೇಜಯ– ಹಾಗೆ ಅವರು ಕುಳಿತ ನಂತರ ಮಹಾತೇಜಸ್ವಿಗಳಾದ, ವೇದವೇತ್ತರಲ್ಲಿ ಶ್ರೇಷ್ಠರಾದ ವೇದವ್ಯಾಸರು ಪಾಂಡವರ ಜೊತೆಗೂಡಿ ಇರುವ ಧೃತರಾಷ್ಟ್ರನಿಗೆ ಏನು ಹೇಳಿದರು?

ವೈಶಂಪಾಯನಃ

ತತಃ ಸಮುಪವಿಷ್ಟೇಷು ಪಾಂಡವೇಷು ಮಹಾತ್ಮಸು ।
ವ್ಯಾಸಃ ಸತ್ಯವತೀಪುತ್ರಃ ಪ್ರೋವಾಚಾಮಂತ್ರ್ಯ ಪಾರ್ಥಿವಮ್ ॥೨೮॥

ವೈಶಂಪಾಯನ– ಮಹಾತ್ಮರಾದ ಪಾಂಡವರು ಕುಳಿತುಕೊಂಡ ನಂತರ ಸತ್ಯವತೀ ಸುತರಾದ ವೇದವ್ಯಾಸರು ರಾಜನನ್ನುದ್ದೇಶಿಸಿ ಹೀಗೆ ಹೇಳಿದರು.

ಧೃತರಾಷ್ಟ್ರ ಮಹಾಬಾಹೋ ಕಚ್ಚಿತ್ತೇ ವರ್ತತೇ ತಪಃ ।
ಕಚ್ಚಿನ್ಮನಸ್ತೇ ಪ್ರೀಣಾತಿ ವನವಾಸೇ ನರಾಧಿಪ ॥೨೯॥

ಹೇ ಮಹಾಬಾಹುವಾದ ಧೃತರಾಷ್ಟ್ರನೇ, ನಿನ್ನ ತಪಸ್ಸು ಚೆನ್ನಾಗಿ ನಡೆಯುತ್ತಿದೆ ತಾನೆ? ಹೇ ನರಾಧಿಪನೇ, ನಿನ್ನ ಮನಸ್ಸು ವನವಾಸದಲ್ಲಿ ಸಂತೋಷಗೊಂಡಿದೆ ತಾನೆ?

ಕಚ್ಚಿದ್ದ್ಯುದಿ ನ ತೇ ಶೋಕೋ ರಾಜನ್ ಪುತ್ರವಿನಾಶಜಃ ।
ಕಚ್ಚಿಜ್ಜ್ಞಾನಾನಿ ಸರ್ವಾಣಿ ಸುಪ್ರಸನ್ನಾನಿ ತೇಽನಘ ॥೩೦॥

ಹೇ ರಾಜನೇ, ಪುತ್ರರ ವಿನಾಶದಿಂದ ಉಂಟಾದ ಶೋಕವು ನಿನ್ನ ಹೃದಯದಲ್ಲಿ ಇನ್ನೂ ಉಳಿದುಕೊಂಡಿಲ್ಲ ತಾನೆ? ಹೇ ಅನಘನೇ, ನಿನ್ನ ಎಲ್ಲ ತಿಳಿವಳಿಕೆಯೂ ನಿನಗೆ ಸುಪ್ರಸನ್ನತೆಯನ್ನು ನೀಡುತ್ತಿದೆ ತಾನೆ?

ಕಚ್ಚಿದ್ ಬುದ್ಧಿಂ ದೃಢಾಂ ಕೃತ್ವಾ ಚರಸ್ಯಾರಣ್ಯಕಂ ವಿಧಿಮ್ ।
ಕಚ್ಚಿದ್ ವಧೂಶ್ಚ ಗಾಂಧಾರೀ ನ ಶೋಕೇನಾಭಿಭೂಯತೇ ॥೩೧॥

ಬುದ್ಧಿಯನ್ನು ದೃಢವಾಗಿ ಮಾಡಿಕೊಂಡು ಆರಣ್ಯಕವಿಧಿಯನ್ನು ಸರಿಯಾಗಿ ನಡೆಸುತ್ತಿರುವಿ ತಾನೆ? ಸೊಸೆಯಾದ ಗಾಂಧಾರಿಯು ಶೋಕದಿಂದ ಪರಿತಪಿಸುತ್ತಿಲ್ಲ ತಾನೆ?

ಮಹಾಪ್ರಜ್ಞಾ ಬುದ್ಧಿಮತೀ ದೇವೀ ಧರ್ಮಾರ್ಥದರ್ಶಿನೀ ।
ಆಗಮಾಪಾಯತತ್ತ್ವಜ್ಞಾ ಕಚ್ಚಿದೇಷಾ ನ ಶೋಚತಿ ॥೩೨॥

ಮಹಾಪ್ರಜ್ಞೆಯುಳ್ಳ, ಬುದ್ಧಿವಂತಳಾದ, ಧರ್ಮಾರ್ಥಗಳನ್ನು ಸರಿಯಾಗಿ ತಿಳಿಸಬಲ್ಲ, ಸುಖ-ದುಃಖಗಳು ಹೀಗೆ ಬಂದು ಹಾಗೆ ಹೋಗುವವು ಎಂಬ ತತ್ತ್ವವನ್ನು ತಿಳಿದ ಈ ಗಾಂಧಾರಿದೇವಿಯು ಶೋಕಪಡುತ್ತಿಲ್ಲ ತಾನೆ?

ಕಚ್ಚಿತ್ಕುಂತೀ ಚ ರಾಜಂಸ್ತಾ ತ್ವಂ ಶುಶ್ರೂಷತ್ಯನಹಂಕೃತಾ ।
ಯಾ ಪರಿತ್ಯಜ್ಯ ಸ್ವಂ ಪುತ್ರಂ ಗುರುಶುಶ್ರೂಷಣೇ ರತಾ ॥೩೩॥

ಹೇ ರಾಜನೇ, ಯಾವಳು ತನ್ನ ಪುತ್ರರನ್ನೂ ಬಿಟ್ಟು ಗುರುಸೇವೆಗಾಗಿ ಆಸಕ್ತಿಯಿಂದ ನಿಂತಿದ್ದಾಳೋ ಅಂತಹ ಕುಂತೀದೇವಿಯು ನಿನ್ನನ್ನು ಅಹಂಕಾರವಿಲ್ಲದೆ ಸೇವೆಗೈಯ್ಯುತ್ತಿದ್ದಾಳೆ ತಾನೆ?

ಕಚ್ಚಿದ್ಧರ್ಮಸುತೋ ರಾಜಾ ತ್ವಯಾ ಪ್ರತ್ಯಭಿನಂದಿತಃ ।
ಭೀಮಾರ್ಜುನಯಮಾಶ್ಚೈವ ಕಚ್ಚಿದೇತೇಽಪಿ ಸಾಂತ್ವಿತಾಃ ॥೩೪॥

ಧರ್ಮಸುತನಾದ ರಾಜನನ್ನು ನೀನು ಪ್ರೀತಿಯಿಂದ ಅಭಿನಂದಿಸುತ್ತಿರುವೆ ತಾನೆ? ಅಲ್ಲದೇ ಈ ಭೀಮಾರ್ಜುನ, ನಕುಲ-ಸಹದೇವರು ನಿನ್ನಿಂದ ಸಾಂತ್ವನವನ್ನು ಪಡೆದಿರುವರು ತಾನೆ?

ಕಚ್ಚಿನ್ನಂದಸಿ ದೃಷ್ಟ್ವೈತಾನ್ ಕಚ್ಚಿತ್ತೇ ನಿರ್ಮಲಂ ಮನಃ ।
ಕಚ್ಚಿಚ್ಚ ಶುದ್ಧಭಾವೋಽಸಿ ಜಾತಜ್ಞಾನೋ ನರಾಧಿಪ ॥೩೫॥

ಇವರನ್ನು ನೋಡಿ ನೀನು ಸಂತೋಷಪಡುತ್ತಿರುವೆ ತಾನೆ? ನಿನ್ನ ಮನಸ್ಸು ನಿರ್ಮಲವಾಗಿರುವುದು ತಾನೆ? ಹೇ ನರಾಧಿಪನೇ, ಸರಿಯಾದ ಜ್ಞಾನವನ್ನು ಪಡೆದು ಇವರೊಂದಿಗೆ ಶುದ್ಧಭಾವದಿಂದ ವರ್ತಿಸುತ್ತಿರುವೆ ತಾನೆ?

ಏತದ್ಧಿ ತ್ರಿತಯಂ ಶ್ರೇಷ್ಠಂ ಸರ್ವಭೂತೇಷು ಭಾರತ ।
ನಿರ್ವೈರತಾ ಮಹಾರಾಜ ಸತ್ಯಮಕ್ರೋಧ ಏವ ಚ ॥೩೬॥

ಹೇ ಭಾರತನೇ, ಮಹಾರಾಜನೇ, ಯಾರೊಡನೆಯೂ ವೈರಭಾವದಿಂದ ನಡೆಯದಿರುವುದು, ಸತ್ಯಮಾರ್ಗದಲ್ಲಿ ನಡೆಯುವುದು ಮತ್ತು ಕೋಪವಿಲ್ಲದಿರುವುದು ಈ ಮೂರು ಎಲ್ಲ ಪ್ರಾಣಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಗುಣವಾಗಿದೆ.

ಕಚ್ಚಿತ್ತೇ ನ ಚ ಮೋಹೋಸ್ತಿ ವನವಾಸೇನ ಭಾರತ ।
ಸ್ವದತ್ತೇ ವನ್ಯಮನ್ನಂ ವಾ ಉಪವಾಸೋಽಪಿ ವಾ ಭವೇತ್ ॥೩೭॥

ಹೇ ಭಾರತನೇ, ಇದು ವನವಾಸವಾದ್ದರಿಂದ ನೀನು ಕೈಯೆತ್ತಿ ಕೊಟ್ಟ ವಸ್ತುವಿನ ವಿಷಯದಲ್ಲಿ ನಿನಗೆ ಮೋಹವಿಲ್ಲ ತಾನೆ? ಏಕೆಂದರೆ ವನವಾಸಕಾಲದಲ್ಲಿ ಕೇವಲ ಕಾಡಿನ ಗೆಡ್ಡೆ-ಗೆಣಸುಗಳಾಗಲಿ ಅಥವಾ ಉಪವಾಸವಾಗಲಿ ಸಿಕ್ಕೀತು! ಕೊಟ್ಟದ್ದು ಸಿಗುವುದೆಂಬ ನಿಶ್ಚಯವಿಲ್ಲ.

ವಿದಿತಂ ಚಾಪಿ ರಾಜೇಂದ್ರ ವಿದುರಸ್ಯ ಮಹಾತ್ಮನಃ ।
ಗಮನಂ ವಿಧಿನಾನೇನ ಧರ್ಮಸ್ಯ ಸುಮಹಾತ್ಮನಃ ॥೩೮॥

ಹೇ ರಾಜೇಂದ್ರನೇ, ಸುಮಹಾತ್ಮನಾದ, ವಾನಪ್ರಸ್ಥಧರ್ಮದ ಈ ರೀತಿಯ ಆಚರಣೆಯಿಂದ ಮಹಾತ್ಮನಾದ ವಿದುರನ ಪರಲೋಕಗಮನವೂ ಕೂಡ ನಿನಗೆ ತಿಳಿದೇ ಇದೆ.

ಮಾಂಡವ್ಯಶಾಪಾದ್ಧಿ ಸ ವೈ ಧರ್ಮೋ ವಿದುರತಾಂ ಗತಃ ।
ಮಹಾಬುದ್ಧಿರ್ಮಹಾಯೋಗೀ ಮಹಾತ್ಮಾ ಸುಮಹಾಮನಾಃ ॥೩೯॥

ಮಹಾಬುದ್ಧಿಯುಳ್ಳ, ಮಹಾಯೋಗಿಯಾದ, ಮಹಾತ್ಮನಾದ, ಅತ್ಯಂತ ಮನಸ್ವಿಯಾದ ಅದೇ ಯಮಧರ್ಮನು ಮಾಂಡವ್ಯರ ಶಾಪದಿಂದ ವಿದುರನಾಗಿ ಜನಿಸಿದ್ದನಷ್ಟೆ.

ಬೃಹಸ್ಪತಿರ್ವಾ ದೇವೇಷು ಶುಕ್ರೋ ವಾऽಪ್ಯಸುರೇಷು ಚ ।
ನ ತಥಾ ಬುದ್ಧಿಸಂಪನ್ನೋ ಯಥಾ ಸ ಪುರುಷರ್ಷಭಃ ॥೪೦॥

ಆ ಪುರುಷಶ್ರೇಷ್ಠನಾದ ವಿದುರನು ಹೇಗೋ ಹಾಗೆ ದೇವತೆಗಳಲ್ಲಿ ಬೃಹಸ್ಪತಿಯಾಗಲೀ, ಅಸುರರಲ್ಲಿ ಶುಕ್ರಾಚಾರ್ಯರಾಗಲೀ ಅಷ್ಟು ಬುದ್ಧಿ-ಸಂಪನ್ನರಾದವರು ಇಲ್ಲವಷ್ಟೆ?

ತಪೋಬಲವ್ಯಯಂ ಕೃತ್ವಾ ಸುಚಿರಾತ್ ಸಂಭೃತಂ ತದಾ ।
ಮಾಂಡವ್ಯೇನರ್ಷಿಣಾ ಧರ್ಮೋ ಹ್ಯಭಿಭೂತಃ ಸನಾತನಃ ॥೪೧॥

ಆ ಕಾಲದಲ್ಲಿ ಮಾಂಡವ್ಯಋಷಿಯು ಬಹಳ ಕಾಲದ ತಪಸ್ಸಿನಿಂದ ಸಂಪಾದಿಸಿದ ತಪೋಬಲದ ವ್ಯಯವನ್ನು ಮಾಡಿ ಸನಾತನನಾದ ಯಮಧರ್ಮನನ್ನು ಸೋಲಿಸಿದ್ದಾನೆ.

ನಿಯೋಗಾದ್ ಬ್ರಾಹ್ಮಣಃ ಪೂರ್ವಂ ಮಯಾ ಸ್ವೇನ ಬಲೇನ ಚ
ವೈಚಿತ್ರವೀರ್ಯಕೇ ಕ್ಷೇತ್ರೇ ಜಾತಃ ಸ ಸುಮಹಾಮತಿಃ ॥೪೨॥

ಈ ಹಿಂದೆ ವಿಚಿತ್ರವೀರ್ಯನ ಪತ್ನಿಯಲ್ಲಿ ನನ್ನಿಂದ ನಿಯೋಗಪದ್ಧತಿಯಿಂದ ಮತ್ತು ತನ್ನ ಬಲದಿಂದಲೂ ಕೂಡಿಕೊಂಡು ಯಮಧರ್ಮನು ಬ್ರಹ್ಮಜ್ಞಾನಿಯಾಗಿ ಮಹಾಬುದ್ಧಿಯುಳ್ಳ ವಿದುರನಾಗಿ ಜನಿಸಿದ್ದಾನೆ.

ಭ್ರಾತಾ ತವ ಮಹಾರಾಜ ದೇವದೇವಃ ಸನಾತನಃ ।
ಧಾರಣಾಚ್ಛ್ರೇಯಸೋ ಜ್ಞಾನಾತ್ ಯಂ ಧರ್ಮಂ ಕವಯೋ ವಿದುಃ ॥

ಹೇ ಮಹಾರಾಜನೇ, ಯಾರು ಶ್ರೇಯಸ್ಸನ್ನು ಧರಿಸುವುದರಿಂದಲೂ, ಶ್ರೇಯಸ್ಸು ಎಂಬ ಹೆಸರುಳ್ಳ ಪುಣ್ಯವನ್ನು ಸರಿಯಾಗಿ ತಿಳಿದುಕೊಳ್ಳುವುದರಿಂದಲೂ 'ಧರ್ಮ' ಎಂಬುದಾಗಿ ಜ್ಞಾನಿಗಳಿಗೆ ವಿದಿತನಾಗಿರುವನೋ ಅಂತಹ ದೇವದೇವನಾದ, ಸನಾತನನಾದ ಯಮಧರ್ಮನೇ ನಿನ್ನ ಸಹೋದರನಾಗಿದ್ದಾನೆ.

ಸತ್ಯೇನ ಸಂವರ್ಧಯತಿ ಯೋ ದಮೇನ ಶಮೇನ ಚ ।
ಅಹಿಂಸಯಾ ಚ ದಾನೇನ ತಪಸಾ ಚ ಸನಾತನಃ ॥೪೪॥

ಸನಾತನನಾದ ಯಾವನು ಸತ್ಯದಿಂದ, ಇಂದ್ರಿಯನಿಗ್ರಹದಿಂದ, ಬುದ್ಧಿಯ ಭಗವನ್ನಿಷ್ಠತೆಯಿಂದ, ಅಹಿಂಸೆಯಿಂದ ಮತ್ತು ದಾನದಿಂದ, ಅಲ್ಲದೆ ತಪಸ್ಸಿನಿಂದ ಈ ಜಗತ್ತನ್ನು ಬೆಳೆಸುವನೋ ಅವನೇ ಧರ್ಮ ಎಂದು ತಿಳಿಯಬಹುದು.

ಯೇನ ಯೋಗಬಲಾದ್ ಜಾತಃ ಕುರುರಾಜೋ ಯುಧಿಷ್ಠಿರಃ ।
ಧರ್ಮ ಇತ್ಯೇಷ ನೃಪತೇ ಪ್ರಾಜ್ಞೇನಾಮಿತಬುದ್ಧಿನಾ ॥೪೫॥

ಹೇ ನೃಪತಿಯೇ, ಮಹಾಜ್ಞಾನಿಯಾದ, ಅಮಿತವಾದ ಬುದ್ಧಿಯುಳ್ಳ ಯಾರಿಂದ ಕುರುರಾಜನಾದ ಯುಧಿಷ್ಠಿರನು ಯೋಗಬಲದಿಂದ ಜಗತ್ತಿನಲ್ಲಿ ಜನಿಸಿದ್ದಾನೋ ಅವನೇ ಧರ್ಮ ಎಂದು ತಿಳಿ.

ಯಥಾ ವಹ್ನಿರ್ಯಥಾ ವಾಯುರ್ಯಥಾऽऽಪಃ ಪೃಥಿವೀ ಯಥಾ ।
ಯಥಾऽऽಕಾಶಂ ತಥಾ ಧರ್ಮ ಇಹ ಚಾಮುತ್ರ ಚ ಸ್ಥಿತಃ ॥೪೬॥

ಅಗ್ನಿ, ವಾಯು, ನೀರು, ಭೂಮಿ ಮತ್ತು ಆಕಾಶಗಳು ಹೇಗೆ ಈ ಲೋಕದಲ್ಲೂ, ಪರಲೋಕದಲ್ಲೂ ಇವೆಯೋ ಹಾಗೆಯೇ ಧರ್ಮನು ಇಹ-ಪರಗಳಲ್ಲಿ ನೆಲೆಸಿದ್ದಾನೆ.

ಸರ್ವಗಶ್ಚೈವ ರಾಜೇಂದ್ರ ಸರ್ವಂ ವ್ಯಾಪ್ಯ ಚರಾಚರಮ್ ।
ದೃಶ್ಯತೇ ದೇವದೇವೈಃ ಸ ಸಿದ್ಧೈರ್ನಿರ್ಮುಕ್ತಕಲ್ಮಷೈಃ ॥೪೭॥

ಹೇ ರಾಜೇಂದ್ರನೇ, ಚರಾಚರವಾದ ಎಲ್ಲ ವಸ್ತುಗಳನ್ನೂ ವ್ಯಾಪಿಸಿ ಎಲ್ಲ ಕಡೆ ಇರುವವನಾದರೂ ಆ ಧರ್ಮನು ದೇವದೇವತೆಗಳಿಂದ, ಕಲ್ಮಶಗಳನ್ನು ಕಳೆದುಕೊಂಡ ಸಿದ್ಧರಿಂದ ನೋಡಲ್ಪಡುತ್ತಾನೆ.

ಯೋ ಹಿ ಧರ್ಮಃ ಸ ವಿದುರೋ ವಿದುರೋ ಯಃ ಸ ಪಾಂಡವಃ ।
ಸ ಏಷ ರಾಜನ್ ದೃಶ್ಯತೇ ಪಾಂಡವಃ ಪ್ರೇಷ್ಯವತ್ ಸ್ಥಿತಃ ॥೪೮॥

ಯಾರು ಅಂತಹ ಯಮಧರ್ಮನೋ ಅವನೇ ವಿದುರನಾಗಿರುವನು. ಯಾರು ವಿದುರನೋ ಅವನೇ ಪಾಂಡುಪುತ್ರನಾಗಿ ಜನಿಸಿರುವನು. ಹೇ ರಾಜನೇ, ನಿನ್ನ ಕಣ್ಣೆದುರಿಗೆ ಸೇವಕನಂತೆ ನಿಂತಿರುವ ಪಾಂಡುಪುತ್ರನಾದ ಈ ಯುಧಿಷ್ಠಿರನೇ ಅವನು.

ಪ್ರವಿಷ್ಟಃ ಸ ಮಹಾತ್ಮಾನಂ ಭ್ರಾತಾ ತೇ ಬುದ್ಧಿಸಮ್ಮತಃ ।
ದೃಷ್ಟ್ವಾ ಮಹಾತ್ಮಾ ಕೌಂತೇಯಂ ಮಹಾಯೋಗಬಲಾನ್ವಿತಃ ॥೪೯॥

ತನ್ನ ಬುದ್ಧಿಯಿಂದಲೇ ಎಲ್ಲರಿಗೂ ಸಮ್ಮತನಾಗಿದ್ದ, ಮಹಾತ್ಮನಾದ ಆ ನಿನ್ನ ಸಹೋದರನಾದ ವಿದುರನು ಮಹಾತ್ಮನಾದ ಕುಂತೀಪುತ್ರನಾದ ಯುಧಿಷ್ಠಿರನನ್ನು ನೋಡಿ ಮಹಾಯೋಗಬಲದಿಂದ ಕೂಡಿಕೊಂಡವನಾಗಿ ಅವನನ್ನು ಪ್ರವೇಶಿಸಿದ್ದಾನೆ.

ತ್ವಾಂ ಚಾಪಿ ಶ್ರೇಯಸಾ ಯೋಕ್ಷ್ಯೇ ನಚಿರಾದ್ ಭರತರ್ಷಭ ।
ಸಂಶಯಚ್ಛೇದನಾರ್ಥಾಯ ಪ್ರಾಪ್ತಂ ಮಾಂ ವಿದ್ಧಿ ಪುತ್ರಕ ॥೫೦॥

ಮಗು ಭರತರ್ಷಭನೇ, ನಿನಗೂ ಕೂಡ ಬಹುಬೇಗನೆ ಶ್ರೇಯಸ್ಸಾಗುವಂತೆ ಮಾಡುತ್ತೇನೆ. ನಿನ್ನ ಸಂಶಯವನ್ನು ನಿವಾರಿಸುವುದಕ್ಕಾಗಿಯೇ ನಾನು ಈಗ ಬಂದಿರುವೆನೆಂದು ತಿಳಿ.

ನ ಕೃತಂ ಯೈಃ ಪುರಾ ಕಶ್ಚಿತ್ ಕರ್ಮ ಲೋಕೇ ಮಹರ್ಷಿಭಿಃ ।
ಆಶ್ಚರ್ಯಭೂತಂ ತಪಸಃ ಫಲಂ ತದ್ ದರ್ಶಯಾಮಿ ವಃ ॥೫೧॥

ಹಿಂದೆ ಯಾವುದೇ ಮಹರ್ಷಿಗಳಿಂದಲೂ ನಡೆಸಲಾಗದ ಕರ್ಮ ಏನಿದೆಯೋ, ಆಶ್ಚರ್ಯಭೂತವಾದ ತಪಸ್ಸಿನ ಫಲವಾದ ಅದನ್ನು ನಿಮಗೆ ತೋರಿಸಲಿದ್ದೇನೆ.

ಕಿಮಿಚ್ಛಸಿ ಮಹೀಪಾಲ ಮತ್ತಃ ಪ್ರಾಪ್ತುಮಭೀಪ್ಸಿತಮ್ ।
ದ್ರಷ್ಟುಂ ಸ್ಪಷ್ಟುಮಥ ಶ್ರೋತುಂ ತತ್ಕರ್ತಾಸ್ಮಿ ತವಾನಘ ॥೫೨॥

ಹೇ ಮಹೀಪಾಲನೇ, ಅನಘನೇ, ನೀನು ನನ್ನಿಂದ ಏನನ್ನು ಪಡೆಯಬೇಕೆಂದು ಬಯಸಿರುವೆಯೋ ಅಂತಹ ಇಷ್ಟವಾದ ವಸ್ತುವನ್ನು ನೋಡಲು, ಮುಟ್ಟಲು, ಕೇಳಲು ನೀನು ಬಯಸುವಿಯಾದರೆ ಅವೆಲ್ಲವನ್ನೂ ನಿನಗೆ ನಡೆಸಿಕೊಡುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ವೇದವ್ಯಾಸವಚನಂ ನಾಮ ತ್ರಯಸ್ತ್ರಿಂಶೋऽಧ್ಯಾಯಃ ॥

॥ ಆಶ್ರಮವಾಸಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಮ್ ಆಶ್ರಮವಾಸಪರ್ವ ॥

★ ★ ★ ★

ಪುತ್ರದರ್ಶನಪರ್ವ

ಮೂವತ್ನಾಲ್ಕನೆಯ ಅಧ್ಯಾಯ

ಸಹೋದರರು ಹಾಗೂ ಸೈನ್ಯದಿಂದ ಕೂಡಿಕೊಂಡು ಯುಧಿಷ್ಠಿರನು ಧೃತರಾಷ್ಟ್ರನ ಆಶ್ರಮದಲ್ಲಿ ಒಂದು ಮಾಸದ ಕಾಲ ವಾಸವಾಗಿದ್ದಾಗ ವೇದವ್ಯಾಸರು ಹಾಗೂ ಧೃತರಾಷ್ಟ್ರಾದಿಗಳನ್ನು ಸುತ್ತುವರಿದು ನಾರದ-ಪರ್ವತಾದಿ ಋಷಿಗಳೂ, ಗಾಂಧಾರಿಯೇ ಮೊದಲಾದ ಸ್ತ್ರೀಯರೂ, ಪಾಂಡವರೂ ಒಟ್ಟುಸೇರುವುದು.

ಜನಮೇಜಯಃ

ವನವಾಸಂ ಗತೇ ವಿಪ್ರ ಧೃತರಾಷ್ಟ್ರೇ ಮಹೀಪತೌ ।
ಸಭಾರ್ಯೇ ನೃಪಶಾರ್ದೂಲೇ ವಧ್ವಾ ಕುಂತ್ಯಾ ಸಮನ್ವಿತೇ ॥೧॥

ವಿದುರೇ ಚಾಪಿ ಧರ್ಮಜ್ಞೇ ಧರ್ಮರಾಜಂ ವ್ಯಪಾಶ್ರಿತೇ ।
ವಸತ್ಸು ಪಾಂಡುಪುತ್ರೇಷು ಸರ್ವೇಷ್ವಾಶ್ರಮಮಂಡಲೇ ॥೨॥

ಯತ್ತದಾಶ್ಚರ್ಯಮಿತಿ ವೈ ಕರಿಷ್ಯಾಮೀತ್ಯುವಾಚ ಹ ।
ವ್ಯಾಸಃ ಪರಮತೇಜಸ್ವೀ ಮಹರ್ಷಿಸ್ತದ್ವದಸ್ವ ಮೇ ॥೩॥

ಜನಮೇಜಯ– ಹೇ ವಿಪ್ರನೇ, ಭಾರ್ಯೆಯಿಂದ ಸಹಿತನಾದ, ಸೊಸೆಯಾದ ಕುಂತಿಯಿಂದ ಕೂಡಿದ, ರಾಜಶ್ರೇಷ್ಠನಾದ ಧೃತರಾಷ್ಟ್ರರಾಜನು ವನವಾಸವನ್ನು ನಡೆಸುವ ಸಂದರ್ಭದಲ್ಲಿ ಧರ್ಮಜ್ಞನಾದ ವಿದುರನು ಧರ್ಮರಾಜನಲ್ಲಿ ಸೇರಿಕೊಂಡಾಗ ಆಶ್ರಮ

ಪ್ರದೇಶದಲ್ಲಿ ಪಾಂಡವರು ವಾಸ ಮಾಡುತ್ತಿರುವ ಅದೇ ಸಂದರ್ಭದಲ್ಲಿ ಪರಮ ತೇಜಸ್ವಿಯಾದ, ಮಹರ್ಷಿಯಾದ ವೇದವ್ಯಾಸರು ಏನು ಆಶ್ಚರ್ಯವನ್ನು ನಡೆಸುತ್ತೇನೆ ಎಂದು ಹೇಳಿದರೋ ಆ ಆಶ್ಚರ್ಯದ ಬಗ್ಗೆ ನನಗೆ ತಿಳಿಸಿರಿ.

ವನವಾಸೇ ಚ ಕೌರವ್ಯಃ ಕಿಯಂತಂ ಕಾಲಮಚ್ಯುತಃ ।
ಯುಧಿಷ್ಠಿರೋ ನರಪತಿರ್ಯವಸತ್ಸಜನಸ್ತದಾ ॥೪॥

ಕುರುವಂಶಜನಾದ, ರಾಜನಾದ ಯುಧಿಷ್ಠಿರನು ಎಷ್ಟು ಸಮಯದವರೆಗೆ, ಯಾವುದೇ ತೊಂದರೆ ಇಲ್ಲದಂತೆ ಸ್ವಜನರೊಂದಿಗೆ ಕೂಡಿಕೊಂಡು ವನದಲ್ಲಿ ವಾಸಿಸಿದನು?

ಕಿಮಾಹಾರಾಶ್ಚ ತೇ ತತ್ರ ಸಸೈನ್ಯಾ ನ್ಯವಸನ್ ಪ್ರಭೋ ।
ಸಾಂತಃಪುರಾ ಮಹಾತ್ಮಾನ ಏತದಿಚ್ಛಾಮಿ ವೇದಿತುಮ್ ॥೫॥

ಹೇ ಪ್ರಭುವೇ, ಸೈನ್ಯಸಮೇತರಾದ, ಅಂತಃಪುರದ ಜನರೊಂದಿಗೆ ಕೂಡಿದ ಮಹಾತ್ಮರಾದ ಆ ಪಾಂಡವರು ಯಾವ ಆಹಾರವನ್ನು ಸೇವಿಸುತ್ತಿದ್ದರು? ಮತ್ತು ಅಲ್ಲಿ ಹೇಗೆ ವಾಸ ಮಾಡಿದರು? ಇದನ್ನು ತಿಳಿಯಲು ಬಯಸುತ್ತಿದ್ದೇನೆ.

ವೈಶಂಪಾಯನಃ

ವನವಾಸಗತಂ ರಾಜನ್ ಧೃತರಾಷ್ಟ್ರಂ ಮಹೀಪತಿಮ್ ।
ಯುಧಿಷ್ಠಿರೋಽಭ್ಯಯಾದ್ ದ್ರಷ್ಟುಂ ಸಸೈನ್ಯೋ ಭ್ರಾತೃಭಿಃ ಸಹ ॥೬॥

ವೈಶಂಪಾಯನ– ಹೇ ರಾಜನೇ, ವನವಾಸದಲ್ಲಿರುವ ಧೃತರಾಷ್ಟ್ರರಾಜನನ್ನು ಸೈನ್ಯ ಸಮೇತನಾದ ಯುಧಿಷ್ಠಿರನು ಸಹೋದರರೊಂದಿಗೆ ನೋಡಲು ಹೋದನು.

ಪ್ರಥಮೇ ದಿವಸೇ ಚೈಷಾಮಾಪೋ ಮೂಲಂ ಫಲಂ ತಥಾ ।
ಭೋಜನಂ ಭೂಮಿಶಯ್ಯಾ ಚ ತತ್ರಾಸೀದ್ ಭರತರ್ಷಭ ॥೭॥

ಇವರಿಗೆ ಮೊದಲನೆಯ ದಿನದಂದು ನೀರು ಹಾಗು ಗೆಡ್ಡೆ-ಗೆಣಸುಗಳು, ಫಲಗಳು ಆಹಾರವಾಗಿದ್ದವು. ಜೊತೆಗೆ ಭರತರ್ಷಭನೇ, ಅವರು ಭೂಮಿಯಲ್ಲೇ ಮಲಗಿಕೊಂಡರು.

ತೇऽನುಜ್ಞಾತಾಸ್ತದಾ ರಾಜನ್ ಕುರುರಾಜೇನ ಪಾಂಡವಾಃ ।
ವಿವಿಧಾನ್ಯನ್ನಪಾನಾನಿ ಶಯ್ಯಾಶ್ಚೈವಾಭಜನ್ ವನೇ ॥೮॥

ಹೇ ರಾಜನೇ, ಅನಂತರ ಪಾಂಡವರು ಕುರುರಾಜನಾದ ಧೃತರಾಷ್ಟ್ರನ ಒಪ್ಪಿಗೆಯನ್ನು ಪಡೆದು ನಾನಾ ರೀತಿಯ ಅನ್ನ-ಪಾನಗಳನ್ನೂ, ನಾನಾ ರೀತಿಯ ಹಾಸಿಗೆ ಮೊದಲಾದ ಸಾಮಗ್ರಿಗಳನ್ನು ಕಾಡಿನಲ್ಲಿ ಬಳಸಿಕೊಂಡರು.

ಮಾಸಮೇಕಂ ವಿಜಹ್ರುಸ್ತೇ ಸಸೈನ್ಯಾಂತಃಪುರಾ ವನೇ ।
ಅಥ ತತ್ರಾಗಮದ್ ವ್ಯಾಸೋ ಯಥೋಕ್ತಂ ತೇ ಮಯಾऽನಘ ॥೯॥

ಹೇ ಅನಘನೇ, ಅವರು ಸೈನ್ಯ ಮತ್ತು ಅಂತಃಪುರದ ಜನರೊಂದಿಗೆ ಕೂಡಿಕೊಂಡು ಒಂದು ತಿಂಗಳ ಕಾಲ ಕಾಡಿನಲ್ಲಿ ವಿಹರಿಸಿದರು. ಆ ಸಮಯದಲ್ಲೇ ನಾನು ಹಿಂದೆ ಹೇಳಿದಂತೆ, ಅಲ್ಲಿಗೆ ವ್ಯಾಸರು ಆಗಮಿಸಿದರು.

ತಥಾ ಚ ತೇಷಾಂ ಸರ್ವೇಷಾಂ ಕಥಾಭಿರ್ನ್ಯಪಸನ್ನಿಧೌ ।
ವ್ಯಾಸಮನ್ವಾಸ್ಯ ತಂ ರಾಜನ್ನಾಜಗ್ಮುರ್ಮುನಯೋऽಪರೇ ॥೧೦॥

ನಾರದಃ ಪರ್ವತಶ್ಚೈವ ದೇವಲಶ್ಚ ಮಹಾತಪಾಃ ।
ವಿಶ್ವಾವಸುಸ್ತುಂಬುರುಶ್ಚ ಚಿತ್ರಸೇನಶ್ಚ ಭಾರತ ॥೧೧॥

ಹೇ ಭಾರತನೇ, ಹೀಗೆ ಆ ಎಲ್ಲರೂ ವೇದವ್ಯಾಸರನ್ನು ಸೇವಿಸುತ್ತಾ ರಾಜನ ಸನ್ನಿಧಿಯಲ್ಲಿ ನಾನಾ ರೀತಿಯ ಮಾತುಕಥೆಗಳನ್ನು ನಡೆಸುವಾಗಲೇ ನಾರದ, ಪರ್ವತರು, ಮಹಾತಪಸ್ವಿಯಾದ ದೇವಲರು, ವಿಶ್ವಾವಸು, ತುಂಬುರು, ಚಿತ್ರಸೇನ ಮೊದಲಾದ ಮುನಿಗಳು ಮತ್ತು ಬೇರೆ ಜನರು ಅಲ್ಲಿಗೆ ಬಂದರು.

ತೇಷಾಮಪಿ ಯಥಾನ್ಯಾಯಂ ಪೂಜಾಂ ಚಕ್ರೇ ಮಹಾತಪಾಃ ।
ಧೃತರಾಷ್ಟ್ರಾಭ್ಯನುಜ್ಞಾತಃ ಕುರುರಾಜೋ ಯುಧಿಷ್ಠಿರಃ ॥೧೨॥

ಆಗ ಮಹಾತಪಸ್ವಿಯಾದ, ಕುರುರಾಜನಾದ ಯುಧಿಷ್ಠಿರನು ಧೃತರಾಷ್ಟ್ರನ ಒಪ್ಪಿಗೆಯನ್ನು ಪಡೆದು ಅವರಿಗೂ ಯಥಾಯೋಗ್ಯವಾಗಿ ಪೂಜೆಯನ್ನು ನಡೆಸಿದನು.

ನಿಷೇದುಸ್ತೇ ತತಃ ಸರ್ವೇ ಪೂಜಾಂ ಪ್ರಾಪ್ಯ ಯುಧಿಷ್ಠಿರಾತ್ ।
ಆಸನೇಷು ಚ ಪುಣ್ಯೇಷು ಬರ್ಹಿಷ್ಮತ್ಸು ನವೇಷು ಚ ॥೧೩॥

ಅನಂತರ ಅವರೆಲ್ಲರೂ ಯುಧಿಷ್ಠಿರನಿಂದ ಪೂಜೆಯನ್ನು ಸ್ವೀಕರಿಸಿ, ಪುಣ್ಯಮಯವಾದ, ದರ್ಭೆಗಳಿಂದ ರಚಿತವಾದ ನೂತನವಾದ ಆಸನಗಳಲ್ಲಿ ಕುಳಿತುಕೊಂಡರು.

ತೇಷು ತತ್ರೋಪವಿಷ್ಟೇಷು ಸ ತು ರಾಜಾ ಮಹಾಮತಿಃ ।
ಪಾಂಡುಪುತ್ರೈಃ ಪರಿವೃತೋ ನಿಷಸಾದ ಕುರೂದ್ವಹ ॥೧೪॥

ಹೇ ಕುರೂದ್ವಹನೇ, ಅವರು ಆಸನಗಳಲ್ಲಿ ಕುಳಿತುಕೊಂಡ ನಂತರ ಮಹಾಮತಿಯಾದ, ಪಾಂಡವರಿಂದ ಕೂಡಿದ ಧೃತರಾಷ್ಟ್ರರಾಜನು ತಾನೂ ಕುಳಿತುಕೊಂಡನು.

ಗಾಂಧಾರೀ ಚೈವ ಕುಂತೀ ಚ ದ್ರೌಪದೀ ಸಾತ್ವತೀ ತಥಾ ।
ಸ್ತ್ರಿಯಶ್ಚಾನ್ಯಾಸ್ತಥಾಽನ್ಯಾಭಿಃ ಸಹೋಪವಿವಿಶುಸ್ತತಃ ॥೧೫॥

ಧೃತರಾಷ್ಟ್ರಾದಿಗಳು ಕುಳಿತುಕೊಂಡ ನಂತರ ಗಾಂಧಾರೀದೇವಿಯು, ಕುಂತೀದೇವಿಯು, ಸುಭದ್ರೆಯು ಹಾಗೆಯೇ ಅಂತಃಪುರದ ಇತರ ಸ್ತ್ರೀಯರೂ ಕೂಡ ಅಲ್ಲಿರುವ ಬೇರೆ ಸ್ತ್ರೀಯರೊಂದಿಗೆ ಕುಳಿತರು.

ತೇಷಾಂ ತತ್ರ ಕಥಾ ದಿವ್ಯಾ ಧರ್ಮಿಷ್ಠಾಶ್ಚಾಭವನ್ನೃಪ ।
ರಾಜರ್ಷೀಣಾಂ ಪುರಾಣಾನಾಂ ದೇವಾಸುರವಿಮಿಶ್ರಿತಾಃ ॥೧೬॥

ಹೇ ನೃಪನೇ, ಹೀಗೆ ಎಲ್ಲರೂ ಕುಳಿತುಕೊಂಡ ನಂತರ ಅವರ ಮಧ್ಯದಲ್ಲಿ ದೇವಾಸುರರ ಕಥೆಗಳಿಂದ ಕೂಡಿದ, ಪುರಾಣಕಾಲದ ರಾಜರ್ಷಿಗಳ ಧರ್ಮಭೂಯಿಷ್ಠವಾದ ದಿವ್ಯ ಮಾತುಕತೆಗಳು ನಡೆದವು.

ತತಃ ಕಥಾಂತೇ ವ್ಯಾಸಸ್ತಂ ಪ್ರಜ್ಞಾಚಕ್ಷುಷಮೀಶ್ವರಮ್ ।
ಪ್ರೋವಾಚ ವದತಾಂ ಶ್ರೇಷ್ಠಃ ಪುನರೇವ ಸ ತದ್ವಚಃ ॥೧೭॥

ಪ್ರೀಯಮಾಣೋ ಮಹಾತೇಜಾಃ ಸರ್ವವೇದವಿದಾಂ ವರಃ ॥೧೮॥

ಹೀಗೆ ಮಾತುಕತೆಗಳು ನಡೆಯುತ್ತಿದ್ದಾಗ ಕಥೆಯ ಅಂತ್ಯಭಾಗದಲ್ಲಿ ವಾಗ್ಮಿಗಳಾದ, ಮಹಾತೇಜಸ್ವಿಗಳಾದ, ವೇದಗಳನ್ನು ಬಲ್ಲವರಲ್ಲಿ ವರಿಷ್ಠರಾದ ವೇದವ್ಯಾಸರು ಪ್ರಜ್ಞೆಯೇ

ಕಣ್ಣುಗಳಾಗಿ ಉಳ್ಳ ಪ್ರಭುವಾದ ಆ ಧೃತರಾಷ್ಟ್ರನನ್ನು ಕುರಿತು ಮತ್ತೆ ಹೀಗೆ ಮಾತನಾಡಿದರು.

ವ್ಯಾಸಃ

ವಿದಿತಂ ಮಮ ರಾಜೇಂದ್ರ ಯತ್ತೇ ಹೃದಿ ವಿವಕ್ಷಿತಮ್ ॥೧೯॥

ವ್ಯಾಸರು– ಹೇ ರಾಜೇಂದ್ರನೇ, ನಿನ್ನ ಮನಸ್ಸಿನಲ್ಲಿ ಏನನ್ನು ಹೇಳಬೇಕೆಂಬ ಇಚ್ಛೆ ಇದೆಯೋ ಅದು ನನಗೆ ತಿಳಿದಿದೆ.

ದಹ್ಯಮಾನಸ್ಯ ಶೋಕೇನ ತವ ಪುತ್ರಕೃತೇನ ವೈ ।
ಗಾಂಧಾರ್ಯಾಶ್ಚೈವ ಯದ್ ದುಃಖಂ ಹೃದಿ ತಿಷ್ಠತಿ ನಿತ್ಯದಾ ॥೨೦॥

ಮಕ್ಕಳಿಂದುಂಟಾದ ಶೋಕದಿಂದ ಉರಿದು ಹೋಗುತ್ತಿರುವ ನಿನಗೆ ಮತ್ತು ಗಾಂಧಾರಿಗೆ ಹೃದಯದಲ್ಲಿ ನಿತ್ಯವೂ ಯಾವ ಶೋಕವು ನೆಲೆಸಿದೆಯೋ ಅದೂ ತಿಳಿದಿದೆ.

ಕುಂತ್ಯಾಶ್ಚ ಯನ್ಮಹಾರಾಜ ದ್ರೌಪದ್ಯಾಶ್ಚ ಹೃದಿ ಸ್ಥಿತಮ್ ।
ಯಚ್ಚ ಧಾರಯತೇ ತೀವ್ರಂ ದುಃಖಂ ಪುತ್ರವಿನಾಶಜಮ್ ॥೨೧॥

ಸುಭದ್ರಾ ಕೃಷ್ಣಭಗಿನೀ ತಚ್ಚಾಪಿ ವಿದಿತಂ ಮಮ ॥೨೨॥

ಮಕ್ಕಳ ವಿನಾಶದಿಂದ ಉಂಟಾದ ತೀವ್ರವಾದ ದುಃಖವು ಏನು ಕುಂತಿಯ ಹೃದಯದಲ್ಲಿ ನೆಲೆಸಿದೆಯೋ ಹಾಗೂ ದ್ರೌಪದಿಯ ಹೃದಯದಲ್ಲಿ ನೆಲೆಸಿದೆಯೋ ಅಲ್ಲದೆ ಕೃಷ್ಣನ ಸಹೋದರಿಯಾದ ಸುಭದ್ರೆಯ ಹೃದಯದಲ್ಲಿದೆಯೋ ಅದೆಲ್ಲವೂ ನನಗೆ ತಿಳಿದಿದೆ.

ಶ್ರುತ್ವಾ ಸಮಾಗಮಮಿಮಂ ಸರ್ವೇಷಾಂ ವಸ್ತತೋ ನೃಪ ।
ಸಂಶಯಚ್ಛೇದನಾರ್ಥಾಯ ಪ್ರಾಪ್ತಃ ಕೌರವನಂದನ ॥೨೩॥

ಹೇ ನೃಪನೇ, ನಿಮ್ಮೆಲ್ಲರ ಈ ಸಮಾಗಮವನ್ನು ಕೇಳಿ ತಿಳಿದು, ನಿಮ್ಮೆಲ್ಲರ ಸಂಶಯವನ್ನು ಪರಿಹರಿಸುವುದಕ್ಕಾಗಿಯೇ ಕೌರವನಂದನನೇ, ನಾನು ಬಂದಿರುವೆನು.

ಇಮೇ ಚ ದೇವಗಂಧರ್ವಾಃ ಸರ್ವೇ ಚೇಮೇ ಮಹರ್ಷಯಃ ।
ಪಶ್ಯಂತು ತಪಸೋ ವೀರ್ಯಮದ್ಯ ಮೇ ಚಿರಸಂಭೃತಮ್ ॥೨೪॥

ಇಲ್ಲಿರುವ ಎಲ್ಲ ದೇವತೆಗಳು, ಗಂಧರ್ವರು, ಈ ಎಲ್ಲ ಮಹರ್ಷಿಗಳು ಬಹಳ ಕಾಲದಿಂದ ನಾನು ತಪಸ್ಸಿನಿಂದ ಸಂಗ್ರಹಿಸಿದ ಬಲವನ್ನು ನೋಡಲಿ.

ತದುಚ್ಯತಾಂ ಮಹಾಪ್ರಾಜ್ಞ ಕಂ ಕಾಮಂ ಪ್ರದದಾಮಿ ತೇ ।
ಪ್ರವಣೋಸ್ಮಿ ವರಂ ದಾತುಂ ಪಶ್ಯ ಮೇ ತಪಸೋ ಬಲಮ್ ॥೨೫॥

ಮಹಾಪ್ರಾಜ್ಞನೇ, ಆದ್ದರಿಂದ ನಿನ್ನ ಯಾವ ಬಯಕೆಯನ್ನು ಪೂರೈಸಬೇಕೆಂಬುದಾಗಿ ತಿಳಿಸು. ಆ ವರವನ್ನು ನೀಡಲು ನಾನು ಸಮರ್ಥನಾಗಿರುವೆನು. ನನ್ನ ತಪಸ್ಸಿನ ಬಲವನ್ನು ನೋಡು.

ಏವಮುಕ್ತಃ ಸ ರಾಜೇಂದ್ರೋ ವ್ಯಾಸೇನಾಮಿತಬುದ್ಧಿನಾ ।
ಮುಹೂರ್ತಮಿವ ಸಂಚಿಂತ್ಯ ವಚನಾಯೋಪಚಕ್ರಮೇ ॥೨೬॥

ಅಮಿತ ಬುದ್ಧಿಯುಳ್ಳ ವೇದವ್ಯಾಸರು ಹೀಗೆ ಹೇಳಿದಾಗ, ರಾಜಶ್ರೇಷ್ಠನಾದ ಆ ಧೃತರಾಷ್ಟ್ರನು ಸ್ವಲ್ಪ ಹೊತ್ತು ಚಿಂತಿಸಿ ಮಾತನಾಡಲು ಆರಂಭಿಸಿದನು.

ಧೃತರಾಷ್ಟ್ರಃ

ಧನ್ಯೋಸ್ಮ್ಯನುಗೃಹೀತಶ್ಚ ಸಫಲಂ ಜೀವಿತಂ ಚ ಮೇ ।
ಯನ್ಮೇ ಸಮಾಗಮೋಽದ್ಯೇಹ ಭವದ್ಭಿಃ ಸಹ ಸಾಧುಭಿಃ ॥೨೭॥

ಧೃತರಾಷ್ಟ್ರ– ಇಂದು ಸಜ್ಜನರೊಂದಿಗೆ ಕೂಡಿದ ತಮ್ಮ ಸಮಾಗಮವು ಏನು ನಡೆದಿದೆಯೋ ಇದರಿಂದ ನಾನು ಕೃತಾರ್ಥನಾಗಿರುವೆನು. ತಮ್ಮಿಂದ ಅನುಗ್ರಹೀತನಾದ ನನ್ನ ಜೀವಿತವು ಇಂದು ಸಫಲವಾಯಿತು.

ಅದ್ಯ ಚಾಪ್ಯವಗಚ್ಛಾಮಿ ಗತಿಮಿಷ್ಟಾಮಿಹಾತ್ಮನಃ ।
ಬ್ರಹ್ಮಕಲ್ಪೈರ್ಭವದ್ಭಿರ್ಯತ್ಸಮೇತೋಽಹಂ ತಪೋಧನಾಃ ॥೨೮॥

ಹೇ ತಪೋಧನರೇ, ಬ್ರಹ್ಮಸದೃಶರಾದ ತಮ್ಮೊಂದಿಗೆ ಕೂಡಿದ ನಾನು ನನಗೆ ಅಭೀಷ್ಟವಾದ ಉತ್ತಮಗತಿಯು ಸಿಗುವುದೆಂದು ಇಂದೂ ನಂಬುತ್ತೇನೆ.

ದರ್ಶನಾದೇವ ಭವತಾಂ ಪೂತೋಽಹಂ ನಾತ್ರ ಸಂಶಯಃ ।
ವಿದ್ಯತೇ ನ ಭಯಂ ಚಾಪಿ ಪರಲೋಕೇ ಮಮಾನಘಾಃ ॥೨೯॥

ನಿಮ್ಮಂತಹ ಸಜ್ಜನರ ದರ್ಶನದಿಂದಲೇ ನಾನು ಪವಿತ್ರನಾದೆನು. ಇದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಹೇ ಅನಘರೇ, ನನಗೆ ಪರಲೋಕದ ವಿಷಯದಲ್ಲಿ ಭಯವೂ ಇಲ್ಲವಾಗಿದೆ.

ಕಿಂತು ತಸ್ಯ ಸುದುರ್ಬುದ್ಧೇರ್ಮಂದಸ್ಯಾಪನಯೈರ್ಭೃಶಮ್ ।
ದೂಯತೇ ಮೇ ಮನೋ ನಿತ್ಯಂ ಸ್ಮರತಃ ಪುತ್ರಗೃದ್ಧಿನಃ ॥೩೦॥

ಆದರೆ ಅತ್ಯಂತ ದುರ್ಬುದ್ಧಿಯಾಗಿದ್ದ, ಮೂಢನಾದ ಆ ದುರ್ಯೋಧನನ ಬಹುವಾದ ಅನ್ಯಾಯಗಳಿಂದ, ಮಕ್ಕಳಿಗಾಗಿ ಆಸೆಪಟ್ಟ ನನ್ನ ಮನಸ್ಸು ಅದನ್ನು ಸ್ಮರಿಸಿಕೊಂಡು ಬಹಳ ಕಷ್ಟಪಡುತ್ತಿದೆ.

ಅಪಾಪಾಃ ಪಾಂಡವಾ ಯೇನ ನಿಕೃತಾಃ ಪಾಪಬುದ್ಧಿನಾ ।
ಘಾತಿತಾ ಪೃಥಿವೀ ಯೇನ ಸಹಯಾ ಸನರದ್ವಿಪಾ ॥೩೧॥

ಏಕೆಂದರೆ ಪಾಪಬುದ್ಧಿಯುಳ್ಳ ಯಾವ ದುರ್ಯೋಧನನಿಂದ ಪಾಪವನ್ನೇ ಮಾಡದ ಪಾಂಡವರು ಮೋಸಕ್ಕೊಳಗಾದರು. ಅಲ್ಲದೇ ಕುದುರೆಗಳು ಮತ್ತು ಆನೆಗಳಿಂದ ಕೂಡಿದ ಮನುಷ್ಯರಿಂದಲೂ ಕೂಡಿದ ಇಡೀ ಭೂಮಿಯು ನಾಶವಾಯಿತು.

ರಾಜಾನಶ್ಚ ಮಹಾತ್ಮಾನೋ ನಾನಾಜನಪದೇಶ್ವರಾಃ ।
ಆಗಮ್ಯ ಮಮ ಪುತ್ರಾರ್ಥೇ ಸರ್ವೇ ಮೃತ್ಯುವಶಂ ಗತಾಃ ॥೩೨॥

ನಾನಾ ಜನಪದಗಳಿಗೆ ನಾಯಕರಾದ, ಮಹಾತ್ಮರಾದ ಅನೇಕ ಮಂದಿ ರಾಜರುಗಳು ನನ್ನ ಮಗನಿಗೋಸ್ಕರ ಇಲ್ಲಿ ಬಂದು ಎಲ್ಲರೂ ಮೃತ್ಯುವಶರಾದರು.

ಯೇ ತೇ ಪಿತೄಂಶ್ಚ ದಾರಾಂಶ್ಚ ಪ್ರಾಣಾಂಶ್ಚ ಮನಸಃ ಪ್ರಿಯಾನ್ ।
ಪರಿತ್ಯಜ್ಯ ಗತಾಃ ಶೂರಾಃ ಪ್ರೇತರಾಜನಿವೇಶನಮ್ ॥೩೩॥

ಆ ಎಲ್ಲರೂ ಕೂಡ ತಮಗೆ ಅತ್ಯಂತ ಪ್ರೀತಿಪಾತ್ರರಾದ ಪಿತೃಗಳನ್ನೂ, ಹೆಂಡಂದಿರನ್ನೂ, ಅಷ್ಟೇ ಏಕೆ ಪ್ರಾಣಗಳನ್ನೂ ಬಿಟ್ಟು ತಾವೆಷ್ಟು ಶೂರರಾಗಿದ್ದರೂ ಪ್ರೇತರಾಜನ ಮನೆಗೆ ಹೊರಟು ಹೋದರು.

ಕಾ ನು ತೇಷಾಂ ಗತಿರ್ಬ್ರಹ್ಮನ್ ಮಿತ್ರಾರ್ಥೇ ಯೇ ಹತಾ ಮೃಧೇ ।
ತಥೈವ ಪುತ್ರಪೌತ್ರಾಣಾಂ ಮಮ ಯೇ ನಿಹತಾ ಯುಧಿ ॥೩೪॥

ಹೇ ಬ್ರಹ್ಮನ್, ಮಿತ್ರರಿಗೋಸ್ಕರ ಯಾರು ಯುದ್ಧದಲ್ಲಿ ಹತರಾದರೋ ಅವರಿಗೆ ಯಾವ ರೀತಿಯ ಗತಿಯುಂಟಾಯಿತು? ಅಂತೆಯೇ, ಯುದ್ಧದಲ್ಲೇ ನಿಹತರಾದ ನನ್ನ ಮಕ್ಕಳು ಹಾಗೂ ಮೊಮ್ಮಕ್ಕಳು ಯಾರಿರುವರೋ ಅವರಿಗೂ ಯಾವ ಗತಿ ಉಂಟಾಯಿತು?

ದೂಯತೇ ಮೇ ಮನೋಽಭೀಕ್ಷ್ಣಂ ಘಾತಯಿತ್ವಾ ಮಹಾಬಲಮ್ ।
ಭೀಷ್ಮಂ ಶಾಂತನವಂ ವೃದ್ಧಂ ದ್ರೋಣಂ ಚ ದ್ವಿಜಸತ್ತಮಮ್ ॥೩೫॥

ಶಂತನುವಿನ ಮಗನಾದ ವೃದ್ಧನಾದ ಭೀಷ್ಮರನ್ನೂ, ಬ್ರಾಹ್ಮಣಶ್ರೇಷ್ಠರಾದ ದ್ರೋಣರನ್ನೂ ಕೂಡಿದ ಮಹಾಬಲರನ್ನೂ ನಾಶಗೊಳಿಸಿ ನನ್ನ ಮನಸ್ಸು ಬಹಳವಾಗಿ ಪರಿತಪಿಸುತ್ತಿದೆ.

ಮಮ ಪುತ್ರೇಣ ಮೂಢೇನ ಪಾಪೇನಾಕೃತಬುದ್ಧಿನಾ ।
ಕ್ಷಯಂ ನೀತಂ ಕುಲಂ ದೀಪ್ತಂ ಪೃಥಿವೀರಾಜ್ಯಮಿಚ್ಛತಾ ॥೩೬॥

ಮೂರ್ಖನಾದ, ಪಾಪಿಷ್ಠನಾದ, ಬುದ್ಧಿನೆಟ್ಟಗಿಲ್ಲದ, ಭೂಮಿಯನ್ನೂ ರಾಜ್ಯವನ್ನೂ ಬಯಸುವ ನನ್ನ ಮಗನಿಂದ ಶೋಭಾಯಮಾನವಾದ ನಮ್ಮ ಕುಲವು ನಾಶಕ್ಕೊಳಗಾಯಿತು.

ಏತೇ ಮದರ್ಥೇ ಪುತ್ರಾಂಶ್ಚ ದಾರಾಂಶ್ಚ ಮನಸಃ ಪ್ರಿಯಾನ್ ।
ಭೋಗಾಂಶ್ಚ ವಿವಿಧಾಂಸ್ತಾತ ಇಷ್ಟಾಪೂರ್ತಾಂಸ್ತಥೈವ ಚ ॥೩೭॥

ಪರಿತ್ಯಜ್ಯ ಗತಾಃ ಶೂರಾಃ ಪ್ರೇತರಾಜನಿವೇಶನಮ್ ॥೩೮॥

ಈ ಎಲ್ಲರೂ ಕೂಡ ನನಗೋಸ್ಕರ ತಮಗೆ ಅತ್ಯಂತ ಪ್ರೀತಿ ಪಾತ್ರರಾದ ಮಕ್ಕಳನ್ನೂ, ಹೆಂಡಂದಿರನ್ನೂ, ನಾನಾ ರೀತಿಯ ಭೋಗಗಳನ್ನೂ ಅಂತೆಯೇ ತಾವು ಮಾಡುವ ಯಜ್ಞ-ಯಾಗ ಮತ್ತು ಲೋಕೋಪಕಾರ ಕೆಲಸಗಳನ್ನೂ ಬಿಟ್ಟು ತಾವೆಷ್ಟೇ ಶೂರರಾಗಿದ್ದರೂ ಯಮಪಟ್ಟಣಕ್ಕೆ ಹೊರಟು ಹೋದರು.

ಏತತ್ಸರ್ವಮನುಸ್ಮೃತ್ಯ ದಹ್ಯಮಾನೋ ದಿವಾನಿಶಮ್ ।
ನ ಶಾಂತಿಮಧಿಗಚ್ಛಾಮಿ ದುಃಖಶೋಕಸಮಾಹತಃ ॥೩೯॥

ಇತಿ ಮೇ ಚಿಂತಯಾನಸ್ಯ ಪಿತಃ ಶಾಂತಿರ್ನ ವಿದ್ಯತೇ ॥೪೦॥

ಈ ಎಲ್ಲವನ್ನೂ ಮತ್ತೆ ಮತ್ತೆ ಸ್ಮರಿಸುತ್ತಾ ಹಗಲು-ರಾತ್ರಿ ಬೆಂಕಿಯಲ್ಲಿ ಬಿದ್ದವರಂತೆ ಚಟಪಡಿಸುತ್ತಾ, ದುಃಖಶೋಕಗಳಿಂದ ಪರಿತಪಿಸುತ್ತಾ, ಇದರ ಶಮನೋಪಾಯ ಏನೆಂಬುದಾಗಿ ತಿಳಿಯಲಾರದವನಾಗಿದ್ದೇನೆ. ಹೇ ತಂದೆಯೇ, ಇವೆಲ್ಲವನ್ನೂ ಚಿಂತಿಸುತ್ತಾ ನನಗೆ ಮನಶ್ಶಾಂತಿಯೇ ಇಲ್ಲವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರಸ್ಯ ಶೋಕವಚನಂ ನಾಮ ಚತುಸ್ತ್ರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಗಾಂಧಾರಿಯು ವೇದವ್ಯಾಸರಲ್ಲಿ ಧೃತರಾಷ್ಟ್ರನಿಗೆ ಮಕ್ಕಳನ್ನು ನೋಡುವ ಬಯಕೆ ಇದೆ ಎಂದು ನಿವೇದಿಸಿದಾಗ ವೇದವ್ಯಾಸರು ಕುಂತಿಯಲ್ಲಿ ಅವಳ ಅಭೀಷ್ಟವನ್ನು ನಿವೇದಿಸುವಂತೆ ಸೂಚಿಸುವುದು.

ವೈಶಂಪಾಯನಃ

ತಚ್ಚ್ರುತ್ವಾ ವಿವಿಧಂ ತಸ್ಯ ರಾಜರ್ಷೇಃ ಪರಿದೇವಿತಮ್ ।
ಪುನರ್ನವೀಕೃತಃ ಶೋಕೋ ಗಾಂಧಾರ್ಯಾ ಜನಮೇಜಯ ॥೧॥

ವೈಶಂಪಾಯನ– ಹೇ ಜನಮೇಜಯನೇ, ರಾಜರ್ಷಿಯಾದ ಆ ಧೃತರಾಷ್ಟ್ರನ ನಾನಾ ರೀತಿಯ ಆ ವಿಲಾಪವನ್ನು ಕೇಳಿ ಗಾಂಧಾರಿಯ ಶೋಕವು ಮತ್ತೆ ಉಮ್ಮಳಿಸಿ ಬಂತು.

ಕುಂತ್ಯಾ ದ್ರುಪದಪುತ್ರ್ಯಾಶ್ಚ ಸುಭದ್ರಾಯಾಸ್ತಥೈವ ಚ ।
ತಾಸಾಂ ಚ ವರನಾರೀಣಾಂ ವಧೂನಾಂ ಕೌರವಸ್ಯ ಚ ॥೨॥

ಅದೇ ರೀತಿ ಕುಂತಿಗೂ, ದ್ರೌಪದಿಗೂ, ಅಂತೆಯೇ ಸುಭದ್ರೆಗೂ ಅಷ್ಟಲ್ಲದೆ ಧೃತರಾಷ್ಟ್ರನ ಸೊಸೆಯರಾದ ಎಲ್ಲ ಶ್ರೇಷ್ಠ ಸ್ತ್ರೀಯರಿಗೂ ದುಃಖ ಉಮ್ಮಳಿಸಿ ಬಂತು.

ಪುತ್ರಶೋಕಸಮಾವಿಷ್ಟಾ ಗಾಂಧಾರೀ ತ್ವಿದಮಬ್ರವೀತ್ ।
ಶ್ವಶುರಂ ಬದ್ಧನಯನಾ ದೇವೀ ಪ್ರಾಂಜಲಿರುತ್ಥಿತಾ ॥೩॥

ಪುತ್ರಶೋಕದಿಂದ ಕೂಡಿದ ಗಾಂಧಾರಿಯು ಮಾವನಾದ ವೇದವ್ಯಾಸರ ಎದುರು ಕೈಮುಗಿದು ನಿಂತುಕೊಂಡು ಕಣ್ಣು ಮುಚ್ಚಿಕೊಂಡು ಹೀಗೆ ಹೇಳಿದಳು.

ಲೋಕಾಂತರಗತಾನ್ ಪುತ್ರಾನಯಂ ಕಾಂಕ್ಷತಿ ಮಾನದ ।
ತಚ್ಚಾಸ್ಯ ಮಾನಸಂ ಜ್ಞಾತಂ ಭಗವಂಸ್ತಪಸಾ ತ್ವಯಾ ॥೪॥

ಹೇ ಭಗವನ್, ಗೌರವಾನ್ವಿತನೇ, ಈ ಧೃತರಾಷ್ಟ್ರರಾಜನು ಪರಲೋಕದಲ್ಲಿರುವ ಮಕ್ಕಳನ್ನು ನೋಡಬಯಸುತ್ತಿದ್ದಾನೆ. ತಮಗೂ ಕೂಡ ತಪೋಬಲದಿಂದ ಇವನ ಮನೋಭೀಷ್ಟವು ತಿಳಿದಿದೆಯಲ್ಲವೇ?

ಷೋಡಶೇಮಾನಿ ವರ್ಷಾಣಿ ಗತಾನಿ ಮುನಿಪುಂಗವ ।
ಅಸ್ಯ ರಾಜ್ಞೋ ಹತಾನ್ ಪುತ್ರಾನ್ ಶೋಚತೋ ನ ಶಮೋ ವಿಭೋ ॥

ಹೇ ಮುನಿಪುಂಗವನೇ, ವಿಭೋ, ಕಳೆದುಕೊಂಡ ಮಕ್ಕಳ ಬಗ್ಗೆ ದುಃಖಿಸುತ್ತಾ ಈ ರಾಜನ ಈ ಹದಿನಾರು ವರ್ಷಗಳು ಕಳೆದು ಹೋದವು.

ಪುತ್ರಶೋಕಸಮಾವಿಷ್ಟೋ ನಿಃಶ್ವಸನ್ ಹ್ಯೇಷ ಭೂಮಿಪಃ ।
ನ ಶೇತೇ ವಸತೀಃ ಸರ್ವಾ ಧೃತರಾಷ್ಟ್ರೋ ಮಹಾಮುನೇ ॥೬॥

ಹೇ ಮಹಾಮುನಿಯೇ, ಈ ಭೂಮಿಪಾಲನಾದ ಧೃತರಾಷ್ಟ್ರನು ಪುತ್ರಶೋಕದಿಂದ ತತ್ತರಿಸಿದವನಾಗಿ, ನಿಟ್ಟುಸಿರು ಬಿಡುತ್ತಾ, ಎಲ್ಲ ರಾತ್ರಿಗಳಲ್ಲೂ ನಿದ್ದೆ ಬಾರದೆ ಚಡಪಡಿಸುತ್ತಿದ್ದಾನೆ.

ಲೋಕಾನನ್ಯಾನ್ ಸಮರ್ಥೋಽಸಿ ಸ್ಪಷ್ಟುಂ ಸರ್ವಾಂಸ್ತಪೋಬಲಾತ್ ।
ಕಿಮು ಲೋಕಾಂತರಗತಾನ್ ರಾಜ್ಞೋ ದರ್ಶಯಿತುಂ ಸುತಾನ್ ॥೭॥

ನೀನು ಎಲ್ಲ ಲೋಕಗಳನ್ನು ತಪೋಬಲದಿಂದ ತಲುಪಲು ಸಮರ್ಥನಾಗಿರುವೆ. ಹಾಗಿರುವಾಗ ಪರಲೋಕದಲ್ಲಿರುವ ರಾಜನ ಮಕ್ಕಳನ್ನು ತೋರಿಸಲಾಗದೆ?

ಇಯಂ ಚ ದ್ರೌಪದೀ ಕೃಷ್ಣಾ ಹತಜ್ಞಾತಿಸುತಾ ಭೃಶಮ್ ।
ಶೋಚತ್ಯತೀವ ಸರ್ವಾಸಾಂ ಸ್ನುಷಾಣಾಂ ದಯಿತಾ ಸ್ನುಷಾ ॥೮॥

ಎಲ್ಲ ಸೊಸೆಯಂದಿರ ಮಧ್ಯೆ ಅತ್ಯಂತ ಪ್ರೀತಿಪಾತ್ರ ಸೊಸೆಯಾದ ಈ ಕೃಷ್ಣೆ ದ್ರೌಪದಿಯೂ ಕೂಡ ಬಂಧುಗಳನ್ನೂ, ಮಕ್ಕಳನ್ನೂ ಕಳೆದುಕೊಂಡು ಬಹುವಾಗಿ ದುಃಖಿಸುತ್ತಿದ್ದಾಳೆ.

ತಥಾ ಕೃಷ್ಣಸ್ಯ ಭಗಿನೀ ಸುಭದ್ರಾ ಭದ್ರಭಾಷಿಣೀ ।
ಸೌಭದ್ರವಧಸಂತಪ್ತಾ ಭೃಶಂ ಶೋಚತಿ ಭಾಮಿನೀ ॥೯॥

ಹಾಗೆಯೇ ಕೃಷ್ಣನ ತಂಗಿಯಾದ, ಮಂಗಳವಾದ ಮಾತುಳ್ಳ ಈ ಭಾಮಿನಿ ಸುಭದ್ರೆಯೂ ಅಭಿಮನ್ಯುವಿನ ಮರಣದಿಂದ ಸಂತಪ್ತಳಾಗಿ ಬಹುದುಃಖವನ್ನು ಅನುಭವಿಸುತ್ತಿದ್ದಾಳೆ.

ಇಯಂ ಚ ಭೂರಿಶ್ರವಸೋ ಭಾರ್ಯಾ ಪರಮಸಮ್ಮತಾ ।
ಭರ್ತೃವ್ಯಸನಶೋಕಾರ್ತಾ ಭೃಶಂ ಶೋಚತಿ ಭಾಮಿನೀ ॥೧೦॥

ಯಸ್ಯಾಸ್ತು ಶ್ವಶುರೋ ಧೀಮಾನ್ ಬಾಹ್ಲಿಕಃ ಸ ಕುರೂದ್ವಹಃ ।
ನಿಹತಃ ಸೋಮದತ್ತಶ್ಚ ಪಿತ್ರಾ ಸಹ ಮಹಾರಣೇ ॥೧೧॥

ಹಿರಿಯರನ್ನು ಗೌರವದಿಂದ ನೋಡಿಕೊಳ್ಳುತ್ತಿದ್ದ ಭೂರಿಶ್ರವಸ್ಸಿನ ಪತ್ನಿಯಾದ ಈ ಭಾಮಿನಿಯೂ ಕೂಡ ಗಂಡನನ್ನು ಕಳೆದುಕೊಂಡ ದುಃಖದಿಂದ ತಪ್ತಳಾಗಿ ಬಹಳ ದುಃಖಪಡುತ್ತಿದ್ದಾಳೆ. ಇವಳ ಮಾವನಾದ ಕುರುವಂಶದಲ್ಲೇ ಬಂದ ಧೀಮಂತನಾದ ಬಾಹ್ಲೀಕ ದೇಶದ ಸೋಮದತ್ತನೂ ಕೂಡ ಮಹಾಯುದ್ಧದಲ್ಲಿ ತನ್ನ ತಂದೆಯೊಂದಿಗೆ ಹತನಾಗಿರುವನು.

ಶ್ರೀಮತೋಸ್ಯ ಮಹಾಬುದ್ಧೇಃ ಸಂಗ್ರಾಮೇಷ್ವಪಲಾಯಿನಃ ।
ಪುತ್ರಸ್ಯ ತೇ ಪುತ್ರಶತಂ ನಿಹತಂ ಯದ್ ರಣಾಜಿರೇ ॥೧೨॥

ತಸ್ಯ ಭಾರ್ಯಾಶತಮಿದಂ ದುಃಖಶೋಕಸಮಾಹತಮ್ ।
ಪುನಃಪುನರ್ವರ್ಧಯಾನಂ ಶೋಕಂ ರಾಜ್ಞೋ ಮಮೈವ ಚ ।
ಹತಾಹಾರೇಣ ಮಹತಾ ಮಾಮುಪಾಸ್ತೇ ಮಹಾಮುನೇ ॥೧೩॥

ಹೇ ಮಹಾಮುನಿಯೇ, ಶ್ರೀಮಂತನಾದ ಮಹಾಬುದ್ಧಿಯುಳ್ಳ ಯುದ್ಧಕ್ಕೆ ಹೆದರದ ನಿನ್ನ ಮಗನಾದ ಈ ಧೃತರಾಷ್ಟ್ರನ ನೂರು ಮಂದಿ ಮಕ್ಕಳು ಯುದ್ಧದಲ್ಲಿ ಏನು ಹತರಾಗಿರುವರೋ ಅವರ ನೂರು ಮಂದಿ ಪತ್ನಿಯರು ದುಃಖ ಹಾಗೂ ಶೋಕಗಳಿಂದ ಪೀಡಿಸಲ್ಪಟ್ಟವರಾಗಿ ರಾಜನಾದ ಧೃತರಾಷ್ಟ್ರನ ಮತ್ತು ನನ್ನ ಶೋಕವನ್ನು ಮತ್ತೆ ಮತ್ತೆ ಹೆಚ್ಚಿಸುತ್ತಾ ಅನ್ನಾಹಾರಗಳನ್ನು ಬಿಡುವ ಮೂಲಕ ದೊಡ್ಡ ತಪಸ್ಸಿನೊಂದಿಗೆ ನನ್ನನ್ನು ಸೇವಿಸುತ್ತಿದ್ದಾರೆ.

ಯೇ ಚ ಶೂರಾ ಮಹಾತ್ಮಾನಃ ಶ್ವಶುರಾ ಮೇ ಮಹಾರಥಾಃ ।
ಸೋಮದತ್ತಪ್ರಭೃತಯಃ ಕಾ ನು ತೇಷಾಂ ಗತಿಃ ಪ್ರಭೋ ॥೧೪॥

ಹೇ ಪ್ರಭುವೇ, ಶೂರರಾದ, ಮಹಾತ್ಮರಾದ, ಮಹಾರಥ ಎಂಬ ಪದವಿಯನ್ನು ಪಡೆದ ಸೋಮದತ್ತನೇ ಮೊದಲಾದ ನನ್ನ ಮಾವಂದಿರು ಏನು ಯುದ್ಧದಲ್ಲಿ ಮಡಿದಿರುವರೋ ಪರಲೋಕದಲ್ಲಿ ಅವರಿಗಾದ ಗತಿಯೇನು?

ತವ ಪ್ರಸಾದಾದ್ ಭಗವನ್ ವಿಶೋಕೋಽಯಂ ಮಹೀಪತಿಃ ।
ಕುರ್ಯಾತ್ ಕಾಲಮಹಂ ಚೇಯಂ ವಧೂಸ್ತವ ಮಹಾಮುನೇ ॥೧೫॥

ಮಹಾಮುನಿಯೇ, ಈ ಧೃತರಾಷ್ಟ್ರರಾಜನು ಮತ್ತು ನಿನ್ನ ಸೊಸೆಯಾದ ನಾನೂ ಕೂಡ ನಿನ್ನ ಪ್ರಸಾದದಿಂದ ಶೋಕವಿಲ್ಲದೆ ಕಾಲಯಾಪನೆ ನಡೆಸುವಂತೆ ಅನುಗ್ರಹಿಸು.

ಇತ್ಯುಕ್ತವತ್ಯಾಂ ಗಾಂಧಾರ್ಯಾಂ ಕುಂತೀ ವ್ರತಕೃಶಾನನಾ ।
ಪ್ರಚ್ಛನ್ನಜಾತಂ ಪುತ್ರಂ ತಂ ಸಸ್ಮಾರಾದಿತ್ಯಸನ್ನಿಭಮ್ ॥೧೬॥

ಹೀಗೆ ಗಾಂಧಾರೀದೇವಿಯು ಹೇಳುತ್ತಿರುವಾಗಲೇ ವ್ರತದಿಂದಾಗಿ ಬಾಡಿದ ಮುಖವುಳ್ಳ ಕುಂತೀದೇವಿಯು ಗುಟ್ಟಾಗಿ ಜನಿಸಿದ ಸೂರ್ಯಸದೃಶನಾದ ಆ ಪುತ್ರನನ್ನು ಸ್ಮರಿಸಿಕೊಂಡಳು.

ತಾಮೃಷಿರ್ವರದೋ ವ್ಯಾಸೋ ದೂರಶ್ರವಣದರ್ಶನಃ ।
ಅಪಶ್ಯದ್ ದುಃಖಿತಾಂ ದೇವೀಂ ಮಾತರಂ ಸವ್ಯಸಾಚಿನಃ ॥೧೭॥

ಹೀಗೆ ದುಃಖಿತಳಾದ, ಅರ್ಜುನನ ತಾಯಿಯಾದ ಆ ಕುಂತೀದೇವಿಯನ್ನು ವರದರಾದ, ಎಷ್ಟೇ ದೂರದಲ್ಲಿರುವುದನ್ನೂ ಕೇಳಬಲ್ಲ ಮತ್ತು ನೋಡಬಲ್ಲ ವೇದವ್ಯಾಸ ಋಷಿಗಳು ನೋಡಿದರು.

ತಾಮುವಾಚ ತತೋ ವ್ಯಾಸೋ ಯತ್ತೇ ಕಾರ್ಯಂ ವಿವಕ್ಷಿತಮ್ ।
ತದ್ ಬ್ರೂಹಿ ತ್ವಂ ಮಹಾಭಾಗೇ ಯತ್ತೇ ಮನಸಿ ವರ್ತತೇ ॥೧೮॥

ಹೀಗೆ ನೋಡಿದ ವೇದವ್ಯಾಸರು ನಿನಗೆ ಏನು ಮಾಡಬೇಕೆಂಬ ಬಯಕೆ ಇದೆ? ನಿನ್ನ ಮನಸ್ಸಿನಲ್ಲಿ ಏನಿದೆ? ಮಹಾತ್ಮಳೇ, ಅದನ್ನು ನೀನು ಹೇಳು ಎಂದು ಕುಂತಿಯನ್ನು ಕುರಿತು ಹೇಳಿದರು.

ಶ್ವಶ್ರುರಾಯ ತತಃ ಕುಂತೀ ಪ್ರಣಮ್ಯ ಶಿರಸಾ ತದಾ ।
ಉವಾಚ ವಾಕ್ಯಂ ಸವ್ರೀಡಾ ವಿವೃಣ್ವಾನಾ ಪುರಾತನಮ್ ॥೧೯॥

ಆಗ ಕುಂತೀದೇವಿಯು ಮಾವನಾದ ಧೃತರಾಷ್ಟ್ರನಿಗೆ ತಲೆಬಾಗಿ ನಮಸ್ಕರಿಸಿ, ಹಿಂದೆ ನಡೆದ ಘಟನೆಯನ್ನು ವಿವರಿಸುವುದಕ್ಕಾಗಿ ನಾಚಿಕೆಯಿಂದ ಕೂಡಿಕೊಂಡು ಮಾತನಾಡಲು ಆರಂಭಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಗಾಂಧಾರೀವಚನಂ ನಾಮ ಪಂಚತ್ರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಕುಂತಿಯು ವೇದವ್ಯಾಸರಲ್ಲಿ ದುರ್ವಾಸರ ಅನುಗ್ರಹದಿಂದ ಸೂರ್ಯದೇವನಿಂದ ತನ್ನಲ್ಲಿ ಕರ್ಣನ ಉತ್ಪತ್ತಿಯಾಗಿರುವುದನ್ನು ತಿಳಿಸುವ ಮೂಲಕ ಅವನನ್ನು ನೋಡಬೇಕೆಂಬ ಬಯಕೆ ಇದೆ ಎಂದು ನಿವೇದಿಸುವುದು. ವೇದವ್ಯಾಸರು ಸಕಾರಣವಾಗಿ ಕರ್ಣನ ಉತ್ಪತ್ತಿಯಿಂದ ಕುಂತಿಗೆ ಯಾವುದೇ ದೋಷವಿಲ್ಲ ಎನ್ನುತ್ತಾ ಅವಳ ಶಂಕೆಯನ್ನು ಪರಿಹರಿಸುವುದು.

ಕುಂತೀ

ಭಗವಾನ್ ಶ್ವಶುರೋ ಮೇऽಸಿ ದೈವತಸ್ಯಾಪಿ ದೈವತಮ್ ।
ಸ ಮೇ ದೇವಾತಿದೇವಸ್ತ್ವಂ ಶೃಣು ಸತ್ಯಾಂ ಗಿರಂ ಮಮ ॥೧॥

ಕುಂತೀ– ಹೇ ಭಗವನ್, ನೀನು ನನಗೆ ಮಾವನಾಗಿರುವಿ. ದೇವತೆಗಳಿಗೂ ದೇವತೆಯಾಗಿರುವ ನೀನು ನನಗೆ ದೇವಾಧಿದೇವನಾಗಿರುವಿ. ನನ್ನ ಸತ್ಯವಾದ ಮಾತುಗಳನ್ನು ಆಲಿಸು.

ತಪಸ್ವೀ ಕೋಪನೋ ವಿಪ್ರೋ ದುರ್ವಾಸಾ ನಾಮ ಮೇ ಪಿತುಃ ।
ಭಿಕ್ಷಾಮುಪಗತೋ ಭೋಕ್ತುಂ ತಮಹಂ ಪರ್ಯತೋಷಯಮ್ ॥೨॥

ನಾನು ತಂದೆಯ ಮನೆಯಲ್ಲಿದ್ದಾಗ ಒಂದು ದಿನ ಅತಿಯಾದ ಕೋಪವುಳ್ಳ, ತಪಸ್ವಿಯಾದ ದುರ್ವಾಸನೆಂಬ ವಿಪ್ರನು ನನ್ನ ತಂದೆ ಇದ್ದಲ್ಲಿಗೆ ಭಿಕ್ಷೆಯನ್ನು ಸ್ವೀಕರಿಸಲು ಬಂದನು. ಅವನನ್ನು ನಾನು ಸೇವೆಯಿಂದ ಸಂತೋಷಗೊಳಿಸಿದೆನು.

ಶೌಚೇನ ತ್ವಾಗಸಸ್ಯಾಗೈಃ ಶುದ್ಧೇನ ಮನಸಾ ತಥಾ ।
ಕೋಪಸ್ಥಾನೇಷ್ವಪಿ ಮಹತ್ಸ್ವಕುಪ್ಯನ್ನ ಕದಾಚನ ॥೩॥

ಶೌಚಾಚಾರದಿಂದ ಶುದ್ಧಳಾಗಿ, ವಂಚನೆಯನ್ನು ಬಿಟ್ಟು, ಶುದ್ಧವಾದ ಮನಸ್ಸಿನಿಂದ, ನಾನು ಕೋಪಗೊಳ್ಳಬೇಕಾದ ಮಹತ್ತರ ಸನ್ನಿವೇಶಗಳು ಬಂದಾಗಲೂ ನಾನು ಕೋಪಗೊಳ್ಳಲಿಲ್ಲ.

ಸ ಪ್ರೀತೋ ವರದೋ ಮೇಽಭೂತ್ ಕೃತಕೃತ್ಯೋ ಮಹಾಮುನಿಃ ।
ಅವಶ್ಯಂ ತೇ ಗ್ರಹೀತವ್ಯಮಿತಿ ಮಾಂ ಸೋಬ್ರವೀದ್ ವಚಃ ॥೪॥

ನನ್ನ ಈ ರೀತಿಯ ಸೇವೆಯಿಂದ ಸಂತೋಷಗೊಂಡ, ಕೃತಾರ್ಥನಾದ ಮಹಾಮುನಿಯು ನನಗೆ ವರ ನೀಡಲು ಮುಂದಾದನು. ಅವಶ್ಯವಾಗಿ ನಾನು ನೀಡುವ ವರವನ್ನು ಸ್ವೀಕರಿಸಬೇಕೆಂದು ಅವನು ತಿಳಿಸಿದನು.

ತತಃ ಶಾಪಭಯಾದ್ ವಿಪ್ರಮವೋಚಂ ಪುನರೇವ ತಮ್ ।
ಏವಮಸ್ತ್ವಿತಿ ಚ ಪ್ರಾಹ ಪುನರೇವ ಸ ಮೇ ದ್ವಿಜಃ ॥೫॥

ನಾನು ಒಪ್ಪದಿದ್ದರೆ ಮತ್ತೆ ಅವನು ಶಾಪ ನೀಡಬಹುದೆಂಬ ಭಯದಿಂದ ಹಾಗೆಯೇ ಆಗಲಿ ಎಂದು ಹೇಳಿದೆನು. ಆಗ ಆ ದ್ವಿಜನು ಮತ್ತೆ ಹೀಗೆ ಹೇಳಿದನು.

ಧರ್ಮಸ್ಯ ಜನನೀ ಭದ್ರೇ ಭವಿತ್ರೀ ತ್ವಂ ಶುಭಾನನೇ ।
ವಶೇ ಸ್ಥಾಸ್ಯಂತಿ ತೇ ದೇವಾ ಯಾಂಸ್ತ್ವಮಾವಾಹಯಿಷ್ಯಸಿ ॥೬॥

ಹೇ ಶುಭಾನನೆಯೇ, ಮಹಾಮಹಿಮಳೇ, ನೀನು ಧರ್ಮದ ತಾಯಿಯಾಗಿರುವಿ. ಯಾವ ದೇವತೆಗಳನ್ನು ನೀನು ಆರಾಧಿಸುವೆಯೋ ಆ ದೇವತೆಗಳು ನಿನ್ನ ವಶದಲ್ಲಿ ಇರುವರು.

ಇತ್ಯುಕ್ತ್ವಾಽಂತರ್ಹಿತೋ ವಿಪ್ರಸ್ತತೋಽಹಂ ವಿಸ್ಮಿತಾಽಭವಮ್ ।
ನ ಚ ಸರ್ವಾಸ್ವವಸ್ಥಾಸು ಸ್ಮೃತಿರ್ಮೇ ವಿಪ್ರಣಶ್ಯತಿ ॥೭॥

ಹೀಗೆ ಹೇಳಿ ಆ ದುರ್ವಾಸನು ಅಂತರ್ಧಾನನಾದನು. ಇದರಿಂದ ನಾನು ವಿಸ್ಮಿತಳಾದೆನು. ಆದರೆ ಯಾವುದೇ ಅವಸ್ಥೆಯಲ್ಲಿಯೂ ಈ ವಿಷಯವು ನನಗೆ ಮರೆಯಲಾಗಲಿಲ್ಲ.

ಅಥ ಹರ್ಮ್ಯತಳಸ್ಥಾಽಹಂ ರವಿಮುದ್ಯಂತಮೀಕ್ಷತೀ ।
ಸಂಸ್ಮೃತ್ಯ ತದೃಷೇರ್ವಾಕ್ಯಂ ಸ್ಪೃಹಯಂತೀ ದಿವಾಕರಮ್ ॥೮॥

ಅದೊಂದು ದಿನ ಮಹಡಿಯಲ್ಲಿರುವ ನಾನು ಉದಯಿಸುತ್ತಿರುವ ರವಿಯನ್ನು ನೋಡುತ್ತಾ ಆ ಋಷಿಯ ಮಾತನ್ನು ಸ್ಮರಿಸಿಕೊಂಡು ಸೂರ್ಯನನ್ನು ಆವಾಹಿಸಲು ಬಯಸಿದೆನು.

ಸ್ಥಿತಾಽಹಂ ಬಾಲಭಾವೇನ ತತ್ರ ದೋಷಮಬುದ್ಧ್ಯತೀ ।
ಅಥ ದೇವಃ ಸಹಸ್ರಾಂಶುರ್ಮತ್ಸಮೀಪಗತೋಽಭವತ್ ॥೯॥

ಬಾಲ್ಯಾವಸ್ಥೆಯಲ್ಲಿರುವ ನಾನು ಇದರಿಂದ ಮುಂದೆ ಆಗುವ ದುಷ್ಪರಿಣಾಮಗಳನ್ನು ತಿಳಿಯಲಾರದೆ ಹೋದೆನು. ಆಗ ದೇವನಾದ ಸೂರ್ಯನು ನನ್ನ ಸಮೀಪಕ್ಕೆ ಬಂದನು.

ದ್ವಿಧಾ ಕೃತ್ವಾಽಽತ್ಮನೋ ದೇಹಂ ಭೂಮೌ ಚ ಗಗನೇಽಪಿ ಚ ।
ತತಾಪ ಲೋಕಾನೇಕೇನ ದ್ವಿತೀಯೇನಾಗಮತ್ಸ ಮಾಮ್ ॥೧೦॥

ಆ ಸೂರ್ಯನು ತನ್ನ ದೇಹವನ್ನು ಭೂಮಿ ಮತ್ತು ಆಕಾಶಗಳಲ್ಲಿ ಎರಡು ರೂಪದ್ದನ್ನಾಗಿಸಿ, ಒಂದು ರೂಪದಿಂದ ಭೂಮಿಗೆ ಬಿಸಿಯನ್ನು ನೀಡುತ್ತಾ, ಎರಡನೆಯ ರೂಪದಿಂದ ನನ್ನ ಬಳಿಗೆ ಬಂದನು.

ಸ ಮಾಮುವಾಚ ವೇಪಂತೀಂ ವರಂ ಮತ್ತೋ ವೃಣೀಷ್ವ ಹ ।
ಗಮ್ಯತಾಮಿತಿ ತಂ ಚಾಹಂ ಪ್ರಣಮ್ಯ ಶಿರಸಾऽವದಮ್ ॥೧೧॥

ಬೇಕಾದ ವರವನ್ನು ನನ್ನಿಂದ ಪಡೆ ಎಂದು ನಡುಗುತ್ತಿರುವ ನನಗೆ ಆತನು ಹೇಳಿದಾಗ, ನಾನು ಶಿರಬಾಗಿ ನಮಸ್ಕರಿಸಿ ಹಿಂದೆ ಹೋಗು ಎಂದು ಪ್ರಾರ್ಥಿಸಿದೆನು.

ಸ ಮಾಮುವಾಚ ತಿಗ್ಮಾಂಶುರ್ವ್ಯರ್ಥಾऽऽಹ್ವಾನಂ ನ ಮೇ ಕ್ಷಮಮ್ ।
ಧಕ್ಷ್ಯಾಮಿ ತ್ವಾಂ ಚ ವಿಪ್ರಂ ಚ ಯೇನ ದತ್ತೋ ವರಸ್ತವ ॥೧೨॥

ಆಗ ಸೂರ್ಯನು 'ವ್ಯರ್ಥವಾಗಿ ನನ್ನನ್ನು ಕರೆದುದು ಸಹಿಸತಕ್ಕದ್ದಲ್ಲ. ನಿನ್ನನ್ನು, ನಿನಗೆ ವರ ನೀಡಿದ ಆ ವಿಪ್ರನನ್ನು ಸುಟ್ಟುಬಿಡುವೆನು' ಎಂದು ಗದರಿಸಿದನು.

ತಮಹಂ ರಕ್ಷತೀ ವಿಪ್ರಂ ಶಾಪಾದನಪಕಾರಿಣಮ್ ।
ಪುತ್ರೋ ಮೇ ತ್ವತ್ಸಮೋ ದೇವ ಭವೇದಿತಿ ತತೋऽಬ್ರವಮ್ ॥೧೩॥

ಆಗ ನಾನು ಯಾವುದೇ ಅಪಕಾರ ಮಾಡದ ಆ ವಿಪ್ರನನ್ನು ರಕ್ಷಿಸಲೋಸುಗ ಹೇ ದೇವ, ನಿನಗೆ ಸದೃಶನಾದ ಪುತ್ರನನ್ನು ನನಗೆ ಅನುಗ್ರಹಿಸು ಎಂದು ಕೇಳಿಕೊಂಡೆನು.

ತತೋ ಮಾಂ ತೇಜಸಾऽऽವಿಶ್ಯ ಮೋಹಯಿತ್ವಾ ಚ ಭಾನುಮಾನ್ ।
ಉವಾಚ ಭವಿತಾ ಪುತ್ರಸ್ತವೇತ್ಯಭ್ಯಗಮದ್ ದಿವಮ್ ॥೧೪॥

ಆಗ ಸೂರ್ಯನು ನನ್ನನ್ನು ಮೋಹಗೊಳಿಸಿ ತನ್ನ ತೇಜಸ್ಸಿನಿಂದ ನನ್ನಲ್ಲಿ ಪ್ರವೇಶಿಸಿ ನಿನಗೆ ನನ್ನಂತಹ ಪುತ್ರನು ಹುಟ್ಟಲಿರುವನು ಎಂದು ಹೇಳಿ ಆಕಾಶಕ್ಕೆ ಹಿಂದಿರುಗಿದನು.

ತತೋऽಹಮಂತರ್ಭವನೇ ಪಿತುಶ್ಚಿತ್ತಾನುರಕ್ಷಿಣೀ ।
ಗೂಢೋತ್ಪನ್ನಂ ಸುತಂ ಬಾಲಂ ಜಲೇ ಕರ್ಣಮವಾಸೃಜಮ್ ॥೧೫॥

ಅನಂತರ ನಾನು ತಂದೆಯ ಗಮನಕ್ಕೆ ಬರದಂತೆ ಈ ವಿಷಯವನ್ನು ರಕ್ಷಿಸುತ್ತಾ ಅಂತಃಪುರದ ಒಳಗೇ ಇದ್ದುಬಿಟ್ಟೆನು. ಹೀಗೆ ರಹಸ್ಯವಾಗಿ ಜನಿಸಿದ ನನ್ನ ಮಗ ಕರ್ಣನನ್ನು ಮಗುವಿದ್ದಾಗಲೇ ನೀರಿನಲ್ಲಿ ಬಿಟ್ಟುಬಿಟ್ಟೆನು.

ನೂನಂ ತಸ್ಯೈವ ದೇವಸ್ಯ ಪ್ರಸಾದಾತ್ ಪುನರೇವ ತು ।
ಕನ್ಯಾಽಹಮಭವಂ ವಿಪ್ರ ಯಥಾ ಪ್ರಾಹ ಸ ಮಾಮೃಷಿಃ ॥೧೬॥

ಹೇ ವಿಪ್ರನೇ, ಆ ಋಷಿಯು ನನಗೆ ಹೇಳಿದಂತೆಯೇ ಅದೇ ಸೂರ್ಯದೇವನ ಪ್ರಸಾದದಿಂದಲೇ ನಾನು ಮತ್ತೆ ಕನ್ಯೆಯೇ ಆದೆನು.

ಸ ಮಯಾ ಮೂಢಯಾ ಪುತ್ರೋ ಜ್ಞಾಯಮಾನೋಽಪ್ಯಪೇಕ್ಷಿತಃ ।
ತನ್ಮಾಂ ದಹತಿ ವಿಪ್ರರ್ಷೇ ಯಥಾ ಸುವಿದಿತಂ ತವ ॥೧೭॥

ಹೀಗೆ ಮೂಢಳಾದ ನನ್ನಿಂದ ಆಗ ತಾನೇ ಹುಟ್ಟಿದ ಆ ಪುತ್ರನು ಉಪೇಕ್ಷೆಗೊಳಗಾದನು. ಹೇ ವಿಪ್ರೋತ್ತಮನೇ, ನಿನಗೆ ಚೆನ್ನಾಗಿ ತಿಳಿದಂತೆ ಈ ವೃತ್ತಾಂತವು ನನ್ನನ್ನು ಸುಡುತ್ತಿದೆ.

ಯದಿ ಪಾಪಮಪಾಪಂ ವಾ ವದೇತದ್ ವಿವೃತಂ ಮಯಾ ।
ತಂ ಮೇ ಭವಂತಂ ಭಗವನ್ ವ್ಯಪನೇತುಂ ತ್ವಮರ್ಹಸಿ ॥೧೮॥

ಹೇ ಭಗವನ್, ನಾನು ಈಗ ಏನನ್ನು ವಿವರಿಸಿರುವೆನೋ ಅದು ಪಾಪವೋ, ಪಾಪವಲ್ಲವೋ ನನಗೆ ನೀನೇ ಹೇಳಬೇಕು. ಇದರಿಂದ ಉಂಟಾಗಲಿರುವ ಪಾಪವನ್ನು ಹೋಗಲಾಡಿಸಲು ನೀನು ಸಮರ್ಥನಾಗಿರುವಿ.

ಯಚ್ಚಾಸ್ಯ ರಾಜ್ಞೋ ವಿದಿತಂ ಹೃದಿಸ್ಥಂ ಭವತೋಽನಘ ।
ತಂ ಚಾಯಂ ಲಭತಾಂ ಕಾಮಮದ್ಯೈವ ಮುನಿಸತ್ತಮ ॥೧೯॥

ಹೇ ಅನಘನೇ, ಮುನಿಶ್ರೇಷ್ಠನೇ, ಈ ರಾಜನ ಹೃದಯದಲ್ಲಿ ಏನಿದೆ ಎಂದು ನಿನಗೂ ತಿಳಿದೇ ಇದೆ. ಅಭಿಲಕ್ಷಿತವಾದ ಆ ವಿಷಯವನ್ನು ಇಂದೇ ಈ ರಾಜನು ಪಡೆಯಲಿ.

ವೈಶಂಪಾಯನಃ

ಇತ್ಯುಕ್ತಃ ಪ್ರತ್ಯುವಾಚೇದಂ ವ್ಯಾಸೋ ವೇದವಿದಾಂವರಃ ॥೨೦॥

ವೈಶಂಪಾಯನ– ಕುಂತಿಯು ಹೀಗೆ ಹೇಳಿದಾಗ, ವೇದವೇತ್ತರಲ್ಲಿ ಶ್ರೇಷ್ಠರಾದ ವ್ಯಾಸರು ಹೀಗೆ ಉತ್ತರಿಸಿದರು.

ವ್ಯಾಸಃ

ಸಾಧು ಸರ್ವಮಿದಂ ಭಾವ್ಯಮೇವಮೇತದ್ ಯಥಾऽऽತ್ಥ ಮಾಮ್ ॥

ವ್ಯಾಸರು– ನೀನು ನನಗೇನು ಹೇಳಿದೆಯೋ ಅದು ಹಾಗೆಯೇ ನಡೆಯಬೇಕಿತ್ತು. ಸರಿಯಾಗಿಯೇ ನಡೆದಿದೆ.

ಅಪರಾಧಶ್ಚ ತೇ ನಾಸ್ತಿ ಕನ್ಯಾಭಾವಂ ಗತಾ ಹ್ಯಸಿ ।
ದೇವಾಶ್ಚೈಶ್ವರ್ಯವಂತೋ ವೈ ಶರೀರಾಣ್ಯಾವಿಶಂತಿ ವೈ ॥೨೨॥

ಈ ವಿಷಯದಲ್ಲಿ ನಿನ್ನ ಯಾವ ಅಪರಾಧವೂ ಇಲ್ಲ. ನೀನು ಕನ್ಯಾಭಾವವನ್ನು ಹೊಂದಿರುವೆ. ದೇವತೆಗಳು ಐಶ್ವರ್ಯದ ಸಿದ್ಧಿಯುಳ್ಳವರಾಗಿದ್ದು ಇತರರ ಶರೀರವನ್ನು ಪ್ರವೇಶಿಸಬಲ್ಲರು.

ಸಂತಿ ದೇವನಿಕಾಯಾಶ್ಚ ಸಂಕಲ್ಪಾಜ್ಜನಯಂತಿ ವೈ ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಘರ್ಷೇಣೇತಿ ಪಂಚಧಾ ॥೨೩॥

ದೇವ ಸಮೂಹದಲ್ಲಿ ಐದು ಬಗೆ ಇದೆ. ಅವರು ಕೆಲವೊಮ್ಮೆ ಸಂಕಲ್ಪದಿಂದಲೇ, ಕೆಲವು ಬಾರಿ ಮಾತಿನಿಂದ, ದೃಷ್ಟಿಯಿಂದ, ಕೆಲವು ಬಾರಿ ಸ್ಪರ್ಶದಿಂದ ಹಾಗೂ ಸಮಾಗಮದಿಂದಲೂ ಪುತ್ರರನ್ನು ಉತ್ಪಾದಿಸಬಲ್ಲರು.

ಮನುಷ್ಯಧರ್ಮೋ ದೈವೇನ ಧರ್ಮೇಣ ಹಿ ನ ದುಷ್ಯತಿ ।
ಆರ್ಯೋ ದೈವೇನ ಧರ್ಮೇಣ ಯುಜ್ಯತೇ ನ ಕದಾಚನ ॥೨೪॥

ಮನುಷ್ಯರ ಧರ್ಮವು ದೇವತೆಗಳ ಧರ್ಮದಿಂದ ಯಾವತ್ತೂ ದೋಷಕ್ಕೊಳಗಾಗದು. ಹಾಗೆಯೇ ಧರ್ಮಶೀಲನಾದವನು ದೇವತೆಗಳ ಧರ್ಮವನ್ನು ಯಾವತ್ತೂ ಆಚರಿಸಲು ಬಯಸುವುದಿಲ್ಲ.

ಇತಿ ಕುಂತಿ ವಿಜಾನೀಹಿ ವ್ಯೇತು ತೇ ಮಾನಸೋ ಜ್ವರಃ ॥೨೫॥

ಹೇ ಕುಂತಿಯೇ, ಇದನ್ನು ನೀನು ಸರಿಯಾಗಿ ತಿಳಿದುಕೊ. ನಿನ್ನ ಮನಸ್ಸಿನ ಪರಿತಾಪವು ಕಳೆದುಹೋಗಲಿ.

ಸರ್ವಂ ಬಲವತಾಂ ಪಥ್ಯಂ ಸರ್ವಂ ಬಲವತಾಂ ಶುಚಿ ।
ಸರ್ವಂ ಬಲವತಾಂ ಧರ್ಮಃ ಸರ್ವಂ ಬಲವತಾಂ ಸ್ವಕಮ್ ॥೨೬॥

ತಪಸ್ಸಿನ ಬಲವುಳ್ಳವರಿಗೆ ಎಲ್ಲವೂ ಪಥ್ಯವಾಗುವುದು. ಹಾಗೆಯೇ ತಪಸ್ಸಿನ ಬಲವುಳ್ಳವರಿಗೆ ಎಲ್ಲವೂ ಶುದ್ಧವೇ. ತಪಸ್ಸಿನ ಬಲವುಳ್ಳವರಿಗೆ ಎಲ್ಲವೂ ಧರ್ಮವೇ. ತಪೋಬಲವುಳ್ಳವರಿಗೆ ಎಲ್ಲವೂ ತನ್ನದೆನಿಸಿಕೊಳ್ಳುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಕುಂತೀ-ವ್ಯಾಸವಾಕ್ಯಂ ನಾಮ ಷಟ್‌ತ್ರಿಂಶೋಽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ತ್ರಿವತ್ಸರಾದಸ್ಯ ನಿಜಸ್ಯ ಲೋಕ-
ಪ್ಯಾಽಪ್ತಿಂ ಸಭಾರ್ಯಸ್ಯ ಜಗಾದ ತತ್ರ ।
ಬ್ರಹ್ಮಾಂಕಜಸ್ತೇನ ಭೃಶಂ ಪ್ರತೀತೋ
ವ್ಯಾಸೋಪದಿಷ್ಟಂ ವ್ಯಚರತ್ ತಪೋಽಗ್ರ್ಯಮ್ ॥

ಬದರಿಕಾಶ್ರಮದಲ್ಲಿ ಸಪತ್ನೀಕನಾದ ಧೃತರಾಷ್ಟ್ರನಿಗೆ ನಾರದರು ಮೂರು ವರ್ಷದಲ್ಲಿ ಸ್ವಲೋಕಪ್ರಾಪ್ತಿ ಎಂದು ಹೇಳಿದರು. ಅದರಿಂದ ಧೃತರಾಷ್ಟ್ರ ಬಹಳ ವಿಶ್ವಾಸ ಹೊಂದಿ ವೇದವ್ಯಾಸರಿಂದ ಉಪದಿಷ್ಟವಾದ ಉತ್ತಮವಾದ ತಪಸ್ಸನ್ನಾಚರಿಸಿದನು.

ಸಕ್ಷತ್ತೃಗಾಂಧಾರಿಪೃಥೇ ಸಸಂಜಯೇ
ತಪೋಭಿರಾರಾಧಯತಿ ಪ್ರಭುಂ ಹರಿಮ್ ।
ವೈಚಿತ್ರವೀರ್ಯೇಽತ್ರ ಸದಾರಬಂಧು
ಭೃತ್ಯಾಸ್ತು ಪಾರ್ಥಾ ದೃಶಯೇ ಸಮಾಯಯುಃ ॥

ವಿದುರ-ಗಾಂಧಾರಿ-ಕುಂತೀ-ಸಂಜಯರಿಂದೊಡಗೂಡಿ ಧೃತರಾಷ್ಟ್ರನು ಪ್ರಭು ಶ್ರೀಹರಿಯನ್ನು ತಪಸ್ಸುಗಳಿಂದ ಆರಾಧಿಸುತ್ತಿರಲು, ಅವರನ್ನು ಕಾಣಲು ಪಾಂಡವರು ಪತ್ನಿಯರಿಂದ, ಬಂಧುಗಳಿಂದ, ಭೃತ್ಯರಿಂದ ಯುಕ್ತರಾಗಿ ಬರುತ್ತಿದ್ದರು.

ಕ್ಷತ್ತೈಕತಾಮತ್ರ ಯುಧಿಷ್ಠಿರೇಣ
ಪ್ರಾಪ್ತೋಽಥ ಭಾರ್ಯಾಸಹಿತಂ ಸಸಂಜಯಮ್ ।
ಉಪಾಸಮಾನೇಷು ವಿಚಿತ್ರವೀರ್ಯ
ಪುತ್ರಂ ಪೃಥಾಂ ಚೈವ ಪೃಥಾಸುತೇಷು ॥

ಪ್ರಾದುರ್ಬಭೂವಾಮಿತಶಕ್ತಿತೇಜೋ
ಜ್ಞಾನಾದ್ಭುತೈಶ್ವರ್ಯಸುಖಾದಿರೂಪಃ ।
ವ್ಯಾಸೋ ಹರಿಸ್ತತ್ರ ಸಮೀಕ್ಷ್ಯ ಸರ್ವೇ
ಸಂಪೂಜಯಾಮಾಸುರುದಗ್ರ್ಯಭಕ್ತ್ಯಾ ॥

ಬದರಿಕಾಶ್ರಮದಲ್ಲಿ ವಿದುರ ಧರ್ಮರಾಜನಲ್ಲಿ ಐಕ್ಯ ಹೊಂದಿದ ಬಳಿಕ ಗಾಂಧಾರೀ ಸಹಿತನಾದ, ಸಂಜಯ ಸಹಿತನಾದ, ಧೃತರಾಷ್ಟ್ರನನ್ನೂ ಕುಂತಿಯನ್ನೂ ಪಾಂಡವರು ಸೇವಿಸುತ್ತಿದ್ದಾಗ ಅಮಿತ ಶಕ್ತಿ, ತೇಜಸ್ಸು, ಜ್ಞಾನ, ಅದ್ಭುತ ಐಶ್ವರ್ಯ, ಸುಖ ಮುಂತಾದ ಗುಣಸ್ವರೂಪರಾದ ವೇದವ್ಯಾಸರು ಅಲ್ಲಿ ಪ್ರಾದುರ್ಭವಿಸಿದರು. ಅವರನ್ನು ಕಂಡು ಎಲ್ಲರೂ ಉತ್ತಮ ಭಕ್ತಿಯಿಂದ ಪೂಜಿಸಿದರು.

ತೈಃ ಪೂಜಿತಸ್ತತ್ರ ನಿಷಣ್ಣ ಆಹ
ಯದ್ಯದ್ ಯದಿಷ್ಟಂ ಪ್ರವದಂತು ತತ್ತತ್ ।
ದಾಸ್ಯಾಮಿ ತಸ್ಯಾದ್ಯ ತದಿತ್ಯಮುಷ್ಮಿನ್
ಭಕ್ತ್ಯುಚ್ಛ್ರಯಃ ಪಾಂಡುಸುತೈಃ ಸದಾರೈಃ ।
ವೃತೋಽತ್ರ ಕುಂತೀ ರವಿಸೂನುಜನ್ಮ
ಮೃತ್ಯ್ವುತ್ಥದೋಷಾಪಗಮಂ ಯಯಾಚೇ ॥

ಪಾಂಡವರಿಂದ ಮತ್ತು ಧೃತರಾಷ್ಟ್ರ ಮುಂತಾದವರಿಂದ ಪೂಜಿತರಾದ ವೇದವ್ಯಾಸರು ಕುಳಿತು ಹೇಳಿದರು. ನಿಮಗೆ ಏನೇನು ಇಷ್ಟವೋ ಅದೆಲ್ಲವನ್ನೂ ಹೇಳಿರಿ. ನಾನು ನಿಮ್ಮ ಆ ಅಭೀಷ್ಟಗಳನ್ನು ಈಗ ಪೂರೈಸುತ್ತೇನೆ ಎಂದು. ಆಗ ಪಾಂಡವರೂ ಅವರ ಪತ್ನಿಯರೂ ವೇದವ್ಯಾಸರಲ್ಲಿ ಭಕ್ತಿ ಹೆಚ್ಚಲೆಂದು ಕೇಳಿಕೊಂಡರು. ಕುಂತಿ ಕರ್ಣನ ಜನನ-ಮರಣಗಳಿಂದ ತನಗೆ ಬಂದ ಪಾಪದ ಪರಿಹಾರವನ್ನು ಕೇಳಿಕೊಂಡಳು.

ತೇಷಾಂ ಪ್ರದತ್ತೇಷ್ವಭಿವಾಂಛಿತೇಷು
ವೈಚಿತ್ರವೀರ್ಯಃ ಸಹ ಭಾರ್ಯಯೈವ ।

ಸಮ್ಮಂತ್ರ್ಯ ನಿಃಶೇಷರಣೇಹತಾನಾಂ
ಸಂದರ್ಶನಂ ಪ್ರಾರ್ಥಿತವಾಂಸ್ತಮೀಶಮ್ ॥

ಕುಂತಿಗೂ ಪಾಂಡವರಿಗೂ ಅವರ ಅಭೀಷ್ಟಗಳನ್ನು ವೇದವ್ಯಾಸರು ಕೊಟ್ಟಾಗ ಧೃತರಾಷ್ಟ್ರ ಗಾಂಧಾರಿಯೊಡನೆ ಆಲೋಚಿಸಿ, ಯುದ್ಧದಲ್ಲಿ ಸತ್ತವರೆಲ್ಲರನ್ನೂ ತಾವು ಕಾಣಬೇಕೆಂದು ಕೇಳಿಕೊಂಡನು.

ತತಸ್ತು ತೇ ಸತ್ಯವತೀಸುತಸ್ಯ
ಸರ್ವೇಶ್ವರಸ್ಯಾऽಜ್ಞಯಾ ಸರ್ವ ಏವ ।
ಸಮಾಗತಾಃ ಸ್ವರ್ಗಲೋಕಾತ್ ಕ್ಷಣೇನ
ದತ್ತಾ ಚ ದಿವ್ಯಾ ದೃಗಮುಷ್ಯ ರಾಜ್ಞಃ ॥
ಊಷುಶ್ಚ ರಾತ್ರಿಂ ಪರಮಾಜ್ಞಯೈವ
ಸರ್ವೇ ಸ್ವಭಾರ್ಯಾಸಹಿತಾ ಯಥಾ ಪುರಾ ॥

ಆಗ ಸರ್ವೇಶ್ವರರಾದ ವೇದವ್ಯಾಸರ ಆಜ್ಞೆಯಿಂದ ಅವರೆಲ್ಲರೂ ಕ್ಷಣದಲ್ಲಿ ವೀರಸ್ವರ್ಗಲೋಕದಿಂದ ಬಂದರು. ವೇದವ್ಯಾಸರು ಆಗ ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ನೀಡಿದ್ದರು. ಯುದ್ಧದಲ್ಲಿ ಮೃತರಾದವರೆಲ್ಲರೂ ವೇದವ್ಯಾಸರ ಇಚ್ಛೆಯಂತೆ ಗಂಗಾಪ್ರವಾಹದೊಳಗಿಂದ ಹಿಂದಿನಂತೆಯೇ ಮನುಷ್ಯದೇಹದಲ್ಲಿ ಬಂದು ಒಂದು ರಾತ್ರಿ ಇಡೀ ಪತ್ನೀ ಸಮೇತರಾಗಿ ವಾಸಮಾಡಿದರು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ವೇದವ್ಯಾಸರು ಗಾಂಧಾರಿಗೆ ಯುದ್ಧದಲ್ಲಿ ಹತರಾದ ದುರ್ಯೋಧನನೇ ಮೊದಲಾದ ಎಲ್ಲರನ್ನೂ ರಾತ್ರಿಯಲ್ಲಿ ತೋರಿಸುವೆನೆಂದು ಹೇಳುತ್ತಾ, ಧೃತರಾಷ್ಟ್ರನೇ ಮೊದಲಾದವರು ವಿಶೇಷವಾಗಿ ಗಂಧರ್ವಾಂಶದಿಂದ ಜನಿಸಿದವರು ಎಂದು ವಿವರಿಸುವುದು. ಧೃತರಾಷ್ಟ್ರಾದಿಗಳು ವೇದವ್ಯಾಸರ ಮಾತಿನಂತೆ ಗಂಗಾತೀರಕ್ಕೆ ತಲುಪಿ, ಬಂಧುಗಳನ್ನು ನೋಡುವ ಉತ್ಸಾಹದಿಂದ ಕಷ್ಟದಿಂದ ಹಗಲನ್ನು ಕಳೆಯುವುದು.

ವ್ಯಾಸಃ

ಭದ್ರೇ ದ್ರಕ್ಷ್ಯಸಿ ಗಾಂಧಾರಿ ಪುತ್ರಾನ್ ಭ್ರಾತೄನ್ ಸ್ವಕಾನ್ ಗಣಾನ್ ।
ವಧೂಶ್ಚ ಪತಿಭಿಃ ಸಾರ್ಧಂ ನಿಶಿ ಸುಪ್ತೋತ್ಥಿತಾ ಇವ ॥೧॥

ವ್ಯಾಸರು– ಭದ್ರೆಯೇ, ಗಾಂಧಾರಿಯೇ, ಇಂದು ರಾತ್ರಿ ನೀನು ನಿನ್ನ ಮಕ್ಕಳನ್ನೂ, ಸಹೋದರರನ್ನೂ, ನೀನು ತನ್ನವರೆಂದುಕೊಂಡ ಸಮೂಹಗಳನ್ನೂ ಜೊತೆಗೆ ಪತಿಯರೊಂದಿಗೆ ಕೂಡಿದ ನಿನ್ನ ಸೊಸೆಯರನ್ನೂ ನಿದ್ದೆಯಿಂದೆದ್ದು ಬಂದಂತೆ ನೋಡಲಿರುವಿ.

ಕರ್ಣಂ ದ್ರಕ್ಷ್ಯತಿ ಕುಂತೀ ಚ ಸೌಭದ್ರಂ ಚಾಪಿ ಯಾದವೀ ।
ದ್ರೌಪದೀ ಪಂಚಪುತ್ರಾಂಶ್ಚ ಪಿತೃನ್ ಭ್ರಾತೄಂಸ್ತಥೈವ ಚ ॥೨॥

ಅಂತೆಯೇ ಕುಂತಿಯು ಕರ್ಣನನ್ನು ನೋಡಲಿರುವಳು. ಯಾದವಿಯಾದ ಸುಭದ್ರೆಯು ಅಭಿಮನ್ಯುವನ್ನು ನೋಡುವಳು. ದ್ರೌಪದಿಯೂ ಕೂಡ ತನ್ನೈದು ಮಕ್ಕಳನ್ನು ಹಾಗೂ ತಂದೆ-ಅಣ್ಣಂದಿರನ್ನು ನೋಡಲಿರುವಳು.

ಪೂರ್ವಮೇವೈಷ ಹೃದಯೇ ವ್ಯವಸಾಯೋಽಭವನ್ಮಮ ।
ಯದಾಽಸ್ಮಿ ಚೋದಿತೋ ರಾಜ್ಞಾ ಭವತ್ಯಾ ಪೃಥಯೈವ ಚ ॥೩॥

ಯಾವಾಗ ರಾಜ, ನೀನು ಹಾಗೂ ಕುಂತಿಯಿಂದ ನಾನು ಈ ವಿಷಯದಲ್ಲಿ ಪ್ರೇರಿತನಾದೆನೋ ಅದಕ್ಕೂ ಮೊದಲೇ ನನಗೆ ಹೀಗೆ ಮಾಡಬೇಕೆಂಬ ಪ್ರಯತ್ನ ಮನಸ್ಸಿನಲ್ಲಿತ್ತು.

ನ ತೇ ಶೋಚ್ಯಾ ಮಹಾತ್ಮಾನಃ ಸರ್ವ ಏವ ನರರ್ಷಭಾಃ ।
ಕ್ಷತ್ರಧರ್ಮಪರಾಃ ಸಂತಸ್ತಥಾ ಹಿ ನಿಧನಂ ಗತಾಃ ॥೪॥

ಆ ಮಹಾತ್ಮರ ಬಗ್ಗೆ ದುಃಖಿಸುವುದು ಯೋಗ್ಯವಲ್ಲ. ಆ ಎಲ್ಲ ನರಶ್ರೇಷ್ಠರೂ ಕ್ಷಾತ್ರಧರ್ಮದ ಬಗ್ಗೆ ಉನ್ನತ ಭಾವನೆಯುಳ್ಳವರಾಗಿದ್ದು ಅದರಿಂದಲೇ ಮರಣ ಹೊಂದಿರುವರು.

ಭವಿತವ್ಯಮವಶ್ಯಂ ತತ್ಸುರಕಾರ್ಯಮನಿಂದಿತೇ ।
ಅವತೇರುಸ್ತತಃ ಸರ್ವೇ ದೇವಾ ಭಾಗೈರ್ಮಹೀತಳಮ್ ॥೫॥

ಹೇ ಅನಿಂದಿತಳೇ, ಅದು ಅವಶ್ಯವಾಗಿ ನಡೆಯಬೇಕಾದ ದೇವಕಾರ್ಯವಾಗಿತ್ತು. ಆದ್ದರಿಂದಲೇ ಎಲ್ಲ ದೇವತೆಗಳೂ ತಮ್ಮ ಅಂಶಗಳಿಂದ ಭೂಮಿಗೆ ಇಳಿದುಬಂದಿದ್ದರು.

ಗಂಧರ್ವಾಪ್ಸರಸಶ್ಚೈವ ಪಿಶಾಚಾ ಗುಹ್ಯರಾಕ್ಷಸಾಃ ।
ತಥಾ ಪುಣ್ಯಜನಾಶ್ಚೈವ ಸಿದ್ಧಾ ದೇವರ್ಷಯೋಽಪಿ ಚ ॥೬॥

ದೇವಾಶ್ಚ ದಾನವಾಶ್ಚೈವ ತಥಾ ದೇವರ್ಷಯೋಽಮಲಾಃ ।
ತ ಏತೇ ನಿಧನಂ ಪ್ರಾಪ್ತಾಃ ಕುರುಕ್ಷೇತ್ರೇ ರಣಾಜಿರೇ ॥೭॥

ಗಂಧರ್ವರು, ಅಪ್ಸರಸ್ತ್ರೀಯರು, ಪಿಶಾಚ ಎಂಬ ದೇವಗಣಗಳು, ಗುಹ್ಯಕರು, ರಾಕ್ಷಸರು ಹಾಗೆಯೇ ಯಾತುಧಾನರು, ಸಿದ್ಧರು, ದೇವರ್ಷಿಗಳು, ದೇವ-ದಾನವರು, ಶುದ್ಧರಾದ ದೇವರ್ಷಿಗಳು ಇವರೆಲ್ಲರೂ ಕುರುಕ್ಷೇತ್ರದ ಯುದ್ಧದಲ್ಲಿ ನಿಧನರಾಗಿರುವರು.

ಗಂಧರ್ವರಾಜೋ ಯೋ ಧೀಮಾನ್ ಧೃತರಾಷ್ಟ್ರ ಇತಿ ಶ್ರುತಃ ।
ಸ ಏವ ಮಾನುಷೇ ಲೋಕೇ ಧೃತರಾಷ್ಟ್ರಃ ಪತಿಸ್ತವ ॥೮॥

ಯಾವನು ಧೀಮಂತನಾಗಿದ್ದು ಧೃತರಾಷ್ಟ್ರನೆಂದು ಪ್ರಸಿದ್ಧನಾದ ಗಂಧರ್ವರಾಜನಾಗಿದ್ದನೋ ಅವನೇ ಮನುಷ್ಯಲೋಕದಲ್ಲಿ 'ಧೃತರಾಷ್ಟ್ರ' ಎಂಬ ಹೆಸರಿನಿಂದಲೇ ನಿನ್ನ ಪತಿಯಾಗಿರುವನು.

ಪಾಂಡುಂ ಮರುದ್ಗಣಾದ್ ವಿದ್ಧಿ ವಿಶಿಷ್ಟತಮಮಚ್ಯುತಮ್ ।
ಧರ್ಮಸ್ಯಾಂಶೋಽಭವತ್ ಕ್ಷತ್ತಾ ರಾಜಾ ಚೈವ ಯುಧಿಷ್ಠಿರಃ ॥೯॥

ಪಾಂಡುವನ್ನು ಅತ್ಯಂತ ವಿಶಿಷ್ಟವಾದ ಚ್ಯುತಿಯಿಲ್ಲದ ಮರುದ್ಗಣಕ್ಕೆ ಸೇರಿದವನೆಂದು ತಿಳಿ. ದಾಸೀಪುತ್ರನಾದ ವಿದುರನೂ ಹಾಗೂ ರಾಜನಾದ ಯುಧಿಷ್ಠಿರನು ಯಮಧರ್ಮನ ಅಂಶಭೂತರು.

ಕಲಿಂ ದುರ್ಯೋಧನಂ ವಿದ್ಧಿ ಶಕುನಿಂ ದ್ವಾಪರಂ ನೃಪಮ್ ।
ದುಃಶಾಸನಾದೀನ್ ವಿದ್ಧಿ ತ್ವಂ ರಾಕ್ಷಸಾನ್ ಶುಭದರ್ಶನೇ ॥೧೦॥

ಹೇ ಶುಭದರ್ಶನಳೇ, ದುರ್ಯೋಧನನನ್ನು ಕಲಿಯನ್ನಾಗಿ ತಿಳಿ. ರಾಜನಾದ ಶಕುನಿಯನ್ನು ದ್ವಾಪರನೆಂಬುದಾಗಿ ತಿಳಿ ಹಾಗೂ ದುಶ್ಶಾಸನನೇ ಮೊದಲಾದವರನ್ನು ರಾಕ್ಷಸರನ್ನಾಗಿ ತಿಳಿದುಕೊ.

ಮರುದ್ಗಣಾದ್ ಭೀಮಸೇನಂ ಬಲವಂತಮರಿಂದಮಮ್ ।
ವಿದ್ಧಿ ತ್ವಂ ತು ನರಮೃಷಿಮಿಮಂ ಪಾರ್ಥಂ ಧನಂಜಯಮ್ ॥೧೧॥

ಅತ್ಯಂತ ಬಲಿಷ್ಠನಾದ, ಅರಿಮರ್ದನನಾದ ಭೀಮಸೇನನನ್ನು ಮರುದ್ಗಣದಿಂದ ಬಂದಿರುವವನೆಂದು ತಿಳಿ. ಪೃಥೆಯ ಮಗನಾದ ಈ ಧನಂಜಯನನ್ನು ಜ್ಞಾನಿಯಾದ ನರನನ್ನಾಗಿ ತಿಳಿ.

ನಾರಾಯಣಂ ಹೃಷೀಕೇಶಮಶ್ವಿನೌ ಯಮಜೌ ತಥಾ ॥೧೨॥

ಹೃಷೀಕೇಶನೆಂಬ ಹೆಸರಿನ ಶ್ರೀಕೃಷ್ಣನನ್ನು ನಾರಾಯಣನನ್ನಾಗಿ ತಿಳಿ, ಹಾಗೆಯೇ ಅವಳಿ ಮಕ್ಕಳಾದ ನಕುಲ-ಸಹದೇವರನ್ನು ಅಶ್ವಿನೀದೇವತೆಗಳನ್ನಾಗಿ ತಿಳಿ.

ದ್ವಿಧಾ ಕೃತ್ವಾऽऽತ್ಮನೋ ದೇಹಮಾದಿತ್ಯಂ ತಪತಾಂವರಮ್ ।
ಲೋಕಾಂಶ್ಚ ತಾಪಯಾನಂ ವೈ ಕರ್ಣಂ ವಿದ್ಧಿ ಪೃಥಾಸುತಮ್ ॥೧೩॥

ಕುಂತಿಯ ಮಗನಾದ ಕರ್ಣನನ್ನು ತೇಜಸ್ವಿಯಾದ, ಎಲ್ಲ ಲೋಕಗಳಿಗೂ ಬಿಸಿಯನ್ನು ನೀಡುವ, ಎರಡು ರೂಪದಿಂದ ದೇಹವನ್ನು ಧರಿಸಿದ ಸೂರ್ಯನನ್ನಾಗಿ ತಿಳಿದುಕೊ.

ಯಃ ಸ ವೈರಾರ್ಥಮುದ್ಭೂತಃ ಸಂಘರ್ಷಜನನಸ್ತಥಾ ।
ತಂ ಕರ್ಣಂ ವಿದ್ಧಿ ಕಲ್ಯಾಣೆ ಭಾಸ್ಕರಂ ಶುಭದರ್ಶನೇ ॥೧೪॥

ಹೇ ಶುಭದರ್ಶನಳೇ, ಮಂಗಳಮಯಳೇ, ವೈರಸಾಧನೆಗಾಗಿಯೇ ಜನಿಸಿದ ಹಾಗೂ ಪರಸ್ಪರ ಜಗಳವನ್ನು ಉಂಟುಮಾಡುತ್ತಿದ್ದ ಯಾವ ಕರ್ಣನಿರುವನೋ ಅವನನ್ನು ಸೂರ್ಯನನ್ನಾಗಿ ತಿಳಿ.

ಯಶ್ಚ ಪಾಂಡವದಾಯಾದೋ ಹತಃ ಷಡ್ಭಿರ್ಮಹಾರಥೈಃ ।
ಸ ಸೋಮ ಇಹ ಸೌಭದ್ರೋ ಯೋಗಾದೇವಾಭವದ್ ದ್ವಿಧಾ ॥೧೫॥

ಪಾಂಡವರ ವಾರಸುದಾರನಾದ, ಸುಭದ್ರೆಯ ಮಗನಾದ ಯಾವ ಅಭಿಮನ್ಯುವು ಆರು ಮಂದಿ ಮಹಾರಥಿಗಳ ಪ್ರಯತ್ನದಿಂದ ಇಲ್ಲಿ ಹತನಾಗಿರುವನೋ ಅವನು ಸೋಮನಾಗಿದ್ದು, ಯೋಗಬಲದಿಂದಲೇ ಎರಡು ರೂಪವನ್ನು ತಾಳಿರುವನು.

ದ್ರೌಪದ್ಯಾ ಸಹ ಸಂಭೂತಂ ಧೃಷ್ಟದ್ಯುಮ್ನಂ ಚ ಪಾವಕಾತ್ ।
ಅಗ್ನೇರ್ಭಾಗಂ ಶುಭಂ ವಿದ್ಧಿ ರಾಕ್ಷಸಂ ತು ಶಿಖಂಡಿನಮ್ ॥೧೬॥

ದ್ರೌಪದಿಯ ಜೊತೆಗೆ ಅಗ್ನಿಯಿಂದ ಹುಟ್ಟಿದ ಧೃಷ್ಟದ್ಯುಮ್ನನನ್ನು ಮಂಗಳ ಮಯನಾದ ಅಗ್ನಿಯ ಇನ್ನೊಂದು ರೂಪವನ್ನಾಗಿ ತಿಳಿ. ಶಿಖಂಡಿಯನ್ನು ರಾಕ್ಷಸನೆಂದು ತಿಳಿ.

ದ್ರೋಣಂ ಬೃಹಸ್ಪತೇರ್ಭಾಗಂ ವಿದ್ಧಿ ದ್ರೌಣಿಂ ಚ ರುದ್ರಜಮ್ ।
ಗಾಂಗೇಯೋ ವಸುವೀರ್ಯೇಣ ದೇವೋ ಮಾನುಷತಾಂ ಗತಃ ॥೧೭॥

ಆಚಾರ್ಯ ದ್ರೋಣರನ್ನು ಬೃಹಸ್ಪತಿಯ ಅಂಶನನ್ನಾಗಿಯೂ, ದ್ರೋಣರ ಮಗನಾದ ಅಶ್ವತ್ಥಾಮನನ್ನು ರುದ್ರನಿಂದ ಜನಿಸಿದವನನ್ನಾಗಿಯೂ ತಿಳಿದುಕೊ. ಹಾಗೂ ಎಂಟು ಮಂದಿ ವಸುಗಳ ವೀರ್ಯವನ್ನು ಹೊಂದಿದ 'ದ್ಯು'ನಾಮಕ ವಸುವು ಗಂಗಾಪುತ್ರ ಭೀಷ್ಮನಾಗಿ ಮನುಷ್ಯಲೋಕಕ್ಕೆ ಬಂದಿರುವನು.

ಏವಮೇತೇ ಮಹಾಪ್ರಜ್ಞೇ ದೇವಾ ಮಾನುಷ್ಯಮೇತ್ಯ ಹಿ ।
ತತಃ ಪುನರ್ಗತಾಃ ಸ್ವರ್ಗಂ ಕೃತೇ ಕರ್ಮಣಿ ಶೋಭನೇ ॥೧೮॥

ಹೇ ಮಹಾಪ್ರಾಜ್ಞಳೇ, ಮಂಗಳಳೇ, ಹೀಗೆ ಈ ದೇವತೆಗಳು ಮನುಷ್ಯಜನ್ಮವನ್ನು ಹೊಂದಿ, ತಮ್ಮ ಕರ್ಮಗಳು ಮುಗಿದ ನಂತರ ಮತ್ತೆ ಸ್ವರ್ಗಕ್ಕೆ ತೆರಳಿದ್ದಾರೆ.

ಯಚ್ಚ ವೈ ಹೃದಿ ಸರ್ವೇಷಾಂ ದುಃಖಮೇತಚ್ಚಿರಂ ಸ್ಥಿತಮ್ ।
ತದದ್ಯ ವ್ಯಪನೇಷ್ಯಾಮಿ ಪರಲೋಕಕೃತಾದ್ ಭಯಾತ್ ॥೧೯॥

ಪರಲೋಕದ ಭಯದಿಂದ ಎಲ್ಲರ ಹೃದಯದಲ್ಲಿ ಬಹಳ ಕಾಲದಿಂದ ಏನು ದುಃಖವಿದೆಯೋ ಅದನ್ನು ಇಂದು ನಿವಾರಿಸುವೆನು.

ಸರ್ವೇ ಭವಂತೋ ಗಚ್ಛಂತು ನದೀಂ ಭಾಗೀರಥೀಂ ಪ್ರತಿ ।
ತತ್ರ ದ್ರಕ್ಷ್ಯಥ ತಾನ್ ಸರ್ವಾನ್ ಯೇ ಹತಾಸ್ತತ್ರ ಸಂಯುಗೇ ॥೨೦॥

ನೀವೆಲ್ಲರೂ ಭಾಗೀರಥೀ ನದಿಯ ತೀರಕ್ಕೆ ತೆರಳಿರಿ. ಅಲ್ಲಿ ಯುದ್ಧದಲ್ಲಿ ಹತರಾದ ಆ ಎಲ್ಲರನ್ನೂ ನೀವು ನೋಡಲಿರುವಿರಿ.

ವೈಶಂಪಾಯನಃ

ಇತಿ ವ್ಯಾಸಸ್ಯ ವಚನಂ ಶ್ರುತ್ವಾ ಸರ್ವೋ ಜನಸ್ತದಾ ।
ಮಹತಾ ಸಿಂಹನಾದೇನ ಗಂಗಾಮಭಿಮುಖೋ ಯಯೌ ॥೨೧॥

ವೈಶಂಪಾಯನ– ಹೀಗೆ ವ್ಯಾಸರ ವಚನವನ್ನು ಕೇಳಿದ ಅಲ್ಲಿರುವ ಎಲ್ಲ ಜನರ ಸಮೂಹವೂ ದೊಡ್ಡದಾಗಿ ಸಿಂಹನಾದವನ್ನು ಮಾಡುತ್ತಾ ಗಂಗಾಭಿಮುಖವಾಗಿ ಹೊರಟಿತು.

ಧೃತರಾಷ್ಟ್ರಶ್ಚ ಸಾಮಾತ್ಯಃ ಪ್ರಯಯೌ ಸಹ ಪಾಂಡವೈಃ ।
ಸಹಿತೋ ಮುನಿಶಾರ್ದೂಲೈರ್ಗಂಧರ್ವೈಶ್ಚ ಸಮಾಗತೈಃ ॥೨೨॥

ಧೃತರಾಷ್ಟ್ರನೂ ಕೂಡ ಮಂತ್ರಿಗಳು, ಪಾಂಡವರು, ಮುನಿಶ್ರೇಷ್ಠರು ಮತ್ತು ಬಂದಿರುವ ಗಂಧರ್ವರೊಂದಿಗೆ ತಾನೂ ಹೊರಟನು.

ತತೋ ಗಂಗಾಂ ಸಮಾಸಾದ್ಯ ಕ್ರಮೇಣ ಸ ಜನಾರ್ಣವಃ ।
ನಿವಾಸಮಕರೋತ್ ಸರ್ವೋ ಯಥಾಪ್ರೀತಿ ಯಥಾಸುಖಮ್ ॥೨೩॥

ಕ್ರಮವಾಗಿ ಆ ಜನಸಮೂಹವು ಗಂಗೆಯನ್ನು ತಲುಪಿ, ತಮಗೆ ಇಷ್ಟ ಬಂದಂತೆ ಸುಖವಾಗಿ ಗಂಗಾತೀರದಲ್ಲಿ ಬೀಡುಬಿಟ್ಟಿತು.

ರಾಜಾ ಚ ಪಾಂಡವೈಃ ಸಾರ್ಧಮಿಷ್ಟೇ ದೇಶೇ ಸಹಾನುಗಃ ।
ನಿವಾಸಮಕರೋದ್ಧೀಮಾನ್ ಸಸ್ತ್ರೀವೃದ್ಧಪುರಃಸರಃ ॥೨೪॥

ಧೀಮಂತನಾದ ರಾಜನಾದ ಧೃತರಾಷ್ಟ್ರನು ಸ್ತ್ರೀಯರನ್ನೂ ಮತ್ತು ವೃದ್ಧರನ್ನೂ ಮುಂದೆ ಮಾಡಿಕೊಂಡು, ಪಾಂಡವರೊಂದಿಗೆ ತನ್ನ ಪರಿಜನರನ್ನು ಕೂಡಿಕೊಂಡು, ತನಗಿಷ್ಟವಾದ ಪ್ರದೇಶದಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಂಡನು.

ಜಗಾಮ ತದಹಶ್ಚಾಪಿ ತೇಷಾಂ ವರ್ಷಶತಂ ತಥಾ ।
ನಿಶಾಂ ಪ್ರತೀಕ್ಷಮಾಣಾನಾಂ ದಿದೃಕ್ಷೂಣಾಂ ಮೃತಾನ್ ನೃಪಾನ್ ॥೨೫॥

ಮೃತರಾದ ರಾಜರನ್ನು ನೋಡಬೇಕೆಂಬ ಬಯಕೆಯಿಂದ ರಾತ್ರಿಯಾಗುವುದನ್ನೇ ಕಾಯುತ್ತಿರುವ ಆ ಎಲ್ಲರಿಗೂ ಆ ಹಗಲು ನೂರು ವರ್ಷಗಳಂತೆ ಭಾಸವಾಗಿ ಕಳೆಯಿತು.

ಅಥ ಪುಣ್ಯಂ ಗಿರಿವರಮಸ್ತಮಭ್ಯಗಮದ್ ರವಿಃ ।
ತತಃ ಕೃತಾಭಿಷೇಕಾಸ್ತೇ ನೈಶಂ ಕರ್ಮ ಸಮಾಚರನ್ ॥೨೬॥

ಅನಂತರ ಸೂರ್ಯನು ಪುಣ್ಯಮಯವಾದ ಅಸ್ತಗಿರಿಯನ್ನು ತಲುಪಿದನು. ಆಗ ಆ ಎಲ್ಲರೂ ಸ್ನಾನಾದಿಗಳನ್ನು ಮುಗಿಸಿ ಸಂಧ್ಯಾದಿ ರಾತ್ರಿಕರ್ಮಗಳನ್ನು ಆಚರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಸಪ್ತತ್ರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

. ವೇದವ್ಯಾಸರು ರಾತ್ರಿಯಲ್ಲಿ ಗಂಗೆಯಲ್ಲಿ ಮುಳುಗಿ, ಎಲ್ಲರನ್ನೂ ಕರೆದಾಗ, ಯುದ್ಧದಲ್ಲಿ ಹತರಾದ ಕುರು-ಪಾಂಡವ ಉಭಯಪಕ್ಷೀಯರೆಲ್ಲರೂ ತಮ್ಮ ತಮ್ಮ ಆಭರಣ-ಆಯುಧ-ವಾಹನಾದಿಗಳ ಜೊತೆಗೆ ನೀರಿನಿಂದ ಮೇಲೆ ಬಂದು ತೀರದಲ್ಲಿ ಒಟ್ಟು ಸೇರುವುದು. ಧೃತರಾಷ್ಟ್ರನು ವೇದವ್ಯಾಸರ ಅನುಗ್ರಹದಿಂದ ದಿವ್ಯವಾದ ದೃಷ್ಟಿಯನ್ನು ಪಡೆದು ದುರ್ಯೋಧನನೇ ಮೊದಲಾದ ಎಲ್ಲರನ್ನೂ ಅವಲೋಕಿಸುವುದು.

ವೈಶಂಪಾಯನಃ

ತತೋ ನಿಶಾಯಾಂ ಪ್ರಾಪ್ತಾಯಾಂ ಕೃತಸಾಯಾಹ್ನಿಕಕ್ರಿಯಾಃ ।
ವ್ಯಾಸಮಭ್ಯಗಮನ್ ಸರ್ವೇ ಯೇ ತತ್ರಾಸನ್‌ಸಮಾಗತಾಃ ॥೧॥

ವೈಶಂಪಾಯನ- ಸಾಯಂಕಾಲದ ಆಹ್ನಿಕ ಕ್ರಿಯೆಗಳನ್ನು ಮುಗಿಸಿದ ನಂತರ ಯಾರೆಲ್ಲ ಗಂಗಾತೀರಕ್ಕೆ ಬಂದಿದ್ದರೋ ಅವರೆಲ್ಲರೂ ರಾತ್ರಿಯಾಗುತ್ತಿರಲು ವ್ಯಾಸರ ಸಮೀಪಕ್ಕೆ ಬಂದರು.

ಧೃತರಾಷ್ಟ್ರಸ್ತು ಧರ್ಮಾತ್ಮಾ ಪಾಂಡವೈಃ ಸಹಿತಸ್ತದಾ ।
ಶುಚಿರೇಕಮನಾಃ ಸಾರ್ಧಮೃಷಿಭಿಸ್ತೈರುಪಾವಿಶತ್ ॥೨॥

ಆಗಲೇ ಧರ್ಮಾತ್ಮನಾದ ಧೃತರಾಷ್ಟ್ರನೂ ಪಾಂಡವರಿಂದ ಸಹಿತನಾಗಿ ಶುಚಿರ್ಭೂತನಾಗಿ, ಏಕಾಗ್ರಚಿತ್ತನಾಗಿ ಆ ಋಷಿಗಳೊಂದಿಗೆ ತಾನೂ ಕುಳಿತನು.

ವೈಶಂಪಾಯನ– ಹೀಗೆ ವ್ಯಾಸರ ವಚನವನ್ನು ಕೇಳಿದ ಅಲ್ಲಿರುವ ಎಲ್ಲ ಜನರ ಸಮೂಹವೂ ದೊಡ್ಡದಾಗಿ ಸಿಂಹನಾದವನ್ನು ಮಾಡುತ್ತಾ ಗಂಗಾಭಿಮುಖವಾಗಿ ಹೊರಟಿತು.

ಧೃತರಾಷ್ಟ್ರಶ್ಚ ಸಾಮಾತ್ಯಃ ಪ್ರಯಯೌ ಸಹ ಪಾಂಡವೈಃ ।
ಸಹಿತೋ ಮುನಿಶಾರ್ದೂಲೈರ್ಗಂಧರ್ವೈಶ್ಚ ಸಮಾಗತೈಃ ॥೨೨॥

ಧೃತರಾಷ್ಟ್ರನೂ ಕೂಡ ಮಂತ್ರಿಗಳು, ಪಾಂಡವರು, ಮುನಿಶ್ರೇಷ್ಠರು ಮತ್ತು ಬಂದಿರುವ ಗಂಧರ್ವರೊಂದಿಗೆ ತಾನೂ ಹೊರಟನು.

ತತೋ ಗಂಗಾಂ ಸಮಾಸಾದ್ಯ ಕ್ರಮೇಣ ಸ ಜನಾರ್ಣವಃ ।
ನಿವಾಸಮಕರೋತ್ ಸರ್ವೋ ಯಥಾಪ್ರೀತಿ ಯಥಾಸುಖಮ್ ॥೨೩॥

ಕ್ರಮವಾಗಿ ಆ ಜನಸಮೂಹವು ಗಂಗೆಯನ್ನು ತಲುಪಿ, ತಮಗೆ ಇಷ್ಟ ಬಂದಂತೆ ಸುಖವಾಗಿ ಗಂಗಾತೀರದಲ್ಲಿ ಬೀಡುಬಿಟ್ಟಿತು.

ರಾಜಾ ಚ ಪಾಂಡವೈಃ ಸಾರ್ಧಮಿಷ್ಟೇ ದೇಶೇ ಸಹಾನುಗಃ ।
ನಿವಾಸಮಕರೋದ್ಧೀಮಾನ್ ಸಸ್ತ್ರೀವೃದ್ಧಪುರಃಸರಃ ॥೨೪॥

ಧೀಮಂತನಾದ ರಾಜನಾದ ಧೃತರಾಷ್ಟ್ರನು ಸ್ತ್ರೀಯರನ್ನೂ ಮತ್ತು ವೃದ್ಧರನ್ನೂ ಮುಂದೆ ಮಾಡಿಕೊಂಡು, ಪಾಂಡವರೊಂದಿಗೆ ತನ್ನ ಪರಿಜನರನ್ನು ಕೂಡಿಕೊಂಡು, ತನಗಿಷ್ಟವಾದ ಪ್ರದೇಶದಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಂಡನು.

ಜಗಾಮ ತದಹಶ್ಚಾಪಿ ತೇಷಾಂ ವರ್ಷಶತಂ ತಥಾ ।
ನಿಶಾಂ ಪ್ರತೀಕ್ಷಮಾಣಾನಾಂ ದಿದೃಕ್ಷೂಣಾಂ ಮೃತಾನ್ ನೃಪಾನ್ ॥೨೫॥

ಮೃತರಾದ ರಾಜರನ್ನು ನೋಡಬೇಕೆಂಬ ಬಯಕೆಯಿಂದ ರಾತ್ರಿಯಾಗುವುದನ್ನೇ ಕಾಯುತ್ತಿರುವ ಆ ಎಲ್ಲರಿಗೂ ಆ ಹಗಲು ನೂರು ವರ್ಷಗಳಂತೆ ಭಾಸವಾಗಿ ಕಳೆಯಿತು.

ಅಥ ಪುಣ್ಯಂ ಗಿರಿವರಮಸ್ತಮಭ್ಯಗಮದ್ ರವಿಃ ।
ತತಃ ಕೃತಾಭಿಷೇಕಾಸ್ತೇ ನೈಶಂ ಕರ್ಮ ಸಮಾಚರನ್ ॥೨೬॥

ಅನಂತರ ಸೂರ್ಯನು ಪುಣ್ಯಮಯವಾದ ಅಸ್ತಗಿರಿಯನ್ನು ತಲುಪಿದನು. ಆಗ ಆ ಎಲ್ಲರೂ ಸ್ನಾನಾದಿಗಳನ್ನು ಮುಗಿಸಿ ಸಂಧ್ಯಾದಿ ರಾತ್ರಿಕರ್ಮಗಳನ್ನು ಆಚರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

.ವೇದವ್ಯಾಸರು ರಾತ್ರಿಯಲ್ಲಿ ಗಂಗೆಯಲ್ಲಿ ಮುಳುಗಿ, ಎಲ್ಲರನ್ನೂ ಕರೆದಾಗ, ಯುದ್ಧದಲ್ಲಿ ಹತರಾದ ಕುರು-ಪಾಂಡವ ಉಭಯಪಕ್ಷೀಯರೆಲ್ಲರೂ ತಮ್ಮ ತಮ್ಮ ಆಭರಣ-ಆಯುಧ-ವಾಹನಾದಿಗಳ ಜೊತೆಗೆ ನೀರಿನಿಂದ ಮೇಲೆ ಬಂದು ತೀರದಲ್ಲಿ ಒಟ್ಟು ಸೇರುವುದು. ಧೃತರಾಷ್ಟ್ರನು ವೇದವ್ಯಾಸರ ಅನುಗ್ರಹದಿಂದ ದಿವ್ಯವಾದ ದೃಷ್ಟಿಯನ್ನು ಪಡೆದು ದುರ್ಯೋಧನನೇ ಮೊದಲಾದ ಎಲ್ಲರನ್ನೂ ಅವಲೋಕಿಸುವುದು.

ವೈಶಂಪಾಯನಃ

ತತೋ ನಿಶಾಯಾಂ ಪ್ರಾಪ್ತಾಯಾಂ ಕೃತಸಾಯಾಹ್ನಿಕಕ್ರಿಯಾಃ ।
ವ್ಯಾಸಮಭ್ಯಗಮನ್ ಸರ್ವೇ ಯೇ ತತ್ರಾಸನ್‌ಸಮಾಗತಾಃ ॥೧॥

ವೈಶಂಪಾಯನ– ಸಾಯಂಕಾಲದ ಆಹ್ನಿಕ ಕ್ರಿಯೆಗಳನ್ನು ಮುಗಿಸಿದ ನಂತರ ಯಾರೆಲ್ಲ ಗಂಗಾತೀರಕ್ಕೆ ಬಂದಿದ್ದರೋ ಅವರೆಲ್ಲರೂ ರಾತ್ರಿಯಾಗುತ್ತಿರಲು ವ್ಯಾಸರ ಸಮೀಪಕ್ಕೆ ಬಂದರು.

ಧೃತರಾಷ್ಟ್ರಸ್ತು ಧರ್ಮಾತ್ಮಾ ಪಾಂಡವೈಃ ಸಹಿತಸ್ತದಾ ।
ಶುಚಿರೇಕಮನಾಃ ಸಾರ್ಧಮೃಷಿಭಿಸ್ತೈರುಪಾವಿಶತ್ ॥೨॥

ಆಗಲೇ ಧರ್ಮಾತ್ಮನಾದ ಧೃತರಾಷ್ಟ್ರನೂ ಪಾಂಡವರಿಂದ ಸಹಿತನಾಗಿ ಶುಚಿರ್ಭೂತನಾಗಿ, ಏಕಾಗ್ರಚಿತ್ತನಾಗಿ ಆ ಋಷಿಗಳೊಂದಿಗೆ ತಾನೂ ಕುಳಿತನು.

ಗಾಂಧಾರ್ಯಾ ಸಹ ನಾರ್ಯಸ್ತು ಸಹಿತಾಃ ಸಮುಪಾವಿಶನ್ ।
ಪೌರಜಾನಪದಶ್ಚಾಪಿ ಜನಃ ಸರ್ವೋ ಯಥಾ ವಯಃ ॥೩॥

ಅಲ್ಲಿ ಸೇರಿದ ನಾರಿಯರೆಲ್ಲರೂ ಗಾಂಧಾರಿಯ ಜೊತೆಗೆ ಕುಳಿತರು. ನಂತರ ಎಲ್ಲ ಪಟ್ಟಣಿಗ ಹಾಗೂ ಗ್ರಾಮೀಣ ಜನರು ತಮ್ಮ ತಮ್ಮ ವಯಸ್ಸಿಗೆ ಅನುಗುಣವಾಗಿ ಕುಳಿತುಕೊಂಡರು.

ತತೋ ವ್ಯಾಸೋ ಮಹಾತೇಜಾಃ ಪುಣ್ಯಂ ಭಾಗೀರಥೀಜಲಮ್ ।
ಅವತೀರ್ಯಾಜುಹಾವಾಥ ಸರ್ವಾನ್ ಲೋಕಾನ್ ಮಹಾಮುನಿಃ ॥೪॥

ಅನಂತರ ಮಹಾತೇಜಸ್ವಿಯಾದ ವೇದವ್ಯಾಸ ಮಹಾಮುನಿಗಳು ಮಂಗಳ ಮಯವಾದ ಗಂಗೆಯ ನೀರಿನಲ್ಲಿ ಇಳಿದು ಎಲ್ಲ ಜನರನ್ನೂ ಕರೆದರು.

ಪಾಂಡವಾನಾಂ ಚ ಯೇ ಯೋಧಾಃ ಕೌರವಾಣಾಂ ಚ ಸರ್ವಶಃ ।
ರಾಜಾನಶ್ಚ ಮಹಾಭಾಗಾ ನಾನಾದೇಶನಿವಾಸಿನಃ ॥೫॥

ಪ್ರತೀಕ್ಷ್ಯ ತಸ್ಥುಸ್ತೇ ಸರ್ವೇ ತೇಷಾಮಾಗಮನಂ ಪ್ರತಿ ॥೬॥

ಪಾಂಡವರ ಯಾರೆಲ್ಲ ಸೈನಿಕರಿದ್ದರೋ ಹಾಗೂ ಕೌರವರ ಸೈನಿಕರು ಹಾಗೂ ನಾನಾ ದೇಶಗಳಲ್ಲಿ ವಾಸವಾಗಿದ್ದ, ಬೇರೆ ಬೇರೆ ಕಡೆಯಿಂದ ಬಂದ ಅಲ್ಲಿರುವ ಎಲ್ಲ ರಾಜರು ಹಿಂದೆ ಯುದ್ಧದಲ್ಲಿ ಮಡಿದವರ ಆಗಮನಕ್ಕಾಗಿ ನಿರೀಕ್ಷಿಸುತ್ತಾ ನಿಂತರು.

ತತಃ ಸುತುಮುಲಃ ಶಬ್ದೋ ಜಲಾಂತೇ ಜನಮೇಜಯ ।
ಪ್ರಾದುರಾಸೀದ್ ಯಥಾಯೋಗಂ ಕುರುಪಾಂಡವಸೇನಯೋಃ ॥೭॥

ಹೇ ಜನಮೇಜಯನೇ, ಅನಂತರ ನೀರಿನೊಳಗೆ ಹಿಂದೆ ಯುದ್ಧಾರಂಭ ಕಾಲದಲ್ಲಿದ್ದಂತೆ ಕೌರವ ಹಾಗೂ ಪಾಂಡವ ಸೇನೆಗಳ ಗದ್ದಲದ ಶಬ್ದವು ಕೇಳಿಬಂದಿತು.

ತತಸ್ತೇ ಪಾರ್ಥಿವಾಃ ಸರ್ವೇ ಭೀಷ್ಮದ್ರೋಣಪುರೋಗಮಾಃ ।
ಸಸೈನ್ಯಾಃ ಸಲಿಲಾತ್ ತಸ್ಮಾತ್ ಸಮುತ್ತಸ್ಥುಃ ಸಹಸ್ರಶಃ ॥೮॥

ಅನಂತರ ಭೀಷ್ಮ-ದ್ರೋಣರೇ ಮೊದಲಾದ ಎಲ್ಲ ರಾಜರೂ ಸೈನ್ಯ ಸಮೇತರಾಗಿ ಆ ಗಂಗೆಯ ನೀರಿನಿಂದ ಸಾವಿರಾರು ಸಂಖ್ಯೆಯಲ್ಲಿ ಎದ್ದುಬಂದರು.

ವಿರಾಟದ್ರುಪದೌ ಚೈವ ಸಹಪುತ್ರೌ ಸಸೈನಿಕೌ ।
ದ್ರೌಪದೇಯಾಶ್ಚ ಸೌಭದ್ರೋ ರಾಕ್ಷಸಶ್ಚ ಘಟೋತ್ಕಚಃ ॥೯॥

ಕರ್ಣದುರ್ಯೋಧನೌ ಚೈವ ಶಕುನಿಶ್ಚ ಮಹಾರಥಃ ।
ದುಃಶಾಸನಾದಯಶ್ಚೈವ ಧಾರ್ತರಾಷ್ಟ್ರಾ ಮಹಾಬಲಾಃ ॥೧೦॥

ಜಾರಾಸಂಧಿರ್ಭಗದತ್ತೋ ಜಲಸಂಧಶ್ಚ ವೀರ್ಯವಾನ್ ।
ಭೂರಿಶ್ರವಾಃ ಶಲಃ ಶಲ್ಯೋ ವೃಷಸೇನಶ್ಚ ಸಾನುಜಃ ॥೧೧॥

ಲಕ್ಷ್ಮ(ಕ್ಷ)ಣೋ ರಾಜಪುತ್ರಶ್ಚ ಧೃಷ್ಟದ್ಯುಮ್ನಃ ಸಹಾತ್ಮಜಃ ।
ಶಿಖಂಡಿಪುತ್ರಾಃ ಸರ್ವೇ ಚ ಧೃಷ್ಟಕೇತುಶ್ಚ ಸಾನುಜಃ ॥೧೨॥

ಅಚಲೋ ವೃಷಕಶ್ಚೈವ ರಾಕ್ಷಸಶ್ಚಾಪ್ಯಲಾಯುಧಃ ।
ಬಾಹ್ಲಿಕಃ ಸೋಮದತ್ತಶ್ಚ ಚೇಕಿತಾನಶ್ಚ ಪಾರ್ಥಿವಃ ॥೧೩॥

ಏತೇ ಚಾನ್ಯೇ ಚ ಬಹವೋ ಬಹುತ್ವಾದ್ ಯೇ ನ ಕೀರ್ತಿತಾಃ ।
ಸರ್ವೇ ಭಾಸುರದೇಹಾಸ್ತೇ ಸಮುತ್ತಸ್ಥುರ್ಜಲಾತ್ ತತಃ ॥೧೪॥

ಪುತ್ರರು ಹಾಗೂ ಸೈನಿಕರಿಂದ ಕೂಡಿದ ವಿರಾಟ ಮತ್ತು ದ್ರುಪದರಾಜರು, ದ್ರುಪದರಾಜನ ಮಕ್ಕಳು, ಅಭಿಮನ್ಯುವು, ರಾಕ್ಷಸನಾದ ಘಟೋತ್ಕಚನು, ಕರ್ಣ-ದುರ್ಯೋಧನರು, ಹಾಗೆಯೇ ಮಹಾರಥನಾದ ಶಕುನಿಯು, ಅಲ್ಲದೇ ದುಶ್ಶಾಸನನೇ ಮೊದಲಾದ ಮಹಾಬಲಿಷ್ಠರಾದ ಧೃತರಾಷ್ಟ್ರನ ಮಕ್ಕಳು, ಜರಾಸಂಧನ ಮಗನಾದ ಸಹದೇವನು, ಭಗದತ್ತನು, ಹಾಗೆಯೇ ಪರಾಕ್ರಮಿಯಾದ ಮಗಧ ದೇಶದ ಜಲಸಂಧನು, ಭೂರಿಶ್ರವಸ್ಸು, ಶಲ, ಶಲ್ಯ, ತಮ್ಮಂದಿರೊಂದಿಗೆ ಸಹಿತನಾದ ವೃಷಸೇನ, ಲಕ್ಷಣ, ರಾಜಪುತ್ರನಾದ ಮಕ್ಕಳೊಂದಿಗೆ ಸಹಿತನಾದ ಧೃಷ್ಟದ್ಯುಮ್ನ, ಶಿಖಂಡಿಯ ಎಲ್ಲ ಪುತ್ರರು, ಅನುಜ ಸಹಿತನಾದ ಧೃಷ್ಟಕೇತು, ಅಚಲ, ವೃಷಕ, ಅಲಾಯುಧನೆಂಬ ರಾಕ್ಷಸ, ಬಾಹ್ಲಿಕ, ಸೋಮದತ್ತ, ರಾಜನಾದ ಚೇಕಿತಾನ ಇವರೆಲ್ಲರೂ ಸೇರಿದಂತೆ ಬಹುಮಂದಿ ಬೇರೆ ರಾಜರು ವಿಸ್ತಾರಭಯದಿಂದ ಹೇಳದೆ ಇರುವ ಉಳಿದ ಎಲ್ಲರೂ ಹೊಳೆಯುತ್ತಿರುವ ದೇಹವುಳ್ಳವರಾಗಿ ನೀರಿನ ಮಧ್ಯದಿಂದ ಎದ್ದುಬಂದರು.

ಯಸ್ಯ ವೀರಸ್ಯ ಯೋ ವೇಷೋ ಯೋ ಧ್ವಜೋ ಯಚ್ಚ ವಾಹನಮ್ ।
ಯದ್ಧರ್ಮ ಯತ್ಪ್ರಹರಣಂ ತೇನ ತೇನ ಸ ದೃಶ್ಯತೇ ॥೧೫॥

ಯುದ್ಧಕಾಲದಲ್ಲಿ ಯಾವ ವೀರನಿಗೆ ಯಾವ ರೀತಿಯ ವೇಷ-ಧ್ವಜ-ವಾಹನಗಳಿದ್ದವೋ, ಯಾವ ರೀತಿಯ ರಥ-ಆಯುಧಗಳಿದ್ದವೋ ಆಯಾಯ ರೂಪಗಳಿಂದಲೇ, ಆಯಾಯ ವಸ್ತುಗಳ ಸಹಿತವಾಗಿ ಆ ವ್ಯಕ್ತಿಯು ಕಾಣಿಸಿದನು.

ದಿವ್ಯಾಂಬರಧರಾಃ ಸರ್ವೇ ಸರ್ವೇ ಭ್ರಾಜಿಷ್ಣುಕುಂಡಲಾಃ ।
ನಿರ್ವೈರಾ ನಿರಹಂಕಾರಾ ವಿಗತಕ್ರೋಧಮತ್ಸರಾಃ ॥೧೬॥

ಗಂಧರ್ವೈರುಪಗೀಯಂತಃ ಸ್ತೂಯಮಾನಾಶ್ಚ ವಂದಿಭಿಃ ।
ದಿವ್ಯಮಾಲ್ಯಸ್ರಜೋಪೇತಾಸ್ತಥಾ ದಿವ್ಯಾಪ್ಸರೋವೃತಾಃ ॥೧೭॥

ಅಲ್ಲಿ ಎದ್ದುಬಂದ ಎಲ್ಲರೂ ಕೂಡ ದಿವ್ಯವಾದ ವಸ್ತ್ರಗಳನ್ನು ಧರಿಸಿ, ಹೊಳೆಯುತ್ತಿರುವ ಕುಂಡಲಗಳಿಂದ ಕೂಡಿಕೊಂಡು, ಪರಸ್ಪರ ವೈರವಿಲ್ಲದೆ, ಅಹಂಕಾರವಿಲ್ಲದೆ, ಸಿಟ್ಟುಹಾಗೂ ಮಾತ್ಸರ್ಯದಿಂದ ರಹಿತರಾಗಿ, ಗಂಧರ್ವರಿಂದ ಗಾನ ಮಾಡಿಸಿಕೊಳ್ಳುತ್ತಾ, ಹೊಗಳುಭಟರಿಂದ ಹೊಗಳಿಸಿಕೊಳ್ಳುತ್ತಾ, ದಿವ್ಯವಾದ ಮಾಲೆ ಮತ್ತು ಅಲಂಕಾರಗಳಿಂದ ಕೂಡಿದವರಾಗಿ ದೇವಲೋಕದ ಅಪ್ಸರೆಯರಿಂದ ಸುತ್ತುವರಿಯಲ್ಪಟ್ಟಿದ್ದರು.

ಧೃತರಾಷ್ಟ್ರಸ್ಯ ಚ ತದಾ ದಿವ್ಯಂ ಚಕ್ಷುರ್ನರಾಧಿಪ ।
ಮುನಿಃ ಸತ್ಯವತೀಪುತ್ರಃ ಪ್ರೀತಃ ಪ್ರಾದಾತ್ ತಪೋಬಲಾತ್ ॥೧೮॥

ಹೇ ನರಾಧಿಪನೇ, ಧೃತರಾಷ್ಟ್ರನ ಬಗ್ಗೆ ಪ್ರೀತಿಯುಳ್ಳ ಸತ್ಯವತೀಪುತ್ರರಾದ ವೇದವ್ಯಾಸಮುನಿಗಳು ತಮ್ಮ ತಪೋಬಲದಿಂದ ಧೃತರಾಷ್ಟ್ರನಿಗೆ ದಿವ್ಯವಾದ ಚಕ್ಷುಸ್ಸನ್ನು ನೀಡಿದರು.

ದಿವ್ಯಜ್ಞಾನಬಲೋಪೇತಾ ಗಾಂಧಾರೀ ಚ ಯಶಸ್ವಿನೀ ।
ದದರ್ಶ ಪುತ್ರಾಂಸ್ತಾನ್ ಸರ್ವಾನ್ ಯೇ ಚಾನ್ಯೇऽಪಿ ಮೃಧೇ ಹತಾಃ ॥

ಯಶಸ್ವಿನಿಯಾದ ಗಾಂಧಾರಿಯೂ ಕೂಡ ದಿವ್ಯವಾದ ಜ್ಞಾನಬಲದಿಂದ ಕೂಡಿಕೊಂಡು ಯುದ್ಧದಲ್ಲಿ ಮಡಿದ ತನ್ನ ಎಲ್ಲಾ ಪುತ್ರರನ್ನೂ ಮತ್ತು ಉಳಿದ ಎಲ್ಲರನ್ನೂ ನೋಡಿದಳು.

ತದದ್ಭುತಮಚಿಂತ್ಯಂ ಚ ಸುಮಹದ್ ರೋಮಹರ್ಷಣಮ್ ।
ವಿಸ್ಮಿತಃ ಸ ಜನಃ ಸರ್ವೋ ದದರ್ಶಾನಿಮಿಷೇಕ್ಷಣಃ ॥೨೦॥

ಅಲ್ಲಿರುವ ಎಲ್ಲಾ ಜನರು ಆಲೋಚಿಸಲೇ ಅಶಕ್ಯವಾದ ಮಹತ್ತಾದ ಆ ಅದ್ಭುತವನ್ನು ವಿಸ್ಮಯದಿಂದ ರೋಮಾಂಚನಗೊಂಡವರಾಗಿ ಕಣ್ಣು ಮಿಟುಕಿಸದೆ ಕಂಡರು.

ತದುತ್ಸವಮಹೋದಗ್ರಂ ಹೃಷ್ಟನಾರೀನರಾಕುಲಮ್ ।
ಆಶ್ಚರ್ಯಭೂತಂ ದದೃಶೇ ಚಿತ್ರಂ ಪಟಗತಂ ಯಥಾ ॥೨೧॥

ಅಲ್ಲಿ ಸೇರಿದ ಎಲ್ಲ ನರ-ನಾರಿಯರ ಸಮೂಹವನ್ನು ಸಂತೋಷಗೊಳಿಸುವ ಆಶ್ಚರ್ಯಭೂತವಾದ ಆ ಮಹೋನ್ನತವಾದ ಉತ್ಸವವು ವಸ್ತ್ರದಲ್ಲಿ ಬರೆದ ಚಿತ್ರದಂತೆ ಕಂಡಿತು.

ಧೃತರಾಷ್ಟ್ರಸ್ತು ತಾನ್ ಸರ್ವಾನ್ ಪಶ್ಯನ್ ದಿವ್ಯೇನ ಚಕ್ಷುಷಾ ।
ಮುಮುದೇ ಭರತಶ್ರೇಷ್ಠ ಪ್ರಸಾದಾತ್ ತಸ್ಯ ವೈ ಮುನೇಃ ॥೨೨॥

ಹೇ ಭರತಶ್ರೇಷ್ಠನೇ, ಧೃತರಾಷ್ಟ್ರನಾದರೂ ಅಲ್ಲಿ ಮೇಲೆದ್ದು ಬಂದ ಎಲ್ಲರನ್ನೂ ದಿವ್ಯವಾದ ಚಕ್ಷುಸ್ಸಿನಿಂದ ನೋಡುತ್ತಾ, ವೇದವ್ಯಾಸರ ಆ ಅನುಗ್ರಹದಿಂದ ಆನಂದತುಂದಿಲನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಧೃತರಾಷ್ಟ್ರಾದಿಭಿರ್ಹತಬಂಧುದರ್ಶನಂ ನಾಮ
ಅಷ್ಟತ್ರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಧೃತರಾಷ್ಟ್ರ-ಯುಧಿಷ್ಠಿರಾದಿಗಳು ವೇದವ್ಯಾಸರ ಪ್ರಸಾದದಿಂದ ಮತ್ತೆ ಬದುಕಿಬಂದ, ಯುದ್ಧದಲ್ಲಿ ಹತರಾದ ತಮ್ಮ ಬಂಧುಗಳ ಜೊತೆಗೆ ಮಾತುಕತೆಗಳನ್ನಾಡುತ್ತಾ ಇಡೀ ರಾತ್ರಿ ವಿಹರಿಸುವುದು.

ವೈಶಂಪಾಯನಃ

ತತಸ್ತೇ ಪುರುಷಶ್ರೇಷ್ಠಾಃ ಸಮಾಜಗ್ಮುಃ ಪರಸ್ಪರಮ್ ।
ವಿಗತಕ್ರೋಧಮಾತ್ಸರ್ಯಾಃ ಸರ್ವೇ ವಿಗತಕಲ್ಮಷಾಃ ॥೧॥

ವೈಶಂಪಾಯನ– ಅನಂತರ ಆ ಎಲ್ಲ ಪುರುಷಶ್ರೇಷ್ಠರು ಪರಸ್ಪರವಾಗಿ ಕೋಪ ಹಾಗೂ ಮಾತ್ಸರ್ಯಗಳನ್ನು ಬದಿಗಿಟ್ಟು, ಯಾವುದೇ ರೀತಿಯ ಕೆಟ್ಟ ಭಾವನೆಗಳಿಲ್ಲದೆ ಒಂದುಗೂಡಿದರು.

ವಿಧಿಂ ಪರಮಮಾಸ್ಥಾಯ ಬ್ರಹ್ಮರ್ಷಿವಿಹಿತಂ ಶುಭಮ್ ।
ಸಂಹೃಷ್ಟಮನಸಃ ಸರ್ವೇ ದೇವಲೋಕ ಇವಾಮರಾಃ ॥೨॥

ಬ್ರಹ್ಮರ್ಷಿಗಳಾದ ವೇದವ್ಯಾಸರಿಂದ ಸೂಚಿತವಾದ, ಮಂಗಳಮಯವಾದ ಉತ್ತಮ ವಿಧಿಯನ್ನು ಒಪ್ಪಿಕೊಂಡವರಾಗಿ, ಎಲ್ಲರೂ ದೇವಲೋಕದಲ್ಲಿರುವ ದೇವತೆಗಳಂತೆ ಪರಸ್ಪರ ಅರಳಿದ ಮನಸ್ಸುಳ್ಳವರಾದರು.

ಪುತ್ರಃ ಪಿತ್ರಾ ಚ ಮಾತ್ರಾ ಚ ಭಾರ್ಯಾಶ್ಚ ಪತಿಭಿಃ ಸಹ ।
ಭ್ರಾತ್ರಾ ಭ್ರಾತಾ ಸಖಾ ಚೈವ ಸಖ್ಯಾ ರಾಜನ್ ಸಮಾಗತಾಃ ॥೩॥

ಹೇ ರಾಜನೇ, ಮಕ್ಕಳು ತಂದೆ-ತಾಯಿಯರೊಂದಿಗೆ, ಪತ್ನಿಯರು ತಮ್ಮ ತಮ್ಮ ಪತಿಗಳೊಂದಿಗೆ, ಸಹೋದರನು ತನ್ನ ಸಹೋದರನೊಂದಿಗೆ, ಮಿತ್ರನು ತನ್ನ ಮಿತ್ರನೊಂದಿಗೆ ಒಗ್ಗೂಡಿದರು.

ಪಾಂಡವಾಸ್ತು ಮಹೇಷ್ವಾಸಂ ಕರ್ಣಂ ಸೌಭದ್ರಮೇವ ಚ ।
ಸಂಪ್ರಹರ್ಷಾತ್ ಸಮಾಜಗ್ಮುರ್ದ್ರೌಪದೇಯಾಂಶ್ಚ ಸರ್ವಶಃ ॥೪॥

ಪಾಂಡವರಾದರೂ ಮಹಾಪರಾಕ್ರಮಿಯಾದ ಕರ್ಣನನ್ನೂ ಹಾಗೆಯೇ ಅಭಿಮನ್ಯುವನ್ನೂ ಹಾಗೂ ದ್ರೌಪದಿಯ ಇತರ ಎಲ್ಲಾ ಮಕ್ಕಳನ್ನೂ ಸಂತೋಷದಿಂದ ಸೇರಿಕೊಂಡರು.

ತತಸ್ತೇ ಪ್ರೀಯಮಾಣಾ ವೈ ಕರ್ಣೇನ ಸಹ ಪಾಂಡವಾಃ ।
ಸಮೇತ್ಯ ಪೃಥಿವೀಪಾಲ ಸೌಹೃದೇ ಚ ಸ್ಥಿತಾऽಭವನ್ ॥೫॥

ಹೇ ಪೃಥಿವೀಪಾಲನೇ, ಆ ಪಾಂಡವರು ಕರ್ಣನೊಂದಿಗೆ ಸಂತೋಷವುಳ್ಳವರಾಗಿ ಸೇರಿಕೊಂಡು ಮಿತ್ರಭಾವದಿಂದ ನಡೆದುಕೊಂಡರು.

ಪರಸ್ಪರಂ ಸಮಾಗಮ್ಯ ಯೋಧಾಸ್ತೇ ಭರತರ್ಷಭ ।
ಮುನೇಃ ಪ್ರಸಾದಾತ್ ತೇ ಹ್ಯೇವಂ ಕ್ಷತ್ರಿಯಾ ನಷ್ಟಮನ್ಯವಃ ॥೬॥

ಹೇ ಭರತರ್ಷಭನೇ, ಮುನಿಗಳಾದ ವೇದವ್ಯಾಸರ ಪ್ರಸಾದದಿಂದ ಆ ಎಲ್ಲ ಕ್ಷತ್ರಿಯ ಯೋಧರು ಕೋಪವಿಲ್ಲದವರಾಗಿ ಪರಸ್ಪರ ಒಗ್ಗೂಡಿದರು.

ಅಸೌಹೃದಂ ಪರಿತ್ಯಜ್ಯ ಸೌಹೃದೇ ಪರ್ಯವಸ್ಥಿತಾಃ ।
ಏವಂ ಸಮಾಗತಾಃ ಸರ್ವೇ ಗುರುಭಿರ್ಬಾಂಧವೈಃ ಸಹ ॥೭॥

ಹೀಗೆ ಒಗ್ಗೂಡಿದ ಎಲ್ಲರೂ ಗುರುಗಳು ಹಾಗೂ ಬಂಧುಜನರೊಂದಿಗೆ ಹಿಂದಿದ್ದ ಎಲ್ಲ ವೈರವನ್ನೂ ಬಿಟ್ಟು ಮಿತ್ರಭಾವವುಳ್ಳವರಾದರು.

ಪುತ್ರೈಶ್ಚ ಪುರುಷವ್ಯಾಘ್ರಾಃ ಕುರವೋऽನ್ಯೇ ಚ ಪಾರ್ಥಿವಾಃ ।
ತಾಂ ರಾತ್ರಿಮಖಿಲಾಮೇವಂ ವಿಹೃತ್ಯ ಪ್ರೀತಮಾನಸಾಃ ॥೮॥

ಪುರುಷವ್ಯಾಘ್ರರಾದ ಕುರುವಂಶಜರು ಮತ್ತು ಬೇರೆಲ್ಲ ರಾಜರು ತಮ್ಮ ತಮ್ಮ ಪುತ್ರರೊಂದಿಗೆ ಸಂತೋಷಗೊಂಡ ಮನಸ್ಸುಳ್ಳವರಾಗಿ ಇಡೀ ರಾತ್ರಿ ವಿಹರಿಸಿದರು.

ಮೇನಿರೇ ಪರಿತೋಷೇಣ ನೃಪಾಃ ಸ್ವರ್ಗಸದೋ ಯಥಾ ।
ನಾತ್ರ ಶೋಕೋ ಭಯಂ ತ್ರಾಸೋ ನಾರತಿರ್ನಾಯಶೋऽಭವತ್ ॥೯॥

ಹೀಗೆ ನಡೆಸಿದ ವಿಹಾರದಿಂದ ಉಂಟಾದ ಸಂತೋಷದಿಂದ ಆ ರಾಜರೆಲ್ಲರೂ ತಾವು ಸ್ವರ್ಗದಲ್ಲಿ ಉಳ್ಳವರೆಂದು ಭಾವಿಸಿದರು. ಈ ಸಂದರ್ಭದಲ್ಲಿ ಶೋಕವಾಗಲಿ, ಭಯವಾಗಲಿ, ಆಯಾಸವಾಗಲಿ, ಅನಾಸಕ್ತಿಯಾಗಲಿ, ಅಪಕೀರ್ತಿಯಾಗಲಿ ಇರಲಿಲ್ಲ.

ಪರಸ್ಪರಂ ಸಮಾಗಮ್ಯ ಯೋಧಾನಾಂ ಭರತರ್ಷಭ ।
ಸಮಾಗತಾಸ್ತಾಃ ಪಿತೃಭಿರ್ಭ್ರಾತೃಭಿಃ ಪತಿಭಿಃ ಸುತೈಃ ॥೧೦॥

ಮುದಂ ಪರಮಿಕಾಂ ಪ್ರಾಪ್ಯ ನಾರ್ಯೋ ದುಃಖಮಥಾತ್ಯಜನ್ ॥೧೧॥

ಹೇ ಭರತರ್ಷಭನೇ, ಅಲ್ಲಿ ಪರಸ್ಪರ ಸೇರಿಕೊಂಡಿದ್ದ ಯೋಧರ ನಾರಿಯರೆಲ್ಲರೂ ತಮ್ಮ ತಂದೆಯರೊಂದಿಗೆ, ಸಹೋದರರೊಂದಿಗೆ, ಪತಿಗಳೊಂದಿಗೆ, ಮಕ್ಕಳೊಂದಿಗೆ ಸೇರಿಕೊಂಡು ಅತ್ಯಧಿಕವಾದ ಸಂತೋಷವನ್ನು ಹೊಂದಿ ದುಃಖವನ್ನು ತೊರೆದರು.

ದೇವಲೋಕಂ ಗತಾ ಯೇ ಚ ಯೇ ಚ ಬ್ರಹ್ಮಸದೋ ಗತಾಃ ।
ಯೇ ಚಾಪಿ ವಾರುಣಂ ಲೋಕಂ ಯೇ ಚ ಗೋಲೋಕಮಾಶ್ರಿತಾಃ ॥

ತಥಾ ವೈವಸ್ವತಂ ಲೋಕಂ ಯೇ ಚ ಯಕ್ಷಾನುಪಾಗತಾಃ ।
ರಾಕ್ಷಸಾಂಶ್ಚ ಪಿಶಾಚಾಂಶ್ಚ ಕುರೂಂಶ್ಚಾಪಿ ತಥೋತ್ತರಾನ್ ॥೧೩॥

ವಿಚಿತ್ರಾಶ್ಚ ಗತೀರನ್ಯೇ ಯೇ ಪ್ರಾಪ್ತಾಃ ಕರ್ಮಭಿರ್ನರಾಃ ।
ಸರ್ವೇ ತೇ ತದ್ವಯೋರೂಪವೇಷಾಸ್ತತ್ರ ಸಮಭ್ಯಯುಃ ॥೧೪॥

ಯಾರೆಲ್ಲ ದೇವಲೋಕವನ್ನು ಹೊಂದಿದ್ದರೋ, ಯಾರು ಬ್ರಹ್ಮಸದಸ್ಸಿಗೆ ಹೋಗಿದ್ದರೋ, ವಾರುಣಲೋಕಕ್ಕೆ ಹೋದವರೂ, ಗೋಲೋಕವನ್ನು ಆಶ್ರಯಿಸಿದವರೂ, ಹಾಗೆಯೇ ವೈವಸ್ವತಲೋಕಕ್ಕೆ ಹೋದವರೂ, ಯಕ್ಷಲೋಕದಲ್ಲಿ ಇರುವವರೂ, ರಾಕ್ಷಸರೂ, ಪಿಶಾಚಲೋಕಕ್ಕೆ ಹೋದವರೂ, ಉತ್ತರ ಕುರುವರ್ಷದಲ್ಲಿ ಇರುವವರೂ ಹೀಗೆ ತಮ್ಮ ತಮ್ಮ ಕರ್ಮಗಳಿಂದ ಯಾರೆಲ್ಲ ವಿಚಿತ್ರವಾದ ಗತಿಗಳನ್ನು ಹೊಂದಿದ್ದರೋ ಅವರೆಲ್ಲರೂ ಅದೇ ವಯಸ್ಸು, ರೂಪ ಮತ್ತು ವೇಷವುಳ್ಳವರಾಗಿ ಅಲ್ಲಿ ಸೇರಿಕೊಂಡರು.

ಏಕಾಂ ರಾತ್ರಿಂ ವಿಹೃತ್ಯೈವಂ ತೇ ವೀರಾಸ್ತಾಶ್ಚ ಯೋಷಿತಃ ।
ಆಮಂತ್ರ್ಯಾನ್ಯೋನ್ಯಮಾಶ್ಲಿಷ್ಯ ತತೋ ಜಗ್ಮುರ್ಯಥಾಗತಮ್ ॥೧೫॥

ಆ ವೀರರು ಮತ್ತು ಆ ಸ್ತ್ರೀಜನರೆಲ್ಲರೂ ಈ ರೀತಿಯಾಗಿ ಒಂದು ರಾತ್ರಿ ಇಡೀ ವಿಹಾರ ನಡೆಸಿ, ಪರಸ್ಪರ ಸಂಭಾಷಿಸಿ, ಅನ್ಯೋನ್ಯವಾಗಿ ಆಲಿಂಗಿಸಿಕೊಂಡು ನಂತರ ತಾವು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

ತತೋ ವಿಸರ್ಜಯಾಮಾಸ ಲೋಕಾಂಸ್ತಾನ್ ಮುನಿಪುಂಗವಃ ।
ಕ್ಷಣೇನಾಂತರ್ಹಿತಾಶ್ಚೈವ ಪ್ರೇಕ್ಷತಾಮೇವ ತೇऽಭವನ್ ॥೧೬॥

ಅನಂತರ ಮುನಿಪುಂಗವರಾದ ವೇದವ್ಯಾಸರು ಆ ಜನರನ್ನು ಹಿಂದಿರುಗುವಂತೆ ಮಾಡಿದರು. ಬಂದಿರುವ ಅವರೆಲ್ಲರೂ ನೋಡ ನೋಡುತ್ತಿದ್ದಂತೆಯೇ ಕ್ಷಣದಲ್ಲಿ ಅಂತರ್ಧಾನರಾದರು.

ಅವಗಾಹ್ಯ ಮಹಾತ್ಮಾನಃ ಪುಣ್ಯಾಂ ಭಾಗೀರಥೀಂ ನದೀಮ್ ।
ಸರಥಾಃ ಸಧ್ವಜಾಶ್ಚೈವ ಸ್ವಾನಿ ವೇಶ್ಮಾನಿ ಭೇಜಿರೇ ॥೧೭॥

ಮಹಾತ್ಮರಾದ ಅವರು ಮಂಗಳಮಯವಾದ ಭಾಗೀರಥೀ ನದಿಯಲ್ಲಿ ಮುಳುಗಿ ರಥ ಮತ್ತು ಧ್ವಜಗಳೊಂದಿಗೆ ತಮ್ಮ ತಮ್ಮ ಸ್ಥಾನಗಳನ್ನು ಸೇರಿಕೊಂಡರು.

ದೇವಲೋಕಂ ಯಯುಃ ಕೇಚಿತ್ ಕೇಚಿದ್ ಬ್ರಹ್ಮಸದಸ್ತಥಾ ।
ಕೇಚಿಚ್ಚ ವಾರುಣಂ ಲೋಕಂ ಕೇಚಿತ್ ಕೌಬೇರಮಾಪ್ನುವನ್ ॥೧೮॥

ತತೋ ವೈವಸ್ವತಂ ಲೋಕಂ ಕೇಚಿಚ್ಚೈವಾಪ್ನುವನ್ನೃಪಾಃ ।
ರಾಕ್ಷಸಾನಾಂ ಪಿಶಾಚಾನಾಂ ಕೇಚಿಚ್ಚಾಪ್ಯುತ್ತರಾನ್ ಕುರೂನ್ ॥೧೯॥

ಕೆಲವರು ದೇವಲೋಕವನ್ನು ಸೇರಿಕೊಂಡರು. ಮತ್ತೆ ಕೆಲವರು ಬ್ರಹ್ಮಸದಸ್ಸನ್ನೂ, ಮತ್ತೆ ಕೆಲವರು ವಾರುಣ ಲೋಕವನ್ನೂ, ಮತ್ತೆ ಕೆಲವರು ಕುಬೇರನ ಲೋಕವನ್ನೂ, ಮತ್ತೆ ಕೆಲವರು ವೈವಸ್ವತ ಲೋಕವನ್ನೂ, ಮತ್ತೆ ಕೆಲವರು ರಾಕ್ಷಸ-ಪಿಶಾಚರ ಲೋಕಗಳನ್ನೂ, ಇನ್ನು ಕೆಲವರು ಉತ್ತರ ಕುರುವರ್ಷವನ್ನೂ ಸೇರಿದರು.

ವಿಚಿತ್ರಗತಯಃ ಸರ್ವೇ ಯಾನವಾಪ್ಯಾಮರೈಃ ಸಹ ।
ಆಜಗ್ಮುಸ್ತೇ ಮಹಾತ್ಮಾನಃ ಸವಾಹಾಃ ಸಪದಾನುಗಾಃ ॥೨೦॥

ಗತೇಷು ತೇಷು ಸರ್ವೇಷು ಸಲಿಲಸ್ಥೋ ಮಹಾಮುನಿಃ ।
ಧರ್ಮಶೀಲೋ ಮಹಾತೇಜಾಃ ಕುರೂಣಾಂ ಹಿತಕೃತ್ತದಾ ॥೨೧॥

ತತಃ ಪ್ರೋವಾಚ ತಾಃ ಸರ್ವಾಃ ಕ್ಷತ್ರಿಯಾ ನಿಹತೇಶ್ವರಾಃ ॥೨೨॥

ವಿಚಿತ್ರಗತಿಗಳುಳ್ಳ ಎಲ್ಲರೂ ದೇವತೆಗಳೊಂದಿಗೆ ಯಾವ ಲೋಕಗಳನ್ನು ಹೊಂದಿ ಇಲ್ಲಿಗೆ ವಾಹನ ಮತ್ತು ಪರಿವಾರದೊಂದಿಗೆ ಆಗಮಿಸಿದ್ದರೋ ಆ ಎಲ್ಲ ಮಹಾತ್ಮರೂ ಹೋದ ನಂತರ ನೀರಿನಲ್ಲೇ ಇದ್ದ ಧರ್ಮಶೀಲರಾದ, ಮಹಾತೇಜಸ್ವಿಯಾದ,

ಕುರುರಾಷ್ಟ್ರದವರಿಗೆ ಹಿತವನ್ನುಂಟು ಮಾಡುವ ಮಹಾಮುನಿಯಾದ ವೇದವ್ಯಾಸರು ಅಲ್ಲಿ ಸೇರಿದ್ದ ಪತಿಗಳನ್ನು ಕಳೆದುಕೊಂಡ ಎಲ್ಲ ಕ್ಷತ್ರಿಯ ಸ್ತ್ರೀಯರನ್ನು ಕುರಿತು ಹೀಗೆ ಹೇಳಿದರು.

ಯಾಯಾಃ ಪತಿಕೃತಾನ್ ಲೋಕಾನಿಚ್ಛಂತಿ ಪರಮಸ್ತ್ರಿಯಃ ।
ತಾ ಜಾಹ್ನವೀಜಲಂ ಕ್ಷಿಪ್ರಮವಗಾಹಂತ್ವತಂದ್ರಿತಾಃ ॥೨೩॥

ಯಾವ ಯಾವ ಸ್ತ್ರೀಯರು ಪತಿಗಳು ಸೇರಿಕೊಂಡ ಲೋಕಗಳನ್ನು ಇಚ್ಛಿಸುವಿರೋ ಆ ಎಲ್ಲ ಉತ್ತಮ ಸ್ತ್ರೀಯರು ಬೇಗನೆ ಬಂದು ಆಲಸ್ಯ ಮಾಡದೆ ಗಂಗಾನದಿಯಲ್ಲಿ ಮುಳುಗಿರಿ.

ತತಸ್ತಸ್ಯ ವಚಃ ಶ್ರುತ್ವಾ ಶ್ರದ್ದಧಾನಾ ವರಾಂಗನಾಃ ।
ಶ್ವಶುರಂ ಸಮನುಜ್ಞಾಪ್ಯ ವಿವಿಶುರ್ಜಾಹ್ನವೀಜಲಮ್ ॥೨೪॥

ಆ ವೇದವ್ಯಾಸರ ಮಾತುಗಳನ್ನು ಕೇಳಿದ ನಂತರ ಅವರ ಮಾತಿನಲ್ಲಿ ಶ್ರದ್ಧೆಯನ್ನಿಟ್ಟು ಎಲ್ಲ ಉತ್ತಮ ಸ್ತ್ರೀಯರೂ ತಮ್ಮ ಮಾವಂದಿರ ಅಪ್ಪಣೆಯನ್ನು ಪಡೆದು ಗಂಗಾನದಿಯ ನೀರಿನಲ್ಲಿ ಪ್ರವೇಶಿಸಿದರು.

ವಿಮುಕ್ತಾ ಮಾನುಷೈರ್ದೇಹೈಸ್ತತಸ್ತಾ ಭರ್ತೃಭಿಃ ಸಹ ।
ಸಮಾಜಗ್ಮುಸ್ತದಾ ಸಾಧ್ವ್ಯಃ ಸರ್ವಾ ಏವ ವಿಶಾಂಪತೇ ॥೨೫॥

ಹೇ ನರಪತಿಯೇ, ಅನಂತರ ಆ ಎಲ್ಲ ಸಾಧ್ವಿ ಸ್ತ್ರೀಯರೂ ಮಾನವ ದೇಹಗಳನ್ನು ಬಿಟ್ಟು ತಮ್ಮ ತಮ್ಮ ಗಂಡಂದಿರೊಂದಿಗೆ ಸೇರಿಕೊಂಡರು.

ಏವಂ ಕ್ರಮೇಣ ಸರ್ವಾಸ್ತಾಃ ಶೀಲವತ್ಯಃ ಪತಿವ್ರತಾಃ ।
ಪ್ರವಿಶ್ಯ ತೋಯಂ ನಿರ್ಮುಕ್ತಾ ಜಗ್ಮುರ್ಭರ್ತೃಸಲೋಕತಾಮ್ ॥೨೬॥

ಈ ಕ್ರಮದಿಂದ ಆ ಎಲ್ಲ ಶೀಲವತಿಯರಾದ ಪತಿವ್ರತೆಯರು ನೀರಿನಲ್ಲಿ ಮುಳುಗಿ ಲೌಕಿಕ ಬಂಧನಗಳಿಂದ ನಿರ್ಮುಕ್ತರಾಗಿ ಭರ್ತೃಲೋಕವನ್ನು ಹೊಂದಿದರು.

ದಿವ್ಯರೂಪಸಮಾಯುಕ್ತಾ ದಿವ್ಯಾಭರಣಭೂಷಿತಾಃ ।
ದಿವ್ಯಮಾಲ್ಯಾಂಬರಧರಾ ಯಥಾऽऽಸಾಂ ಪತಯಸ್ತಥಾ ॥೨೭॥

ಅವರ ಗಂಡಂದಿರು ಹೇಗೆ ಇದ್ದರೋ ಹಾಗೆಯೇ ಆ ಸ್ತ್ರೀಯರೂ ದಿವ್ಯರೂಪದಿಂದ ಕೂಡಿಕೊಂಡು, ದಿವ್ಯವಾದ ಆಭರಣಗಳಿಂದ ಅಲಂಕೃತರಾಗಿ, ದಿವ್ಯವಾದ ಮಾಲೆ ಹಾಗೂ ವಸ್ತ್ರಗಳನ್ನು ಧರಿಸಿದವರಾದರು.

ತಾಃ ಶೀಲಗುಣಸಂಪನ್ನಾಃ ವಿಮಾನಸ್ಥಾ ಗತಕ್ಲಮಾಃ ।
ಸರ್ವಾಃ ಸರ್ವಗುಣೋಪೇತಾಃ ಸ್ವಸ್ಥಾನಂ ಪ್ರತಿಪೇದಿರೇ ॥೨೮॥

ಶೀಲ-ಗುಣಗಳಿಂದ ಸಂಪನ್ನರಾದ ಆ ಸ್ತ್ರೀಯರು ವಿಮಾನದಲ್ಲಿ ಕುಳಿತು ಕೊಂಡವರಾಗಿ, ಯಾವುದೇ ರೀತಿಯ ಸಂಕಟವಿಲ್ಲದೆ ಎಲ್ಲ ಶುಭಗುಣಗಳಿಂದ ಕೂಡಿದವರಾಗಿ ತಮಗೆ ಸಿಗಬೇಕಾದ ಸ್ಥಾನವನ್ನು ಪಡೆದರು.

ಯಸ್ಯ ಯಸ್ಯ ತು ಯಃ ಕಾಮಸ್ತಸ್ಮಿನ್ ಕಾಲೇ ಬಭೂವ ಹ ।
ತಂ ತಂ ವಿಸೃಷ್ಟವಾನ್ ವ್ಯಾಸೋ ವರದೋ ಧರ್ಮವತ್ಸಲಃ ॥೨೯॥

ಆ ಕಾಲದಲ್ಲಿ ಯಾವ ಯಾವ ವ್ಯಕ್ತಿಗೆ ಯಾವ ಅಭಿಲಾಷೆಯು ಉಂಟಾಯಿತೋ ಆಯಾಯ ಎಲ್ಲ ಕಾಮನೆಗಳನ್ನೂ ವರದರಾದ, ಧರ್ಮವತ್ಸಲರಾದ ವೇದವ್ಯಾಸರು ವಿತರಿಸಿದರು.

ತಚ್ಛ್ರುತ್ವಾ ನರದೇವಾನಾಂ ಪುನರಾಗಮನಂ ನರಾಃ ।
ಜಹೃಷುರ್ಮುದಿತಾಶ್ಚಾಸನ್ನಾನಾದೇಶಗತಾ ಅಪಿ ॥೩೦॥

ಆ ರಾಜರ ಪುನರಾಗಮನವನ್ನು ಬೇರೆ ಬೇರೆ ಪ್ರದೇಶಗಳಲ್ಲಿರುವ ಜನರೂ ಕೂಡ ಕೇಳಿ ತಿಳಿದು ಸಂಭ್ರಮಿಸಿದರು ಮತ್ತು ಸಂತೋಷಗೊಂಡವರಾದರು.

ತೇ ನಷ್ಟಭಯಸಂಕಲ್ಪಾ ನರಾ ವಿಗತಕಲ್ಮಷಾಃ ।
ಬಭೂವುಃ ಪೌರವಾಃ ಸರ್ವೇ ತದ್ ದೃಷ್ಟ್ವಾSSಶ್ಚರ್ಯಮುತ್ತಮಮ್ ॥

ಆ ಎಲ್ಲ ಪುರಜನರೂ ಕೂಡ ಉತ್ತಮವಾದ ಆ ಅದ್ಭುತ ಪ್ರಸಂಗವನ್ನು ನೋಡಿ, ಭಯ ಹಾಗೂ ಸಂಕಲ್ಪಗಳನ್ನು ತೊರೆದು ಕಲ್ಮಶಗಳಿಂದ ರಹಿತರಾದರು.

ಪ್ರಿಯೈಃ ಸಮಾಗಮಂ ತೇಷಾಂ ಯಃ ಸಮ್ಯಕ್ ಶೃಣುಯಾನ್ನರಃ ।
ಪ್ರಿಯಾಣಿ ಲಭತೇ ನಿತ್ಯಮಿಹ ಚ ಪ್ರೇತ್ಯ ಚೈವ ಸಃ ॥೩೨॥

ಪ್ರಿಯಜನರೊಂದಿಗೆ ಅವರ ಸಮಾಗಮವನ್ನು ಯಾವನು ಶ್ರದ್ಧೆಯಿಂದ ಕೇಳುವನೋ ಅಂತಹ ಮನುಷ್ಯನು ಇಹಲೋಕದಲ್ಲೂ, ಪರಲೋಕದಲ್ಲೂ ತನಗೆ ಪ್ರಿಯವಾದುದನ್ನು ಪಡೆಯುತ್ತಾನೆ.

ಇಷ್ಟಬಾಂಧವಸಂಯೋಗಮನಾಯಾಸಮನಾಮಯಮ್ ॥೩೩॥

ಜೊತೆಗೆ ಇಷ್ಟರಾದ ಬಂಧುಜನರೊಡನೆ ಸಮಾಗಮವನ್ನೂ ಆಯಾಸ ಹಾಗೂ ರೋಗಗಳ ನಿವೃತ್ತಿಯನ್ನೂ ಪಡೆಯುತ್ತಾನೆ.

ಯಶ್ಚೈತಚ್ಛ್ರಾವಯೇದ್ ವಿದ್ವಾನ್ ವಿದುಷೋ ಧರ್ಮವಿತ್ತಮಃ ।
ಸ ಯಶಃ ಪ್ರಾಪ್ನುಯಾಲ್ಲೋಕೇ ಪರತ್ರ ಚ ಶುಭಾಂ ಗತಿಮ್ ॥೩೪॥

ಯಾವನು ಈ ಪ್ರಸಂಗವನ್ನು ವಿದ್ವಾಂಸರಿಂದ ಕೇಳಿಸುತ್ತಾನೋ ಅಂತಹ ಧರ್ಮಿಷ್ಠನಾದ ವಿದ್ವಾಂಸನಾದ ವ್ಯಕ್ತಿಯು ಲೋಕದಲ್ಲಿ ಯಶಸ್ಸನ್ನೂ, ಪರಲೋಕದಲ್ಲಿ ಶುಭಗತಿಯನ್ನೂ ಪಡೆಯುತ್ತಾನೆ.

ಸ್ವಾಧ್ಯಾಯಯುಕ್ತಾ ಮನುಜಾಸ್ತಪೋಯುಕ್ತಾಶ್ಚ ಭಾರತ ।
ಸಾಧ್ವಾಚಾರಾ ದಮೋಪೇತಾ ದಾನನಿರ್ಧೂತಕಲ್ಮಷಾಃ ॥೩೫॥

ಋಜವಃ ಶುಚಯಃ ಶಾಂತಾ ಹಿಂಸಾನೃತವಿವರ್ಜಿತಾಃ ।
ಆಸ್ತಿಕಾಃ ಶ್ರದ್ದಧಾನಾಶ್ಚ ಧೃತಿಮಂತಶ್ಚ ಮಾನವಾಃ ॥೩೬॥

ಶ್ರುತ್ವಾऽऽಶ್ಚರ್ಯಮಿದಂ ಪರ್ವ ಹ್ಯವಾಪ್ಸ್ಯಂತಿ ಪರಾಂ ಗತಿಮ್ ॥೩೭॥

ಹೇ ಭಾರತನೇ, ಸ್ವಾಧ್ಯಾಯದಿಂದ ಕೂಡಿದ, ತಪೋನಿರತರಾದ, ಉತ್ತಮವಾದ ಆಚಾರವುಳ್ಳ, ಇಂದ್ರಿಯನಿಗ್ರಹವುಳ್ಳ, ದಾನಗಳಿಂದ ಪಾಪವನ್ನು ತೊಳೆದುಕೊಂಡ, ಋಜುಮನಸ್ಸುಳ್ಳ, ಶುಚಿಯಾದ, ಶಾಂತರಾದ, ಹಿಂಸೆ ಮತ್ತು ಸುಳ್ಳುಗಳನ್ನು ವಿವರ್ಜಿಸಿದ, ಆಸ್ತಿಕರಾದ, ಶ್ರದ್ಧಾಯುಕ್ತರಾದ, ಧೈರ್ಯಯುಕ್ತರಾದ ಮಾನವರು ಈ ಆಶ್ಚರ್ಯಕರವಾದ ಪರ್ವವನ್ನು ಶ್ರದ್ಧೆಯಿಂದ ಕೇಳಿ ಉತ್ತಮ ಗತಿಯನ್ನು ಪಡೆಯಬಲ್ಲರು.

ಪುನಸ್ತೇ ದರ್ಶನಂ ಪ್ರಾಪ್ತಾಃ ಪುನಶ್ಚ ಪರಿಕೀರ್ತಿತಾಃ ।
ಪುನಃ ಪುನಃ ಪ್ರಯಚ್ಛಂತಿ ಶೃಣ್ವತಾಮಭಯಂ ಸದಾ ॥೩೮॥

ಈ ಪ್ರಸಂಗವನ್ನು ಯಾರು ನೋಡಿದರೋ ಮತ್ತು ಯಾರು ಹೇಳುವರೋ ಅವರೆಲ್ಲರೂ ಮತ್ತೆ ಮತ್ತೆ ಕೇಳುಗರಿಗೆ ಯಾವಾಗಲೂ ಅಭಯವನ್ನು ನೀಡುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ರಮವಾಸಿಕಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಜನಮೇಜಯನು ದೇಹವನ್ನು ತೊರೆದು ಹೋದ ಕುರು-ಪಾಂಡವಪಕ್ಷದ ಯೋಧರು ಪುನಃ ಹೇಗೆ ಬಂದರು? ಎಂದು ಪ್ರಶ್ನಿಸಿದಾಗ ಸಕಾರಣವಾಗಿ ಅದಕ್ಕೆ ಉತ್ತರ ನೀಡುವುದು.

ಸೌತಿಃ

ಏತಚ್ಛ್ರುತ್ವಾ ನೃಪೋ ವಿದ್ವಾನ್ ಹೃಷ್ಟೋಭೂಜ್ಜನಮೇಜಯಃ ।
ಪಿತಾಮಹಾನಾಂ ಸರ್ವೇಷಾಂ ಗಮನಾಗಮನಂ ತದಾ ॥೧॥

ಅಬ್ರವೀಚ್ಚ ಮುದಾ ಯುಕ್ತಃ ಪುನರಾಗಮನಂ ಪ್ರತಿ ॥೨॥

ಸೌತಿ– ವಿದ್ವಾಂಸನಾದ ಜನಮೇಜಯರಾಜನು ತನ್ನ ಎಲ್ಲ ಪಿತಾಮಹರ ಗಮನಾಗಮನದ ಈ ಪ್ರಸಂಗವನ್ನು ಕೇಳಿದಾಗ ಬಹಳ ಸಂತೋಷಪಟ್ಟನು. ಅಲ್ಲದೇ, ಈ ಆಗಮನದ ಪ್ರಸಂಗವನ್ನು ಕುರಿತು ಸಂತೋಷದಿಂದ ಮತ್ತೆ ಪ್ರಶ್ನೆ ಮಾಡಿದನು.

ಜನಮೇಜಯಃ

ಕಥಂ ನು ತ್ಯಕ್ತದೇಹಾನಾಂ ಪುನಸ್ತದ್ರೂಪದರ್ಶನಮ್ ॥೩॥

ಜನಮೇಜಯ– ದೇಹವನ್ನು ಬಿಟ್ಟವರಿಗೆ ಮತ್ತೆ ಅದೇ ರೂಪ ಕಾಣುವುದು ಹೇಗೆ?

ಇತ್ಯುಕ್ತಃ ಸ ದ್ವಿಜಶ್ರೇಷ್ಠೋ ವ್ಯಾಸಶಿಷ್ಯಃ ಪ್ರತಾಪವಾನ್ ।
ಪ್ರೋವಾಚ ವದತಾಂಶ್ರೇಷ್ಠಸ್ತಂ ನೃಪಂ ಜನಮೇಜಯಮ್ ॥೪॥

ಮಹಾತೇಜಸ್ವಿಯಾದ, ವೇದವ್ಯಾಸರ ಶಿಷ್ಯರಾದ, ಬ್ರಾಹ್ಮಣಶ್ರೇಷ್ಠರಾದ ವೈಶಂಪಾಯನರು ಹೀಗೆ ಕೇಳಲ್ಪಟ್ಟಾಗ, ವಾಗ್ಮಿಯಾದ ಅವರು ಆ ಜನಮೇಜಯ ರಾಜನನ್ನು ಕುರಿತು ಹೀಗೆ ಹೇಳಿದರು.

ವೈಶಂಪಾಯನಃ

ಅವಿಪ್ರಣಾಶಃ ಸರ್ವೇಷಾಂ ಕರ್ಮಣಾಮಿತಿ ನಿಶ್ಚಯಃ ।
ಕರ್ಮಜಾನಿ ಶರೀರಾಣಿ ಶರೀರಾಕೃತಯಸ್ತಥಾ ॥೫॥

ವೈಶಂಪಾಯನ– ಎಲ್ಲ ಕರ್ಮಗಳಿಗೂ (ಅವುಗಳ ಫಲಗಳನ್ನು ಅನುಭವಿಸದೆ) ನಿಶ್ಚಯವಾಗಿಯೂ ನಾಶವಿಲ್ಲ. ಆತ್ಮನಿಗೆ ಶರೀರಗಳು ಹಾಗೂ ಶರೀರದ ಆಕೃತಿಗಳು ಕರ್ಮದಿಂದಲೇ ಉಂಟಾಗುತ್ತವೆ.

ಮಹಾಭೂತಾನಿ ನಿತ್ಯಾನಿ ಭೂತಾಧಿಪತಿಸಂಶ್ರಯಾತ್ ।
ತೇಷಾಂ ಚ ನಿತ್ಯಸಂವಾಸೋ ನ ವಿನಾಶೋ ವಿಯುಜ್ಯತಾಮ್ ॥೬॥

ಮಹಾಭೂತಗಳು ಭೂತಾಧಿಪತಿಯನ್ನು ಆಶ್ರಯಿಸಿರುವುದರಿಂದ ನಿತ್ಯವಾಗಿವೆ. ಅವು ನಿತ್ಯವಾಗಿಯೂ ಪ್ರಕೃತಿಯಲ್ಲಿ ನೆಲೆಸಿರುವುದರಿಂದ ಪರಸ್ಪರ ವಿಯೋಗದಿಂದ ನಾಶವಾಗಲಾರವು.

ಅನಾಶಾಯ ಕೃತಂ ಕರ್ಮ ತಸ್ಯ ಚೇಷ್ಟಃ ಫಲಾಗಮಃ ।
ಆತ್ಮಾ ಚೈಭಿಃ ಸಮಾಯುಕ್ತಃ ಸುಖದುಃಖಮುಪಾಶ್ನುತೇ ॥೭॥

ಮಾಡಿದ ಕರ್ಮವೂ ನಾಶವಾಗದಿರುವುದರಿಂದ ಅದಕ್ಕೆ ಫಲಪ್ರಾಪ್ತಿ ಆಗಲೇಬೇಕು. ಆತ್ಮನಾದರೂ ಈ ಕರ್ಮದಿಂದ ಕೂಡಿಕೊಂಡು ಸುಖ ಹಾಗೂ ದುಃಖಗಳನ್ನು ಅನುಭವಿಸುವನು.

ಅವಿನಾಶ್ಯಸ್ತಥಾ ನಿತ್ಯಂ ಕ್ಷೇತ್ರಜ್ಞ ಇತಿ ನಿಶ್ಚಯಃ ।
ಭೂತಾನಾಮಾತ್ಮಭಾವೋ ಯೋ ಧ್ರುವೋಸೌ ಸಂವಿಜಾನತಾಮ್ ॥೮॥

ಪ್ರಾಣಿಗಳಿಗೆ ನಾನು ಎಂಬ ಭಾವ ಏನಿದೆಯೋ ಅದನ್ನೇ ಕ್ಷೇತ್ರಜ್ಞ ಅಥವಾ ಆತ್ಮ ಎಂದು ಕರೆಯಲಾಗಿದ್ದು, ಅವನು ನಿತ್ಯನಾಗಿದ್ದು ಯಾವುದೇ ಕಾರಣದಿಂದ ನಾಶವಾಗಲಾರನು. ಈ ವಿಷಯವು ಜ್ಞಾನಿಗಳಿಗೆ ನಿಶ್ಚಯವಾಗಿ ತಿಳಿದಿದೆ.

ಯಾವನ್ನ ಕ್ಷೀಯತೇ ಕರ್ಮ ತಾವತ್ತಸ್ಯ ಸ್ವರೂಪತಾ ।
ಕ್ಷೀಣಕರ್ಮಾ ನರೋ ಲೋಕೇ ರೂಪಾನ್ಯತ್ವಮುಪಾಶ್ನುತೇ ॥೯॥

ಎಲ್ಲಿಯವರೆಗೆ ಕರ್ಮಗಳು ಕ್ಷೀಣಿಸುವುದಿಲ್ಲವೋ ಅಲ್ಲಿಯ ತನಕ ಆ ಆತ್ಮನಿಗೆ ಸ್ವರೂಪವಿರುವುದು. ಕರ್ಮಗಳನ್ನು ಕ್ಷೀಣಿಸಿಕೊಂಡ ಮನುಷ್ಯನು ಲೋಕದಲ್ಲಿ ಬೇರೆ ರೂಪಗಳನ್ನು ಪಡೆಯುವನು.

ನಾನಾಭೂತಾಸ್ತಥೈಕತ್ವಂ ಶರೀರಂ ಪ್ರಾಪ್ಯ ಸಂಹತಾಃ ।
ಭವಂತಿ ತೇ ತಥಾ ನಿತ್ಯಾಃ ಪೃಥಗ್ಭಾವಂ ವಿಜಾನತಾಮ್ ॥೧೦॥

ಬೇರೆ ಬೇರೆಯಾಗಿರುವ ಭೂತ ಹಾಗೂ ಇಂದ್ರಿಯಗಳು ಜೊತೆಯಾಗಿ ಸೇರಿ ಪರಸ್ಪರ ಮಿಳಿತವಾದಾಗ ಶರೀರದ ರೂಪವನ್ನು ಪಡೆಯುತ್ತವೆ. ಹಾಗಿದ್ದರೂ ಅವುಗಳು ಬೇರೆ ಬೇರೆ ಎಂದು ತಿಳಿದವರಿಗೆ ಅವು ನಿತ್ಯವೇ ಆಗಿವೆ.

ಅಶ್ವಮೇಧಶ್ರುತಿಶ್ಚೇಯಮಶ್ವಸಂಜ್ಞಪನಂ ಪ್ರತಿ ।
ಲೋಕಾಂತರಗತಾ ನಿತ್ಯಂ ಪ್ರಾಣಾ ನಿತ್ಯಾ ಹಿ ವಾಜಿನಃ ॥೧೧॥

ಅಶ್ವಮೇಧ ಯಾಗದಲ್ಲಿ ಯಜ್ಞಕ್ಕಾಗಿ ಅಶ್ವವನ್ನು ಮಾರಣ ಮಾಡುವ ಸಂದರ್ಭದಲ್ಲಿ ವಿನಿಯೋಗವಾಗುವ ಈ ಅಶ್ವಮೇಧ ಶ್ರುತಿಯು ಕುದುರೆಯ ಪ್ರಾಣೇಂದ್ರಿಯಗಳು ನಿತ್ಯವಾಗಿದ್ದು ಅವು ಯಾವಾಗಲೂ ಪರಲೋಕದಲ್ಲಿ ಇದ್ದೇ ಇವೆ ಎಂದು ಹೇಳುತ್ತಿದೆ.

ಅಹಂ ಹಿತಂ ವದಾಮ್ಯೇತತ್ ಪ್ರಿಯಂ ಚೇತ್ತವ ಪಾರ್ಥಿವ ।
ದೇವಯಾನಾ ಹಿ ಪಂಥಾನಃ ಶ್ರುತಾಸ್ತೇ ಯಜ್ಞಸಂಸ್ತರೇ ॥೧೨॥

ಹೇ ಪಾರ್ಥಿವನೇ, ನಿನಗೆ ಪ್ರಿಯವಾಗುವುದಾದರೆ ನಾನು ಈ ಹಿತನುಡಿಗಳನ್ನು ಹೇಳುತ್ತೇನೆ. ಅಶ್ವಮೇಧಾದಿ ಯಜ್ಞವೇದಿಕೆಯಲ್ಲಿ ದೇವಯಾನ ಮಾರ್ಗಗಳ ಬಗ್ಗೆ ನೀನು ಕೇಳಿರುವೆಯಷ್ಟೆ?

ಸುಕೃತೋ ಯತ್ರ ಯಜ್ಞಸ್ತೇ ತತ್ರ ದೇವಾ ಹಿತಾಸ್ತವ ।
ಯದಾ ಸಮನ್ವಿತಾ ದೇವಾಃ ಪಶೂನಾಂ ಗಮನೇಶ್ವರಾಃ ॥೧೩॥

ಎಲ್ಲಿ ಯಜ್ಞವನ್ನು ಒಳ್ಳೆಯ ರೀತಿಯಲ್ಲಿ ನಡೆಸಲಾಗುವುದೋ ಅಲ್ಲಿ ಆ ದೇವತೆಗಳು ನಿನಗೆ ಹಿತರಾಗುವರು. ಯಾವಾಗ ದೇವತೆಗಳು ನಿನ್ನೊಂದಿಗೆ ಕೂಡುವರೋ ಆಗ

ಯಜ್ಞದಲ್ಲಿ ವಿಷಸನ ಮಾಡಿದ ಪಶುಗಳ ಆಯಾಯ ಲೋಕಗಳ ಗಮನಕ್ಕೆ ಅನುಗ್ರಾಹಕರಾಗಿರುತ್ತಾರೆ.

ಗತಿಮಂತಶ್ಚ ತೇನೇಷ್ಟ್ವಾ ನಾನ್ಯೇ ನಿತ್ಯಾ ಭವಂತ್ಯುತ ।
ನಿತ್ಯೇಽಸ್ಮಿನ್ ಪಂಚಕೇ ವರ್ಗೇ ನಿತ್ಯೇ ಚಾತ್ಮನಿ ಪೂರುಷಃ ॥೧೪॥

ಅಸ್ಯ ನಾಶಂ ಸಮಾಯೋಗಂ ಯಃ ಪಶ್ಯತಿ ವೃಥಾಮತಿಃ ।
ವಿಯೋಗೇ ಶೋಚತೇಽತ್ಯರ್ಥಂ ಸ ಬಾಲ ಇತಿ ಮೇ ಮತಿಃ ॥೧೫॥

ಹೀಗೆ ನಿತ್ಯರಾದ ಜೀವರು ಅಶ್ವಮೇಧಾದಿ ಯಾಗಗಳನ್ನು ನಡೆಸಿ ಉತ್ತಮವಾದ ಗತಿಯುಳ್ಳವರಾಗುತ್ತಾರೆ. ಉಳಿದವರು ಈ ರೀತಿಯ ಗತಿಯನ್ನು ಪಡೆಯಲಾರರು. ಯಾವ ಪುರುಷನು ಈ ಭೂತೇಂದ್ರಿಯ ಪಂಚಕವು ನಿತ್ಯವಿದ್ದಾಗಲೂ, ಆತ್ಮನು ನಿತ್ಯವಾಗಿದ್ದಾಗಲೂ ಇವುಗಳಿಗೆ ನಾಶವನ್ನಾಗಲಿ, ಇವುಗಳ ಸಮಾಯೋಗವನ್ನಾಗಲಿ ನೋಡುವನೋ, ಜೊತೆಗೆ ಭೂತೇಂದ್ರಿಯನಿಗೂ, ಆತ್ಮನಿಗೂ ವಿಯೋಗವುಂಟಾದಾಗ ಬಹುವಾಗಿ ದುಃಖಿಸುವನೋ ಅಂತಹ ನಿರರ್ಥಕ ಮತಿಯುಳ್ಳವನು ಶಾಸ್ತ್ರವಿಷಯದಲ್ಲಿ ಇನ್ನೂ ಮಗುವಾಗಿರುವನು ಎಂದು ನನ್ನ ಅಭಿಪ್ರಾಯ.

ವಿಯೋಗೇ ದೋಷದರ್ಶೀ ಯಃ ಸಂಯೋಗಂ ಸ ವಿಸರ್ಜಯೇತ್ ।
ಅಸಂಗೇ ಸಂಗಮೋ ನಾಸ್ತಿ ದುಃಖಿಂ ಭಾವಿ ವಿಯೋಗಜಮ್ ॥೧೬॥

ಯಾವನು ವಿಯೋಗವನ್ನು ದೋಷವುಳ್ಳದ್ದಾಗಿ ನೋಡುವನೋ ಅವನು ಸಂಯೋಗವನ್ನೇ ಬಿಡಬೇಕು. ಏಕೆಂದರೆ ಅಸಂಗವುಳ್ಳ ವ್ಯಕ್ತಿಗೆ ಸಂಗವಾಗಲಿ, ಮುಂದೆ ವಿಯೋಗದಿಂದ ಬರುವ ದುಃಖವಾಗಲಿ ಇರುವುದಿಲ್ಲ.

ಪರಾಪರಜ್ಞಸ್ತು ನರೋ ನಾತಿ(ಭಿ)ಮಾನಾದುದೀರಿತಃ ।
ಅಪರಜ್ಞಃ ಪರಾಂ ಬುದ್ಧಿಂ ಸ್ಪೃಷ್ಟ್ವಾ ಮೋಹಾದ್ ವಿಮುಚ್ಯತೇ ॥೧೭॥

ಪರಾಪರಗಳನ್ನು ಚೆನ್ನಾಗಿ ತಿಳಿದ ಮನುಷ್ಯನು (ಆತ್ಮೇಂದ್ರಿಯಗಳ ಬಗ್ಗೆ) ಅತಿಯಾದ ಅಭಿಮಾನವೆಂಬ ದೋಷದಿಂದ ಮೇಲಕ್ಕೇರಲಾರನು. ಅಪರನಾದ ಭಗವಂತನನ್ನು ತಿಳಿದವನು ಉತ್ತಮವಾದ ಬುದ್ಧಿಯನ್ನು ಪಡೆದು ಮೋಹದಿಂದ ವಿಮುಕ್ತನಾಗುವನು.

ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ ।
ನಾಹಂ ತಂ ವೇದ್ಮಿ ನಾಸೌ ಮಾಂ ನ ಚ ಮೇऽಸ್ತಿ ವಿರಾಗತಾ ॥೧೮॥

ಈ ಶರೀರಕ್ಕೆ ಈ ಜೀವವು ಹೇಗೆ ಬಂದಿತೆಂದು ನಾವು ಕಾಣಲಾರೆವು. ಕಾಲಾಂತರದಲ್ಲಿ ಇದು ಮತ್ತೆ ನಾಶವಾಗುತ್ತದೆ. ನಾನಂತೂ ಈ ಶರೀರವನ್ನು ಪೂರ್ಣವಾಗಿ ತಿಳಿದಿಲ್ಲ. ಈ ಶರೀರವೂ ನನ್ನನ್ನು ತಿಳಿಯಲಾರದು. ಹೀಗಿದ್ದರೂ ನನಗೆ ವೈರಾಗ್ಯ ಬಂದಿಲ್ಲ.

ಯೇನ ಯೇನ ಶರೀರೇಣ ಕರೋತ್ಯಯಮನೀಶ್ವರಃ ।
ತೇನ ತೇನ ಶರೀರೇಣ ತದವಶ್ಯಮುಪಾಶ್ನುತೇ ॥೧೯॥

ಮಾನಸಂ ಮನಸಾऽऽಪ್ನೋತಿ ಶರೀರಂ ಚ ಶರೀರವಾನ್ ॥೨೦॥

ಅಸ್ವತಂತ್ರನಾದ ಈ ಜೀವನು ಯಾವ ಯಾವ ಶರೀರದಿಂದ ಕರ್ಮವನ್ನು ನಡೆಸುತ್ತಾನೋ ಆಯಾ ಶರೀರದಿಂದಲೂ ಅದರ ಫಲವನ್ನು ಅವಶ್ಯವಾಗಿ ಅನುಭವಿಸುವನು. ಮಾನಸ ಕರ್ಮಗಳನ್ನು ಮನಸ್ಸಿನಿಂದಲೂ, ಶರೀರದಿಂದ ಅನುಭವಿಸಿದ ಕರ್ಮವನ್ನು ಶರೀರದಿಂದಲೂ ಅನುಭವಿಸುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಕರ್ಮಾನುರೂಪಶರೀರಗ್ರಹಣಕಥನಂ ನಾಮ
ಚತ್ವಾರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ತೃಪ್ತಃ ಸದಾರೋ ನೃಪತಿಶ್ಚ ತತ್ರ
ಸರ್ವೇऽಪಿ ದೃಷ್ಟ್ವಾ ಪರಮಾದ್ಭುತಂ ತತ್ ।
ಅಥಾऽಜ್ಞಯೈವಾಸ್ಯ ಪರಸ್ಯ ಸರ್ವಾಃ
ಸ್ತ್ರಿಯೋ ನಿಜೇಶೈಃ ಸಹಿತಾ ಯಯುಃ ಸ್ವಃ ॥

ಏನೋತ್ತರಾಂ ತಾಂ ತು ಕಥಾಂ ನಿಶಮ್ಯ
ಪಾರೀಕ್ಷಿತೋಽಯಾಚತ ತಾತದೃಷ್ಟಿಮ್ ।
ತಂ ಚಾಽನಯಾಮಾಸ ತದೈವ ಕೃಷ್ಣೋ
ಹ್ಯಚಿಂತ್ಯಶಕ್ತಿಃ ಸ ವಿಕುಂಠಲೋಕಾತ್ ॥

ಗಾಂಧಾರೀ ಸಮೇತನಾದ ಧೃತರಾಷ್ಟ್ರನೂ ಪಾಂಡವರು ಮುಂತಾದವರೂ ಪರಮಾದ್ಭುತವಾದ ಮೃತರಾಗಮನವನ್ನು ಕಂಡು ತೃಪ್ತರಾದರು. ಬಳಿಕ ವೇದವ್ಯಾಸರ ಇಚ್ಛೆಯಂತೆಯೇ ಉತ್ತರೆ ಹೊರತು ಎಲ್ಲ ಸ್ತ್ರೀಯರೂ ಗಂಗಾನದಿಯಲ್ಲಿ ಶರೀರ ತ್ಯಾಗ ಮಾಡಿ ತಮ್ಮ ಪತಿಗಳೊಂದಿಗೆ ಸ್ವರ್ಗಕ್ಕೆ ತೆರಳಿದರು. ಈ ಕಥೆಯನ್ನು ಕೇಳಿ ಜನಮೇಜಯ ರಾಜನೂ ತಂದೆಯಾದ ಪರೀಕ್ಷಿತನನ್ನು ನೋಡಬೇಕೆಂದು ಕೇಳಿಕೊಂಡನು. ಅಚಿಂತ್ಯಶಕ್ತಿ ಉಳ್ಳ ವೇದವ್ಯಾಸರು ಅವನನ್ನೂ ಆಗಲೇ ವೈಕುಂಠಲೋಕದಿಂದ ಕರೆಸಿದನು.

ದೃಷ್ಟ್ವಾ ಸ ಪಾರೀಕ್ಷಿತ ಆಪ ತುಷ್ಟಿಂ
ಸ್ವತಾತಮೀಶೇನ ಸಮಾಹೃತಂ ಪುನಃ ॥
ಸಂಪೂಜ್ಯ ತಂ ಕೃಷ್ಣಮಪೀಶವಂದ್ಯಂ
ಕ್ಷಮಾಪಯಾಮಾಸ ಪರೀಕ್ಷಿದಾತ್ಮಜಃ ।

ಚಕ್ರೇ ಚ ವಿಸ್ರಂಭಮತೀವ ಭಾರತೇ
ಪುನಶ್ಚ ತತ್ರತ್ಯಜನೈಃ ಸಮೇತಃ ॥

ಜನಮೇಜಯನು ವೇದವ್ಯಾಸರಿಂದ ಕರೆಸಲ್ಪಟ್ಟ ತನ್ನ ತಂದೆಯನ್ನು ಪುನಃ ಕಂಡು ಸಂತುಷ್ಟನಾದ. ಅವನನ್ನೂ ಬ್ರಹ್ಮಾದಿ ವಂದ್ಯರಾದ ವೇದವ್ಯಾಸರನ್ನೂ ಸೇವಿಸಿ ಕ್ಷಮೆ ಕೇಳಿದನು. ಮೃತನಾದ ಪರೀಕ್ಷಿತನನ್ನು ಅಲ್ಲಿದ್ದ ಜನರೊಂದಿಗೆ ತಾನು ಪುನಃ ಕಂಡ ಬಳಿಕ ಭಾರತ ಗ್ರಂಥದಲ್ಲಿ ಬಹಳ ವಿಶ್ವಾಸವಿರಿಸಿದನು.

ಪಾರ್ಥಾಃ ಪುನಃ ಪ್ರಾಪ್ಯ ಪುರಂ ಸ್ವಕೀಯಂ
ಧರ್ಮೇಣ ಪೃಥ್ವೀಂ ಪರಿಪಾಲಯಂತಃ ।
ಭೋಗಾನರಾಗಾ ಅಜುಷಂತ ಯೋಗ್ಯಾನ್
ಯುಕ್ತಾ ಜಗದ್ಧಾತರಿ ವಾಸುದೇವೇ ॥

ಪಾಂಡವರು ಪುನಃ ತಮ್ಮ ಪಟ್ಟಣಗಳನ್ನು ಸೇರಿ, ಧರ್ಮದಿಂದ ಭೂಮಿಯನ್ನು ಆಳುತ್ತಾ, ಸರ್ವಧಾರಕನಾದ ಶ್ರೀಕೃಷ್ಣನಲ್ಲಿ ಭಕ್ತಿಯುಕ್ತರಾಗಿ, ಅನಾಸಕ್ತಿಯಿಂದ ಯೋಗ್ಯವಾದ ಭೋಗಗಳನ್ನು ಅನುಭವಿಸಿದರು.

★ ★ ★ ★ ★

ನಲವತ್ತೊಂದನೆಯ ಅಧ್ಯಾಯ

ಜನಮೇಜಯನು ಪರೀಕ್ಷಿತನನ್ನು ತೋರಿಸಿ ಎಂದು ಪ್ರಾರ್ಥಿಸಿದಾಗ ಪರೀಕ್ಷಿತನನ್ನೂ, ಶಮೀಕ ಮಹರ್ಷಿಯನ್ನೂ, ಶೃಂಗಿಯನ್ನೂ ತೋರಿಸುವುದು. ಜನಮೇಜಯನು ಅವಭೃಥಸ್ನಾನವನ್ನು ಮುಗಿಸಿ, ಆಸ್ತಿಕರನ್ನು ಪೂಜಿಸಿದ ನಂತರ ವೈಶಂಪಾಯನರಿಗೆ ಕಥೆಯನ್ನು ಮುಂದುವರಿಸಬೇಕೆಂದು ಪ್ರಾರ್ಥಿಸುವುದು.

ವೈಶಂಪಾಯನಃ

ಅದೃಷ್ಟಾ ತು ನೃಪಃ ಪುತ್ರಾನ್ ದರ್ಶನಂ ಪ್ರತಿಲಬ್ಧವಾನ್ ।
ಋಷೇಃ ಪ್ರಸಾದಾತ್ ಪುತ್ರಾಣಾಂ ಸ್ವರೂಪಾಣಾಂ ಕುರೂದ್ವಹ ॥೧॥

ವೈಶಂಪಾಯನ– ಹೇ ಕುರೂದ್ವಹನೇ, ಹಿಂದೆಂದೂ ಮಕ್ಕಳನ್ನು ಕಣ್ಣಾರೆ ನೋಡಿರದ ಧೃತರಾಷ್ಟ್ರರಾಜನು ಋಷಿಗಳಾದ ವೇದವ್ಯಾಸರ ಅನುಗ್ರಹದಿಂದ ಸ್ವರೂಪವನ್ನು ಧರಿಸಿ ಬಂದ ಮಕ್ಕಳ ದರ್ಶನಭಾಗ್ಯವನ್ನು ಪಡೆದನು.

ಸ ರಾಜಾ ರಾಜಧರ್ಮಾಂಶ್ಚ ಬ್ರಹ್ಮೋಪನಿಷದಂ ತಥಾ ।
ಅವಾಪ್ತವಾನ್ ನರಶ್ರೇಷ್ಠೋ ಬುದ್ಧಿನಿಶ್ಚಯಮೇವ ಚ ॥೨॥

ಮನುಜಶ್ರೇಷ್ಠನಾದ ಆ ಧೃತರಾಷ್ಟ್ರರಾಜನು ರಾಜಧರ್ಮಗಳನ್ನೂ, ಹಾಗೆಯೇ ಬ್ರಹ್ಮಜ್ಞಾನವನ್ನೂ ಹಾಗೂ ಬುದ್ಧಿಯ ನಿಶ್ಚಯವನ್ನೂ (ಈ ಪ್ರಸಂಗದಿಂದ) ಪಡೆದುಕೊಂಡನು.

ವಿದುರಶ್ಚ ಮಹಾಪ್ರಾಜ್ಞೋ ಯಯೌ ಸಿದ್ಧಿಂ ತಪೋಬಲಾತ್ ।
ಧೃತರಾಷ್ಟ್ರಃ ಸಮಾಸಾದ್ಯ ವ್ಯಾಸಂ ಚೈವ ತಪಸ್ವಿನಮ್ ॥೩॥

ಮಹಾಪ್ರಾಜ್ಞನಾದ ವಿದುರನು ತಪಸ್ಸಿನ ಬಲದಿಂದ ಸಿದ್ಧಿಯನ್ನು ಪಡೆದಿದ್ದನು. ಈ ಧೃತರಾಷ್ಟ್ರನಾದರೂ ತಪಸ್ವಿಯಾದ ವೇದವ್ಯಾಸರ ಸಂಪರ್ಕದಿಂದ ಸಿದ್ಧಿಯನ್ನು ಪಡೆದಿರುವನು.

ಜನಮೇಜಯಃ

ಮಮಾಪಿ ವರದೋ ವ್ಯಾಸೋ ದರ್ಶಯೇತ್ ಪಿತರಂ ಯದಿ ।
ತದ್ರೂಪವೇಷವಯಸಂ ಶ್ರದ್ದಧ್ಯಾಂ ಸರ್ವಮೇವ ತತ್ ॥೪॥

ಜನಮೇಜಯ– ನನಗೂ ಕೂಡ ವರದರಾದ ವೇದವ್ಯಾಸರು ಅದೇ ರೂಪ, ವೇಷ ಮತ್ತು ವಯಸ್ಸುಗಳುಳ್ಳ ತಂದೆಯನ್ನು ತೋರಿಸಿದ ಪಕ್ಷದಲ್ಲಿ ನೀವು ಹೇಳಿದ ಎಲ್ಲವನ್ನೂ ನಾನು ನಂಬಬಲ್ಲೆನು.

ಪ್ರಿಯಂ ಮೇ ಸ್ಯಾತ್ ಕೃತಾರ್ಥಶ್ಚ ಸ್ಯಾಮಹಂ ಕೃತನಿಶ್ಚಯಃ ।
ಪ್ರಸಾದಾದೃಷಿಮುಖ್ಯಸ್ಯ ಮಮ ಕಾಮಃ ಸಮೃದ್ಧ್ಯತಾಮ್ ॥೫॥

ಹೀಗೆ ಮಾಡುವುದರಿಂದ ನನಗೆ ಬಹಳ ಸಂತೋಷವಾಗುವುದು. ನಾನು ಕೃತಾರ್ಥನಾಗುವೆನು. ನಾನೂ ನಿಶ್ಚಯಿಸಿದ್ದನ್ನು ನಡೆಸಿದಂತಾಗುವುದು. ಹಾಗಾಗಿ ಋಷಿಮುಖ್ಯರಾದ ವೇದವ್ಯಾಸರ ಅನುಗ್ರಹದಿಂದ ನನ್ನ ಈ ಅಭಿಲಾಷೆಯು ನೆರವೇರಲಿ.

ಸೂತಃ

ಇತ್ಯುಕ್ತವಚನೇ ತಸ್ಮಿನ್ನೃಪೇ ವ್ಯಾಸಃ ಪ್ರತಾಪವಾನ್ ।
ಪ್ರಸಾದಮಕರೋದ್ಧೀಮಾನಾನಯಚ್ಚ ಪರಿಕ್ಷಿತಮ್ ॥೬॥

ಸೂತರು– ಹೀಗೆ ಆ ರಾಜನು ಹೇಳುತ್ತಿರುವಾಗಲೇ ತೇಜಸ್ವಿಯಾದ, ಧೀಮಂತರಾದ ವೇದವ್ಯಾಸರು ಅವನನ್ನು ಅನುಗ್ರಹಿಸಿ, ಪರೀಕ್ಷಿತನನ್ನು ಅಲ್ಲಿಗೆ ಕರೆತಂದರು.

ತತಸ್ತದ್ರೂಪವಯಸಮಾಗತಂ ನೃಪತಿಂ ದಿವಃ ।
ಶ್ರೀಮಂತಂ ಪಿತರಂ ರಾಜಾ ದದರ್ಶ ಸ ಪರಿಕ್ಷಿತಮ್ ॥೭॥

ಅನಂತರ ಅದೇ ರೂಪ, ವಯಸ್ಸುಗಳುಳ್ಳ, ಆಕಾಶದಿಂದ ಇಳಿದುಬಂದ, ಶ್ರೀಮಂತನಾದ, ರಾಜನಾದ ಹಾಗೂ ತನ್ನ ತಂದೆಯಾದ ಪರೀಕ್ಷಿತನನ್ನು ಜನಮೇಜಯನು ನೋಡಿದನು.

ಶಮೀಕಂ ಚ ಮಹಾತ್ಮಾನಂ ಪುತ್ರಂ ತಂ ಚಾಸ್ಯ ಶೃಂಗಿಣಮ್ ।
ಅಮಾತ್ಯಾ ಯೇ ಚ ನಿಹತಾ ರಾಜ್ಞಸ್ತಾಂಶ್ಚ ದದರ್ಶ ಹ ॥೮॥

ಅಲ್ಲದೇ ಮಹಾತ್ಮರಾದ ಶಮೀಕರನ್ನೂ, ಆ ಶಮೀಕ ಪುತ್ರನಾದ ಶೃಂಗಿಯನ್ನೂ ಜೊತೆಗೆ ಈ ಮೊದಲು ಮೃತರಾದ ರಾಜ ಹಾಗೂ ಅಮಾತ್ಯರನ್ನೂ ನೋಡಿದನು.

ತತಃ ಸೋವಭೃಥೇ ರಾಜಾ ಮುದಿತೋ ಜನಮೇಜಯಃ ।
ಪಿತರಂ ಸ್ನಾಪಯಾಮಾಸ ಸ್ವಯಂ ಸಸ್ನೌ ಚ ಪಾರ್ಥಿವಃ ॥೯॥

ಅನಂತರ ಅವಭೃಥಕಾಲದಲ್ಲಿ ಸಂತೋಷಗೊಂಡ ಜನಮೇಜಯ ರಾಜನು ತಂದೆಗೆ ಸ್ನಾನ ಮಾಡಿಸಿ ತಾನೂ ಕೂಡ ಮಿಂದನು.

ಪರೀಕ್ಷಿದಪಿ ತತ್ರೈವ ಬಭೂವ ಸ ತಿರೋಹಿತಃ ।
ಸ್ನಾತ್ವಾ ಸ ನೃಪತಿರ್ವಿಪ್ರಮಾಸ್ತೀಕಮಿದಮಬ್ರವೀತ್ ॥೧೦॥

ಯಾಯಾವರಕುಲೋತ್ಪನ್ನಂ ಜರತ್ಕಾರುಸುತಂ ತದಾ ॥೧೧॥

ಸ್ನಾನದ ನಂತರವೂ ಪರೀಕ್ಷಿತನು ಅಲ್ಲೇ ಅಂತರ್ಧಾನನಾಗಿ ಇದ್ದನು. ತನ್ನ ಸ್ನಾನವಾದ ನಂತರ, ಆ ಜನಮೇಜಯರಾಜನು ಬ್ರಾಹ್ಮಣರಾದ ಯಾಯಾವರ ಕುಲದಲ್ಲಿ ಉತ್ಪನ್ನರಾದ ಜರತ್ಕಾರುವಿನ ಮಗನಾದ ಆಸ್ತೀಕರನ್ನು ಕುರಿತು ಈ ಮಾತುಗಳನ್ನು ಹೇಳಿದನು.

ಆಸ್ತೀಕ ವಿವಿಧಾಶ್ಚರ್ಯೋ ಯಜ್ಞೋಽಯಮಿತಿ ಮೇ ಮತಿಃ ।
ಯದದ್ಯಾಯಂ ಪಿತಾ ಪ್ರಾಪ್ತೋ ಮಮ ಶೋಕಪ್ರಣಾಶನಃ ॥೧೨॥

ಹೇ ಆಸ್ತೀಕರೇ, ಈ ನನ್ನ ಯಜ್ಞವು ನಾನಾ ರೀತಿಯ ಆಶ್ಚರ್ಯಗಳನ್ನು ತೋರಿಸಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಇಂದು ನನ್ನ ದುಃಖವನ್ನು ನಾಶ ಮಾಡಲು ನನ್ನ ತಂದೆಯೇ ಬಂದಿರುವರು.

ಆಸ್ತೀಕಃ

ಋಷಿರ್ದ್ವೈಪಾಯನೋ ಯತ್ರ ಪುರಾಣಸ್ತಪಸೋ ನಿಧಿಃ ।
ಯಜ್ಞೇ ಕುರುಕುಲಶ್ರೇಷ್ಠ ತಸ್ಯ ಲೋಕಾವುಭೌ ಜಿತೌ ॥೧೩॥

ಆಸ್ತೀಕರು– ಹೇ ಕುರುಕುಲಶ್ರೇಷ್ಠನೇ, ಯಾರ ಯಜ್ಞದಲ್ಲಿ ಪುರಾಣಪುರುಷನಾದ, ತಪೋನಿಧಿಯಾದ ದ್ವೈಪಾಯನಋಷಿಯು ಇರುವನೋ ಅವನು ಇಹ-ಪರಗಳೆರಡನ್ನೂ ಗೆಲ್ಲಬಲ್ಲನು.

ಶ್ರುತಂ ವಿಚಿತ್ರಮಾಖ್ಯಾನಂ ತ್ವಯಾ ಪಾಂಡವನಂದನ ।
ಸರ್ಪಾಶ್ಚ ಭಸ್ಮಸಾನ್ನೀತಾ ಗತಾಶ್ಚ ಪದವೀಂ ಪಿತುಃ ॥೧೪॥

ಹೇ ಪಾಂಡವನಂದನನೇ, ಈ ವಿಚಿತ್ರವಾದ ಆಖ್ಯಾನಭಾಗವನ್ನು ನೀನು ಕೇಳಿರುವೆ ಮತ್ತು ಈ ಯಜ್ಞದಲ್ಲಿ ಭಸ್ಮಗೊಂಡ ಸರ್ಪಗಳೆಲ್ಲವೂ ನಿನ್ನ ತಂದೆಯ ಲೋಕವನ್ನೇ ಪಡೆದಿರುವವು.

ಕಥಂಚಿತ್ ತಕ್ಷಕೋ ಮುಕ್ತಃ ಸತ್ಯತ್ವಾತ್ ತವ ಪಾರ್ಥಿವ ।
ಋಷಯಃ ಪೂಜಿತಾಃ ಸರ್ವೇ ಗತಿರ್ದೃಷ್ಟಾ ಮಹಾತ್ಮನಃ ॥೧೫॥

ನೀನು ಸತ್ಯವಂತನಾದುದರಿಂದ ತಕ್ಷಕನು ಹೇಗೋ ಮುಕ್ತನಾದನು. ಜೊತೆಗೆ ಎಲ್ಲ ಋಷಿಗಳು ಗೌರವಿಸಲ್ಪಟ್ಟರು. ಅಲ್ಲದೇ ಮಹಾತ್ಮರಾದ ವೇದವ್ಯಾಸರ ಜ್ಞಾನಬಲವು ನಮ್ಮೆಲ್ಲರಿಗೂ ಕಂಡಿತು.

ಪ್ರಾಪ್ತಃ ಸುವಿಪುಲೋ ಧರ್ಮಃ ಶ್ರುತ್ವಾ ಪಾಪವಿನಾಶನಮ್ ।
ವಿಮುಕ್ತೋ ಹೃದಯಗ್ರಂಥಿರುದಾರಜನದರ್ಶನಾತ್ ॥೧೬॥

ಪಾಪವನ್ನು ವಿನಾಶ ಮಾಡುವ ಈ ಮಹಾಭಾರತ ಕಥೆಯನ್ನು ಕೇಳಿ ವಿಪುಲವಾದ ಧರ್ಮವು ಪ್ರಾಪ್ತವಾಗಿದೆ. ಅಲ್ಲದೇ ಸತ್ಪುರುಷರ ದರ್ಶನದಿಂದ ಮಡುಗಟ್ಟಿದ ಹೃದಯವು ಅರಳಿದೆ.

ಯೇ ಚ ಪಕ್ಷಧರಾ ಧರ್ಮೇ ಸದ್ವೃತ್ತರುಚಯಶ್ಚ ಯೇ ।
ಯಾನ್ ದೃಷ್ಟ್ವಾ ಹೀಯತೇ ಪಾಪಂ ತೇಭ್ಯಃ ಕಾರ್ಯಾ ನಮಸ್ಕ್ರಿಯಾ ॥

ಯಾರು ಧರ್ಮದ ಪಕ್ಷವನ್ನು ಧರಿಸಿರುವರೋ, ಯಾರು ಸನ್ನಡತೆಯಲ್ಲಿ ಸದಾ ಆಸಕ್ತರಾಗಿರುವರೋ, ಯಾರನ್ನು ನೋಡಿ ಪಾಪಗಳು ಪರಿಹಾರವಾಗುವವೋ ಅಂತಹ ಸತ್ಪುರುಷರಿಗೆ ನಿತ್ಯವೂ ನಮಸ್ಕಾರವನ್ನು ಮಾಡಬೇಕು.

ಸೂತಃ

ಏತಚ್ಛ್ರುತ್ವಾ ದ್ವಿಜಶ್ರೇಷ್ಠಾತ್ ಸ ರಾಜಾ ಜನಮೇಜಯಃ ।
ಪೂಜಯಾಮಾಸ ತಮೃಷಿಮನುಮಾನ್ಯ ಪುನಃ ಪುನಃ ॥೧೮॥

ಸೂತರು– ಹೀಗೆ ದ್ವಿಜಶ್ರೇಷ್ಠರಿಂದ ರಾಜನಾದ ಜನಮೇಜಯನು ಕಥೆಯನ್ನು ಕೇಳಿ ಋಷಿಗಳಾದ ವೇದವ್ಯಾಸರನ್ನು ಮತ್ತೆ ಮತ್ತೆ ಗೌರವಪೂರ್ವಕವಾಗಿ ಪೂಜಿಸಿದನು.

ಪಪ್ರಚ್ಛ ತಮೃಷಿಂ ಚಾಪಿ ವೈಶಂಪಾಯನಮಚ್ಯುತಮ್ ।
ಕಥಾವಶೇಷಂ ಧರ್ಮಜ್ಞೋ ವನವಾಸಸ್ಯ ಸತ್ತಮ ॥೧೯॥

ಹೇ ಸತ್ತಮನೇ, ಅಲ್ಲದೇ ಧರ್ಮಜ್ಞನಾದ ಅವನು ಅಚ್ಯುತರಾದ ವೇದವ್ಯಾಸ ಋಷಿಗಳನ್ನೂ, ವೈಶಂಪಾಯನರನ್ನೂ, ಧೃತರಾಷ್ಟ್ರನ ವನವಾಸದಲ್ಲಿ ಉಳಿದ ಕಥೆಗಳನ್ನು ಹೇಳುವಂತೆ ಕೇಳಿಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಜನಮೇಜಯೇನ ಸ್ವಪಿತೃಪರಿಕ್ಷಿದ್ದರ್ಶನಕಥನಂ ನಾಮ
ಏಕಚತ್ವಾರಿಂಶೋऽಧ್ಯಾಯಃ ॥
॥ ಪುತ್ರದರ್ಶನಪರ್ವಣಿ ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ಮಕ್ಕಳನ್ನು ನೋಡಿದ ನಂತರ ಧೃತರಾಷ್ಟ್ರನು ಯುಧಿಷ್ಠಿರಾದಿಗಳ ಜೊತೆಗೆ ಮತ್ತೆ ಆಶ್ರಮಕ್ಕೆ ಹಿಂದಿರುಗುವುದು. ವೇದವ್ಯಾಸರು ಧೃತರಾಷ್ಟ್ರನಲ್ಲಿ ಯುಧಿಷ್ಠಿರಾದಿಗಳನ್ನು ನಗರಕ್ಕೆ ಕಳುಹಿಸುವಂತೆ ಆದೇಶಿಸುವುದು. ನಗರಕ್ಕೆ ಹಿಂದಿರುಗುವ ಮನಸ್ಸಿಲ್ಲದಿದ್ದರೂ ಧೃತರಾಷ್ಟ್ರನ ಹಾಗೂ ಕುಂತೀದೇವಿ, ಗಾಂಧಾರಿದೇವಿಯರ ಆದೇಶದಂತೆ ಮತ್ತೆ ಎಲ್ಲರೊಂದಿಗೆ ಹಸ್ತಿನಪುರಕ್ಕೆ ಹಿಂದಿರುಗುವುದು.

ಜನಮೇಜಯಃ

ದೃಷ್ಟ್ವಾ ಪುತ್ರಾಂಸ್ತಥಾ ಪೌತ್ರಾನ್ ಸಾನುಬಂಧಾನ್ ಜನಾಧಿಪಃ ।
ಧೃತರಾಷ್ಟ್ರಃ ಕಿಮಕರೋದ್ ರಾಜಾ ಚೈವ ಯುಧಿಷ್ಠಿರಃ ॥೧॥

ಜನಮೇಜಯ– ಜನಾಧಿಪತಿಯಾದ ಧೃತರಾಷ್ಟ್ರನು ಪರಿವಾರಸಹಿತರಾದ ಮಕ್ಕಳನ್ನೂ ಹಾಗೂ ಮೊಮ್ಮಕ್ಕಳನ್ನೂ ನೋಡಿ ಏನು ಮಾಡಿದನು? ಅಲ್ಲೇ ಇದ್ದ ಯುಧಿಷ್ಠಿರ ರಾಜನಾದರೂ ಏನು ಮಾಡಿದನು?

ವೈಶಂಪಾಯನಃ

ತದ್ ದೃಷ್ಟ್ವಾ ಮಹದಾಶ್ಚರ್ಯಂ ಪುತ್ರಾಣಾಂ ದರ್ಶನಂ ಪುನಃ ।
ವೀತಶೋಕಃ ಸ ರಾಜರ್ಷಿಃ ಪುನರಾಶ್ರಮಮಾಗಮತ್ ॥೨॥

ವೈಶಂಪಾಯನ– ರಾಜರ್ಷಿಯಾದ ಆ ಧೃತರಾಷ್ಟ್ರನು ಬಹಳ ಆಶ್ಚರ್ಯಕರವಾದ ಮಕ್ಕಳ ದರ್ಶನಭಾಗ್ಯವನ್ನು ನೋಡಿ, ಶೋಕವನ್ನು ಕಳೆದುಕೊಂಡು ಮತ್ತೆ ಆಶ್ರಮಕ್ಕೆ ಹಿಂದಿರುಗಿದನು.

ಇತರಸ್ತು ಜನಃ ಸರ್ವಸ್ತೇ ಚೈವ ಪರಮರ್ಷಯಃ ।
ಪ್ರತಿಜಗ್ಮುರ್ಯಥಾಕಾಮಂ ಧೃತರಾಷ್ಟ್ರಾಭ್ಯನುಜ್ಞಯಾ ॥೩॥

ಉಳಿದೆಲ್ಲ ಜನರೂ, ಅಲ್ಲಿರುವ ಎಲ್ಲ ಋಷಿಗಳೂ ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು ತಾವು ಬಯಸಿದಲ್ಲಿಗೆ ಹಿಂದಿರುಗಿದರು.

ಪಾಂಡವಾಸ್ತು ಮಹಾತ್ಮಾನೋ ಲಘುಭೂಯಿಷ್ಠಸೈನಿಕಾಃ ।
ಅನುಜಗ್ಮುರ್ಮಹಾತ್ಮಾನಂ ಸದಾರಾಸ್ತಂ ಮಹೀಪತಿಮ್ ॥೪॥

ಮಹಾತ್ಮರಾದ ಪಾಂಡವರಾದರೂ ತಮ್ಮೆಲ್ಲ ಸೈನಿಕರನ್ನು ಕೂಡಿಕೊಂಡು, ತಮ್ಮ ಪತ್ನಿಯರೊಂದಿಗೆ ಮಹಾತ್ಮನಾದ ಧೃತರಾಷ್ಟ್ರ ರಾಜನನ್ನು ಅನುಸರಿಸಿದರು.

ತಮಾಶ್ರಮಗತಂ ಧೀಮಾನ್ ಬ್ರಹ್ಮರ್ಷಿರ್ಲೋಕಪೂಜಿತಃ ।
ದ್ವೈಪಾಯನೋಽಭ್ಯುಪಾಗಮ್ಯ ರಾಜಾನಮಿದಮಬ್ರವೀತ್ ॥೫॥

ಹೀಗೆ ಆಶ್ರಮಕ್ಕೆ ಬಂದ ರಾಜನನ್ನು ಧೀಮಂತರಾದ, ಬ್ರಹ್ಮರ್ಷಿಗಳಾದ, ಲೋಕಪೂಜಿತರಾದ ದ್ವೈಪಾಯನರು ಸಂಧಿಸಿ ಈ ವಾಕ್ಯವನ್ನು ಹೇಳಿದರು.

ವ್ಯಾಸಃ

ಧೃತರಾಷ್ಟ್ರ ಮಹಾಬಾಹೋ ಶೃಣು ಕೌರವನಂದನ ।
ಶ್ರುತಾಸ್ತೇ ಜ್ಞಾನವೃದ್ಧಾನಾಮೃಷೀಣಾಂ ಪುಣ್ಯಕರ್ಮಣಾಮ್ ॥೬॥

ಅದ್ಧಾಭಿಜನವೃದ್ಧಾನಾಂ ವೇದವೇದಾಂಗವೇದಿನಾಮ್ ।
ಧರ್ಮಜ್ಞಾನಾಂ ಪುರಾಣಾನಾಂ ವದತಾಂ ವಿವಿಧಾಃ ಕಥಾಃ ॥೭॥

ವ್ಯಾಸರು– ಹೇ ಮಹಾಬಾಹುವೇ, ಕೌರವನಂದನನೇ, ಧೃತರಾಷ್ಟ್ರನೇ, ನೀನು ಜ್ಞಾನವೃದ್ಧರಾದ, ಪುಣ್ಯಕರ್ಮಿಗಳಾದ ಜ್ಞಾನಿಜನರ ಮಧ್ಯೆ ವೃದ್ಧರಾದ, ವೇದ ವೇದಾಂಗಗಳನ್ನು ಚೆನ್ನಾಗಿ ತಿಳಿದಿರುವ, ಬ್ರಹ್ಮಜ್ಞರಾದ, ಪುರಾಣ ಋಷಿಗಳ ಬಾಯಿಂದ ನಾನಾ ರೀತಿಯ ಪುಣ್ಯಕಥೆಗಳನ್ನು ಕೇಳಿರುವೆ.

ಮಾ ಸ್ಮ ಶೋಕೇ ಮನಃ ಕಾರ್ಷೀರ್ದಿಷ್ಟೇ ನ ವ್ಯಥತೇ ಬುಧಃ ।
ಶ್ರುತಂ ದೇವರಹಸ್ಯಂ ತೇ ನಾರದಾದ್ ದೇವದರ್ಶನಾತ್ ॥೮॥

ಯಾವತ್ತೂ ಮನಸ್ಸಿನಲ್ಲಿ ಶೋಕಿಸಬೇಡ. ಬುದ್ಧಿವಂತನಾದವನು ವಿಧಿಯ ವಿಷಯದಲ್ಲಿ ವ್ಯಥೆ ಪಡಲಾರನು. ದೇವತೆಗಳ ಅಭಿಪ್ರಾಯವನ್ನೂ ತಿಳಿಯಬಲ್ಲ ನಾರದರಿಂದ ನಿನಗೆ ದೇವರಹಸ್ಯವೂ ಹೇಳಲ್ಪಟ್ಟಿದೆ.

ಗತಾಸ್ತೇ ಕ್ಷತ್ರಧರ್ಮೇಣ ಶಸ್ತ್ರಪೂತಾಂ ಗತಿಂ ಶುಭಾಮ್ ।
ಯಥಾ ದೃಷ್ಟಾಸ್ತ್ವಯಾ ಪುತ್ರಾಸ್ತಥಾ ಕಾಮವಿಹಾರಿಣಃ ॥೯॥

ಯುದ್ಧದಲ್ಲಿ ಮಡಿದ ಆ ಎಲ್ಲರೂ ಕ್ಷತ್ರಧರ್ಮದಿಂದ ಶಸ್ತ್ರಾಸ್ತ್ರಗಳಿಂದ ಪವಿತ್ರವಾದ, ಮಂಗಳಮಯವಾದ ಗತಿಯನ್ನು ಪಡೆದಿರುವರು. ಯಾವ ರೀತಿ ನೀನು ನಿನ್ನ ಮಕ್ಕಳನ್ನು ನೋಡಿರುವೆಯೋ ಅದೇ ರೀತಿ ಅವರೆಲ್ಲರೂ ಮನಸಾರೆ ವಿಹರಿಸುತ್ತಿರುವರು.

ಯುಧಿಷ್ಠಿರಃ ಸ್ವಯಂ ಧೀಮಾನ್ ಭವಂತಮನುರುದ್ಧ್ಯತೇ ।
ಸಹಿತೋ ಭ್ರಾತೃಭಿಃ ಸರ್ವೈಃ ಸದಾರಃ ಸಸುಹೃಜ್ಜನಃ ॥೧೦॥

ಯುಧಿಷ್ಠಿರನು ಸ್ವಯಂ ಬುದ್ಧಿಶಾಲಿಯಾದರೂ ಎಲ್ಲ ಸಹೋದರರೊಂದಿಗೆ, ಪತ್ನಿಯರೊಂದಿಗೆ ಮತ್ತು ಮಿತ್ರರೊಂದಿಗೆ ಕೂಡಿಕೊಂಡು ನಿನ್ನನ್ನೇ ಅನುಸರಿಸುತ್ತಿದ್ದಾನೆ.

ವಿಸರ್ಜಯೈನಂ ಯಾತ್ವೇಷ ಸ್ವರಾಜ್ಯಮನುಶಾಸತಾಮ್ ।
ಮಾಸಃ ಸಮಧಿಕಸ್ತೇಷಾಮತೀತೋ ವಸತಾಂ ವನೇ ॥೧೧॥

ಆ ಯುಧಿಷ್ಠಿರನನ್ನು ಇಲ್ಲಿಂದ ಹಿಂದೆ ಕಳುಹಿಸು. ಇವನು ಹಿಂದಿರುಗಿ ಹೋಗಿ ತನ್ನ ರಾಜ್ಯವನ್ನು ಚೆನ್ನಾಗಿ ಪಾಲಿಸಲಿ. ಅವರೆಲ್ಲರೂ ಕಾಡಿನಲ್ಲಿ ವಾಸ ಮಾಡಲು ಆರಂಭಿಸಿ ಈಗಾಗಲೇ ಒಂದು ಮಾಸ ಕಳೆದಿದೆ.

ಏತದ್ಧಿ ನಿತ್ಯಂ ಯತ್ನೇನ ಪದಂ ರಕ್ಷ್ಯಂ ನರಾಧಿಪ ।
ಬಹುಪ್ರತ್ಯರ್ಥಿಕಂ ಹ್ಯೇತದ್ ರಾಜ್ಯಂ ನಾಮ ಕುರೂದ್ವಹ ॥೧೨॥

ಹೇ ನರಾಧಿಪನೇ, ಈ ರಾಜಪದವಿಯಾದರೂ ನಿತ್ಯವೂ ಪ್ರಯತ್ನಪೂರ್ವಕವಾಗಿ ರಕ್ಷಿಸಲ್ಪಡಬೇಕಾದುದು. ಕುರೂದ್ವಹನೇ, ಈ ರಾಜ್ಯವೆಂದರೆ ಬಹುಮಂದಿ ಶತ್ರುಗಳಿಂದ ಕೂಡಿರುತ್ತದೆ.

ವೈಶಂಪಾಯನಃ

ಇತ್ಯುಕ್ತಃ ಕೌರವ್ಯೋ ರಾಜಾ ವ್ಯಾಸೇನಾಮಿತಬುದ್ಧಿನಾ ।
ಯುಧಿಷ್ಠಿರಮಥಾಹೂಯ ವಾಗ್ಮೀ ವಚನಮಬ್ರವೀತ್ ॥೧೩॥

ವೈಶಂಪಾಯನ– ಅಮಿತಬುದ್ಧಿಯುಳ್ಳ ವೇದವ್ಯಾಸರು ಕೌರವರಾಜನಾದ ಧೃತರಾಷ್ಟ್ರನಿಗೆ ಹೀಗೆ ಹೇಳಿದಾಗ ವಾಗ್ಮಿಯಾದ ಅವನು ಯುಧಿಷ್ಠಿರನನ್ನು ಕರೆಸಿ ಈ ಮಾತನ್ನು ಹೇಳಿದನು.

ಧೃತರಾಷ್ಟ್ರಃ

ಅಜಾತಶತ್ರೋ ಭದ್ರಂ ತೇ ಶೃಣು ಮೇ ಭ್ರಾತೃಭಿಃ ಸಹ ।
ತತ್ಪ್ರಸಾದಾನ್ಮಹೀಪಾಲ ಶೋಕೋ ನಾಸ್ಮಾನ್ ಪ್ರಬಾಧತೇ ॥೧೪॥

ಧೃತರಾಷ್ಟ್ರ– ಹೇ ಅಜಾತಶತ್ರುವೇ, ನಿನಗೆ ಮಂಗಳವಾಗಲಿ. ಸಹೋದರರೊಂದಿಗೆ ನಾನಾಡುವ ಮಾತುಗಳನ್ನು ಕೇಳು. ಹೇ ಮಹೀಪಾಲನೇ, ನಿನ್ನ ಪ್ರಸಾದದಿಂದ ನಮ್ಮನ್ನು ಶೋಕವು ಬಾಧಿಸುತ್ತಿಲ್ಲ.

ರಮೇ ಚಾಹಂ ತ್ವಯಾ ಪುತ್ರ ಪುರೇವ ಗಜಸಾಹ್ವಯೇ ।
ನಾಥೇನಾನುಗತೋ ವಿದ್ವನ್ ಪ್ರಿಯೇಷು ಪರಿವರ್ತಿನಾ ॥೧೫॥

ಹೇ ಪುತ್ರನೇ, ವಿದ್ವಾಂಸನೇ, ನಾಥನಾದ ಪ್ರಿಯ ವಿಚಾರಗಳಲ್ಲಿ ನನ್ನೊಂದಿಗೇ ಇದ್ದು ನನ್ನನ್ನು ಅನುಸರಿಸುತ್ತಿರುವ ನಿನ್ನಿಂದ ನಾನು ಹಸ್ತಿನಾಪುರದಲ್ಲಿ ಇದ್ದಂತೆಯೇ ಸಂತೋಷವಾಗಿರುವೆನು.

ಪ್ರಾಪ್ತಂ ಪುತ್ರಫಲಂ ತತ್ತಃ ಪ್ರೀತಿರ್ಮೇ ಪರಮಾ ತ್ವಯಿ ।
ನ ಮೇ ಮನ್ಯುರ್ಮಹಾಬಾಹೋ ಗಮ್ಯತಾಂ ಮಾ ಚಿರಂ ಕೃಥಾಃ ॥

ಹೇ ಮಹಾಬಾಹುವೇ, ನಿನ್ನಿಂದಾಗಿ ನನಗೆ ಮಕ್ಕಳನ್ನು ನೋಡುವ ಭಾಗ್ಯವೂ ಲಭಿಸಿದೆ. ನಿನ್ನ ಬಗ್ಗೆ ನನಗೆ ಅಪಾರವಾದ ಪ್ರೀತಿಯಿದೆ. ನಿನ್ನಲ್ಲಿ ನನಗೆ ಯಾವ ಕೋಪವೂ ಇರುವುದಿಲ್ಲ. ಹಾಗಾಗಿ ತಡಮಾಡದೆ ಇಲ್ಲಿಂದ ಪಟ್ಟಣಕ್ಕೆ ಹೊರಡು.

ಭವಂತಂ ಚೇಹ ಸಂಪ್ರೇಕ್ಷ್ಯ ತಪೋ ಮೇ ಪರಿಹೀಯತೇ ।
ಉಪಯುಕ್ತಂ ಶರೀರಂ ಚ ತ್ವಾಂ ದೃಷ್ಟ್ವಾ ಧಾರಿತಂ ಪುನಃ ॥೧೭॥

ನಿನ್ನನ್ನು ನಾನು ಇಲ್ಲಿ ನೋಡುತ್ತಲೇ ಇದ್ದರೆ ನನ್ನ ತಪಸ್ಸು ಕ್ಷೀಣವಾಗುತ್ತದೆ. ನಿನ್ನನ್ನು ನೋಡಿಯೇ ಉಳಿಸಿಕೊಂಡ ಈ ಶರೀರವು ಅತ್ಯಂತ ಉಪಯುಕ್ತವಾದುದು (ಅದು ಹಾಳಾಗಬಾರದು).

ಮಾತರೌ ತೇ ತಥೈವೇಮೇ ಶೀರ್ಣಪರ್ಣಕೃತಾಶನೇ ।
ಮಮ ತುಲ್ಯವ್ರತೇ ಪುತ್ರ ನ ಚಿರಂ ವರ್ತಯಿಷ್ಯತಃ ॥೧೮॥

ಈ ನಿನ್ನ ಇಬ್ಬರು ತಾಯಂದಿರು ತಾನಾಗಿ ಬಿದ್ದ ಎಲೆಗಳನ್ನು ಸೇವಿಸುತ್ತಾ, ನನಗೆ ಸಮಾನವಾದ ವ್ರತವನ್ನು ಆಚರಿಸುತ್ತಿದ್ದಾರೆ. ಆದ್ದರಿಂದ ಹೇ ಮಗನೇ, ಇವರು ಬಹುಕಾಲ ಉಳಿಯುವುದಿಲ್ಲ.

ದುರ್ಯೋಧನಪ್ರಭೃತಯೋ ದೃಷ್ಟ್ವಾ ಲೋಕಾಂತರಂ ಗತಾಃ ।
ವ್ಯಾಸಸ್ಯ ತಪಸೋ ವೀರ್ಯಾದ್ ಭವತಶ್ಚ ಸಮಾಗಮಾತ್ ॥೧೯॥

ದುರ್ಯೋಧನನೇ ಮೊದಲಾದ ಪರಲೋಕಕ್ಕೆ ಹೋದ ನನ್ನ ಮಕ್ಕಳು ವೇದವ್ಯಾಸರ ತಪೋಬಲದಿಂದ ಮತ್ತು ನಿನ್ನ ಸಮಾಗಮದಿಂದ ನನ್ನಿಂದ ನೋಡಲ್ಪಟ್ಟರು.

ಪ್ರಯೋಜನಂ ಚಿರಂ ವೃತ್ತಂ ಜೀವಿತಸ್ಯ ಮಮಾನಘ ।
ಉಗ್ರಂ ತಪಃ ಸಮಾಸ್ಥಾಸ್ಯೇ ತ್ವಮನುಜ್ಞಾತುಮರ್ಹಸಿ ॥೨೦॥

ಹೇ ಅನಘನೇ, ನನ್ನ ಜೀವಿತಕ್ಕೆ ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಪ್ರಯೋಜನವು ಪ್ರಾಪ್ತವಾಯಿತು. ಇನ್ನು ಮುಂದೆ ನಾನು ಉಗ್ರವಾದ ತಪಸ್ಸನ್ನು ಆಚರಿಸಲಿರುವೆನು. ಇದಕ್ಕೆ ನೀನು ಅನುಜ್ಞೆಯನ್ನು ನೀಡಬೇಕು.

ತ್ವಯ್ಯದ್ಯ ಪಿಂಡಃ ಕೀರ್ತಿಶ್ಚ ಕುಲಂ ಚೇದಂ ಪ್ರತಿಷ್ಠಿತಮ್ ।
ಶ್ವೋ ವಾऽದ್ಯ ವಾ ಮಹಾಬಾಹೋ ಗಮ್ಯತಾಂ ಮಾ ಚಿರಂ ಕೃಥಾಃ ॥

ಇಂದು ಪಿತೃಗಳಿಗೆ ಪಿಂಡದ ಹೊಣೆಗಾರಿಕೆಯೂ, ವಂಶದ ಕೀರ್ತಿಯೂ ಈ ಇಡೀ ಕುಲವೂ ನಿನ್ನಲ್ಲೇ ಪ್ರತಿಷ್ಠಿತವಾಗಿದೆ. ಆದ್ದರಿಂದ ಹೇ ಮಹಾಬಾಹುವೇ, ನಾಳೆಯಾಗಲಿ ಇಂದೇ ಆಗಲೀ ನೀನು ಹೊರಟುಬಿಡು. ತಡ ಮಾಡಬೇಡ.

ರಾಜನೀತಿಃ ಸುಬಹುಶಃ ಶ್ರುತಾ ತೇ ಭರತರ್ಷಭ ।
ಸಂದೇಷ್ಟವ್ಯಂ ನ ಪಶ್ಯಾಮಿ ಕೃತಮೇತಾವತಾ ವಿಭೋ ॥೨೨॥

ಹೇ ಭರತರ್ಷಭನೇ, ನೀನು ಅನೇಕರಿಂದ ರಾಜನೀತಿಯನ್ನು ಚೆನ್ನಾಗಿ ಕೇಳಿ ತಿಳಿದಿರುವೆ. ಆದ್ದರಿಂದ ಆ ಬಗ್ಗೆ ನಿನಗೆ ಹೇಳಬೇಕಾದುದೇನೂ ನನಗೆ ತೋಚುವುದಿಲ್ಲ. ಹೇ ವಿಭುವೇ, ಇಷ್ಟು ಮಾತು ಸಾಕೆಂದು ಕಾಣುತ್ತದೆ.

ವೈಶಂಪಾಯನಃ

ಇತ್ಯುಕ್ತವಚನಂ ತಂ ತು ನೃಪೋ ರಾಜಾನಮಬ್ರವೀತ್ ।
ನ ಮಾಮರ್ಹಸಿ ಧರ್ಮಜ್ಞ ಪರಿತ್ಯಕ್ತುಮನಾಗಸಮ್ ॥೨೩॥

ವೈಶಂಪಾಯನ– ಹೀಗೆ ಧೃತರಾಷ್ಟ್ರರಾಜನು ಹೇಳಿದಾಗ- 'ಹೇ ಧರ್ಮಜ್ಞನೇ, ಅಪಚಾರವನ್ನು ಮಾಡದ ನನ್ನನ್ನು ಪರಿತ್ಯಜಿಸುವುದು ಸರಿಯಲ್ಲ' ಎಂದು ಧೃತರಾಷ್ಟ್ರನಲ್ಲಿ ಹೇಳಿದನು.

ಕಾಮಂ ಗಚ್ಛಂತು ಮೇ ಸರ್ವೇ ಭ್ರಾತರೋऽನುಚರಾಸ್ತಥಾ ।
ಭವಂತಮಹಮನ್ವಿಷ್ಯೇ ಮಾತರೌ ಚ ಯತವ್ರತಃ ॥೨೪॥

ನನ್ನ ಎಲ್ಲ ಸಹೋದರರು ಹಾಗೂ ಅನುಚರರು ನಿಶ್ಚಯವಾಗಿ ಪಟ್ಟಣಕ್ಕೆ ಹೋಗಲಿ. ನಾನು ಮಾತ್ರ ವ್ರತನಿಷ್ಠನಾಗಿ ನಿನ್ನನ್ನೂ, ನನ್ನ ತಾಯಂದಿರನ್ನೂ ಅನುಸರಿಸುತ್ತೇನೆ.

ತಮುವಾಚಾಥ ಗಾಂಧಾರೀ ಮೈವಂ ಪುತ್ರ ಶ್ರುಣುಷ್ವ ಚ ।
ತ್ವಯ್ಯಧೀನಂ ಕುರುಕುಲಂ ಪಿಂಡಶ್ಚ ಶ್ವಶುರಸ್ಯ ಮೇ ॥೨೫॥

ಆಗ ಗಾಂಧಾರೀದೇವಿಯು ಹೇ ಮಗನೇ, ಈ ರೀತಿ ಮಾಡದಿರು. ನಾನು ಹೇಳುವುದನ್ನು ಕೇಳು. ಇಡೀ ಕುರುಕುಲವು ಹಾಗೂ ನನ್ನ ಮಾವನವರಿಗೆ ಮಾಡಬೇಕಾದ ಪಿಂಡದಾನವು ನಿನ್ನ ಅಧೀನವಾಗಿದೆ.

ಗಮ್ಯತಾಂ ಪುತ್ರ ಪರ್ಯಾಪ್ತಮೇತಾವತ್ಪೂಜಿತಾ ವಯಮ್ ।
ರಾಜಾ ಯದಾಹ ತತ್ಕಾರ್ಯಂ ತ್ವಯಾ ಪುತ್ರ ಪಿತುರ್ವಚಃ ॥೨೬॥

ಹೇ ಮಗನೇ, ಇಷ್ಟು ಕಾಲ ನೀನೇನು ನಮ್ಮ ಸೇವೆ ಮಾಡಿದೆಯೋ ಅದು ಪರಿಪೂರ್ಣವಾಯಿತು. ಆದ್ದರಿಂದ ನೀನು ಹೊರಟುಬಿಡು. ಮಗನೇ, ರಾಜನಾದ ಧೃತರಾಷ್ಟ್ರನು ಏನು ಹೇಳಿರುವನೋ ಅದು ನಿನ್ನ ತಂದೆಯ ಮಾತು. ತಂದೆಯ ಮಾತನ್ನು ನೀನು ಪಾಲಿಸಲೇಬೇಕು ಎಂದು ಹೇಳಿದಳು.

ವೈಶಂಪಾಯನಃ

ಇತ್ಯುಕ್ತಃ ಸ ತು ಗಾಂಧಾರ್ಯಾ ಕುಂತೀಮಿದಮಭಾಷತ ।
ಸ್ನೇಹಬಾಷ್ಪಾಕುಲೇ ನೇತ್ರೇ ಪರಿಮೃಜ್ಯ ವಿನೀತವತ್ ॥೨೭॥

ವೈಶಂಪಾಯನ– ಗಾಂಧಾರಿಯು ಹೀಗೆ ಹೇಳಿದಾಗ, ಆ ಯುಧಿಷ್ಠಿರನು ವಿನೀತನಾಗಿ ಸ್ನೇಹಬಾಷ್ಪದಿಂದ ಕೂಡಿದ ಕಣ್ಣುಗಳನ್ನು ಒರೆಸಿಕೊಳ್ಳುತ್ತಾ, ಕುಂತಿಯನ್ನು ಕುರಿತು ಹೀಗೆ ಹೇಳಿದನು.

ವಿಸರ್ಜಯತಿ ಮಾಂ ರಾಜಾ ಗಾಂಧಾರೀ ಚ ಯಶಸ್ವಿನೀ ।
ಭವತಾಂ ಬದ್ಧಚಿತ್ತಸ್ತು ಕಥಂ ಯಾಸ್ಯಾಮಿ ದುಃಖಿತಃ ॥೨೮॥

ರಾಜನಾದ ಧೃತರಾಷ್ಟ್ರನೂ, ಯಶಸ್ವಿನಿಯಾದ ಗಾಂಧಾರಿಯೂ ನನ್ನನ್ನು ತ್ಯಜಿಸುತ್ತಿದ್ದಾರೆ. ನಿಮ್ಮಲ್ಲೇ ಮನಸ್ಸನ್ನು ಇಟ್ಟ ನಾನು ದುಃಖಿತನಾಗಿ ಹೇಗೆ ಹೋಗಲಿ?

ನ ಚೋತ್ಸಹೇ ತಪೋವಿಘ್ನಂ ಕರ್ತುಂ ತೇ ಧರ್ಮಚಾರಿಣಿ ।
ತಪಸೋ ಹಿ ಪರಂ ನಾಸ್ತಿ ತಪಸಾ ವಿಂದತೇ ಮಹತ್ ॥೨೯॥

ಹೇ ಧರ್ಮಚಾರಿಣಿಯೇ, ನಿಮ್ಮ ತಪಸ್ಸಿಗೆ ವಿಘ್ನವನ್ನುಂಟು ಮಾಡಲು ನನಗೆ ಮನಸ್ಸಿಲ್ಲ. ಏಕೆಂದರೆ ತಪಸ್ಸಿಗಿಂತ ದೊಡ್ಡದಾದುದು ಯಾವುದೂ ಇಲ್ಲ. ತಪಸ್ಸಿನಿಂದ ಮಹತ್ಫಲವು ದೊರೆಯುತ್ತದೆ.

ಮಮಾಪಿ ನ ತಥಾ ರಾಜ್ಞಿ ರಾಜ್ಯೇ ಬುದ್ಧಿರ್ಯಥಾ ಪುರಾ ।
ತಪಸ್ಯೇವಾನುರಕ್ತಂ ಮೇ ಮನಃ ಸರ್ವಾತ್ಮನಾ ತಥಾ ॥೩೦॥

ಹೇ ರಾಜ್ಞಿಯೇ, ನನಗೂ ಹಿಂದೆ ಇದ್ದಂತೆ ಈಗ ರಾಜ್ಯದಲ್ಲಿ ಆಸಕ್ತಿಯಿಲ್ಲ. ನನ್ನ ಮನಸ್ಸೂ ಕೂಡ ನಿಮ್ಮಂತೆಯೇ ಸರ್ವ ರೀತಿಯಲ್ಲಿ ತಪಸ್ಸಿನಲ್ಲಿಯೇ ಅನುರಕ್ತವಾಗಿದೆ.

ಶೂನ್ಯೇಯಂ ಚ ಮಹೀ ಕೃತ್ಸ್ನಾ ನ ಮೇ ಪ್ರೀತಿಕರೀ ಶುಭೇ ।
ಬಾಂಧವಾಃ ನಃ ಪರಿಕ್ಷೀಣಾ ಬಲಂ ನೋ ನ ಯಥಾ ಪುರಾ ॥೩೧॥

ಹೇ ಮಂಗಳಮಯಳೇ, ಈ ಇಡೀ ಭೂಮಿಯು ಶೂನ್ಯವಾಗಿದ್ದು ನನಗೆ ಸಂತೋಷವನ್ನು ನೀಡುತ್ತಿಲ್ಲ. ನಮ್ಮ ಬಾಂಧವರೆಲ್ಲರೂ ಯುದ್ಧದಲ್ಲಿ ನಾಶವಾಗಿದ್ದಾರೆ. ನಮಗೂ ಕೂಡ ಹಿಂದಿನಂತೆ ದೇಹಬಲವು ಇಲ್ಲ.

ಪಾಂಚಾಲಾಃ ಸುಭೃಶಂ ಕ್ಷೀಣಾಃ ಕನ್ಯಾಮಾತ್ರಾವಶೇಷಿತಾಃ ।
ನ ತೇಷಾಂ ಕುಲಕರ್ತಾರಂ ಕಂಚಿತ್ ಪಶ್ಯಾಮ್ಯಹಂ ಶುಭೇ ॥೩೨॥

ಹೇ ಮಂಗಳಮಯಳೇ, ಪಾಂಚಾಲರೂ ಕೂಡ ಬಹಳವಾಗಿ ಕ್ಷೀಣರಾಗಿದ್ದು ಕೇವಲ ಸ್ತ್ರೀ ಸಂತಾನ ಮಾತ್ರ ಉಳಿದಿದೆ. ಅವರ ಕುಲವನ್ನು ಬೆಳೆಸುವ ಏನನ್ನೂ ನಾನು ನೋಡಲಾರದವನಾಗಿದ್ದೇನೆ.

ಸರ್ವೇ ಹಿ ಭಸ್ಮಸಾನ್ನೀತಾಸ್ತೇ ದ್ರೋಣೇನ ರಣಾಜಿರೇ ।
ಅವಶಿಷ್ಟಾಶ್ಚ ನಿಹತಾ ದ್ರೋಣಪುತ್ರೇಣ ವೈ ನಿಶಿ ॥೩೩॥

ಅವರೆಲ್ಲರೂ ದ್ರೋಣಾಚಾರ್ಯರಿಂದ ಯುದ್ಧದಲ್ಲಿ ಸುಟ್ಟುಹೋಗಿರುವರು. ಉಳಿದ ಕೆಲವರೂ ಕೂಡ ದ್ರೋಣಪುತ್ರರಾದ ಅಶ್ವತ್ಥಾಮರಿಂದ ರಾತ್ರಿವೇಳೆಯಲ್ಲಿ ಹತರಾಗಿರುವರು.

ಚೇದಯಶ್ಚೈವ ಮತ್ಸ್ಯಾಶ್ಚ ದೃಷ್ಟಪೂರ್ವಾಸ್ತಥೈವ ನಃ ॥೩೪॥

ನಮಗೆ ಬಂಧುಗಳಾದ ನಾವು ಹಿಂದೆ ನೋಡಿದ ಚೇದಿ ವಂಶದವರೂ, ಮತ್ಸ್ಯ ರಾಜದ ವಂಶದವರೂ ಪಾಂಚಾಲರಂತೆಯೇ ಕ್ಷೀಣರಾಗಿದ್ದಾರೆ.

ಕೇವಲಂ ವೃಷ್ಣಿಚಕ್ರಂ ಚ ವಾಸುದೇವಪರಿಗ್ರಹಾತ್ ।
ಯದ್ ದೃಷ್ಟ್ವಾ ಸ್ಥಾತುಮಿಚ್ಛಾಮಿ ಧರ್ಮಾರ್ಥಂ ನಾರ್ಥಹೇತುತಃ ॥

ಕೃಷ್ಣನನ್ನು ಗಟ್ಟಿಯಾಗಿ ನಂಬಿರುವುದರಿಂದ ಕೇವಲ ವೃಷ್ಣಿಗಳ ಸಮೂಹವು ಮಾತ್ರ ಉಳಿದಿದೆ. ಅವರನ್ನು ನೋಡಿ ಧರ್ಮಕ್ಕೋಸ್ಕರ ನಾನು ಇರಬೇಕೆಂದು ಬಯಸುವನೇ ಹೊರತು ಇನ್ನಾವ ಪುರುಷಾರ್ಥಕ್ಕೂ ಅಲ್ಲ.

ಶಿವೇನ ಪಶ್ಯ ನಃ ಸರ್ವಾನ್ ದುರ್ಲಭಂ ತವ ದರ್ಶನಮ್ ।
ಭವಿಷ್ಯತ್ಯೇವ ರಾಜಾ ಹಿ ತೀವ್ರಂ ಚಾರಪ್ಸ್ಯತೇ ತಪಃ ॥೩೬॥

ನಮ್ಮೆಲ್ಲರನ್ನೂ ಮಂಗಳಮಯವಾದ ದೃಷ್ಟಿಯಿಂದ ನೋಡಿಬಿಡು. ಮುಂದೆ ನಿನ್ನ ದರ್ಶನವು ದುರ್ಲಭವಾಗಲಿದೆ. ಏಕೆಂದರೆ ರಾಜನು ತೀವ್ರವಾದ ತಪಸ್ಸನ್ನು ಆರಂಭಿಸಲಿದ್ದಾನೆ.

ಏತಚ್ಛ್ರುತ್ವಾ ಮಹಾಬಾಹುಃ ಸಹದೇವೋ ಯುಧಾಂಪತಿಃ ।
ಯುಧಿಷ್ಠಿರಮುವಾಚೇದಂ ಬಾಷ್ಪವ್ಯಾಕುಲಲೋಚನಃ ॥೩೭॥

ಈ ಮಾತುಗಳನ್ನು ಕೇಳಿ ಮಹಾಬಾಹುವಾದ, ಸೇನಾಧಿಪತಿಯಾದ ಸಹದೇವನು ಕಣ್ಣೀರಿನಿಂದ ತೊಯ್ದ ಕಣ್ಣುಗಳುಳ್ಳವನಾಗಿ ಯುಧಿಷ್ಠಿರನನ್ನು ಕುರಿತು ಹೀಗೆಂದನು.

ನೋತ್ಸಹೇऽಹಂ ಪರಿತ್ಯಕ್ತುಂ ಮಾತರಂ ಭರತರ್ಷಭ ।
ಪ್ರತಿಯಾತು ಭವಾನ್ ಕ್ಷಿಪ್ರಂ ತಪಸ್ತಪ್ಸ್ಯಾಮ್ಯಹಂ ವನೇ ॥೩೮॥

ಹೇ ಭರತರ್ಷಭನೇ, ತಾಯಿಯನ್ನು ಬಿಟ್ಟು ಹೊರಡಲು ನನಗೂ ಮನಸ್ಸಿಲ್ಲ. ನೀನು ಶೀಘ್ರವಾಗಿ ಹಿಂದಿರುಗು. ನಾನು ಕಾಡಿನಲ್ಲಿದ್ದು ತಪಸ್ಸನ್ನು ಆಚರಿಸುವೆನು.

ಇಹೈವ ಶೋಷಯಿಷ್ಯಾಮಿ ತಪಸೇದಂ ಕಲೇವರಮ್ ।
ಪಾದಶುಶ್ರೂಷಣೇ ರಕ್ತೋ ರಾಜ್ಞೋ ಮಾತ್ರೋಸ್ತಥಾऽನಯೋಃ ॥೩೯॥

ನಾನು ಇಲ್ಲೇ ಇದ್ದು ರಾಜನ ಹಾಗೂ ಈ ಇಬ್ಬರು ತಾಯಂದಿರ ಪಾದ ಸೇವನೆಯನ್ನು ನಡೆಸುತ್ತಾ, ತಪಸ್ಸಿನಿಂದ ಈ ನನ್ನ ಶರೀರವನ್ನು ಒಣಗಿಸುತ್ತೇನೆ.

ತಮುವಾಚ ತತಃ ಕುಂತೀ ಪರಿಷ್ವಜ್ಯ ಮಹಾಭುಜಮ್ ।
ಗಮ್ಯತಾಂ ಪುತ್ರ ಮೈವಂ ತ್ವಂ ವೋಚಃ ಕುರು ವಚೋ ಮಮ ॥೪೦॥

ಆಗ ಕುಂತೀದೇವಿಯು ಮಹಾಪೂಜ್ಯನಾದ ಸಹದೇವನನ್ನು ಆಲಿಂಗಿಸಿ, ಹೇ ಮಗನೇ, ನೀನು ಹೀಗೆ ಹೇಳದಿರು. ನನ್ನ ಮಾತನ್ನು ಕೇಳು. ಇಲ್ಲಿಂದ ಹೊರಟುಬಿಡು ಎಂದು ಹೇಳಿದಳು.

ಆಗಮೋ ವಃ ಶಿವಾಃ ಸಂತು ಸ್ವಸ್ಥಾ ಭವತ ಪುತ್ರಕಾಃ ।
ಉಪರೋಧೋ ಭವೇದೇವಮಸ್ಮಾಕಂ ತಪಸಃ ಕೃತೇ ॥೪೧॥

ಹೇ ಮಕ್ಕಳೇ, ನಿಮ್ಮ ಆಗಮನವು ಮಂಗಳವನ್ನುಂಟು ಮಾಡಲಿ. ನೀವು ನಿಮ್ಮತನವನ್ನು ಬಿಡದೆ ಸ್ವಸ್ಥರಾಗಿರಿ. ನೀವಂದುಕೊಂಡಂತೆ ಇಲ್ಲೇ ಉಳಿದರೆ ನಮ್ಮ ತಪಸ್ಸಿಗೆ ತಡೆಯುಂಟಾಗುವುದು.

ತ್ವತ್ಸ್ನೇಹಪಾಶಬದ್ಧಾ ಚ ಹೀಯೇಯಂ ತಪಸಃ ಪರಾತ್ ।
ತಸ್ಮಾತ್ಪುತ್ರಕ ಗಚ್ಛ ತ್ವಂ ಶಿಷ್ಟಮಲ್ಪಂ ಚ ನಃ ಪ್ರಭೋ ॥೪೨॥

ಹೇ ಮಗನೇ, ನಿನ್ನ ಸ್ನೇಹಪಾಶಕ್ಕೆ ಬದ್ಧಳಾಗಿ ಉತ್ಕೃಷ್ಟವಾದ ತಪಸ್ಸನ್ನು ನಾನು ಬಿಟ್ಟುಬಿಟ್ಟೇನು! ಆದ್ದರಿಂದ ನೀನು ಇಲ್ಲಿಂದ ಹೊರಟುಬಿಡು. ಹೇ ಪ್ರಭುವೇ, ನಮ್ಮ ಜೀವನವು ಇನ್ನು ಸ್ವಲ್ಪವಷ್ಟೇ ಉಳಿದಿದೆ.

ಏವಂ ಸಂಸ್ತಂಭಿತಂ ವಾಕ್ಯೈಃ ಕುಂತ್ಯಾ ಬಹುವಿಧೈರ್ಮನಃ ।
ಸಹದೇವಸ್ಯ ರಾಜೇಂದ್ರ ರಾಜ್ಞಶ್ಚೈವ ವಿಶೇಷತಃ ॥೪೩॥

ಈ ರೀತಿ ಬಹುವಿಧವಾದ ಕುಂತಿಯ ವಾಕ್ಯದಿಂದ ಸಹದೇವನ ಮನಸ್ಸು ಸ್ತಂಭೀಭೂತವಾಯಿತು. ಹೇ ರಾಜೇಂದ್ರನೇ, ವಿಶೇಷವಾಗಿ ಯುಧಿಷ್ಠಿರನ ಮನಸ್ಸೂ ಸ್ತಂಭಿತವಾಯಿತು.

ತೇ ಮಾತ್ರಾ ಸಮನುಜ್ಞಾತಾ ರಾಜ್ಞಾ ಚ ಕುರುಪುಂಗವಾಃ ।
ಅಭಿವಾದ್ಯ ಕುರುಶ್ರೇಷ್ಠಮಾಮಂತ್ರಯಿತುಮಾರಭನ್ ॥೪೪॥

ಆಗ ಕುರುಪುಂಗವರಾದ ಅವರು ತಾಯಿಯಿಂದ ಅನುಜ್ಞೆಯನ್ನು ಪಡೆದುಕೊಂಡು, ರಾಜನಾದ ಧೃತರಾಷ್ಟ್ರನಿಂದಲೂ ಅನುಜ್ಞೆಯನ್ನು ಪಡೆದು, ಕುರುಶ್ರೇಷ್ಠನಾದ ಧೃತರಾಷ್ಟ್ರನನ್ನು ನಮಸ್ಕರಿಸಿ, ಅವನನ್ನು ಸಂಬೋಧಿಸಿ ಹೀಗೆಂದರು.

ಯುಧಿಷ್ಠಿರಃ

ರಾಜ್ಯಂ ಪ್ರತಿ ಗಮಿಷ್ಯಾಮಃ ಶಿವೇನ ಪ್ರತಿನಂದಿತಾಃ ।
ಅನುಜ್ಞಾತಾಸ್ತ್ವಯಾ ರಾಜನ್ ಗಮಿಷ್ಯಾಮೋ ವಿಕಲ್ಮಷಾಃ ॥೪೫॥

ಯುಧಿಷ್ಠಿರ– ನಿಮ್ಮ ಮಂಗಳಮಯವಾದ ಆಶೀರ್ವಾದದಿಂದ ಸಂತೋಷಪಟ್ಟು ನಾವು ರಾಜ್ಯಕ್ಕೆ ಹಿಂದಿರುಗಿ ಹೋಗುತ್ತೇವೆ. ಹೇ ರಾಜನೇ, ನಿನ್ನಿಂದ ಅನುಜ್ಞೆ ಪಡೆದು ಯಾವುದೇ ಬೇಸರವಿಲ್ಲದೆ ಹಿಂದಿರುಗುತ್ತೇವೆ.

ಏವಮುಕ್ತಃ ಸ ರಾಜರ್ಷಿರ್ಧರ್ಮರಾಜ್ಞಾ ಮಹಾತ್ಮನಾ ।
ಅನುಜಜ್ಞೇ ಜಯಾಶೀರ್ಭಿಃ ಪೂಜಯಿತ್ವಾ ಯುಧಿಷ್ಠಿರಮ್ ॥೪೬॥

ಹೀಗೆ ಮಹಾತ್ಮನಾದ ಧರ್ಮರಾಜನು ಹೇಳಿದಾಗ ರಾಜರ್ಷಿಯಾದ ಧೃತರಾಷ್ಟ್ರನು ಯುಧಿಷ್ಠಿರನನ್ನು ಅಭಿನಂದಿಸಿ, ಜಯವಾಗಲಿ ಎಂಬ ಆಶೀರ್ವಾದದೊಂದಿಗೆ ಅನುಜ್ಞೆ ನೀಡಿದನು.

ಭೀಮಂ ಚ ಬಲಿನಂ ಶ್ರೇಷ್ಠಂ ಸಾಂತ್ವಯಾಮಾಸ ಪಾರ್ಥಿವಃ ।
ಸ ಚಾಸ್ಯ ಸಮ್ಯಗ್-ಮೇಧಾವೀ ಪ್ರತ್ಯಪದ್ಯತ ವೀರ್ಯವಾನ್ ॥೪೭॥

ಮಹಾಬಲಿಷ್ಠನಾದ, ಪಾಂಡವಶ್ರೇಷ್ಠನಾದ ಭೀಮನನ್ನೂ ಕೂಡ ರಾಜನು ಸಮಾಧಾನಪಡಿಸಿದನು. ಮೇಧಾವಿಯಾದ, ಪರಾಕ್ರಮಿಯಾದ ಆ ಭೀಮನು ಇವನ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಂಡನು.

ಅರ್ಜುನಂ ಚ ಸಮಾಶ್ಲಿಷ್ಯ ಯಮೌ ಚ ಭರತರ್ಷಭೌ ।
ಅನುಜಜ್ಞೇ ಸ ಕೌರವ್ಯಃ ಪರಿಷ್ವಜ್ಯಾಭಿನಂದ್ಯ ಚ ॥೪೮॥

ಕೌರವ್ಯನಾದ ಆ ಅರ್ಜುನನನ್ನೂ ಆಲಿಂಗಿಸಿ, ಭರತಶ್ರೇಷ್ಠರಾದ ಅವಳಿ ಮಕ್ಕಳನ್ನೂ ಆಲಿಂಗಿಸಿ, ಅವರನ್ನು ಅಭಿನಂದಿಸಿ ಅವರಿಗೂ ಅನುಜ್ಞೆ ನೀಡಿದನು.

ಗಾಂಧಾರ್ಯಾ ಚಾಭ್ಯನುಜ್ಞಾತಾಃ ಕೃತಪಾದಾಭಿವಾದನಾಃ ।
ಜನನ್ಯಾ ಸಮುಪಾಘ್ರಾತಾಃ ಪರಿಷ್ವಕ್ತಾಶ್ಚ ತೇ ನೃಪಮ್ ॥೪೯॥

ಚಕ್ರುಃ ಪ್ರದಕ್ಷಿಣಂ ಸರ್ವೇ ವತ್ಸಾ ಇವ ನಿವಾರಣೇ ।
ಪುನಃ ಪುನರ್ನಿರೀಕ್ಷಂತಃ ಪ್ರಚಕ್ರುಸ್ತೇ ಪ್ರದಕ್ಷಿಣಮ್ ॥೫೦॥

ಗಾಂಧಾರಿಗೂ ಪಾದಾಭಿವಂದನೆಯನ್ನು ಮಾಡಿ, ಅವಳ ಅನುಜ್ಞೆಯನ್ನು ಪಡೆದು, ತಾಯಿಯಾದ ಕುಂತೀದೇವಿಯಿಂದ ಆಲಿಂಗಿತರಾಗಿ ಹಾಗೂ ನೆತ್ತಿಯಲ್ಲಿ ಆಘ್ರಾಣಿಸಲ್ಪಟ್ಟು, ಅವರೆಲ್ಲರೂ ರಾಜನಿಗೆ ಪ್ರದಕ್ಷಿಣೆ ಬಂದರು. ಹಸುವಿನ ಹಾಲುಣ್ಣದಂತೆ ತಡೆದಾಗ ವತ್ಸಗಳು ಹೇಗೋ ಹಾಗೆ ಮತ್ತೆ ಮತ್ತೆ ಅವನನ್ನೇ ನೋಡುತ್ತಾ ಅವರು ಪ್ರದಕ್ಷಿಣೆ ಮಾಡಿದರು.

ದ್ರೌಪದೀಪ್ರಮುಖಾಶ್ಚೈವ ಸರ್ವಾಃ ಕೌರವಯೋಷಿತಃ ।
ನ್ಯಾಯತಃ ಶ್ವಶುರೇ ವೃತ್ತಿಂ ಪ್ರಯುಜ್ಯ ಪ್ರಯಯುಸ್ತತಃ ॥೫೧॥

ದ್ರೌಪದಿಯೇ ಮೊದಲಾದ ಎಲ್ಲ ಕೌರವ ಸ್ತ್ರೀಯರೂ ಕೂಡ ಲೋಕನ್ಯಾಯಕ್ಕೆ ಅನುಸಾರವಾಗಿ, ಮಾವನಲ್ಲಿ ನಡೆಸಬೇಕಾದ ಆಚರಣೆಯನ್ನು ನಡೆಸಿ, ಅಲ್ಲಿಂದ ಹೊರಟರು.

ಶ್ವಶ್ರೂಭ್ಯಾಂ ಸಮನುಜ್ಞಾತಾಃ ಪರಿಷ್ವಜ್ಯಾಭಿನಂದಿತಾಃ ।
ಸಂದಿಷ್ಟಾಶ್ಚೇತಿಕರ್ತವ್ಯಂ ಪ್ರಯಯುರ್ಭರ್ತೃಭಿಃ ಸಹ ॥೫೨॥

ಅತ್ತೆಯರ ಅನುಜ್ಞೆಯನ್ನು ಪಡೆದು, ಅವರಿಂದ ಆಲಿಂಗಿತರಾಗಿ, ಅವರ ಅಭಿನಂದನೆಯನ್ನೂ ಸ್ವೀಕರಿಸಿ, ಹೇಗೆ ವರ್ತಿಸಬೇಕು ಎಂಬ ಸಂದೇಶವನ್ನೂ ಅವರಿಂದ ಪಡೆದು ತಮ್ಮ ಗಂಡಂದಿರೊಂದಿಗೆ ಹೊರಟರು.

ತತಃ ಪ್ರಜಜ್ಞೇ ನಿನದಃ ಸೂತಾನಾಂ ಯುಜ್ಯತಾಮಿತಿ ।
ಉಷ್ಟ್ರಾಣಾಂ ಕ್ರೋಶತಾಂ ಚಾಪಿ ಹಯಾನಾಂ ಹೇಷತಾಮಪಿ ॥೫೩॥

ಇಷ್ಟಾದ ನಂತರ 'ರಥಗಳನ್ನು ಹೂಡಿರಿ' ಎಂಬ ಸೂತಜನರ ಶಬ್ದವೂ, ಕಿರುಚಾಡುತ್ತಿರುವ ಒಂಟೆಗಳ ಶಬ್ದವೂ, ಕೆನೆಯುತ್ತಿರುವ ಕುದುರೆಯ ಶಬ್ದವೂ ಕೇಳಿಬಂದಿತು.

ತತೋ ಯುಧಿಷ್ಠಿರೋ ರಾಜಾ ಸದಾರಃ ಸಹಸೈನಿಕಃ ।
ನಗರಂ ಹಸ್ತಿನಪುರಂ ಪುನರಾಯಾತ್ ಸಬಾಂಧವಃ ॥೫೪॥

ಅನಂತರ ರಾಜನಾದ ಯುಧಿಷ್ಠಿರನು ಪತ್ನಿಯರೊಂದಿಗೆ, ಸೈನಿಕರೊಂದಿಗೆ ಹಾಗೂ ಬಾಂಧವರಿಂದ ಕೂಡಿಕೊಂಡು ಹಸ್ತಿನಪುರ ನಗರವನ್ನು ಕುರಿತು ಹಿಂದಿರುಗಿ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಹಸ್ತಿನಪುರಂ ಪ್ರತಿ ಯುಧಿಷ್ಠಿರಪುನರಾಗಮನಂ ನಾಮ
ದ್ವಿಚತ್ವಾರಿಂಶೋऽಧ್ಯಾಯಃ ॥

॥ ಪುತ್ರದರ್ಶನಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಪುತ್ರದರ್ಶನಪರ್ವ ॥

★ ★ ★ ★ ★

ನಾರದಾಗಮನಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ೩೧ನೇ ಅಧ್ಯಾಯ

ವರ್ಷತ್ರಯಾಂತೇ ತ್ಮಸಮಾಹಿತಾಗ್ನಿಂ
ತ್ಯಕ್ತಾಗ್ನಿಭಸ್ಮೈರ್ವನಮಾಲಿಹದ್ಭಿಃ ।
ತೇ ಶುಶ್ರುವುರ್ಧೃತರಾಷ್ಟ್ರಂ ಸಭಾರ್ಯಂ
ಸಹೈವ ಕುಂತ್ಯಾ ಪರಿದಗ್ಧದೇಹಮ್ ॥

ತನ್ನೆದೆಯಲ್ಲಿ ಔಪಾಸನಾಗ್ನಿಯನ್ನು ಸಮಾರೋಪ ಮಾಡಿಕೊಂಡಿದ್ದ ಧೃತರಾಷ್ಟ್ರ ಮೂರುವರ್ಷಗಳ ಕೊನೆಯಲ್ಲಿ ಆ ಅಗ್ನಿಯನ್ನು ಹೊರಗೆ ಇಟ್ಟಾಗ ಅದು ಕಾಡನ್ನು ಸುಡಲು ತೊಡಗಿತು. ಧೃತರಾಷ್ಟ್ರ, ಗಾಂಧಾರೀ ಸಹಿತನಾಗಿ ಕುಂತಿಯೊಂದಿಗೆ ಆ ಅಗ್ನಿಯಲ್ಲಿ ಶರೀರವನ್ನು ಸುಟ್ಟುಕೊಂಡುದನ್ನು ಪಾಂಡವರು ಕೇಳಿದರು.

ವೀಟಾಮುಖಾಂ ಧ್ಯಾನಪರಾ ನಿಶಮ್ಯ
ಸ್ವರ್ಯಾತಮಾತ್ಮೀಯಪಿತೃವ್ಯಮಾಶು ।
ಸಮೇತ್ಯ ಭರ್ತ್ರಾ ಪ್ರತಿಪೂಜ್ಯಮಾನಾಂ
ಕುಂತೀಂ ಚ ತಪ್ತಾ ವಿದಧುಃ ಕ್ರಿಯಾಶ್ಚ ॥

ಬೆಂಡನ್ನು ಬಾಯಲ್ಲಿ ಇಟ್ಟುಕೊಂಡು ಧ್ಯಾನಪರನಾಗಿ ಧೃತರಾಷ್ಟ್ರನು ಸ್ವರ್ಗಕ್ಕೆ

ತೆರಳಿದ್ದನ್ನೂ ಕುಂತಿ ಸ್ವರ್ಗವನ್ನು ಸೇರಿ ಪತಿಯೊಡನೆ ಪೂಜಿತಳಾದುದನ್ನೂ ನಾರದರಿಂದ ಕೇಳಿ ಪಾಂಡವರು ದುಃಖತಪ್ತರಾಗಿ ಉತ್ತರಕ್ರಿಯೆಗಳನ್ನು ನಡೆಸಿದರು.

ತೇ ವಿಷ್ಣುಭಕ್ತ್ಯಾ ಪರಿಪೂತಕರ್ಮಭಿ-
ರ್ಜ್ಞಾನೇನ ಚಾಂತೇ ತಮನುಸ್ಮರಂತಃ ।
ಪಾರ್ಥೈಃ ಸುಪುತ್ರೈಃ ಸುಕೃತೋರ್ಧ್ವಕರ್ಮಭಿ-
ರ್ವೃದ್ಧಿಂ ಸುಖಸ್ಯಾऽಪುರನಪ್ಯಯಾಂ ಶುಭಾಮ್ ॥

ಕುಂತೀ, ಗಾಂಧಾರೀ, ಧೃತರಾಷ್ಟ್ರರು ಪುಣ್ಯವಂತರು. ವಿಷ್ಣುಭಕ್ತಿಯಿಂದಲೂ ಪುಣ್ಯಕರ್ಮಗಳಿಂದಲೂ ಜ್ಞಾನದಿಂದಲೂ ಅಂತ್ಯಕಾಲದಲ್ಲಿ ಹರಿಯನ್ನು ಸದಾ ಸ್ಮರಿಸಿದರು. ಸುಪುತ್ರರಾದ ಪಾಂಡವರೂ ಅವರಿಗೆ ಚೆನ್ನಾಗಿ ಉತ್ತರಕ್ರಿಯೆ ಮಾಡಿದರು. ಅದರಿಂದ ಅವರು ಶಾಶ್ವತವಾದ ಆನಂದಾಭಿವೃದ್ಧಿಯನ್ನು ಹೊಂದಿದರು.

ಗಾವಲ್ಗಣೇರ್ವ್ಯಾಸಸಕಾಶಮೇತ್ಯ
ಶುಶ್ರೂಷಯಾ ತಸ್ಯ ಪುನರ್ನಿಜಾಂ ಗತಿಮ್ ।
ಪ್ರಪೇದಿವಾನ್ ಪಾಂಡುಸುತಾಶ್ಚ ಕೃಷ್ಣಂ
ಪ್ರತೀಕ್ಷಮಾಣಾಃ ಪೃಥಿವೀಮಶಾಸನ್ ॥

ಸಂಜಯ ವೇದವ್ಯಾಸರ ಬಳಿಗೆ ಬಂದು ಅವರ ಸೇವೆಯಿಂದ ನಿಜಗತಿಯನ್ನು ಪಡೆದನು. ಪಾಂಡವರೂ ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಎದುರು ನೋಡುತ್ತಾ ಭೂಮಿಯನ್ನು ಆಳಿದರು.

ಅಷ್ಟಾದಶಾಬ್ದಾಃ ಪೃಥಿವೀಂ ಸಮಸ್ತಾಂ
ಪ್ರಶಾಸತಾಮೇವಮಗುರ್ಮಹಾತ್ಮನಾಮ್ ।
ಅರಿಕ್ತಧರ್ಮಾರ್ಥಸುಖೋತ್ತಮಾನಾ-
ಮನುಜ್ಝಿತಾನಂತಪದಸ್ಮೃತೀನಾಮ್ ॥

ಮಹಾತ್ಮರಾದ ಪಾಂಡವರು ಹರಿಚರಣ ಸ್ಮರಣೆಯನ್ನು ಬಿಡದೆ, ಸದಾ ಮಾಡುತ್ತಾ ಪೂರ್ಣವಾದ ಧರ್ಮಾರ್ಥಮೋಕ್ಷಗಳಿಗೆ ಭಾಜನರಾಗಿ, ಸಮಸ್ತ ಪೃಥಿವಿಯನ್ನು ಆಳುತ್ತಿದ್ದಂತೆ ಹದಿನೆಂಟು ವರ್ಷಗಳು ಕಳೆದುವು.

ನಲವತ್ತೂರನೆಯ ಅಧ್ಯಾಯ

ನಾರದರು ಒಮ್ಮೆ ಹಸ್ತಿನಪುರಕ್ಕೆ ಬಂದು ಪಾಂಡವರಲ್ಲಿ ಧೃತರಾಷ್ಟ್ರಾದಿಗಳು ಸ್ವರ್ಗವನ್ನು ಪಡೆದರೆಂದು ತಿಳಿಸುವುದು. ಧೃತರಾಷ್ಟ್ರನು ಗಾಂಧಾರಿ, ಕುಂತಿ ಮತ್ತು ಸಂಜಯರಿಂದ ಕೂಡಿಕೊಂಡು ಗಂಗೆಯಲ್ಲಿ ಮಿಂದು, ತನ್ನ ಆಶ್ರಮಕ್ಕೆ ಹಿಂದಿರುಗುತ್ತಿರುವಾಗ ಮಾರ್ಗಮಧ್ಯದಲ್ಲಿ ದಾವಾಗ್ನಿಯು ಅವರನ್ನು ಸುತ್ತುವರಿಯುವುದು. ಧೃತರಾಷ್ಟ್ರನು ಸಂಜಯನನ್ನು ದೂರ ಹೋಗಲು ತಿಳಿಸಿ ಕುಂತಿ ಹಾಗೂ ಗಾಂಧಾರಿಯೊಂದಿಗೆ ಅಗ್ನಿಯನ್ನು ಪ್ರವೇಶಿಸುವುದು. ನಂತರ ಸಂಜಯನು ಹಿಮವತ್‌ಪರ್ವತಕ್ಕೆ ತೆರಳುವುದು.

ವೈಶಂಪಾಯನಃ

ತೇಷು ಚೋಪನಿವೃತ್ತೇಷು ಪಾಂಡವೇಷು ಯದೃಚ್ಛಯಾ ।
ದೇವರ್ಷಿರ್ನಾರದೋ ರಾಜನ್ನಾಜಗಾಮ ಯುಧಿಷ್ಠಿರಮ್ ॥೧॥

ವೈಶಂಪಾಯನ– ಪಾಂಡವರು ಯದೃಚ್ಛೆಯಿಂದ ಹಸ್ತಿನಾವತಿಗೆ ಬರುತ್ತಿರಲು; ಯುಧಿಷ್ಠಿರನನ್ನು ಕಾಣಬೇಕೆಂದು ದೇವರ್ಷಿ ನಾರದರು ಅಲ್ಲಿಗೆ ಆಗಮಿಸಿದರು.

ತಮಭ್ಯರ್ಚ್ಯ ಮಹಾಬಾಹುಃ ಕುರುರಾಜೋ ಯುಧಿಷ್ಠಿರಃ ।
ಆಸೀನಂ ಪರಿವಿಶ್ವಸ್ತಂ ಪ್ರೋವಾಚ ವದತಾಂವರಃ ॥೨॥

ಕುರುರಾಜನಾದ ಮಹಾಬಾಹುವಾದ ಯುಧಿಷ್ಠಿರನು ನಾರದರನ್ನು ಚೆನ್ನಾಗಿ ಉಪಚರಿಸಿದನು. ನಾರದರು ಮಾರ್ಗಾಯಾಸವನ್ನು ಪರಿಹರಿಸಿಕೊಂಡ ಬಳಿಕ ಮಾತು ಬಲ್ಲವನಾದ ಧರ್ಮಜನು ಇಂತು ನುಡಿದನು.

ಚಿರಾತ್ತು ನಾನುಪಶ್ಯಾಮಿ ಭಗವಂತಮುಪಸ್ಥಿತಮ್ ।
ಕಚ್ಚಿತ್ತೇ ಕುಶಲಂ ವಿಪ್ರ ಶುಭಂ ವಾ ಪ್ರತ್ಯುಪಸ್ಥಿತಮ್ ॥೩॥

ಪೂಜ್ಯರೇ! ನಿಮ್ಮನ್ನು ಕಾಣದೆ ಬಹುಕಾಲವೇ ಸಂದಿದೆ. ನೀವು ಕ್ಷೇಮವೋ? ನಿಮ್ಮ ಆಗಮನದ ಉದ್ದೇಶ ಮಂಗಳಕರವಾಗಿರುವುದಷ್ಟೇ!

ಕೇ ದೇಶಾಃ ಪರಿದೃಷ್ಟಾಸ್ತೇ ಕಿಂ ಚ ಕಾರ್ಯಂ ಕರೋಮಿ ತೇ ।
ತದ್ ಬ್ರೂಹಿ ದ್ವಿಜಮುಖ್ಯಸ್ತ್ವಂ ಹ್ಯಸ್ಮಾಕಂ ಚ ಪ್ರಿಯೋऽತಿಥಿಃ ॥೪॥

ಯಾವ ಯಾವ ದೇಶಗಳನ್ನು ಸಂಚರಿಸಿ ಬಂದಿರಿ. ನಿಮಗಾಗಿ ನಾನು ಯಾವ ಒಳ್ಳೆಯ ಕಾರ್ಯ ಮಾಡಲಿ? ಹೇಳಿರಿ! ಬ್ರಾಹ್ಮಣಶ್ರೇಷ್ಠರಾದ ನೀವು ನಮಗೆ ಪ್ರೀತಿಯ ಅತಿಥಿಗಳಾಗಿದ್ದೀರಿ.

ನಾರದಃ

ಚಿರದೃಷ್ಟೋಸಿ ಮೇಽತ್ಯೇವಮಾಗತೋಽಹಂ ತಪೋವನಾತ್ ।
ಪರಿದೃಷ್ಟಾನಿ ತೀರ್ಥಾನಿ ಗಂಗಾ ಚೈವ ಮಯಾ ನೃಪ ॥೫॥

ನಾರದರು– ರಾಜನೇ! ನಿನ್ನನ್ನು ಕಾಣದೆ ಬಹಳ ಸಮಯವಾಯಿತೆಂದೇ ನಾನು ತಪೋವನದಿಂದ ಬಂದಿರುತ್ತೇನೆ. ಗಂಗಾದಿ ತೀರ್ಥಗಳನ್ನು ಸೇವಿಸುತ್ತಾ ಬಂದಿರುವೆ.

ಯುಧಿಷ್ಠಿರಃ

ವದಂತಿ ಪುರುಷಾ ಮೇಽದ್ಯ ಗಂಗಾತೀರನಿವಾಸಿನಃ ।
ಧೃತರಾಷ್ಟ್ರಂ ಮಹಾತ್ಮಾನಮಾಸ್ಥಿತಂ ಪರಮಂ ತಪಃ ॥೬॥

ಯುಧಿಷ್ಠಿರ– ನಾರದರೆ! ಮಹಾತ್ಮನಾದ ಧೃತರಾಷ್ಟ್ರನು ಗಂಗಾ ತೀರದಲ್ಲಿ ಉತ್ತಮವಾದ ತಪಸ್ಸನ್ನು ಮಾಡುತ್ತಿದ್ದಾನೆಂದು ಅನೇಕ ಗಂಗಾತೀರದ ನಿವಾಸಿಗಳಿಂದ ಕೇಳಿಸಿಕೊಂಡಿರುತ್ತೇನೆ.

ಅಪಿ ದೃಷ್ಟಸ್ತ್ವಯಾ ತತ್ರ ಕುಶಲೀ ಸ ಕುರೂದ್ವಹಃ ।
ಗಾಂಧಾರೀ ಚ ಪೃಥಾ ಚೈವ ಸೂತಪುತ್ರಶ್ಚ ಸಂಜಯಃ ॥೭॥

ಆ ಗಂಗಾತೀರದಲ್ಲಿ ಕೌರವಶ್ರೇಷ್ಠನಾದ ಧೃತರಾಷ್ಟ್ರನನ್ನು ನೀವು ನೋಡಿದಿರಾ? ಅವನು ಕ್ಷೇಮವೇ? ಗಾಂಧಾರೀ-ಕುಂತೀ-ಸೂತಪುತ್ರನಾದ ಸಂಜಯ ಇವರೆಲ್ಲರೂ ಕ್ಷೇಮದಿಂದಿರುವರೇ!

ಕಥಂ ಚ ವರ್ತತೇ ಚಾದ್ಯ ಪಿತಾ ಮಮ ಸ ಪಾರ್ಥಿವಃ ।
ಶ್ರೋತುಮಿಚ್ಛಾಮಿ ಭಗವನ್ ಯದಿ ದೃಷ್ಟಸ್ತ್ವಯಾ ನೃಪಃ ॥೮॥

ನೀವು ರಾಜನನ್ನು ನೋಡಿದ್ದೀರೆಂದಾದರೆ ಅವನ ಬಗ್ಗೆ ಕೇಳಲು ಬಯಸುತ್ತೇನೆ. ನನ್ನ ತಂದೆಯಾದ ರಾಜನು ಈಗ ಹೇಗಿದ್ದಾನೆ?

ನಲವತ್ಮೂರನೆಯ ಅಧ್ಯಾಯ

ನಾರದರು ಒಮ್ಮೆ ಹಸ್ತಿನಪುರಕ್ಕೆ ಬಂದು ಪಾಂಡವರಲ್ಲಿ ಧೃತರಾಷ್ಟ್ರಾದಿಗಳು ಸ್ವರ್ಗವನ್ನು ಪಡೆದರೆಂದು ತಿಳಿಸುವುದು. ಧೃತರಾಷ್ಟ್ರನು ಗಾಂಧಾರಿ, ಕುಂತಿ ಮತ್ತು ಸಂಜಯರಿಂದ ಕೂಡಿಕೊಂಡು ಗಂಗೆಯಲ್ಲಿ ಮಿಂದು, ತನ್ನ ಆಶ್ರಮಕ್ಕೆ ಹಿಂದಿರುಗುತ್ತಿರುವಾಗ ಮಾರ್ಗಮಧ್ಯದಲ್ಲಿ ದಾವಾಗ್ನಿಯು ಅವರನ್ನು ಸುತ್ತುವರಿಯುವುದು. ಧೃತರಾಷ್ಟ್ರನು ಸಂಜಯನನ್ನು ದೂರ ಹೋಗಲು ತಿಳಿಸಿ ಕುಂತಿ ಹಾಗೂ ಗಾಂಧಾರಿಯೊಂದಿಗೆ ಅಗ್ನಿಯನ್ನು ಪ್ರವೇಶಿಸುವುದು. ನಂತರ ಸಂಜಯನು ಹಿಮವತ್‌ಪರ್ವತಕ್ಕೆ ತೆರಳುವುದು.

ವೈಶಂಪಾಯನಃ

ತೇಷು ಚೋಪನಿವೃತ್ತೇಷು ಪಾಂಡವೇಷು ಯದೃಚ್ಛಯಾ ।
ದೇವರ್ಷಿರ್ನಾರದೋ ರಾಜನ್ನಾಜಗಾಮ ಯುಧಿಷ್ಠಿರಮ್ ॥೧॥

ವೈಶಂಪಾಯನ– ಪಾಂಡವರು ಯದೃಚ್ಛೆಯಿಂದ ಹಸ್ತಿನಾವತಿಗೆ ಬರುತ್ತಿರಲು; ಯುಧಿಷ್ಠಿರನನ್ನು ಕಾಣಬೇಕೆಂದು ದೇವರ್ಷಿ ನಾರದರು ಅಲ್ಲಿಗೆ ಆಗಮಿಸಿದರು.

ತಮಭ್ಯರ್ಚ್ಯ ಮಹಾಬಾಹುಃ ಕುರುರಾಜೋ ಯುಧಿಷ್ಠಿರಃ ।
ಆಸೀನಂ ಪರಿವಿಶ್ರಬ್ಧಂ ಪ್ರೋವಾಚ ವದತಾಂವರಃ ॥೨॥

ಕುರುರಾಜನಾದ ಮಹಾಬಾಹುವಾದ ಯುಧಿಷ್ಠಿರನು ನಾರದರನ್ನು ಚೆನ್ನಾಗಿ ಉಪಚರಿಸಿದನು. ನಾರದರು ಮಾರ್ಗಾಯಾಸವನ್ನು ಪರಿಹರಿಸಿಕೊಂಡ ಬಳಿಕ ಮಾತು ಬಲ್ಲವನಾದ ಧರ್ಮಜನು ಇಂತು ನುಡಿದನು.

ಚಿರಾತ್ತು ನಾನುಪಶ್ಯಾಮಿ ಭಗವಂತಮುಪಸ್ಥಿತಮ್ ।
ಕಚ್ಚಿತ್ತೇ ಕುಶಲಂ ವಿಪ್ರ ಶುಭಂ ವಾ ಪ್ರತ್ಯುಪಸ್ಥಿತಮ್ ॥೩॥

ಪೂಜ್ಯರೇ! ನಿಮ್ಮನ್ನು ಕಾಣದೆ ಬಹುಕಾಲವೇ ಸಂದಿದೆ. ನೀವು ಕ್ಷೇಮವೋ? ನಿಮ್ಮ ಆಗಮನದ ಉದ್ದೇಶ ಮಂಗಳಕರವಾಗಿರುವುದಷ್ಟೇ!

ಕೇ ದೇಶಾಃ ಪರಿದೃಷ್ಟಾಸ್ತೇ ಕಿಂ ಚ ಕಾರ್ಯಂ ಕರೋಮಿ ತೇ ।
ತದ್ ಬ್ರೂಹಿ ದ್ವಿಜಮುಖ್ಯಸ್ತ್ವಂ ಹ್ಯಸ್ಮಾಕಂ ಚ ಪ್ರಿಯೋऽತಿಥಿಃ ॥೪॥

ಯಾವ ಯಾವ ದೇಶಗಳನ್ನು ಸಂಚರಿಸಿ ಬಂದಿರಿ. ನಿಮಗಾಗಿ ನಾನು ಯಾವ ಒಳ್ಳೆಯ ಕಾರ್ಯ ಮಾಡಲಿ? ಹೇಳಿರಿ! ಬ್ರಾಹ್ಮಣಶ್ರೇಷ್ಠರಾದ ನೀವು ನಮಗೆ ಪ್ರೀತಿಯ ಅತಿಥಿಗಳಾಗಿದ್ದೀರಿ.

ನಾರದಃ

ಚಿರದೃಷ್ಟೋಸಿ ಮೇಽತ್ಯೇವಮಾಗತೋಽಹಂ ತಪೋವನಾತ್ ।
ಪರಿದೃಷ್ಟಾನಿ ತೀರ್ಥಾನಿ ಗಂಗಾ ಚೈವ ಮಯಾ ನೃಪ ॥೫॥

ನಾರದರು– ರಾಜನೇ! ನಿನ್ನನ್ನು ಕಾಣದೆ ಬಹಳ ಸಮಯವಾಯಿತೆಂದೇ ನಾನು ತಪೋವನದಿಂದ ಬಂದಿರುತ್ತೇನೆ. ಗಂಗಾದಿ ತೀರ್ಥಗಳನ್ನು ಸೇವಿಸುತ್ತಾ ಬಂದಿರುವೆ.

ಯುಧಿಷ್ಠಿರಃ

ವದಂತಿ ಪುರುಷಾ ಮೇಽದ್ಯ ಗಂಗಾತೀರನಿವಾಸಿನಃ ।
ಧೃತರಾಷ್ಟ್ರಂ ಮಹಾತ್ಮಾನಮಾಸ್ಥಿತಂ ಪರಮಂ ತಪಃ ॥೬॥

ಯುಧಿಷ್ಠಿರ– ನಾರದರೆ! ಮಹಾತ್ಮನಾದ ಧೃತರಾಷ್ಟ್ರನು ಗಂಗಾ ತೀರದಲ್ಲಿ ಉತ್ತಮವಾದ ತಪಸ್ಸನ್ನು ಮಾಡುತ್ತಿದ್ದಾನೆಂದು ಅನೇಕ ಗಂಗಾತೀರದ ನಿವಾಸಿಗಳಿಂದ ಕೇಳಿಸಿಕೊಂಡಿರುತ್ತೇನೆ.

ಅಪಿ ದೃಷ್ಟಸ್ತ್ವಯಾ ತತ್ರ ಕುಶಲೀ ಸ ಕುರೂದ್ವಹಃ ।
ಗಾಂಧಾರೀ ಚ ಪೃಥಾ ಚೈವ ಸೂತಪುತ್ರಶ್ಚ ಸಂಜಯಃ ॥೭॥

ಆ ಗಂಗಾತೀರದಲ್ಲಿ ಕೌರವಶ್ರೇಷ್ಠನಾದ ಧೃತರಾಷ್ಟ್ರನನ್ನು ನೀವು ನೋಡಿದಿರಾ? ಅವನು ಕ್ಷೇಮವೇ? ಗಾಂಧಾರೀ-ಕುಂತೀ-ಸೂತಪುತ್ರನಾದ ಸಂಜಯ ಇವರೆಲ್ಲರೂ ಕ್ಷೇಮದಿಂದಿರುವರೇ!

ಕಥಂ ಚ ವರ್ತತೇ ಚಾದ್ಯ ಪಿತಾ ಮಮ ಸ ಪಾರ್ಥಿವಃ ।
ಶ್ರೋತುಮಿಚ್ಛಾಮಿ ಭಗವನ್ ಯದಿ ದೃಷ್ಟಸ್ತ್ವಯಾ ನೃಪಃ ॥೮॥

ನೀವು ರಾಜನನ್ನು ನೋಡಿದ್ದೀರೆಂದಾದರೆ ಅವನ ಬಗ್ಗೆ ಕೇಳಲು ಬಯಸುತ್ತೇನೆ. ನನ್ನ ತಂದೆಯಾದ ರಾಜನು ಈಗ ಹೇಗಿದ್ದಾನೆ?

ನಾರದಃ

ಸ್ಥಿರೀಭೂಯ ಮಹಾರಾಜ ಶೃಣು ವೃತ್ತಂ ಯಥಾತಥಮ್ ।
ಯಥಾಶ್ರುತಂ ಚ ದೃಷ್ಟಂ ಚ ಮಯಾ ತಸ್ಮಿಂಸ್ತಪೋವನೇ ॥೯॥

ನಾರದರು– ರಾಜನೇ! ಯಥಾವತ್ತಾಗಿ ನಾನು ಹೇಳುವ ವಾರ್ತೆಯನ್ನು ಸ್ಥಿರವಾದ ಮನಸ್ಸಿನಿಂದ ಕೇಳು. ನಾನು ಆ ಗಂಗಾ ತೀರದ ತಪೋವನದಲ್ಲಿ ಧೃತರಾಷ್ಟ್ರನ ಬಗ್ಗೆ ಏನು ಕೇಳಿಸಿಕೊಂಡಿದ್ದೇನೋ, ನೋಡಿದ್ದೇನೋ ಅದನ್ನು ಹೇಳುತ್ತೇನೆ.

ವನವಾಸನಿವೃತ್ತೇಷು ಭವತ್ಸು ಕುರುನಂದನ ।
ಕುರುಕ್ಷೇತ್ರಾತ್ ಪಿತಾ ತುಭ್ಯಂ ಗಂಗಾದ್ವಾರಂ ಯಯೌ ನೃಪ ॥೧೦॥

ರಾಜನೇ! ನೀವೆಲ್ಲರೂ ರಾಜನಿಗೆ ವನವಾಸಕ್ಕೆ ತೆರಳಲು ಅನುಮತಿ ಇತ್ತ ಬಳಿಕ ನಿಮ್ಮ ತಂದೆಯು ಕುರುಕ್ಷೇತ್ರದಿಂದ ಗಂಗಾದ್ವಾರ ಎನಿಸಿದ ಹರಿದ್ವಾರಕ್ಕೆ ನಡೆದನು.

ಗಾಂಧಾರ್ಯಾ ಸಹಿತೋ ಧೀಮಾನ್ ವಧ್ವಾ ಕುಂತ್ಯಾ ಸಮನ್ವಿತಃ ।
ಸಂಜಯೇನ ಚ ಸೂತೇನ ಸಾಗ್ನಿಹೋತ್ರಃ ಸಯಾಜಕಃ ॥೧೧॥

ಅತಸ್ತೇ ಸ ತಪಸ್ತೀವ್ರಂ ಪಿತಾ ತವ ತಪೋಧನಃ ।
ಅಗ್ನಿಂ ಮುಖೇ ಸಮಾಧಾಯ ವಾಯುಭಕ್ಷೋಽಭವದ್ ಮುನಿಃ ॥೧೨॥

ಗಾಂಧಾರೀ-ಕುಂತೀ-ಸೂತನಾದ ಸಂಜಯ, ಅಗ್ನಿಹೋತ್ರಿಗಳಿಂದ ಕೂಡಿದ ತಪೋಧನನಾದ ನಿಮ್ಮ ತಂದೆಯು ಕಠಿಣವಾದ ತಪಸ್ಸನ್ನು ಮಾಡಿದನು. ಮುಖದಲ್ಲಿ ಅಗ್ನಿಯನ್ನು ಧರಿಸಿ, ಗಾಳಿಯನ್ನೇ ಆಹಾರವನ್ನಾಗಿಸಿಕೊಂಡು ಮೌನ ಧರಿಸಿದನು.

ವನೇ ಸ ಮುನಿಭಿಃ ಸರ್ವೈಃ ಪೂಜ್ಯಮಾನೋ ಮಹಾತಪಾಃ ।
ತ್ವಗಸ್ಥಿಮಾತ್ರಶೇಷಃ ಸ ಷಣ್ಮಾಸಾನಭವನ್ನೃಪಃ ॥೧೩॥

ಮಹಾತಪಸ್ವಿಯಾದ ರಾಜನು ಆ ಕಾಡಿನ ಸಮಸ್ತ ಮುನಿಗಳಿಂದ ಪೂಜ್ಯಮಾನನಾಗಿದ್ದನು. ತಪಸ್ಸಿನಿಂದ ಅವನ ದೇಹದಲ್ಲಿ ಚರ್ಮ-ಮೂಳೆಗಳು ಮಾತ್ರ ಉಳಿದಿದ್ದವು. ಈ ಆರು ತಿಂಗಳು ತಪಸ್ಸನ್ನಾಚರಿಸಿದನು.

ಗಾಂಧಾರೀ ತು ಜಲಾಹಾರೀ ಕುಂತೀ ಮಾಸೋಪವಾಸಿನೀ ।
ಸಂಜಯಃ ಷಷ್ಠಭುಕ್ತೇನ ವರ್ತಯಾಮಾಸ ಭಾರತ ॥೧೪॥

ಹೇ ಭಾರತನೇ, ಆ ಸಮಯದಲ್ಲಿ ಗಾಂಧಾರೀ ದೇವಿಯು ಕೇವಲ ನೀರನ್ನು ಮಾತ್ರ ಸ್ವೀಕರಿಸುತ್ತಿದ್ದಳು. ಕುಂತಿಯು ತಿಂಗಳಿಗೆ ಒಂದು ಬಾರಿ ಮಾತ್ರ ಆಹಾರವನ್ನು ಸ್ವೀಕರಿಸುವ ಉಪವಾಸ ವ್ರತವನ್ನು ನಡೆಸುತ್ತಿದ್ದಳು. ಸಂಜಯನು ಆರು ದಿನಕ್ಕೊಮ್ಮೆ ಆಹಾರವನ್ನು ಸೇವಿಸುತ್ತಾ ದಿನವನ್ನು ಕಳೆಯುತ್ತಿದ್ದನು.

ಅಗ್ನೀಂಸ್ತು ಯಾಜಕಾಸ್ತತ್ರ ಜುಹುವುರ್ವಿಧಿವತ್ ಪ್ರಭೋ ।
ದೃಶ್ಯತೋಽದೃಶ್ಯತಶ್ಚೈವ ವನೇ ತಸ್ಮಿನ್ನೃಪಸ್ಯ ವೈ ॥೧೫॥

ಹೇ ಪ್ರಭುವೇ, ಆ ರಾಜನ ದರ್ಶನವು ಕಾಡಿನಲ್ಲಿ ಒಮ್ಮೊಮ್ಮೆ ಆಗುತ್ತಿತ್ತು. ಕೆಲವೊಮ್ಮೆ ಆಗುತ್ತಿರಲಿಲ್ಲ. ಹಾಗಿದ್ದರೂ ಯಾಜಕರು ವಿಧಿವತ್ತಾಗಿ ಅಗ್ನಿಗಳಲ್ಲಿ ಹೋಮಿಸುತ್ತಿದ್ದರು.

ಅನಿಕೇತೋಥ ರಾಜಾ ಸ ಬಭೂವ ವನಗೋಚರಃ ।
ತೇ ಚಾಪಿ ಸಹಿತೇ ದೇವ್ಯೌ ಸಂಜಯಶ್ಚ ತಮನ್ವಯುಃ ॥೧೬॥

ದಿನ ಕಳೆದಂತೆ ಆ ರಾಜನು ಕಾಡಿನಲ್ಲೇ ತಿರುಗುತ್ತಾ ಸ್ಥಿರವಾದ ನೆಲೆ ಇಲ್ಲದವನಂತೆ ಆದನು. ಜೊತೆಗಿರುವ ಇಬ್ಬರು ದೇವಿಯರೂ ಹಾಗೂ ಸಂಜಯನು ಅವನನ್ನೇ ಅನುಸರಿಸಿದರು.

ಸಂಜಯೋ ನೃಪತೇರ್ನೇತಾ ಸಮೇಷು ವಿಷಮೇಷು ಚ ।
ಗಾಂಧಾರ್ಯಾಶ್ಚ ಪೃಥಾ ಚೈವ ಚಕ್ಷುರಾಸೀದನಿಂದಿತಾ ॥೧೭॥

ಸಮ ಹಾಗೂ ವಿಷಮ ಪರಿಸ್ಥಿತಿಗಳೆರಡರಲ್ಲೂ ರಾಜನಿಗೆ ಸಂಜಯನು ಸಹಾಯಕನಾಗಿದ್ದನು. ಅಂತೆಯೇ ಗಾಂಧಾರಿಗೆ ಅನಿಂದಿತಳಾದ ಕುಂತಿಯೇ ಕಣ್ಣಾಗಿದ್ದಳು.

ತತಃ ಕದಾಚಿದ್ ಗಂಗಾಯಾಃ ಕಚ್ಛೇ ಸ ನೃಪಸತ್ತಮಃ ।
ಗಂಗಾಯಾಮಾಪ್ಲುತೋ ಧೀಮಾನಾಶ್ರಮಾಭಿಮುಖೋ ಯಯೌ ॥೧೮॥

ಹೀಗೆ ಕೆಲವು ಕಾಲ ಕಳೆದ ನಂತರ ಒಮ್ಮೆ ಧೀಮಂತನಾದ ಆ ರಾಜನು ಗಂಗೆಯಲ್ಲಿ ಸ್ನಾನ ಮಾಡಿ ಗಂಗಾತೀರದಲ್ಲಿ ಆಶ್ರಮಕ್ಕೆ ಅಭಿಮುಖನಾಗಿ ಹೊರಟಿದ್ದನು.

ಅಥ ವಾಯುಃ ಸಮುದ್ಭೂತೋ ದಾವಾಗ್ನಿರಭವನ್ಮಹಾನ್ ।
ದದಾಹ ತದ್ವನಂ ಸರ್ವಂ ಪರಿಗೃಹ್ಯ ಸಮಂತತಃ ॥೧೯॥

ಆ ಸಮಯಕ್ಕೆ ಸರಿಯಾಗಿ ಜೋರಾಗಿ ಗಾಳಿ ಬೀಸಲಾರಂಭಿಸಿತು. ಆ ಗಾಳಿಯಿಂದ ಮಹತ್ತಾದ ಕಾಡ್ಗಿಚ್ಚು ಹುಟ್ಟಿತು. ಅದು ಇಡೀ ಕಾಡನ್ನು ಸುತ್ತಲೂ ವ್ಯಾಪಿಸಿಕೊಂಡಿತು.

ದಹತ್ಸು ಮೃಗಯೂಥೇಷು ದ್ವಿಜಿಹ್ವೇಷು ಸಮಂತತಃ ।
ವರಾಹಾಣಾಂ ಚ ಯೂಥೇಷು ಸಂಶ್ರಯತ್ಸು ಜಲಾಶಯಾನ್ ॥೨೦॥

ಸುತ್ತಲೂ ಜಿಂಕೆಗಳ ಗುಂಪು ಹಾಗೂ ಹಾವುಗಳು ದಹಿಸಲಾರಂಭಿಸಿದವು. ಬಿಸಿಯ ಬೇಗೆಯಿಂದ ಹಂದಿಗಳ ಹಿಂಡು ಜಲಾಶಯಗಳನ್ನು ಆಶ್ರಯಿಸಲಾರಂಭಿಸಿತು.

ಸಂಪ್ರದೀಪ್ತೇ ವನೇ ತಸ್ಮಿನ್ ಪ್ರಾಪ್ತೇ ವ್ಯಸನ ಉತ್ತಮೇ ।
ನಿರಾಹಾರತಯಾ ರಾಜಾ ಮಂದಪ್ರಾಣವಿಚೇಷ್ಟಿತಃ ॥೨೧॥

ಅಸಮರ್ಥೋ೯ಽಪಸರಣೇ ಸುಕೃಶೇ ಮಾತರೌ ಚ ತೇ ॥೨೨॥

ಹೀಗೆ ಆ ಕಾಡು ಧಗಧಗಿಸಲಾರಂಭಿಸಿ ಮಹತ್ತಾದ ಕಷ್ಟವು ಪ್ರಾಪ್ತವಾದಾಗ ನಿರಾಹಾರನಾಗಿದ್ದ ರಾಜನಾದ ಧೃತರಾಷ್ಟ್ರನು ಅತ್ಯಲ್ಪವಾದ ಬಲ ಮತ್ತು ನಡಿಗೆಯಿಂದ ಕೂಡಿದವನಾಗಿ ಕಾಡ್ಗಿಚ್ಚಿನಿಂದ ಹೊರಬರಲು ಅಸಮರ್ಥನಾದನು. ಹಾಗೆಯೇ ಉಪವಾಸ ವ್ರತದಿಂದ ಕೃಶರಾದ ನಿನ್ನ ಇಬ್ಬರು ತಾಯಂದಿರೂ ಅಸಮರ್ಥರಾದರು.

ತತಃ ಸ ನೃಪತಿರ್ದೃಷ್ಟ್ವಾ ವಹ್ನಿಮಾಯಾಂತಮಂತಿಕಾತ್ ।
ಇದಮಾಹ ತತಃ ಸೂತಂ ಸಂಜಯಂ ಜಯತಾಂವರಃ ॥೨೩॥

ಅನಂತರ ಆ ರಾಜನು ಬೆಂಕಿಯು ಬಹಳ ಸಮೀಪದಲ್ಲಿ ಬರುವುದನ್ನು ಕಂಡನು. ಇದನ್ನು ಕಂಡ ಜಯಿಗಳಲ್ಲಿ ಶ್ರೇಷ್ಠನಾದ ಅವನು ಸೂತನಾದ ಸಂಜಯನನ್ನು ಕುರಿತು ಹೀಗೆಂದನು.

ಗಚ್ಛ ಸಂಜಯ ಯತ್ರಾಗ್ನಿರ್ನ ತ್ವಾಂ ದಹತಿ ಕರ್ಹಿಚಿತ್ ।
ವಯಮತ್ರಾಗ್ನಿನಾ ಯುಕ್ತಾ ಗಮಿಷ್ಯಾಮಃ ಪರಾಂ ಗತಿಮ್ ॥೨೪॥

ಹೇ ಸಂಜಯನೇ! ಯಾವ ಪ್ರದೇಶದಲ್ಲಿ ಕಾಡ್ಗಿಚ್ಚು ನಿನಗೆ ಸ್ವಲ್ಪವೂ ತೊಂದರೆ ಕೊಡದೋ ಅಲ್ಲಿಗೆ ಹೊರಟು ಹೋಗು. ನಾವು ಅಗ್ನಿಮಧ್ಯದಲ್ಲಿ ಸೇರಿಕೊಂಡು ಉತ್ತಮವಾದ ಪರಲೋಕ ಗತಿಯನ್ನು ಹೊಂದುವೆವು.

ತಮುವಾಚ ಕಿಲೋದ್ವಿಗ್ನಃ ಸಂಜಯೋ ವದತಾಂವರಃ ।
ರಾಜನ್ ಮೃತ್ಯುರನಿಷ್ಟೋಽಯಂ ಭವಿತಾ ತೇ ವೃಥಾಽಗ್ನಿನಾ ॥೨೫॥

ನ ಚೋಪಾಯಂ ಪ್ರಪಶ್ಯಾಮಿ ಮೋಕ್ಷಣೇ ಜಾತವೇದಸಃ ।
ಯದತ್ರಾನಂತರಂ ಕಾರ್ಯಂ ತದ್ಭವಾನ್ ವಕ್ತುಮರ್ಹತಿ ॥೨೬॥

ಇದನ್ನು ಕೇಳಿದ ವಾಗ್ಮಿಯಾದ ಸಂಜಯನು ಬಹಳ ಉದ್ವಿಗ್ನನಾಗಿ ಹೇ ರಾಜನೇ, ಅನಿಷ್ಟವಾದ ಮೃತ್ಯುವು ನಿನಗೆ ಅಗ್ನಿಯಿಂದ ವೃಥಾ ಪ್ರಾಪ್ತವಾಗಿದೆ. ಈ ಅಗ್ನಿಯಿಂದ ಹೊರಬರಲು ಯಾವುದೇ ಉಪಾಯವೂ ತೋಚುತ್ತಿಲ್ಲ. ಮುಂದೇನು ಮಾಡಬೇಕೆಂಬುದನ್ನು ನೀನೇ ಹೇಳಬೇಕಾಗಿದೆ.

ಇತ್ಯುಕ್ತಃ ಸಂಜಯೇನೇದಂ ಪುನರಾಹ ಸ ಪಾರ್ಥಿವಃ ।
ನೈಷ ಮೃತ್ಯುರನಿಷ್ಟೋ ನೋ ನಿಃಸೃತಾನಾಂ ಗೃಹಾತ್ಸ್ವಯಮ್ ॥೨೭॥

ಹೀಗೆ ಸಂಜಯನು ಹೇಳಿದಾಗ, ಈ ಮೃತ್ಯುವು ಸ್ವತಃ ತಾವಾಗಿಯೇ ಮನೆಯಿಂದ ಹೊರಬಂದು ವಾನಪ್ರಸ್ಥದಲ್ಲಿರುವ ನಮಗೆ ಅನಿಷ್ಟವಲ್ಲ ಎಂದು ರಾಜನು ಹೇಳಿದನು.

ಜಲಮಗ್ನಿಸ್ತಥಾ ವಾಯುರಥವಾಽಪಿ ವಿಕರ್ಷಣಮ್ ।
ತಾಪಸಾನಾಂ ಪ್ರಶಸ್ಯಂ ತೇ ಗಚ್ಛ ಸಂಜಯ ಮಾಚಿರಮ್ ॥೨೮॥

ಹೇ ಸಂಜಯನೇ, ನೀರಿನಿಂದ, ಬೆಂಕಿಯಿಂದ ಅಥವಾ ಗಾಳಿಯಿಂದ ಅಥವಾ ಉಪವಾಸದಿಂದ ತಾಪಸಜನರಿಗೆ ಮೃತ್ಯುವು ಪ್ರಶಸ್ತವಾದುದು. ಆದ್ದರಿಂದ ತಡ ಮಾಡದೆ ನೀನು ಹೊರಡು.

ಇತ್ಯುಕ್ತ್ವಾ ಸಂಜಯಂ ರಾಜಾ ಸಮಾಧಾಯ ಮನಸ್ತಥಾ ।
ಪ್ರಾಙ್ಮುಖಃ ಸಹ ಗಾಂಧಾರ್ಯಾ ಕುಂತ್ಯಾ ಚೋಪಾವಿಶತ್ ತದಾ ॥೨೯॥

ಸಂಜಯನಿಗೆ ಹೀಗೆ ಹೇಳಿದ ರಾಜನು ಮನಸ್ಸನ್ನು ನಿಗ್ರಹಿಸಿಕೊಂಡು, ಗಾಂಧಾರಿ ಮತ್ತು ಕುಂತಿಯರೊಡನೆ ಪ್ರಾಙ್ಮುಖನಾಗಿ ಅಲ್ಲಿಯೇ ಕುಳಿತನು.

ಸಂಜಯಸ್ತಂ ತಥಾ ದೃಷ್ಟ್ವಾ ಪ್ರದಕ್ಷಿಣಮಥಾಕರೋತ್ ।
ಉವಾಚ ಚೈನಂ ಮೇಧಾವೀ ಯುಂಕ್ಷ್ವಾತ್ಮಾನಮಿತಿ ಪ್ರಭೋ ॥೩೦॥

ಹಾಗೆ ಕುಳಿತ ರಾಜನನ್ನು ನೋಡಿ ಮೇಧಾವಿಯಾದ ಸಂಜಯನು ಅವನಿಗೆ ಪ್ರದಕ್ಷಿಣೆ ಬಂದು, ಹೇ ಪ್ರಭುವೇ, ಆತ್ಮನನ್ನು ಯೋಗಧಾರಣೆಯ ಮೂಲಕ ಅಣಿಗೊಳಿಸು ಎಂದನು.

ಋಷಿಪುತ್ರೋ ಮನೀಷೀ ಸ ರಾಜಾ ಚಕ್ರೇಽಸ್ಯ ತದ್ವಚಃ ।
ಸನ್ನಿರುದ್ಧ್ಯೇಂದ್ರಿಯಗ್ರಾಮಮಾಸೀತ್ ಕಾಷ್ಠೋಪಮಸ್ತದಾ ॥೩೧॥

ಋಷಿಪುತ್ರನಾದ ಪ್ರಾಜ್ಞನಾದ ಆ ರಾಜನು ಅವನ ಆಜ್ಞೆಯಂತೆಯೇ ನಡೆದುಕೊಂಡನು. ತನ್ನ ಇಂದ್ರಿಯಗಳನ್ನೂ, ಶ್ವಾಸವನ್ನೂ ನಿರೋಧ ಮಾಡಿಕೊಂಡು ಆಗ ಕಟ್ಟಿಗೆಯ ತುಂಡಿನಂತೆ ಆದನು.

ಗಾಂಧಾರೀ ಚ ಮಹಾಭಾಗಾ ಜನನೀ ಚ ಪೃಥಾ ತವ ।
ದಾವಾಗ್ನಿನಾ ಸಮಾಯುಕ್ತೇ ಸ ಚ ರಾಜಾ ಪಿತಾ ತವ ॥೩೨॥

ಅಪ್ಪು ಹೊತ್ತಿಗೆ ಮಹಾಭಾಗಳಾದ ಗಾಂಧಾರಿಯೂ, ನಿನ್ನ ತಾಯಿಯಾದ ಪೃಥೆಯೂ ಹಾಗೂ ನಿನ್ನ ತಂದೆಯಾದ ರಾಜನೂ ದಾವಾಗ್ನಿಯ ಮಧ್ಯದಲ್ಲಿ ಸೇರಿಕೊಂಡರು.

ಸಂಜಯಸ್ತು ಮಹಾಪ್ರಾಜ್ಞಸ್ತಸ್ಮಾದ್ ದಾವಾದಮುಚ್ಯತ ।
ಗಂಗಾಕೂಲೇ ಮಯಾ ದೃಷ್ಟಸ್ತಾಪಸೈಃ ಪರಿವಾರಿತಃ ॥೩೩॥

ಮಹಾಪ್ರಾಜ್ಞನಾದ ಸಂಜಯನಾದರೂ ಆ ಕಾಡ್ಗಿಚ್ಚಿನಿಂದ ತಪ್ಪಿಸಿಕೊಂಡನು. ಅವನೇ ತಾಪಸರಿಂದ ಕೂಡಿಕೊಂಡು ಗಂಗಾತೀರದಲ್ಲಿ ನನಗೆ ಕಾಣಸಿಕ್ಕನು.

ಸ ತಾನಾಮಂತ್ರ್ಯ ತೇಜಸ್ವೀ ನಿವೇದ್ಯೈತಚ್ಚ ಸರ್ವಶಃ ।
ಪ್ರಯಯೌ ಸಂಜಯೋ ಧೀಮಾನ್ ಹಿಮವಂತಂ ಮಹೀಧರಮ್ ॥

ಧೀಮಂತನಾದ, ತೇಜಸ್ವಿಯಾದ ಆ ಸಂಜಯನು ಅವರನ್ನು ಒಟ್ಟುಸೇರಿಸಿ ಈ ಎಲ್ಲವನ್ನೂ ಆ ಋಷಿಗಳಲ್ಲಿ ನಿವೇದಿಸಿಕೊಂಡು ಹಿಮವದ್ ಪರ್ವತದ ಕಡೆಗೆ ಹೊರಟು ಹೋದನು.

ಏವಂ ಸ ನಿಧನಂ ಪ್ರಾಪ್ತಃ ಕುರುರಾಜೋ ಮಹಾಮನಾಃ ।
ಗಾಂಧಾರೀ ಚ ಪೃಥಾ ಚೈವ ಜನನ್ಯೌ ತೇ ವಿಶಾಂಪತೇ ॥೩೫॥

ಹೇ ವಿಶಾಂಪತಿಯೇ, ಹೀಗೆ ಮಹಾಮನಸ್ವಿಯಾದ ಕುರುರಾಜನು ಮರಣವನ್ನು ಪಡೆದನು. ಅಂತೆಯೇ ನಿನ್ನ ತಾಯಂದಿರಾದ ಗಾಂಧಾರಿ ಮತ್ತು ಕುಂತಿಯರೂ ಮರಣ ಹೊಂದಿದರು.

ಯದೃಚ್ಛಯಾऽನುವ್ರಜತಾ ಮಯಾ ರಾಜ್ಞಃ ಕಲೇಬರಮ್ ।
ತಯೋಶ್ಚ ದೇವ್ಯೋರುಭಯೋರ್ಮಯಾ ದೃಷ್ಟಾನಿ ಭಾರತ ॥೩೬॥

ಹೇ ಭಾರತನೇ, ಆ ತಪೋವನದಲ್ಲಿ ಸಂಚರಿಸುತ್ತಿರುವಾಗ ನನಗೆ ಆಕಸ್ಮಿಕವಾಗಿ ಆ ರಾಜನ ಕಳೇವರವೂ ಹಾಗೂ ಇಬ್ಬರು ದೇವಿಯರ ಕಳೇವರವು ನನಗೆ ಸಿಕ್ಕಿತು. ನಾನು ಅದನ್ನು ನೋಡಿದೆನು.

ತತಸ್ತಪೋವನೇ ತಸ್ಮಿನ್ ಸಮಾಜಗ್ಮುಸ್ತಪೋಧನಾಃ ।
ಶ್ರುತ್ವಾ ರಾಜ್ಞಸ್ತದಾ ನಿಷ್ಠಾಂ ನ ತತ್ಶೋಚನ್ ಗತೀಶ್ಚ ತೇ ॥೩೭॥

ಅನಂತರ ಆ ತಪೋವನಕ್ಕೆ ತಪೋಧನರಾದ ಋಷಿಗಳು ಬಂದರು. ರಾಜನ ಈ ರೀತಿಯ ಅವಸ್ಥೆಗಳನ್ನು ಕೇಳಿದ ಅವರು ಅವನ ತಪೋನಿಷ್ಠೆಯನ್ನೂ ಕೇಳಿ ಅವನಿಗಾಗುವ ಗತಿಗಳ ಬಗ್ಗೆ ಶೋಕಪಡಲಿಲ್ಲ.

ತತ್ರಾಶ್ರೌಷಮಹಂ ಸರ್ವಮೇತತ್ಪುರುಷಸತ್ತಮ ।
ಯಥಾ ಚ ನೃಪತಿರ್ದಗ್ಧೋ ದೇವ್ಯೌ ತೇ ಚೇತಿ ಪಾಂಡವ ॥೩೮॥

ಹೇ ಪುರುಷಶ್ರೇಷ್ಠನಾದ ಪಾಂಡವನೇ, ಹೇಗೆ ನೃಪತಿಯ ದಹನವಾಯಿತೋ ಹಾಗೂ ಆ ಇಬ್ಬರು ದೇವಿಯರೂ ಸುಟ್ಟುಹೋದರೋ ಆ ಎಲ್ಲವನ್ನೂ ಅಲ್ಲಿ ನಾನು ಕೇಳಿ ತಿಳಿದೆನು.

ಇತ್ಯುಕ್ತೋ ಮುನಿನಾ ತೇನ ಧರ್ಮರಾಜಂ ಸಹಾನುಜಃ ।
ತೀವ್ರಶೋಕಸಮಾಯುಕ್ತೋ ಬಾಷ್ಪಪರ್ಯಾಕುಲೇಕ್ಷಣಃ ॥೩೯॥

ಹೀಗೆ ನಾರದಮುನಿಯು ಹೇಳಿದಾಗ ಸಹೋದರರೊಂದಿಗೆ ಕೂಡಿದ ಧರ್ಮರಾಜನು ತೀವ್ರವಾದ ಶೋಕಕ್ಕೆ ತುತ್ತಾಗಿ ಕಣ್ಣೀರಿನಿಂದ ವ್ಯಾಕುಲನಾದನು.

ಭೀಮಸೇನಾದಯಃ ಸರ್ವೇ ತೀವ್ರಶೋಕೇನ ದುಃಖಿತಾಃ ।
ವಿಸಂಜ್ಞಾಂ ತೇ ಗತಾ ಸರ್ವೇ ಪೇತುಃ ಸರ್ವೇ ಮಹೀತಳೇ ॥೪೦॥

ಭೀಮಸೇನನೇ ಮೊದಲಾದ ಎಲ್ಲರೂ ತೀವ್ರವಾದ ಶೋಕದಿಂದ ದುಃಖಿತರಾದರು. ಆ ಎಲ್ಲರೂ ಮೂರ್ಛೆಗೊಂಡವರಾಗಿ ಭೂಮಿಯಲ್ಲಿ ಬಿದ್ದುಬಿಟ್ಟರು.

ಅಂತಃಪುರಾಣಾಂ ಚ ತದಾ ಮಹಾನಾರ್ತಸ್ವರೋಽಭವತ್ ।
ಪೌರಾಣಾಂ ಚ ಮಹಾರಾಜ ಶ್ರುತ್ವಾ ರಾಜ್ಞಸ್ತದಾ ಗತಿಮ್ ॥೪೧॥

ಹೇ ಮಹಾರಾಜನೇ, ಧೃತರಾಷ್ಟ್ರನಿಗಾದ ಈ ಗತಿಯನ್ನು ಕೇಳಿ ಅಂತಃಪುರ ಸ್ತ್ರೀಯರಿಗೂ, ಪೌರರಿಗೂ ಬಹುದುಃಖವಾಗಿ ಅವರ ಆರ್ತಸ್ವರವೂ ಆಗ ಕೇಳಿಬಂದಿತು.

ಅಹೋ ಧಿಗಿತಿ ರಾಜಾ ತು ವಿಕ್ರುಶ್ಯ ಭೃಶದುಃಖಿತಃ ।
ಊರ್ಧ್ವಬಾಹುಃ ಸ್ಮರನ್ ಮಾತುಃ ಪ್ರರುರೋದ ಯುಧಿಷ್ಠಿರಃ ॥೪೨॥

ರಾಜನಾದ ಯುಧಿಷ್ಠಿರನಾದರೂ ಬಹಳ ದುಃಖಗೊಂಡವನಾಗಿ ತಾಯಿಯ ಸ್ಮರಣೆಯನ್ನು ತಂದುಕೊಂಡು 'ಅಯ್ಯೋ ಕಷ್ಟವೇ' ಎಂದು ಜೋರಾಗಿ ಕಿರುಚಿ ಕೈಯೆತ್ತಿಕೊಂಡು ಅಳತೊಡಗಿದನು.

ಭೀಮಸೇನಪುರೋಗಾಶ್ಚ ಭ್ರಾತರಃ ಸರ್ವ ಏವ ತೇ ।
ರುರುದುರ್ದುಃಖಸಂತಪ್ತಾ ವರ್ಣಯಂತಃ ಪೃಥಾಂ ತದಾ ॥೪೩॥

ಭೀಮಸೇನನೇ ಮೊದಲಾದ ಎಲ್ಲ ಆ ಸಹೋದರರು ದುಃಖದಿಂದ ಸಂತಪ್ತರಾಗಿ ಕುಂತಿಯನ್ನು ವರ್ಣಿಸುತ್ತಾ ಜೋರಾಗಿ ಅತ್ತುಬಿಟ್ಟರು.

ಅಂತಃಪುರೇಷು ಚ ತದಾ ಸುಮಹಾನ್-ರುದಿತಸ್ವನಃ ।
ಪ್ರಾದುರಾಸೀನ್ಮಹಾರಾಜ ಪೃಥಾಂ ಶ್ರುತ್ವಾ ತಥಾಗತಾಮ್ ॥೪೪॥

ಅವರೆಲ್ಲರೂ ಕುಂತಿಯ ಬಗ್ಗೆ ಹೇಳುವುದನ್ನು ಕೇಳಿದ ಮೇಲಂತೂ ಅಂತಃಪುರದಲ್ಲಿರುವ ಎಲ್ಲರಿಗೂ ದುಃಖ ಉಮ್ಮಳಿಸಿ ಬಂದು ಬಹುದೊಡ್ಡ ಆರ್ತನಾದವು ಆರಂಭವಾಯಿತು.

ತಂ ಚ ವೃದ್ಧಂ ತಥಾ ದಗ್ಧಂ ಹತಪುತ್ರಂ ನರಾಧಿಪಮ್ ।
ಅನ್ವಶೋಚಂತ ತೇ ಸರ್ವೇ ಗಾಂಧಾರೀಂ ಚ ತಪಸ್ವಿನೀಮ್ ॥೪೫॥

ಮಕ್ಕಳನ್ನು ಕಳೆದುಕೊಂಡ ವೃದ್ಧನಾದ ನರಾಧಿಪತಿಯು ಹಾಗೂ ತಪಸ್ವಿನಿಯಾದ ಗಾಂಧಾರಿಯು ಹೀಗೆ ಕಾಡ್ಗಿಚ್ಚಿನಲ್ಲಿ ಸುಟ್ಟುಹೋದುದನ್ನು ಕೇಳಿ ಆ ಎಲ್ಲರೂ ಮತ್ತೆ ಮತ್ತೆ ದುಃಖಿಸಿದರು.

ತಸ್ಮಿನ್ನುಪರತೇ ಶಬ್ದೇ ಮುಹೂರ್ತಾದಿವ ಭಾರತ ।
ನಿಗೃಹ್ಯ ಬಾಷ್ಪಂ ಧೈರ್ಯೇಣ ಧರ್ಮರಾಜೋಽಬ್ರವೀದಿದಮ್ ॥೪೬॥

ಹೇ ಭಾರತನೇ, ಸ್ವಲ್ಪ ಕಾಲದ ನಂತರ ಆ ಎಲ್ಲ ಅಳುವ ಶಬ್ದವು ನಿಂತಮೇಲೆ ಧರ್ಮರಾಜನು ಧೈರ್ಯದಿಂದ ಕಣ್ಣೀರನ್ನು ತಡೆದುಕೊಂಡು ಹೀಗೆಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ರಮವಾಸಿಕಪರ್ವಣಿ ಯುಧಿಷ್ಠಿರನಾರದಸಮಾಗಮೇ ಧೃತರಾಷ್ಟ್ರಗಾಂಧಾರ್ಯಾದೀನಾಂ
ಸ್ವರ್ಗಾರೋಹಣಂ ಶ್ರುತ್ವಾ ಪಾಂಡವಾನಾಂ ಶೋಕಕಥನಂ ನಾಮ
ತ್ರಿಚತ್ವಾರಿಂಶೋಽಧ್ಯಾಯಃ ॥

॥ ನಾರದಾಗಮನಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ರಮವಾಸಿಕಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ನಾರದಾಗಮನಪರ್ವ ॥

॥ ಸಮಾಪ್ತಮಾಶ್ರಮವಾಸಿಕಪರ್ವ ॥

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಮೌಸಲಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ತತಃ ಕುರುಕ್ಷೇತ್ರಮವಾಪ್ಯ ಕೃಷ್ಣೋ
ದೀಕ್ಷಾಂ ಪ್ರಪೇದೇ ದ್ವಿಷಡಬ್ದಸತ್ರೇ ।
ಸ ಏವ ಚ ವ್ಯಾಸಭೃಗೂದ್ವಹಾತ್ಮಾ
ಚಕ್ರೇಽತ್ರ ಸಾದಸ್ಯಮಜೋಽಪ್ರಮೇಯಃ ॥

ಬಳಿಕ ಶ್ರೀಕೃಷ್ಣ ಕುರುಕ್ಷೇತ್ರಕ್ಕೆ ಹೋಗಿ, ಹನ್ನೆರಡು ವರ್ಷಗಳ ಸತ್ರದಲ್ಲಿ ದೀಕ್ಷಾಬದ್ಧನಾದನು. ಅಪ್ರಮೇಯನಾದ ಅವನೇ ವೇದವ್ಯಾಸ, ಪರಶುರಾಮ ರೂಪಗಳಿಂದ ಸದಸ್ಯಕರ್ಮವನ್ನೂ ನಿರ್ವಹಿಸಿದನು.

ತತ್ರರ್ತ್ವಿಜೋ ದಕ್ಷಭೃಗುಪ್ರಧಾನಾಃ
ಪಾರ್ಥಾ ಯದೂನಾಂ ಪ್ರವರೈಃ ಸಮೇತಾಃ ।
ಬ್ರಹ್ಮೇಶಶಕ್ರಪ್ರಮುಖಾಃ ಸುರಾಶ್ಚ
ಚಕ್ರುಃ ಸುಸಾಚಿವ್ಯಮನಂತದಾಸಾಃ ॥

ಆ ಯಜ್ಞದಲ್ಲಿ ದಕ್ಷ-ಭೃಗು ಮುಂತಾದ ಋತ್ವಿಜರೂ, ಯಾದವ ಶ್ರೇಷ್ಠರೂ, ಪಾಂಡವರೂ, ಬ್ರಹ್ಮ-ರುದ್ರ-ಇಂದ್ರ ಮೊದಲಾದ ದೇವತೆಗಳೂ ಎಲ್ಲರೂ ಶ್ರೀಹರಿಯ ದಾಸರಾದ ಪ್ರಯುಕ್ತ ಬಹಳ ಸಹಾಯಗೈದರು.

ಸರ್ವೇ ಚ ಜೀವಾ ವಸುಧಾತಳಸ್ಥಾ
ಯೇಽನ್ಯೇಽಂತರಿಕ್ಷದ್ಯುಮುಖೋತ್ತರೇಷು ।
ವಸಂತಿ ನಾರಾಯಣಪಾದಸಂಶ್ರಯಾ-
ಸ್ತೇ ಚಾತ್ರ ಸರ್ವೇ ಮುಮುದುಃ ಸನಾಗಾಃ ॥

ಭೂತಲದಲ್ಲಿದ್ದ ಎಲ್ಲ ಜೀವರೂ, ಬೇರೆ ಅಂತರಿಕ್ಷ-ಸ್ವರ್ಗ ಮುಂತಾದ ಮೇಲಿನ ಲೋಕಗಳಲ್ಲಿ ಯಾರು ವಾಸ ಮಾಡುವರೋ ಅವರೂ, ಪಾತಾಳವಾಸಿಗಳಾದ ನಾಗರೂ, ನಾರಾಯಣನ ಪಾದಗಳನ್ನು ಆಶ್ರಯಿಸಿದ ಎಲ್ಲರೂ ಈ ಯಜ್ಞದಲ್ಲಿ ಸೇರಿ ಸಂತೋಷಗೊಂಡರು.

ಸುನಿರ್ಣಯಸ್ತತ್ತ್ವವಿನಿರ್ಣಯಾರ್ಥಿನಾಂ
ತತ್ತಸ್ಯ ಚಾಭೂದಿಹ ವಾದಶೀಲಿನಾಮ್ ।
ಮಿಥೋ ವಿವಾದಾತ್ ಸುರಭೂಸುರಾಣಾಂ
ವಾಕ್ಯಾದ್ಧರೇರ್ವ್ಯಾಸಭೃಗೂದ್ವಹಾತ್ಮನಃ ॥

ದೇವತೆಗಳೊಳಗೆ ಪರಸ್ಪರವಾಗಿಯೂ ಮುನಿಗಳೊಳಗೆ ಪರಸ್ಪರವಾಗಿಯೂ ನಡೆದ ವಾಕ್ಯಾರ್ಥಗೋಷ್ಠಿಗಳಿಂದ ಮತ್ತು ವ್ಯಾಸ-ಪರಶುರಾಮರೂಪನಾದ ಹರಿಯ ಮಾತುಗಳಿಂದ ವಾದಶೀಲರಾಗಿ ತತ್ತ್ವನಿರ್ಣಯವನ್ನು ಬಯಸುವ ಜನರಿಗೆ ಈ ಯಜ್ಞದಲ್ಲಿ ಒಳ್ಳೆಯ ತತ್ತ್ವನಿರ್ಣಯವಾಯಿತು.

ಧರ್ಮಾರ್ಥಕಾಮಾನಖಿಲಾನವಾಪು-
ಸ್ತದರ್ಥಿನೋ ಮುಕ್ತಿಮಪೀಹ ಕೃಷ್ಣಾತ್ ।
ಯಥೇಷ್ಟಪಾನಾಶನವಾಸಸೋ ಜನಾ
ವಿಚೇರುರತ್ರಾಮರಮಾನವಾದಯಃ ॥

ಈ ಯಜ್ಞದಲ್ಲಿ ಧರ್ಮಾರ್ಥಕಾಮಗಳನ್ನು ಬಯಸುವವರು ಅವೆಲ್ಲವನ್ನೂ ಕೃಷ್ಣನಿಂದ ಪಡೆದರು. ಮೋಕ್ಷಾರ್ಥಿಗಳು ಮೋಕ್ಷವನ್ನೂ ಕೃಷ್ಣನಿಂದ ಪಡೆದರು.

ದೇವತೆಗಳು ಮನುಷ್ಯರು ಮುಂತಾದ ಜನರು ಯಥೇಷ್ಟ ಅನ್ನ-ಪಾನ, ವಸ್ತ್ರಗಳನ್ನು ಹೊಂದಿ ಸಂಚರಿಸಿದರು.

ಕ್ಷೇತ್ರಂ ತದಾಸೀದ್ಧರಿಲೋಕಸಮ್ಮಿತಂ
ಯದೀಯುರತ್ರಾಖಿಲಸಜ್ಜನಾ ಯುತಿಮ್ ।
ನಾನಾಪ್ತಕಾಮಾಶ್ಚ ತತೋ ಬಭೂವು-
ರ್ನಿರ್ಯತ್ನದೃಶ್ಯಶ್ಚ ಯತೋऽತ್ರ ಕೇಶವಃ ॥

ಕುರುಕ್ಷೇತ್ರ ಆಗ ವಿಷ್ಣುಲೋಕಕ್ಕೆ ಸದೃಶವಾಗಿತ್ತು. ಏಕೆಂದರೆ ಇಲ್ಲಿ ಎಲ್ಲ ಸಜ್ಜನರೂ ಒಂದೆಡೆ ಸೇರಿದ್ದರು. ಯಾರೂ ತಮ್ಮ ಕಾಮನೆಗಳನ್ನು ಪೂರೈಸಿಕೊಳ್ಳದಿದ್ದವರು ಇಲ್ಲಿ ಇರಲಿಲ್ಲ. ಮತ್ತು ಇಲ್ಲಿ ಕೃಷ್ಣನು ಏನೂ ಪ್ರಯಾಸವಿಲ್ಲದೆ ಕಣ್ಣಿಗೆ ಕಾಣಿಸಿಕೊಳ್ಳುತ್ತಿದ್ದನು.

ದ್ವಾದಶಾಬ್ದಂ ಮಹಾಸತ್ರಮೇವಮೇತಾದೃಶಂ ಹರಿಃ ।
ಸಮಾಪ್ಯಾವಭೃಥಸ್ನಾತಃ ಪೂಜಯಿತ್ವಾऽಖಿಲಾನ್ ಜನಾನ್ ॥

ಅನುಜಜ್ಞೇ ಕ್ರಮೇಣೈವ ವತ್ಸರೇಣ ಸಮಾಗತಾನ್ ।
ಸ್ವಕುಲಂ ಸಂಜಿಹೀರ್ಷುಃ ಸ ವಿಪ್ರಶಾಪಮಜೀಜನತ್ ॥

ಹನ್ನೆರಡು ವರ್ಷಗಳ ಮಹಾಸತ್ರವನ್ನು ಶ್ರೀಕೃಷ್ಣನು ಹೀಗೆ ಇದೇ ರೀತಿಯಲ್ಲಿ ಮಾಡಿ ಮುಗಿಸಿ, ಅವಭೃಥ ಸ್ನಾನ ಮಾಡಿ, ಎಲ್ಲ ಜನರನ್ನೂ ಸತ್ಕರಿಸಿ, ಬಂದಿರುವವರೆಲ್ಲರನ್ನೂ ಕ್ರಮವಾಗಿ ಒಂದು ವರ್ಷದಲ್ಲಿ ಹಿಂದೆ ಕಳಿಸಿಕೊಟ್ಟನು. ತನ್ನ ಕುಲವನ್ನು ಸಂಹರಿಸಲು ಬಯಸಿ ಬ್ರಾಹ್ಮಣ ಶಾಪವನ್ನು ಉಂಟು ಮಾಡಿದನು.

ಉಪದಿಶ್ಯ ಪರಂ ಜ್ಞಾನಮುದ್ಧವಾಯಾಮುಮಾಶ್ರಮಮ್ ।
ಬದರ್ಯಾಖ್ಯಂ ಪ್ರಾಪಯಿತ್ವಾ ಸಪ್ತಮಾಬ್ದಂ ಶತೋತ್ತರಮ್ ॥

ಪ್ರತೀಕ್ಷನ್ ಪಾಲಯಾಮಾಸ ಪಾರ್ಥೈಃ ಸಹ ಭುವಂ ಪ್ರಭುಃ ।
ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋऽಪತತ್ ।
ಷಟ್‌ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥

ಶ್ರೀಕೃಷ್ಣನು ಉದ್ಧವನಿಗೆ ಉತ್ತಮ ಜ್ಞಾನವನ್ನು ಉಪದೇಶಿಸಿ, ಬದರಿಕಾಶ್ರಮಕ್ಕೆ ಕಳಿಸಿ, ತನ್ನ ಅವತಾರಸಮಾಪ್ತಿಗಾಗಿ ನೂರೇಳನೇ ವರ್ಷವನ್ನು ಪ್ರತೀಕ್ಷಿಸಿ,

ಪಾಂಡವರೊಂದಿಗೆ ಭೂಮಿಯನ್ನು ಆಳಿದನು. ಯಾವಾಗ ದುರ್ಯೋಧನನು ಪತನ ಹೊಂದಿದನೋ ಆಗಲೇ ಕಲಿಯುಗ ಪ್ರಾರಂಭವಾಯಿತು. ಆದರೆ ಶ್ರೀಕೃಷ್ಣನು ಪುನಃ ಮೂವತ್ತಾರು ವರ್ಷ ಕೃತಯುಗವನ್ನೇ ನಡೆಸಿದನು.

ಕೃತಾದಪಿ ವಿಶೇಷೋಽಯಂ ಯತ್ಪುಣ್ಯಸ್ಯಾಧಿಕಂ ಫಲಮ್ ।
ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥

ಕಲಿಯುಗಸ್ವಭಾವದಿಂದ ಮತ್ತು ಶ್ರೀಕೃಷ್ಣನ ಸಂಕಲ್ಪದಿಂದ ಪುಣ್ಯಕರ್ಮಕ್ಕೆ ಅಧಿಕ ಫಲ. ಪಾಪಕರ್ಮಕ್ಕೆ ಅಲ್ಪ ಫಲವಾದ್ದರಿಂದ ಈ ಮೂವತ್ತಾರು ವರ್ಷಗಳ ಕಾಲ ಕೃತಯುಗಕ್ಕಿಂತಲೂ ಅಧಿಕವೆನಿಸಿತ್ತು.

ಏವಂ ಸುಧಾರ್ಮಿಕೇ ಲೋಕೇ ಹರಿಭಕ್ತಿಪರಾಯಣೇ ।
ನಷ್ಟೇಷು ಕಲಿಲಿಂಗೇಷು ಯುಗವೃತ್ತಿಮಭೀಪ್ಸವಃ ॥

ಬ್ರಹ್ಮರುದ್ರಾದಯೋ ದೇವಾಃ ಸ್ತುತ್ವಾ ಕೇಶವಮವ್ಯಯಮ್ ।
ವ್ಯಜ್ಞಾಪಯನ್ ಸ್ವಲೋಕಾಪ್ತಿಮೋಮಿತ್ಯಾಹ ಸ ಚಾಚ್ಯುತಃ ॥

ಹೀಗೆ ಲೋಕವು ಬಹಳ ಧರ್ಮನಿರತವಾಗಿದ್ದು ಹರಿಭಕ್ತಿಯಲ್ಲಿ ಆಸಕ್ತವಾದಾಗ ಕಲಿಯುಗದ ಲಕ್ಷಣಗಳು ಮರೆಯಾದಾಗ, ಕಲಿಯುಗದ ಪ್ರವೃತ್ತಿಯಾಗಬೇಕೆಂದು ಬಯಸಿದ ಬ್ರಹ್ಮ-ರುದ್ರಾದಿ ದೇವತೆಗಳು ಅವ್ಯಯನಾದ ಶ್ರೀಕೃಷ್ಣನನ್ನು ಸ್ತುತಿಸಿ, ತನ್ನ ಲೋಕಕ್ಕೆ ಹಿಂದಿರುಗಿ ಬರಬೇಕೆಂದು ವಿಜ್ಞಾಪಿಸಿದರು. ಕೃಷ್ಣನೂ ಆಗಲಿ ಎಂದನು.

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇರ್ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥

ಸಜ್ಜನರೇ ಭೂಮಿಯ ಮೇಲೆ ಅಧಿಕರಾದರೆ ಕಲಿಕಾಲದ ವಿಜೃಂಭಣೆ ಸರಿಯಾಗಿ ಆಗಲಾರದು ಎಂದು ಶ್ರೀಕೃಷ್ಣನು ತನ್ನ ಕುಲವನ್ನು ಸಂಹರಿಸಲು ಪ್ರಭಾಸಕ್ಕೆ ಕರೆದುಕೊಂಡು ಹೋದನು.

ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತತ್ತಿಥಿವರ್ಮದಾ ।
ಗತ್ಯೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹತ್ಫಲಮಿತ್ಯಜಃ ॥

ಪ್ರಕಾಶಯಿತುಮೇವೈತಾನ್ ಪ್ರಭಾಸಾಯ ಕುಶಸ್ಥಲಾ ।
ನೀತ್ವಾ ದಾನಾದಿಸದ್ಧರ್ಮಾಂಸ್ಸೇರಕಾರಯದಚ್ಯುತಃ ॥

ಪುಣ್ಯಕ್ಷೇತ್ರದಲ್ಲಿಯೂ ಸ್ವಗೃಹದಲ್ಲಿ ಮರಣ ಹೊಂದುವುದು ಹೆಚ್ಚು ಪುಣ್ಯದಾಯಕವಲ್ಲ. ಅಲ್ಪವಾಗಿದ್ದರೂ ಬೇರೆಯೇ ಆದ ಕ್ಷೇತ್ರಕ್ಕೆ ಹೋದರೆಯೇ ಮಹಾಫಲ. ಇನ್ನು ಅಲ್ಲಿಯೇ ಮರಣ ಹೊಂದಿದರೆ ಏನು ಹೇಳಬೇಕು? ಎಂದು ತಿಳಿಸಲು ಶ್ರೀಕೃಷ್ಣನು ಯಾದವರನ್ನು ಕುಶಸ್ಥಲದಿಂದ ಪ್ರಭಾಸಕ್ಕೆ ಒಯ್ದು ಅಲ್ಲಿ ಒಳ್ಳೆಯ ದಾನಧರ್ಮ ಕಾರ್ಯಗಳನ್ನು ಮಾಡಿಸಿದನು.

ತೇ ತತಃ ಶಾಪದೋಷೇಣ ಕೃಷ್ಣೇನೈವ ವಿಮೋಹಿತಾಃ ।
ಮೈರೇಯಮತ್ತಾ ಅನ್ಯೋನ್ಯಂ ನಿಪಾತ್ಯ ಸ್ವಂ ತನೂಂ ಗತಾಃ ॥

ತದ್ ದೃಷ್ಟ್ವಾ ಬಲದೇವೋಽಪಿ ಯೋಗೇನ ಸ್ವಾಂ ತನು ಜಹೌ ॥

ಯಾದವರು ಬಳಿಕ ಶಾಪದೋಷದಿಂದ ಕೃಷ್ಣನಿಂದಲೇ ಮೋಹಪರವಶರಾದರು. ಮದ್ಯಪಾನದಿಂದ ಮತ್ತರಾಗಿ ಪರಸ್ಪರ ಸಂಹರಿಸಿ ತಮ್ಮ ನಿಜಸ್ವರೂಪವನ್ನು ಪಡೆದರು. ಅದನ್ನು ನೋಡಿ ಬಲರಾಮನೂ ಯೋಗದಿಂದ ತನ್ನ ಶರೀರವನ್ನು ಪರಿತ್ಯಜಿಸಿದನು. ಮೂಲರೂಪವನ್ನು ಪಡೆದನು.

★ ★ ★ ★ ★

ಒಂದನೆಯ ಅಧ್ಯಾಯ

ಪ್ರಜೆಗಳನ್ನು ರಕ್ಷಿಸುತ್ತಾ ತನ್ನ ಪಟ್ಟಣದಲ್ಲಿ ಸಹೋದರರೊಂದಿಗೆ ಸುಖವಾಗಿದ್ದ ಯುಧಿಷ್ಠಿರನು ಒಂದು ಬಾರಿ ಅಶುಭಸೂಚಕವಾದ ನಿಮಿತ್ತಗಳನ್ನು ನೋಡುವುದು. ಸ್ವಲ್ಪ ಕಾಲದ ನಂತರ ಬಲರಾಮ-ಕೃಷ್ಣರಿಂದ ಕೂಡಿದ ಎಲ್ಲ ಯಾದವರು ಪರಸ್ಪರವಾಗಿ ಮುಸಲದಿಂದ ಹೊಡೆದುಕೊಂಡು ಪೂರ್ಣವಾಗಿ ನಾಶರಾದರೆಂದು ಕೇಳಿ ತಿಳಿಯುವುದು.

ಜನಮೇಜಯಃ

ಮೋಕ್ಷಂ ಪ್ರಾಪ್ತೇಷ ವಿದುರೇ ಧೃತರಾಷ್ಟ್ರೇ ದಿವಂ ಗತೇ ।
ಸಂಜಯಾದೌ ಚ ಭಗವನ್ ಕಿಮಕುರ್ವತ ಪಾಂಡವ ॥೧॥

ಜನಮೇಜಯ– ಹೇ ಭಗವನ್, ವಿದುರನು ಮೋಕ್ಷವನ್ನು ಪಡೆದ ನಂತರ ಧೃತರಾಷ್ಟ್ರನೂ, ಸಂಜಯಾದಿಗಳೂ ದಿವಂಗತರಾದ ಮೇಲೆ, ಪಾಂಡುಪುತ್ರನಾದ ಯುಧಿಷ್ಠಿರನು ಏನು ಮಾಡಿದನು?

ವೈಶಂಪಾಯನಃ

ಷಟ್‌ತ್ರಿಂಶೇ ವತ್ಸರೇ ಪ್ರಾಪ್ತೇ ತದಾ ಕೌರವನಂದನಃ ।
ದದರ್ಶ ವಿಪರೀತಾನಿ ನಿಮಿತ್ತಾನಿ ಯುಧಿಷ್ಠಿರಃ ॥೨॥

ವೈಶಂಪಾಯನ– ಕುರುನಂದನನಾದ ಯುಧಿಷ್ಠಿರನು ರಾಜ್ಯಭಾರವನ್ನು ಸ್ವೀಕಾರ ಮಾಡಿ ಮೂವತ್ತಾರನೆಯ ವರ್ಷವು ಪ್ರಾಪ್ತವಾದಾಗ ಅಶುಭ ಸೂಚಕವಾದ ವಿಪರೀತ ನಿಮಿತ್ತಗಳನ್ನು ಕಂಡನು.

ವವುರ್ವಾತಾಶ್ಚ ನಿರ್ಘಾತಾ ರೂಕ್ಷಾಃ ಶಕಲವರ್ಷಿಣಃ ।
ಅಪಸವ್ಯಾನಿ ಶಕುನಾ ಮಂಡಲಾನಿ ಪ್ರಚಕ್ರಿರೇ ॥೩॥

ಕಲ್ಲು-ಮರಳುಗಳೊಂದಿಗೆ ಕೂಡಿದ ಒಣಗಾಳಿಯು ಜೋರಾಗಿ ಬೀಸುತ್ತಾ ಪರಸ್ಪರ ಹೊಡೆದುಕೊಂಡು ಶಬ್ದವನ್ನೆಬ್ಬಿಸತೊಡಗಿತು. ಪಕ್ಷಿಗಳು ಅಪ್ರದಕ್ಷಿಣೆಯಾಗಿ ಗುಂಪಾಗಿ ಸುತ್ತುಬರತೊಡಗಿದವು.

ಪ್ರತ್ಯಗೂಹುರ್ಮಹಾನದ್ಯೋ ದಿಶೋ ನೀಹಾರಸಂವೃತಾಃ ।
ಉಲ್ಕಾಶ್ಚಾಂಗಾರವರ್ಷಿಣ್ಯಃ ಪ್ರಾಪತನ್ ಗಗನಾದ್ ಭುವಿ ॥೪॥

ಮಹಾನದಿಗಳು ವಿರುದ್ಧ ದಿಕ್ಕಿನಲ್ಲಿ ಹರಿಯತೊಡಗಿದವು. ದಿಕ್ಕುಗಳಲ್ಲಿ ದಟ್ಟವಾದ ಮಂಜು ಮುಸುಕಿತು. ಆಕಾಶದಿಂದ ಕೆಂಡದ ಮಳೆಗಳನ್ನು ಸುರಿಸುತ್ತಾ ಉಲ್ಕೆಗಳು ಭೂಮಿಯಲ್ಲಿ ಬಿದ್ದವು.

ಆದಿತ್ಯೋ ರಜಸಾ ರಾಜನ್ ಸಮವಚ್ಛನ್ನಮಂಡಲಃ ।
ವಿರಶ್ಮಿರುದಯೇ ನಿತ್ಯಂ ಕಬಂಧೈಃ ಸಮಲಂಕೃತಃ ॥೫॥

ಹೇ ರಾಜನೇ, ಸೂರ್ಯನು ಧೂಳಿನಿಂದ ಪೂರ್ಣವಾಗಿ ಮುಚ್ಚಿಹೋದ ಬಿಂಬವುಳ್ಳವನಾದನು. ಅಲ್ಲದೇ ನಿತ್ಯವೂ ಉದಯಕಾಲದಲ್ಲಿ ಧೂಮಕೇತುಗಳಿಂದ ಸುತ್ತುವರಿಯಲ್ಪಟ್ಟು ಕಿರಣಗಳಿಲ್ಲದವನಾದನು.

ಪರಿವೇಷಾಶ್ಚ ದೃಶ್ಯಂತೇ ದಾರುಣಾಶ್ಚಂದ್ರಸೂರ್ಯಯೋಃ ।
ತ್ರಿವರ್ಣಾಃ ಶ್ಯಾಮರೂಕ್ಷಾಂತಾಸ್ತಥಾ ಭಸ್ಮಾರುಣಪ್ರಭಾಃ ॥೬॥

ಚಂದ್ರ ಹಾಗೂ ಸೂರ್ಯರಿಬ್ಬರಿಗೂ ದಾರುಣವಾದ ಹೊರಮಂಡಲಗಳು ಕಾಣುತ್ತಿದ್ದವು. ಆ ಪರಿಧಿಗಳು ಹೊರಭಾಗದಲ್ಲಿ ಕಠೋರವಾದ ಕಪ್ಪು ಬಣ್ಣದಿಂದಲೂ, ಮಧ್ಯದಲ್ಲಿ ಬೂದು ಬಣ್ಣ ಹಾಗೂ ಕೆಂಪು ಬಣ್ಣದ ಪ್ರಭೆಗಳಿಂದಲೂ ಕೂಡಿದ್ದು ಮೂರು ವರ್ಣದವುಗಳಾಗಿದ್ದವು.

ಏತೇ ಚಾನ್ಯೇ ಚ ಬಹವ ಉತ್ಪಾತಾ ಭಯಶಂಸಿನಃ ।
ದೃಶ್ಯಂತೇ ಜಗತೋ ನಾಥೇ ದಿವಮಾರೋಢುಮಿಚ್ಛತಿ ॥೭॥

ಯಸ್ಯ ಪ್ರಸಾದಾದ್ ಧರ್ಮೋಽಯಂ ಕೃತೇ ಯದ್ವತ್ ಕಲಾವಪಿ ।
ಪಾಂಡವಾಶ್ಚ ಮಹಾಭಾಗ ಯುಕ್ತಾಸ್ತು ಯಶಸಾಽನಘ ॥೮॥

ಹೇ ಮಹಾಭಾಗನೇ, ಅನಘನೇ, ಯಾರ ಪ್ರಸಾದದಿಂದ ಕೃತಯುಗದಲ್ಲಿ ಹೇಗೋ ಹಾಗೆ ಈ ಕಲಿಕಾಲದಲ್ಲಿ ಧರ್ಮವು ನಿಂತಿರುವುದೋ, ಅಲ್ಲದೇ ಪಾಂಡವರೂ ಯಶಸ್ಸಿನಿಂದ ಕೂಡಿರುವರೋ ಅಂತಹ ಜಗನ್ನಾಥನಾದ ಕೃಷ್ಣನು ಸ್ವರ್ಗವನ್ನೇರಲು ಬಯಸಿದಾಗ ಈ ಹಿಂದೆ ಹೇಳಿದ, ಅಲ್ಲದೆ ಭಯವನ್ನುಂಟು ಮಾಡುವ ನಾನಾ ರೀತಿಯ ಬೇರೆ ಉತ್ಪಾತಗಳೂ ತೋರಿದವು.

ಕಸ್ಯಚಿತ್ತ್ವಥ ಕಾಲಸ್ಯ ಕುರುರಾಜೋ ವಿಶಂಕಿತಃ ।
ಶುಶ್ರಾವ ವೃಷ್ಣಿಚಕ್ರಸ್ಯ ಮುಸಲೋತ್ಪಾದನಂ ಕೃತಮ್ ॥೯॥

ಹೀಗೆ ಕುರುರಾಜನಾದ ಯುಧಿಷ್ಠಿರ ಉತ್ಪಾತಗಳಿಂದ ಕಳವಳಗೊಂಡಿದ್ದಾಗಲೇ ಸ್ವಲ್ಪಕಾಲ ಕಳೆದ ನಂತರ ಯಾದವರ ಸಮೂಹವು ಒನಕೆಯಿಂದ ನಾಶವಾಯಿತೆಂದು ಕೇಳಿದನು.

ವಿಮುಕ್ತಂ ವಾಸುದೇವಂ ಚ ಶ್ರುತ್ವಾ ರಾಮಂ ಚ ಪಾಂಡವಃ ।
ಸಮಾನೀಯಾಬ್ರವೀದ್ ಭ್ರಾತೄನ್ ಕಿಂ ಕರಿಷ್ಯಾಮ ಇತ್ಯುತ ॥೧೦॥

ಅಲ್ಲದೆ ವಾಸುದೇವನು ಈ ಜಗತ್ತನ್ನು ಬಿಟ್ಟು ಹೋದುದನ್ನಾಗಿಯೂ, ರಾಮನೂ ಜಗತ್ತಿನಿಂದ ಹೊರಟು ಹೋದನೆಂದು ಕೇಳಿ ಆ ಪಾಂಡುಪುತ್ರನು ಸಹೋದರರನ್ನು ಕರೆಸಿ, ಮುಂದೇನು ಮಾಡೋಣ? ಎಂದು ಕೇಳಿದನು.

ಪರಸ್ಪರಂ ಸಮಾಸಾದ್ಯ ಬ್ರಹ್ಮದಂಡಬಲಾತ್ ಕೃತಾನ್ ।
ವೃಷ್ಣೀನ್ ವಿನಷ್ಟಾಂಸ್ತೇ ಶ್ರುತ್ವಾ ವ್ಯಥಿತಾಃ ಪಾಂಡವಾ ಭೃಶಮ್ ॥೧೧॥

ಹೀಗೆ ಪರಸ್ಪರ ಮಾತನಾಡಿಕೊಂಡು, ಗೊತ್ತಿರುವವರನ್ನು ಸಂಪರ್ಕಿಸಿ, ಬ್ರಹ್ಮಶಾಪದ ಬಲದಿಂದ ಪ್ರಚೋದಿತರಾಗಿ ವೃಷ್ಣಿಗಳು ನಾಶವಾದರೆಂದು ಕೇಳಿ ಆ ಪಾಂಡವರು ಬಹಳವಾಗಿ ವ್ಯಥೆಗೊಂಡರು.

ನಿಧನಂ ವಾಸುದೇವಸ್ಯ ಸಮುದ್ರಸ್ಯೇವ ಶೋಷಣಮ್ ।
ವೀರಾ ನ ಶ್ರದ್ದಧುಸ್ತಸ್ಯ ವಿನಾಶಂ ಶಾರ್ಙ್ಗಧನ್ವನಃ ॥೧೨॥

ವೀರರಾದ ಅವರು ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದ ವಾಸುದೇವನ ಮರಣವೆಂಬ ವಿನಾಶವನ್ನು, ಸಮುದ್ರವು ಒಣಗಿತೆಂಬಂತೆ ವಿಶ್ವಾಸವಿಲ್ಲದವರಾದರು.

ಮೌಸಲಂ ತೇ ಸಮಾಶ್ರಿತ್ಯ ದುಃಖಶೋಕಸಮನ್ವಿತಾಃ ।
ವಿಷಣ್ಣಾ ಹತಸಂಕಲ್ಪಾಃ ಪಾಂಡವಾಃ ಸಮುಪಾವಿಶನ್ ॥೧೩॥

ಈ ಮೌಸಲಯುದ್ಧದ ಬಗ್ಗೆ ಸರಿಯಾಗಿ ವಿಮರ್ಶಿಸಿ ತಿಳಿದು, ದುಃಖ ಹಾಗೂ ಶೋಕದಿಂದ ಕೂಡಿದವರಾಗಿ ಸಂಕಲ್ಪಗಳನ್ನೇ ಕಳೆದುಕೊಂಡು ವಿಷಣ್ಣರಾಗಿ ಕುಳಿತರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮೌಸಲಪರ್ವಣಿ ವೃಷ್ಣೀನಾಂ ನಿಧನಂ ಶ್ರುತ್ವಾ ಪಾಂಡವಾನಾಂ ಚಿಂತಾ ನಾಮ
ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ವೈಶಂಪಾಯನರು ಜನಮೇಜಯನಿಗೆ ಯಾದವರು ಮುಸಲದಿಂದ ಹತರಾದರೆಂಬ ಕಥೆಯನ್ನು ಹೇಳಲು ಆರಂಭಿಸುವುದು. ವಿಶ್ವಾಮಿತ್ರಾದಿ ಮಹರ್ಷಿಗಳು ದ್ವಾರಕೆಗೆ ಆಗಮಿಸಿದಾಗ ಕೆಲವು ಯಾದವರು ಸಾಂಬನಿಗೆ ಸ್ತ್ರೀವೇಷವನ್ನು ತೊಡಿಸಿ, ಋಷಿಗಳಲ್ಲಿ ಈ ಗರ್ಭಿಣಿಯು ಎಂತಹ ಮಗುವನ್ನು ಹಡೆಯುತ್ತಾಳೆ ಎಂದು ಪ್ರಶ್ನಿಸುವುದು. ಆಗ ಕೋಪಗೊಂಡ ಮಹರ್ಷಿಗಳು ನಿಮ್ಮ ಕುಲವನ್ನು ನಾಶಮಾಡುವ ಕಬ್ಬಿಣದ ಒನಕೆಯನ್ನು ಹಡೆಯುತ್ತಾಳೆ ಎಂದು ಶಪಿಸುವುದು. ಮಾರನೆಯ ದಿನ ಸಾಂಬನು ಮುಸಲವನ್ನು ಹಡೆದಾಗ ಹೆದರಿದ ಅವರು ರಾಜನ ಆಜ್ಞೆಯಂತೆ ಆ ಮುಸಲವನ್ನು ಚೂರ್ಣೀಕರಿಸಿ ಸಮುದ್ರದಲ್ಲಿ ಎಸೆಯುವುದು.

ಜನಮೇಜಯಃ

ಕಥಂ ವಿನಷ್ಟಾ ಭಗವನ್ನಂಧಕಾ ವೃಷ್ಣಿಭಿಃ ಸಹ ।
ಪಶ್ಯತೋ ವಾಸುದೇವಸ್ಯ ಭೋಜಾಶ್ಚೈವ ಮಹಾರಥಾಃ ॥೧॥

ಜನಮೇಜಯ– ಹೇ ಭಗವನ್, ಮಹಾರಥರಾದ ಅಂಧಕರು ಹಾಗೂ ಭೋಜರು ವೃಷ್ಣಿಗಳೊಂದಿಗೆ ವಾಸುದೇವನು ನೋಡುತ್ತಿದ್ದಂತೆಯೇ ಹೇಗೆ ವಿನಷ್ಟರಾದರು?

ವೈಶಂಪಾಯನಃ

ಷಟ್‌ತ್ರಿಂಶೇಽಥ ತತೋ ವರ್ಷೇ ವೃಷ್ಣೀನಾಮನಯೋಽಭವತ್ ।
ಅನ್ಯೋನ್ಯಂ ಮೌಸಲೈಸ್ತೇ ತು ನಿಜಘ್ನುಃ ಕಾಲಚೋದಿತಾಃ ॥೨॥

ವೈಶಂಪಾಯನ– ಮೂವತ್ತಾರನೆಯ ವರ್ಷದಲ್ಲಿ ವೃಷ್ಣಿಗಳಿಗೆ ಮಹತ್ತಾದ ಆಪತ್ತು ಉಂಟಾಯಿತು. ಮುಸಲಕ್ಕೆ ಸಂಬಂಧಿಸಿದ ಶಾಪವೇ ಮೊದಲಾದವುಗಳಿಂದ ಕಾಲಚೋದಿತರಾದ ಅವರು ಪರಸ್ಪರ ಹೊಡೆದಾಡಿಕೊಂಡರು.

ಜನಮೇಜಯಃ

ಕೇನಾನುಶಪ್ತಾಸ್ತೇ ವೀರಾಃ ಕ್ಷಯಂ ವೃಷ್ಣ್ಯಂಧಕಾ ಗತಾಃ ।
ಭೋಜಾಶ್ಚ ದ್ವಿಜವರ್ಯ ತ್ವಂ ವಿಸ್ತರೇಣ ವದಸ್ವ ಮೇ ॥೩॥

ಜನಮೇಜಯ– ಹೇ ದ್ವಿಜವರ್ಯನೇ, ವೀರರಾದ ವೃಷ್ಣಿಗಳು, ಅಂಧಕರು ಮತ್ತು ಭೋಜರು ಯಾರಿಂದ ಶಾಪಗ್ರಸ್ತರಾಗಿ ಕ್ಷಯವನ್ನೈದಿದರು? ಇದನ್ನು ನನಗೆ ವಿಸ್ತಾರವಾಗಿ ಹೇಳು.

ವೈಶಂಪಾಯನಃ

ವಿಶ್ವಾಮಿತ್ರಂ ಚ ಕಣ್ವಂ ಚ ನಾರದಂ ಚ ತಪೋಧನಮ್ ।
ಸಾರಣಪ್ರಮುಖಾ ವೀರಾ ದದೃಶುರ್ದ್ವಾರಕಾಂ ಗತಾನ್ ॥೪॥

ವೈಶಂಪಾಯನ– ಸಾರಣನೇ ಮೊದಲಾದ ಯಾದವವೀರರು ದ್ವಾರಕಾ ಪಟ್ಟಣವನ್ನು ತಲುಪಿರುವ ವಿಶ್ವಾಮಿತ್ರರನ್ನೂ, ಕಣ್ವರನ್ನೂ, ತಪೋಧನರಾದ ನಾರದನನ್ನೂ ನೋಡಲು ಹೊರಟರು.

ತೇ ವೈ ಸಾಂಬಂ ಪುರಸ್ಕೃತ್ಯ ಭೂಷಯಿತ್ವಾ ಸ್ತ್ರಿಯಂ ಯಥಾ ।
ಅಬ್ರುವನ್ನುಪಸಂಗಮ್ಯ ದೈವದಂಡನಿಪೀಡಿತಾಃ ॥೫॥

ಅವರು ಕೃಷ್ಣಪುತ್ರನಾದ ಸಾಂಬನನ್ನು ಸ್ತ್ರೀವೇಷದಿಂದ ಅಲಂಕರಿಸಿ, ಅವನನ್ನು ಮುಂದೆ ಮಾಡಿಕೊಂಡು ದುರದೃಷ್ಟದಿಂದ ಪೀಡಿತರಾಗಿ, ಋಷಿಗಳ ಸಮೀಪಕ್ಕೆ ಬಂದು ಹೀಗೆ ಹೇಳಿದರು.

ಇಯಂ ಸ್ತ್ರೀ ಪುತ್ರಕಾಮಸ್ಯ ಬಭ್ರೋರಮಿತತೇಜಸಃ ।
ಋಷಯಃ ಸಾಧು ಜಾನೀತ ಕಿಮಿಯಂ ಜನಯಿಷ್ಯತಿ ॥೬॥

ಇವಳು ಮಕ್ಕಳ ಬಯಕೆಯುಳ್ಳ ಬಭ್ರುವೆಂಬ ರಾಜನ ಪತ್ನಿ. ಅಮಿತವಾದ ತೇಜಸ್ಸುಳ್ಳ ಋಷಿಗಳೇ, ನೀವು ಭೂತ-ಭವಿಷ್ಯತ್-ವರ್ತಮಾನಗಳನ್ನು ಚೆನ್ನಾಗಿ ತಿಳಿದಿರುವಿರಿ. ಯಾವ ಮಗುವನ್ನು ಇವಳು ಹಡೆಯುತ್ತಾಳೆ?

ಇತ್ಯುಕ್ತಾಸ್ತೇ ತದಾ ರಾಜನ್ ವಿಪ್ರಲಂಭಪ್ರಧರ್ಷಿತಾಃ ।
ಪ್ರತ್ಯಬ್ರುವಂಸ್ತಾನ್ ಮುನಯೋ ಯತ್ತಚ್ಛೃಣು ನರಾಧಿಪ ॥೭॥

ಹೇ ನರಾಧಿಪತಿಯಾದ ರಾಜನೇ, ಹೀಗೆ ಅವರು ಹೇಳಿದಾಗ ಮೋಸದಿಂದ ಕೋಪಗೊಂಡ ಆ ಮುನಿಗಳು ಯಾವ ರೀತಿ ಉತ್ತರಿಸಿದರೋ ಅದನ್ನು ಕೇಳು.

ವೃಷ್ಣ್ಯಂಧಕವಿನಾಶಾಯ ಮುಸಲಂ ಘೋರಮಾಯಸಮ್ ।
ವಾಸುದೇವಸ್ಯ ದಾಯಾದಃ ಸಾಂಬೋऽಯಂ ಜನಯಿಷ್ಯತಿ ॥೮॥

ವೃಷ್ಣಿ ಹಾಗೂ ಅಂಧಕರ ನಾಶಕ್ಕಾಗಿ ಘೋರವಾದ ಕಬ್ಬಿಣದ ಒನಕೆಯನ್ನು ವಾಸುದೇವನ ಸಂತತಿಯಾದ ಈ ಸಾಂಬನು ಪ್ರಸವಿಸುತ್ತಾನೆ.

ಯೇನ ಯೂಯಂ ಸುದುರ್ವೃತ್ತಾ ನೃಶಂಸಾ ಜಾತಮನ್ಯವಃ ।
ಉಚ್ಛೇತ್ತಾರಃ ಕುಲಂ ಕೃತ್ಸ್ನಮೃತೇ ರಾಮಜನಾರ್ದನೌ ॥೯॥

ಆ ಯಾವ ಒನಕೆಯಿಂದಲೇ ಬಹುದುರಾಚಾರಿಗಳಾದ, ಕ್ರೂರರಾದ ನೀವೆಲ್ಲರು ಬಲರಾಮ, ಕೃಷ್ಣರನ್ನು ಹೊರತು ಪಡಿಸಿ ಪರಸ್ಪರ ಕೋಪಗೊಂಡವರಾಗಿ ಇಡೀ ಕುಲವನ್ನು ನಾಶ ಮಾಡುವಿರಿ.

ಸಮುದ್ರಂ ಯಾಸ್ಯತಿ ಶ್ರೀಮಾಂಸ್ತ್ಯಕ್ತ್ವಾ ದೇಹಂ ಹಲಾಯುಧಃ ।
ಜರಃ ಕೃಷ್ಣಂ ಮಹಾತ್ಮಾನಂ ಶಯಾನಂ ಭುವಿ ವೇತ್ಸ್ಯತಿ ॥೧೦॥

ಶ್ರೀಮಂತನಾದ, ಹಲಾಯುಧನಾದ ಬಲರಾಮನು ದೇಹವನ್ನು ಬಿಟ್ಟು ಸಮುದ್ರವನ್ನು ಸೇರುತ್ತಾನೆ. ಭೂಮಿಯಲ್ಲಿ ಮಲಗಿರುವ ಮಹಾತ್ಮನಾದ ಕೃಷ್ಣನನ್ನು ಜರನೆಂಬ ವ್ಯಾಧನು ಬಾಣದಿಂದ ಹೊಡೆಯುತ್ತಾನೆ.

ಇತ್ಯಬ್ರುವಂಸ್ತತೋ ರಾಜನ್ ಪ್ರಲಬ್ಧಾಸ್ತೈರ್ದುರಾತ್ಮಭಿಃ ।
ಮುನಯಃ ಕ್ರೋಧರಕ್ತಾಕ್ಷಾಃ ಸಮೀಕ್ಷ್ಯಾಥ ಪರಸ್ಪರಮ್ ॥೧೧॥

ಹೀಗೆ ದುರಾತ್ಮರಾದ ಆ ಸಾರಣಾದಿಗಳಿಂದ ವಂಚಿತರಾದ ಮುನಿಗಳು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವರಾಗಿ ಪರಸ್ಪರ ನೋಡಿಕೊಳ್ಳುತ್ತಾ ಹೀಗೆ ಹೇಳಿದರು.

ತಥೋಕ್ತ್ವಾ ಮುನಯಸ್ತೇ ತು ಯಥಾಗತಮಥೋ ಯಯುಃ ॥೧೨॥

ಇಷ್ಟು ಹೇಳಿದ ಆ ಮುನಿಗಳು ತಾವು ಬಂದಂತೆಯೇ ಹಿಂದಿರುಗಿದರು.

ಅಥಾಬ್ರವೀತ್ ತದಾ ವೃಷ್ಣೀನ್ ಶ್ರುತ್ವೈತನ್ಮಧುಸೂದನಃ ।
ಅಂತಜ್ಞೋ ಮತಿಮಾಂಸ್ತಸ್ಯ ಭವಿತವ್ಯಂ ತಥೇತಿ ತಾನ್ ॥೧೩॥

ಈ ವಿಷಯವನ್ನು ಕೇಳಿದ ಮಧುಸೂದನನಾದ ಶ್ರೀಕೃಷ್ಣನು ತನ್ನ ಕುಲಕ್ಕೆ ಅಂತ್ಯಕಾಲ ಬಂದಿದೆ ಎಂದು ತಿಳಿದು ತ್ರಿಕಾಲಜ್ಞಾನಿಯಾದುದರಿಂದ ಋಷಿಗಳು ಹೇಳಿದಂತೆಯೇ ಆಗಲಿದೆ ಎಂದು ಆ ವೃಷ್ಣಿಗಳಿಗೆ ತಿಳಿಸಿದನು.

ಏವಮುಕ್ತ್ವಾ ಹೃಷೀಕೇಶಃ ಪ್ರವಿವೇಶ ಪುರಂ ತದಾ ।
ಕೃತಾಂತಮನ್ಯಥಾ ನೈಚ್ಛತ್ಕರ್ತುಂ ಸ ಜಗತಃ ಪ್ರಭುಃ ॥೧೪॥

ಇಷ್ಟು ಮಾತ್ರ ಹೇಳಿ ಹೃಷೀಕೇಶನಾದ ಶ್ರೀಕೃಷ್ಣನು ಪಟ್ಟಣವನ್ನು ಪ್ರವೇಶಿಸಿದನು. ಜಗತ್ಪ್ರಭುವಾದ ಅವನು ಯಮಶಾಸನವನ್ನು ಬದಲಿಸಲು ಬಯಸಲಿಲ್ಲ.

ಶ್ವೋಭೂತೇಽಥ ತತಃ ಸಾಂಬೋ ಮುಸಲಂ ತದಸೂತ ವೈ ।
ಯೇನ ವೃಷ್ಣ್ಯಂಧಕಕುಲೇ ಪುರುಷಾ ಭಸ್ಮಸಾತ್ಕೃತಾಃ ॥೧೫॥

ಮಾರನೆಯ ದಿನವೇ ಸಾಂಬನು ಯಾವುದರಿಂದ ವೃಷ್ಣಿ ಮತ್ತು ಅಂಧಕಕುಲದ ಎಲ್ಲ ಪುರುಷರೂ ಭಸ್ಮೀಭೂತರಾದರೋ ಅಂತಹ ಆ ಒನಕೆಯನ್ನು ಹಡೆದನು.

ವೃಷ್ಣ್ಯಂಧಕವಿನಾಶಾಯ ಕಿಂಕರಪ್ರತಿಮಂ ಮಹತ್ ।
ಅಸೂತ ಶಾಪಜಂ ಘೋರಂ ತಚ್ಚ ರಾಜ್ಞೇ ನ್ಯವೇದಯನ್ ॥೧೬॥

ವೃಷ್ಣಿ ಮತ್ತು ಅಂಧಕರ ನಾಶಕ್ಕೋಸ್ಕರ, ಯಮಕಿಂಕರರಿಗೆ ಸದೃಶವಾದ, ಶಾಪದಿಂದುಂಟಾದ ಘೋರವಾದ ದೊಡ್ಡ ಒನಕೆಯನ್ನು ಏನು ಹಡೆದನೋ ಇದನ್ನು ರಾಜನಿಗೆ ನಿವೇದಿಸಿಕೊಂಡರು.

ವಿಷಣ್ಣರೂಪಸ್ತದ್ ರಾಜಾ ಸೂಕ್ಷ್ಮಂ ಚೂರ್ಣಮಕಾರಯತ್ ।
ತಚ್ಚೂರ್ಣಂ ಸಾಗರೇ ಚಾಪಿ ಪ್ರಾಕ್ಷಿಪನ್ ಪುರುಷಾ ನೃಪ ॥೧೭॥

ಹೇ ನೃಪನೇ, ಇದರಿಂದ ರಾಜನು ಭಯದಿಂದ ಬಿಳಿಚಿಕೊಂಡವನಾಗಿ ಆ ಒನಕೆಯನ್ನು ಸೂಕ್ಷ್ಮವಾಗಿ ಚೂರ್ಣಗೊಳ್ಳುವಂತೆ ಮಾಡಿಸಿದನು. ರಾಜಪುರುಷರು ಆ ಚೂರ್ಣವನ್ನು ಸಾಗರದಲ್ಲಿ ಎಸೆದರು.

ಅಘೋಷಯಂಶ್ಚ ನಗರೇ ವಚನಾದಾಹುಕಸ್ಯ ತೇ ।
ಜನಾರ್ದನಸ್ಯ ರಾಮಸ್ಯ ಬಭ್ರೋಶ್ಚೈವ ಮಹಾತ್ಮನಃ ॥೧೮॥

ಅನಂತರ ಆ ಪುರುಷರು ಆಹುಕನ, ಜನಾರ್ದನನ, ಬಲರಾಮನ, ಮಹಾತ್ಮನಾದ ಬಭ್ರುವಿನ ಮಾತಿನಂತೆ ಮುಂದೆ ಹೇಳುವಂತೆ ಡಂಗುರ ಸಾರಿದರು.

ಅದ್ಯಪ್ರಭೃತಿ ಸರ್ವೇಷು ವೃಷ್ಣ್ಯಂಧಕಕುಲೇಷ್ವಿಹ ।
ಸುರಾಸವೋ ನ ಕರ್ತವ್ಯಃ ಸರ್ವೈರ್ನಗರವಾಸಿಭಿಃ ॥೧೯॥

ಇಂದಿನಿಂದ ಆರಂಭಿಸಿ ವೃಷ್ಣ್ಯಂಧಕ ಕುಲದಲ್ಲಿರುವ ಎಲ್ಲರೂ ಜೊತೆಗೆ ನಗರ ವಾಸಿಗಳಾದ ಎಲ್ಲರೂ ಮದ್ಯದ ತಯಾರಿಯನ್ನು ಮಾಡಕೂಡದು.

ಯಶ್ಚ ನೋಽವಿದಿತಂ ಕುರ್ಯಾತ್ ಪೇಯಂ ಕಶ್ಚಿನ್ನರಃ ಕ್ವಚಿತ್ ।
ಜೀವನ್ ಸ ಶೂಲಮಾರೋಹೇತ್ಸ್ವಯಂ ಕೃತ್ವಾ ಸಬಾಂಧವಃ ॥೨೦॥

ಯಾವನು ನಮಗೆ ತಿಳಿಯದಂತೆ ಮದ್ಯವನ್ನು ತಯಾರಿಸುವನೋ, ಅಲ್ಲದೆ ಯಾವನಾದರೂ ಮನುಷ್ಯನು ಅದನ್ನು ಕುಡಿಯುತ್ತಾನೋ ಅವನು ಬಾಂಧವರೊಂದಿಗೆ ಜೀವಂತವಾಗಿರುವಾಗಲೇ ಶೂಲವನ್ನು ಏರಬೇಕಾಗುವುದು.

ತತೋ ರಾಜಭಯಾತ್ ಸರ್ವೇ ನಿಯಮಂ ಚಕ್ರಿರೇ ತದಾ ।
ನರಾಃ ಶಾಸನಮಾಜ್ಞಾಯ ತಸ್ಯ ರಾಜ್ಞೋ ಮಹಾತ್ಮನಃ ॥೨೧॥

ಅನಂತರ ಆ ರಾಜ್ಯದ ಮನುಷ್ಯರೆಲ್ಲರೂ ಮಹಾತ್ಮನಾದ ಆ ರಾಜನ ಶಾಸನವನ್ನು ತಿಳಿದು ರಾಜನ ಭಯದಿಂದ ನಿಯಮವನ್ನು ಮಾಡಿಕೊಂಡರು.

ನ ಕುರ್ವಂತಿ ನಿಷಿದ್ಧಂ ಚ ಕರ್ಮ ವೈ ನೃಪಸತ್ತಮ ॥೨೨॥

ಹೇ ನೃಪಸತ್ತಮನೇ, ಇದರಿಂದಾಗಿ ನಿಷಿದ್ಧವಾದ ಕರ್ಮಗಳನ್ನು ಯಾರೂ ಮಾಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮೌಸಲಪರ್ವಣಿ ಸುರಾಸವನಿಷೇಧೋ ನಾಮ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ದ್ವಾರಕೆಯಲ್ಲಿ ನಾನಾ ರೀತಿಯ ಉತ್ಪಾತಗಳ ಪ್ರಾದುರ್ಭಾವ. ಅದನ್ನು ನೋಡಿದ ಕೃಷ್ಣನು ಗಾಂಧಾರಿಯ ಶಾಪವನ್ನೂ ಸ್ಮರಿಸಿಕೊಂಡು, ಅದನ್ನು ಸತ್ಯಗೊಳಿಸಬೇಕೆಂದು ಎಲ್ಲ ವೃಷ್ಣಿಗಳೂ ತೀರ್ಥಯಾತ್ರೆಗೆ ಹೊರಡಬೇಕೆಂದು ಭಟರಿಂದ ಘೋಷಣೆ ಮಾಡಿಸುವುದು.

ವೈಶಂಪಾಯನಃ

ಏವಂ ಪ್ರಯತಮಾನಾನಾಂ ವೃಷ್ಣೀನಾಮಂಧಕೈಃ ಸಹ ।
ಕಾಲೋ ಗೃಹಾಣಿ ಸರ್ವೇಷಾಂ ಪರಿಚಕ್ರಾಮ ನಿತ್ಯಶಃ ॥೧॥

ವೈಶಂಪಾಯನ– ಹೀಗೆ ಅಂಧಕರೊಂದಿಗೆ ಕೂಡಿದ ಯಾದವರ ಪ್ರಯತ್ನವು ನಡೆಯುತ್ತಿರುವಾಗಲೇ ಕಾಲಪುರುಷನು (ಮೃತ್ಯುಸೂಚಕವಾದ ಶಕುನಗಳು) ಎಲ್ಲರ ಮನೆಗಳನ್ನು ನಿತ್ಯವೂ ಸುತ್ತಲಾರಂಭಿಸಿದನು.

ಕೃಕಲಾಸಃ ಸಶೇಷಂ ಚ ಕಾಕಪತ್ರವಿಲೋಚನಃ ॥೨॥

ಕಾಲ ಪುರುಷನು ಓತಿಕೇತದಿಂದ ಕೂಡಿದವನಾಗಿ ಕಾಗೆಪುಕ್ಕದಂತೆ ವಿಶ್ವತ ಕಣ್ಣುಳ್ಳವನಾಗಿ ಯಾದವರಿಗೆ ಕಾಣಿಸುತ್ತಿದ್ದನು.

ಕರಾಲೋ ವಿಕಟೋ ಮುಂಡಃ ಪುರುಷಃ ಕೃಷ್ಣಪಿಂಗಲಃ ।
ಗೃಹಾಣ್ಯಾವೇಕ್ಷ್ಯ ವೃಷ್ಣೀನಾಂ ನಾದೃಶ್ಯತ ಪುನಃ ಕ್ವಚಿತ್ ॥೩॥

ಭಯಾನಕವಾದ, ವಿಕೃತರೂಪವಾದ, ತಲೆಯನ್ನು ಬೋಳಿಸಿದ, ಕೆಂಚುಬಣ್ಣವುಳ್ಳ ಪುರುಷನು ಯಾದವರ ಮನೆಗಳನ್ನು ಇಣುಕುತ್ತಿದ್ದನು. ಮತ್ತೆ ಕೆಲವೊಮ್ಮೆ ಅದೃಶ್ಯನಾಗುತ್ತಿದ್ದನು.

ತಮಘ್ನಂತ ಮಹೇಷ್ವಾಸಾಃ ಶರೈಃ ಶತಸಹಸ್ರಶಃ ।
ನ ಚಾಶಕ್ಯತ ವೇದ್ದುಂ ಸ ಸರ್ವಭೂತಾತ್ಯಯಸ್ತದಾ ॥೪॥

ಆಗ ಮಹಾಧನುರ್ಧಾರಿಗಳಾದ ಅವರು ನೂರಾರು, ಸಾವಿರಾರು ಬಾಣಗಳಿಂದ ಅವನನ್ನು ಹೊಡೆದರು. ಆದರೂ ನಾಶಮಾಡಲು ಶಕ್ತರಾಗಲಿಲ್ಲ. ಏಕೆಂದರೆ ಅವನು ಸರ್ವಭೂತಗಳ ಮೃತ್ಯುವಾಗಿದ್ದನು.

ಉತ್ಪೇದಿರೇ ಮಹಾವಾತಾ ದಾರುಣಾಶ್ಚ ದಿನೇದಿನೇ ।
ವೃಷ್ಣ್ಯಂಧಕವಿನಾಶಾಯ ಬಹವೋ ರೋಮಹರ್ಷಣಾಃ ॥೫॥

ಅಷ್ಟೇ ಅಲ್ಲದೆ ಪ್ರತಿನಿತ್ಯವೂ ವೃಷ್ಣಿ ಹಾಗೂ ಅಂಧಕರ ನಾಶಕ್ಕಾಗಿ ರೋಮಾಂಚನವನ್ನುಂಟು ಮಾಡುವ ದಾರುಣವಾದ, ಬಹುರೀತಿಯ ಚಂಡ ಮಾರುತಗಳು ಆರಂಭವಾದವು.

ವಿವೃದ್ಧಮೂಷಿಕಾ ರಥ್ಯಾ ವಿಭಿನ್ನಮಣಿಕಾಸ್ತಥಾ ।
ಕೇಶಾ ನಖಾಶ್ಚ ಸುಪ್ತಾನಾಮದ್ಯಂತೇ ಮೂಷಿಕೈರ್ನಿಶಿ ॥೬॥

ರಸ್ತೆಗಳಲ್ಲಿ ದೊಡ್ಡ ದೊಡ್ಡ ಇಲಿಗಳು ಸಂಚರಿಸಲಾರಂಭಿಸಿದವು. ಮನೆಗಳಲ್ಲಿರುವ ವಸ್ತ್ರಾದಿಗಳನ್ನು ತುಂಬಿಡುವ ಮಣ್ಣಿನ ಪೆಟ್ಟಿಗೆಗಳು (ಗುಡಾಣಗಳು) ತಾವಾಗಿಯೇ ಒಡೆಯಲಾರಂಭಿಸಿದವು. ಅಲ್ಲದೆ ರಾತ್ರಿ ಮಲಗಿದ ವ್ಯಕ್ತಿಗಳ ಕೂದಲು ಮತ್ತು ಉಗುರುಗಳನ್ನು ಇಲಿಗಳು ತಿನ್ನಲಾರಂಭಿಸಿದವು.

ಚೀಚೀಕೂಚೀತಿ ವಾಶಂತಿ ಶಾರಿಕಾ ವೃಷ್ಣಿವೇಶ್ಮಸು ।
ನೋಪಶಾಮ್ಯತಿ ಶಬ್ದಶ್ಚ ಸದಿವಾರಾತ್ರಮೇವ ಹಿ ॥೭॥

ಯಾದವರ ಮನೆಗಳಲ್ಲಿ ಹೆಣ್ಣು ಗಿಳಿಗಳು ಚೀಚೀಕೂಚೀ ಇತ್ಯಾದಿಯಾಗಿ ಶಬ್ದ ಮಾಡತೊಡಗಿದವು. ಈ ಶಬ್ದವು ರಾತ್ರಿ-ಹಗಲು ಕೊನೆಯಿಲ್ಲದೆ ಕೇಳಿಬರುತ್ತಿತ್ತು.

ಅನ್ವಕುರ್ವನ್ನುಲೂಕಾನಾಂ ಸಾರಸಾ ವಿರುತಂ ತಥಾ ।
ಅಜಾಃ ಶಿವಾನಾಂ ವಿರುತಮನ್ವಕುರ್ವಂತ ಭಾರತ ॥೮॥

ಸಾರಕ್ಕಿಗಳು ಗೂಬೆಗಳ ಕೂಗನ್ನು ಅನುಕರಿಸಿದವು. ಹೇ ಭಾರತನೇ, ಆಡುಗಳು ನರಿಗಳ ಕೂಗನ್ನು ಅನುಸರಿಸಿ ಕೂಗಲಾರಂಭಿಸಿದವು.

ಪಾಂಡುರಾ ರಕ್ತಪಾದಾಶ್ಚ ವಿಹಗಾಃ ಕಾಲಚೋದಿತಾಃ ।
ವೃಷ್ಣ್ಯಂಧಕಾನಾಂ ಗೇಹೇಷು ಕಪೋತಾ ವ್ಯಚರಂಸ್ತದಾ ॥೯॥

ವೃಷ್ಣಿ ಹಾಗೂ ಅಂಧಕರ ಮನೆಗಳಲ್ಲಿ ಯಮನಿಂದ ಕಳುಹಿಸಲ್ಪಟ್ಟ ಬಿಳಿಯ ಬಣ್ಣದ, ಕೆಂಪುಕಾಲುಗಳುಳ್ಳ ಹಕ್ಕಿಗಳು ಹಾಗೂ ಪಾರಿವಾಳಗಳು ಸಂಚರಿಸತೊಡಗಿದವು.

ವ್ಯಜಾಯಂತ ಖರಾ ಗೋಷು ಕರಭಾಶ್ವತರೀಷು ಚ ।
ಶುನೀಷ್ವಪಿ ಬಿಡಾಲಾಶ್ಚ ಮೂಷಿಕಾ ನಕುಲೀಷು ಚ ॥೧೦॥

ಗೋವುಗಳ ಹೊಟ್ಟೆಯಲ್ಲಿ ಕತ್ತೆಗಳೂ, ಹೇಸರಗತ್ತೆಗಳಲ್ಲಿ ಒಂಟೆಯ ಮರಿಗಳೂ, ಹೆಣ್ಣುನಾಯಿಗಳಲ್ಲಿ ಬೆಕ್ಕುಗಳೂ, ಮುಂಗುಸಿಗಳಲ್ಲಿ ಇಲಿಗಳೂ ಜನಿಸತೊಡಗಿದವು.

ನಾಪತ್ರಪಂತ ಪಾಪಾನಿ ಕುರ್ವಂತೋ ವೃಷ್ಣಯಸ್ತದಾ ।
ಪ್ರಾರ್ದಯನ್ ಬ್ರಾಹ್ಮಣಾಂಶ್ಚಾಪಿ ಪಿತೄನ್ ದೇವಾಂಸ್ತಥೈವ ಚ ॥೧೧॥

ಅದೇ ಸಮಯದಲ್ಲಿ ವೃಷ್ಣಿಗಳು ಪಾಪಕರ್ಮಗಳನ್ನು ನಾಚಿಕೆಯಿಲ್ಲದೆ ನಡೆಸತೊಡಗಿದರು. ಬ್ರಾಹ್ಮಣರನ್ನೂ, ಪಿತೃಗಳನ್ನೂ ಹಾಗೂ ದೇವತೆಗಳನ್ನೂ ಹಿಂಸಿಸಲಾರಂಭಿಸಿದರು (ದ್ವೇಷಿಸಲಾರಂಭಿಸಿದರು).

ಗುರೂಂಶ್ಚಾಪ್ಯವಮನ್ಯಂತೇ ನ ತು ರಾಮಜನಾರ್ದನೌ ।
ಪತ್ನ್ಯಃ ಪತೀನುಚ್ಚರಂತಿ ಪತ್ನೀಶ್ಚ ಪತಯಸ್ತಥಾ ॥೧೨॥

ಬಲರಾಮ, ಕೃಷ್ಣರನ್ನು ಬಿಟ್ಟು ಉಳಿದೆಲ್ಲ ಹಿರಿಯರನ್ನೂ ಅವಮಾನಿಸಲು ಆರಂಭಿಸಿದರು. ಪತ್ನಿಯರು ಪತಿಗಳನ್ನೂ, ಪತಿಗಳು ಪತ್ನಿಯರನ್ನೂ ಜರಿಯಲಾರಂಭಿಸಿದರು.

ವಿಭಾವಸುಃ ಪ್ರಜ್ವಲಿತೋ ವಾಮಂ ವಿಪರಿವರ್ತತೇ ।
ನೀಲಲೋಹಿತಮಂಜಿಷ್ಠಾ ವಿಸೃಜನ್ನರ್ಚಿಷಃ ಪೃಥಕ್ ॥೧೩॥

ಸೂರ್ಯನು ಹೊತ್ತಿ ಉರಿಯುತ್ತಾ ಅಪ್ರದಕ್ಷಿಣೆಯಾಗಿ ಸುತ್ತಲಾರಂಭಿಸಿದನು. ನೀಲಿ ಮತ್ತು ಕೆಂಪುಮಿಶ್ರವಾದ ಮಂಜಿಷ್ಠೆಯ ವರ್ಣವುಳ್ಳ ಕಿರಣಗಳನ್ನು ಬೇರೆ ಬೇರೆಯಾಗಿ ವಿಸರ್ಜಿಸಲಾರಂಭಿಸಿದನು.

ಉದಯಾಸ್ತಮಯೇ ನಿತ್ಯಂ ಪುರ್ಯಾಂ ತಸ್ಯಾಂ ದಿವಾಕರಃ ।
ವ್ಯದೃಶ್ಯತಾಸಕೃತ್ ಪುಂಭಿಃ ಕಬಂಧೈಃ ಪರಿವಾರಿತಃ ॥೧೪॥

ನಿತ್ಯವೂ ಉದಯಾಸ್ತಮಾನ ಕಾಲದಲ್ಲಿ ಸೂರ್ಯನು ಆ ಪುರದಲ್ಲಿರುವ ಪುರುಷರಿಗೆ ಧೂಮಕೇತುಗಳಿಂದ ಸುತ್ತುವರಿಯಲ್ಪಟ್ಟಂತೆ ಮತ್ತೆ ಮತ್ತೆ ಕಾಣತೊಡಗಿದನು.

ಮಹಾನಸೇಷು ಸಿದ್ಧೇಷು ಸಂಸ್ಕೃತೇಽತೀವ ಭಾರತ ।
ಆಹಾರ್ಯಮಾಣೇ ಕೃಮಯೋ ವ್ಯದೃಶ್ಯಂತ ಸಹಸ್ರಶಃ ॥೧೫॥

ಹೇ ಭಾರತನೇ, ಅಡುಗೆಮನೆಗಳಲ್ಲಿ ಸುಸಂಸ್ಕೃತವಾಗಿ ತಯಾರಿಸಲ್ಪಟ್ಟ ಅನ್ನಗಳಲ್ಲಿ ತಿನ್ನುವ ಕಾಲಕ್ಕೆ ಸಾವಿರಾರು ಕ್ರಿಮಿಗಳು ತೋರಲಾರಂಭಿಸಿದವು.

ಪುಣ್ಯಾಹೇ ವಾಚ್ಯಮಾನೇ ತು ಜಪತ್ಸು ಚ ಮಹಾತ್ಮಸು ।
ಅಭಿಧಾವಂತಃ ಶ್ರೂಯಂತೇ ನ ಚಾದೃಶ್ಯತ ಕಶ್ಚನ ॥೧೬॥

ಮಹಾತ್ಮರು ಪುಣ್ಯಾಹವನ್ನು ವಾಚನೆ ಮಾಡುವಾಗ ಅಲ್ಲದೆ ಜಪಿಸುವಾಗ ಯಾರೋ ಓಡುತ್ತಿರುವಂತೆ ಶಬ್ದವು ಕೇಳಿಬರತೊಡಗಿತು. ಆದರೆ ನೋಡಹೊರಟರೆ ಯಾರೂ ಕಾಣುತ್ತಿರಲಿಲ್ಲ.

ಪರಸ್ಪರಂ ಚ ನಕ್ಷತ್ರಂ ಹನ್ಯಮಾನಂ ಪುನಃಪುನಃ ।
ಗ್ರಹೈರಪಶ್ಯನ್ ಸರ್ವೇ ತೇ ಆತ್ಮನಸ್ತು ನ ಪಶ್ಯಂತೇ ॥೧೭॥

ಪರಸ್ಪರವಾಗಿ ನಕ್ಷತ್ರಗಳು ಮತ್ತೆ ಮತ್ತೆ ಹೊಡೆದಾಡಿಕೊಳ್ಳುವಂತೆ ಹಾಗೂ ಗ್ರಹಗಳು ಹೊಡೆದುಕೊಳ್ಳುವಂತೆ ಆ ಎಲ್ಲರೂ ಕಂಡರು. ಆದರೆ ಅವು ತಮಗೆ ಅನಿಷ್ಟವೆಂದು ಯಾರೂ ಗಮನಿಸಲಿಲ್ಲ.

ನದಂತಂ ಪಾಂಚಜನ್ಯಂ ಚ ವೃಷ್ಣ್ಯಂಧಕನಿವೇಶನೇ ।
ಸಮಂತಾತ್ ಪರ್ಯವಾಶಂತ ರಾಸಭಾ ದಾರುಣಸ್ವರಾಃ ॥೧೮॥

ವೃಷ್ಣಿ ಹಾಗೂ ಅಂಧಕರ ಮನೆಗಳಲ್ಲಿ ಶಂಖನಾದವನ್ನು ಮೊಳಗುತ್ತಿರುವಾಗ ಸುತ್ತಲೂ ದಾರುಣವಾದ ಸ್ವರವುಳ್ಳ ಕತ್ತೆಗಳು ಅದಕ್ಕಿಂತ ಹೆಚ್ಚಾಗಿ ಬೊಬ್ಬಿಡಲಾರಂಭಿಸಿದವು.

ಏವಂ ಪಶ್ಯನ್ ಹೃಷೀಕೇಶಃ ಸಂಪ್ರಾಪ್ತಂ ಕಾಲಪರ್ಯಯಮ್ ।
ತ್ರಯೋದಶ್ಯಾಮಮಾವಾಸ್ಯಾಂ ತಾನ್ ದೃಷ್ಟ್ವಾ ಪ್ರಾಬ್ರವೀದಿದಮ್ ॥

ಚತುರ್ದಶೀ ಪಂಚದಶೀ ಕೃತೇಯಂ ರಾಹುಣಾ ಪುನಃ ।
ಪ್ರಾಪ್ತಂ ವೈ ಭಾರತೇ ಯುದ್ಧೇ ಪ್ರಾಪ್ತಾ ಚಾದ್ಯ ಕ್ಷಯಾಯ ನಃ ॥೨೦॥

ಇವೆಲ್ಲವನ್ನೂ ನೋಡಿದ ಶ್ರೀಕೃಷ್ಣನು ಕುಲವಿನಾಶಕ್ಕೆ ಕಾಲವು ಸಂಪ್ರಾಪ್ತವಾಯಿತೆಂದು ತಿಳಿದನು. ಜೊತೆಗೆ ಹದಿಮೂರನೆಯ ದಿನದಂದೇ ಅಮಾವಾಸ್ಯೆಯು ಬಂದುದನ್ನು ನೋಡಿ ವೃಷ್ಣಿಗಳಲ್ಲಿ ಇದನ್ನು ತಿಳಿಸಿದನು. ಅಷ್ಟೇ ಅಲ್ಲದೆ ಮುಂದಿನ ಪಕ್ಷದಲ್ಲೂ ಹುಣ್ಣಿಮೆಯು ಹದಿನಾಲ್ಕನೆಯ ದಿನದಲ್ಲೇ ಬಂದಿದೆ, ಜೊತೆಗೆ ಗ್ರಹಣವೂ ಉಂಟಾಗಿದೆ. ಇದು ಮಹಾಭಾರತ ಯುದ್ಧದ ಸಂದರ್ಭದಲ್ಲಿ ನಡೆದಿತ್ತು . ಮತ್ತೆ ನಮ್ಮೆಲ್ಲರ ನಾಶಕ್ಕೋಸ್ಕರ ಈ ಸಮಯದಲ್ಲೂ ಬಂದಿದೆ.

ವಿಮೃಶನ್ನೇವ ಕಾಲಂ ತಂ ಪರಿಚಿಂತ್ಯ ಜನಾರ್ದನಃ ।
ಮೇನೇ ಪ್ರಾಪ್ತಂ ಸ ಷಟ್‌ತ್ರಿಂಶಂ ವರ್ಷಂ ವೈ ಕೇಶಿಸೂದನಃ ॥೨೧॥

ಕೇಶಿಸೂದನನಾದ, ಜನಾರ್ದನನಾದ ಶ್ರೀಕೃಷ್ಣನು ಹೀಗೆ ಕಾಲಕ್ರಮವನ್ನು ಚಿಂತಿಸುತ್ತಾ, ಭಾರತ ಯುದ್ಧವು ಕಳೆದು ಮೂವತ್ತಾರನೆಯ ವರ್ಷವು ಪ್ರಾಪ್ತವಾಯಿತೆಂದು ಅಭಿಪ್ರಾಯಪಟ್ಟನು.

ಪುತ್ರಶೋಕಾಭಿಸಂತಪ್ತಾ ಗಾಂಧಾರೀ ಹತಬಾಂಧವಾ ।
ಯದನುವ್ಯಾಜಹಾರಾರ್ತಾ ತದಿದಂ ಸಮುಪಾಗಮತ್ ॥೨೨॥

ಪುತ್ರಶೋಕದಿಂದ ಬಹುವಾಗಿ ಕಂಗೆಟ್ಟ, ಬಾಂಧವರನ್ನು ಕಳೆದುಕೊಂಡ ಗಾಂಧಾರೀ ದೇವಿಯು ಆರ್ತಳಾಗಿ ಏನನ್ನು ಹೇಳಿದಳೋ ಅದು ಈಗ ಬಂದೊದಗಿದೆ.

ಇದಂ ಚ ತದನುಪ್ರಾಪ್ತಮಬ್ರವೀದ್ ಯದ್ ಯುಧಿಷ್ಠಿರಃ ।
ಪುರಾ ವ್ಯೂಢೇಷ್ವನೀಕೇಷು ದೃಷ್ಟ್ವೋತ್ಪಾತಾನ್ ಸುದಾರುಣಾನ್ ॥೨೩॥

ಹಿಂದೆ ಯುದ್ಧಾರಂಭ ಕಾಲದಲ್ಲಿ ಸೇನೆಗಳ ವ್ಯೂಹವು ರಚನೆಯಾದಾಗ ಕಂಡಿರುವ ದಾರುಣವಾದ ಉತ್ಪಾತಗಳ ಬಗ್ಗೆ ಯುಧಿಷ್ಠಿರನು ಏನು ಹೇಳಿದನೋ ಅವೇ ಉತ್ಪಾತಗಳು ಈಗ ಬಂದಿವೆ ಎಂದು ತಿಳಿಸಿದನು.

ಪುಣ್ಯಾಹವಾಚನಾಚ್ಚಾಪಿ ಶಾಂತಿಹೋಮಾಚ್ಚ ಶೋಭನಾತ್ ।
ಪೂತತೀರ್ಥಾಭಿಷೇಕಾಚ್ಚ ನ ನೋ ಶ್ರೇಯೋ ಭವೇದಿತಿ ॥೨೪॥

ಪುಣ್ಯಾಹವಾಚನದಿಂದಾಗಲಿ, ಶಾಂತಿಹೋಮದಿಂದಾಗಲಿ, ಮಂಗಳಮಯವಾದ ಪವಿತ್ರತೀರ್ಥಗಳ ಅಭಿಷೇಕದಿಂದಾಗಲಿ ನಮಗೆ ಶ್ರೇಯಸ್ಸಾಗಲಾರದು.

ಇತ್ಯುಕ್ತ್ವಾ ವಾಸುದೇವಸ್ತು ಚಿಕೀರ್ಷುಃ ಸತ್ಯಮೇವ ತತ್ ।
ಆಜ್ಞಾಪಯಾಮಾಸ ತದಾ ತೀರ್ಥಯಾತ್ರಾಮರಿಂದಮಃ ॥೨೫॥

ಇಷ್ಟು ಹೇಳಿ ಅರಿಮರ್ದನನಾದ ಶ್ರೀಕೃಷ್ಣನು ಅವೆಲ್ಲವನ್ನೂ ಸತ್ಯಮಾಡಲು ತೀರ್ಥಯಾತ್ರೆಯನ್ನು ನಡೆಸಬೇಕೆಂದು ಆಗ ಆಜ್ಞಾಪಿಸಿದನು.

ಅಘೋಷಯಂತ ಪುರುಷಾಸ್ತತ್ರ ಕೇಶವಶಾಸನಾತ್ ।
ತೀರ್ಥಯಾತ್ರಾ ಸಮುದ್ರೇ ವಃ ಕಾರ್ಯೇತಿ ಪುರುಷರ್ಷಭಾಃ ॥೨೬॥

ಶ್ರೀಕೃಷ್ಣನ ಆಜ್ಞೆಯಂತೆ ರಾಜಪುರುಷರು 'ಹೇ ಪುರುಷಶ್ರೇಷ್ಠರೇ, ನೀವು ಸಮುದ್ರದಲ್ಲಿ ತೀರ್ಥಯಾತ್ರೆಯನ್ನು ನಡೆಸಿರಿ' ಎಂದು ಘೋಷಣೆ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಮೌಸಲಪರ್ವಣಿ ಕೃಷ್ಣವಾಕ್ಯಘೋಷಣಂ ನಾಮ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ದ್ವಾರಕೆಯಲ್ಲಿ ವೃಷ್ಣಿ ಮತ್ತು ಅಂಧಕಾದಿಗಳು ಅನರ್ಥಸೂಚಕವಾದ ದುಃಸ್ವಪ್ನಾದಿಗಳನ್ನು ಕಾಣುವುದು. ಅನಂತರ ಕೃಷ್ಣನ ಆಜ್ಞೆಯಂತೆ ಸ್ತ್ರೀ-ಬಾಲರಿಂದ ಕೂಡಿದ ಎಲ್ಲರೂ ಪ್ರಭಾಸ ಕ್ಷೇತ್ರಕ್ಕೆ ಹೋಗುವುದು. ಅಲ್ಲಿ ನೃತ್ಯ-ಗಾನಾದಿ ಮಹೋತ್ಸವವನ್ನು ನಡೆಸುತ್ತಾ ಮದ್ಯಪಾನವನ್ನು ಮಾಡುವುದು. ಆ ಕಾಲದಲ್ಲಿ ಸಭಾಮಧ್ಯದಲ್ಲಿ ಸಾತ್ಯಕಿಯು ಸ್ಯಮಂತಕಮಣಿಯನ್ನು ಅಪಹರಣ ಮಾಡಿದ ಗುಟ್ಟನ್ನು ರಟ್ಟುಮಾಡುತ್ತಾ ಕೃತವರ್ಮನನ್ನು ತೆಗಳುವುದು. ಮಣಿಯ ವೃತ್ತಾಂತವನ್ನು ಕೇಳಿ ಸತ್ಯಭಾಮೆಯು ಖಿನ್ನಳಾದಾಗ ಅವಳನ್ನು ಸಂತೋಷ ಪಡಿಸುವುದಕ್ಕಾಗಿ ಸಾತ್ಯಕಿಯು ಕೃತವರ್ಮನ ಶಿರಸ್ಸನ್ನು ಛೇದಿಸುವುದು. ನಂತರ ಕೃತವರ್ಮ ಹಾಗೂ ಸಾತ್ಯಕಿಯ ಪಕ್ಷದವರು ಒನಕೆಯಂತಿರುವ ಹುಲ್ಲುಗಳಿಂದ ಪರಸ್ಪರ ಹೊಡೆದುಕೊಂಡು ಸಾಯಿಸುವುದು.

ವೈಶಂಪಾಯನಃ

ಕಾಲೀ ಸ್ತ್ರೀ ಪಾಂಡುರೈರ್ದಂತೈಃ ಪ್ರವಿಶ್ಯ ಹಸತೀ ನಿಶಿ ।
ಸ್ತ್ರಿಯಃ ಸ್ವಪ್ನೇಷು ಮುಷ್ಣಂತೀ ದ್ವಾರಕಾಂ ಪರಿಧಾವತಿ ॥೧॥

ವೈಶಂಪಾಯನ– ಕೃಷ್ಣವರ್ಣದ ಸ್ತ್ರೀಯೊಬ್ಬಳು ಬಿಳಿಯಾದ ದಂತಗಳಿಂದ ಕೂಡಿಕೊಂಡು ಗಟ್ಟಿಯಾಗಿ ನಗುತ್ತಾ ಸ್ತ್ರೀಯರನ್ನು ಸ್ವಪ್ನದಲ್ಲಿ ವಂಚಿಸುತ್ತಾ ದ್ವಾರಕೆಯನ್ನು ಪ್ರವೇಶಿಸಿ ಓಡಾಡುವಳು.

ಅಗ್ನಿಹೋತ್ರನಿಕೇತೇಷು ವಾಸ್ತುಮಧ್ಯೇಷು ವೇಶ್ಮಸು ।
ವೃಷ್ಣ್ಯಂಧಕಾನಖಾದಂತ ಸ್ವಪ್ನೇ ಗೃಧ್ರಾ ಭಯಾನಕಾಃ ॥೨॥

ಹಾಗೆಯೇ ಸ್ವಪ್ನದಲ್ಲಿ ಭಯಾನಕವಾದ ಗೃಧ್ರಗಳು ಅಗ್ನಿಹೋತ್ರಕ್ಷೇತ್ರಗಳಲ್ಲಿ, ವಾಸ್ತುವಿನ ಮಧ್ಯದಲ್ಲಿ, ಮನೆಗಳಲ್ಲಿ ವೃಷ್ಣಿ ಹಾಗೂ ಅಂಧಕರನ್ನು ತಿನ್ನತೊಡಗಿದವು.

ಕುರ್ವಂತೋ ಭೀಷಣಾ ನಾದಾನ್ ಕರಾಳಾಂಶ್ಚಾಪಿ ಸಂಗತಾನ್ ।
ತಥಾ ವಿಶಿರಸೋ ರೌದ್ರಾಶ್ಚತುರ್ಬಾಹವ ಏವ ಚ ॥೩॥

ಭಯಂಕರರಾದ ಹಾಗೆಯೇ ತಲೆಗಳಿಲ್ಲದ, ನಾಲ್ಕು ಕೈಗಳುಳ್ಳ ಉಗ್ರರೂಪವುಳ್ಳ ಪುರುಷರು ಭಯಾನಕವಾದ ಸ್ತಂಭಿತವಾದ ಕರ್ಕಶ ಸ್ವರಗಳನ್ನೂ ಮಾಡತೊಡಗಿದರು.

ಸ್ತ್ರೀಣಾಂ ಗರ್ಭೇಷು ಜಾಯಂತೇ ರಾಕ್ಷಸಾ ಗುಹ್ಯಕಾಸ್ತಥಾ ।
ವಸ್ತ್ರಾಣಿ ತುರಗಾಶ್ಚೈವ ರಾಸಭಾ ನೃಪಸತ್ತಮ ॥೪॥

ಹೇ ನೃಪಶ್ರೇಷ್ಠನೇ, ಸ್ತ್ರೀಯರ ಗರ್ಭದಲ್ಲಿ ರಾಕ್ಷಸರೂ, ಯಕ್ಷರೂ, ವಸ್ತ್ರಗಳೂ, ಕುದುರೆಗಳೂ, ಕತ್ತೆಗಳೂ ಹುಟ್ಟಿದವು.

ಅಲಂಕಾರಾಶ್ಚ ಛತ್ರಾಣಿ ಧ್ವಜಾಶ್ಚ ಕವಚಾನಿ ಚ ।
ಹ್ರಿಯಮಾಣಾನ್ಯದೃಶ್ಯಂತ ರಕ್ಷೋಭಿಃ ಸುಭಯಾನಕೈಃ ॥೫॥

ಭಯಾನಕರಾದ ರಾಕ್ಷಸರಿಂದ ಅಲಂಕಾರಗಳೂ, ಛತ್ರ-ಧ್ವಜಗಳೂ, ಕವಚಗಳೂ ಅಪಹರಣವಾದಂತೆ ಕಾಣತೊಡಗಿತು.

ತಚ್ಚಾಗ್ನಿದತ್ತಂ ಕೃಷ್ಣಸ್ಯ ವಜ್ರನಾಭಮಯೋಮಯಮ್ ।
ದಿವಮಾಚಕ್ರಮೇ ಚಕ್ರಂ ವೃಷ್ಣೀನಾಂ ಪಶ್ಯತಾಂ ತದಾ ॥೬॥

ಕೃಷ್ಣನಿಗೆ ಅಗ್ನಿಯಿಂದ ಕೊಡಲ್ಪಟ್ಟ, ವಜ್ರದ ಮಧ್ಯಭಾಗವುಳ್ಳ, ಉಕ್ಕಿನಿಂದ ಮಾಡಲ್ಪಟ್ಟ ಚಕ್ರವು ವೃಷ್ಣಿಗಳು ನೋಡನೋಡುತ್ತಿದ್ದಂತೆಯೇ ಆಕಾಶಕ್ಕೇರಿತು.

ಯುಕ್ತಂ ರಥಂ ದಿವ್ಯಮಾದಿತ್ಯವರ್ಣಂ
ಹಯಾಽಹರನ್ ಪಶ್ಯತೋ ದಾರುಕಸ್ಯ ।
ತೇ ಸಾಗರಸ್ಯೋಪರಿಷ್ಟಾದಗಚ್ಛನ್
ಮನೋಜವಾಶ್ಚತುರೋ ವಾಜಿಮುಖ್ಯಾಃ ॥೭॥

ಸೂರ್ಯನಂತೆ ಪ್ರಜ್ವಲಿಸುವ ವರ್ಣವುಳ್ಳ ದಿವ್ಯವಾದ, ಹೊರಡಲು ಅಣಿಗೊಳಿಸಿದ ರಥವನ್ನು, ದಾರುಕನು ನೋಡುತ್ತಿದ್ದಂತೆಯೇ ಕುದುರೆಗಳು ಅಪಹರಿಸಿದವು. ಆ ಮುಖ್ಯವಾದ ಮನೋವೇಗವುಳ್ಳ ನಾಲ್ಕು ಕುದುರೆಗಳು ಸಾಗರದ ಮೇಲಿನಿಂದಲೇ ನಡೆದು ಹೋದವು.

ತಾಲಃ ಸುಪರ್ಣೋ ಚ ಮಹಾಧ್ವಜೌ ತೌ
ಸುಪೂಜಿತೌ ರಾಮಜನಾರ್ದನಾಭ್ಯಾಮ್ ।
ಉಚ್ಚೈರ್ಜಹ್ರುರಪ್ಸರಸಶ್ಚ ದಿವ್ಯಾ
ದೇವಾ ಊಚುರ್ಗಮ್ಯತಾಂ ತೀರ್ಥಯಾತ್ರಾಃ ॥೮॥

ಬಲರಾಮ-ಕೃಷ್ಣರು ನಿತ್ಯವೂ ಪೂಜಿಸುತ್ತಿದ್ದ ತಾಲ ಮತ್ತು ಗರುಡನ ಚಿಹ್ನೆಯುಳ್ಳ ಆ ಎರಡು ಮಹಾಧ್ವಜಗಳನ್ನು ದಿವ್ಯವಾದ ಅಪ್ಸರಾಸ್ತ್ರೀಯರು ಬಲಾತ್ಕಾರವಾಗಿ ಅಪಹರಿಸಿದರು. ಆಕಾಶದಲ್ಲಿ ನಿಂತ ದೇವತೆಗಳು 'ತೀರ್ಥಯಾತ್ರೆಗೆ ಹೊರಡಿರಿ' ಎಂದು ಹೇಳಿದರು.

ಭಗವದ್ದರ್ಶನಸ್ಪರ್ಶಸ್ನೇಹೈರ್ವಿತತಭೋಗಿನಃ ।
ದಿವಃ ಪ್ರವೇಶನಾರ್ಥಂ ತೇ ವಿಮಾನೈರ್ದಿವಮಾಯಯುಃ ॥೯॥

ಭಗವಂತನಾದ ಶ್ರೀಕೃಷ್ಣನ ದರ್ಶನ-ಸ್ಪರ್ಶ-ಸ್ನೇಹ ಇವುಗಳಿಂದ ವಿಸ್ತಾರವಾದ ಭೋಗಗಳನ್ನು ಅನುಭವಿಸುತ್ತಿದ್ದ ಆ ದೇವತೆಗಳು ಸ್ವರ್ಗವನ್ನು ಸೇರುವುದಕ್ಕೋಸ್ಕರ ವಿಮಾನಗಳಿಂದ ಆಕಾಶದಲ್ಲಿ ಹೊರಟು ಹೋದರು.

ತತೋ ಜಗಮಿಷಂತಸ್ತೇ ವೃಷ್ಣ್ಯಂಧಕಮಹಾರಥಾಃ ।
ಸಾಂತಃಪುರಾಸ್ತದಾ ತೀರ್ಥಯಾತ್ರಾಮೈಚ್ಛನ್ನರರ್ಷಭಾಃ ॥೧೦॥

ಅನಂತರ ಹೊರಡಲು ಬಯಸಿದ ಆ ಪುರುಷಶ್ರೇಷ್ಠರಾದ ವೃಷ್ಣ್ಯಂಧಕ ಮಹಾರಥರು ಅಂತಃಪುರದ ಜನರೊಂದಿಗೆ ತೀರ್ಥಯಾತ್ರೆಯನ್ನು ಮಾಡಬೇಕೆಂದು ಬಯಸಿದರು.

ತತೋ ಮನೋಹರಾಃ ಹೃಷ್ಟಾಃ ಪೇಯಂ ಮಾಂಸಂ ಮಧೂನಿ ಚ ।
ಬಹು ನಾನಾವಿಧಂ ಚಕ್ರುಸ್ತ್ವರಿತಾಃ ಕಾಲಚೋದಿತಾಃ ॥೧೧॥

ಅನಂತರ ಯಾತ್ರೆಯ ಬಗ್ಗೆ ಸಂತೋಷಗೊಂಡಿದ್ದ ಅವರು ಕಾಲಚೋದಿತರಾಗಿ ಸಂಭ್ರಮದಿಂದ ನಾನಾ ಪ್ರಕಾರದ ಪಾನೀಯಗಳನ್ನೂ, ಮಾಂಸಗಳನ್ನೂ, ಮದ್ಯಗಳನ್ನೂ ಬಹುಪ್ರಮಾಣದಲ್ಲಿ ತಯಾರಿಸಿಕೊಂಡರು.

ತತಃ ಸೀಧುಷು ಸಕ್ತಾಶ್ಚ ನಿರ್ಯಯುರ್ನಗರಾದ್ ಬಹಿಃ ।
ಯಾನೈರಶ್ವೈರ್ಗಜೈಶ್ಚೈವ ಶ್ರೀಮಂತಸ್ತಿಗ್ಮತೇಜಸಃ ॥೧೨॥

ತತಃ ಪ್ರಭಾಸೇ ನ್ಯವಸನ್ ಯಥೋದ್ದಿಷ್ಟಂ ಯಥಾಗೃಹಮ್ ।
ಪ್ರಭೂತಭಕ್ಷ್ಯಪೇಯಾಸ್ತೇ ಸದಾರಾ ಯಾದವಾಸ್ತದಾ ॥೧೩॥

ಅನಂತರ ಶ್ರೀಮಂತರಾದ, ಜ್ವಲಿಸುವ ಕಾಂತಿಯುಳ್ಳ, ಪತ್ನಿಯರೊಂದಿಗೆ ಕೂಡಿದ ಯಾದವರು ಮದ್ಯಪಾನದಲ್ಲಿ ಆಸಕ್ತರಾಗಿ, ರಥ-ಅಶ್ವ-ಆನೆಗಳನ್ನು ಏರಿಕೊಂಡು, ನಗರದಿಂದ ಹೊರಹೊರಟರು. ನಂತರ ಪ್ರಭಾಸಕ್ಷೇತ್ರಕ್ಕೆ ಬಂದು ತಮಗೆ ಇಷ್ಟಬಂದಂತೆ ಡೇರೆಗಳನ್ನು ನಿರ್ಮಿಸಿಕೊಂಡು, ತಮ್ಮೊಂದಿಗಿದ್ದ ಬಹುವಾದ ಭಕ್ಷ್ಯ-ಪಾನೀಯಗಳೊಂದಿಗೆ ಅಲ್ಲಿ ಬೀಡುಬಿಟ್ಟರು.

ನಿವಿಷ್ಟಾಂಸ್ತಾನ್ನಿಶಮ್ಯಾಥ ಸಮುದ್ರಾಂತೇ ಸ ಯೋಗವಿತ್ ।
ಜಗಾಮಾಮಂತ್ರ್ಯ ತಾನ್ ವೀರಾನುದ್ಧವೋಽರ್ಥವಿಶಾರದಃ ॥೧೪॥

ಸಮುದ್ರತೀರದಲ್ಲಿ ಆ ಯಾದವರು ನೆರೆದಿರುವರೆಂದು ಕೇಳಿ ತಿಳಿದ ಅರ್ಥ ವಿಶಾರದನಾದ ಯೋಗಜ್ಞನಾದ ಉದ್ಧವನು ಧೀರರಾದ ಅವರನ್ನು ಭೇಟಿ ಮಾಡಿ, ಮಾತನಾಡಿಸಿ ಅಲ್ಲಿಂದ ಹೊರಟನು.

ತಂ ಪ್ರಸ್ಥಿತಂ ಮಹಾತ್ಮಾನಮಭಿವಾದ್ಯ ಕೃತಾಂಜಲಿಮ್ ।
ಜಾನನ್ ವಿನಾಶಂ ವೃಷ್ಣೀನಾಂ ನೇಚ್ಛದ್ ವಾರಯಿತುಂ ಹರಿಃ ॥೧೫॥

ವೃಷ್ಣಿಗಳ ನಾಶವು ಖಚಿತವೆಂದು ತಿಳಿದಿದ್ದ ಶ್ರೀಕೃಷ್ಣನು ನಮಸ್ಕರಿಸಿ ಕೈಮುಗಿದು ನಿಂತ, ಅಲ್ಲಿಂದ ಹೊರಟಿರುವ ಮಹಾತ್ಮನಾದ ಉದ್ಧವನನ್ನು ತಡೆಯಲು ಬಯಸಲಿಲ್ಲ.

ತತಃ ಕಾಲಪರೀತಾಸ್ತೇ ವೃಷ್ಣ್ಯಂಧಕಮಹಾರಥಾಃ ।
ಅಪಶ್ಯನ್ನುದ್ಧವಂ ಯಾಂತಂ ತೇಜಸಾऽऽವೃತ್ಯ ರೋದಸೀ ॥೧೬॥

ಇಷ್ಟಾದ ನಂತರ ಕಾಲದ ಸುಳಿಗೆ ಸಿಕ್ಕಿ ಆ ವೃಷ್ಣ್ಯಂಧಕ ವಂಶದ ಮಹಾರಥರು ತೇಜಸ್ಸಿನಿಂದ ಭೂಮ್ಯಾಕಾಶವನ್ನು ಆವರಿಸಿರುವ ಉದ್ಧವನು ಹೊರಟು ಹೋಗುತ್ತಿರುವುದನ್ನು ಕಂಡರು.

ಬ್ರಾಹ್ಮಣಾರ್ಥೇಷು ಯತ್ಸಿದ್ಧಮನ್ನಂ ತೇಷಾಂ ಮಹಾತ್ಮನಾಮ್ ।
ತದ್ ವಾನರೇಭ್ಯಃ ಪ್ರದದುಃ ಸುರಾಗಂಧರಸಾನ್ವಿತಮ್ ॥೧೭॥

ಮಹಾತ್ಮರಾದ ಬ್ರಾಹ್ಮಣರಿಗೋಸ್ಕರ ಸಿದ್ಧಪಡಿಸಿದ ಅವರ ಬಳಿ ಇದ್ದ ಯಾವ ಅನ್ನವಿದೆಯೋ ಅದನ್ನು ಮದ್ಯದೊಂದಿಗೆ ಬೆರೆಸಿ ಕಪಿಗಳಿಗೆ ಹಂಚಿದರು.

ತತಸ್ತೂರ್ಯಶತಾಕೀರ್ಣಂ ನಟನರ್ತಕಸಂಕುಲಮ್
ಅವರ್ತತ ಮಹಾಪಾನಂ ಪ್ರಭಾಸೇ ತಿಗ್ಮತೇಜಸಾಮ್ ॥೧೮॥

ಆ ಹೊತ್ತಿಗೆ ಸರಿಯಾಗಿ ಪ್ರಭಾಸ ಕ್ಷೇತ್ರದಲ್ಲಿ ವಿಚಿತ್ರವಾದ ತೇಜಸ್ಸುಳ್ಳ ಆ ಯಾದವರ ಮಧ್ಯದಲ್ಲಿ ನೂರಾರು ವಾದ್ಯಘೋಷಗಳಿಂದ ಕೂಡಿದ, ಅನೇಕ ಮಂದಿ ನಾಟ್ಯಗಾರರಿಂದ ಕೂಡಿದ ಮಹಾಪಾನೋತ್ಸವವು ಆರಂಭವಾಯಿತು.

ಕೃಷ್ಣಸ್ಯ ಸನ್ನಿಧೌ ರಾಮಃ ಸಹಿತಃ ಕೃತವರ್ಮಣಾ ।
ಅಬ್ರವೀತ್ ಯುಯುಧಾನಶ್ಚ ಗದೋ ಬಭ್ರುಸ್ತಥೈವ ಚ ॥೧೯॥

ಬಲರಾಮನು ಕೃಷ್ಣನ ಸನ್ನಿಧಿಯಲ್ಲಿ ಕೃತವರ್ಮನೊಂದಿಗೆ ಮದ್ಯಪಾನವನ್ನು ಮಾಡಿದನು. ಅಂತೆಯೇ ಯುಯುಧಾನನೂ, ಗದನೂ, ಬಭ್ರುವೂ ಮದ್ಯಪಾನವನ್ನು ಮಾಡಿದರು.

ತತಃ ಪರಿಷದೋ ಮಧ್ಯೇ ಯುಯುಧಾನೋ ಮದೋತ್ಕಟಃ ।
ಅಬ್ರೀತ್ ಕೃತವರ್ಮಾಣಮವಹಾಸ್ಯಾವಮತ್ಯ ಚ ॥೨೦॥

ಅವರೆಲ್ಲರೂ ಕಂಠಪೂರ್ತಿ ಕುಡಿದ ನಂತರ ಆ ಗುಂಪಿನ ಮಧ್ಯದಲ್ಲಿ ಮದೋನ್ಮತ್ತನಾದ ಯುಯುಧಾನನು ಕೃತವರ್ಮನನ್ನು ಅವಹೇಳನೆ ಮಾಡುತ್ತಾ ಅವನನ್ನು ಅವಮಾನಿಸುವಂತೆ ಹೀಗೆಂದನು.

ಕಃ ಕ್ಷತ್ರಿಯೋ ಹನ್ಯಮಾನಃ ಸುಪ್ತಾನ್ ಹನ್ಯಾನ್ ಮೃತಾನಿವ ।
ತನ್ನ ಮೃಷ್ಯಂತಿ ಹಾರ್ದಿಕ್ಯ ಯಾದವಾ ಯತ್ತ್ವಯಾ ಕೃತಮ್ ॥೨೧॥

ಯಾವ ಮತಿಗೆಟ್ಟ ಕ್ಷತ್ರಿಯನು ಸತ್ತವರಂತೆ ಮಲಗಿರುವವರನ್ನು ಹೊಡೆದಾನು? ಹೇ ಹಾರ್ದಿಕ್ಯನಾದ ಕೃತವರ್ಮನೇ, ನೀನು ಮಾಡಿದ ಆ ಕೆಲಸವನ್ನು ಯಾದವರು ಸಹಿಸಲಾರರು.

ಇತ್ಯುಕ್ತೇ ಯುಯುಧಾನೇನ ಪೂಜಯಾಮಾಸ ತದ್ ವಚಃ ।
ಪ್ರದ್ಯುಮ್ನೋ ರಥಿನಾಂ ಶ್ರೇಷ್ಠೋ ಹಾರ್ದಿಕ್ಯಮವಮತ್ಯ ಚ ॥೨೨॥

ಹೀಗೆ ಯುಯುಧಾನನು ಹೇಳಿದಾಗ, ರಥಿಗಳಲ್ಲಿ ಶ್ರೇಷ್ಠನಾದ ಪ್ರದ್ಯುಮ್ನನು ಕೃತವರ್ಮನನ್ನು ಅವಮಾನಿಸುತ್ತಾ ಯುಯುಧಾನನ ಮಾತನ್ನು ಗೌರವಿಸಿದನು.

ತತಃ ಪರಮಸಂಕ್ರುದ್ಧಃ ಕೃತವರ್ಮಾ ತಮಬ್ರವೀತ್ ।
ನಿರ್ದಿಶನ್ನಿವ ಸಾವಜ್ಞಂ ತದಾ ಸವ್ಯೇನ ಪಾಣಿನಾ ॥೨೩॥

ಇಷ್ಟಾದ ಕೂಡಲೇ ಬಹಳ ಕೋಪಗೊಂಡ ಕೃತವರ್ಮನು ತಿರಸ್ಕಾರದಿಂದ ಎಡಗೈಯಿಂದ ಅವನನ್ನು ತೋರಿಸುತ್ತಾ ಹೀಗೆಂದನು.

ಭೂರಿಶ್ರವಾಃ ಛಿನ್ನಬಾಹುರ್ಯುದ್ಧೇ ಪ್ರಾಯಗತಸ್ತ್ವಯಾ ।
ವಧೇನ ಸುನೃಶಂಸೇನ ಕಥಂ ವೀರೇಣ ಪಾತಿತಃ ॥೨೪॥

ಯುದ್ಧದಲ್ಲಿ ಕತ್ತರಿಸಿದ ಕೈಗಳುಳ್ಳ, ಪ್ರಾಯೋಪ್ರವೇಶದಲ್ಲಿ ತೊಡಗಿದ್ದ ಭೂರಿಶ್ರವಸನು ವೀರನಾದ, ವಂಚಕನಾದ ನಿನ್ನಿಂದ ಹೇಗೆ ಪೆಟ್ಟುತಿಂದು ಬಿದ್ದನು?

ಇತಿ ತಸ್ಯ ವಚಃ ಶ್ರುತ್ವಾ ಕೇಶವಃ ಪರವೀರಹಾ ।
ತಿರ್ಯಕ್ಸರೋಷಯಾ ದೃಷ್ಟ್ಯಾ ವೀಕ್ಷಾಂಚಕ್ರೇ ಸ ಮನ್ಯುಮಾನ್ ॥೨೫॥

ಕೃತವರ್ಮನ ಈ ರೀತಿಯ ಮಾತುಗಳನ್ನು ಕೇಳಿ, ಪರರ ಶೌರ್ಯವನ್ನು ಅಪಹರಿಸತಕ್ಕ ಕೇಶವನು ಕೋಪಗೊಂಡವನಾಗಿ ಕ್ರೋಧದಿಂದ ಕೂಡಿದ ಕಡೆಗಣ್ಣ ದೃಷ್ಟಿಯಿಂದ ಅವನನ್ನು ನೋಡಿದನು.

ಮಣಿಃ ಸ್ಯಮಂತಕಶ್ಚೈವ ಯಃ ಸ ಸತ್ರಾಜಿತೋಽಭವತ್ ।
ತಾಂ ಕಥಾಂ ಶ್ರಾವಯಾಮಾಸ ಸಾತ್ಯಕಿರ್ಮಧುಸೂದನಮ್ ॥೨೬॥

ಸ್ಯಮಂತಕಮಣಿಯು ಸತ್ರಾಜಿತನಿಗೆ ಏನು ಸಿಕ್ಕಿತ್ತೋ ಆ ಸಂದರ್ಭದಲ್ಲಿ ನಡೆದ ಘಟನೆಗಳನ್ನು ಸಾತ್ಯಕಿಯು ಕೃಷ್ಣನಿಗೆ ನೆನಪಿಸಿದನು.

ತಚ್ಛ್ರುತ್ವಾ ಕೇಶವಸ್ಯಾಂಕಮಗಮದ್ ರುದತೀ ತದಾ ।
ಸತ್ಯಭಾಮಾ ಪ್ರಕುಪಿತಾ ಕೋಪಯಂತೀ ಜನಾರ್ದನಮ್ ॥೨೭॥

ಆ ಕಥೆಯನ್ನು ಕೇಳಿ ಸತ್ಯಭಾಮೆಯು ಕೋಪಗೊಂಡವಳಾಗಿ ಕೃಷ್ಣನನ್ನು ಕೋಪಗೊಳಿಸುವುದಕ್ಕಾಗಿ ಅಳುತ್ತಾ ಕೃಷ್ಣನ ಸಮೀಪಕ್ಕೆ ಹೋದಳು.

ತತ ಉತ್ಥಾಯ ಸಕ್ರೋಧಃ ಸಾತ್ಯಕಿರ್ವಾಕ್ಯಮಬ್ರವೀತ್ ॥೨೮॥

ಆಗ ಕೋಪಗೊಂಡಿದ್ದ ಸಾತ್ಯಕಿಯು ಎದ್ದು ನಿಂತು ಹೀಗೆಂದನು.

ಪಂಚಾನಾಂ ದ್ರೌಪದೇಯಾನಾಂ ಧೃಷ್ಟದ್ಯುಮ್ನಶಿಖಂಡಿನೋಃ ।
ಏಷ ಗಚ್ಛಾಮಿ ಪದವೀಂ ಸತ್ಯೇನ ಚ ತಥಾ ಶಪೇ ॥೨೯॥

ದ್ರೌಪದಿಯ ಐದುಮಂದಿ ಮಕ್ಕಳ ಹಾಗೂ ಧೃಷ್ಟದ್ಯುಮ್ನ, ಶಿಖಂಡಿ ಇವರ ಅಧಿಕಾರಪದವಿಯನ್ನು ನಾನು ವಹಿಸಿಕೊಳ್ಳುತ್ತೇನೆ. ಸತ್ಯವಾದ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ.

ಸೌಪ್ತಿಕೇ ಯೇ ಚ ನಿಹತಾಃ ಸುಪ್ತಾ ಯೇನ ದುರಾತ್ಮನಾ ।
ದ್ರೋಣಪುತ್ರಸಹಾಯೇನ ಪಾಪೇನ ಕೃತವರ್ಮಣಾ ॥೩೦॥

ಸಮಾಪ್ತಮಾಯುರಸ್ಯಾದ್ಯ ಯಶಶ್ಚೈವ ಸುಮಧ್ಯಮೇ ।
ಇತ್ಯೇವಮುಕ್ತ್ವಾ ಖಡ್ಗೇನ ಕೇಶವಸ್ಯ ಸಮೀಪತಃ ॥೩೧॥

ಅಭಿದ್ರುತ್ಯ ಶಿರಃ ಕ್ರುದ್ಧಶ್ಚಿಚ್ಛೇದ ಕೃತವರ್ಮಣಃ ॥೩೨॥

ಹೇ ಸುಮಧ್ಯಮಳೇ, ಆ ಯುದ್ಧದ ಕೊನೆಯ ರಾತ್ರಿಯಲ್ಲಿ ಮಲಗಿದ್ದ ಆ ಯಾವ ದ್ರೌಪದಿ ಪುತ್ರರು ಅಶ್ವತ್ಥಾಮನ ಜೊತೆಗಿದ್ದ ದುರಾತ್ಮನಾದ, ಪಾಪಿಷ್ಠನಾದ ಯಾವ ಕೃತವರ್ಮನಿಂದ ಹತರಾದರೋ ಅಂತಹ ಈ ಕೃತವರ್ಮನ ಆಯುಷ್ಯವು, ಯಶಸ್ಸು ಇಂದಿಗೆ ಮುಗಿಯಿತು. ಇಷ್ಟು ಹೇಳಿ ಕೃಷ್ಣನ ಸಮೀಪದಿಂದ ಓಡಿಬಂದು ಕೋಪಾವಿಷ್ಟನಾಗಿ ಕೃತವರ್ಮನ ಶಿರಸ್ಸನ್ನು ಖಡ್ಗದಿಂದ ತುಂಡರಿಸಿದನು.

ತಥಾಽನ್ಯಾನಪಿ ನಿಘ್ನಂತಂ ಯುಯುಧಾನಂ ಸಮಂತತಃ ।
ಅಭ್ಯಧಾವದ್ ಹೃಷೀಕೇಶೋ ವಿನಿವಾರಯಿತುಂ ತದಾ ॥೩೩॥

ಇದರೊಂದಿಗೆ ಆಗ ಸುತ್ತಲೂ ನೆರೆದಿದ್ದ ಬೇರೆಯವರನ್ನೂ ಕೊಲ್ಲಲು ಮುಂದಾದ ಯುಯುಧಾನನನ್ನು (ಸಾತ್ಯಕಿಯನ್ನು) ತಡೆಯುವುದಕ್ಕಾಗಿ ಶ್ರೀಕೃಷ್ಣನು ಓಡಿದನು.

ವಿಕೀರ್ಯಮಾಣಾಸ್ತತಃ ಸರ್ವೇ ಕಾಲಪರ್ಯಾಯಚೋದಿತಾಃ ।
ಭೋಜಾಂಧಕಾ ಮಹಾರಾಜ ಶೈನೇಯಂ ಪರ್ಯವಾರಯನ್ ॥೩೪॥

ಹೇ ಮಹಾರಾಜನೇ, ಆಗ ಕಾಲಪರಿವರ್ತನೆಯಿಂದ ಪ್ರಚೋದಿತರಾದ ಭೋಜಾಂಧಕರೆಲ್ಲರೂ ಒಂದಾಗಿ ಸಾತ್ಯಕಿಯನ್ನು ಸುತ್ತುವರಿದರು.

ತಾನ್ ದೃಷ್ಟ್ವಾ ಪತತಸ್ತೂರ್ಣಮಭಿಕ್ರುದ್ಧಾನ್ ಜನಾರ್ದನಃ ।
ನ ಚುಕ್ರೋಧ ಮಹಾತೇಜಾ ಜಾನನ್ ಕಾಲಸ್ಯ ಪರ್ಯಯಮ್ ॥೩೫॥

ಆ ಕೂಡಲೇ ಮುಗಿಬಿದ್ದ ಹಾಗೂ ಕೋಪಗೊಂಡ ಅವರನ್ನು ನೋಡಿ ಮಹಾತೇಜಸ್ವಿಯಾದ ಶ್ರೀಕೃಷ್ಣನು ಕಾಲಪರಿವರ್ತನೆಯನ್ನು ಬಲ್ಲವನಾದುದರಿಂದ ಕೋಪಗೊಳ್ಳಲಿಲ್ಲ.

ತೇ ತು ಪಾನಮದಾವಿಷ್ಟಾಶ್ಚೋದಿತಾಃ ಕಾಲಧರ್ಮಣಾ ।
ಯುಯುಧಾನಮಥಾಭ್ಯಘ್ನನ್ನುಚ್ಛಿಷ್ಟೈರ್ಭಾಜನೈಸ್ತದಾ ॥೩೬॥

ಕಾಲಧರ್ಮದಿಂದ ಪ್ರಚೋದಿತರಾದ, ಜೊತೆಗೆ ಮದ್ಯಪಾನದಿಂದ ಮದೋನ್ಮತ್ತರಾಗಿದ್ದ ಅವರೆಲ್ಲರೂ ಎಂಜಲಿನ ಪಾತ್ರೆಗಳಿಂದಲೇ ಸಾತ್ಯಕಿಯನ್ನು ಹೊಡೆದರು.

ಹನ್ಯಮಾನೇ ತು ಶೈನೇಯೇ ಕ್ರುದ್ಧೋ ರುಗ್ಮಿಣೀನಂದನಃ ।
ತದನಂತರಮಾಗಚ್ಛನ್ಮೋಚಯಿಷ್ಯನ್ ಶಿನೇಃ ಸುತಮ್ ॥೩೭॥

ಸಾತ್ಯಕಿಯನ್ನು ಹಾಗೆ ಹೊಡೆಯುತ್ತಿರುವಾಗಲೇ ಕೋಪಾವಿಷ್ಟನಾದ ರುಗ್ಮಿಯ ಮಗನಾದ ಪ್ರದ್ಯುಮ್ನನು, ಶಿನಿಯ ಮಗನಾದ ಅವನನ್ನು ಬಿಡಿಸುವುದಕ್ಕಾಗಿ ಆ ಕೂಡಲೇ ಓಡಿಬಂದನು.

ಸ ಭೋಜೈಃ ಸಹ ಸಂಯುಕ್ತಃ ಸಾತ್ಯಕಿಶ್ಚಾಂಧಕೈಃ ಸಹ ।
ವ್ಯಾಯಚ್ಛಮಾನೌ ತೌ ವೀರೌ ಬಾಹುದ್ರವಿಣಶಾಲಿನೌ ॥೩೮॥

ಬಹುತ್ವಾನ್ನಿಹತೌ ತತ್ರ ಉಭೌ ಕೃಷ್ಣಸ್ಯ ಪಶ್ಯತಃ ॥೩೯॥

ಆ ಪ್ರದ್ಯುಮ್ನನು ಭೋಜರೊಂದಿಗೆ ಕೂಡಿ, ಸಾತ್ಯಕಿಯು ಅಂಧಕರೊಂದಿಗೆ, ಹೀಗೆ ಬಾಹುಬಲದ ಸಂಪತ್ತುಳ್ಳ ಆ ವೀರರು ಯುದ್ಧ ಮಾಡುತ್ತಿದ್ದ ಅವರು ತುಂಬಾ ಜನ ಇದ್ದುದರಿಂದ ಕೃಷ್ಣನು ನೋಡುತ್ತಿದ್ದಂತೆಯೇ ಇಬ್ಬರೂ ಅಲ್ಲೇ ಹತರಾದರು.

ಹತಂ ದೃಷ್ಟ್ವಾ ಚ ಶೈನೇಯಂ ಪುತ್ರಂ ಚ ಯದುನಂದನಃ ।
ಏರಕಾಣಾಂ ತತೋ ಮುಷ್ಟಿಂ ಕೋಪಾಜ್ಜಗ್ರಾಹ ಕೇಶವಃ ॥೪೦॥

ಸಾತ್ಯಕಿ ಹಾಗೂ ತನ್ನ ಮಗ ಇವರಿಬ್ಬರೂ ಹತರಾದುದನ್ನು ಕಂಡು, ಯದುನಂದನನಾದ ಕೇಶವನು ಕೋಪದಿಂದ ಅವರನ್ನು ಹೊಡೆಯಲೋಸುಗ ಜೊಂಡು ಹುಲ್ಲಿನ ಒಂದು ಮುಷ್ಟಿಯನ್ನು ತೆಗೆದುಕೊಂಡನು.

ತದಭೂನ್ಮುಸಲಂ ಘೋರಂ ವಜ್ರಕಲ್ಪಮಯೋಮಯಮ್ ।
ಜಘಾನ ಕೃಷ್ಣಸ್ತಾಂಸ್ತೇನ ಯೇ ಯೇ ಪ್ರಮುಖತೋಽಭವನ್ ॥೪೧॥

ಆ ಹುಲ್ಲಿನ ಮುಷ್ಟಿಯು ವಜ್ರಸದೃಶವಾದ ಉಕ್ಕಿನಿಂದ ಮಾಡಲ್ಪಟ್ಟ, ಘೋರವಾದ ಮುಸಲ(ಒನಕೆ)ವಾಗಿ ಮಾರ್ಪಟ್ಟಿತು. ಕೃಷ್ಣನು ಆ ಮುಷ್ಟಿಯಿಂದ (ಮುಸಲದಿಂದ) ಯಾರೆಲ್ಲ ಹೊಡೆದಾಟದಲ್ಲಿ ಪ್ರಮುಖರಾಗಿದ್ದರೋ ಅವರೆಲ್ಲರನ್ನೂ ಸಂಹರಿಸಿದನು.

ತತೋಽಂಧಕಾಶ್ಚ ಭೋಜಾಶ್ಚ ಶೈನೇಯಾ ವೃಷ್ಣಯಸ್ತಥಾ ।
ಜಘ್ನುರನ್ಯೋನ್ಯಮಾಕ್ರಂದೇ ಮುಸಲೈಃ ಕಾಲಚೋದಿತಾಃ ॥೪೨॥

ಅನಂತರ ಅಂಧಕರು, ಭೋಜರು, ಶೈನೇಯರು, ವೃಷ್ಣಿಗಳು ಕಾಲದಿಂದ ಪ್ರಚೋದಿತರಾಗಿ, ಜೋರಾಗಿ ಕಿರುಚುತ್ತಾ ಒನಕೆಗಳಿಂದ ಪರಸ್ಪರ ಹೊಡೆದಾಡಲಾರಂಭಿಸಿದರು.

ಯಸ್ತೇಷಾಮೇರಕಾಂ ಕಶ್ಚಿಜ್ಜಗ್ರಾಹ ಕುಪಿತೋ ನರಃ ।
ವಜ್ರಭೂತೇವ ಸಾ ರಾಜನ್ನದೃಶ್ಯತ ತದಾ ವಿಭೋ ॥೪೩॥

ಹೇ ರಾಜನೇ, ಅವರಲ್ಲಿ ಕೋಪಿಷ್ಠನಾದ ಯಾವೊಬ್ಬ ಮನುಷ್ಯನೂ ಹೊಡೆಯುವುದಕ್ಕಾಗಿ ಜೊಂಡುಹುಲ್ಲನ್ನು ಸ್ವೀಕರಿಸುವನೋ ಅದು ವಜ್ರದಂತೆ ಮಾರ್ಪಾಡು ಹೊಂದಿ ಕಾಣಿಸುತ್ತಿತ್ತು.

ತೃಣಂ ಚ ಮುಸಲೀಭೂತಮಪಿ ತತ್ರ ವ್ಯದೃಶ್ಯತ ।
ಬ್ರಹ್ಮದಂಡಕೃತಂ ಸರ್ವಮಿತಿ ತದ್ವಿದ್ಧಿ ಭಾರತ ॥೪೪॥

ಆ ಪ್ರದೇಶದಲ್ಲಿ ಹುಲ್ಲು ಕೂಡ ಒನಕೆಯಾಗಿ ಕಾಣಲಾರಂಭಿಸಿತು. ಹೇ ಭಾರತನೇ, ಆ ಎಲ್ಲವೂ ಬ್ರಾಹ್ಮಣರ ಶಾಪದಿಂದ ನಡೆದಿದೆ ಎಂದು ತಿಳಿ.

ಆವಿಧ್ಯಾವಿಧ್ಯ ತೇ ರಾಜನ್ ಪ್ರಹರಂತಿ ಸ್ಮ ತೈಸ್ತೃಣೈಃ ।
ತದ್ವಜ್ರಭೂತಂ ಮುಸಲಂ ವ್ಯದೃಶ್ಯತ ತದಾ ದೃಢಮ್ ॥೪೫॥

ಹೇ ರಾಜನೇ, ಅವರೆಲ್ಲರೂ ಹುಲ್ಲುಗಳನ್ನು ಕಿತ್ತು-ಕಿತ್ತು ಆ ಹುಲ್ಲುಗಳಿಂದ ಹೊಡೆಯುತ್ತಿದ್ದರು. ಆ ಕಿತ್ತ ಎಲ್ಲ ಹುಲ್ಲೂ ಕೂಡ ವಜ್ರದಂತೆ ಗಟ್ಟಿಯಾದ ಒನಕೆಯಾಗಿ ಕಾಣುತ್ತಿತ್ತು.

ಅವಧೀತ್ ಪಿತರಂ ಪುತ್ರಃ ಪಿತಾ ಪುತ್ರಂ ಚ ಭಾರತ ।
ಮತ್ತಾಃ ಪರಿಪತಂತಿ ಸ್ಮ ಯೋಧಯಂತಃ ಪರಸ್ಪರಮ್ ॥೪೬॥

ಹೇ ಭಾರತನೇ, ಪಾನದಿಂದ ಮತ್ತರಾದ ಅವರೆಲ್ಲರೂ ತಂದೆಯನ್ನು ಮಗನೂ, ಮಗನನ್ನು ತಂದೆಯೂ ಹೀಗೆ ಪರಸ್ಪರ ಹೊಡೆದಾಡಿಕೊಂಡು ಬೀಳತೊಡಗಿದರು.

ಪತಂಗಾ ಇವ ಚಾಗ್ನೌ ತೇ ನಿಪೇತುಃ ಕುಕುರಾಂಧಕಾಃ ।
ನಾಸೀತ್ ಪಲಾಯನೇ ಬುದ್ಧಿರ್ವಧ್ಯಮಾನಸ್ಯ ಕಸ್ಯಚಿತ್ ॥೪೭॥

ಆ ಕುಕುರವಂಶದವರೂ, ಅಂಧಕವಂಶದವರೂ ಅಗ್ನಿಯಲ್ಲಿ ಪತಂಗಗಳು ಬಿದ್ದಂತೆ ಬೀಳತೊಡಗಿದರು. ಹೊಡೆದಾಟದಲ್ಲಿ ಪೆಟ್ಟುತಿನ್ನುತ್ತಿರುವ ಯಾರೊಬ್ಬರಿಗೂ ಅಲ್ಲಿಂದ ಓಡಿಹೋಗಬೇಕೆಂಬ ಬುದ್ಧಿಯೇ ಉಂಟಾಗಲಿಲ್ಲ.

ತತ್ರಾಪಶ್ಯನ್ ಮಹಾಬಾಹುರ್ಜಾನನ್ ಕಾಲಸ್ಯ ಪರ್ಯಯಮ್ ।
ಮುಸಲಂ ಸಮವಷ್ಟಭ್ಯ ತಸ್ಥೌ ಸ ಮಧುಸೂದನಃ ॥೪೮॥

ಮಹಾಬಾಹುವಾದ ಆ ಶ್ರೀಕೃಷ್ಣನು ಕಾಲಚಕ್ರದ ಗತಿಯನ್ನು ಬಲ್ಲವನಾಗಿ ಒನಕೆಯನ್ನು ಊರಿ ನಿಂತವನಾಗಿ ಅಲ್ಲಿ ಸುತ್ತಲೂ ನೋಡಿದನು.

ಸಾಂಬಂ ಚ ನಿಹತಂ ದೃಷ್ಟ್ವಾ ಚಾರುದೇಷ್ಣಂ ಚ ಮಾಧವಃ ।
ಪ್ರದ್ಯುಮ್ನಂ ಚಾನಿರುದ್ಧಂ ಚ ತತಶ್ಚುಕ್ರೋಧ ಭಾರತ ॥೪೯॥

ಹೇ ಭಾರತನೇ, ಹತನಾದ ಸಾಂಬನನ್ನೂ, ಚಾರುದೇಷ್ಣನನ್ನೂ, ಪ್ರದ್ಯುಮ್ನನನ್ನೂ, ಅನಿರುದ್ಧನನ್ನೂ ನೋಡಿದ ಶ್ರೀಕೃಷ್ಣನು ಆಗ ಕೋಪಗೊಂಡನು.

ಗದಂ ವೀಕ್ಷ್ಯ ಶಯಾನಂ ಚ ಭೃಶಂ ಕೋಪಸಮನ್ವಿತಃ ।
ಸ ನಿಃಶೇಷಂ ತದಾ ಚಕ್ರೇ ಶಾರ್ಙ್ಗಚಕ್ರಗದಾಧರಃ ॥೫೦॥

ಸತ್ತುಬಿದ್ದ ಗದನನ್ನೂ ನೋಡಿದ ಅವನು ಬಹಳ ಕೋಪಾವಿಷ್ಟನಾಗಿ ಶಾರ್ಙ್ಗ-ಚಕ್ರ ಹಾಗೂ ಗದೆಗಳನ್ನು ಧರಿಸಿದವನಾಗಿ, ಅಲ್ಲಿ ಯಾರೂ ಉಳಿಯದಂತೆ ಎಲ್ಲರನ್ನೂ ಸಂಹರಿಸಿದನು.

ತಂ ನಿಘ್ನಂತಂ ಮಹಾತೇಜಾ ಬಭ್ರುಃ ಪರಪುರಂಜಯಃ ।
ದಾರುಕಶ್ಚೈವ ದಾಶಾರ್ಹಮೂಚತುರ್ಯನ್ನಿಬೋಧ ತತ್ ॥೫೧॥

ಹೀಗೆ ಸಂಹರಿಸುತ್ತಿರುವ ಶ್ರೀಕೃಷ್ಣನನ್ನು ಕುರಿತು ಮಹಾತೇಜಸ್ವಿಯಾದ, ಬಹುಪರಾಕ್ರಮಿಯಾದ ಬಭ್ರುವು ದಾರುಕನೂ ಸೇರಿಕೊಂಡು ಏನು ಹೇಳಿದರೋ ಅದನ್ನು ಕೇಳು.

ಭಗವನ್ನಿಹತಾಃ ಸರ್ವೇ ತ್ವಯಾ ಭೂಯಿಷ್ಠಶೋ ನರಾಃ ।
ರಾಮಸ್ಯ ಪದಮನ್ವಿಚ್ಛ ತತ್ರ ಗಚ್ಛಾಮ ಯತ್ರ ಸಃ ॥೫೨॥

ಹೇ ಭಗವನ್, ನಿನ್ನಿಂದ ಬಹಳ ಮನುಷ್ಯರೆಲ್ಲರೂ ಹತರಾದರು. ಬಲರಾಮ ಎಲ್ಲಿರುವನೆಂದು ಹುಡುಕು. ಅವನು ಎಲ್ಲಿ ಹೋಗಿರುವನೋ ನಾವೂ ಅಲ್ಲಿಗೆ ಹೋಗೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಮೌಸಲಪರ್ವಣಿ ಏರಕರೂಪಮುಸಲೇನ ಸರ್ವಭೋಜವೃಷ್ಣ್ಯಂಧಕಯಾದವಸಂಹಾರೋ ನಾಮ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ತತಃ ಪರೇಶೋಽಗಣಿತಾನುಭಾವಃ
ಸ್ವಸಾರಥಿಂ ಪಾಂಡವಾನಾಂ ಸಕಾಶಮ್ ।
ಸ್ವಲೋಕಯಾನಪ್ರತಿವೇದನಾಯ
ಸ್ವಸ್ಯಾನು ಚೈಷಾಂ ತ್ವರಯಾಽಭ್ಯಯಾತಯತ್ ॥

ಬಳಿಕ ಅನಂತಶಕ್ತಿಯುಳ್ಳ ಶ್ರೀಕೃಷ್ಣನು ಪಾಂಡವರಿಗೆ ತನ್ನ ಅನಂತರ ತಾವೂ ತಮ್ಮ ಲೋಕಕ್ಕೆ ತೆರಳಬೇಕೆಂದು ಸೂಚನೆ ಕೊಡುವುದಕ್ಕಾಗಿ ಅವರ ಬಳಿಗೆ ತನ್ನ ಸಾರಥಿಯಾದ ದಾರುಕನನ್ನು ತ್ವರೆಯಿಂದ ಕಳುಹಿಸಿಕೊಟ್ಟನು.

ಅಥಾಽಸತಃ ಪಿಪ್ಪಲಮೂಲ ಈಶಿತು-
ರೂರುಸ್ಥಿತಂ ಪಾದತಲಂ ಸುತಾಮ್ರಮ್ ।
ದೃಷ್ಟ್ವಾ ಜರಾ ನಾಮ ಸಸರ್ಜ ಶಲ್ಯಂ
ಭಕ್ತೋಽಪ್ಯಲಂ ರೋಹಿತಂ ಶಂಕಮಾನಃ ॥

ಬಳಿಕ ಅಶ್ವತ್ಥದ ಬುಡದಲ್ಲಿ ಕುಳಿತ ಶ್ರೀಕೃಷ್ಣನು, ತೊಡೆಯ ಮೇಲಿರಿಸಿದ್ದ ಬಲು ಕೆಂಪಾದ ಅಂಗಾಲನ್ನು ಕಂಡು ಜರ ಎಂಬ ಬೇಡ, ಬಹಳ ಭಕ್ತನಾಗಿದ್ದರೂ, ರೋಹಿತ ಮೃಗವೆಂದು ಭ್ರಮಿಸಿ ಬಾಣವನ್ನೆಸೆದನು.

ಅಚ್ಛೇದ್ಯಾಭೇದ್ಯದೇಹಸ್ಯ ಶಲ್ಯೇ ಪಾದಮುಪಸ್ಥಿತೇ ।
ಸಮೀಪಮಾಗತೋ ವ್ಯಾಧೋ ದೃಷ್ಟ್ವಾ ಭೀತೋಽಪತದ್ ಭುವಿ ॥

ಅಚ್ಛೇದ್ಯ-ಅಭೇದ್ಯ ದೇಹದವನಾದ ಕೃಷ್ಣನ ಪಾದಕ್ಕೆ ಬಾಣಬಿದ್ದಾಗ ಸಮೀಪಕ್ಕೆ ಬಂದ ಬೇಡ ನೋಡಿ, ಭಯಪಟ್ಟು ನೆಲದ ಮೇಲೆ ಬಿದ್ದು ನಮಿಸಿದನು.

ವಿಪ್ರವಾಕ್ಯಂ ಮಾನಯಾನಃ ಕಾರಯಿತ್ವಾऽಮುನಾ ಹರಿಃ ।
ಪಾಪಂ ಮಾಂ ಜಹಿ ದೇವೇತಿ ಯಾಚಂತಮನಯದ್ ದಿವಮ್ ॥

ಮುನಿಶಾಪವನ್ನು ಮಾನಿಸುತ್ತ ಶ್ರೀಕೃಷ್ಣನು ಬೇಡನಿಂದ ಅದರಂತೆ ಮಾಡಿಸಿ, ಅವನು 'ದೇವ, ಪಾಪಿಯಾದ ನನ್ನನ್ನು ಕೊಲ್ಲು' ಎಂದು ಬೇಡಿದಾಗ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು.

ಪಾದಪ್ರಹಾರದೋಷೇಣ ತಂ ಭೃಗುಂ ವ್ಯಾಧತಾಂ ಗತಮ್ ।
ಪಶ್ಚಾತ್ತಾಪೇನ ಭಕ್ತ್ಯಾ ಚ ಸುಪ್ರೀತಸ್ತಚ್ಛರೀರಿಣಮ್ ॥

ಸಾಜ್ಞಾಪ್ರಾಪ್ತವಿಮಾನೇನ ದಿವಂ ನಿನ್ಯೇ ಜನಾರ್ದನಃ ।
ನೀಚಾ ಯೋನಿರ್ನೀಚನೀಚಂ ಕರ್ಮಾऽಪ್ತಂ ನೀಚಕರ್ಮತಃ ॥

ಅದುಷ್ಟತ್ವಾತ್ತು ಮನಸೋ ಭಕ್ತಿಲೋಪೋ ನ ಚಾಪ್ಯಭೂತ್ ।
ಭೃಗೋರತ್ರಾಬುದ್ಧಿಪೂರ್ವಂ ನಾತಿದೋಷಕೃದಪ್ಯಭೂತ್ ॥

ಶ್ರೀಹರಿಗೆ ಕಾಲಿನಿಂದ ಒದ್ದ ಪಾಪದಿಂದ ಭೃಗುಮುನಿ ಬೇಡನ ಜನ್ಮ ಪಡೆದಿದ್ದ. ಶ್ರೀಕೃಷ್ಣನು ಅವನ ಪಶ್ಚಾತ್ತಾಪದಿಂದಲೂ ಭಕ್ತಿಯಿಂದಲೂ ಸುಪ್ರೀತನಾಗಿ ನೀಚಕರ್ಮದಿಂದ ನೀಚವಾದ ಯೋನಿಯನ್ನೂ ನೀಚಕ್ಕಿಂತ ನೀಚವಾದ ಕರ್ಮವನ್ನೂ ಹೊಂದಿದ್ದ ಅವನನ್ನು ಆ ಶರೀರದಿಂದಲೇ ತನ್ನಾಜ್ಞೆಯಿಂದ ಬಂದ ವಿಮಾನದಿಂದ ಸ್ವರ್ಗಕ್ಕೆ ಕಳುಹಿಸಿದನು. ಎದೆಗೆ ಒದ್ದಾಗ ಭೃಗುವಿನ ಮನಸ್ಸು ದುಷ್ಟವಾಗಿರಲಿಲ್ಲವಾದ ಕಾರಣ ವ್ಯಾಧಜನ್ಮದಲ್ಲಿಯೂ ಭಕ್ತಿಲೋಪವಾಗಿರಲಿಲ್ಲ. ಈ ವ್ಯಾಧಜನ್ಮದಲ್ಲಿಯೂ ತಿಳಿಯದೆ ಬಾಣ ಎಸೆದುದರಿಂದ ಹೆಚ್ಚು ಪಾಪಕರವೂ ಆಗಲಿಲ್ಲ.

ತತೋ ವಿರಿಂಚೀಶಪುರಂದರಾದ್ಯಾಃ
ಪುನಃ ಸ್ತುವಂತೋऽಭಿಯಯುಃ ಪ್ರಣಮ್ಯ ।
ಕೃಷ್ಣಂ ಸ ಚಾಶ್ವೇವ ಯಯೌ ಸ್ವಲೋಕಂ
ಸ್ವತೇಜಸಾ ಸರ್ವಮಿದಂ ಪ್ರಕಾಶಯನ್ ॥

ಶ್ರೀಕೃಷ್ಣನು ತನ್ನ ಪ್ರಕಾಶದಿಂದ ಈ ಲೋಕವನ್ನೆಲ್ಲ ಬೆಳಗುತ್ತ ಬೇಗನೆ ತನ್ನ ಲೋಕಕ್ಕೆ ತೆರಳಿದನು. ಬ್ರಹ್ಮ-ರುದ್ರ ಇಂದ್ರಾದಿಗಳು ಪುನಃ ಶ್ರೀಕೃಷ್ಣನನ್ನು ಸ್ತೋತ್ರ ಮಾಡುತ್ತ ನಮಿಸಿ, ಅವನನ್ನು ಹಿಂಬಾಲಿಸಿದರು.

ಗೋಪಾಲಮಂತ್ರಂ ಭಜತಾಂ ಫಲಪ್ರದ
ಏಕೇನ ರೂಪೇಣ ಸ ಭುವ್ಯದೃಶ್ಯಃ ।
ತಸ್ಥೌ ದ್ವಿತೀಯೇನ ಚ ಸೂರ್ಯಮಂಡಲೇ
ತೃತೀಯಮಾಸೀಚ್ಛಿವಪೂಜಿತಂ ವಪುಃ ॥

ಗೋಪಾಲ ಮಂತ್ರವನ್ನು ಭಜಿಸುವವರಿಗೆ ಫಲಪ್ರದನಾಗಿ ಒಂದು ರೂಪದಿಂದ ಶ್ರೀಕೃಷ್ಣನು ಭೂಮಿಯಲ್ಲಿ ಅದೃಶ್ಯನಾಗಿ ನಿಂತನು. ಎರಡನೇ ರೂಪದಿಂದ ಸೂರ್ಯ ಮಂಡಲದಲ್ಲಿ ನಿಂತನು. ಮೂರನೆಯ ರೂಪದಿಂದ ಶಿವನಿಂದ ಪೂಜಿತನಾಗಿ ನಿಂತನು.

ಸಂಪೂಜಿತಂ ಬ್ರಹ್ಮಲೋಕೇ ಚತುರ್ಥಂ
ಕಂಜೋದ್ಭವೇನಾಥ ಪರಂ ಸ್ವಧಾಮ ।
ಸಮಾಪ್ನುವಾನಂ ವಪುರಸ್ಯ ಪಂಚಮಂ
ಭಕ್ತ್ಯಾऽನ್ವಯುರ್ದೇವವರಾಃ ಸ್ವಶಕ್ತ್ಯಾ ॥

ನಾಲ್ಕನೆಯ ರೂಪ ಬ್ರಹ್ಮಲೋಕದಲ್ಲಿ ಬ್ರಹ್ಮನಿಂದ ಪೂಜಿತವಾಗಿ ನಿಂತಿತು. ಬಳಿಕ ತನ್ನ ಪರಂಧಾಮವನ್ನು ಹೊಂದುತ್ತಿದ್ದ ಶ್ರೀಕೃಷ್ಣನ ಐದನೇ ರೂಪವನ್ನು ದೇವೋತ್ತಮರು ಭಕ್ತಿಯಿಂದ ತಮ್ಮ ಶಕ್ತಿ ಇದ್ದಷ್ಟು ಹಿಂಬಾಲಿಸಿದರು.

ತತ್ತೇಜಸಾ ತೇ ಪ್ರವಿಮುಷ್ಟದೃಷ್ಟಯಃ
ಪುರುಷ್ಟುತಾದ್ಯಾ ಅಮಿತೋರುದೀಧಿತೇಃ ।
ಯಾವತ್ಸ್ವಗಮ್ಯಂ ತ್ವನುಗಮ್ಯ ತಸ್ಥು-
ರ್ನಿಮೀಲಿತಾಕ್ಷಾ ವಿಹತೋರ್ದ್ಧಚಾರಾಃ ॥

ಅಮಿತ ಮಹಾಪ್ರಕಾಶಶಾಲಿಯಾದ ಶ್ರೀಕೃಷ್ಣನ ಐದನೆಯ ರೂಪದ ಪ್ರಕಾಶದಿಂದ ಇಂದ್ರಾದಿ ದೇವತೆಗಳಿಗೆ ಕಣ್ಣು ಕಾಣದಾಯಿತು. ತಮಗೆ ಎಷ್ಟು ದೂರ ಹಿಂಬಾಲಿಸಲು ಸಾಧ್ಯವೋ ಅಷ್ಟು ದೂರಕ್ಕೆ ಹಿಂಬಾಲಿಸಿ ಕಣ್ಣುಮುಚ್ಚಿ ಮೇಲೆ ಹೋಗಲಾರದೆ ನಿಂತು ಬಿಟ್ಟರು.

ವೀಂದ್ರೇಶಶೇಷಾನುಗತಃ ಸ್ವಯಂಭೂ-
ರ್ಧಾಮ ಪ್ರವಿಷ್ಟಂ ತಮಜಂ ಪ್ರಣಮ್ಯ ।
ವೀಂದ್ರಾದಿಕೈರಪ್ಯಯುತಃ ಸ್ವಪಿತ್ರಾऽऽ
ಶ್ಲಿಷ್ಟೋ ರಹಶ್ಚಾಕಥಯತ್ ತಥಾऽಸ್ತೌತ್ ॥

ಗರುಡ, ಶೇಷ, ರುದ್ರರು ಜೊತೆಗೆ ಬರುತ್ತಿದ್ದರೂ ಅವರನ್ನು ಬಿಟ್ಟು ಬ್ರಹ್ಮನು, ವೈಕುಂಠಧಾಮವನ್ನು ಪ್ರವೇಶಿಸಿದ ಹರಿಯನ್ನು ನಮಿಸಿ, ತನ್ನ ತಂದೆಯಾದ ಆತನಿಂದ ಆಲಿಂಗಿತನಾಗಿ ರಹಸ್ಯ ಸಂಭಾಷಣೆಯನ್ನೂ ನಡೆಸಿದನು. ಹಾಗೇ ಸ್ತೋತ್ರವನ್ನೂ ಮಾಡಿದನು.

ಸ ಪೂರ್ವರೂಪೇಣ ಸಮಾಪ್ಯ ಚೈಕ್ಯಂ
ವಿಭಜ್ಯ ಚೇಚ್ಛಾನುಸೃತೋऽಥ ರೇಮೇ ।
ಹರಿಃ ಶ್ರಿಯಾ ಬ್ರಹ್ಮಮುಖೈಶ್ಚ ಮುಕ್ತೈಃ
ಸಂಪೂಜ್ಯಮಾನೋऽಮಿತಸದ್ಗುಣಾತ್ಮಾ ॥

ಲಕ್ಷ್ಮಿಯಿಂದಲೂ ಬ್ರಹ್ಮಾದಿ ಮುಕ್ತರಿಂದಲೂ ಚೆನ್ನಾಗಿ ಪೂಜಿಸಿಕೊಳ್ಳುವ, ಅಪರಿಮಿತ ಸದ್ಗುಣಸ್ವರೂಪನಾದ ಶ್ರೀಕೃಷ್ಣನು ತನ್ನ ಮೂಲರೂಪದಿಂದ ಐಕ್ಯ ಹೊಂದಿಯೂ ವಿಶೇಷ ಶಕ್ತಿಯಿಂದ ಬೇರೆಯಾಗಿಯೂ ಇದ್ದು ಇಚ್ಛಾನುಸಾರವಾಗಿ ಲಕ್ಷ್ಮಿಯೊಂದಿಗೆ ವಿಹರಿಸಿದನು.

ಬ್ರಹ್ಮಾऽಪಿ ಶರ್ವಾದಿಯುತಃ ಸ್ವಲೋಕಂ
ಪ್ರಾಪ್ತಃ ಪುನಸ್ತತ್ರ ಗತಂ ಚ ಕೃಷ್ಣಮ್ ।
ರೇಮೇऽಭಿಪಶ್ಯನ್ ಪ್ರತಿಪೂಜಯಂಸ್ತಂ
ಸುರಾಶ್ಚ ಸರ್ವೇ ರವಿಬಿಂಬಸಂಸ್ಥಮ್ ॥

ಬ್ರಹ್ಮನೂ ರುದ್ರಾದಿಸಮೇತನಾಗಿ ತನ್ನ ಲೋಕವನ್ನು ಹೊಂದಿ, ಪುನಃ ಅಲ್ಲಿದ್ದ ಕೃಷ್ಣನನ್ನು ನೋಡುತ್ತಾ, ಪೂಜಿಸುತ್ತ ಆನಂದಿಸಿದನು. ಎಲ್ಲ ದೇವತೆಗಳೂ ಸೂರ್ಯ ಬಿಂಬದಲ್ಲಿದ್ದ ಕೃಷ್ಣನನ್ನು ನೋಡುತ್ತ ಪೂಜಿಸುತ್ತ ಆನಂದಿಸಿದರು.

ಯತೋ ನ ದರ್ಶಿತಾ ಭ್ರಾಂತಿಃ ಪ್ರಾದುರ್ಭಾವೇಷ್ವಪಿ ಕ್ವಚಿತ್ ।
ದೇಹತ್ಯಾಗಾನುಕಾರೇಣ ಹರಿಣಾ ತದಿಹಾಚ್ಯುತಃ ॥

ಮೋಹಯಿತ್ವಾऽಸುರಾನಂಧಂ ತಮಃ ಪ್ರಾಪಯಿತುಂ ಪ್ರಭುಃ ।
ಚಿದಾನಂದೈಕದೇಹೋऽಪಿ ತ್ಯಕ್ತಂ ದೇಹಮಿವಾಪರಮ್ ॥

ಸೃಷ್ಟ್ವಾ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ ದಿವಮ್ ।
ದಾರುಕೋಕ್ಯಾ ಸಮಾಯಾತಃ ಪಾರ್ಥಸ್ತಮದಹತ್ ತದಾ ॥

ರೌಹಿಣೇಯಾದಿಕಾನಾಂ ಚ ಶರೀರಾಣಿ ಪ್ರಧಾನತಃ ।
ದಾರುಕೋ ವಿಷ್ಣುಲೋಕಂ ತು ಪುನರಾಪ ಯಥಾಗತಮ್ ॥

ಶ್ರೀಹರಿಯು ಹಿಂದೆ ಯಾವ ಅವತಾರಗಳಲ್ಲಿಯೂ ದೇಹತ್ಯಾಗದ ನಟನೆಯಿಂದ ಭ್ರಾಂತಿ ಉಂಟುಮಾಡದಿದ್ದುದರಿಂದ ಈ ಕೃಷ್ಣಾವತಾರದಲ್ಲಿ ಪ್ರಭುವಾದ ಅಚ್ಯುತನು ಅಸುರರನ್ನು ಮೋಹಗೊಳಿಸಿ, ಅಂಧಂತಮಸ್ಸಿಗೆ ನೂಕಲು ತಾನು ಚಿದಾನಂದ ಮಾತ್ರ ಶರೀರನಾಗಿದ್ದರೂ ತ್ಯಕ್ತವಾದ ದೇಹದಂತೆ ಕಾಣುವ ತನ್ನ ದೇಹಕ್ಕೆ ಸದೃಶವಾದ ಇನ್ನೊಂದು ಗೌಣದೇಹವನ್ನು ನಿರ್ಮಿಸಿ, ನೆಲದ ಮೇಲೆ ಒರಗಿಸಿ ವೈಕುಂಠಕ್ಕೆ ತೆರಳಿದನು. ಆಗ ದಾರುಕನ ಮಾತಿನಿಂದ ಬಂದ ಅರ್ಜುನನು ಅದನ್ನೂ ಬಲರಾಮ ಮುಂತಾದವರ ಮುಖ್ಯಶರೀರಗಳನ್ನೂ ದಹಿಸಿದನು. ದಾರುಕನು ಬಂದ ಹಾಗೆಯೇ ತಿರುಗಿ ವಿಷ್ಣುಲೋಕಕ್ಕೆ ತೆರಳಿದನು.

ತಥೈವ ಜನಮೋಹಾಯ ಪ್ರಾಪ್ಯ ವಹ್ನಾವದೃಶ್ಯತಾಮ್ ।
ರುಗ್ಮಿಣ್ಯಗಾದ್ಧರೇಃ ಪಾರ್ಶ್ವಂ ಸತ್ಯಾ ಕೃತ್ವಾ ತಪಸ್ತಥಾ ॥

ಕೃಷ್ಣನಂತೆಯೇ ರುಗ್ಮಿಣಿಯೂ ಜನರಿಗೆ ಮೋಹ ಉಂಟುಮಾಡುವುದಕ್ಕಾಗಿ ಬೆಂಕಿಯಲ್ಲಿ ಅದೃಶ್ಯಳಾದಳು. ಹಾಗೇ ಸತ್ಯಭಾಮೆಯೂ ತಪಸ್ಸು ಮಾಡಿ ಕಾಡಿನಲ್ಲಿ ಮರೆಯಾಗಿ ಹರಿಯ ಬಳಿ ಸೇರಿದಳು.

ಚಿದಾನಂದೈಕದೇಹೇ ಹಿ ದ್ವಿರೂಪೇ ಇವ ತೇ ಯತಃ ।
ಏಕೈವಾತಃ ಕೃಷ್ಣವತ್ ತೇ ದುಷ್ಟಾನ್ ಮೋಹಯತಸ್ತಥಾ ॥

ರುಗ್ಮಿಣೀ ಸತ್ಯಭಾಮೆಯರು ಎರಡು ರೂಪದವರಂತಿದ್ದರೂ ಏಕಮಾತ್ರ ಲಕ್ಷ್ಮೀ ಸ್ವರೂಪರೇ ಆಗಿದ್ದು ಚಿದಾನಂದೈಕ ದೇಹರೇ ಆಗಿರುವುದರಿಂದ ಕೃಷ್ಣನಂತೆ ದುಷ್ಟರಿಗೆ ಮೋಹಗೊಳಿಸುತ್ತಾರಷ್ಟೆ!

ಅನ್ಯಾ ಮಹಾಮಹಿಷ್ಯಸ್ತು ತ್ಯಕ್ತ್ವಾ ದೇಹಂ ಹುತಾಶನೇ ।
ಕಾಶ್ಚಿತ್ ಕಾಶ್ಚಿತ್ತು ತಪಸಾ ತ್ಯಕ್ತದೇಹಾ ಹರಿಂ ಯಯುಃ ॥

ಜಾಂಬವತೀ ಮುಂತಾದ ಇತರ ಮಹಾಮಹಿಷಿಯರು ಕೆಲವರು ದೇಹವನ್ನು ಅಗ್ನಿಯಲ್ಲಿ ಪರಿತ್ಯಜಿಸಿ, ಇನ್ನು ಕೆಲವರು ತಪಸ್ಸಿನಿಂದ ದೇಹತ್ಯಾಗ ಮಾಡಿ ಹರಿಯನ್ನು ಹೊಂದಿದರು.

ರೌಹಿಣೇಯಾದಿಕಾನಾಂ ಚ ಭಾರ್ಯಾ ವಹ್ನಿಮುಖೇ ತನುಮ್ ।
ತ್ಯಕ್ತ್ವಾ ಸ್ವಭರ್ತ್ರಾನೇವಾऽಪುಃ ಸರ್ವಾ ಏವ ಪತಿವ್ರತಾಃ ॥

ಬಲರಾಮಾದಿಗಳ ಪತ್ನಿಯರೂ ಪತಿವ್ರತೆಯರು. ಅಗ್ನಿಮುಖದಲ್ಲಿ ಸಹಗಮನ ಮಾಡಿ, ಶರೀರವನ್ನು ತ್ಯಜಿಸಿ, ತಮ್ಮ ಪತಿಗಳನ್ನೇ ಸೇರಿದರು.

ವಸುದೇವಃ ಪಾರ್ಥಮುಖಾತ್ ಶ್ರುತ್ವೈತದ್ಯೋಗಮಾಸ್ಥಿತಃ ।
ತ್ಯಕ್ತ್ವಾ ದೇಹಂ ಕಶ್ಯಪತ್ವಂ ಪ್ರಾಪ ಕೃಷ್ಣಾನುರಾಗತಃ ॥

ವಸುದೇವನು, ಅರ್ಜುನನ ಮುಖದಿಂದ ಇದನ್ನು ಕೇಳಿ ಯೋಗವನ್ನು ಅವಲಂಬಿಸಿ, ಕೃಷ್ಣಭಕ್ತಿಯಿಂದ ದೇಹವನ್ನು ತೊರೆದು, ಕೃಷ್ಣನ ಅನುಗ್ರಹದಿಂದ ಕಶ್ಯಪನಾದನು.

ತಸ್ಯಾರ್ಜುನೋऽಶ್ವಮೇಧಾಗ್ನಾವಂತ್ಯಕರ್ಮಾಕರೋತ್ ತದಾ ।
ತ್ಯಕ್ತದೇಹಾಸ್ತಸ್ಯ ಭಾರ್ಯಾ ವಹ್ನೌ ಪ್ರಾಪುಸ್ತಮೇವ ಚ ॥

ವಸುದೇವನಿಗೆ ಅವನ ಅಶ್ವಮೇಧಾಗ್ನಿಯಲ್ಲಿಯೆ ಅರ್ಜುನನು ಅಂತ್ಯಕ್ರಿಯೆ ಮಾಡಿದನು. ಅವನ ಪತ್ನಿಯರೂ ಅದೇ ಅಗ್ನಿಯಲ್ಲಿ ಪತಿಯೊಂದಿಗೆ ಸಹಗಮನ ಮಾಡಿ, ಶರೀರವನ್ನು ತೊರೆದು, ಸ್ವರ್ಗದಲ್ಲಿ ಅವನನ್ನೇ ಸೇರಿದರು.

★ ★ ★ ★ ★

ಐದನೆಯ ಅಧ್ಯಾಯ

ಎಲ್ಲ ಯಾದವರೂ ಮರಣ ಹೊಂದಿದ ನಂತರ ಬಭ್ರು ಹಾಗೂ ದಾರುಕನೊಂದಿಗೆ ಬಲಭದ್ರನನ್ನು ಹುಡುಕುತ್ತಾ ಶ್ರೀಕೃಷ್ಣನು ಕಾಡಿನಲ್ಲಿ ಮರವನ್ನು ಆಶ್ರಯಿಸಿದ ಬಲದೇವನನ್ನು ನೋಡುವುದು. ನಂತರ ಕೃಷ್ಣನು ಪಾಂಡವರಿಗೆ ಸುದ್ದಿಯನ್ನು ಮುಟ್ಟಿಸುವುದಕ್ಕಾಗಿ ದಾರುಕನನ್ನು ಕಳುಹಿಸುವುದು. ಬಲಭದ್ರನು ಯೋಗದಿಂದ ಸರ್ಪಶರೀರವನ್ನು ಸ್ವೀಕರಿಸಿ, ಸಮುದ್ರವನ್ನು ಪ್ರವೇಶಿಸುವುದು. ಕೃಷ್ಣನು ಶರೀರವನ್ನು ಬಿಡುವುದಕ್ಕಾಗಿ ಯೋಗದಿಂದ ನಿದ್ರಿಸುವುದು. ವ್ಯಾಧನು ಪ್ರಾಣಿ ಎಂದುಕೊಂಡು ಕೃಷ್ಣನ ಪಾದಕ್ಕೆ ಬಾಣದಿಂದ ಗಟ್ಟಿಯಾಗಿ ಹೊಡೆಯುವುದು. ಅನಂತರ ಸಮೀಪಕ್ಕೆ ಬಂದು, ಕೃಷ್ಣನನ್ನು ಕಂಡು ಪಶ್ಚಾತ್ತಾಪದಿಂದ ನಮಸ್ಕರಿಸಿದ ಬೇಡನನ್ನು ಸ್ವರ್ಗಕ್ಕೆ ಕಳುಹಿಸುವುದು. ನಂತರ ಕೃಷ್ಣನು ಶರೀರವನ್ನು ತ್ಯಜಿಸಿ, ಸ್ವರ್ಗಲೋಕಕ್ಕೆ ಬಂದು, ಸ್ವರ್ಗದಲ್ಲಿರುವ ದೇವತೆಗಳಿಂದ ಪುಷ್ಪವೃಷ್ಟಿ ಹಾಗೂ ಸ್ತೋತ್ರಾದಿಗಳಿಂದ ಗೌರವಿಸಲ್ಪಟ್ಟು ತನ್ನ ಪರಂಧಾಮವನ್ನು ಪ್ರವೇಶಿಸುವುದು.

ವೈಶಂಪಾಯನಃ

ತತೋ ಯಯುರ್ದಾರುಕಃ ಕೇಶವಶ್ಚ
ಬಭ್ರುಶ್ಚ ರಾಮಸ್ಯ ಪದಂ ಪತಂತಃ ।
ಅಥಾಪಶ್ಯನ್ ರಾಮಮನಂತವೀರ್ಯಂ
ವೃಕ್ಷಾಶ್ರಿತಂ ಚಿಂತಯಾನಂ ವಿವಿಕ್ತೇ ॥೧॥

ವೈಶಂಪಾಯನ– ಇಷ್ಟಾದ ನಂತರ ದಾರುಕನೂ, ಕೃಷ್ಣನೂ, ಬಭ್ರುವೂ ಬಲರಾಮನು ಎಲ್ಲಿರುವನೆಂದು ಹುಡುಕುತ್ತಾ ಹೊರಟರು. ಸ್ವಲ್ಪ ದೂರ ಹೋದನಂತರ ಮರದಲ್ಲಿ ಕುಳಿತು ಏಕಾಂತದಲ್ಲಿ ಚಿಂತಿಸುತ್ತಿರುವ, ಬಹುಪರಾಕ್ರಮವುಳ್ಳ ಬಲರಾಮನನ್ನು ಕಂಡರು.

ತತಃ ಸಮಾಸಾದ್ಯ ಮಹಾನುಭಾವಃ
ಕೃಷ್ಣಸ್ತದಾ ದಾರುಕಮನ್ವಶಾಸತ್ ।
ಗತ್ವಾ ಕುರೂನ್ ಸರ್ವಮಿಮಂ ಮಹಾಂತಂ
ಪಾರ್ಥಾಯ ಶಂಸಸ್ವ ವಧಂ ಯದೂನಾಮ್ ॥೨॥

ಅನಂತರ ಮಹಾನುಭಾವನಾದ ಶ್ರೀಕೃಷ್ಣನು ದಾರುಕನ ಸಮೀಪಕ್ಕೆ ಹೋಗಿ, ಕುರುಗಳು ಇರುವಲ್ಲಿಗೆ ಹೋಗಿ ದೊಡ್ಡದಾದ ಈ ಎಲ್ಲವೃತ್ತಾಂತವನ್ನೂ, ಯದುಗಳ ವಧೆಯನ್ನೂ ಪಾರ್ಥನಿಗೆ ತಿಳಿಸೆಂದು ಅಪ್ಪಣೆ ಮಾಡಿದನು.

ತತೋಽರ್ಜುನಃ ಕ್ಷಿಪ್ರಮಿಹೋಪಯಾತು
ಶ್ರುತ್ವಾ ಮೃತಾನ್ ಯಾದವಾನ್ ಬ್ರಹ್ಮಶಾಪಾತ್ ।
ಇತ್ಯೇವಮುಕ್ತಃ ಸ ಯಯೌ ರಥೇನ
ಕುರೂಂಸ್ತದಾ ದಾರುಕೋ ನಷ್ಟಚೇತಾಃ ॥೩॥

ಬ್ರಹ್ಮಶಾಪದಿಂದ ಯಾದವರು ಮೃತರಾದುದನ್ನು ಕೇಳಿ ಅರ್ಜುನನು ಕೂಡಲೇ ಇಲ್ಲಿಗೆ ಹೊರಟು ಬರಲಿ. ಕೃಷ್ಣನು ಇಷ್ಟನ್ನು ತಿಳಿಸಿದಾಗ ದಾರುಕನು ದಿಗ್ಭ್ರಾಂತನಾಗಿ ರಥವನ್ನೇರಿ ಕುರುಗಳಿದ್ದಲ್ಲಿಗೆ ಹೊರಟನು.

ತತೋ ಗತೇ ದಾರುಕೇ ಕೇಶವೋಽಥ
ದೃಷ್ಟ್ವಾಂತಿಕೇ ಬಭ್ರುಮುವಾಚ ವಾಕ್ಯಮ್ ।
ಸ್ತ್ರಿಯೋ ಭವಾನ್ ರಕ್ಷಿತುಂ ಯಾತು ಶೀಘ್ರಂ
ನೈತಾ ಹಿಂಸ್ಯುರ್ದಸ್ಯವೋ ವಿತ್ತಲೋಭಾತ್ ॥೪॥

ದಾರುಕನು ಹೊರಟು ಹೋದನಂತರ ಸಮೀಪದಲ್ಲಿರುವ ಬಭ್ರುವನ್ನು ಕುರಿತು ಶ್ರೀಕೃಷ್ಣನು 'ನಮ್ಮೊಂದಿಗೆ ಬಂದಿರುವ ಸ್ತ್ರೀಯರನ್ನು ರಕ್ಷಿಸುವುದಕ್ಕಾಗಿ ನೀನು ಹೊರಡು. ದರೋಡೆಕೋರರು ಹಣದ ಆಸೆಯಿಂದ ಇವರನ್ನು ಹಿಂಸಿಸದಿರಲಿ' ಹೀಗೆಂದನು.

ಸ ಪ್ರಸ್ಥಿತಃ ಕೇಶವೇನಾನುಶಿಷ್ಟೋ
ಮದಾತುರೋ ಜ್ಞಾತಿವಧಾರ್ದಿತಶ್ಚ ।
ತಂ ವೈ ಯಾತಂ ಸನ್ನಿಧೌ ಕೇಶವಸ್ಯ
ತ್ವರಂತಮೇಕಂ ಸಹಸೈವ ಬಭ್ರುಮ್ ॥೫॥

ಬ್ರಹ್ಮಾನುಶಪ್ತಮವಧೀನ್ಮಹದ್ವಲ
ಕೂಟೇ ಯುಕ್ತಂ ಮುಸಲಂ ಲುಬ್ಧಕಸ್ಯ ॥೬॥

ಕೃಷ್ಣನಿಂದ ಆಜ್ಞಪ್ತನಾಗಿ, ಮದೋನ್ಮತ್ತನಾದ, ಬಂಧುಗಳ ವಧೆಯಿಂದ ಕಂಗೆಟ್ಟ, ಕೃಷ್ಣನ ಸನ್ನಿಧಿಯನ್ನು ಬಿಟ್ಟು ಒಬ್ಬನೇ ವೇಗವಾಗಿ ಹೋಗುತ್ತಿರುವ, ಬ್ರಾಹ್ಮಣನ ಶಾಪಕ್ಕೆ ಗುರಿಯಾಗಿದ್ದ ಆ ಬಭ್ರುವನ್ನು ಬೇಡರ ಗುಂಪಿನಿಂದ ಪ್ರಯೋಗಿಸಲ್ಪಟ್ಟ ದೊಡ್ಡದಾದ ಒಂದು ಒನಕೆಯು ಸಂಹರಿಸಿತು.

ತತೋ ದೃಷ್ಟ್ವಾ ನಿಹತಂ ಬಭ್ರುಮಾಹ
ಕೃಷ್ಣೋಽಗ್ರಜಂ ಭ್ರಾತರಮುಗ್ರತೇಜಾಃ ।
ಇಹೈವ ತ್ವಂ ಮಾಂ ಪ್ರತೀಕ್ಷಸ್ವ ರಾಮ
ಯಾವತ್ ಸ್ತ್ರಿಯೋ ಜ್ಞಾತಿವಶಾಃ ಕರೋಮಿ ॥೭॥

ಇಷ್ಟಾದ ನಂತರ ಉಗ್ರತೇಜಸ್ವಿಯಾದ ಶ್ರೀಕೃಷ್ಣನು ಬಭ್ರುವು ಹತನಾದುದನ್ನು ನೋಡಿ, ತನ್ನ ಹಿರಿಯಣ್ಣನನ್ನು ಕುರಿತು, 'ಹೇ ರಾಮನೇ, ನಾನು ಸ್ತ್ರೀಯರನ್ನು ಬಂಧುಗಳ ವಶಕ್ಕೆ ಒಪ್ಪಿಸುವ ತನಕ ನೀನು ಇಲ್ಲೇ ಇದ್ದು ನನ್ನನ್ನು ನಿರೀಕ್ಷಿಸುತ್ತಿರು' ಎಂದನು.

ತತಃ ಪುರೀಂ ದ್ವಾರವತೀಂ ಪ್ರವಿಶ್ಯ
ಜನಾರ್ದನಃ ಪಿತರಂ ಪ್ರಾಹ ವಾಕ್ಯಮ್ ।
ಸರ್ವಂ ಭವಾನ್ ರಕ್ಷತು ನಃ ಸಮಗ್ರಂ
ಧನಂಜಯಸ್ಯಾಗಮನಂ ಪ್ರತೀಕ್ಷನ್ ॥೮॥

ಇಷ್ಟು ಹೇಳಿದ ಶ್ರೀಕೃಷ್ಣನು ದ್ವಾರವತಿ ಪಟ್ಟಣವನ್ನು ಪ್ರವೇಶಿಸಿ, ತನ್ನ ತಂದೆಯನ್ನು ಕುರಿತು, ಅರ್ಜುನನ ಆಗಮನವನ್ನು ನಿರೀಕ್ಷಿಸುತ್ತಾ, ನಮಗೆ ಸಂಬಂಧಪಟ್ಟ ಎಲ್ಲ ವಸ್ತುಗಳನ್ನೂ ನೀವು ರಕ್ಷಿಸಿರಿ ಎಂದು ಹೇಳಿದನು.

ರಾಮೋ ವನಾಂತೇ ಪ್ರತಿಪಾಲಯನ್ಮಾಮ್
ಆಸ್ತೇಽದ್ಯಾಹಂ ತೇನ ಸಮಾಗಮಿಷ್ಯೇ ।
ದೃಷ್ಟಂ ಮಯೇದಂ ನಿಧನಂ ಯದೂನಾಂ
ರಾಜ್ಞಾಂ ಚ ಪೂರ್ವಂ ಕುರುಪುಂಗವಾನಾಮ್ ॥೯॥

ಬಲರಾಮನು ಇಂದು ಕಾಡಿನೊಳಗೆ ನನ್ನ ಬರುವಿಕೆಯನ್ನು ಕಾಯುತ್ತಾ ನಿಂತಿರುವನು. ಅವನ ಜೊತೆಗೆ ನಾನು ಸೇರಬೇಕಾಗಿದೆ. ಇಂದು ನಾನು ಹಿಂದೆ ಕುರುಪುಂಗವರ ಮರಣವನ್ನು ಕಂಡಂತೆ ಯದುರಾಜರ ಮರಣವನ್ನೂ ನೋಡಿದೆನು.

ನಾಹಂ ವಿನಾ ಯದುಭಿರ್ಯಾದವಾನಾಂ
ಪುರೀಮಿಮಾಮಶಕಂ ದ್ರಷ್ಟುಮದ್ಯ ।
ತಪಶ್ಚರಿಷ್ಯಾಮಿ ನಿಬೋಧ ತನ್ಮೇ
ರಾಮೇಣ ಸಾರ್ಧಂ ವನಮಭ್ಯುಪೇತ್ಯ ॥೧೦॥

ಯದುಗಳಿಲ್ಲದ ಯಾದವರ ಈ ಪಟ್ಟಣವನ್ನು ನೋಡಲು ನನಗೆ ಸಾಧ್ಯವಾಗುತ್ತಿಲ್ಲ. ಬಲರಾಮನೊಂದಿಗೆ ಕಾಡನ್ನು ಪ್ರವೇಶಿಸಿ ತಪಸ್ಸನ್ನು ನಡೆಸಬೇಕೆಂಬ ನನ್ನ ಅಭಿಪ್ರಾಯವು ನಿಮಗೆ ತಿಳಿದಿರಲಿ.

ಇತೀದಮುಕ್ತ್ವಾ ಶಿರಸಾ ಚ ಪಾದೌ
ಸಂಸ್ಪೃಶ್ಯ ಕೃಷ್ಣಸ್ತ್ವರಿತೋ ಜಗಾಮ ।
ತತೋ ಮಹಾನ್ನಿನದಃ ಪ್ರಾದುರಾಸೀತ್
ಸಸ್ತ್ರೀಕುಮಾರಸ್ಯ ಪುರಸ್ಯ ತಸ್ಯ ॥೧೧॥

ಇಷ್ಟು ಹೇಳಿ ಶ್ರೀಕೃಷ್ಣನು ತನ್ನ ಶಿರಸ್ಸಿನಿಂದ ವಸುದೇವನ ಪಾದಗಳನ್ನು ಮುಟ್ಟಿ ನಮಸ್ಕರಿಸಿ, ಅವಸರದಿಂದ ಹೊರಟನು. ಆಗಲೇ ಆ ಪಟ್ಟಣದಲ್ಲಿರುವ ಸ್ತ್ರೀಯರ ಮತ್ತು ಮಕ್ಕಳ ಜೋರಾದ ಆರ್ತನಾದವು ಕೇಳತೊಡಗಿತು.

ತತೋಽಬ್ರವೀತ್ ಕೇಶವಃ ಸನ್ನಿವರ್ತ್ಯ
ಶಬ್ದಂ ಶ್ರುತ್ವಾ ಯೋಷಿತಾಂ ಕ್ರೋಶತೀನಾಮ್ ।
ಪುರೀಮಿಮಾಮೇಷ್ಯತಿ ಸವ್ಯಸಾಚೀ
ಸ ವೋ ದುಃಖಾನ್ಮೋಚಯಿತಾ ನರಾಗ್ರ್ಯಃ ॥೧೨॥

ಹೀಗೆ ಬೊಬ್ಬಿಡುತ್ತಿರುವ ಸ್ತ್ರೀಯರ ಆರ್ತನಾದವನ್ನು ಕೇಳಿ ಶ್ರೀಕೃಷ್ಣನು ಹಿಂದಿರುಗಿ 'ಈ ಪಟ್ಟಣಕ್ಕೆ ಅರ್ಜುನನು ಬರಲಿದ್ದಾನೆ. ಆ ನರಶ್ರೇಷ್ಠನು ನಿಮ್ಮನ್ನು ದುಃಖದಿಂದ ಬಿಡುಗಡೆಗೊಳಿಸುವನು' ಎಂದನು.

ತತೋ ಗತಃ ಕೇಶವಸ್ತಂ ದದರ್ಶ
ರಾಮಂ ವನೇ ಸ್ಥಿತಮೇಕಂ ವಿವಿಕ್ತೇ ॥೧೩॥

ಅನಂತರ ಅಲ್ಲಿಂದ ಹೊರಟ ಶ್ರೀಕೃಷ್ಣನು ಕಾಡಿನಲ್ಲಿ ಏಕಾಂತಸ್ಥಾನದಲ್ಲಿ ಒಬ್ಬನೇ ಇರುವ ಬಲರಾಮನನ್ನು ಕಂಡನು.

ಅಥಾಪಶ್ಯದ್ ಯೋಗಯುಕ್ತಸ್ಯ ತಸ್ಯ
ನಾಗಂ ಮುಖಾನ್ನಿಸರಂತಂ ಮಹಾಂತಮ್ ।
ಶ್ವೇತಂ ಯಯೌ ಸತತಂ ಪ್ರೇಕ್ಷ್ಯಮಾಣೋ
ಮಹಾರ್ಣವೋ ಯೇನ ಮಹಾನುಭಾವಃ ॥೧೪॥

ಸಹಸ್ರಶೀರ್ಷಃ ಪರ್ವತಾಭೋಗವರ್ಷ್ಮಾ
ರಕ್ತಾನನಃ ಸ್ವಾಂ ತನುಂ ತಾಂ ವಿಮುಚ್ಯ ॥೧೫॥

ಅದೇ ಸಮಯಕ್ಕೆ ಯೋಗಯುಕ್ತನಾದ ಆ ಬಲರಾಮನ ಮುಖದಿಂದ ದೊಡ್ಡದಾದ ಸರ್ಪವು ಹೊರಬರುವುದನ್ನು ಕಂಡನು. ಕೃಷ್ಣನು ಕಣ್ಣುಮಿಟುಕಿಸದೆ ದಿಟ್ಟಿಸಿ ನೋಡುತ್ತಿದ್ದಂತೆಯೇ ಆ ಯಾವ ಬಿಳಿಯ ಬಣ್ಣದ, ಸಾವಿರ ಶಿರಸ್ಸುಳ್ಳ, ಪರ್ವತದಂತೆ ಬಹುದೊಡ್ಡ ಶರೀರವುಳ್ಳ, ಕೆಂಪುಮುಖವುಳ್ಳ ಸರ್ಪವು ಕಂಡುಬಂದು, ಮಹಾನುಭಾವನಾದ ಬಲರಾಮನು ತನ್ನ ಶರೀರವನ್ನು ಬಿಟ್ಟು, ಈ ಶರೀರದಿಂದಲೇ ಸಾಗರವನ್ನು ಹೊಕ್ಕನು.

ಸಂದೃಶ್ಯಂತಂ ಸಾಗರಾಂತಂ ವಿಶಂತಂ
ಸಮ್ಯಕ್ ತದಾ ಸಾಗರಃ ಪ್ರತ್ಯಗೃಹ್ಣಾತ್ ।
ನಾಗಾ ದಿವ್ಯಾಃ ಸರಿತಶ್ಚೈವ ಪುಣ್ಯಾಃ
ಕರ್ಕೋಟಕೋ ವಾಸುಕಿಸ್ತಕ್ಷಕಶ್ಚ ॥೧೬॥

ಪೃಥುಶ್ರವಾ ಅರುಣಃ ಕುಂಜರಶ್ಚ
ಮಿಶ್ರೀ ಶಂಖಃ ಕುಮುದಃ ಪುಂಡರೀಕಃ ।
ತಥಾ ನಾಗೋ ಧೃತರಾಷ್ಟ್ರೋ ಮಹಾತ್ಮಾ
ಹ್ರಾದಃ ಕ್ರಾಥಃ ಶಿತಿಪೃಷ್ಠೋ ನಿಕೇತುಃ ॥೧೭॥

ತಥಾ ನಾಗೌ ಚಕ್ರಮಂದಾತಿಷಂಡೌ
ನಾಗಶ್ರೇಷ್ಠೋ ದುರ್ಮುಖಶ್ಚಾಂಬರೀಷಃ ।
ಸ್ವಯಂ ರಾಜಾ ವರುಣಶ್ಚಾಪಿ ರಾಜನ್
ಪ್ರತ್ಯುದ್ಗಮ್ಯ ಸ್ವಾಗತೇನಾಭ್ಯನಂದನ್ ॥೧೮॥

ಕೃಷ್ಣನ ಕಣ್ಣಿಗೆ ಗೋಚರಿಸುವಂತೆಯೇ ಸಾಗರದೊಳಗೆ ಪ್ರವೇಶಿಸುತ್ತಿರುವ ಆ ಬಲರಾಮನನ್ನು ಸಾಗರವು ಚೆನ್ನಾಗಿ ಎದುರುಗೊಂಡಿತು. ಅಲ್ಲದೆ ದಿವ್ಯವಾದ ನಾಗಗಳು, ಮಂಗಳಮಯವಾದ ನದಿಗಳು, ಕರ್ಕೋಟಕನು, ವಾಸುಕಿಯು, ತಕ್ಷಕನು, ಪೃಥುಶ್ರವಸನು, ಅರುಣನು, ಕುಂಜರನು, ಮಿಶ್ರಿಯು, ಶೃಂಗ-ಕುಮುದ-ಪುಂಡರೀಕನು, ಮಹಾತ್ಮನಾದ ಧೃತರಾಷ್ಟ್ರನಾಗನು, ಹ್ರಾದ-ಕ್ರಾಥ-ಶಿತಿಪೃಷ್ಠ-ನಿಕೇತು ಎಂಬ ನಾಗಗಳು, ಹಾಗೆಯೇ ಚಕ್ರಮಂದ, ಅತಿಷಂಡ ಎಂಬ ನಾಗಗಳು, ನಾಗಶ್ರೇಷ್ಠನಾದ ದುರ್ಮುಖನು, ಅಂಬರೀಷನು ಇವರಲ್ಲದೆ, ಹೇ ಜನಮೇಜಯನೇ, ಸ್ವಯಂ ರಾಜನಾದ ವರುಣನೂ ಕೂಡ ಮೇಲೆದ್ದುಬಂದು ಸ್ವಾಗತಿಸುವುದರ ಮೂಲಕ ಅಭಿನಂದಿಸಿದರು.

ತೇऽಪೂಜಯಂಶ್ಚಾರ್ಘ್ಯಪಾದ್ಯಕ್ರಿಯಾಭಿಃ
ಸಂಕರ್ಷಣಂ ಭೂಧರಂ ಶುದ್ಧಬುದ್ಧಿಮ್ ॥೧೯॥

ಅವರೆಲ್ಲರೂ ಶುದ್ಧಬುದ್ಧಿಯಾದ, ಭೂಮಿಯನ್ನು ಧರಿಸಿದ ಸಂಕರ್ಷಣ ರೂಪಿಯಾದ ಅವನನ್ನು ಅರ್ಘ್ಯ-ಪಾದ್ಯ ಮೊದಲಾದ ಕ್ರಿಯೆಗಳಿಂದ ಪೂಜಿಸಿದರು.

ತತೋ ಗತೇ ಭ್ರಾತರಿ ವಾಸುದೇವೋ
ಜಾನನ್ ಸರ್ವಾ ಗತಯೋ ದಿವ್ಯದೃಷ್ಟಿಃ ।
ವನೇ ಶೂನ್ಯೇ ವಿಚರಂಶ್ಚಿಂತಯಾನೋ
ಭೂಮೌ ಚಾಥ ಸಂವಿವೇಶಾಗ್ನ್ಯತೇಜಾಃ ॥೨೦॥

ಅಣ್ಣನು ಹೊರಟು ಹೋದ ನಂತರ ಶ್ರೀಕೃಷ್ಣನು ದಿವ್ಯದೃಷ್ಟಿಯುಳ್ಳವನಾದ್ದರಿಂದ ಎಲ್ಲರ ಗತಿಯನ್ನು ತಿಳಿದಿದ್ದರೂ ನಿರ್ಜನವಾದ ಕಾಡಿನಲ್ಲಿ ಏನನ್ನೋ ಚಿಂತಿಸುತ್ತಾ ಅಲೆದಾಡಿದನು. ಸ್ವಲ್ಪ ಕಾಲ ಕಳೆದ ನಂತರ ಮಹಾತೇಜಸ್ವಿಯಾದ ಅವನು ಭೂಮಿಯಲ್ಲಿ ಕುಳಿತನು.

ಸರ್ವಂ ತೇನ ಪ್ರಾಕ್ತದಾ ವಿತ್ತಮಾಸೀದ್
ಗಾಂಧಾರ್ಯಾ ಯದ್ವಾಕ್ಯಮುಕ್ತಂ ಸ್ವಧರ್ಮಾತ್ ।
ದುರ್ವಾಸಸಾ ಪಾಯಸೋಚ್ಛಿಷ್ಟಲಿಪ್ತೇ
ಯಚ್ಚಾಪ್ಯುಕ್ತಂ ತಚ್ಚ ಸಸ್ಮಾರ ಕೃಷ್ಣಃ ॥೨೧॥

ಈ ಎಲ್ಲವೂ ಅವನಿಗೆ ಇದಕ್ಕಿಂತ ಮೊದಲೇ ತಿಳಿದಿತ್ತು. ಜೊತೆಗೆ ಗಾಂಧಾರಿಯು ತನ್ನ ಪತಿವ್ರತಾಧರ್ಮದಿಂದ ಕೂಡಿಕೊಂಡು ಏನನ್ನು ಹೇಳಿದ್ದಳೋ, ಶರೀರಕ್ಕೆ ಪಾಯಸವನ್ನು ಲೇಪಿಸಿಕೊಂಡು ಅಡ್ಡಾಡುತ್ತಿದ್ದಾಗ ದುರ್ವಾಸರು ಏನನ್ನು ಹೇಳಿದ್ದರೋ, ಅದನ್ನೂ ಕೃಷ್ಣನು ನೆನಪಿಸಿಕೊಂಡನು.

ಕುಲಸ್ತ್ರೀಣಾಂ ಸಂವೃತಾನಾಂ ಗವಾಂ ಚ
ದ್ವಿಜೇಂದ್ರಾಣಾಂ ಬಲಮಾದಾಯ ಧರ್ಮೇ ।
ಯೋನಿರ್ದೇವಾನಾಂ ವರದೋ ಬ್ರಹ್ಮದೇವೋ
ಗೋವಿಂದಾಖ್ಯೋ ವಾಸುದೇವೋಽಥ ನಿತ್ಯಃ ॥೨೨॥

ಸಂಚಿಂತಯನ್ನಂಧಕವೃಷ್ಣಿನಾಶಂ
ಕುರುಕ್ಷಯಂ ಚೈವ ಮಹಾನುಭಾವಃ ।
ಮೇನೇ ತತಃ ಸಂಕ್ರಮಣಸ್ಯ ಕಾಲಂ
ತತಶ್ಚಕಾರೇಂದ್ರಿಯಸನ್ನಿರೋಧಮ್ ॥೨೩॥

ಚೆನ್ನಾಗಿ ರಕ್ಷಿತರಾದ ಕುಲಸ್ತ್ರೀಯರ ಹಾಗೂ ಗೋವುಗಳ ಹಾಗೂ ದ್ವಿಜಶ್ರೇಷ್ಠರ ಬಲವನ್ನು ಧರ್ಮವನ್ನಾಗಿಸಿ, ದೇವತೆಗಳಿಗೂ ಕಾರಣನಾದ, ವರದನಾದ, ಬ್ರಹ್ಮನಿಗೂ ದೇವನಾದ, ಗೋವಿಂದ ಎಂಬ ಪ್ರಸಿದ್ಧಿಯುಳ್ಳ, ನಿತ್ಯನಾದ ವಾಸುದೇವನು ಅಂಧಕ ಮತ್ತು ವೃಷ್ಣಿಗಳ ನಾಶವನ್ನು ಆಲೋಚಿಸುತ್ತಾ, ಹಾಗೆಯೇ ಕುರುಗಳ ಕ್ಷಯವನ್ನೂ ನೆನಪಿಸಿಕೊಳ್ಳುತ್ತಾ, ಮಹಾನುಭಾವನಾದ ಅವನು ತಾನೂ ಶರೀರವನ್ನು ಬಿಟ್ಟು ಹೊರಡಬೇಕಾದ ಕಾಲವು ಬಂದಿದೆ ಎಂದು ತಿಳಿದನು. ಅನಂತರ ಇಂದ್ರಿಯಗಳನ್ನು ನಿರೋಧಿಸಲು ಆರಂಭಿಸಿದನು.

ಯಥಾ ಚ ಲೋಕತ್ರಯಪಾಲನಾರ್ಥಂ
ದುರ್ವಾಸವಾಕ್ಯಪ್ರತಿಪಾಲನಾಯ ।
ದೇವೋಽಪಿ ಸಂದೇಹವಿಮೋಕ್ಷಹೇತೋಃ
ನಿಮಿತ್ತಮೈಚ್ಛತ್ಸಕಲಾರ್ಥತತ್ತ್ವವಿತ್ ॥೨೪॥

ಸ ಸನ್ನಿರುದ್ಧೇಂದ್ರಿಯವಾಙ್ಮನಾಸ್ತು
ಶಿಶ್ಯೇ ಮಹಾಯೋಗಮುಪೇತ್ಯ ಕೃಷ್ಣಃ ।

ಜರೋಥ ತಂ ದೇಶಮುಪಾಜಗಾಮ
ಲುಬ್ಧಸ್ತದಾನೀಂ ಮೃಗಲಿಪ್ಸುರುಗ್ರಃ ॥೨೫॥

ಸಕಲಾರ್ಥತತ್ತ್ವಗಳನ್ನು ತಿಳಿದ ಶ್ರೀಕೃಷ್ಣದೇವನು ಲೋಕತ್ರಯಗಳನ್ನು ರಕ್ಷಿಸುವುದಕ್ಕೆ ಹೇಗೋ ಹಾಗೆ ದುರ್ವಾಸರ ಮಾತುಗಳನ್ನು ಸತ್ಯಗೊಳಿಸುವುದಕ್ಕೋಸ್ಕರ, ಜೊತೆಗೆ ದೇವತೆಗಳಿಗೆ ಬರಬಹುದಾದ ಸಂದೇಹವನ್ನು ಪರಿಹಾರ ಮಾಡಲೋಸುಗ ನಿಮಿತ್ತವನ್ನು ಇಚ್ಛಿಸಿ, ಇಂದ್ರಿಯ-ವಾಕ್-ಮನಸ್ಸುಗಳನ್ನು ನಿರೋಧಿಸಿಕೊಂಡು, ಮಹಾಯೋಗವನ್ನು ಆಶ್ರಯಿಸಿ ಮಲಗಿದನು. ಅದೇ ಕಾಲಕ್ಕೆ ಮೃಗಗಳನ್ನು ಬೇಟೆಯಾಡುವ ಜರನೆಂಬ ಉಗ್ರನಾದ ಬೇಡನು ಆ ಪ್ರದೇಶಕ್ಕೆ ಬಂದನು.

ಸ ಕೇಶವಂ ಯೋಗಯುಕ್ತಂ ಶಯಾನಂ
ಮೃಗಾಸಕ್ತೋ ಲುಬ್ಧಕಃ ಸಾಯಕೇನ ।
ಜರೋಽವಿಧ್ಯತ್ಪಾದತಲೇ ತ್ವರಾವಾನ್
ತಂ ಚಾಭಿತಸ್ತಜ್ಜಿಘೃಕ್ಷುರ್ಜಗಾಮ ॥೨೬॥

ಆ ಮೃಗಾಸಕ್ತನಾದ ಜರನೆಂಬ ಬೇಡನು ತಡಮಾಡದೆ ಯೋಗಯುಕ್ತನಾಗಿ ಮಲಗಿದ್ದ ಶ್ರೀಕೃಷ್ಣನಿಗೆ ಪಾದತಳದಲ್ಲಿ ಬಾಣದಿಂದ ಹೊಡೆದನು. ನಂತರ ತಾನು ಬಾಣದಿಂದ ಹೊಡೆದ ಪ್ರಾಣಿಯನ್ನು ಹಿಡಿಯಬೇಕೆಂದು ಅಲ್ಲಿಗೆ ಬಂದನು.

ಅಥಾಪಶ್ಯತ್ಪುರುಷಂ ಯೋಗಯುಕ್ತಂ
ಪೀತಾಂಬರಂ ಲುಬ್ಧಕೋಽನೇಕಬಾಹುಮ್ ।
ಮತ್ವಾಽಽತ್ಮಾನಂ ತತ್ಪರಾದ್ಧಂ ಸ ತಸ್ಯ
ಪಾದೌ ಜರೋ ಜಗೃಹೇ ಶಂಕಿತಾತ್ಮಾ ॥೨೭॥

ಅಲ್ಲಿಗೆ ಬಂದಾಗ ಆ ಬೇಡನು ಯೋಗಯುಕ್ತನಾದ, ಪೀತಾಂಬರವನ್ನು ಧರಿಸಿರುವ, ಅನೇಕ ಬಾಹುಗಳುಳ್ಳ ಪುರುಷನನ್ನು ಕಂಡನು. ಇಷ್ಟಾದ ಮೇಲೆ ತಾನು ಅಪರಾಧ ಮಾಡಿದೆ ಎಂದು ತಿಳಿದ ಆ ಜರನು ತನಗೆ ಅನಿಷ್ಟವಾಗುವುದೆಂದು ಶಂಕಿಸುತ್ತಾ ಆ ಕೃಷ್ಣನ ಪಾದಗಳನ್ನು ಹಿಡಿದುಕೊಂಡನು.

ಆಶ್ವಾಸಿತಃ ಪುಣ್ಯಫಲೇನ ಭಕ್ಯಾ
ತಥಾಽನುತಾಪಾತ್ ಕರ್ಮಣೋ ಜನ್ಮನಶ್ಚ ।

ದೃಷ್ಟ್ವಾ ತಥಾ ದೇವಮನಂತವೀರ್ಯಂ
ದೇವೈಃ ಸ್ವರ್ಗಂ ಪ್ರಾಪಿತಸ್ಯಕ್ತದೇಹಃ ॥೨೮॥

ಕೃಷ್ಣನಿಂದ ಆಶ್ವಾಸಿತನಾಗಿ, ತಾನು ಹಿಂದೆ ಮಾಡಿದ ಪುಣ್ಯಫಲದಿಂದಲೂ, ಕೃಷ್ಣನ ಮೇಲಿನ ಭಕ್ತಿಯಿಂದಲೂ ತಾನು ಮಾಡಿದ ಕರ್ಮದ ಬಗ್ಗೆ ಹಾಗೂ ಈ ವ್ಯಾಧಜನ್ಮದ ಬಗ್ಗೆ ಪಶ್ಚಾತ್ತಾಪದಿಂದಲೂ, ಹಾಗೆಯೇ ಅನಂತವೀರ್ಯನಾದ ಶ್ರೀಕೃಷ್ಣದೇವನನ್ನು ಆ ರೀತಿಯಲ್ಲಿ ನೋಡಿದುದರಿಂದಲೂ ಆ ಜರನು ದೇವತೆಗಳ ಜೊತೆಗೆ ಶರೀರವನ್ನು ಬಿಟ್ಟು ಸ್ವರ್ಗವನ್ನು ಸೇರಿಕೊಂಡನು.

ಗಣೈರ್ಮುನೀನಾಂ ಪೂಜಿತಸ್ತತ್ರ ಕೃಷ್ಣೋ
ಗಚ್ಛನ್ನೂರ್ಧ್ವಂ ವ್ಯಾಪ್ಯ ಲೋಕಾನ್ ಸ್ವಲಕ್ಷ್ಮ್ಯಾ ॥೨೯॥

ದಿವಂ ಪ್ರಾಪ್ತಂ ವಾಸವೋಽಥಾಶ್ವಿನೌ ಚ
ರುದ್ರಾದಿತ್ಯಾ ವಸವಶ್ಚಾಥ ವಿಶ್ವೇ ।
ಪ್ರತ್ಯುದ್ಯಯುರ್ಮುನಯಶ್ಚಾಪಿ ಸಿದ್ಧಾ
ಗಂಧರ್ವಮುಖ್ಯಾಶ್ಚ ಸಹಾಪ್ಸರೋಭಿಃ ॥೩೦॥

ತನ್ನೊಂದಿಗಿರುವ ಲಕ್ಷ್ಮೀರೂಪಳಾದ ರುಗ್ಮಿಣಿಯೊಂದಿಗೆ ಲೋಕಗಳನ್ನು ವ್ಯಾಪಿಸಿಕೊಂಡು ಊರ್ಧ್ವಲೋಕಕ್ಕೆ ಹೊರಟಿರುವ ಶ್ರೀಕೃಷ್ಣನು ಅಲ್ಲಿರುವ ಮುನಿಗಳ ಸಮೂಹದಿಂದ ಪೂಜಿತನಾದನು. ಸ್ವರ್ಗವನ್ನು ಸೇರಿದ ಶ್ರೀಕೃಷ್ಣನನ್ನು ಇಂದ್ರನು, ಅಶ್ವಿನೀದೇವತೆಗಳು, ರುದ್ರಾದಿತ್ಯರು, ವಸುಗಳು, ವಿಶ್ವೇದೇವತೆಗಳು, ಮುನಿಗಳು, ಸಿದ್ಧರು, ಗಂಧರ್ವಮುಖ್ಯರು ಅಪ್ಸರಸ್ತ್ರೀಯರೊಂದಿಗೆ ಸೇರಿಕೊಂಡು ಸಂಭ್ರಮದಿಂದ ಎದುರುಗೊಂಡರು.

ತತೋ ರಾಜನ್ ಭಗವಾನುಗ್ರತೇಜಾ
ನಾರಾಯಣಃ ಪ್ರಭವಶ್ಚಾವ್ಯಯಶ್ಚ ।
ಯೋಗಾಚಾರ್ಯೋ ರೋದಸೀ ವ್ಯಾಪ್ಯ ಲಕ್ಷ್ಮ್ಯಾ
ಸ್ಥಾನಂ ಪ್ರಾಪ ಸ್ವಂ ಮಹಾತ್ಮಾಽಪ್ರಮೇಯಮ್ ॥೩೧॥

ಹೇ ರಾಜನೇ, ಅನಂತರ ಪ್ರಜ್ವಲಿಸುವ ತೇಜಸ್ಸುಳ್ಳ, ಈ ಜಗತ್ತಿನ ಸೃಷ್ಟಿ ಹಾಗೂ ಲಯಕ್ಕೂ ಕಾರಣನಾದ, ಯೋಗಾಚಾರ್ಯನಾದ, ತನ್ನ ತೇಜಸ್ಸಿನಿಂದ

ಭೂಮ್ಯಾಕಾಶಗಳನ್ನು ವ್ಯಾಪಿಸಿ ನಿಂತಿರುವ ಮಹಾತ್ಮನಾದ, ಷಡ್ಗುಣಪೂರ್ಣನಾದ ನಾರಾಯಣನು ಅಪ್ರಮೇಯವಾದ ತನ್ನ ಸ್ಥಾನವನ್ನು ಸೇರಿಕೊಂಡನು.

ತತೋ ದೇವೈರ್ಋಷಿಭಿಶ್ಚಾಪಿ ಕೃಷ್ಣಃ
ಸಮಾಗತಶ್ಚಾರಣೈಶ್ಚೈವ ರಾಜನ್ ।
ಗಂಧರ್ವಾಗ್ರ್ಯೈರಪ್ಸರೋಭಿರ್ವರಾಭಿಃ
ಸಿದ್ಧೈಃ ಸಾಧ್ಯೈಶ್ಚಾನತೈಃ ಪೂಜ್ಯಮಾನಃ ॥೩೨॥

ಹೇ ರಾಜನೇ, ಆಗ ಶ್ರೀಕೃಷ್ಣನು ದೇವತೆಗಳು, ಋಷಿಗಳು, ಚಾರಣರು, ಗಂಧರ್ವರು, ಶ್ರೇಷ್ಠರಾದ ಅಪ್ಸರಸ್ತ್ರೀಯರು, ಸಿದ್ಧರು, ಸಾಧ್ಯರು ಇವರೆಲ್ಲರಿಂದ ನಮಸ್ಕಾರಪೂರ್ವಕವಾಗಿ ಪೂಜೆಯನ್ನು ಸ್ವೀಕರಿಸುತ್ತಿದ್ದನು.

ತಂ ವೈ ದೇವಾಃ ಪ್ರತ್ಯನಂದಂತ ರಾಜನ್
ಮುನಿಶ್ರೇಷ್ಠಾ ಋಗ್ಭಿರಾನರ್ಚುರೀಶಮ್ ।
ತಂ ಗಂಧರ್ವಾಶ್ಚಾಪಿ ತಸ್ಥುಃ ಸ್ತುವಂತಃ
ಪ್ರೀತ್ಯಾ ಚೈನಂ ಪುರುಹೂತೋಽಭ್ಯನಂದತ್ ॥೩೩॥

ಹೇ ರಾಜನೇ! ಆ ಶ್ರೀಕೃಷ್ಣನನ್ನು ದೇವತೆಗಳು ಸ್ತೋತ್ರ ಮಾಡಿದರು. ಮುನಿಶ್ರೇಷ್ಠರು ಸರ್ವಶಕ್ತನಾದ ಅವನನ್ನು ವೇದಮಂತ್ರಗಳಿಂದ ಅರ್ಚಿಸಿದರು. ಗಂಧರ್ವರು ಅವನನ್ನು ಸ್ತೋತ್ರಗೈಯ್ಯುತ್ತಾ ಅಲ್ಲೇ ನಿಂತರು. ಇಂದ್ರನು ಪ್ರೀತಿಯಿಂದ ಆ ಶ್ರೀಕೃಷ್ಣನನ್ನು ಅಭಿನಂದಿಸಿದನು.

ನಮೋ ನಮಸ್ತೇ ಭಗವನ್ ಶಾರ್ಙ್ಗಧನ್ವನ್
ಧರ್ಮಸ್ಥಿತ್ಯಾ ಪ್ರಾದುರಾಸೀರ್ಧರಾಯಾಮ್ ।
ಕಂಸಾಖ್ಯಾದೀನ್ ದೇವಶತ್ರೂಂಶ್ಚ ಸರ್ವಾನ್
ಹತ್ವಾ ಭೂಮಿಃ ಸ್ಥಾಪಿತಾ ಭಾರತಪ್ತಾ ॥೩೪॥

ಹೇ ಭಗವನ್, ಶಾರ್ಙ್ಗವೆಂಬ ಧನುಸ್ಸುಳ್ಳವನೇ, ನಿನಗೆ ಮತ್ತೆ ಮತ್ತೆ ನಮಸ್ಕಾರ. ನೀನು ಭೂಮಿಯಲ್ಲಿ ಧರ್ಮದ ಸ್ಥಾಪನೆಗೋಸ್ಕರ ಪ್ರಾದುರ್ಭವಿಸಿರುವಿ. ಕಂಸನೇ ಮೊದಲಾದ ಎಲ್ಲ ದೇವಶತ್ರುಗಳನ್ನೂ ಸಂಹರಿಸಿ, ಭೂಭಾರದಿಂದ ಕಷ್ಟಪಡುತ್ತಿರುವ ಭೂಮಿಯನ್ನು ಸರಿಯಾದ ರೀತಿಯಲ್ಲಿ ಸ್ಥಾಪಿಸಿರುವಿ.

ದಿವ್ಯಂ ಸ್ಥಾನಮಜರಂ ಚಾಪ್ರಮೇಯಂ
ದುರ್ವಿಜ್ಞೇಯಂ ಚಾಗಮೈರ್ಗಮ್ಯಮಗ್ರ್ಯಮ್ ।
ಗಚ್ಛ ಪ್ರಭೋ ರಕ್ಷ ಚಾರ್ತಿಂ ಪ್ರಪನ್ನಾನ್
ಕಲ್ಪೇ ಕಲ್ಪೇ ಜಾಯಮಾನಾಂಶ್ಚ ಮರ್ತ್ಯಾನ್ ॥೩೫॥

ಹೇ ಪ್ರಭುವೇ, ನಮ್ಮನ್ನು ರಕ್ಷಿಸು. ಮುಪ್ಪಿಗೆ ಅವಕಾಶವಿಲ್ಲದ, ಅಪ್ರಮೇಯವಾದ, ವಾಙ್ಮನಸ್ಸುಗಳಿಂದ ತಿಳಿಯಲು ಅಶಕ್ಯವಾದ, ವೇದಗಳಿಂದ ಮಾತ್ರ ತಿಳಿಯಲು ಯೋಗ್ಯವಾದ ಶ್ರೇಷ್ಠ ಸ್ಥಾನವನ್ನು ನೀನು ಹೊಂದು. ಕಲ್ಪ ಕಲ್ಪಗಳಲ್ಲಿ ಮತ್ತೆ ಮತ್ತೆ ಹುಟ್ಟುತ್ತಿರುವ ಶರಣಾಗತರಾದ ಮನುಜರ ಆರ್ತಿಯನ್ನು ಪರಿಹರಿಸಿ ಅವರನ್ನು ರಕ್ಷಿಸು.

ಇತ್ಯೇವಮುಕ್ತ್ವಾ ದೇವಸಂಘೋऽನುಗಮ್ಯ
ಶ್ರಿಯಾ ಯುಕ್ತಂ ಪುಷ್ಪವೃಷ್ಟ್ಯಾ ವವರ್ಷ ।
ವಾಣೀ ಹ್ಯಾಸೀತ್ಸಂಶ್ರುಣೀ ರೂಪಿಣೀ ಸಾ ।
ಭಾನೋರ್ಮಧ್ಯೇ ಪ್ರವಿಶಂತಂ ತು ರಾಜನ್ ॥೩೬॥

ಹೀಗೆ ಹೇಳಿ ದೇವತೆಗಳ ಸಮೂಹವು ಅವನನ್ನು ಹಿಂಬಾಲಿಸಿ ಲಕ್ಷ್ಮೀ ಸಮೇತನಾದ ಶ್ರೀಕೃಷ್ಣನಿಗೆ ಪುಷ್ಪವೃಷ್ಟಿಯನ್ನು ನೆರವೇರಿಸಿತು. ಹೇ ರಾಜನೇ, ಕೃಷ್ಣನು ಸೂರ್ಯಮಂಡಲವನ್ನು ಪ್ರವೇಶಿಸುವ ಆ ಕಾಲಕ್ಕೆ ಸರಿಯಾಗಿ ಎಲ್ಲರಿಗೂ ಚೆನ್ನಾಗಿ ಕೇಳುವಂತೆ ಅಶರೀರವಾಣಿಯು ಉಂಟಾಯಿತು.

ಭುಜೈಶ್ಚತುರ್ಭಿಃ ಸಮುಪೇತಂ ಮಮೇದಂ
ರೂಪಂ ವಿಶಿಷ್ಟಂ ಜೀವಿತಂ ಸಂಸ್ಥಿತಂ ಚ ।
ಭೂಮೌ ಗತಂ ಪೂಜಯತಾಪ್ರಮೇಯಂ
ಸದಾ ಹಿ ತಸ್ಮಿನ್ನಿವಸಾಮೀತಿ ದೇವಾಃ ॥೩೭॥

ನಾಲ್ಕುಕೈಗಳಿಂದ ಕೂಡಿದ ಈ ನನ್ನ ವಿಶಿಷ್ಟವಾದ, ಯಾವಾಗಲೂ ಜೀವಕಳೆಯಿಂದ ತುಂಬಿದ, ಭೂಮಿಯಲ್ಲಿ ನಿಂತಿರುವ, ಅಪ್ರಮೇಯವಾದ ಈ ರೂಪವನ್ನು ಸದಾ ಪೂಜಿಸಿರಿ. ಹೇ ದೇವತೆಗಳೇ, ಆ ರೂಪದಲ್ಲಿ ನಾನು ಸದಾ ವಾಸವಾಗಿರುವೆನು.

ದೇವಾ ನಿವೃತ್ತಾಸ್ತತ್ಪದಂ ನಾಪ್ನುವನ್ತೋ
ಬುದ್ಧ್ಯಾ ದೇವಂ ಸಂಸ್ಮರಂತಃ ಪ್ರತೀತಾಃ ।

ಬ್ರಹ್ಮಾದ್ಯಾಸ್ತೇ ತದ್ಗುಣಾನ್ ಕೀರ್ತಯಂತಃ
ಶುಭಾನ್ ಲೋಕಾನ್ ಸ್ವಾನ್ ಪ್ರಪೇದುಃ ಸುರೇಂದ್ರಾಃ ॥೩೮॥

ಇಷ್ಟಾದನಂತರ ದೇವತೆಗಳು ಅಲ್ಲಿಂದ ಹಿಂದಿರುಗಿ, ಎಷ್ಟು ಹುಡುಕಿದರೂ ಆ ರೂಪವನ್ನು ಕಾಣಲಾಗದೆ ತಮ್ಮ ತಮ್ಮ ಬುದ್ಧಿಯಿಂದಲೇ ಆ ರೂಪದಿಂದ ಭಗವಂತನನ್ನು ಸ್ಮರಿಸಿದರು. ಹೀಗೆ ಬ್ರಹ್ಮನೇ ಮೊದಲಾದ ದೇವತಾಶ್ರೇಷ್ಠರು ಆ ಕೃಷ್ಣನ ಗುಣಗಳನ್ನು ಕೀರ್ತನೆ ಮಾಡುತ್ತಾ, ತಮ್ಮ ತಮ್ಮ ಮಂಗಳಮಯವಾದ ಲೋಕಗಳಿಗೆ ತೆರಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಮೌಸಲಪರ್ವಣಿ ವಾಸುದೇವಸ್ವರ್ಗಾರೋಹಣಂ ನಾಮ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ದಾರುಕನು ಹಸ್ತಿನಪುರಕ್ಕೆ ಬಂದು ಪಾಂಡವರಲ್ಲಿ ಎಲ್ಲ ಯಾದವರ ಕ್ಷಯವನ್ನು ನಿವೇದಿಸುವುದು. ಅರ್ಜುನನು ದ್ವಾರಕೆಗೆ ಆಗಮಿಸಿ ರುಗ್ಮಿಣಿಯೇ ಮೊದಲಾದವರನ್ನು ಸಮಾಧಾನಪಡಿಸಿ ವಸುದೇವನ ಗೃಹಕ್ಕೆ ತೆರಳುವುದು.

ವೈಶಂಪಾಯನಃ

ದಾರುಕೋऽಪಿ ಕುರೂನ್ ಗತ್ವಾ ದೃಷ್ಟ್ವಾ ಪಾರ್ಥಾನ್ ಮಹಾರಥಾನ್ ।
ಆಚಷ್ಟ ಮೌಸಲೇ ವೃಷ್ಣಿನನ್ಯೋನ್ಯೇನೋಪಸಂಹೃತಾನ್ ॥೧॥

ವೈಶಂಪಾಯನ– ದಾರುಕನು ಕುರುರಾಜ್ಯಕ್ಕೆ ಹೋಗಿ ಮಹಾರಥರಾದ ಪಾಂಡವರನ್ನು ಕಂಡು ಮುಸಲಕ್ಕೆ (ಒನಕೆಗೆ) ಸಂಬಂಧಿಸಿದ ಶಾಪಕ್ಕೊಳಗಾಗಿ ವೃಷ್ಣಿಗಳು ಪರಸ್ಪರ ಹೊಡೆದಾಡಿಕೊಂಡು ನಿಧನ ಹೊಂದಿದರೆಂದು ತಿಳಿಸಿದನು.

ಶ್ರುತ್ವಾ ವಿನಷ್ಟಾನ್ ವಾಷ್ಣೇಯಾನ್ ಸಭೋಜಾಂಧಕಕೌಕುರಾನ್ ।
ಪಾಂಡವಾಃ ಶೋಕಸಂತಪ್ತಾ ವಿತ್ರಸ್ತಮನಸೋಭವನ್ ॥೨॥

ಭೋಜ, ಅಂಧಕ, ಕುಕರರೊಂದಿಗೆ ವೃಷ್ಣಿಗಳು ನಿಧನರಾದುದನ್ನು ಕೇಳಿ ಪಾಂಡವರು ಶೋಕಸಂತಪ್ತರಾಗಿ ವ್ಯಾಕುಲಗೊಂಡ ಮನಸ್ಸುಳ್ಳವರಾದರು.

ತತೋಽರ್ಜುನಸ್ತಾನಾಮಂತ್ರ್ಯ ಕೇಶವಸ್ಯ ಪ್ರಿಯಃ ಸಖಾ ।
ಪ್ರಯಯೌ ಮಾತುಲಂ ದ್ರಷ್ಟುಂ ನೈತದಸ್ತೀತಿ ಚಾಬ್ರವೀತ್ ॥೩॥

ಅನಂತರ ಕೃಷ್ಣನ ಪ್ರಿಯಮಿತ್ರನಾದ ಅರ್ಜುನನು ಪಾಂಡವರೆಲ್ಲರನ್ನೂ ಸಂಬೋಧಿಸಿ, ಕೃಷ್ಣನಿಲ್ಲವಾದರೆ ಈ ರಾಜ್ಯವೇ ಇಲ್ಲ ಎಂದು ಹೇಳಿ ಮಾವನನ್ನು ನೋಡಲು ದ್ವಾರಕೆಗೆ ಹೊರಟನು.

ಸ ವೃಷ್ಣಿನಿಲಯಂ ಗತ್ವಾ ದಾರುಕೇಣ ಸಹ ಪ್ರಭೋ ।
ದದರ್ಶ ದ್ವಾರಕಾಂ ವೀರೋ ಮೃತನಾಥಾಮಿವ ಸ್ತ್ರಿಯಮ್ ॥೪॥

ಹೇ ಪ್ರಭುವೇ, ವೀರನಾದ ಆ ಅರ್ಜುನನು ದಾರುಕನೊಂದಿಗೆ ವೃಷ್ಣಿಗಳ ವಾಸಸ್ಥಾನವಾದ ದ್ವಾರಕೆಗೆ ಹೋಗಿ, ಪತಿಯನ್ನು ಕಳೆದುಕೊಂಡು ವಿಧವೆಯಂತಿರುವ ದ್ವಾರಕಾ ಪಟ್ಟಣವನ್ನು ಕಂಡನು.

ಯಾಃ ತು ತಾ ಲೋಕನಾಥೇನ ನಾಥವತ್ಯಃ ಪುರಾಽಭವನ್ ।
ತಾಸ್ತ್ವನಾಥಾಸ್ತದಾ ನಾಥಂ ಪಾರ್ಥಂ ದೃಷ್ಟ್ವಾ ವಿಚುಕ್ರುಶುಃ ॥೫॥

ಯಾವ ಸ್ತ್ರೀಯರು ಹಿಂದೆ ಲೋಕನಾಥನಾದ ಶ್ರೀಕೃಷ್ಣನಿಂದ ಪತಿಸೌಭಾಗ್ಯವನ್ನು ಪಡೆದಿದ್ದರೋ ಅಂತಹ ಎಲ್ಲ ಅನಾಥಸ್ತ್ರೀಯರೂ ತಮಗೆ ರಕ್ಷಕನಾದ ಅರ್ಜುನನು ಬಂದುದನ್ನು ನೋಡಿ ರೋದಿಸಲಾರಂಭಿಸಿದರು.

ಷೋಡಶಸ್ತ್ರೀಸಹಸ್ರಾಣಿ ವಾಸುದೇವಪರಿಗ್ರಹಾಃ ।
ತಾಸಾಮಾಸೀನ್ಮಹಾನ್ನಾದೋ ದೃಷ್ಟ್ವೈವಾರ್ಜುನಮಾಗತಮ್ ॥೬॥

ಕೃಷ್ಣ ಕೈಹಿಡಿದ ಹದಿನಾರು ಸಾವಿರ ಸ್ತ್ರೀಯರೂ ಅಲ್ಲಿದ್ದರು. ಅರ್ಜುನನ ಆಗಮನವನ್ನು ನೋಡಿದ ಕೂಡಲೇ ಅವರ ಮಧ್ಯದಿಂದ ಬಹಳವಾದ ರೋದನ ಸ್ವರವು ಕೇಳಿಬಂದಿತು.

ತಾಸ್ತು ದೃಷ್ಟ್ವೈವ ಕೌರವ್ಯೋ ಬಾಷ್ಪೇಣಾಪಿಹಿತೇಕ್ಷಣಃ ।
ಹೀನಾಃ ಕೃಷ್ಣೇನ ಪುತ್ರೈಶ್ಚ ನಾಶಕತ್ ಸೋಭಿವೀಕ್ಷಿತುಮ್ ॥೭॥

ಅವರನ್ನು ನೋಡುತ್ತಲೇ ಕುರುವಂಶಜನಾದ ಅರ್ಜುನನು ಕಣ್ಣೀರು ತುಂಬಿಕೊಂಡನು. ಕೃಷ್ಣನಿಂದ ಹಾಗೂ ಪುತ್ರರಿಂದ ರಹಿತರಾದ ಅವರನ್ನು ನೋಡಲು ಅವನು ಸಮರ್ಥನಾಗಲಿಲ್ಲ.

ಸ ತಾಂ ವೃಷ್ಣ್ಯಂಧಕಜಲಾಂ ಹಯಮೀನಾಂ ರಥೋಡುಪಾಮ್ ।
ವಾದಿತ್ರರಥಘೋಷೌಘಾಂ ವೇಶ್ಮತೀರ್ಥಮಹಾಗ್ರಹಾಮ್ ॥೮॥

ರತ್ನಶೈವಲಸಂಘಾತಾಂ ವಜ್ರಪ್ರಾಕಾರಮಾಲಿನೀಮ್ ।
ರಥ್ಯಾಸ್ರೋತೋಜಲಾವರ್ತಾಂ ಚತ್ವರಸ್ತಿಮಿತಹ್ರದಾಮ್ ॥೯॥

ರಾಮಕೃಷ್ಣಮಹಾಗ್ರಾಹಾಂ ದ್ವಾರಕಾಂ ಸರಿತಂ ತದಾ ।
ಕಾಲಪಾಶಗ್ರಹಾಂ ಭೀಮಾಂ ನದೀಂ ವೈತರಣೀಮಿವ ॥೧೦॥

ದದರ್ಶ ವಾಸವಿರ್ಧೀಮಾನ್ ವಿಹೀನಾಂ ವೃಷ್ಣಿಪುಂಗವೈಃ ।
ಗತಶ್ರಿಯಂ ನಿರಾನಂದಾಂ ಪದ್ಮಿನೀಂ ಶಿಶಿರೇ ಯಥಾ ॥೧೧॥

ಅನಂತರ ಅವನು ಹರಿಯುವ ಮಹಾನದಿಯಂತಿದ್ದ ದ್ವಾರಕಾ ಪಟ್ಟಣವನ್ನು ದಿಟ್ಟಿಸಿದನು. ಈ ನದಿಯಲ್ಲಿ ವೃಷ್ಣಿ ಮತ್ತು ಅಂಧಕರೇ ನೀರಿನಂತಿದ್ದರು. ಕುದುರೆಗಳು ಮೀನಿನಂತಿದ್ದವು, ರಥಗಳು ನೌಕೆಯಂತಿದ್ದವು, ವಾದ್ಯ ಮತ್ತು ರಥದ ಘೋಷಗಳೇ ಹರಿಯುವ ಝುಳುರುಝುಳು ನಾದದಂತಿತ್ತು. ಮನೆಗಳೇ ತೀರ್ಥ ಹಾಗೂ ಮಡುಗಳಂತಿದ್ದವು. ರತ್ನಗಳೇ ಪಾಚಿಯ ಸಮೂಹದಂತಿದ್ದವು. ವಜ್ರದ ಗೋಡೆಗಳೇ ಹರಿಯುವ ಪ್ರವಾಹದಂತಿದ್ದವು. ರಸ್ತೆಗಳೇ ಹಾಗೂ ಬೀದಿಗಳೇ ಸುಳಿಯಂತಿದ್ದವು. ಯಜ್ಞಶಾಲೆ ಹಾಗೂ ಮಠ-ಮಂದಿರಗಳೇ ಸರೋವರದಂತಿದ್ದವು. ರಾಮ ಹಾಗೂ ಕೃಷ್ಣರೆಂಬ ದೊಡ್ಡ ಮೊಸಳೆಯಿಂದ ಕೂಡಿತ್ತು. ಆದೇ ನದಿಯು ಈಗ ಯಮಪಾಶದಿಂದ ಭಯಂಕರವಾದ ವೈತರಣೀ ನದಿಯಂತೆ ಕಾಣುತ್ತಿತ್ತು. ವೃಷ್ಣಿಶ್ರೇಷ್ಠರಿಂದ ರಹಿತವಾದ, ಸಂಪತ್ತಿಲ್ಲದ, ಆನಂದವಿಲ್ಲದ, ಶಿಶಿರಕಾಲದ ಪದ್ಮಸರೋವರದಂತೆ ಕಂಗೆಟ್ಟಿರುವ ಆ ದ್ವಾರಕೆಯನ್ನು ಧೀಮಂತನಾದ ಇಂದ್ರಪುತ್ರನಾದ ಅರ್ಜುನನು ಕಂಡನು.

ತಾಂ ದೃಷ್ಟ್ವಾ ದ್ವಾರಕಾಂ ಪಾರ್ಥಸ್ತಾಶ್ಚ ಕೃಷ್ಣಸ್ಯ ಯೋಷಿತಃ ।
ಸಸ್ವನಂ ಬಾಷ್ಪಮುತ್ಸೃಜ್ಯ ನಿಪಪಾತ ಮಹೀತಲೇ ॥೧೨॥

ಹೀಗೆ ಆ ದ್ವಾರಕೆಯನ್ನೂ, ಕೃಷ್ಣಪತ್ನಿಯರನ್ನೂ ನೋಡಿದ ಅರ್ಜುನನು ಕಣ್ಣೀರು ತುಂಬಿಕೊಂಡು, ಜೋರಾದ ಶಬ್ದದಿಂದ ಅಳುತ್ತಾ ಭೂಮಿಯಲ್ಲಿ ಬಿದ್ದುಬಿಟ್ಟನು.

ಸಾತ್ರಾಜಿತೀ ಸತ್ಯಭಾಮಾ ರುಗ್ಮಿಣೀ ಚ ವಿಶಾಂಪತೇ ।
ಅಭಿಪತ್ಯ ಪ್ರರುರುದುಃ ಪರಿವಾರ್ಯ ಧನಂಜಯಮ್ ॥೧೩॥

ಸತ್ರಾಜಿತನ ಮಗಳಾದ ಸತ್ಯಭಾಮೆಯೂ, ರುಗ್ಮಿಣಿಯೂ ಅರ್ಜುನನ ಸಮೀಪಕ್ಕೆ ಬಂದು ಅಲ್ಲಿ ಕುಳಿತು ತಾವೂ ಅತ್ತರು.

ತತಸ್ತಂ ಕಾಂಚನೇ ಪೀಠೇ ಸಮುತ್ಥಾಪ್ಯೋಪವೇಶ್ಯ ಚ ।
ಅಭಿನಂದ್ಯ ಮಹಾತ್ಮಾನಂ ಪರಿವಾರ್ಯೋಪತಸ್ಥಿರೇ ॥೧೪॥

ಅನಂತರ ಅವನನ್ನು ಎಬ್ಬಿಸಿ, ಚಿನ್ನದ ಪೀಠದಲ್ಲಿ ಕುಳ್ಳಿರಿಸಿ, ಮಹಾತ್ಮನಾದ ಅವನನ್ನು ಅಭಿನಂದಿಸುತ್ತ ಎಲ್ಲ ಸ್ತ್ರೀಯರು ಅವನ ಎದುರು ಕುಳಿತರು.

ತತಃ ಸಂಸ್ತೂಯ ಗೋವಿಂದಂ ಕಥಯಿತ್ವಾ ಚ ಪಾಂಡವಃ ।
ಆಶ್ವಾಸ್ಯ ತಾಃ ಸ್ತ್ರಿಯಶ್ಚಾಪಿ ಮಾತುಲಂ ದ್ರಷ್ಟುಮಭ್ಯಗಾತ್ ॥೧೫॥

ಅನಂತರ ಅರ್ಜುನನು ಅವರೊಂದಿಗೆ ಮಾತನಾಡುತ್ತಾ, ಕೃಷ್ಣನನ್ನು ಹೊಗಳುತ್ತಾ, ಆ ಸ್ತ್ರೀಯರನ್ನು ಸಮಾಧಾನಪಡಿಸಿ, ಮಾವನನ್ನು ನೋಡಲು ಅಲ್ಲಿಂದ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮೌಸಲಪರ್ವಣಿ ಅರ್ಜುನಸ್ಯ ದ್ವಾರಕಾಗಮನಂ ನಾಮ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ವಸುದೇವನು ತನ್ನ ಮನೆಗೆ ಬಂದ ಅರ್ಜುನನಿಗೆ ಯಾದವರ ಕ್ಷಯವನ್ನೂ, ಅದಕ್ಕೆ ಕಾರಣವನ್ನೂ ತಿಳಿಸುತ್ತಾ, ಕೃಷ್ಣಾದಿಗಳನ್ನು ಸ್ಮರಿಸಿಕೊಂಡು ಪರಿತಪಿಸುವುದು. ಹಾಗೆಯೇ ಅರ್ಜುನನಿಗೆ ಕೃಷ್ಣನ ಸೂಚನೆಯನ್ನು ತಿಳಿಸಿ ರಾಜ್ಯ, ಸ್ತ್ರೀ, ಧನಾದಿಗಳನ್ನು ಅರ್ಪಿಸಿ, ತಾನು ಪ್ರಾಣತ್ಯಾಗ ಮಾಡುವೆನೆಂದು ತಿಳಿಸುವುದು.

ವೈಶಂಪಾಯನಃ

ತಂ ಶಯಾನಂ ಮಹಾತ್ಮಾನಂ ವೀರಮಾನಕದುಂದುಭಿಮ್ ।
ಪುತ್ರಶೋಕೇನ ಸಂತಪ್ತಂ ದದರ್ಶ ಕುರುಪುಂಗವಃ ॥೧॥

ವೈಶಂಪಾಯನ– ಮಾವನನ್ನು ನೋಡಲು ಬಂದ ಕುರುಪುಂಗವನಾದ ಅರ್ಜುನನು ಮಹಾತ್ಮನಾದ, ವೀರನಾದ, ಪುತ್ರಶೋಕದಿಂದ ಬಳಲಿದ, ಮಲಗಿಕೊಂಡಿರುವ ವಸುದೇವನನ್ನು ಕಂಡನು.

ತಸ್ಯಾಶ್ರುಪರಿಪೂರ್ಣಾಕ್ಷೋ ವ್ಯೂಢೋರಸ್ಕೋ ಮಹಾಭುಜಃ ।
ಆರ್ತಸ್ಯಾರ್ತತರಃ ಪಾರ್ಥಃ ಪಾದೌ ಜಗ್ರಾಹ ಭಾರತ ॥೨॥

ಹೇ ಭಾರತನೇ, ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳ, ಅಗಲವಾದ ಎದೆಯುಳ್ಳ, ಪರಿಪುಷ್ಟವಾದ ಭುಜವುಳ್ಳ ಆ ಪಾರ್ಥನು ಅತ್ಯಂತ ದುಃಖದಿಂದ ಪೀಡಿತನಾಗಿ ಆ ವಸುದೇವನ ಪಾದಗಳನ್ನು ಹಿಡಿದನು.

ತಸ್ಯ ಮೂರ್ಧಾನಮಾಘ್ರಾತುಮಿಯೇಷಾನಕದುಂದುಭಿಃ ।
ಸ್ಪಸ್ರೀಯಸ್ಯ ಮಹಾಬಾಹುರ್ನ ಶಶಾಕ ವಚೋ ಹರೇಃ ॥೩॥

ಆಗ ವಸುದೇವನು ತನ್ನ ಸೋದರಳಿಯನಾದ ಆ ಅರ್ಜುನನ ನೆತ್ತಿಯನ್ನು ಆಘ್ರಾಣಿಸಲು ಬಯಸಿ ಮೇಲೆದ್ದನು. ಆದರೆ ಅರ್ಜುನನು ಬರುವನೆಂದು ಮೊದಲೇ ಹೇಳಿದ ಶ್ರೀಕೃಷ್ಣನ ಮಾತುಗಳನ್ನು ಅವನ ಬಳಿ ಹೇಳಲು ಅಸಮರ್ಥನಾದನು.

ಸಮಾಲಿಂಗ್ಯಾರ್ಜುನಂ ವೃದ್ಧಃ ಸ ಭುಜಾಭ್ಯಾಂ ಮಹಾಭುಜಃ ।
ರುರೋದಾಥ ಸ್ಮರನ್ ಶೌರಿಂ ವಿಲಲಾಪ ಸುವಿಹ್ವಲಃ ॥೪॥

ಭ್ರಾತೄನ್ ಪುತ್ರಾಂಶ್ಚ ಪೌತ್ರಾಂಶ್ಚ ದೌಹಿತ್ರಾನ್ ಸ ಸಖೀನಪಿ ॥೫॥

ವೃದ್ಧನಾದ, ಮಹಾಭುಜನಾದ ಆ ವಸುದೇವನು ಅರ್ಜುನನನ್ನು ಬಾಹುಗಳಿಂದ ಆಲಿಂಗಿಸಿ, ಕೃಷ್ಣನನ್ನು ಸ್ಮರಿಸುತ್ತಾ ಅತ್ತುಬಿಟ್ಟನು. ಜೊತೆಗೆ ಸಹೋದರರನ್ನೂ, ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಮಗಳ ಮಕ್ಕಳನ್ನೂ, ಸ್ನೇಹಿತರನ್ನೂ ನೆನಪಿಸಿಕೊಳ್ಳುತ್ತಾ, ಬಹಳ ವ್ಯಾಕುಲಗೊಂಡವನಾಗಿ ಅರ್ಜುನನೊಂದಿಗೆ ಬಡಬಡಿಸಿದನು.

ವಸುದೇವಃ

ಯೈರ್ಜಿತಾ ಭೂಮಿಪಾಲಾಶ್ಚ ದೈತ್ಯಾಶ್ಚ ಶತಶೋऽರ್ಜುನ ।
ತಾನ್ ಸರ್ವಾನ್ನೇಹ ಪಶ್ಯಾಮಿ ಜೀವಾಮ್ಯರ್ಜುನ ದುರ್ಮರಃ ॥೬॥

ವಸುದೇವ– ಹೇ ಅರ್ಜುನನೇ, ಯಾವ ವೃಷ್ಣಿಗಳಿಂದ ಬಹುಮಂದಿ ರಾಜರೂ, ನೂರಾರು ಮಂದಿ ದೈತ್ಯರೂ ಸೋತುಹೋದರೋ ಆ ಯಾರನ್ನೂ ನಾನೀಗ ನೋಡುತ್ತಿಲ್ಲ. ಆದರೆ ಅರ್ಜುನನೇ ಮರಣವಿಲ್ಲದೆ ನಾನು ಮಾತ್ರ ಬದುಕಿರುವೆನು.

ಯೌ ತಾವರ್ಜುನಶಿಷ್ಯೌ ತೇ ಪ್ರಿಯೌ ಬಹುಮತೌ ಸದಾ ।
ತಯೋರಪನಯಾತ್ ಪಾರ್ಥ ವೃಷ್ಣಯೋ ನಿಧನಂ ಗತಾಃ ॥೭॥

ಯಾವ ಇಬ್ಬರು ನಿನಗೆ ಅತ್ಯಂತ ಪ್ರಿಯರಾಗಿದ್ದು, ಅರ್ಜುನನ ಶಿಷ್ಯರೆಂದು ಬಹಳ ಮಂದಿ ಹೊಗಳುತ್ತಿದ್ದರೋ ಹೇ ಪಾರ್ಥನೇ, ಆ ಇಬ್ಬರ ದುಡುಕುತನದಿಂದಲೇ ವೃಷ್ಣಿಗಳು ನಿಧನರಾದರು.

ಯೌ ತೌ ವೃಷ್ಣಿಪ್ರವೀರಾಣಾಂ ದ್ವಾವೇವಾತಿರಥೌ ಮತೌ ।
ಪ್ರದ್ಯುಮ್ನೋ ಯುಯುಧಾನಶ್ಚ ಕಥಾಂ ಕಥಯಸೇ ಚ ಯೌ ॥೮॥

ತೌ ಸದಾ ಕುರುಶಾರ್ದೂಲ ಕೃಷ್ಣಸ್ಯ ಪ್ರಿಯಭಾಜನೌ ।
ತಾವುಭೌ ವೃಷ್ಣಿನಾಶಸ್ಯ ಮುಖಮಾಸ್ತಾಂ ಧನಂಜಯ ॥೯॥

ಯಾವ ಇಬ್ಬರು ವೃಷ್ಣಿವೀರರ ಮಧ್ಯೆ ಇಬ್ಬರೇ ಅತಿರಥರೆಂದು ಹೊಗಳಿಕೆಗೆ ಪಾತ್ರರಾಗಿದ್ದರೋ ಯಾವ ಯಾರಿಬ್ಬರ ಬಗ್ಗೆ ಇವರು ನನ್ನ ಶಿಷ್ಯರೆಂದು ನೀನು ಹೊಗಳುತ್ತಿದ್ದೆಯೋ ಆ ಪ್ರದ್ಯುಮ್ನ ಮತ್ತು ಯುಯುಧಾನರು ಕೃಷ್ಣನಿಗೆ ಅತ್ಯಂತ ಪ್ರೀತಿಪಾತ್ರರಾಗಿದ್ದರೋ, ಹೇ ಕುರುಶ್ರೇಷ್ಠನೇ, ಅವರಿಬ್ಬರೇ ಯದುಗಳ ನಾಶಕ್ಕೆ ಪ್ರಮುಖ ಕಾರಣರಾದರು.

ನ ತು ಗರ್ಹಾಮಿ ಶೈನೇಯಂ ಹಾರ್ದಿಕ್ಯಂ ಚಾಹಮರ್ಜುನ ।
ಅಕ್ರೂರಂ ರೌಗ್ಮಿಣೇಯಂ ಚ ಶಾಪೋ ಹ್ಯೇವಾತ್ರ ಕಾರಣಮ್ ॥೧೦॥

ಹೇ ಅರ್ಜುನನೇ, ನಾನು ಶೈನೇಯನಾದ ಸಾತ್ಯಕಿಯನ್ನಾಗಲೀ, ಹಾರ್ದಿಕ್ಯನಾದ ಕೃತವರ್ಮನನ್ನಾಗಲೀ, ಅಕ್ರೂರನನ್ನಾಗಲೀ, ರುಗ್ಮಿಣೀಪುತ್ರನಾದ ಪ್ರದ್ಯುಮ್ನನನ್ನಾಗಲೀ ತೆಗಳುತ್ತಿಲ್ಲ. ಇಲ್ಲಿ ಋಷಿಗಳ ಶಾಪವೇ ಈ ಅನರ್ಥಗಳಿಗೆ ಕಾರಣವಾಗಿದೆ.

ಕೇಶಿನಂ ಕೇಶವಃ ಕಂಸಂ ವಿಕ್ರಮ್ಯ ಹತವಾನ್ ಪ್ರಭುಃ ।
ವಿದೇಹಮಕರೋತ್ ಪಾರ್ಥ ಚೈದ್ಯಂ ಚ ಬಲಗರ್ವಿತಮ್ ॥೧೧॥

ಸಮರ್ಥನಾದ ಕೇಶವನು ಕೇಶಿಯನ್ನೂ, ಕಂಸನನ್ನೂ ಅವರ ಜೊತೆ ಯುದ್ಧ ಮಾಡಿ ಸಂಹರಿಸಿದನು. ಹಾಗೆಯೇ ಹೇ ಪಾರ್ಥನೇ, ಬಲಗರ್ವಿತನಾದ ಶಿಶುಪಾಲನನ್ನೂ ದೇಹದಿಂದ ಬೇರ್ಪಡಿಸಿದನು.

ನೈಷಾದಿಮೇಕಲವ್ಯಂ ಚ ಚಕ್ರೇ ಕಾಲಿಂಗಮಾಗಧಾನ್ ।
ಗಾಂಧಾರಾನ್ ಕಾಶಿರಾಜಂ ಚ ಮರುಭೂಮೌ ಚ ಪಾರ್ಥಿವಾನ್ ॥

ಪ್ರಾಚ್ಯಾಂಶ್ಚ ದಾಕ್ಷಿಣಾತ್ಯಾಂಶ್ಚ ಪಾರ್ವತೀಯಾಂಸ್ತಥಾ ನೃಪಾನ್ ।
ಸೋಽಭ್ಯುಪೇಕ್ಷಿತವಾನೇವಮನಯಾನ್ಮಧುಸೂದನಃ ॥೧೩॥

ನಿಷಾದರಾಜನಾದ ಏಕಲವ್ಯನನ್ನೂ, ಕಾಳಿಂಗ, ಮಾಗಧ ರಾಜರನ್ನೂ, ಗಾಂಧಾರ ರಾಜರನ್ನೂ, ಕಾಶಿರಾಜನನ್ನೂ, ಮರುಭೂಮಿಯಲ್ಲಿರುವ ರಾಜರನ್ನೂ, ಪೂರ್ವದೇಶದ ರಾಜರನ್ನೂ, ದಾಕ್ಷಿಣಾತ್ಯರನ್ನೂ, ಪರ್ವತ ದೇಶಗಳಲ್ಲಿರುವ ರಾಜರನ್ನೂ ಗೆದ್ದ ಈ ಮಧುಸೂದನನು ಯಾದವರ ವಿಷಯದಲ್ಲಿ ಮಾತ್ರ ಈ ಅನೀತಿಯನ್ನು ಕಂಡೂ ಏನೂ ತಿಳಿಯದಂತೆ ಉಪೇಕ್ಷೆ ಮಾಡಿದನು.

ತ್ವಂ ಹಿ ತಂ ನಾರದಶ್ಚೈವ ಮುನಯಶ್ಚ ಸನಾತನಮ್ ।
ಗೋವಿಂದಮನಘಂ ದೇವಮಭಿಜಾನೀಧ್ವಮಚ್ಯುತಮ್ ॥೧೪॥

ನೀನು, ನಾರದರು, ಬೇರೆಲ್ಲ ಮುನಿಗಳೂ ಕೂಡ ಆ ಕೃಷ್ಣನನ್ನು ಸನಾತನನಾದ, ಮೋಕ್ಷದಾಯಕನಾದ, ನಿರ್ದುಷ್ಟನಾದ, ನಾಶವಿಲ್ಲದ ದೇವನೆಂದು ತಿಳಿದಿರುವಿರಿ.

ಪ್ರತ್ಯಪಶ್ಯಚ್ಚ ಸ ವಿಭುರ್ಜ್ಞಾತಿಕ್ಷಯಮಧೋಕ್ಷಜಃ ।
ಸಮುಪೇಕ್ಷಿತವಾನ್ನಿತ್ಯಂ ಸ್ವಯಂ ಸ ಮಮ ಪುತ್ರಕಃ ॥೧೫॥

ಅಧೋಕ್ಷಜನಾದ, ಸಮರ್ಥನಾದ ಅವನು ತನ್ನ ಬಂಧುಗಳ ನಾಶವನ್ನು ತಿಳಿದೇ ಇದ್ದಾನೆ. ಆದರೂ ನನ್ನ ಮಗನಾದ ಅವನು ಸ್ವತಃ ಅದನ್ನು ಉಪೇಕ್ಷೆ ಮಾಡಿದನು.

ಗಾಂಧಾರ್ಯಾ ವಚನಂ ಯತ್ತದೃಷೀಣಾಂ ಚ ಪರಂತಪ ।
ತನ್ನೂನಮನ್ಯಥಾ ಕರ್ತುಂ ನೈಚ್ಛತ್ಸ ಜಗತಃ ಪ್ರಭುಃ ॥೧೬॥

ಹೇ ಪರಂತಪನೇ, ಗಾಂಧಾರಿಯ ಮಾತುಗಳೇನಿವೆಯೋ ಹಾಗೆಯೇ ಋಷಿಗಳ ಮಾತೇನಿದೆಯೋ ಆ ಮಾತುಗಳನ್ನು ಜಗತ್ತಿಗೆ ಪ್ರಭುವಾಗಿದ್ದರೂ ಅವನು ನಿಶ್ಚಯವಾಗಿಯೂ ವ್ಯರ್ಥಗೊಳಿಸಲು ಬಯಸಲಿಲ್ಲ.

ಪ್ರತ್ಯಕ್ಷಂ ಭವತಶ್ಚಾಪಿ ತವ ಪೌತ್ರಃ ಪರಂತಪ ।
ಅಶ್ವತ್ಥಾಮ್ನಾ ಹತಶ್ಚಾಪಿ ಜೀವಿತಸ್ತಸ್ಯ ತೇಜಸಾ ॥೧೭॥

ಇಮಾಂಸ್ತು ನೈಚ್ಛತ್ ಸ್ವಾನ್ ಜ್ಞಾತೀನ್ ರಕ್ಷಿತುಂ ಚ ಸಖಾ ತವ ॥೧೮॥

ಹೇ ಪರಂತಪನೇ, ನಿನ್ನ ಮೊಮ್ಮಗನು ಅಶ್ವತ್ಥಾಮನಿಂದ ಹತನಾದಾಗ ಆ ಕೃಷ್ಣನ ತೇಜಸ್ಸಿನಿಂದಲೇ ಬದುಕಿದನು. ಇದು ನಿನಗೂ ಪ್ರತ್ಯಕ್ಷವಾಗಿ ತಿಳಿದೇ ಇದೆ. ಆದರೂ ಆ ನಿನ್ನ ಮಿತ್ರನು ಈ ತನ್ನ ಬಂಧುಗಳನ್ನು ರಕ್ಷಿಸಲು ಇಚ್ಛಿಸಲಿಲ್ಲ.

ತತಃ ಪುತ್ರಾಂಶ್ಚ ಪೌತ್ರಾಂಶ್ಚ ಭ್ರಾತೄನಥ ಸಖೀಂಸ್ತಥಾ ।
ಶಯಾನಾನ್ ನಿಹತಾನ್ ದೃಷ್ಟ್ವಾ ಕೃಷ್ಣೋ ಮಾಮಬ್ರವೀದಿದಮ್॥೧೯॥

ಅಲ್ಲದೇ ಮಕ್ಕಳು, ಮೊಮ್ಮಕ್ಕಳು, ಸಹೋದರರು, ಮಿತ್ರರು ಇವರೆಲ್ಲರೂ ಪರಸ್ಪರ ಹೊಡೆದುಕೊಂಡು ಬಿದ್ದುದನ್ನು ನೋಡಿ ಕೃಷ್ಣನು ನನ್ನ ಬಳಿ ಹೀಗೆಂದನು.

ಸಂಪ್ರಾಪ್ತೋಽದ್ಯಾಯಮಸ್ಯಾಂತಃ ಕುಲಸ್ಯ ಭರತರ್ಷಭ ।
ಆಗಮಿಷ್ಯತಿ ಬೀಭತ್ಸುರಿಮಾಂ ದ್ವಾರವತೀಂ ಪುರೀಮ್ ॥೨೦॥

ಆಖ್ಯೇಯಂ ತಸ್ಯ ಯದ್ ವೃತ್ತಂ ವೃಷ್ಣೀನಾಂ ವೈಶಸಂ ಮಹತ್ ॥೨೧॥

ಹೇ ಭರತರ್ಷಭನೇ, ಇಂದು ಈ ನಮ್ಮ ಕುಲಕ್ಕೆ ಕೊನೆಗಾಲ ಬಂದಿದೆ. ಈ ದ್ವಾರಾವತೀ ಪಟ್ಟಣಕ್ಕೆ ಅರ್ಜುನನು ಬರಲಿದ್ದಾನೆ. ಅವನಿಗೆ ಈ ಯಾದವರ ಮಧ್ಯದಲ್ಲಿ ಏನು ಹಿಂಸೆ ನಡೆದಿದೆಯೋ ಅದೆಲ್ಲವನ್ನೂ ತಿಳಿಸಬೇಕು.

ಸ ತು ಶ್ರುತ್ವಾ ಮಹಾತೇಜಾ ಯದೂನಾಂ ನಿಧನಂ ಪ್ರಭೋ ।
ಆಗಂತಾ ಕ್ಷಿಪ್ರಮೇವೇಹ ನ ಮೇಽತ್ರಾಸ್ತಿ ವಿಚಾರಣಾ ॥೨೨॥

ಹೇ ಪ್ರಭುವೇ, ಯದುಗಳ ಈ ನಿಧನವನ್ನು ತಿಳಿದ, ಮಹಾತೇಜಸ್ವಿಯಾದ ಅರ್ಜುನನು ಬಹುಬೇಗನೆ ಇಲ್ಲಿಗೆ ಬಂದೇ ಬರುವನು. ಇದರಲ್ಲಿ ಯಾವುದೇ ಸಂಶಯವಿಲ್ಲ.

ಯೋಽಹಂ ತಮರ್ಜುನಂ ವಿದ್ಧಿ ಯೋಽರ್ಜುನಃ ಸೋಹಮೇವ ತು ।
ಯದ್ ಬ್ರೂಯಾತ್ ತತ್ತಥಾ ಕಾರ್ಯಮಿತಿ ಬುದ್ಧ್ಯಸ್ವ ಭಾರತ ॥೨೩॥

ಈಗ ನಾನೇನು ನಿಮ್ಮೆದುರು ಇರುವೆನೋ ನನ್ನನ್ನು ಅರ್ಜುನನೆಂದೇ ತಿಳಿಯಿರಿ. ಮುಂದೆ ಯಾವ ಅರ್ಜುನನು ಬರುವನೋ ಅವನನ್ನು ನಾನೆಂದೇ ತಿಳಿಯಿರಿ. ಹೇ ಭಾರತನೇ, ಅವನು ಏನು ಹೇಳುವನೋ ಅದನ್ನು ಹಾಗೆಯೇ ನಡೆಸಬೇಕೆಂದು ತಿಳಿಯಿರಿ.

ಸ ಸ್ತ್ರೀಷು ಪ್ರಾಪ್ತಕಾಲಾಸು ಪಾಂಡವೋ ಬಾಲಕೇಷು ಚ ।
ಪ್ರತಿಪತ್ಸ್ಯತಿ ಬೀಭತ್ಸುರ್ಭವತಶ್ಚೋರ್ಧ್ವದೇಹಿಕಮ್ ॥೨೪॥

ಆ ಪಾಂಡವನು ಸ್ತ್ರೀಯರು, ಬಾಲಕರು ಹಾಗೂ ತಮಗೂ ಕಾಲ ಬಂದಾಗ ಔರ್ಧ್ವದೇಹಿಕ ಕ್ರಿಯೆಗಳನ್ನು ಯಥಾವತ್ತಾಗಿ ನಡೆಸುತ್ತಾನೆ.

ಇಮಾಂ ಚ ನಗರೀಂ ಸದ್ಯಃ ಪ್ರತಿಯಾತೇ ಧನಂಜಯೇ ।
ಪ್ರಾಕಾರಾಟ್ಟಾಲಕೋಪೇತಾಂ ಸಮುದ್ರಃ ಪ್ಲಾವಯಿಷ್ಯತಿ ॥೨೫॥

ಈ ಪಟ್ಟಣದಿಂದ ಅರ್ಜುನನು ಹೊರಹೊರಟಾಗ ಕೋಟೆ, ಉಪ್ಪರಿಗೆಗಳಿಂದ ಕೂಡಿದ ಈ ನಗರವನ್ನು ಕೂಡಲೇ ಸಮುದ್ರವು ಮುಳುಗಿಸಿಬಿಡುತ್ತದೆ.

ಅಹಂ ದೇಶೇ ತು ಕಸ್ಮಿಂಶ್ಚಿತ್ ಪುಣ್ಯೇ ನಿಯಮಮಾಸ್ಥಿತಃ ।
ಕಾಲಂ ಕಾಂಕ್ಷೇ ಸದ್ಯ ಏವ ರಾಮೇಣ ಸಹಿತೋ ವನೇ ॥೨೬॥

ನಾನಾದರೂ ಬಲರಾಮನಿಂದ ಸಹಿತನಾಗಿ ಕಾಡಿನಲ್ಲಿ ಯಾವುದಾದರೊಂದು ಮಂಗಳಮಯವಾದ ಪ್ರದೇಶದಲ್ಲಿ ನಿಯಮನಿಷ್ಠನಾಗಿ ಕಾಲವನ್ನು ನಿರೀಕ್ಷಿಸುತ್ತೇನೆ.

ಏವಮುಕ್ತ್ವಾ ಹೃಷೀಕೇಶೋ ಮಾಮಚಿಂತ್ಯಪರಾಕ್ರಮಃ ।
ಹಿತ್ವಾ ಮಾಂ ಬಾಲಕೈಃ ಸಾರ್ಧಂ ದಿಶಂ ಕಾಮಪ್ಯಗಾತ್ ಪ್ರಭುಃ ॥೨೭॥

ಹೀಗೆ ಅಚಿಂತ್ಯಪರಾಕ್ರಮನಾದ ಹೃಷೀಕೇಶನು ನನ್ನನ್ನುದ್ದೇಶಿಸಿ ಹೇಳಿ, ಮಕ್ಕಳೊಂದಿಗೆ ನನ್ನನ್ನು ಇರಿಸಿ, ನಮ್ಮನ್ನೆಲ್ಲ ಬಿಟ್ಟು ಯಾವುದೋ ದಿಕ್ಕಿಗೆ ಹೊರಟುಹೋದನು.

ಸೋಹಂ ತೌ ಚ ಮಹಾತ್ಮಾನೌ ಚಿಂತಯನ್ ರಾಮಕೇಶವೌ ।
ಘೋರಂ ಜ್ಞಾತಿವಧಂ ಚೈವ ನ ಭುಂಜೇ ಶೋಕಕರ್ಶಿತಃ ॥೨೮॥

ನಾನಾದರೂ ಮಹಾತ್ಮರಾದ ಆ ರಾಮ ಮತ್ತು ಕೇಶವರನ್ನು ಚಿಂತಿಸುತ್ತಾ ಹಾಗೂ ಘೋರವಾದ ಬಂಧುಗಳ ನಾಶವನ್ನೂ ಚಿಂತಿಸುತ್ತಾ, ಶೋಕದಿಂದ ಕೃಶನಾಗಿ ಆಹಾರವನ್ನೂ ಸ್ವೀಕರಿಸುತ್ತಿಲ್ಲ.

ನ ಮೋಕ್ಷ್ಯೇ ನ ಚ ಜೀವಿಷ್ಯೇ ದಿಷ್ಟ್ಯಾ ಪ್ರಾಪ್ತೋಸಿ ಪಾಂಡವ ।
ಯದುಕ್ತಂ ಪಾರ್ಥ ಕೃಷ್ಣೇನ ತತ್ಸರ್ವಮಖಿಲಂ ಕುರು ॥೨೯॥

ಹೇ ಪಾಂಡವನೇ, ನಾನಂತೂ ಇವರನ್ನು ಬಿಡಲೂ ಆಗದೆ, ಬದುಕಲೂ ಆಗದೆ ಕಷ್ಟಪಡುತ್ತಿದ್ದೇನೆ. ಅದೃಷ್ಟವಶಾತ್ ನೀನು ಬಂದಿರುವೆ. ಹೇ ಪಾರ್ಥನೇ, ಕೃಷ್ಣನು ಏನು ಹೇಳಿದ್ದಾನೋ ಅದೆಲ್ಲವನ್ನೂ ಸರಿಯಾಗಿ ನಡೆಸು.

ಏತತ್ತೇ ಪಾರ್ಥ ರಾಜ್ಯಂ ಚ ಸ್ತ್ರಿಯೋ ರತ್ನಾನಿ ಚೈವ ಹಿ ।
ಇಷ್ಟಾನ್ ಪ್ರಾಣಾನಹಂ ಹೀಮಾಂಸ್ತ್ಯಕ್ಷ್ಯಾಮಿ ರಿಪುಸೂದನ ॥೩೦॥

ಹೇ ಪಾರ್ಥನೇ, ಈ ರಾಜ್ಯವು, ಈ ಸ್ತ್ರೀಯರು, ಅಲ್ಲದೆ ಈ ರತ್ನಗಳು ಎಲ್ಲವೂ ನಿನ್ನದೆ. ಹೇ ಶತ್ರುನಾಶಕನೇ, ನನಗೆ ಪ್ರೀತಿಪಾತ್ರರಾದ ಇವರನ್ನೂ, ನನ್ನ ಪ್ರಾಣಗಳನ್ನೂ ನಾನು ಬಿಡಲಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಮೌಸಲಪರ್ವಣಿ ಅರ್ಜುನಂ ಪ್ರತಿ ವಸುದೇವವಾಕ್ಯಂ ನಾಮ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಅರ್ಜುನನು ವಸುದೇವನನ್ನು ಸಮಾಧಾನಪಡಿಸಿ, ಎಲ್ಲ ಪೌರರಿಗೂ ಅತಿಶೀಘ್ರದಲ್ಲೇ ದ್ವಾರಕೆಯನ್ನು ಸಮುದ್ರವು ಮುಳುಗಿಸುವುದೆಂದು ನಿವೇದಿಸಿ ಎಲ್ಲರೂ ಇಂದ್ರಪ್ರಸ್ಥಕ್ಕೆ ಹೊರಡಬೇಕೆಂದು ಸೂಚಿಸುವುದು. ಮಾರನೆಯ ದಿನ ಶೋಕದಿಂದ ಶರೀರತ್ಯಾಗವನ್ನು ಮಾಡಿದ ವಸುದೇವನಿಗೆ ಪತ್ನಿಯರೊಂದಿಗೆ ಸಂಸ್ಕಾರವನ್ನು ನಡೆಸಿ, ರಾಮ-ಕೃಷ್ಣರ ಶರೀರಕ್ಕೂ ದಹನಸಂಸ್ಕಾರವನ್ನು ನಡೆಸುವುದು. ಅನಂತರ ವಜ್ರ ಹಾಗೂ ಅರ್ಜುನರ ಜವಾಬ್ದಾರಿಯೊಂದಿಗೆ ಎಲ್ಲ ಪೌರಜನರೂ ಮುಂದೆ ಮುಂದೆ ನಡೆದಂತೆ ಸಮುದ್ರವು ಹಿಂಭಾಗದಲ್ಲಿ ದ್ವಾರಕೆಯನ್ನು ಮುಳುಗಿಸುತ್ತಾ ಬರುವುದು. ಅರ್ಜುನನು ಮಾರ್ಗಮಧ್ಯದಲ್ಲಿ ದಸ್ಯುಗಳಿಂದ ಪರಾಜಿತನಾಗಿ, ಅವರು ಅಪಹರಿಸದೆ ಬಿಟ್ಟು ಉಳಿದ ಯಾದವ ಸ್ತ್ರೀಯರೊಂದಿಗೆ ತನ್ನ ದೇಶಕ್ಕೆ ಬಂದು, ಯುಧಿಷ್ಠಿರನ ಆಜ್ಞೆಯಂತೆ ವಜ್ರನನ್ನು ಇಂದ್ರಪ್ರಸ್ಥರಾಜ್ಯದಲ್ಲಿ ಅಭಿಷೇಕ ಮಾಡುವುದು. ಅನಂತರ ಸಾತ್ಯಕಿಯ ಮಗನೇ ಮೊದಲಾದವರನ್ನು ಅಲ್ಲಲ್ಲಿ ರಾಜ್ಯದಲ್ಲಿ ಅಭಿಷೇಕ ಮಾಡುವುದು. ರುಗ್ಮಿಣಿಯೇ ಮೊದಲಾದ ಕೆಲವು ಸ್ತ್ರೀಯರು ಅಗ್ನಿಯನ್ನು ಪ್ರವೇಶಿಸುವುದು. ಸತ್ಯಭಾಮೆಯೇ ಮೊದಲಾದ ಕೆಲವರು ತಪಸ್ಸಿಗಾಗಿ ಕಾಡಿಗೆ ತೆರಳುವುದು.

ವೈಶಂಪಾಯನಃ

ಏವಮುಕ್ತಃ ಸ ಬೀಭತ್ಸುರ್ಮಾತುಲೇನ ಪರಂತಪ ।
ದುರ್ಮನಾ ದೀನವದನೋ ವಸುದೇವಮುವಾಚ ಹ ॥೧॥

ವೈಶಂಪಾಯನ– ಹೇ ಪರಂತಪನೇ, ಮಾವನು ಹೀಗೆ ಹೇಳಿದಾಗ ಅರ್ಜುನನು ಬೇಸರಪಟ್ಟವನಾಗಿ, ಕಳೆಗುಂದಿದ ಮುಖದಿಂದ ಕೂಡಿಕೊಂಡು ವಸುದೇವನಿಗೆ ಹೀಗೆಂದನು.

ಅರ್ಜುನಃ

ನಾಹಂ ವೃಷ್ಣಿಪ್ರವೀರೇಣ ಬಂಧುಭಿಶ್ಚೈವ ಮಾತುಲ ।
ವಿಹೀನಾಂ ಪೃಥಿವೀಂ ದ್ರಷ್ಟುಂ ಶಕ್ತಶ್ಚಿರಮಿಹ ಪ್ರಭೋ ॥೨॥

ಅರ್ಜುನ– ಹೇ ಪ್ರಭುವೇ, ಮಾವನೇ, ಯದುಪ್ರಮುಖನಾದ ಕೃಷ್ಣನಿಂದ ಹಾಗೂ ಬಂಧುಗಳಿಂದ ರಹಿತವಾದ ಈ ಭೂಮಿಯನ್ನು ಬಹಳ ಕಾಲ ನೋಡಲು ನಾನು ಶಕ್ತನಲ್ಲ.

ರಾಜಾ ಚ ಭೀಮಸೇನಶ್ಚ ಸಹದೇವಶ್ಚ ಪಾಂಡವಃ ।
ನಕುಲೋ ಯಾಜ್ಞಸೇನೀ ಚ ಷಡೇಕಮನಸೋ ವಯಮ್ ॥೩॥

ರಾಜನಾದ ಯುಧಿಷ್ಠಿರನೂ, ಭೀಮಸೇನನೂ, ಪಾಂಡುಪುತ್ರರಾದ ನಕುಲ-ಸಹದೇವರೂ ಹಾಗೂ ಯಾಜ್ಞಸೇನಿಯಾದ ದ್ರೌಪದೀ ನಾವು ಈ ಆರುಮಂದಿಯೂ ಒಂದೇ ಮನಸ್ಸಿನವರಾಗಿದ್ದೇವೆ.

ರಾಜ್ಞಃ ಸಂಕ್ರಮಣೇ ಚಾಪಿ ಕಾಲೋಯಂ ನಿತ್ಯಮೇವ ಹಿ ।
ತಮಿಮಂ ವಿದ್ಧಿ ಸಂಪ್ರಾಪ್ತಂ ಕಾಲಂ ಕಾಲವಿದಾಂವರ ॥೪॥

ಈ ಕಾಲಪ್ರವಾಹದಲ್ಲಿ ರಾಜನು ಭೂಮಿಯನ್ನು ಬಿಟ್ಟು ಹೊರಡಲು ನಿಶ್ಚಯವಾಗಿಯೂ ಒಂದು ಕಾಲ ಇದ್ದೇ ಇದೆ. ಹೇ ಕಾಲವೇತ್ತರಲ್ಲಿ ಶ್ರೇಷ್ಠನಾದ ವಸುದೇವನೇ! ಅಂತಹ ಕಾಲವು ಈಗ ಸಮೀಪ ಬಂದಿದೆ ಎಂದು ತಿಳಿ.

ಸರ್ವಥಾ ವೃಷ್ಣಿದಾರಾಂಸ್ತು ಬಾಲಂ ವೃದ್ಧಂ ತಥೈವ ಚ ।
ನಯಿಷ್ಯೇ ಪರಿಗೃಹ್ಯಾಹಮಿಂದ್ರಪ್ರಸ್ಥಮರಿಂದಮ ॥೫॥

ಹೇ ಶತ್ರುಮರ್ದನನೇ, ನಿಶ್ಚಯವಾಗಿಯೂ ಯದುಸ್ತ್ರೀಯರನ್ನೂ ಬಾಲರನ್ನೂ ಮತ್ತು ವೃದ್ಧರನ್ನೂ ಒಟ್ಟುಸೇರಿಸಿಕೊಂಡು ಇಂದ್ರಪ್ರಸ್ಥಕ್ಕೆ ನಾನು ಹೊರಡಲಿದ್ದೇನೆ.

ಇತ್ಯುಕ್ತ್ವಾ ದಾರುಕಮಿದಂ ವಾಕ್ಯಮಾಹ ಧನಂಜಯಃ ।
ಅಮಾತ್ಯಾನ್ ವೃಷ್ಣಿವೀರಾಣಾಂ ದ್ರಷ್ಟುಮಿಚ್ಛಾಮಿ ಮಾಚಿರಮ್ ॥೬॥

ಹೀಗೆ ಹೇಳಿ ಅರ್ಜುನನು ದಾರುಕನನ್ನುಕುರಿತು, ಯಾದವವೀರರ ಮಂತ್ರಿಗಳನ್ನು ನಾನು ತಡಮಾಡದೆ ನೋಡಲಿಚ್ಛಿಸುತ್ತಿದ್ದೇನೆ ಎಂದನು.

ಇತ್ಯೇವಮುಕ್ತ್ವಾ ವಚನಂ ಸುಧರ್ಮಾಂ ಯಾದವೀಂ ಸಭಾಮ್ ।
ಪ್ರವಿವೇಶಾರ್ಜುನಃ ಶೂರಃ ಶೋಚಮಾನೋ ಮಹಾಭುಜಃ ॥೭॥

ಮಹಾಭುಜನಾದ, ಶೂರನಾದ ಅರ್ಜುನನು ಈ ಮಾತನ್ನು ಹೇಳಿ, ಯಾದವರ ಸಭೆಯಾದ ಸುಧರ್ಮವನ್ನು ದುಃಖಿಸುತ್ತಲೇ ಪ್ರವೇಶಿಸಿದನು.

ತಮಾಸನಗತಂ ತತ್ರ ಸರ್ವಾಃ ಪ್ರಕೃತಯಸ್ತಥಾ ।
ಬ್ರಾಹ್ಮಣಾ ನಾಗರಾಸ್ತತ್ರ ಪರಿವಾಯ್ರ್ಯುಪತಸ್ಥಿರೇ ॥೮॥

ಅವನು ಸಭೆಯಲ್ಲಿ ಆಸನದಲ್ಲಿ ಕುಳಿತ ನಂತರ ಅಲ್ಲಿರುವ ಎಲ್ಲ ಮಂತ್ರಿಗಳೂ ಹಾಗೆಯೇ ಬ್ರಾಹ್ಮಣರು, ನಗರವಾಸಿಗಳೂ ಅವನನ್ನು ಸುತ್ತುವರಿದು ನಿಂತರು.

ತಾನ್ ದೀನಮನಸಃ ಸರ್ವಾನ್ ವಿಮೂಢಾನ್ ಗತಚೇತಸಃ ।
ಉವಾಚೇದಂ ವಚಃ ಕಾಲೇ ಪಾರ್ಥೋ ದೀನತರಸ್ತಥಾ ॥೯॥

ವ್ಯಾಕುಲಚಿತ್ತರಾಗಿ ಮೋಹಗೊಂಡು, ಏನು ಮಾಡಬೇಕೆಂದು ತಿಳಿಯದ ಆ ಎಲ್ಲರನ್ನೂ ಉದ್ದೇಶಿಸಿ, ಅತ್ಯಂತ ದೀನನಾದ ಪಾರ್ಥನು ಯೋಗ್ಯಕಾಲದಲ್ಲಿ ಈ ಮಾತನ್ನು ಹೇಳಿದನು.

ಶಕ್ರಪ್ರಸ್ಥಮಹಂ ನೇಷ್ಯೇ ವೃಷ್ಣ್ಯಂಧಕಜನಂ ಸ್ವಯಮ್ ।
ಇದಂ ತು ನಗರಂ ಸರ್ವಂ ಸಮುದ್ರಃ ಪ್ಲಾವಯಿಷ್ಯತಿ ॥೧೦॥

ಇಲ್ಲಿ ಉಳಿದಿರುವ ವೃಷ್ಣಿ ಮತ್ತು ಅಂಧಕಜನರನ್ನು ನಾನು ಇಂದ್ರಪ್ರಸ್ಥಕ್ಕೆ ಕರೆದೊಯ್ಯಲಿದ್ದೇನೆ. ಈ ಇಡೀ ನಗರವನ್ನು ಸಮುದ್ರವು ಮುಳುಗಿಸಲಿದೆ.

ಸಜ್ಜೀಕುರುತ ಯಾನಾನಿ ರತ್ನಾನಿ ವಿವಿಧಾನಿ ಚ ।
ವಜ್ರೋಽಯಂ ಭವತಾಂ ರಾಜಾ ಶಕ್ರಪ್ರಸ್ಥೇ ಭವಿಷ್ಯತಿ ॥೧೧॥

ವಾಹನಗಳನ್ನೂ, ಅಮೂಲ್ಯವಾದ ವಿವಿಧ ರತ್ನಗಳನ್ನೂ ಭದ್ರಪಡಿಸಿಕೊಂಡು ಸಿದ್ಧರಾಗಿರಿ. ಈ ವಜ್ರನು ಇಂದ್ರಪ್ರಸ್ಥದಲ್ಲಿ ನಿಮಗೆ ರಾಜನಾಗಿರುವನು.

ಸಪ್ತಮೇ ದಿವಸೇ ಚೈವ ರವೌ ವಿಮಲ ಉದ್ಗತೇ ।
ಬಹಿರ್ವತ್ಸ್ಯಾಮಹೇ ಸರ್ವೇ ಸಜ್ಜೀಭವತ ಮಾಚಿರಮ್ ॥೧೨॥

ಇಲ್ಲಿಂದ ಏಳನೆಯ ದಿನದಂದು ಶುದ್ಧಸೂರ್ಯಬಿಂಬವು ಉದಯಿಸುವ ಹೊತ್ತಿಗೆ ಸರಿಯಾಗಿ ನಾವು ಹೊರಡಲಿದ್ದೇವೆ. ತಡಮಾಡದೆ ಎಲ್ಲರೂ ತಯಾರಾಗಿರಿ.

ಇತ್ಯುಕ್ತಾಸ್ತೇನ ತೇ ಸರ್ವೇ ಪಾರ್ಥೇನಾಕ್ಲಿಷ್ಟಕರ್ಮಣಾ ।
ಸಜ್ಜಮಾಶು ತತಶ್ಚಕ್ರುಃ ಸ್ವಸಿದ್ಧ್ಯರ್ಥಂ ಸಮುತ್ಸುಕಾಃ ॥೧೩॥

ಹೀಗೆ ಎಲ್ಲ ಕರ್ಮಗಳನ್ನೂ ಸುಲಭವಾಗಿ ಮಾಡಲು ಪಾರ್ಥನು ಹೇಳಿದಾಗ, ಆ ಎಲ್ಲರೂ ತಮ್ಮ ಅಭೀಷ್ಟಸಿದ್ಧಿಗೋಸ್ಕರ ಉತ್ಸಾಹದಿಂದ ಎಲ್ಲ ತಯಾರಿಗಳನ್ನೂ ಕೂಡಲೇ ನಡೆಸಿದರು.

ತಾಂ ರಾತ್ರಿಮವಸತ್ಪಾರ್ಥಃ ಕೇಶವಸ್ಯ ನಿವೇಶನೇ ।
ಮಹತಾ ಶೋಕಮೋಹೇನ ಸಹಸಾऽಭಿಪರಿಪ್ಲುತಃ ॥೧೪॥

ಪಾರ್ಥನು ಆ ರಾತ್ರಿಯಲ್ಲಿ ಉಮ್ಮಳಿಸಿ ಬರುವ ಬಹುವಾದ ಶೋಕಮೋಹಗಳಿಂದ ಆವಿಷ್ಟನಾಗಿ ಶ್ರೀಕೃಷ್ಣನ ಮನೆಯಲ್ಲಿ ವಾಸಮಾಡಿದನು.

ಶ್ವೋಭೂತೇऽಥ ತತಃ ಶೌರಿರ್ವಸುದೇವಃ ಪ್ರತಾಪವಾನ್ ।
ಯುಕ್ತ್ವಾऽऽತ್ಮಾನಂ ಮಹಾತೇಜಾ ಜಗಾಮ ಗತಿಮುತ್ತಮಾಮ್ ॥೧೫॥

ಮಾರನೆಯ ದಿನವೇ ಪ್ರತಾಪಶಾಲಿಯಾದ, ಮಹಾತೇಜಸ್ವಿಯಾದ, ಶೂರನ ಮಗನಾದ ವಸುದೇವನು ತನ್ನನ್ನು ಯೋಗಧಾರಣೆಯಲ್ಲಿ ತೊಡಗಿಸಿಕೊಂಡು ಉತ್ತಮವಾದ ಪರಲೋಕಗತಿಯನ್ನು ಪಡೆದನು.

ತತಃ ಶಬ್ದೋ ಮಹಾನಾಸೀದ್ ವಸುದೇವನಿವೇಶನೇ ।
ದಾರುಣಃ ಕ್ರೋಶತೀನಾಂ ಚ ರುದತೀನಾಂ ಚ ಯೋಷಿತಾಮ್ ॥೧೬॥

ಪ್ರಕೀರ್ಣಮೂರ್ಧಜಾಃ ಸರ್ವಾ ವಿಮುಕ್ತಾಭರಣಸ್ರಜಃ ।
ಉರಾಂಸಿ ಪಾಣಿಭಿರ್ಘ್ನಂತ್ಯೋ ವ್ಯಲಪನ್ ಕರುಣಂ ಸ್ತ್ರಿಯಃ ॥೧೭॥

ವಸುದೇವನು ಮರಣಿಸಿದ ಕೂಡಲೇ ವಸುದೇವನ ಮನೆಯಲ್ಲಿ ಗಟ್ಟಿಯಾಗಿ ಕಿರುಚುತ್ತಿರುವ, ಅಳುತ್ತಿರುವ ಸ್ತ್ರೀಯರ ದಾರುಣವಾದ ಶಬ್ದವು ಕೇಳಿಬರತೊಡಗಿತು. ಎಲ್ಲ ಸ್ತ್ರೀಯರೂ ತಲೆಗೂದಲುಗಳನ್ನು ಬಿಡಿಸಿಕೊಂಡು, ಆಭರಣ ಹಾಗೂ ಮಾಲೆಗಳನ್ನು ತೆಗೆದಿಟ್ಟು, ಕೈಗಳಿಂದ ಎದೆಯನ್ನು ಹೊಡೆದುಕೊಳ್ಳುತ್ತಾ ದೀನರಾಗಿ ರೋದಿಸಿದರು.

ತಂ ದೇವಕೀ ಚ ಭದ್ರಾ ಚ ರೋಹಿಣೀ ಮದಿರಾ ತಥಾ ।
ಅನ್ವಾರೋಢುಂ ವ್ಯವಸಿತಾ ಭರ್ತಾರಂ ಯೋಷಿತಾಂ ವರಾಃ ॥೧೮॥

ಸ್ತ್ರೀಶ್ರೇಷ್ಠರಾದ ದೇವಕೀಯೂ, ಭದ್ರೆಯೂ, ರೋಹಿಣಿಯೂ ಹಾಗೂ ಮದಿರೆಯೂ ಇವರು ಗಂಡನಾದ ಆ ವಸುದೇವನ ಜೊತೆಗೆ ಚಿತೆಯಲ್ಲಿ ಸಹಗಮನ ಮಾಡಲು ಉದ್ಯುಕ್ತರಾದರು.

ತತಃ ಶೌರಿಂ ನೃಯುಕ್ತೇನ ಬಹುಮೂಲ್ಯೇನ ಭಾರತ ।
ಯಾನೇನ ಮಹತಾ ಪಾರ್ಥೋ ಬಹಿರ್ನಿಷ್ಕಾಮಯತ್ ತದಾ ॥೧೯॥

ಹೇ ಭಾರತನೇ, ಈ ಹೊತ್ತಿಗೆ ಅರ್ಜುನನು ವಸುದೇವನನ್ನು ಮನುಷ್ಯರು ಹೊರುವ ಬಹುಮೂಲ್ಯವಾದ (ಬಹಳ ಬೆಲೆಬಾಳುವ ದೊಡ್ಡ ಪಲ್ಲಕ್ಕಿಯಿಂದ ಹೊರಿಸಿ ಮನೆಯಿಂದ ಹೊರಗೆ ಹಾಕಿಸಿದನು.

ತಮನ್ವಯುಸ್ತತ್ರ ತತ್ರ ದುಃಖಶೋಕಸಮನ್ವಿತಾಃ ।
ದ್ವಾರಕಾವಾಸಿನಃ ಸರ್ವೇ ಪೌರಜಾನಪದಾ ಹಿತಾಃ ॥೨೦॥

ಹೀಗೆ ಮರಣಿಸಿದ ಅವನನ್ನು ದುಃಖ-ಶೋಕಗಳಿಂದ ಕೂಡಿದ ದ್ವಾರಕೆಯಲ್ಲಿ ವಾಸವಾಗಿದ್ದ, ಅವನ ಹಿತಚಿಂತಕರಾಗಿದ್ದ ಎಲ್ಲ ಪಟ್ಟಣಿಗ ಹಾಗೂ ಗ್ರಾಮೀಣ ಜನರು ಅಲ್ಲಲ್ಲಿ ಸೇರಿಕೊಂಡು ಹಿಂಬಾಲಿಸಿದರು.

ತಸ್ಯಾಶ್ವಮೇಧಿಕೇ ಕ್ಷೇತ್ರೇ ದೀಪ್ಯಮಾನಾಶ್ಚ ಪಾವಕಾಃ ।
ಪುರಸ್ತಾತ್ ತಸ್ಯ ಯಾನಸ್ಯ ಯಾಜಕಾಶ್ಚ ತತೋ ಯಯುಃ ॥೨೧॥

ಆ ವಾಹನದ ಮುಂಭಾಗದಲ್ಲಿ ಅಶ್ವಮೇಧ ಯಾಗದ ಛತ್ರವೂ, ಜ್ವಲಿಸುತ್ತಿರುವ ಬೆಂಕಿಗಳು ಮತ್ತು ಯಾಜಕರು ನಡೆದುಹೋಗುತ್ತಿದ್ದರು.

ಅನುಜಗ್ಮುಶ್ಚ ತಂ ವೀರಂ ದೇವ್ಯಸ್ತಾ ವೈ ಸ್ವಲಂಕೃತಾಃ ।
ಸ್ತ್ರೀಸಹಸ್ರೈಃ ಪರಿವೃತಾ ವಧೂಭಿಶ್ಚ ಸಹಸ್ರಶಃ ॥೨೨॥

ವೀರನಾದ ಅವನನ್ನು ಚೆನ್ನಾಗಿ ಅಲಂಕೃತರಾದ ದೇವಕೀ ಮೊದಲಾದ ಪತ್ನಿಯರು ಸಾವಿರಾರು ಸ್ತ್ರೀಯರಿಂದಲೂ, ಸಾವಿರಾರು ಸೊಸೆಯರಿಂದಲೂ ಕೂಡಿಕೊಂಡು ಹಿಂಬಾಲಿಸಿದರು.

ಯಸ್ತು ದೇಶಃ ಪ್ರಿಯಸ್ತಸ್ಯ ಜೀವತೋಽಭೂನ್ಮಹಾತ್ಮನಃ ।
ತತ್ರೈನಮುಪಸಂಕಲ್ಪ್ಯ ಪಿತೃಮೇಧಂ ಪ್ರಚಕ್ರಿರೇ ॥೨೩॥

ಅವನು ಬದುಕಿದ್ದಾಗ ಯಾವ ಪ್ರದೇಶವು ಮಹಾತ್ಮನಾದ ಅವನಿಗೆ ಪ್ರಿಯವಾಗಿತ್ತೋ ಅದೇ ಪ್ರದೇಶದಲ್ಲಿ ಸಂಕಲ್ಪಪುರಸ್ಸರವಾಗಿ ಪಿತೃಮೇಧವನ್ನು (ಔರ್ಧ್ವದೈಹಿಕ ಕ್ರಿಯೆಗಳನ್ನು) ನೆರವೇರಿಸಿದರು.

ತಂ ಚಿತಾಗ್ನಿಗತಂ ವೀರಂ ಶೂರಪುತ್ರಂ ವರಾಂಗನಾಃ ।
ತತೋನ್ವಾರುರುಹುಃ ಪತ್ನ್ಯಶ್ಚತಸ್ರಃ ಪತಿಲೋಕಗಾಃ ॥೨೪॥

ಅನಂತರ ಚಿತೆಯಲ್ಲಿರುವ ವೀರನಾದ ಆ ಶೂರಪುತ್ರನನ್ನು ಶ್ರೇಷ್ಠ ಸ್ತ್ರೀಯರಾದ ನಾಲ್ಕು ಮಂದಿ ಪತ್ನಿಯರು, ಪತಿಲೋಕವನ್ನು ಸೇರುವ ಇಚ್ಛೆಯಿಂದ ಅನುಸರಿಸಿ ಚಿತೆಯನ್ನೇರಿದರು.

ತಂ ವೈ ಚತಸೃಭಿಃ ಸ್ತ್ರೀಭಿರನ್ವಿತಂ ಪಾಂಡುನಂದನಃ ।
ಅದಾಹಯಚ್ಚಂದನೈಶ್ಚ ಗಂಧೈರುಚ್ಚಾವಚೈರಪಿ ॥೨೫॥

ಆಗ ಪಾಂಡುನಂದನನಾದ ಅರ್ಜುನನು ಚಂದನದಿಂದ ಹಾಗೂ ಬೇರೆ ಬೇರೆ ನಾನಾ ರೀತಿಯ ಗಂಧದ್ರವ್ಯಗಳಿಂದ ಚಿತೆಯನ್ನು ಅಲಂಕರಿಸಿ, ನಾಲ್ಕುಮಂದಿ ಪತ್ನಿಯರಿಂದ ಕೂಡಿದ ವಸುದೇವನನ್ನು ದಹನ ಮಾಡಿದನು.

ತತಃ ಪ್ರಾದುರಭೂಚ್ಚಬ್ದಃ ಸಮಿದ್ಧಸ್ಯ ವಿಭಾವಸೋಃ ।
ಸಾಮಗಾನಾಂ ಚ ನಿರ್ಘೋಷೋ ನರಾಣಾಂ ರುದತಾಂ ತಥಾ ॥೨೬॥

ಆಗ ಚಿತೆಯಲ್ಲಿ ಉರಿಯುತ್ತಿರುವ ಬೆಂಕಿಯಿಂದ ಸಾಮವೇದಿಗಳ ವೇದಘೋಷದಂತೆಯೇ, ಅಳುತ್ತಿರುವ ಮನುಷ್ಯರ ಶಬ್ದದಂತೆಯೇ ಶಬ್ದವು ಕೇಳಿಬರತೊಡಗಿತು.

ತತೋ ವಜ್ರಪ್ರಧಾನಾಸ್ತೇ ವೃಷ್ಣ್ಯಂಧಕಕುಮಾರಕಾಃ ।
ಸರ್ವೇ ಚೈವೋದಕಂ ಚಕ್ರುಃ ಸ್ತ್ರಿಯಶ್ಚೈವ ಮಹಾತ್ಮನಃ ॥೨೭॥

ಅನಂತರ ಮಹಾತ್ಮನಾದ ವಸುದೇವನಿಗೆ ವಜ್ರನೇ ಮೊದಲಾದ ವೃಷ್ಣ್ಯಂಧಕರ ಕುಮಾರರು ಮತ್ತು ಅಲ್ಲಿರುವ ಸ್ತ್ರೀಯರು ಎಲ್ಲರೂ ಸೇರಿ ಜಲಾಂಜಲಿಗಳನ್ನು ನೀಡಿದರು.

ಅಲುಪ್ತಧರ್ಮಸ್ತಂ ಧರ್ಮಂ ಕಾರಯಿತ್ವಾ ಸ ಫಲ್ಗುನಃ ।
ಜಗಾಮ ವೃಷ್ಣಯೋ ಯತ್ರ ವಿನಷ್ಟಾ ಭರತರ್ಷಭ ॥೨೮॥

ಹೇ ಭರತರ್ಷಭನೇ, ಅರ್ಜುನನು ಯಾವುದೇ ಧರ್ಮಲೋಪವಾಗದಂತೆ ವಸುದೇವನಿಗೆ ಪಿತೃಮೇಧಧರ್ಮಗಳನ್ನು ಮಾಡಿಸಿ, ನಂತರ ಎಲ್ಲಿ ಯಾದವರು ಹತರಾದರೋ ಆ ಪ್ರದೇಶಕ್ಕೆ ತೆರಳಿದನು.

ಸ ತಾನ್ ದೃಷ್ಟ್ವಾ ನಿಪತಿತಾನ್ ಕದನೇ ಭೃಶದುಃಖಿತಃ ।
ಬಭೂವಾತೀವ ಕೌರವ್ಯಃ ಪ್ರಾಪ್ತಕಾಲಂ ಚಕಾರ ಹ ॥೨೯॥

ಅನಂತರ ಕುರುವಂಶಜನಾದ ಅರ್ಜುನನು, ಯುದ್ಧದಲ್ಲಿ ಹೊಡೆದುಕೊಂಡು ಬಿದ್ದಿರುವ ಆ ಯದುಗಳನ್ನು ನೋಡಿ, ತಡೆಯಲಾಗದ ಬಹುದುಃಖವನ್ನು ಅನುಭವಿಸಿದನು. ನಂತರ ಆ ಕಾಲಕ್ಕೆ ಏನು ಯೋಗ್ಯವೋ ಅದನ್ನು ನಡೆಸಿದನು.

ಯಥಾಪ್ರಧಾನತಶ್ಚೈವ ಚಕ್ರೇ ಸರ್ವಾಸ್ತಥಾ ಕ್ರಿಯಾಃ ।
ಯೇ ಹತಾ ಬ್ರಹ್ಮಶಾಪೇನ ಮುಸಲೈರೇರಕೋದ್ಭವೈಃ ॥೩೦॥

ಬ್ರಹ್ಮಶಾಪದ ನಿಮಿತ್ತದಿಂದ ಜೊಂಡುಹುಲ್ಲಿನಿಂದ ಉಂಟಾದ ಒನಕೆಗಳಿಂದ ಯಾರೆಲ್ಲ ಹತರಾಗಿದ್ದರೋ ಅವರೆಲ್ಲರಿಗೂ ಅವರವರ ಹಿರಿತನಕ್ಕೆ ಅನುಸಾರವಾಗಿ ನಡೆಸಬೇಕಾದ ಎಲ್ಲ ಕ್ರಿಯೆಗಳನ್ನೂ ನಡೆಸಿದನು.

ತತೋ ಭಗವತೋ ದೇಹಂ ದೃಷ್ಟ್ವಾ ಶಿಷ್ಯಃ ಪ್ರಲಪ್ಯ ಚ ।
ಸ್ಮೃತ್ವಾ ತದ್ವಚನಂ ಸರ್ವಂ ಮೋಹಶೋಕೋಪಬೃಂಹಿತಃ ॥೩೧॥

ಆ ಹೊತ್ತಿಗೆ ಶ್ರೀಕೃಷ್ಣನ ದೇಹವನ್ನು ನೋಡುತ್ತಾ ಶಿಷ್ಯನಾದ ಅರ್ಜುನನು ಜೋರಾಗಿ ಅಳುತ್ತಾ, ಅವನ ಎಲ್ಲ ಮಾತುಗಳನ್ನೂ ನೆನಪಿಸಿಕೊಂಡು ಮೋಹ ಹಾಗೂ ಶೋಕಗಳಿಂದ ಜರ್ಝರಿತನಾದನು.

ತತಃ ಶರೀರೇ ರಾಮಸ್ಯ ವಾಸುದೇವಸ್ಯ ಚೋಭಯೋಃ ।
ಅನ್ವೀಕ್ಷ್ಯ ದಾಹಯಾಮಾಸ ಪುರುಷೈರಾಪ್ತಕಾರಿಭಿಃ ॥೩೨॥

ಅನಂತರ ಬಲರಾಮ-ಶ್ರೀಕೃಷ್ಣರಿಬ್ಬರ ಶರೀರಗಳನ್ನೂ ಹುಡುಕಿಸಿ, ಅವರಿಬ್ಬರಿಗೂ ಆಪ್ತರಾಗಿ ಕೆಲಸ ಮಾಡುತ್ತಿದ್ದ ಪುರುಷರಿಂದಲೇ ದಹನಸಂಸ್ಕಾರವನ್ನು ನೆರವೇರಿಸಿದನು.

ಸ ತೇಷಾಂ ವಿಧಿವತ್ಕೃತ್ವಾ ಪ್ರೇತಕಾರ್ಯಾಣಿ ಪಾಂಡವಃ ।
ಸಪ್ತಮೇ ದಿವಸೇ ಪ್ರಾಯಾದ್ ರಥಮಾರುಹ್ಯ ಸತ್ವರಃ ॥೩೩॥

ಹೀಗೆ ಆ ಪಾಂಡುಪುತ್ರನಾದ ಅರ್ಜುನನು ಅವರೆಲ್ಲರಿಗೂ ವಿಧಿವತ್ತಾಗಿ ಪ್ರೇತಕಾರ್ಯಗಳನ್ನು ನೆರವೇರಿಸಿ, ಏಳನೆಯ ದಿನದಂದು ರಥವನ್ನೇರಿ ಗಡಿಬಿಡಿಯಿಂದಲೇ ಹೊರಟನು.

ಅಶ್ವಯುಕ್ತೈ ರಥೈಶ್ಚಾಪಿ ಗೋಖರೋಷ್ಟ್ರಯುತೈರಪಿ ।
ಸ್ತ್ರಿಯಸ್ತಾ ವೃಷ್ಣಿವೀರಾಣಾಂ ರುದಂತ್ಯಃ ಶೋಕಕರ್ಶಿತಾಃ ॥೩೪॥

ಅನುಜಗ್ಮುರ್ಮಹಾತ್ಮಾನಂ ಪಾಂಡುಪುತ್ರಂ ಧನಂಜಯಮ್ ।
ಭೃತ್ಯಾಶ್ಚಾಂಧಕವೃಷ್ಣೀನಾಂ ಸಾದಿನೋ ರಥಿನಶ್ಚ ಯೇ ॥೩೫॥

ಶೋಕದಿಂದ ಕೃಶರಾದ, ಅಳುತ್ತಿರುವ ವೃಷ್ಣಿವೀರರ ಆ ಸ್ತ್ರೀಯರೆಲ್ಲರೂ ಅಶ್ವಗಳನ್ನು ಹೂಡಿದ ರಥಗಳಿಂದ, ಅಂತೆಯೇ ಎತ್ತು, ಕತ್ತೆ, ಒಂಟೆಗಳಿಂದ ಕೂಡಿದ ರಥಗಳಿಂದಲೂ ಮಹಾತ್ಮನಾದ, ಪಾಂಡುಪುತ್ರನಾದ ಧನಂಜಯನನ್ನು ಅನುಸರಿಸಿದರು. ಅಲ್ಲದೇ ಕುದುರೆಯನ್ನೇರಿದ ಹಾಗೂ ರಥದಲ್ಲಿರುವ ಅಂಧಕ ಮತ್ತು ವೃಷ್ಣಿಗಳ ಸೇವಕರೂ ಕೂಡ ಅನುಸರಿಸಿದರು.

ವೀರಹೀನಾ ವೃದ್ಧಬಾಲಾಃ ಪೌರಜಾನಪದಾಸ್ತಥಾ ।
ಯಯುಸ್ತೇ ಪರಿವಾರ್ಯಾಥ ಕಲತ್ರಂ ಪಾರ್ಥಶಾಸನಾತ್ ॥೩೬॥

ಮಕ್ಕಳಿಲ್ಲದವರು, ವೃದ್ಧರು, ಬಾಲಕರು ಹಾಗೂ ಪಟ್ಟಣಿಗ-ಗ್ರಾಮೀಣಜನರೂ ಪಾರ್ಥನ ಆಜ್ಞೆಯಂತೆ ಸ್ತ್ರೀಜನರನ್ನು ಸುತ್ತುವರಿದು ಹೊರಟರು.

ಕುಂಜರೈಶ್ಚ ಗಜಾರೋಹಾ ಯಯುಃ ಶೈಲನಿಭೈಸ್ತಥಾ ।
ಸಪಾದರಕ್ಷೈಃ ಸಂಯುಕ್ತಾಃ ಸೋತ್ತರಾಯುಧಿಕಾ ಯಯುಃ ॥೩೭॥

ಮಾವುತರು ಬೆಟ್ಟದಂತಿರುವ ಆನೆಗಳನ್ನೇರಿಯೂ, ಸೈನಿಕರು ತಮ್ಮ ಪ್ರಧಾನರೊಂದಿಗೆ ಕೂಡಿಕೊಂಡು ಪಾದರಕ್ಷೆಗಳನ್ನು ಧರಿಸಿಯೂ ಹೊರಟರು.

ಪುತ್ರಾಶ್ಚಾಂಧಕವೃಷ್ಣೀನಾಂ ಸರ್ವೇ ಪಾರ್ಥಮನುವ್ರತಾಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವ ಮಹಾಧನಾಃ ॥೩೮॥

ಅಂಧಕ ಹಾಗೂ ವೃಷ್ಣಿವಂಶದ ಪುತ್ರರೆಲ್ಲರೂ ಅರ್ಜುನನನ್ನು ಅನುಸರಿಸಿದರು. ಅಂತೆಯೇ ಶ್ರೀಮಂತರಾದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಹಾಗೂ ಶೂದ್ರರೂ ಪಾರ್ಥನನ್ನು ಅನುಸರಿಸಿದರು.

ದಶ ಷಟ್ ಚ ಸಹಸ್ರಾಣಿ ವಾಸುದೇವಾವರೋಧನಮ್ ।
ಪುರಸ್ಕೃತ್ಯ ಯಯುರ್ವಜ್ರಂ ಪೌತ್ರಂ ಕೃಷ್ಣಸ್ಯ ಧೀಮತಃ ॥೩೯॥

ಹದಿನಾರು ಸಾವಿರಮಂದಿ ಕೃಷ್ಣನ ಪತ್ನಿಯರೆಲ್ಲರೂ ಧೀಮಂತನಾದ, ಕೃಷ್ಣನ ಮೊಮ್ಮಗನಾದ ವಜ್ರನನ್ನು ಮುಂದೆ ಮಾಡಿಕೊಂಡು ನಡೆದರು.

ಬಹೂನಿ ಚ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಭೋಜವೃಷ್ಣ್ಯಂಧಕಸ್ತ್ರೀಣಾಂ ಹತನಾಥಾನಿ ನಿರ್ಯಯುಃ ॥೪೦॥

ನಾಥರನ್ನು ಕಳೆದುಕೊಂಡ ಸಾವಿರ ದಶಲಕ್ಷ ದಶಕೋಟಿ ಸಂಖ್ಯೆಯ ಬಹುಮಂದಿ ಭೋಜ-ವೃಷ್ಣಿ-ಅಂಧಕರ ಸ್ತ್ರೀಯರು ಜೊತೆಗೆ ಹೊರಟರು.

ತತಾಗರಸಮಪ್ರಖ್ಯಂ ವೃಷ್ಣಿಚಕ್ರಂ ಮಹರ್ದ್ಧಿಮತ್ ।
ಉವಾಹ ರಥಿನಾಂಶ್ರೇಷ್ಠಃ ಪಾರ್ಥಃ ಪರಪುರಂಜಯಃ ॥೪೧॥

ಬಹಳ ವೃದ್ಧಿಗೊಂಡಿರುವ ಸಾಗರದಂತೆ ಕಾಣುವ ಆ ವೃಷ್ಣಿಗಳ ಸಮೂಹದ ಜವಾಬ್ದಾರಿಯನ್ನು ರಥಿಗಳಲ್ಲಿ ಶ್ರೇಷ್ಠನಾದ, ಶತ್ರುಸಮೂಹವನ್ನು ಗೆಲ್ಲುವ ಸಾಮರ್ಥ್ಯವುಳ್ಳ ಪಾರ್ಥನು ಹೊತ್ತುಕೊಂಡನು.

ನಿರ್ಯಾತೇ ತು ಜನೇ ತಸ್ಮಿನ್ ಸಾಗರೋ ಮಕರಾಲಯಃ ।
ದ್ವಾರಕಾಂ ರತ್ನಸಂಪೂರ್ಣಾಂ ಜಲೇನಾಪ್ಲಾವಯತ್ ತದಾ ॥೪೨॥

ಹೀಗೆ ಆ ಜನಸಮೂಹವು ದ್ವಾರಕೆಯಿಂದ ಹೊರಟ ಕೂಡಲೇ ಮೊಸಳೆಗಳಿಗೆ ಆಶ್ರಯವಾದ ಆ ಸಾಗರವು ರತ್ನಸಮೂಹವಾದ ದ್ವಾರಕೆಯನ್ನು ಆಗಲೇ ನೀರಿನಿಂದ ಮುಳುಗಿಸಿಬಿಟ್ಟಿತು.

ಯದ್ಯದ್ಧಿ ಪುರುಷವ್ಯಾಘ್ರೋ ಭೂಮೇಸ್ತಸ್ಯಾ ವ್ಯಮುಂಚತ ।
ತತ್ತತ್ಸಂಪ್ಲಾವಯಾಮಾಸ ಸಲಿಲೇನ ಸ ಸಾಗರಃ ॥೪೩॥

ಪುರುಷಶ್ರೇಷ್ಠನಾದ ಅರ್ಜುನನು ಆ ದ್ವಾರಕೆಯ ಯಾವ ಯಾವ ಭೂಪ್ರದೇಶವನ್ನು ಬಿಟ್ಟುಮುಂದೆ ಹೋಗುತ್ತಿದ್ದನೋ ಆ ಎಲ್ಲಪ್ರದೇಶವನ್ನೂ ಸಾಗರವು ನೀರಿನಿಂದ ಮುಳುಗಿಸಿಬಿಟ್ಟಿತು.

ತದದ್ಭುತಮಭಿಪ್ರೇಕ್ಷ್ಯ ದ್ವಾರಕಾವಾಸಿನೋ ಜನಾಃ ।
ತೂರ್ಣಾತ್ ತೂರ್ಣತರಂ ಜಗ್ಮುರಹೋ ದೈವಮಿತಿ ಬ್ರುವನ್ ॥೪೪॥

ಈ ಅದ್ಭುತವಾದ ದೃಶ್ಯವನ್ನು ನೋಡಿದ ದ್ವಾರಕೆಯಲ್ಲಿ ವಾಸಮಾಡುತ್ತಿದ್ದ ಜನರು ಅಯ್ಯೋ ದೇವರೇ ಎಂದು ಹೇಳುತ್ತಾ ಬೇಗ ಬೇಗನೇ ಅಲ್ಲಿಂದ ಮುಂದೆ ನಡೆದರು.

ಕಾನನೇಷು ಚ ರಮ್ಯೇಷು ಪರ್ವತೇಷು ನದೀಷು ಚ ।
ನಿವಸನ್ನಾನಯಾಮಾಸ ವೃಷ್ಣಿದಾರಾನ್ ಧನಂಜಯಃ ॥೪೫॥

ಅಲ್ಲಿಂದ ಹೊರಟ ಅರ್ಜುನನು ರಮ್ಯವಾದ ಕಾಡುಗಳಲ್ಲೂ, ಪರ್ವತಗಳಲ್ಲೂ, ನದೀ ತೀರಗಳಲ್ಲೂ, ಮಧ್ಯೆ ಮಧ್ಯೆ ವಾಸವನ್ನು ಪರಿಕಲ್ಪಿಸಿ ಯಾದವ ಸ್ತ್ರೀಯರನ್ನು ಮುಂದೆ ಕರೆತಂದನು.

ಸ ಪಂಚನದಮಾಸಾದ್ಯ ಧೀಮಾನತಿಸಮೃದ್ಧಿಮತ್ ।
ದೇಶೇ ಗೋಪಶುಧಾನ್ಯಾಢ್ಯೇ ನಿವಾಸಮಕರೋತ್ ಪ್ರಭುಃ ॥೪೬॥

ಧೀಮಂತನಾದ, ಸಮರ್ಥನಾದ ಅವನು ಗೋ-ಪಶು-ಧಾನ್ಯಗಳಿಂದ ತುಂಬಿರುವ, ಅತ್ಯಂತ ಸಮೃದ್ಧವಾದ ಪಂಚನದಪ್ರದೇಶಕ್ಕೆ (ಈಗಿನ ಪಂಜಾಬ್) ಬಂದು ಆ ಪ್ರದೇಶದಲ್ಲಿ ಅವರಿಗೆ ನಿವಾಸವನ್ನು ಪರಿಕಲ್ಪಿಸಿದನು.

ತತೋ ಲೋಭಃ ಸಮಭವದ್ ದಸ್ಯೂನಾಂ ನಿಹತೇಶ್ವರಾಃ ।
ದೃಷ್ಟ್ವಾ ಸ್ತ್ರಿಯೋ ನೀಯಮಾನಾಃ ಪಾರ್ಥೇನೈಕೇನ ಭಾರತ ॥೪೭॥
ಸುರೂಪಾ ಭರ್ತೃರಹಿತಾಃ ಹೇಮರತ್ನಾದಿಸಂಯುತಾಃ ॥೪೮॥

ಹೇ ಭಾರತನೇ, ಅನಂತರ ಅಲ್ಲಿರುವ ದರೋಡೆಕೋರರಿಗೆ ರಕ್ಷಕರಿಲ್ಲದ, ಸುಂದರವಾದ ರೂಪವುಳ್ಳ, ಪತಿಗಳನ್ನು ಕಳೆದುಕೊಂಡ, ಚಿನ್ನ-ರತ್ನ ಇವುಗಳಿಂದ ಕೂಡಿದ ಪಾರ್ಥನೊಬ್ಬನಿಂದ ಒಯ್ಯಲ್ಪಡುತ್ತಿರುವ ಸ್ತ್ರೀಯರನ್ನು ಕಂಡು ಅವರನ್ನು ದೋಚುವ ಇಚ್ಛೆಯುಂಟಾಯಿತು.

ತತಸ್ತೇ ಪಾಪಕರ್ಮಾಣೋ ಲೋಭೋಪಹತಚೇತಸಃ ।
ಆಭೀರಾ ಮಂತ್ರಯಾಮಾಸುಃ ಸಮೇತ್ಯಾಶುಭದರ್ಶನಾಃ ॥೪೯॥

ಅನಂತರ ಪಾಪಕರ್ಮವನ್ನೇ ನಡೆಸುವ, ಆಸೆಯಿಂದ ಬುದ್ಧಿಯನ್ನು ಕಳೆದುಕೊಂಡ, ನೋಡಲೂ ಕುರೂಪರಾದ, ಆ ಬೇಡಜನಾಂಗದವರು ಒಟ್ಟುಸೇರಿ ಆಲೋಚಿಸಿದರು.

ಅಯಮೇಕೋऽರ್ಜುನೋ ಧನ್ವೀ ವೃದ್ಧಬಾಲಂ ಹತೇಶ್ವರಮ್ ।
ನಯತ್ಯಸ್ಮಾನತಿಕ್ರಮ್ಯ ಯೋಧಾಶ್ಚೇಮೇ ಹತೌಜಸಃ ॥೫೦॥

ಈ ಧನುರ್ಧಾರಿಯಾದ ಅರ್ಜುನನೊಬ್ಬನೇ ವೃದ್ಧರೂ ಹಾಗೂ ಬಾಲಕರಿಂದ ಕೂಡಿದ, ಬೇರೆ ರಕ್ಷಕರಿಲ್ಲದ ಈ ಸ್ತ್ರೀಜನರನ್ನು ನಮ್ಮನ್ನು ಧಿಕ್ಕರಿಸಿ ಕರೆದೊಯ್ಯುತ್ತಿದ್ದಾನೆ. ಜೊತೆಗಿರುವ ಈ ಯೋಧರಾದರೂ ಪರಾಕ್ರಮವಿಲ್ಲದವರು.

ತತೋ ಯಷ್ಟಿಪ್ರಹರಣಾ ದಸ್ಯವಸ್ತೇ ಸಹಸ್ರಶಃ ।
ಅಭ್ಯಧಾವಂತ ವೃಷ್ಣೀನಾಂ ತಂ ಜನಂ ಲೋಪಹಾರಿಣಃ ॥೫೧॥

ಅನಂತರ ಸಾವಿರಾರು ಮಂದಿ ಆ ದರೋಡೆಕೋರರು ದೊಣ್ಣೆಗಳನ್ನು ಎತ್ತಿಕೊಂಡು ಯಾದವರ ಆ ಜನಸಮೂಹದ ಮೇಲೆ ತಾವು ಕದಿಯಬಯಸಿದ ವಸ್ತುಗಳನ್ನು ಅಪಹರಿಸುತ್ತಾ ಏರಿ ಬಂದರು.

ಮಹತಾ ಸಿಂಹನಾದೇನ ತ್ರಾಸಯಂತಃ ಪೃಥಗ್ಜನಮ್ ।
ಅಭಿಪೇತುರ್ಧನಾರ್ಥಂ ತೇ ಕಾಲಪರ್ಯಾಯಚೋದಿತಾಃ ॥೫೨॥

ಕಾಲಮಹಾತ್ಮೆಯಿಂದ ಪ್ರೇರಿತರಾದ ಅವರು ದೊಡ್ಡದಾಗಿ ಕಿರುಚಾಡುತ್ತಾ ಪ್ರತ್ಯೇಕವಾಗಿ ಎಲ್ಲ ಜನರನ್ನೂ ಹೆದರಿಸುತ್ತಾ ಹಣಕ್ಕೋಸ್ಕರ ಅವರ ಮೇಲೆ ಮುಗಿಬಿದ್ದರು.

ತತೋ ನಿವೃತ್ತಃ ಕೌಂತೇಯಃ ಸಹಸಾ ಸಪದಾನುಗಃ ।
ಉವಾಚ ತಾನ್ ಮಹಾಬಾಹುರರ್ಜುನಃ ಪ್ರಹಸನ್ನಿವ ॥೫೩॥

ಅನಂತರ ಮಹಾಬಾಹುವಾದ, ಕುಂತೀಪುತ್ರನಾದ ಅರ್ಜುನನು ತನ್ನ ಅನುಯಾಯಿಗಳೊಂದಿಗೆ ಕೂಡಲೇ ಹಿಂದಿರುಗಿ ನಗುತ್ತಲೇ ಅವರನ್ನು ಕುರಿತು ಹೀಗೆಂದನು.

ನಿವರ್ತಧ್ವಮಧರ್ಮಜ್ಞಾ ಯದಿ ಜೀವಿತುಮಿಚ್ಛಥ ।
ಇದಾನೀಂ ಶರನಿರ್ಭಿನ್ನಾಃ ಶೋಚಧ್ವಂ ನಿಹತಾ ಮಯಾ ॥೫೪॥

ಹೇ ಅಧರ್ಮಜನರೇ, ನೀವು ಬದುಕಲು ಇಚ್ಛಿಸುವಿರಾದರೆ ಹಿಂದಿರುಗಿ. ಇಲ್ಲದಿದ್ದರೆ ನನ್ನ ಬಾಣದಿಂದ ಸೀಳಲ್ಪಟ್ಟವರಾಗಿ, ನನ್ನಿಂದ ಹತರಾಗುವ ಮೂಲಕ ದುಃಖಿಸುವಿರಿ.

ತಥೋಕ್ತಸ್ತೇನ ವೀರೇಣ ಕದರ್ಥೀಕೃತ್ಯ ತದ್ವಚಃ ।
ಅಭಿಪೇತುರ್ಜನಂ ಮೂಢಾ ವಾರ್ಯಮಾಣಾಃ ಪುನಃಪುನಃ ॥೫೫॥

ಹೀಗೆ ವೀರನಾದ ಅರ್ಜುನನು ಹೇಳಿದಾಗಲೂ ಅವನ ಮಾತನ್ನು ಧಿಕ್ಕರಿಸಿ, ಮೂಢರಾದ ಅವರು ಮತ್ತೆ ಮತ್ತೆ ತಡೆದರೂ ಕೂಡ ಅರ್ಜುನನ ಮೇಲೆ ಏರಿಬಂದರು.

ತತೋಽರ್ಜುನೋ ಧನುರ್ದಿವ್ಯಂ ಗಾಂಡೀವಮಜರಂ ಮಹತ್ ।
ಆರೋಪಯಿತುಮಾರೇಭೇ ಯತ್ನಾದಿವ ಕಥಂಚನ ॥೫೬॥

ಆಗ ಅರ್ಜುನನು ಎಂದೂ ಹಾಳಾಗದ, ಬಹುದೊಡ್ಡದಾದ ತನ್ನ ದಿವ್ಯ ಧನುಸ್ಸಾದ ಗಾಂಡೀವವನ್ನು ಹೇಗೋ ಪ್ರಯತ್ನಪೂರ್ವಕವಾಗಿ ಹೆದೆಯೇರಿಸಲು ಆರಂಭಿಸಿದನು.

ಚಕಾರ ಸಜ್ಯಂ ಕೃಚ್ಛ್ರೇಣ ಸಂಭ್ರಮೇ ತುಮುಲೇ ಸತಿ ।
ಚಿಂತಯಾಮಾಸ ಶಸ್ತ್ರಾಣಿ ನ ಚ ಸಸ್ಮಾರ ತಾನ್ಯಪಿ ॥೫೭॥

ಬಹಳ ಕಷ್ಟದಿಂದ ಹೆದೆಯೇರಿಸಿ ದಸ್ಯುಗಳ ಗಲಭೆಯು ಜೋರಾಗುತ್ತಿದ್ದಂತೆ ದಿವ್ಯಶಸ್ತ್ರಗಳನ್ನು ಚಿಂತಿಸಿದನು. ಆದರೆ ಆ ಯಾವ ಶಸ್ತ್ರಗಳನ್ನೂ ನೆನಪಿಸಿಕೊಳ್ಳಲಾಗಲಿಲ್ಲ.

ವೈಕೃತಂ ತನ್ಮಹದ್ ದೃಷ್ಟ್ವಾ ಭುಜವೀರ್ಯಂ ತಥಾ ಯುಧಿ ।
ದಿವ್ಯಾನಾಂ ಚ ಮಹಾಸ್ತ್ರಾಣಾಂ ವಿನಾಶಾದ್ ವ್ರೀಡಿತೋಽಭವತ್ ॥

ಆ ದೊಡ್ಡ ದುರ್ನಿಮಿತ್ತವನ್ನು ನೋಡಿ, ಹಾಗೆಯೇ ಯುದ್ಧದಲ್ಲಿ ತಾನು ತೋರಬೇಕಾದ ಭುಜಬಲವನ್ನೂ, ದಿವ್ಯವಾದ ಮಹಾಸ್ತ್ರಗಳೂ ವಿನಾಶವಾದುದನ್ನು ನೋಡಿ ನಾಚಿಕೆ ಪಟ್ಟನು.

ವೃಷ್ಣಿಯೋಧಾಶ್ಚ ತೇ ಸರ್ವೇ ಗಜಾಶ್ವರಥಯೋಧಿನಃ ।
ನ ಶೇಕುರಾವರ್ತಯಿತುಂ ಹ್ರಿಯಮಾಣಂ ಸ್ವಕಂ ಧನಮ್ ॥೫೯॥

ಆನೆ, ಕುದುರೆ, ರಥಗಳಿಂದ ಯುದ್ಧಮಾಡಬಲ್ಲ ಆ ಎಲ್ಲ ಯಾದವ ಸೈನಿಕರೂ ಕೂಡ ತಮ್ಮ ಸಂಪತ್ತು ಕಳ್ಳರ ಪಾಲಾಗುತ್ತಿದ್ದರೂ ಅದನ್ನು ತಡೆಯಲು ಸಮರ್ಥರಾಗಲಿಲ್ಲ.

ಕಲತ್ರಸ್ಯ ಬಹುತ್ವಾದ್ಧಿ ಸಂಪತತ್ಸು ತತಸ್ತತಃ ।
ಪ್ರಯತ್ನಮಕರೋತ್ ಪಾರ್ಥೋ ಜನಸ್ಯ ಪರಿರಕ್ಷಣೇ ॥೬೦॥

ಯದುಪತ್ನಿಯರು ಬಹುಮಂದಿ ಇದ್ದುದರಿಂದ ದಸ್ಯುಗಳು ಅಲ್ಲಲ್ಲಿ ಏರಿ ಬರುತ್ತಿದ್ದರು. ಆಗ ಅರ್ಜುನನು ಜನರನ್ನು ರಕ್ಷಿಸಲು ಬಹುಪ್ರಯತ್ನವನ್ನು ಮಾಡಿದನು.

ಮಿಷತಾಂ ಸರ್ವಯೋಧಾನಾಂ ತತಸ್ತಾಃ ಪ್ರಮದೋತ್ತಮಾಃ ।
ಸಮಂತತೋವಕೃಷ್ಯಂತ ಕಾಮಾಚ್ಚಾನ್ಯಾಃ ಪ್ರವವ್ರಜುಃ ॥೬೧॥

ಅನಂತರ ಆ ಉತ್ತಮ ಸ್ತ್ರೀಯರು ಎಲ್ಲ ಯದುವೀರರೂ ರಕ್ಷಣೆ ಮಾಡಲು ಸ್ಪರ್ಧಿಸುತ್ತಿದ್ದಂತೆಯೇ ಎಲ್ಲ ಕಡೆಗಳಿಂದಲೂ ಬಲಾತ್ಕರಿಸಲ್ಪಟ್ಟರು. ಮತ್ತೆ ಕೆಲವರು ತಡೆಯಲು ಸಾಧ್ಯವಿಲ್ಲದೆ ತಾವಾಗಿಯೇ ದಸ್ಯುಗಳೊಂದಿಗೆ ಹೊರಟರು.

ತತೋ ಗಾಂಡೀವನಿರ್ಮುಕ್ತೈಃ ಶರೈಃ ಪಾರ್ಥೋ ಧನಂಜಯಃ ।
ಜಘಾನ ದಸ್ಯೂನ್ ಸೋದ್ವೇಗೋ ವೃಷ್ಣಿಭೃತ್ಯೈಃ ಸಹಸ್ರಶಃ ॥೬೨॥

ಅನಂತರ ಕುಂತೀಪುತ್ರನಾದ ಧನಂಜಯನು ಸಾವಿರಾರು ಯಾದವ ಸೇವಕರೊಂದಿಗೆ ಕೂಡಿಕೊಂಡು, ಉದ್ವೇಗದಿಂದಲೇ ಗಾಂಡೀವದಿಂದ ಹೊರಟ ಬಾಣಗಳಿಂದ ದಸ್ಯುಗಳನ್ನು ಹೊಡೆದನು.

ಕ್ಷಣೇನ ತಸ್ಯ ತೇ ರಾಜನ್ ಕ್ಷಯಂ ಜಗ್ಮುರಜಿಹ್ಮಗಾಃ ।
ಅಕ್ಷಯಾ ಹಿ ಪುರಾ ಭೂತ್ವಾ ಕ್ಷೀಣಾಃ ಕ್ಷತಜಭೋಜನಾಃ ॥೬೩॥

ಹೇ ರಾಜನೇ, ಸ್ವಲ್ಪ ಹೊತ್ತಿನಲ್ಲಿಯೇ ಅವನಲ್ಲಿದ್ದ ಬಾಣಗಳು ಖಾಲಿಯಾದವು. ಹಿಂದೆ ಅಕ್ಷಯವಾಗಿದ್ದ ಆ ರಕ್ತಾಹಾರಿ ಬಾಣಗಳು ಈಗ ಕ್ಷೀಣವಾಗಿಬಿಟ್ಟವು.

ಸ ಶರಕ್ಷಯಮಾಸಾದ್ಯ ದುಃಖಶೋಕಸಮಾಹತಃ ।
ಧನುಷ್ಕೋಟ್ಯಾ ತದಾ ದಸ್ಯೂನವಧೀತ್ ಪಾಕಶಾಸನಿಃ ॥೬೪॥

ಆಗ ಇಂದ್ರಪುತ್ರನಾದ ಪಾರ್ಥನು ಬಾಣಗಳು ಖಾಲಿಯಾದುದರಿಂದ ದುಃಖ-ಶೋಕಗಳಿಂದ ಕೂಡಿದವನಾಗಿ ಧನುಸ್ಸಿನ ತುದಿಯಿಂದ ಆ ದಸ್ಯುಗಳನ್ನು ಹೊಡೆಯಲಾರಂಭಿಸಿದನು.

ಪ್ರೇಕ್ಷತಸ್ತ್ವೇವ ಪಾರ್ಥಸ್ಯ ವೃಷ್ಣ್ಯಂಧಕವರಸ್ತ್ರಿಯಃ ।
ಜಗ್ಮುರಾದಾಯ ತೇ ಮ್ಲೇಚ್ಛಾಃ ಸಮಂತಾಜ್ಜನಮೇಜಯ ॥೬೫॥

ಹೇ ಜನಮೇಜಯನೇ, ಪಾರ್ಥನು ನೋಡನೋಡುತ್ತಿದ್ದಂತೆಯೇ ಆ ಮ್ಲೇಚ್ಛರು ವೃಷ್ಣಿ ಮತ್ತು ಅಂಧಕರ ವಂಶದ ಉತ್ತಮಸ್ತ್ರೀಯರನ್ನು ತಮ್ಮ ವಶಕ್ಕೆ ಕರೆದುಕೊಂಡು ಹೊರಟೇ ಬಿಟ್ಟರು.

ಧನಂಜಯಸ್ತು ದೈವಂ ತನ್ಮನಸಾऽಚಿಂತಯತ್ಪ್ರಭುಃ ।
ದುಃಖಶೋಕಸಮಾವಿಷ್ಟೋ ನಿಃಶ್ವಾಸಪರಮೋऽಭವತ್ ॥೬೬॥

ಸಮರ್ಥನಾದ ಅರ್ಜುನನು ಈ ಎಲ್ಲವನ್ನೂ ಭಗವತ್ಸಂಕಲ್ಪವೆಂದು ಮನಸ್ಸಿನಲ್ಲಿ ಅಂದುಕೊಂಡು ದುಃಖ-ಶೋಕಗಳಿಂದ ವ್ಯಾಕುಲನಾಗಿ ಜೋರಾಗಿ ನಿಟ್ಟುಸಿರು ಬಿಟ್ಟನು.

ಅಸ್ತ್ರಾಣಾಂ ಚ ಪ್ರಣಾಶೇನ ಬಾಹುವೀರ್ಯಸ್ಯ ಚ ಕ್ಷಯಾತ್ ।
ಧನುಷಶ್ಚಾವಿಧೇಯತ್ವಾತ್ ಶರಾಣಾಂ ಸಂಕ್ಷಯೇನ ಚ ॥೬೭॥

ಬಭೂವ ವಿಮನಾಃ ಪಾರ್ಥೋ ದೈವಮಿತ್ಯನುಚಿಂತಯನ್ ।
ನ್ಯವರ್ತತ ತತೋ ರಾಜನ್ನೇದಮಸ್ತೀತಿ ಚಿಂತಯನ್ ॥೬೮॥

ಹೇ ರಾಜನೇ, ಅಸ್ತ್ರಗಳು ಖಾಲಿಯಾದುದರಿಂದಲೂ, ಬಾಹುಬಲವು ಕ್ಷೀಣಿಸಿರುವುದರಿಂದಲೂ, ಧನುಸ್ಸಿನ ಹೆದೆಯೇರಿಸಲು ಕಷ್ಟವಾದುದರಿಂದಲೂ ಅರ್ಜುನನು ವಿಮನಸ್ಕನಾದನು. ಇದೆಲ್ಲವೂ ಭಗವತ್ಸಂಕಲ್ಪವೆಂದು ಆಲೋಚಿಸುತ್ತಾ, ಇದ್ಯಾವುದೂ ನನ್ನ ಕೈಯಲ್ಲಿಲ್ಲ ಎಂದು ಚಿಂತಿಸುತ್ತಾ ಅಲ್ಲಿಂದ ಹಿಂದಿರುಗಿದನು.

ತತಃ ಶೇಷಂ ಸಮಾದಾಯ ಕಲತ್ರಸ್ಯ ಮಹಾಮತಿಃ ।
ಹೃತಭೂಯಿಷ್ಠರತ್ನಸ್ಯ ಕುರುಕ್ಷೇತ್ರಮವಾತರತ್ ॥೬೯॥

ಅನಂತರ ಮಹಾಮತಿಯಾದ ಅರ್ಜುನನು ಬಹುರತ್ನಗಳನ್ನು ಕಳೆದುಕೊಂಡ, ದಸ್ಯುಗಳ ಪಾಲಾಗದೆ ಉಳಿದ, ಯದುಪತ್ನೀ ಸಮೂಹವನ್ನು ಒಗ್ಗೂಡಿಸಿಕೊಂಡು ಕುರುಕ್ಷೇತ್ರಕ್ಕೆ ಬಂದಿಳಿದನು.

ಯುಧಿಷ್ಠಿರಸ್ಯಾನುಮತೇ ವಂಶಕರ್ತ್ಯಾನ್ ಕುಮಾರಕಾನ್ ।
ನ್ಯವೇಶಯತ ಕೌರವ್ಯಸ್ತತ್ರ ತತ್ರ ಧನಂಜಯಃ ॥೭೦॥

ಯುಧಿಷ್ಠಿರನ ಅನುಮತಿಯಂತೆ, ಯದುವಂಶವನ್ನು ಮುಂದುವರೆಸುವ ಮಕ್ಕಳನ್ನು ಕುರುವಂಶಜನಾದ ಧನಂಜಯನು ಅಲ್ಲಲ್ಲಿ ಇರಿಸಿದನು.

ಹಾರ್ದಿಕ್ಯತನಯಂ ಪಾರ್ಥೋ ನಗರೇ ಮೃತ್ತಿಕಾವತೇ ।
ಅಶ್ವಪತಿಂ ಖಾಂಡವಾರಣ್ಯೇ ರಾಜ್ಯೇ ತತ್ರ ನ್ಯವೇಶಯತ್ ॥೭೧॥

ಕೃತವರ್ಮನ ಮಗನನ್ನು ಮೃತ್ತಿಕಾವನದ ಸಮೀಪದ ನಗರದಲ್ಲಿಯೂ, ಅಶ್ವಪತಿಯನ್ನು ಖಾಂಡವವನ ಸಮೀಪದ ರಾಜ್ಯದಲ್ಲಿಯೂ ಪಾರ್ಥನು ವ್ಯವಸ್ಥೆಗೊಳಿಸಿದನು.

ಭೋಜರಾಜಕಲತ್ರಂ ಚ ಹೃತಶೇಷಂ ನರೋತ್ತಮಃ ॥೭೨॥

ತಥಾ ವೃದ್ಧಾಂಶ್ಚ ಬಾಲಾಂಶ್ಚ ಸ್ತ್ರಿಯಶ್ಚಾದಾಯ ಪಾಂಡವಃ ।
ವೀರೈರ್ವಿಹೀನಾನ್ ಸರ್ವಾಂಸ್ತಾನ್ ಶಕ್ರಪ್ರಸ್ಥೇ ನ್ಯವೇಶಯತ್ ॥೭೩॥

ನರೋತ್ತಮನಾದ ಆ ಪಾಂಡವನು ಅಪಹರಿಸದೆ ಉಳಿದಿರುವ ಭೋಜರಾಜನ ಪತ್ನಿಯನ್ನೂ ಹಾಗೂ ಮಕ್ಕಳಿಲ್ಲದ ವೃದ್ಧರನ್ನೂ, ಮಕ್ಕಳನ್ನೂ, ಸ್ತ್ರೀಯರನ್ನೂ ಒಟ್ಟುಗೂಡಿಸಿ ಅವರೆಲ್ಲರನ್ನೂ ಇಂದ್ರಪ್ರಸ್ಥದಲ್ಲಿ ಇರಿಸಿದನು.

ಯೌಯುಧಾನಿಂ ಸರಸ್ವತ್ಯಾಃ ಪುತ್ರಂ ಸಾತ್ಯಕಿನಃ ಪ್ರಿಯಮ್ ।
ನ್ಯವೇಶಯತ ಧರ್ಮಾತ್ಮಾ ವೃದ್ಧಬಾಲಪುರಸ್ಕೃತಮ್ ॥೭೪॥

ಸಾತ್ಯಕಿಗೆ ಅತ್ಯಂತ ಪ್ರೀತಿಪಾತ್ರನಾದ, ಸರಸ್ವತಿಯ ಮಗನಾದ ಯೌಯುಧಾನಿಯನ್ನು ವೃದ್ಧ ಹಾಗೂ ಬಾಲರೊಂದಿಗೆ ಧರ್ಮಾತ್ಮನಾದ ಅರ್ಜುನನು ಉತ್ತಮ ಪ್ರದೇಶದಲ್ಲಿ ನೆಲೆಗೊಳಿಸಿದನು.

ಇಂದ್ರಪ್ರಸ್ಥೇ ದದೌ ರಾಜ್ಯಂ ವಜ್ರಾಯ ಪರವೀರಹಾ ।
ವಜ್ರೇಣಾಕ್ರೂರದಾರಾಸ್ತು ವಾರ್ಯಮಾಣಾಃ ಪ್ರವವ್ರಜುಃ ॥೭೫॥

ಸರಸ್ವತೀಂ ಪ್ರವಿವಿಶುಃ ತಥಾನ್ಯಾಃ ಶುದ್ಧಚೇತಸಃ ॥೭೬॥

ಶತ್ರುಮರ್ದನನಾದ ಅರ್ಜುನನು ಇಂದ್ರಪ್ರಸ್ಥದಲ್ಲಿಯೇ ವಜ್ರನಿಗೆ ರಾಜ್ಯವನ್ನು ನೀಡಿದನು. ವಜ್ರನು ತಡೆಯುತ್ತಿದ್ದರೂ ಅಕ್ರೂರರ ಪತ್ನಿಯಂದಿರು ಅಲ್ಲಿಂದ ಹೊರಟೇ ಬಿಟ್ಟರು. ಅಲ್ಲದೆ ಶುದ್ಧಚೇತಸ್ಕರಾದ ಅವರು ಮತ್ತು ಬೇರೆ ಸ್ತ್ರೀಯರೂ ಕೂಡ ಸರಸ್ವತಿ ನದಿಯನ್ನು ಪ್ರವೇಶಿಸಿದರು.

ರುಗ್ಮಿಣೀ ತಥ ಗಾಂಧಾರೀ ಶೈಬ್ಯಾ ಹೈಮವತೀತ್ಯಪಿ ।
ದೇವೀ ಜಾಂಬವತೀ ಚೈವ ವಿವಿಶುರ್ಜಾತವೇದಸಮ್ ॥೭೭॥

ರುಗ್ಮಿಣೀ, ಅಂತೆಯೇ ಗಾಂಧಾರೀ, ಶೈಬ್ಯೆ, ಹೈಮವತೀ, ಜಾಂಬವತೀ ದೇವಿ ಇವರೆಲ್ಲರೂ ಅಗ್ನಿಯನ್ನು ಪ್ರವೇಶಿಸಿದರು.

ಸತ್ಯಭಾಮಾ ತಥೈವಾನ್ಯಾ ದೇವ್ಯಃ ಕೃಷ್ಣಸ್ಯ ಸಮ್ಮತಾಃ ।
ವನಂ ಪ್ರವಿವಿಶೂ ರಾಜಂಸ್ತಾಪಸೇ ಕೃತನಿಶ್ಚಯಾಃ ॥೭೮॥

ಹೇ ರಾಜನೇ, ಸತ್ಯಭಾಮೆಯು ಹಾಗೂ ಕೃಷ್ಣನಿಗೆ ಸಮ್ಮತರಾದ ಉಳಿದ ದೇವಿಯರು ತಪಸ್ಸಿನಲ್ಲಿ ಆಸಕ್ತಿಯನ್ನಿರಿಸಿ ಕಾಡನ್ನು ಪ್ರವೇಶಿಸಿದರು.

ವನೇ ಮೂಲಾದಿಭೋಜಿನ್ಯೋ ಹವಿರ್ದಾನೈಕತತ್ಪರಾಃ ।
ಹಿಮವಂತಮತಿಕ್ರಮ್ಯ ಕಲಾಪಗ್ರಾಮಮಾವಿಶನ್ ॥೭೯॥

ಆ ಎಲ್ಲ ಸ್ತ್ರೀಯರು ಕಾಡಿನಲ್ಲಿ ಗೆಡ್ಡೆ-ಗೆಣಸುಗಳನ್ನು ತಿನ್ನುತ್ತಾ ಹವಿಷ್ಯಾನ್ನವನ್ನು ದಾನ ಮಾಡುವುದರಲ್ಲೇ ಆಸಕ್ತರಾಗಿದ್ದುಕೊಂಡು ಹಿಮವದ್‌ಪರ್ವತವನ್ನು ದಾಟಿ ಕಲಾಪ ಗ್ರಾಮಕ್ಕೆ ಪ್ರವೇಶಿಸಿದರು.

ದ್ವಾರಕಾವಾಸಿನೋ ಯೇ ತು ಪುರುಷಾಃ ಪಾರ್ಥಮಭ್ಯಯುಃ ।
ಯಥಾರ್ಹಂ ಸಂವಿಭಜ್ಯೈನಾನ್ ವಜ್ರೇ ಪರ್ಯದದಜ್ಜಯಃ ॥೮೦॥

ದ್ವಾರಕೆಯಲ್ಲಿ ವಾಸಮಾಡುತ್ತಿದ್ದ ಯಾರೆಲ್ಲ ಪುರುಷರು ಪಾರ್ಥನನ್ನು ಹಿಂಬಾಲಿಸಿದ್ದರೋ ಅವರೆಲ್ಲರನ್ನೂ ಅವರವರ ವರ್ಣಾಶ್ರಮಕ್ಕನುಸಾರವಾಗಿ ವಿಭಾಗಿಸಿ ಅವರನ್ನು ರಕ್ಷಿಸುವಂತೆ ವಜ್ರನಲ್ಲಿ ಪಾರ್ಥನು ಒಪ್ಪಿಸಿದನು.

ಸ ತತ್ಕೃತ್ವಾ ಪ್ರಾಪ್ತಕಾಲಂ ಬಾಷ್ಪೇಣಾಪಿಹಿತೋಽರ್ಜುನಃ ।
ಕೃಷ್ಣದ್ವೈಪಾಯನಂ ವ್ಯಾಸಂ ದದರ್ಶಾಸೀನಮಾಶ್ರಮೇ ॥೮೧॥

ಸಾಕ್ಷಾನ್ನಾರಾಯಣಂ ದೇವಂ ನಿಜರೂಪಧರಂ ವಿಭುಮ್ ॥೮೨॥

ಹೀಗೆ ಅರ್ಜುನನು ಆ ಕಾಲಕ್ಕೆ ಯಾವುದು ಸರಿಯಾದುದೋ ಅದೆಲ್ಲವನ್ನೂ ಮಾಡಿ ಮುಗಿಸಿ, ಕಣ್ಣೀರಿನಿಂದ ಮುಚ್ಚಿದ ಕಣ್ಣುಳ್ಳವನಾಗಿ ವೇದವ್ಯಾಸರ ಆಶ್ರಮಕ್ಕೆ, ತೆರಳಿ ಅಲ್ಲಿ ಕುಳಿತಿರುವ ಸಾಕ್ಷಾತ್ ನಾರಾಯಣನೇ ತನ್ನ ರೂಪವನ್ನು ಧರಿಸಿ ಬಂದಿರುವ ಸರ್ವ ಸಮರ್ಥನಾದ, ಕ್ರೀಡಾಗುಣವಿಶಿಷ್ಟನಾದ ಕೃಷ್ಣದ್ವೈಪಾಯನ ಎಂಬ ಹೆಸರುಳ್ಳ ವೇದವ್ಯಾಸರನ್ನು ಕಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮೌಸಲಪರ್ವಣಿ ವ್ಯಾಸಾರ್ಜುನಸಮಾಗಮೋ ನಾಮ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ಸ್ತ್ರಿಯೋ ಬಾಲಾಂಸ್ತಥಾऽऽದಾಯ ಧನಂ ಚೈವ ಧನಂಜಯಃ ।
ನಿರ್ಯಯೌ ದ್ವಾರವತ್ಯಾಸ್ತಾಂ ಜಗ್ರಾಸ ಚ ಸಾಗರಃ ॥

ಅರ್ಜುನನು ಕೃಷ್ಣನ ಹದಿನಾರುಸಾವಿರದ ನೂರು ಮಂದಿ ಮಡದಿಯರನ್ನೂ ಬಾಲಕರನ್ನೂ ಧನವನ್ನೂ ಹಿಡಿದುಕೊಂಡು ದ್ವಾರಕೆಯಿಂದ ಹೊರಗೆ ನಡೆದನು. ಆಗ ದ್ವಾರಕೆಯನ್ನು ಸಮುದ್ರ ಮುಳುಗಿಸಿತು.

ಸ್ತ್ರೀಬಾಲಸಹಿತೇ ಪಾರ್ಥ ಏಕಸ್ಮಿನ್ ಪಥಿ ಗಚ್ಛತಿ ।
ಶಾಪಾತ್ ಸುಪಾಪಾ ಆಭೀರಾಃ ಸ್ತ್ರೀಜನಾನ್ ಜಹ್ರುರುದ್ಧತಾಃ ॥

ಸ್ತ್ರೀಯರಿಂದಲೂ ಬಾಲಕರಿಂದಲೂ ಸಹಿತನಾಗಿ ಅರ್ಜುನನು ನಡೆದಾಗ ಒಂದು ದಾರಿಯಲ್ಲಿ ಶ್ರೀಕೃಷ್ಣನ ಶಾಪದಿಂದ ಮಹಾಪಾಪಿಗಳಾದ ಮ್ಲೇಚ್ಛರು ಉದ್ಧತರಾಗಿ ಸ್ತ್ರೀಯರನ್ನು ಅಪಹರಿಸಿದರು.

ಯಾಸ್ತಾಃ ಷೋಡಶಸಾಹಸ್ರವನಿತಾಃ ಶತಸಂಯುತಾಃ ।
ಕೃಷ್ಣಶಾಪಾನ್ಮ್ಲೇಚ್ಛವಶಂ ಯಯುರ್ದರ್ಪನಿಮಿತ್ತತಃ ॥

ಶ್ರೀಕೃಷ್ಣನ ಹದಿನಾರು ಸಾವಿರದ ನೂರು ಮಂದಿ ಪತ್ನಿಯರು ದರ್ಪನಿಮಿತ್ತವಾಗಿ ಅವನಿಂದ (ಕೃಷ್ಣನಿಂದ) ಶಾಪ ಹೊಂದಿ ಮ್ಲೇಚ್ಛರಿಗೆ ವಶರಾದರು.

ಹ್ರಿಯಮಾಣೇ ಧನೇ ಚೈವ ವನಿತಾಸು ಚ ವಾಸವಿಃ ।
ಯುಯುತ್ಸುರ್ಗಾಂಡಿವಂ ಸಜ್ಯಂ ಕೃಚ್ಛ್ರೇಣೈವ ಚಕಾರ ಹ ॥

ಧನವನ್ನೂ, ಸ್ತ್ರೀಯರನ್ನೂ ಮ್ಲೇಚ್ಛರು ಅಪಹರಿಸುವಾಗ ಅರ್ಜುನನು ಯುದ್ಧ ಮಾಡಲು ಬಯಸಿ ಗಾಂಡೀವವನ್ನು ಕಷ್ಟದಿಂದಲೇ ಹೆದೆಯೇರಿಸಿದನು.

ಕ್ಷೀಣಾಸ್ತಸ್ಯ ಶರಾ ದೈವಾನ್ನಾಸ್ತ್ರಾಣಿ ಸ್ಮೃತಿಮಾಯಯುಃ ।
ಸ ತದ್ ದೈವಕೃತಂ ಜ್ಞಾತ್ವಾ ಸಂಸ್ಮರನ್ ಪುರುಷೋತ್ತಮಮ್ ।
ನಿಘ್ನನ್ಶತ್ರೂನ್ ಗಾಂಡಿವೇನ ಶೇಷಂ ರಕ್ಷನ್ ಕುರೂನಗಾತ್ ॥

ದೈವಾತ್ ಅರ್ಜುನನ ಬಾಣಗಳು ಎಲ್ಲವೂ ಬರಿದಾದುವು. ಅಸ್ತ್ರಗಳೂ ಸ್ಮರಣೆಗೆ ಬರಲಿಲ್ಲ. ಅದನ್ನು ಅವನು ದೈವಕೃತವೆಂದುಕೊಂಡು, ಕೃಷ್ಣನನ್ನು ನೆನೆಯುತ್ತ, ಗಾಂಡೀವದಿಂದಲೆ ಶತ್ರುಗಳನ್ನು ಕೊಂದು, ಉಳಿದ ಧನಸಂಪತ್ತನ್ನು ರಕ್ಷಿಸುತ್ತ ಕುರುಕ್ಷೇತ್ರಕ್ಕೆ ತೆರಳಿದನು.

ತದಾ ಕುರುಕ್ಷೇತ್ರಗತಂ ಜಗದ್ಗುರುಂ
ಸುಪೂರ್ಣವಿಜ್ಞಾನಬಲಾಬ್ಧಿಸತ್ಸುಖಮ್ ।
ತಮೇವ ವಾಸಿಷ್ಠಕುಲೋದ್ವಹಂ ಹರಿಂ
ನಿರೀಕ್ಷ್ಯ ದುಃಖೇನ ಪಪಾತ ಪಾದಯೋಃ ॥

ಆಗ ಕುರುಕ್ಷೇತ್ರದಲ್ಲಿದ್ದ ಪೂರ್ಣಜ್ಞಾನಶಕ್ತಿಸಮುದ್ರನೂ ಉತ್ತಮ ಆನಂದ ಪೂರ್ಣನೂ ಜಗದ್ಗುರುವೂ ಆದ, ಶ್ರೀವೇದವ್ಯಾಸರೂಪದಿಂದ ವಸಿಷ್ಠಕುಲದಲ್ಲಿ

ಪ್ರಾದುರ್ಭವಿಸಿದ ಅದೇ ಹರಿಯನ್ನು ಕಂಡು, ಕೃಷ್ಣವಿರಹದುಃಖದಿಂದ ಪಾದಗಳಲ್ಲಿ ನಮಿಸಿದನು.

ಸ ತೇನ ಪುಂಸಾಂ ಪ್ರವರೇಣ ಹೇತುಭಿಃ
ಸಂಬೋಧಿತೋಽಜ್ಞಾನತಮೋಽಂಶುಮಾಲಿನಾ ।
ಸಂಸ್ಥಾಪ್ಯ ಚೇತಃ ಪುನರೇವ ತಸ್ಮಿನ್
ಜಹೌ ಶುಚಃ ಪ್ರಾಯಶ ಏವ ಧೈರ್ಯಾತ್ ॥

ಅಜ್ಞಾನತಮಸ್ಸಿಗೆ ಸೂರ್ಯರೆನಿಸಿದ, ಪುರುಷೋತ್ತಮರಾದ ವೇದವ್ಯಾಸರು ಅರ್ಜುನನನ್ನು ಯುಕ್ತಿಯುಕ್ತವಾಗಿ ತಿಳಿಯಹೇಳಿದಾಗ ಅರ್ಜುನ 'ಈತನೆ ಆ ಕೃಷ್ಣ' ಎಂದು ಅವರಲ್ಲಿ ಮನಸ್ಸನ್ನಿಟ್ಟು ಧೈರ್ಯದಿಂದ ಬಹುಪಾಲು ಶೋಕಗಳನ್ನು ಮರೆತನು.

ಸ್ತ್ರಿಯೋ ಮ್ಲೇಚ್ಛಹೃತಾಃ ಕೃಷ್ಣಪ್ರೇಷಿತಾದ್ ದಾಲ್ಭ್ಯತಃ ಪುನಃ ।
ಗೋವಿಂದೈಕಾದಶೀಂ ಶ್ರುತ್ವಾ ಕೃತ್ವಾ ಸಾರಸ್ವತೇ ಜಲೇ ॥

ನಿಮಜ್ಜ್ಯ ವಾಯೋರ್ವಚನಾತ್ ತ್ಯಕ್ತದೇಹಾ ದಿವಂ ಯಯುಃ ।
ಅರ್ಜುನಸ್ತು ಕುರುಕ್ಷೇತ್ರೇ ಹಾರ್ದಿಕ್ಯಯುಯುಧಾನಯೋಃ ।
ಸುತೌ ಸಾರಸ್ವತೇ ಚೈವ ದೇಶೇ ರಾಜ್ಯೇಽಭ್ಯಷೇಚಯತ್ ॥

ಮ್ಲೇಚ್ಛರಿಂದ ಅಪಹೃತರಾದ ಕೃಷ್ಣಪತ್ನಿಯರು ಕೃಷ್ಣಕಳಿಸಿದ್ದ ದಾಲ್ಭ್ಯಮುನಿಯಿಂದ ಗೋವಿಂದೈಕಾದಶೀ ವ್ರತ, ಮಹಿಮಾದಿಗಳನ್ನು ಕೇಳಿ ಆ ವ್ರತವನ್ನು ಆಚರಿಸಿ, ಸರಸ್ವತೀ ನದಿಜಲದಲ್ಲಿ ಸ್ನಾನ ಮಾಡಿ, ವಾಯುವಿನ ವಚನದಿಂದ ಆ ಜಲದಲ್ಲಿ ಶರೀರತ್ಯಾಗ ಮಾಡಿ ಸ್ವರ್ಗಕ್ಕೆ ಹೋದರು. ಅರ್ಜುನನು ಕೃತವರ್ಮ-ಸಾತ್ಯಕಿಯರ ಪುತ್ರರನ್ನು ಕುರುಕ್ಷೇತ್ರ ಸಾರಸ್ವತ ದೇಶಗಳಲ್ಲಿ ಆಳುವುದಕ್ಕೆ ಪಟ್ಟಾಭಿಷೇಕ ಮಾಡಿದನು.

ಅನಿರುದ್ಧಸುತಂ ವಜ್ರಂ ಪ್ರಿಯಂ ಕೃಷ್ಣಸ್ಯ ಸದ್ಗುಣಮ್ ।
ಸ ಶೂರಸೇನೇಂದ್ರಪ್ರಸ್ಥ ರಾಜಾನಮಕರೋದ್ ವಶೀ ॥

ಶ್ರೀಕೃಷ್ಣನಿಗೆ ಪ್ರಿಯನಾದ, ಸದ್ಗುಣಿಯಾದ ಅನಿರುದ್ಧಪುತ್ರ ವಜ್ರನನ್ನು ಅರ್ಜುನನು ಶೂರಸೇನ ದೇಶ ಮತ್ತು ಇಂದ್ರಪ್ರಸ್ಥಗಳಿಗೆ ರಾಜನನ್ನಾಗಿ ಮಾಡಿದನು.

ಸ್ತ್ರೀಬಾಲಾಂಶ್ಚ ಧನಂ ಚೈವ ತಸ್ಮಿನ್ ಸಂಸ್ಥಾಪ್ಯ ಫಲ್ಗುನಃ ।
ಯಯೌ ಭ್ರಾತೄನಶೇಷಂ ಚ ವೃತ್ತಂ ತೇಷಾಮವರ್ಣಯತ್ ॥

ಸ್ತ್ರೀಯರನ್ನೂ ಬಾಲಕರನ್ನೂ ಧನವನ್ನೂ ವಜ್ರನ ವಶದಲ್ಲಿ ಇರಿಸಿ, ಅರ್ಜುನನ ಸಹೋದರರ ಬಳಿಗೆ ನಡೆದನು. ಅವರಿಗೆ ಎಲ್ಲ ವೃತ್ತಾಂತವನ್ನೂ ಬಣ್ಣಿಸಿದನು.

ತೇ ಚಾವಿಯೋಗಸಮಯಂ ಸ್ಮರಂತೋ ಮುರವೈರಿಣಾ ।
ಅಭ್ಯಷಿಂಚನ್ ಭಾಗವತಂ ಮಹಾರಾಜ್ಯೇ ಪರೀಕ್ಷಿತಮ್ ॥

ಪಾಂಡವರು ತಮಗೆ ಶ್ರೀಕೃಷ್ಣನ ವಿಯೋಗವಿಲ್ಲದಂತೆ ಮಾಡಿಕೊಳ್ಳಲು, ವಿಯೋಗ ಕಾಲದಲ್ಲಿ ತಾವೇ ಇರಕೂಡದೆಂದು ಮಾಡಿದ ಸಂಕಲ್ಪವನ್ನು ಆಲೋಚಿಸುತ್ತ ಭಗವದ್ಭಕ್ತನಾದ ಪರೀಕ್ಷಿತನನ್ನು ಮಹಾರಾಜ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿದರು.

ಸ್ತ್ರೀಹಾರಿಣಾಂ ಚ ಮ್ಲೇಚ್ಛಾನಾಂ ವಧಾಯೈನಮಯೋಜಯನ್ ।
ಕೃತಂ ಚ ತೇನ ತತ್ಕರ್ಮ ವೋಢ್ರಾ ಪೈತಾಮಹಂ ಧುರಮ್ ॥

ಸ್ತ್ರೀಯರನ್ನು ಅಪಹರಿಸಿದ ಮ್ಲೇಚ್ಛರ ವಧೆಗೆ ಪರೀಕ್ಷಿತನನ್ನು ಆಜ್ಞಾಪಿಸಿದರು. ತಾತಂದಿರು ವಹಿಸಿಕೊಟ್ಟ ಕಾರ್ಯಭಾರವನ್ನು ಪರೀಕ್ಷಿತನು ಹೊತ್ತು ಯಶಸ್ವಿಯಾಗಿ ನಡೆಸಿದನು.

ಸಮಯಂ ಪರಿರಕ್ಷದ್ಭಿರ್ನ ಪಾರ್ಥೈರೇವ ಯತ್ ಕೃತಮ್ ।
ವಾಸುದೇವಪದಾ ಸ್ಪೃಷ್ಟಭೂಕಂಟಕಸಮುದ್ಧೃತಿಃ ।
ಸಮಯಃ ಪಾಂಡವಾನಾಂ ಹಿ ತಸ್ಯೈವಾನುಗತಿಃ ಪರಮ್ ।

ತಮ್ಮ ಪ್ರತಿಜ್ಞೆಯನ್ನು ರಕ್ಷಿಸುವುದಕ್ಕಾಗಿ ಪಾಂಡವರು ಆ ಕೆಲಸವನ್ನು ತಾವೇ ಮಾಡಲಿಲ್ಲ. ಶ್ರೀಕೃಷ್ಣನ ಪಾದಸ್ಪರ್ಶವಿರುವಷ್ಟು ಕಾಲ ಮಾತ್ರ ಭೂಮಿಗೆ ಕಂಟಕ ರೂಪರಾದ ದುರ್ಜನರ ನಾಶ ಮಾಡಬೇಕು. ಬಳಿಕ ಶ್ರೀಕೃಷ್ಣನನ್ನೇ ಹಿಂಬಾಲಿಸಬೇಕು ಎಂಬುದು ಪಾಂಡವರು ತೊಟ್ಟ ಪ್ರತಿಜ್ಞೆಯಾಗಿತ್ತು.

ಅನುವ್ರಜದ್ಭಿರ್ವಿಶ್ವೇಶಂ ನಾಸ್ಮಾಭಿರ್ಭೂಸ್ತದುಜ್ಝಿತಾ ।
ಭೋಜ್ಯಾ ರಕ್ಷ್ಯಾऽಪಿ ವಾ ತೇಷಾಮಿತ್ಯೇವ ಸಮಯಃ ಪುರಾ ॥

ನಾವು ಕೃಷ್ಣನನ್ನು ಅನುಸರಿಸಬೇಕು. ಅವನು ಬಿಟ್ಟು ಹೋದ ಭೂಮಿಯನ್ನು ಭೋಗಿಸುವುದಾಗಲಿ, ರಕ್ಷಿಸುವುದಾಗಲಿ ಕೂಡದು ಎಂದು ಪಾಂಡವರು ಹಿಂದೆ ಕೈಗೊಂಡ ಪ್ರತಿಜ್ಞೆಯಾಗಿತ್ತು.

ತತ್ರ ಕಾಳೀ ಭೀಮಭಾರ್ಯಾ ವೈಷ್ಣವಂ ಯೋಗಮಾಸ್ಥಿತಾ ।
ಕೃಷ್ಣಯೈಕತ್ವಮಾಪನ್ನಾ ತ್ಯಕ್ತ್ವಾ ದೇಹಂ ತು ಮಾನುಷಮ್ ॥

ಭೀಮನ ಪತ್ನಿ ಕಾಳಿ ಹರಿಧ್ಯಾನರೂಪವಾದ ಯೋಗಬಲವನ್ನು ಅವಲಂಬಿಸಿ, ಮನುಷ್ಯ ಶರೀರವನ್ನು ತೊರೆದು ದ್ರೌಪದಿಯಲ್ಲಿ ಐಕ್ಯ ಹೊಂದಿದಳು.

ಸುಭದ್ರಾದ್ಯಾಸ್ತು ಯಾ ಭಾರ್ಯಾಃ ಪಾರ್ಥಾನಾಂ ತು ತದಾಜ್ಞಯಾ ।
ಯುಯುತ್ಸುಶ್ಚಾತ್ರ ಶಿಕ್ಷಾರ್ಥಂ ಪೌತ್ರಸ್ಯೈ ವಾವಸನ್ ಪುರೇ ॥

ಸುಭದ್ರೆ ಮುಂತಾದ ಪಾಂಡವಪತ್ನಿಯರೂ ಯುಯುತ್ಸುವೂ ಪಾಂಡವರ ಆಜ್ಞೆಯಂತೆ ಪರೀಕ್ಷಿತನಿಗೆ ಧರ್ಮಶಿಕ್ಷಣಕ್ಕಾಗಿ ಹಸ್ತಿನಾವತಿ ಪಟ್ಟಣದಲ್ಲಿಯೇ ವಾಸ ಮಾಡಿದರು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಅರ್ಜುನನು ವೇದವ್ಯಾಸರ ಆಶ್ರಮಕ್ಕೆ ತೆರಳಿ ಅಲ್ಲಿ ವೇದವ್ಯಾಸರನ್ನು ಸಂದರ್ಶಿಸುವುದು. ವೇದವ್ಯಾಸರಲ್ಲಿ ದ್ವಾರಕಾವೃತ್ತಾಂತವನ್ನು ನಿವೇದಿಸುವುದು. ವೇದವ್ಯಾಸರು ಅರ್ಜುನನಿಗೆ ಯುಧಿಷ್ಠಿರನೇ ಮೊದಲಾದ ನೀವು ಸ್ವರ್ಗಕ್ಕೆ ತೆರಳಿರೆಂದು ಸೂಚಿಸುವುದು. ಅನಂತರ ಅರ್ಜುನನು ಹಸ್ತಿನಪುರಕ್ಕೆ ಬಂದು ಯುಧಿಷ್ಠಿರನಿಗೆ ದ್ವಾರಕೆಯಲ್ಲಾದ ವೃತ್ತಾಂತವನ್ನು ನಿವೇದಿಸುವುದು.

ವೈಶಂಪಾಯನಃ

ಪ್ರವಿಶ್ಯ ತ್ವರ್ಜುನೋ ರಾಜನ್ನಾಶ್ರಮಂ ಸತ್ಯವಾದಿನಃ ।
ದದರ್ಶಾಸೀನಮೇಕಾಂತೇ ಮುನಿಂ ಸತ್ಯವತೀಸುತಮ್ ॥೧॥

ವೈಶಂಪಾಯನ– ಹೇ ರಾಜನೇ, ಅರ್ಜುನನು ಸತ್ಯವಾದಿಗಳಾದ ವೇದವ್ಯಾಸರ ಆಶ್ರಮವನ್ನು ಪ್ರವೇಶಿಸಿ, ಏಕಾಂತದಲ್ಲಿ ಕುಳಿತಿರುವ ಸತ್ಯವತಿಯ ಮಗನಾದ ವೇದವ್ಯಾಸ ಮುನಿಗಳನ್ನು ಕಂಡನು.

ಸ ತಮಾಸಾದ್ಯ ಧರ್ಮಜ್ಞಮುಪತಸ್ಥೇ ಮಹಾವ್ರತಮ್ ।
ಅರ್ಜುನೋಸ್ಮೀತಿ ನಾಮಾಸ್ಮೈ ನಿವೇದ್ಯಾಭ್ಯವದತ್ ತತಃ ॥೨॥

ಧರ್ಮಜ್ಞರಾದ ವೇದವ್ಯಾಸರನ್ನು ಅವನು ಸಮೀಪಿಸಿ, ಮಹಾವ್ರತರಾದ ಅವರ ಸಮೀಪದಲ್ಲಿ ನಿಂತನು. ಅನಂತರ ಅರ್ಜುನ ಎಂಬ ಹೆಸರಿನ ನಾನು ನಮಸ್ಕರಿಸುತ್ತಿದ್ದೇನೆ ಎಂದು ನಿವೇದಿಸಿ ಅಭಿವಾದನೆ ಮಾಡಿದನು.

ಸ್ವಾಗತಂ ತೇಽಸ್ತಿ ತ್ವಿತಿ ಪ್ರಾಹ ಮುನಿಃ ಸತ್ಯವತೀಸುತಃ ।
ಆಸ್ಯತಾಮಿತಿ ಹೋವಾಚ ಪ್ರಸನ್ನಾತ್ಮಾ ಮಹಾಮುನಿಃ ॥೩॥

ಸತ್ಯವತೀ ಸುತರಾದ ಆ ಮುನಿಗಳು 'ನಿನಗೆ ಸ್ವಾಗತವಿರಲಿ' ಎಂದರು. ನಂತರ ಪ್ರಸನ್ನಾತ್ಮರಾದ ಆ ಮುನಿಗಳು 'ಇಲ್ಲೇ ಕುಳಿತುಕೊ' ಎಂದು ಹೇಳಿದರು.

ತಮಪ್ರತೀತಮನಸಂ ನಿಃಶ್ವಸಂತಂ ಪುನಃ ಪುನಃ ।
ನಿರ್ವಿಣ್ಣಮನಸಂ ದೃಷ್ಟ್ವಾ ಪಾರ್ಥಂ ವ್ಯಾಸೋಽಬ್ರವೀದಿದಮ್ ॥೪॥

ಮನಸ್ಸಂತೋಷವಿಲ್ಲದ, ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತಿರುವ, ಮನಸ್ಸಿನಲ್ಲಿ ವೈರಾಗ್ಯವನ್ನು ತಳೆದಂತೆ ತೋರುತ್ತಿರುವ ಪಾರ್ಥನಿಗೆ ವೇದವ್ಯಾಸರು ಹೀಗೆಂದರು.

ವ್ಯಾಸಃ

ನಖಿಕೇಶದಶಾಕುಂಭವಾರಿಣಾ ಕಿಂ ಸಮುಕ್ಷಿತಃ ॥೫॥

ಅವೀರಜಾನುಗಮನಂ ಬ್ರಾಹ್ಮಣೋ ವಾ ಹತಸ್ತ್ವಯಾ ॥೬॥

ಯುದ್ಧೇ ಪರಾಜಿತೋ ವಾಽಸಿ ಗತಶ್ರೀರಿವ ಲಕ್ಷ್ಯಸೇ ।
ನ ತ್ವಾಂ ಪ್ರಭಿನ್ನಂ ಜಾನಾಮಿ ಕಿಮಿದಂ ಭರತರ್ಷಭ ॥೭॥

ಶ್ರೋತವ್ಯಂ ಚೇನ್ಮಯಾ ಪಾರ್ಥ ಕ್ಷಿಪ್ರಮಾಖ್ಯಾತುಮರ್ಹಸಿ ॥೮॥

ಹೇ ಭರತರ್ಷಭನೇ, ಇದೇನು ನೀನು ಉಗುರು, ಕೂದಲು, ವಸ್ತ್ರದ ತುದಿ, ಗಡಿಗೆಯ ಮುಖ ಇವುಗಳಿಂದ ಸಿಡಿದ ನೀರಿನಿಂದ ಪ್ರೋಕ್ಷಿತನಾಗಿರುವೆಯೇ? ಅಥವಾ ಗರ್ಭಿಣಿ ಸ್ತ್ರೀ, ರಜಸ್ವಲಾ ಸ್ತ್ರೀ ಇವರನ್ನು ಗಮನ ಮಾಡಿರುವೆಯಾ? ಅಥವಾ ಬ್ರಾಹ್ಮಣನು ನಿನ್ನಿಂದ ಹತನಾಗಿರುವನೆ? ಅಥವಾ ಯುದ್ಧದಲ್ಲಿ

ಪರಾಜಿತನಾಗಿರುವೆಯೇ? ಏಕೆಂದರೆ ಸಂಪತ್ತನ್ನು ಕಳೆದುಕೊಂಡಂತೆ ತೋರುತ್ತಿರುವೆ (ಈ ಹಿಂದೆ ಹೇಳಿದ ಕಾರಣಗಳು ಸಂಪತ್ತಿನ ನಾಶಕ್ಕೆ ಕಾರಣವಾಗಿವೆ ಎಂದು ತಿಳಿಯಬೇಕು). ನೀನು ಯುದ್ಧದಲ್ಲಿ ಸೋತಿದ್ದನ್ನು ನಾನೆಂದೂ ತಿಳಿದಿಲ್ಲ. ಹಾಗಾಗಿ ಹೇ ಪಾರ್ಥನೇ, ನಾನು ಕೇಳಬಹುದಾದ ವಿಷಯವಾಗಿದ್ದರೆ ಅದನ್ನು ಬೇಗ ನನಗೆ ಹೇಳು.

ಅರ್ಜುನಃ

ಯಃ ಸ ಮೇಘವಪುಃ ಶ್ರೀಮಾನ್ ಬೃಹತ್ಪಂಕಜಲೋಚನಃ ।
ಸ ಕೃಷ್ಣಃ ಸಹ ರಾಮೇಣ ತ್ಯಕ್ತ್ವಾ ದೇಹಂ ದಿವಂ ಗತಃ ॥೯॥

ಅರ್ಜುನ– ಮೇಘದಂತೆ ಶರೀರವುಳ್ಳ, ಕಾಂತಿಯುಕ್ತನಾದ, ದೊಡ್ಡ ಕಮಲದಂತಹ ಕಣ್ಣುಗಳುಳ್ಳ ಯಾವ ಕೃಷ್ಣನಿದ್ದನೋ ಅವನು ಬಲರಾಮನೊಂದಿಗೆ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಹೊರಟು ಹೋದನು.

ಮೌಸಲೇ ವೃಷ್ಣಿವೀರಾಣಾಂ ವಿನಾಶೋ ಬ್ರಹ್ಮಶಾಪಜಃ ।
ಬಭೂವ ವೀರಾಂತಕರಃ ಪ್ರಭಾಸೇ ರೋಮಹರ್ಷಣಃ ॥೧೦॥

ಬ್ರಹ್ಮಶಾಪದ ನಿಮಿತ್ತದಿಂದ ಉಂಟಾದ ಮುಸಲಗಳಿಂದ ಯದುವೀರರ ವಿನಾಶವಾಯಿತು. ರೋಮಾಂಚಕಾರಿಯಾದ ಈ ವೀರರ ನಾಶವು ಪ್ರಭಾಸದಲ್ಲಿ ನಡೆಯಿತು.

ಏತೇ ಶೂರಾ ಮಹಾತ್ಮಾನಃ ಸಿಂಹದರ್ಪಾ ಮಹಾಬಲಾಃ ।
ಭೋಜವೃಷ್ಣ್ಯಂಧಕಾ ಬ್ರಹ್ಮನ್ನನ್ಯೋನ್ಯಂ ತೈರ್ಹತಂ ಯುಧಿ ॥೧೧॥

ಈ ಭೋಜ-ವೃಷ್ಣ್ಯಂಧಕರು ಶೂರರಾಗಿದ್ದು, ಮಹಾತ್ಮರೂ, ಸಿಂಹದಂತೆ ದರ್ಪವುಳ್ಳವರೂ, ಮಹಾಬಲಿಷ್ಠರೂ ಆಗಿದ್ದರು. ಹೇ ಬ್ರಹ್ಮನ್ ಅವರು ಪರಸ್ಪರ ಯುದ್ಧಮಾಡಿ ಹತರಾದರು.

ಗದಾಪರಿಘಶಕ್ತೀನಾಂ ಸಹಾಃ ಪರಿಘಬಾಹವಃ ।
ತ ಏರಕಾಭಿರ್ನಿಹತಾಃ ಪಶ್ಯ ಕಾಲಸ್ಯ ಪರ್ಯಯಮ್ ॥೧೨॥

ಗದೆ, ಪರಿಘ, ಶಕ್ತ್ಯಾಯುಧ ಇವುಗಳ ಏಟನ್ನೂ ಸಹಿಸಿಕೊಳ್ಳುವ, ಉಕ್ಕಿನ ಒನಕೆಯನ್ನೇ ಕೈಯಲ್ಲಿ ಧರಿಸಿರುವ ಆ ಶೂರರು ಹುಲ್ಲುಗಳಿಂದ ಹೊಡೆದುಕೊಂಡು ಹತರಾದರು. ಕಾಲಚಕ್ರದ ಭ್ರಮಣೆಯನ್ನು ನೋಡಿರಿ.

ಪಂಚ ಪಂಚಶತಂ ತೇಷಾಂ ಸಹಸ್ರಂ ಬಾಹುಶಾಲಿನಾಮ್ ।
ನಿಧನಂ ಸಮನುಪ್ರಾಪ್ತಂ ಸಮಾಸಾದ್ಯೇತರೇತರಮ್ ॥೧೩॥

ಪರಾಕ್ರಮಿಗಳಾದ ಅವರ ಸಂಖ್ಯೆಯು ಐದ್ನೆದು ನೂರು ಸಾವಿರಗಳಷ್ಟಿತ್ತು. ಅವರು ಪರಸ್ಪರ ಹೊಡೆದಾಡಿಕೊಂಡು ಅವರ ಮರಣವು ಪ್ರಾಪ್ತವಾಯಿತು.

ವ್ಯಾಖ್ಯಾನ ವಿಶೇಷ– ನೂರುಸಾವಿರ ಎಂದರೆ ಒಂದು ಲಕ್ಷ. ಪರಸ್ಪರ ಹೊಡೆದಾಡಬೇಕಾದರೆ ಎರಡು ಗುಂಪು ಇರುತ್ತದೆ. ಆ ಒಂದೊಂದು ಗುಂಪಿನಲ್ಲೂ ಐದ್ನೆದು ನೂರು ಜನ ಇದ್ದರು. ಎಂದರೆ ಒಂದು ಗುಂಪಿನಲ್ಲಿ ಐದು ನೂರು ಇನ್ನೊಂದು ಗುಂಪಿನಲ್ಲಿ ಐದು ನೂರು. ಇದು ಸಾವಿರ ಸಂಖ್ಯೆಯಲ್ಲಿತ್ತು ಅಂದರೆ ಒಂದು ಕಡೆ ಐದು ನೂರು ಸಾವಿರ, ಇನ್ನೊಂದು ಕಡೆ ಐದು ನೂರು ಸಾವಿರ. ಒಟ್ಟು ಹತ್ತು ಲಕ್ಷ ಮಂದಿ ಇದ್ದರು – **ಲಕ್ಷಾಲಂಕಾರ.**

ಪುನಃಪುನರ್ನ ಮೃಷ್ಯಾಮಿ ವಿನಾಶಮಮಿತೌಜಸಾಮ್ ।
ಚಿಂತಯಾನೋ ಯದೂನಾಂ ಚ ಕೃಷ್ಣಸ್ಯ ಚ ಯಶಸ್ವಿನಃ ॥೧೪॥

ಅಮಿತವಾದ ತೇಜಸ್ಸುಳ್ಳ ಯದುಗಳ ವಿನಾಶವನ್ನು ಮತ್ತೆ ಮತ್ತೆ ಚಿಂತಿಸಿದರೂ ಸಹಿಸಿಕೊಳ್ಳಲಾಗುತ್ತಿಲ್ಲ. ಅಲ್ಲದೆ ಯಶಸ್ವಿಯಾದ ಶ್ರೀಕೃಷ್ಣನ ವಿನಾಶವನ್ನೂ ತಡೆದುಕೊಳ್ಳಲಾಗುತ್ತಿಲ್ಲ.

ಶೋಷಣಂ ಸಾಗರಸ್ಯೇವ ಮಂದರಸ್ಯೇವ ಚಾಲನಮ್ ।
ನಭಸಃ ಪತನಂ ಚೈವ ಶೈತ್ಯಮಗ್ನೇಸ್ತಥೈವ ಚ ॥೧೫॥

ಅಶ್ರದ್ಧೇಯಮಹಂ ಮನ್ಯೇ ವಿನಾಶಂ ಶಾರ್ಙ್ಗಧನ್ವನಃ ।
ನ ಚೇಹ ಸ್ಥಾತುಮಿಚ್ಛಾಮಿ ಲೋಕೇ ಕೃಷ್ಣವಿನಾಕೃತಃ ॥೧೬॥

ಶಾರ್ಙ್ಗಧನ್ವನಾದ ಶ್ರೀಕೃಷ್ಣನ ನಾಶವನ್ನು ಸಾಗರದ ಶೋಷಣದಂತೆಯೂ, ಮಂದರವನ್ನು ಕಿತ್ತೆಸೆದಂತೆಯೂ, ಆಕಾಶವು ಬಿದ್ದಂತೆಯೂ, ಅಗ್ನಿಯು ತಂಪಾದಂತೆಯೂ ನನಗೆ ನಂಬಲಾಗುತ್ತಿಲ್ಲ. ಕೃಷ್ಣನಿಲ್ಲದ ಈ ಲೋಕದಲ್ಲಿ ನಾನು ಇರಲು ಬಯಸಲಾರೆನು.

ಪರಾಜಿತನಾಗಿರುವೆಯೇ? ಏಕೆಂದರೆ ಸಂಪತ್ತನ್ನು ಕಳೆದುಕೊಂಡಂತೆ ತೋರುತ್ತಿರುವೆ (ಈ ಹಿಂದೆ ಹೇಳಿದ ಕಾರಣಗಳು ಸಂಪತ್ತಿನ ನಾಶಕ್ಕೆ ಕಾರಣವಾಗಿವೆ ಎಂದು ತಿಳಿಯಬೇಕು). ನೀನು ಯುದ್ಧದಲ್ಲಿ ಸೋತಿದ್ದನ್ನು ನಾನೆಂದೂ ತಿಳಿದಿಲ್ಲ. ಹಾಗಾಗಿ ಹೇ ಪಾರ್ಥನೇ, ನಾನು ಕೇಳಬಹುದಾದ ವಿಷಯವಾಗಿದ್ದರೆ ಅದನ್ನು ಬೇಗ ನನಗೆ ಹೇಳು.

ಅರ್ಜುನಃ

ಯಃ ಸ ಮೇಘವಪುಃ ಶ್ರೀಮಾನ್ ಬೃಹತ್ಪಂಕಜಲೋಚನಃ ।
ಸ ಕೃಷ್ಣಃ ಸಹ ರಾಮೇಣ ತ್ಯಕ್ತ್ವಾ ದೇಹಂ ದಿವಂ ಗತಃ ॥೯॥

ಅರ್ಜುನ– ಮೇಘದಂತೆ ಶರೀರವುಳ್ಳ, ಕಾಂತಿಯುಕ್ತನಾದ, ದೊಡ್ಡ ಕಮಲದಂತಹ ಕಣ್ಣುಗಳುಳ್ಳ ಯಾವ ಕೃಷ್ಣನಿದ್ದನೋ ಅವನು ಬಲರಾಮನೊಂದಿಗೆ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಹೊರಟು ಹೋದನು.

ಮೌಸಲೇ ವೃಷ್ಣಿವೀರಾಣಾಂ ವಿನಾಶೋ ಬ್ರಹ್ಮಶಾಪಜಃ ।
ಬಭೂವ ವೀರಾಂತಕರಃ ಪ್ರಭಾಸೇ ರೋಮಹರ್ಷಣಃ ॥೧೦॥

ಬ್ರಹ್ಮಶಾಪದ ನಿಮಿತ್ತದಿಂದ ಉಂಟಾದ ಮುಸಲಗಳಿಂದ ಯದುವೀರರ ವಿನಾಶವಾಯಿತು. ರೋಮಾಂಚಕಾರಿಯಾದ ಈ ವೀರರ ನಾಶವು ಪ್ರಭಾಸದಲ್ಲಿ ನಡೆಯಿತು.

ಏತೇ ಶೂರಾ ಮಹಾತ್ಮಾನಃ ಸಿಂಹದರ್ಪಾ ಮಹಾಬಲಾಃ ।
ಭೋಜವೃಷ್ಣ್ಯಂಧಕಾ ಬ್ರಹ್ಮನ್ನನ್ಯೋನ್ಯಂ ತೈರ್ಹತಂ ಯುಧಿ ॥೧೧॥

ಈ ಭೋಜ-ವೃಷ್ಣ್ಯಂಧಕರು ಶೂರರಾಗಿದ್ದು, ಮಹಾತ್ಮರೂ, ಸಿಂಹದಂತೆ ದರ್ಪವುಳ್ಳವರೂ, ಮಹಾಬಲಿಷ್ಠರೂ ಆಗಿದ್ದರು. ಹೇ ಬ್ರಹ್ಮನ್ ಅವರು ಪರಸ್ಪರ ಯುದ್ಧಮಾಡಿ ಹತರಾದರು.

ಗದಾಪರಿಘಶಕ್ತೀನಾಂ ಸಹಾಃ ಪರಿಘಬಾಹವಃ ।
ತ ಏರಕಾಭಿರ್ನಿಹತಾಃ ಪಶ್ಯ ಕಾಲಸ್ಯ ಪರ್ಯಯಮ್ ॥೧೨॥

ಗದೆ, ಪರಿಘ, ಶಕ್ತ್ಯಾಯುಧ ಇವುಗಳ ಏಟನ್ನೂ ಸಹಿಸಿಕೊಳ್ಳುವ, ಉಕ್ಕಿನ ಒನಕೆಯನ್ನೇ ಕೈಯಲ್ಲಿ ಧರಿಸಿರುವ ಆ ಶೂರರು ಹುಲ್ಲುಗಳಿಂದ ಹೊಡೆದುಕೊಂಡು ಹತರಾದರು. ಕಾಲಚಕ್ರದ ಭ್ರಮಣೆಯನ್ನು ನೋಡಿರಿ.

ಪಂಚ ಪಂಚಶತಂ ತೇಷಾಂ ಸಹಸ್ರಂ ಬಾಹುಶಾಲಿನಾಮ್ ।
ನಿಧನಂ ಸಮನುಪ್ರಾಪ್ತಂ ಸಮಾಸಾದ್ಯೇತರೇತರಮ್ ॥೧೩॥

ಪರಾಕ್ರಮಿಗಳಾದ ಅವರ ಸಂಖ್ಯೆಯು ಐದೈದು ನೂರು ಸಾವಿರಗಳಷ್ಟಿತ್ತು. ಅವರು ಪರಸ್ಪರ ಹೊಡೆದಾಡಿಕೊಂಡು ಅವರ ಮರಣವು ಪ್ರಾಪ್ತವಾಯಿತು.

ವ್ಯಾಖ್ಯಾನ ವಿಶೇಷ– ನೂರುಸಾವಿರ ಎಂದರೆ ಒಂದು ಲಕ್ಷ. ಪರಸ್ಪರ ಹೊಡೆದಾಡಬೇಕಾದರೆ ಎರಡು ಗುಂಪು ಇರುತ್ತದೆ. ಆ ಒಂದೊಂದು ಗುಂಪಿನಲ್ಲೂ ಐದೈದು ನೂರು ಜನ ಇದ್ದರು. ಎಂದರೆ ಒಂದು ಗುಂಪಿನಲ್ಲಿ ಐದು ನೂರು ಇನ್ನೊಂದು ಗುಂಪಿನಲ್ಲಿ ಐದು ನೂರು. ಇದು ಸಾವಿರ ಸಂಖ್ಯೆಯಲ್ಲಿತ್ತು ಅಂದರೆ ಒಂದು ಕಡೆ ಐದು ನೂರು ಸಾವಿರ, ಇನ್ನೊಂದು ಕಡೆ ಐದು ನೂರು ಸಾವಿರ. ಒಟ್ಟು ಹತ್ತು ಲಕ್ಷ ಮಂದಿ ಇದ್ದರು -- **ಲಕ್ಷಾಲಂಕಾರ.**

ಪುನಃಪುನರ್ನ ಮೃಷ್ಯಾಮಿ ವಿನಾಶಮಮಿತೌಜಸಾಮ್ ।
ಚಿಂತಯಾನೋ ಯದೂನಾಂ ಚ ಕೃಷ್ಣಸ್ಯ ಚ ಯಶಸ್ವಿನಃ ॥೧೪॥

ಅಮಿತವಾದ ತೇಜಸ್ಸುಳ್ಳ ಯದುಗಳ ವಿನಾಶವನ್ನು ಮತ್ತೆ ಮತ್ತೆ ಚಿಂತಿಸಿದರೂ ಸಹಿಸಿಕೊಳ್ಳಲಾಗುತ್ತಿಲ್ಲ. ಅಲ್ಲದೆ ಯಶಸ್ವಿಯಾದ ಶ್ರೀಕೃಷ್ಣನ ವಿನಾಶವನ್ನೂ ತಡೆದುಕೊಳ್ಳಲಾಗುತ್ತಿಲ್ಲ.

ಶೋಷಣಂ ಸಾಗರಸ್ಯೇವ ಮಂದರಸ್ಯೇವ ಚಾಲನಮ್ ।
ನಭಸಃ ಪತನಂ ಚೈವ ಶೈತ್ಯಮಗ್ನೇಸ್ತಥೈವ ಚ ॥೧೫॥

ಅಶ್ರದ್ಧೇಯಮಹಂ ಮನ್ಯೇ ವಿನಾಶಂ ಶಾರ್ಙ್ಗಧನ್ವನಃ ।
ನ ಚೇಹ ಸ್ಥಾತುಮಿಚ್ಛಾಮಿ ಲೋಕೇ ಕೃಷ್ಣವಿನಾಕೃತಃ ॥೧೬॥

ಶಾರ್ಙ್ಗಧನ್ವನಾದ ಶ್ರೀಕೃಷ್ಣನ ನಾಶವನ್ನು ಸಾಗರದ ಶೋಷಣದಂತೆಯೂ, ಮಂದರವನ್ನು ಕಿತ್ತೆಸೆದಂತೆಯೂ, ಆಕಾಶವು ಬಿದ್ದಂತೆಯೂ, ಅಗ್ನಿಯು ತಂಪಾದಂತೆಯೂ ನನಗೆ ನಂಬಲಾಗುತ್ತಿಲ್ಲ. ಕೃಷ್ಣನಿಲ್ಲದ ಈ ಲೋಕದಲ್ಲಿ ನಾನು ಇರಲು ಬಯಸಲಾರೆನು.

ಇತಃ ಕಷ್ಟತರಂ ಚಾನ್ಯಚ್ಛೃಣು ತದ್ವೈ ತಪೋಧನ ।
ಮನೋ ಮೇ ದೀರ್ಯತೇ ಯೇನ ಚಿಂತಯಾನಸ್ಯ ವೈ ಮುಹುಃ ॥

ಹೇ ತಪೋಧನನೇ, ಇದಕ್ಕಿಂತಲೂ ಕಷ್ಟಕರವಾದುದು ಇನ್ನೊಂದಿದೆ. ಯಾವುದನ್ನು ಚಿಂತಿಸುವುದರಿಂದ ಮತ್ತೆ ಮತ್ತೆ ನನ್ನ ಮನಸ್ಸು ಒಡೆದು ಹೋಗುವುದೋ ಅದನ್ನು ನೀನು ಕೇಳು.

ಪಶ್ಯತೋ ವೃಷ್ಣಿದಾರಾಶ್ಚ ಮಮ ಬ್ರಹ್ಮನ್ ಸಹಸ್ರಶಃ ।
ಆಭೀರೈರಭಿಭೂಯಾಜೌ ಹೃತಾಃ ಪಂಚನದಾಲಯೈಃ ॥೧೮॥

ಹೇ ಬ್ರಹ್ಮನ್, ನಾನು ನೋಡನೋಡುತ್ತಿದ್ದಂತೆ ಸಾವಿರಾರು ಮಂದಿ ಯಾದವ ಪತ್ನಿಯರು ಪಂಚನದ (ಪಂಜಾಬ್) ಪ್ರದೇಶದಲ್ಲಿ ವಾಸವಾಗಿದ್ದ ಗೊಲ್ಲಜನರಿಂದ ನಮ್ಮೆಲ್ಲರನ್ನೂ ಸೋಲಿಸುವ ಮೂಲಕ ಅಪಹೃತರಾದರು.

ಧನುರಾದಾಯ ತತ್ರಾಹಂ ನಾಶಕಂ ತಸ್ಯ ಪೂರಣೇ ।
ಯಥಾ ಪುರಾ ಚ ಮೇ ವೀರ್ಯಂ ಭುಜಯೋರ್ನ ತಥಾऽಭವತ್ ॥

ಅಲ್ಲಿ ನಾನು ಧನುಸ್ಸನ್ನೆತ್ತಿ ಹೆದೆಯೇರಿಸಲು ಪ್ರಯತ್ನಪಟ್ಟರೂ ಸಮರ್ಥನಾಗಲಿಲ್ಲ. ನನ್ನ ಭುಜಗಳಲ್ಲಿ ಹಿಂದೆ ಯಾವ ಶಕ್ತಿಯಿದ್ದಿತೋ ಆ ಶಕ್ತಿ ಅಲ್ಲಿ ಕೂಡಿಬರಲಿಲ್ಲ.

ಅಸ್ತ್ರಾಣಿ ಮೇ ಪ್ರನಷ್ಟಾನಿ ವಿವಿಧಾನಿ ಮಹಾದ್ಯುತೇ ।
ಶರಾಶ್ಚ ಕ್ಷಯಮಾಪನ್ನಾಃ ಕ್ಷಣೇನೈವ ಸಮಂತತಃ ॥೨೦॥

ಹೇ ಮಹಾದ್ಯುತಿಯೇ, ನನ್ನಲ್ಲಿದ್ದ ನಾನಾ ರೀತಿಯ ಅಸ್ತ್ರಗಳು ಅಲ್ಲಿ ಕಾಣದಾದವು. ಕ್ಷಣದಲ್ಲೇ ನನ್ನೆಲ್ಲ ಬಾಣಗಳೂ ಖಾಲಿಯಾದವು.

ತದ್ಧನುಸ್ತಾನಿ ಚಾಸ್ತ್ರಾಣಿ ಸರಥಸ್ತೇ ಚ ವಾಜಿನಃ ।
ಸರ್ವಮೇಕಪದೇ ಭ್ರಷ್ಟಂ ದಾನಮಶ್ರೋತ್ರಿಯೇ ಯಥಾ ॥೨೧॥

ಅದೇ ಧನುಸ್ಸು, ಅವೇ ಅಸ್ತ್ರಗಳು, ಅಂತೆಯೇ ಇರುವ ರಥ, ಅದೇ ರೀತಿಯ ಕುದುರೆಗಳು ಇದ್ದರೂ ಶ್ರೋತ್ರಿಯನಲ್ಲದವನಿಗೆ ಕೊಟ್ಟ ದಾನದಂತೆ ಎಲ್ಲವೂ ಒಂದೇ ಹೆಜ್ಜೆಯಲ್ಲಿ ವ್ಯರ್ಥವಾದವು.

ಪುರುಷಶ್ಚಾಪ್ರಮೇಯಾತ್ಮಾ ಶಂಖಚಕ್ರಗದಾಧರಃ ।
ಚತುರ್ಭುಜಃ ಪೀತವಾಸಾಃ ಶ್ಯಾಮಃ ಪದ್ಮದಲೇಕ್ಷಣಃ ॥೨೨॥

ಯಶ್ಚ ಯಾತಿ ಪುರಸ್ತಾನ್ಮೇ ರಥಸ್ಯ ಸುಮಹಾದ್ಯುತಿಃ ।
ಪ್ರದಹನ್ ರಿಪುಸೈನ್ಯಾನಿ ನ ಪಶ್ಯಾಮ್ಯಹಮದ್ಯ ತಮ್ ॥೨೩॥

ಸಕಲ ಪ್ರಾಣಿಗಳ ಹೃದಯದಲ್ಲಿರುವ, ಅಪ್ರಮೇಯವಾದ ಸ್ವರೂಪವುಳ್ಳ, ಶಂಖಚಕ್ರಗದೆಗಳನ್ನು ಧರಿಸಿರುವ, ನಾಲ್ಕು ಭುಜಗಳುಳ್ಳ, ಪೀತಾಂಬರಧಾರಿಯಾದ, ಮೇಘಶ್ಯಾಮನಾದ, ಪದ್ಮದಳಗಳಂತೆ ಅಗಲವಾದ ಕಣ್ಣುಗಳುಳ್ಳ ಯಾವ ಶ್ರೀಕೃಷ್ಣನು ಉತ್ತಮವಾದ ಮಹಾಕಾಂತಿಯಿಂದ ಕೂಡಿಕೊಂಡು, ನನ್ನ ರಥದ ಮುಂಭಾಗದಲ್ಲಿದ್ದು, ಶತ್ರುಸೈನ್ಯವನ್ನು ಸುಡುತ್ತಾ ಹೋಗುತ್ತಿದ್ದನೋ ಅವನನ್ನು ನಾನಿಂದು ನೋಡುತ್ತಿಲ್ಲ.

ಯೇನ ಪೂರ್ವಂ ಪ್ರದಗ್ಧಾನಿ ಶತ್ರುಸೈನ್ಯಾನಿ ತೇಜಸಾ ।
ಶರೈರ್ಗಾಂಡೀವನಿರ್ಮುಕ್ತೈರಹಂ ಪಶ್ಚಾದಶಾತಯಮ್ ॥೨೪॥

ತಮಪಶ್ಯನ್ ವಿಮುಕ್ತೋಸ್ಮಿ ಘೂರ್ಣಾಮಿವ ಚ ಸತ್ತಮ ।
ಪರಿನಿರ್ವಿಣ್ಣಚೇತಾಶ್ಚ ಶಾಂತಿಂ ನೋಪಲಭೇಽಪಿ ಚ ॥೨೫॥

ಯಾವ ಶ್ರೀಕೃಷ್ಣನ ತೇಜಸ್ಸಿನಿಂದ ಶತ್ರುಸೈನ್ಯವು ಮೊದಲು ದಗ್ಧವಾಗಿದ್ದು ಅನಂತರ ನಾನು ಗಾಂಡೀವದಿಂದ ಬಿಡಲ್ಪಟ್ಟ ಬಾಣಗಳಿಂದ ಬೀಳಿಸಿದ್ದೆನೋ ಅವನನ್ನು ನೋಡದೆಯೂ ನಾನಿಂದು ಬದುಕಿ ಉಳಿದಿದ್ದೇನೆ. ಹೇ ಸಜ್ಜನೋತ್ತಮನೇ, ಎಲ್ಲ ರೀತಿಯಿಂದ ವ್ಯಾಕುಲಗೊಂಡ ಮನಸ್ಸುಳ್ಳವನಾಗಿ ಸುಮ್ಮನೆ ಪರಿಭ್ರಮಿಸುತ್ತಿದ್ದೇನೆ. ಇಷ್ಟಾದರೂ ಮನಶ್ಶಾಂತಿಯನ್ನು ಪಡೆಯಲಾಗುತ್ತಿಲ್ಲ.

ದೇವಕೀನಂದನಂ ದೇವಂ ವಾಸುದೇವಮಜಂ ಪ್ರಭುಮ್ ।
ವಿನಾ ಜನಾರ್ದನಂ ವೀರಂ ನಾಹಂ ಜೀವಿತುಮುತ್ಸಹೇ ॥೨೬॥

ದೇವಕಿಯ ಮಗನಾದ, ಕ್ರೀಡಾದಿಗುಣವಿಶಿಷ್ಟನಾದ, ವಾಸುದೇವ ಎಂದು ಕರೆಸಿಕೊಳ್ಳುವ, ಹುಟ್ಟಿಲ್ಲದ, ಸಮರ್ಥನಾದ, ವೀರನಾದ ಜನಾರ್ದನನನ್ನು ಬಿಟ್ಟು ನಾನು ಜೀವಿಸಲು ಬಯಸುತ್ತಿಲ್ಲ.

ಶ್ರುತ್ವೈವ ಹಿ ಗತಂ ವಿಷ್ಣುಂ ಮಮಾಪಿ ಮುಮುಹುರ್ದಿಶಃ ।
ಪ್ರನಷ್ಟಜ್ಞಾತಿವೀರ್ಯಸ್ಯ ಶೂನ್ಯಸ್ಯ ಪರಿಧಾವತಃ ॥೨೭॥

ಬಂಧುಗಳ ಬಲವನ್ನು ಕಳೆದುಕೊಂಡು ಶೂನ್ಯನಾಗಿ ಓಡಾಡುತ್ತಿರುವ ನನಗೂ ಕೂಡ ವಿಷ್ಣುವು ಪರಲೋಕಕ್ಕೆ ಹೋದನೆಂದು ಕೇಳಿಯೇ ದಿಕ್ಕುಗಳು ತೋಚದಂತಾದವು.

ಉಪದೇಷ್ಟುಂ ಮಮ ಶ್ರೇಯೋ ಭವಾನರ್ಹತಿ ಸತ್ತಮ ॥೨೮॥

ಹೇ ಸಜ್ಜನಶ್ರೇಷ್ಠನೇ, ನನಗೆ ಶ್ರೇಯೋಮಾರ್ಗವನ್ನು ತಾವೇ ಉಪದೇಶಿಸಬೇಕು.

ವ್ಯಾಸಃ

ಬ್ರಹ್ಮಶಾಪವಿನಿರ್ದಗ್ಧಾ ವೃಷ್ಣ್ಯಂಧಕಮಹಾರಥಾಃ ।
ವಿನಷ್ಟಾಃ ಕುರುಶಾರ್ದೂಲ ನ ತಾನ್ ಶೋಚಿತುಮರ್ಹಸಿ ॥೨೯॥

ವ್ಯಾಸರು– ಹೇ ಕುರುಶ್ರೇಷ್ಠನೇ, ವೃಷ್ಣಿ ಮತ್ತು ಅಂಧಕ ವಂಶದ ಮಹಾರಥರು ಬ್ರಹ್ಮಶಾಪದಿಂದ ಭಸ್ಮೀಭೂತರಾಗಿ ಮರಣ ಹೊಂದಿದರು. ಅವರ ಬಗ್ಗೆ ಶೋಚಿಸುವ ಅಗತ್ಯವಿಲ್ಲ.

ಭವಿತವ್ಯಂ ತಥಾ ತಚ್ಚ ದಿಷ್ಟಮೇತನ್ಮಹಾತ್ಮನಾಮ್ ।
ಉಪೇಕ್ಷಿತಂ ಚ ಕೃಷ್ಣೇನ ಶಕ್ತೇನಾಪಿ ವ್ಯಪೋಹಿತುಮ್ ॥೩೦॥

ಆ ಮಹಾತ್ಮರಿಗೆ ಹೀಗಾಗಬೇಕೆಂದು ದೈವಸಂಕಲ್ಪವಾಗಿತ್ತು . ಅದು ಹಾಗೆಯೇ ಆಯಿತು. ಇದನ್ನು ತಡೆಯಲು ಸಮರ್ಥನಾದರೂ ಕೃಷ್ಣನು ತಡೆಯದೆ ಉಪೇಕ್ಷಿಸಿದನು.

ತ್ರೈಲೋಕ್ಯಮಪಿ ಗೋವಿಂದಃ ಕೃತ್ಸ್ನಂ ಸ್ಥಾವರಜಂಗಮಮ್ ।
ಪ್ರಸಹೇದನ್ಯಥಾ ಕರ್ತುಂ ಕುತಃ ಶಾಪಂ ಮಹಾತ್ಮನಾಮ್ ॥೩೧॥

ಗೋವಿಂದನಾದ ಅವನು ಜೀವ-ಜಡಾತ್ಮಕವಾದ ಇಡೀ ಮೂರುಲೋಕವನ್ನೂ ಬದಲಾಯಿಸಲು ಸಮರ್ಥನಾಗಿದ್ದಾನೆ. ಮಹಾತ್ಮರ ಶಾಪವು ಅವನಿಗೆ ಹೇಗೆ ಅಡ್ಡಿಯಾದೀತು?

ರಥಸ್ಯ ಪುರತೋ ಯಾತಿ ಶಂಖಚಕ್ರಗದಾಧರಃ ।
ತವ ಸ್ನೇಹಾತ್ ಪುರಾಣರ್ಷಿರ್ವಾಸುದೇವಶ್ಚತುರ್ಭುಜಃ ॥೩೨॥

ಶಂಖ-ಚಕ್ರ-ಗದಾಧರನಾದ, ಪುರಾಣಪುರುಷನಾದ, ಚತುರ್ಭುಜನಾದ ವಾಸುದೇವನು ನಿನ್ನ ಮೇಲಿನ ಸ್ನೇಹದಿಂದಷ್ಟೆ ರಥದ ಮುಂಭಾಗದಲ್ಲಿ ಹೋಗುತ್ತಿದ್ದನು.

ಕೃತ್ವಾ ಭಾರಾವತರಣಂ ಪೃಥಿವ್ಯಾಃ ಪೃಥುಲೋಚನಃ ।
ಮೋಕ್ಷಯಿತ್ವಾ ತನುಂ ಪ್ರಾಪ್ತಃ ಕೃಷ್ಣಃ ಸ್ವಸ್ಥಾನಮುತ್ತಮಮ್ ॥೩೩॥

ವಿಸ್ತಾರವಾದ ಕಣ್ಣುಗಳುಳ್ಳ ಆ ಕೃಷ್ಣನು ಭೂಭಾರಹರಣವನ್ನು ಮಾಡಿ, ಶರೀರವನ್ನು ಬಿಡುವ ಮೂಲಕ ತನ್ನ ಉತ್ತಮವಾದ ಸ್ಥಾನಕ್ಕೆ ತೆರಳಿದ್ದಾನೆ.

ತ್ವಯಾऽಪೀಹ ಮಹತ್ಕರ್ಮ ದೇವಾನಾಂ ಪುರುಷರ್ಷಭ ।
ಕೃತಂ ಭೀಮಸಹಾಯೇನ ಯಮಾಭ್ಯಾಂ ಚ ಮಹಾಭುಜ ॥೩೪॥

ಹೇ ಮಹಾಭುಜನಾದ ಪುರುಷಶ್ರೇಷ್ಠನೇ, ಭೀಮನ ಸಹಕಾರವುಳ್ಳ ನಿನ್ನಿಂದಲೂ ಮತ್ತು ಅವಳಿ ಮಕ್ಕಳಾದ ನಕುಲ-ಸಹದೇವರಿಂದಲೂ ದೇವತೆಗಳ ದೊಡ್ಡ ಕೆಲಸವು ನಡೆಸಲ್ಪಟ್ಟಿದೆ.

ಕೃತಕೃತ್ಯಾಂಶ್ಚ ವೋ ಮನ್ಯೇ ಸಂಸಿದ್ಧಾನ್ ಕುರುಪುಂಗವ ।
ಗಮನಂ ಪ್ರಾಪ್ತಕಾಲಂ ವ ಇದಂ ಶ್ರೇಯಸ್ಕರಂ ವಿಭೋ ॥೩೫॥

ಹೇ ಕುರುಪುಂಗವನೇ, ನೀವೆಲ್ಲರೂ ನಡೆಸಬೇಕಾದ ಎಲ್ಲವನ್ನೂ ಸಿದ್ಧಿಸಿಕೊಂಡು ಕೃತಕೃತ್ಯರಾಗಿರುವಿರಿ ಎಂದು ಭಾವಿಸುತ್ತೇನೆ. ಹೇ ವಿಭುವೇ, ನಿಮಗೂ ಗಮನ ಕಾಲವು ಪ್ರಾಪ್ತವಾಗಿದೆ. ಇದರಿಂದ ಶ್ರೇಯಸ್ಸಾಗುವುದು.

ಬಲಂ ಬುದ್ಧಿಶ್ಚ ತೇಜಶ್ಚ ಪ್ರತಿಪತ್ತಿಶ್ಚ ಭಾರತ ।
ಭವಂತಿ ಭವಕಾಲೇಷು ವಿಪದ್ಯಂತೇ ವಿಪರ್ಯಯೇ ॥೩೬॥

ಹೇ ಭಾರತನೇ, ಬಲವೂ, ಬುದ್ಧಿಯೂ, ತೇಜಸ್ಸೂ, ಕಾರ್ಯಾಕಾರ್ಯಗಳ ತಿಳುವಳಿಕೆಯೂ ಅಭಿವೃದ್ಧಿಯ ಕಾಲದಲ್ಲಿ ಒದಗಿಬರುತ್ತದೆ. ಅವನತಿಯ ಕಾಲ ಬಂದಾಗ ಎಲ್ಲವೂ ನಶಿಸಿಹೋಗುವುದು.

ಕಾಲಮೂಲಮಿದಂ ಸರ್ವಂ ಜಗದ್ಬೀಜಂ ಧನಂಜಯ ।
ಕಾಲ ಏವ ಸಮಾದತ್ತೇ ಪುನರೇವ ಯದೃಚ್ಛಯಾ ॥೩೭॥

ಹೇ ಧನಂಜಯನೇ, ಈ ಇಡೀ ಜಗತ್ತಿಗೂ ಮೂಲಕಾರಣವಾದುದು ಕಾಲವೇ ಆಗಿದೆ. ಮತ್ತೆ ನಾಶಕಾಲ ಬಂದಾಗ ಆಕಸ್ಮಿಕವಾಗಿ ಕಾಲವೇ ಎಲ್ಲವನ್ನೂ ಸ್ವೀಕರಿಸುವುದು.

ಸ ಏವ ಬಲವಾನ್ ಭೂತ್ವಾ ಪುನರ್ಭವತಿ ದುರ್ಬಲಃ ।
ಸ ಏವೇಶಶ್ಚ ಭೂತ್ವೇಹ ಪರೈರಾಜ್ಞಾಪ್ಯತೇ ಪುನಃ ॥೩೮॥

ಒಬ್ಬನೇ ವ್ಯಕ್ತಿ ಒಂದು ಕಾಲದಲ್ಲಿ ಬಲಿಷ್ಠನಾಗಿದ್ದು ಇನ್ನೊಮ್ಮೆ ದುರ್ಬಲನಾಗುವನು. ಅವನೇ ಒಂದುಕಾಲದಲ್ಲಿ ಇಲ್ಲಿ ಒಡೆಯನಾಗಿದ್ದು ಇನ್ನೊಮ್ಮೆ ಇನ್ನೊಬ್ಬರ ಆಜ್ಞಾಪಾಲಕ ಆಗುತ್ತಾನೆ (ಇವೆಲ್ಲವೂ ಕಾಲಮಹಿಮೆಯಿಂದಲೇ).

ಕೃತಕೃತ್ಯಾನಿ ಚಾಸ್ತ್ರಾಣಿ ಗತಾನ್ಯದ್ಯ ಯಥಾಗತಮ್ ।
ಪುನರೇಷ್ಯಂತಿ ತೇ ಹಸ್ತಂ ಯದಾ ಕಾಲೋ ಭವಿಷ್ಯತಿ ॥೩೯॥

ನಿನ್ನ ಬಳಿ ಇದ್ದ ಎಲ್ಲ ಅಸ್ತ್ರಗಳೂ ಇಂದು ಕೃತಕೃತ್ಯವಾಗಿ ಎಲ್ಲಿಂದ ಬಂದಿವೆಯೋ ಅಲ್ಲೇ ಹೊರಟು ಹೋದವು. ಯಾವಾಗ ಕಾಲವು ಒದಗಿಬರುವುದೋ ಆಗ ನಿನ್ನ ಕೈಗೆ ಮತ್ತೆ ಬಂದು ಸೇರುವವು.

ಕಾಲೋ ಗಂತುಂ ಗತಿಂ ಮುಖ್ಯಾಂ ಭವತಾಮಪಿ ಭಾರತ ।
ಏತಚ್ಛ್ರೇಯೋ ಹಿ ವೋ ಮನ್ಯೇ ಪರಮಂ ಭರತರ್ಷಭ ॥೪೦॥

ಹೇ ಭಾರತನೇ, ನಿಮಗೂ ಕೂಡ ಉತ್ತಮ ಗತಿಯನ್ನು ಹೊಂದಲು ಇದು ಮುಖ್ಯಕಾಲವಾಗಿದೆ. ಹೇ ಭರತರ್ಷಭನೇ, ಪರಲೋಕಕ್ಕೆ ತೆರಳುವುದೇ ನಿಮಗೆ ಪರಮಶ್ರೇಯಸ್ಸು ಎಂದು ತಿಳಿಯುತ್ತೇನೆ.

ವೈಶಂಪಾಯನಃ

ಏತದ್ ವಚನಮಾಜ್ಞಾಯ ವ್ಯಾಸಸ್ಯಾಮಿತತೇಜಸಃ ।
ಅನುಜ್ಞಾತೋ ಯಯೌ ಪಾರ್ಥೋ ನಗರಂ ನಾಗಸಾಹ್ವಯಮ್ ॥೪೧॥

ವೈಶಂಪಾಯನ– ಅಮಿತವಾದ ಕಾಂತಿಯುಳ್ಳ ವೇದವ್ಯಾಸರ ಈ ಮಾತಿನ ಅಭಿಪ್ರಾಯವನ್ನು ತಿಳಿದು, ಪಾರ್ಥನು ಅವರ ಅನುಜ್ಞೆಯನ್ನು ಪಡೆದು, ಹಸ್ತಿನಾಪುರ ನಗರಕ್ಕೆ ಹೊರಟು ಬಂದನು.

ಪ್ರವಿಶ್ಯ ಚ ಪುರೀಂ ವೀರಃ ಸಮಾಸಾದ್ಯ ಯುಧಿಷ್ಠಿರಮ್ ।
ಆಚಷ್ಟ ತದ್ ಯಥಾವೃತ್ತಂ ವೃಷ್ಣ್ಯಂಧಕಕುಲಂ ಪ್ರತಿ ॥೪೨॥

ವೀರನಾದ ಪಾರ್ಥನು ಪಟ್ಟಣವನ್ನು ಪ್ರವೇಶಿಸಿ, ಯುಧಿಷ್ಠಿರನ ಬಳಿ ಸಾಗಿ ಬಂದು, ವೃಷ್ಣಿಮತ್ತು ಅಂಧಕರ ಕುಲದ ವಿಷಯದಲ್ಲಿ ಏನೆಲ್ಲ ನಡೆದಿದೆಯೋ ಅದನ್ನು ಯಥಾವತ್ತಾಗಿ ವಿವರಿಸಿದನು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮೌಸಲಪರ್ವಣಿ ಅರ್ಜುನನಗರಪ್ರವೇಶಕಥನಂ ನಾಮ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮೌಸಲಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಮೌಸಲಪರ್ವ ॥

★ ★ ★ ★ ★

ಮಹಾಪ್ರಸ್ಥಾನಿಕಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ಸಂತ್ಯಜ್ಯ ರಾಜಚಿಹ್ನಾನಿ ವೈಷ್ಣವಂ ಯೋಗಮಾಸ್ಥಿತಾಃ ।
ವೀರಾಧ್ವಾನಂ ಯಯುಃ ಸರ್ವೇ ಕೃಷ್ಣಯಾ ಸಹ ಪಾಂಡವಾಃ ॥

ರಾಜಚಿಹ್ನೆಗಳನ್ನು ಬಿಟ್ಟು, ಹರಿಧ್ಯಾನಯೋಗನಿಷ್ಠರಾಗಿ ಪಾಂಡವರು ದ್ರೌಪದಿಯೊಂದಿಗೆ ಯೋಗಿಗಳಿಗೆ ಯೋಗ್ಯವಾದ ಈಶಾನ್ಯ ದಿಕ್ಕಿನ ಮಾರ್ಗದಲ್ಲಿ ಮಹಾಪ್ರಸ್ಥಾನ ಕೈಗೊಂಡರು.

ಪ್ರಾಗುದೀಚೀಂ ದಿಶಂ ಪೂರ್ವಂ ಯಯುಸ್ತತ್ರಾರ್ಜುನೋ ಧನುಃ ।
ನಾತ್ಯಜಲ್ಲೋಭತಸ್ತಂ ತು ಸಮುದ್ರಮುಪ ಪಾವಕಃ ।
ದೃಷ್ಟ್ವಾ ಯಯಾಚೇ ರಾಜಾನಂ ತದುಕ್ತಃ ಪ್ರಾಸ್ಯದಂಬುಧೌ ॥

ಮೊದಲಿಗೆ ಈಶಾನ್ಯ ದಿಕ್ಕಿನಲ್ಲಿ ಪ್ರಯಾಣ ಮಾಡಿದರು. ಅವರಲ್ಲಿ ಅರ್ಜುನನು ಲೋಭದಿಂದ ಗಾಂಡೀವವನ್ನು ತ್ಯಜಿಸಲಿಲ್ಲ. ಸಮುದ್ರ ತೀರದಲ್ಲಿ ಅಗ್ನಿ ಅದನ್ನು ನೋಡಿ ಧರ್ಮರಾಜನಲ್ಲಿ ಬೇಡಿದನು. ಧರ್ಮರಾಜನ ಮಾತಿನಂತೆ ಅರ್ಜುನನು ಅದನ್ನು ಸಮುದ್ರದಲ್ಲಿ ಹಾಕಿದನು.

ಪ್ರಾತಿಭಾವ್ಯಂ ತು ವರುಣೇ ನಿಸ್ತೀರ್ಯಾಗ್ನಿರದೃಶ್ಯತಾಮ್ ।
ಯಯೌ ತೇಽಪಿ ಯಯುಃ ಕ್ಷಿಪ್ರಂ ಪ್ಲವಂತಃ ಸಪ್ತ ವಾರಿಧೀನ್ ॥

ಅಹೋಭಿಃ ಸಪ್ತಭಿರ್ಯೋಗಂ ಸಮಾರೂಢಾಃ ಪ್ರದಕ್ಷಿಣಮ್ ।
ಕೃತ್ವಾ ಕ್ಷಿತಿಮಸಜ್ಜಂತಃ ಆಸೇದುರ್ಗಂಧಮಾದನಮ್ ॥

ಅಗ್ನಿ ಹೀಗೆ ವರುಣನಲ್ಲಿ ಋಣವನ್ನು ಪರಿಹರಿಸಿಕೊಂಡು ಅದೃಶ್ಯನಾದನು. ಪಾಂಡವರು ಯೋಗಾರೂಢರಾಗಿ ಬೇಗನೆ ಏಳು ದಿನಗಳಲ್ಲಿ ಏಳು ಸಮುದ್ರಗಳನ್ನು ಯೋಗಬಲದಿಂದ ಹಾರುತ್ತಲೆ ಹೋದರು. ಎಲ್ಲಿಯೂ ವಿಶ್ರಮಿಸದೆ ಭೂಪ್ರದಕ್ಷಿಣೆ ಮಾಡಿ ಗಂಧಮಾದನ ಪರ್ವತಕ್ಕೆ ಬಂದರು.

★ ★ ★ ★ ★

ಒಂದನೆಯ ಅಧ್ಯಾಯ

ಸಹೋದರರು ಹಾಗೂ ದ್ರೌಪದಿಯೊಂದಿಗೆ ಸ್ವರ್ಗಕ್ಕೆ ತೆರಳಲಿರುವ ಯುಧಿಷ್ಠಿರನು ಯುಯುತ್ಸುವಿನಲ್ಲಿ ರಾಜ್ಯದ ಹೊಣೆಯನ್ನು ಒಪ್ಪಿಸಿ, ಪರೀಕ್ಷಿತನನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುವುದು. ಅನಂತರ ಬಹುಪ್ರಯಾಸದಿಂದ ಪೌರರ ಅನುಮತಿಯನ್ನು ಸ್ವೀಕರಿಸುವುದು.

ಜನಮೇಜಯಃ

ಏವಂ ವೃಷ್ಣ್ಯಂಧಕಕುಲೇ ಶ್ರುತ್ವಾ ಮೌಸಲಮಾಹವಮ್ ।
ಪಾಂಡವಾಃ ಕಿಮಕುರ್ವಂತ ತಥಾ ಕೃಷ್ಣೇ ದಿವಂ ಗತೇ ॥೧॥

ಜನಮೇಜಯ– ವೃಷ್ಣ್ಯಂಧಕರ ಕುಲದಲ್ಲಿ ನಡೆದ ಮುಸಲಕ್ಕೆ (ಒನಕೆಗೆ) ಸಂಬಂಧಿಸಿದ ಯುದ್ಧವನ್ನು ಕೇಳಿ, ಹಾಗೆಯೇ ಕೃಷ್ಣನು ಪರಲೋಕಕ್ಕೆ ತೆರಳಿದನೆಂಬುದನ್ನು ಕೇಳಿ ಪಾಂಡವರು ಏನು ಮಾಡಿದರು?

ವೈಶಂಪಾಯನಃ

ಶ್ರುತ್ವೈವಂ ಕೌರವೋ ರಾಜಾ ವೃಷ್ಣೀನಾಂ ಕದನಂ ಮಹತ್ ।
ಪ್ರಸ್ಥಾನೇ ಮತಿಮಾಧಾಯ ವಾಕ್ಯಮರ್ಜುನಮಬ್ರವೀತ್ ॥೨॥

ವೈಶಂಪಾಯನ– ಹೀಗೆ ಯದುಗಳ ಮಧ್ಯೆ ನಡೆದ ಮಹಾಸಂಗ್ರಾಮವನ್ನು ಕೇಳಿದ ಕುರುವಂಶದ ರಾಜನಾದ ಯುಧಿಷ್ಠಿರನು ತಾವೂ ರಾಜ್ಯವನ್ನು ಬಿಟ್ಟು ತೆರಳಬೇಕೆಂದು ಮನಸ್ಸಿನಲ್ಲಿ ದೃಢಪಡಿಸಿಕೊಂಡು ಅರ್ಜುನನನ್ನು ಕುರಿತು ಹೀಗೆಂದನು.

ಕಾಲಃ ಪಚತಿ ಭೂತಾನಿ ಸರ್ವಾಣ್ಯೇವ ಮಹಾಮತೇ ।
ಕಾಲಪಾಶಮಹಂ ಮನ್ಯೇ ತ್ವಮಪಿ ದ್ರಷ್ಟುಮರ್ಹಸಿ ॥೩॥

ಹೇ ಮಹಾಮತಿಯೇ, ಕಾಲವೇ ಎಲ್ಲ ಭೂತಗಳನ್ನೂ ಯೋಗ್ಯರೀತಿಯಲ್ಲಿ ಪಕ್ವಗೊಳಿಸುವುದು. ಈ ಕಾಲಪಾಶವನ್ನು (ಮರಣವನ್ನು) ನಾನು ಒಪ್ಪಿಕೊಳ್ಳುತ್ತಿದ್ದೇನೆ. ನೀನೂ ಈ ಬಗ್ಗೆ ಆಲೋಚಿಸಿ ನೋಡು.

ಇತ್ಯುಕ್ತಃ ಸ ತು ಕೌಂತೇಯಃ ಕಾಲಃ ಕಾಲ ಇತಿ ಬ್ರುವನ್ ।
ಅನ್ವಪದ್ಯತ ತದ್ವಾಕ್ಯಂ ಭ್ರಾತುರ್ಜ್ಯೇಷ್ಠಸ್ಯ ಧೀಮತಃ ॥೪॥

ಯುಧಿಷ್ಠಿರನು ಹೀಗೆ ಹೇಳಿದಾಗ, ಕುಂತೀಪುತ್ರನಾದ ಅರ್ಜುನನು ಕಾಲ ಕಾಲ ಎಂದು ಹೇಳುತ್ತಾ, ಧೀಮಂತನಾದ ಹಿರಿಯಣ್ಣನ ಆ ವಾಕ್ಯವನ್ನು ಅನುಮೋದಿಸಿದನು.

ಅರ್ಜುನಸ್ಯ ಮತಂ ಜ್ಞಾತ್ವಾ ಭೀಮಸೇನೋ ಯಮೌ ತಥಾ ।
ಅನ್ವಪದ್ಯಂತ ತದ್ವಾಕ್ಯಂ ಯದುಕ್ತಂ ಸವ್ಯಸಾಚಿನಾ ॥೫॥

ತತೋ ಯುಯುತ್ಸುಮಾನಾಯ್ಯ ಪ್ರವ್ರಜನ್ ಧರ್ಮಕಾಮ್ಯಯಾ ।
ರಾಜ್ಯಂ ಪರಿದದೌ ಸರ್ವಂ ವೈಶ್ಯಾಪುತ್ರೇ ಯುಧಿಷ್ಠಿರಃ ॥೬॥

ಅರ್ಜುನನ ಅಭಿಪ್ರಾಯವನ್ನು ತಿಳಿದ ಭೀಮಸೇನ ಹಾಗೂ ಆ ಅವಳಿಗಳು ಸವ್ಯಸಾಚಿ (ಅರ್ಜುನ) ಏನೆಂದನೋ ಆ ವಾಕ್ಯವನ್ನು ಅನುಮೋದಿಸಿದರು. ಅನಂತರ ಯುಧಿಷ್ಠಿರನು ಯುಯುತ್ಸುವನ್ನು ಕರೆಯಿಸಿ, ತಾನು ಹೊರಟು ನಿಂತವನಾಗಿ ಧರ್ಮವನ್ನು ಮುನ್ನಡೆಸುವ ಇಚ್ಛೆಯಿಂದ ಇಡೀ ರಾಜ್ಯವನ್ನು ಆ ವೇಶ್ಯೆಯ ಮಗನಾದ ಅವನಲ್ಲಿ ಒಪ್ಪಿಸಿದನು.

ಅಭಿಷಿಚ್ಯ ಸ್ವರಾಜ್ಯೇ ಚ ರಾಜಾನಂ ಚ ಪರಿಕ್ಷಿತಮ್ ।
ದುಃಖಾರ್ತಶ್ಚಾಬ್ರವೀದ್ ರಾಜಾ ಸುಭದ್ರಾಂ ಪಾಂಡವಾಗ್ರಜಃ ॥೭॥

ರಾಜನಾದ ಯುಧಿಷ್ಠಿರನು ತನ್ನ ರಾಜ್ಯದಲ್ಲಿ ಪರೀಕ್ಷಿತನನ್ನು ರಾಜನನ್ನಾಗಿ ಪಟ್ಟಾಭಿಷೇಕ ಮಾಡಿ, ಪಾಂಡವಾಗ್ರಜನಾದ ಅವನು ಸುಭದ್ರೆಯನ್ನು ನೋಡುತ್ತಾ ದುಃಖಾರ್ತನಾಗಿ ಹೀಗೆಂದನು.

ಏಷ ಪುತ್ರಸ್ಯ ಪುತ್ರಸ್ತೇ ಕುರುರಾಜೋ ಭವಿಷ್ಯತಿ ।
ಯದೂನಾಂ ಪರಿಶೇಷಶ್ಚ ವಜ್ರೋ ರಾಜಾ ಕೃತಶ್ಚ ಹ ॥೮೪॥

ಈ ನಿನ್ನ ಮಗನ ಮಗನೇ ಕುರುರಾಜನಾಗಿ ಮುಂದುವರೆಯುವನು. ಯದುಗಳಿಗೆ ಅವರಲ್ಲಿ ಉಳಿದ ವಜ್ರನು ಈ ಮೊದಲೇ ರಾಜನಾಗಿರುವನಷ್ಟೆ?

ಅಭಿಷಿಚ್ಯ ಹಸ್ತಿನಪುರೇ ಶಕ್ರಪ್ರಸ್ಥೇ ಚ ಯಾದವಃ ।
ವಜ್ರೋ ರಾಜಾ ತ್ವಯಾ ರಕ್ಷ್ಯೋ ಮಾ ಚಾಧರ್ಮೇ ಮನಃ ಕೃಥಾಃ ॥೯॥

ಹಸ್ತಿನಪುರಕ್ಕೆ ಸಮೀಪದಲ್ಲೇ ಇರುವ ಶಕ್ರಪ್ರಸ್ಥದಲ್ಲಿ (ಇಂದ್ರಪ್ರಸ್ಥ) ಯಾದವ ರಾಜನಾದ ವಜ್ರನು ರಾಜನಾಗಿರುವನೆಂದು ಪಟ್ಟಾಭಿಷೇಕ ಮಾಡಿ ಅವನು ನಿನ್ನಿಂದ ರಕ್ಷಿತನಾಗಬೇಕು. ಈ ವಿಷಯದಲ್ಲಿ ಧರ್ಮವಿರುದ್ಧವಾದ ಮನಸ್ಸನ್ನು ಮಾಡದಿರು.

ಇತ್ಯುಕ್ತ್ವಾ ಧರ್ಮರಾಜಃ ಸ ವಾಸುದೇವಸ್ಯ ಧೀಮತಃ ।
ಮಾತುಲಸ್ಯ ಚ ವೃದ್ಧಸ್ಯ ರಾಮಾದೀನಾಂ ತಥೈವ ಚ ॥೧೦॥

ಭ್ರಾತೃಭಿಃ ಸಹ ಧರ್ಮಾತ್ಮಾ ಕೃತ್ವೋದಕಮತಂದ್ರಿತಃ ।
ಶ್ರಾದ್ಧಾನ್ಯುದ್ದಿಶ್ಯ ಸರ್ವೇಷಾಂ ಚಕಾರ ವಿಧಿವತ್ ತದಾ ॥೧೧॥

ಇಷ್ಟು ಹೇಳಿ ಆ ಧರ್ಮರಾಜನು ಧೀಮಂತನಾದ ವಾಸುದೇವನಿಗೂ, ವೃದ್ಧನಾದ ಮಾವನಿಗೂ, ಹಾಗೆಯೇ ಬಲರಾಮಾದಿಗಳಿಗೂ ತನ್ನ ಸಹೋದರರೊಂದಿಗೆ ಜಲಾಂಜಲಿಗಳನ್ನು ನೀಡಿ, ಧರ್ಮಾತ್ಮನಾದ ಅವನು ಉದಾಸೀನವಿಲ್ಲದೆ ವಿಧಿವತ್ತಾಗಿ ಎಲ್ಲರ ಶ್ರಾದ್ಧಗಳನ್ನು ಉದ್ದೇಶಿಸಿ, ಮಾಡಬೇಕಾದ ಕ್ರಿಯೆಗಳನ್ನು ನಡೆಸಿದನು.

ದ್ವೈಪಾಯನಂ ನಾರದಂ ಚ ಮಾರ್ಕಂಡೇಯಂ ತಪೋಧನಮ್ ।
ಭಾರದ್ವಾಜಂ ಯಾಜ್ಞವಲ್ಕ್ಯಂ ಹರಿಮುದ್ದಿಶ್ಯ ಯತ್ನವಾನ್ ॥೧೨॥

ಅಭೋಜಯತ್ತಾಸ್ತದು ಭೋಜ್ಯಂ ಕೀರ್ತಯಿತ್ವಾ ಚ ಶಾರ್ಙ್ಗಿಣಮ್ ॥

ಪ್ರಯತ್ನಪೂರ್ವಕವಾಗಿ ಶ್ರೀಕೃಷ್ಣನ ಉದ್ದೇಶದಿಂದ ವೇದವ್ಯಾಸರನ್ನೂ, ನಾರದರನ್ನೂ, ತಪೋಧನರಾದ ಮಾರ್ಕಂಡೇಯರನ್ನೂ, ಭಾರದ್ವಾಜರನ್ನೂ, ಯಾಜ್ಞವಲ್ಕ್ಯರನ್ನೂ ಆಮಂತ್ರಿಸಿ, ಕೃಷ್ಣನ ಗುಣಗಳ ಕೀರ್ತನೆಯನ್ನೂ ನಡೆಸುತ್ತಾ ಮಧುರವಾದ ಉತ್ತಮ ಭಕ್ಷ್ಯಗಳನ್ನು ಉಣಬಡಿಸಿದನು.

ದದೌ ರತ್ನಾನಿ ವಾಸಾಂಸಿ ಗ್ರಾಮಾನಶ್ವಾನ್ ರಥಾಂಸ್ತಥಾ ।
ಸ್ತ್ರಿಯಶ್ಚ ದ್ವಿಜಮುಖ್ಯೇಭ್ಯಸ್ತದಾ ಶತಸಹಸ್ರಶಃ ॥೧೪॥

ಅದೇ ಸಮಯದಲ್ಲಿ ನೂರಾರು ಸಹಸ್ರಾರು ಬ್ರಾಹ್ಮಣಶ್ರೇಷ್ಠರಿಗೆ ರತ್ನಗಳನ್ನೂ, ಉತ್ತಮ ವಸ್ತ್ರಗಳನ್ನೂ, ಕುದುರೆಗಳನ್ನೂ, ಗ್ರಾಮಗಳನ್ನೂ ಹಾಗೆಯೇ ರಥಗಳನ್ನೂ, ಸ್ತ್ರೀಯರನ್ನೂ ದಾನ ಮಾಡಿದನು.

ಕೃಪಮಭ್ಯರ್ಚ್ಯ ಚ ಗುರುಮಥ ಪೌರಪುರಸ್ಕೃತಮ್ ।
ಆಹೂಯ ಭರತಶ್ರೇಷ್ಠ ಸನ್ನಿವೇಶ್ಯಾಸನೇ ತದಾ ॥೧೫॥

ಶಿಷ್ಯಂ ಪರಿಕ್ಷಿತಂ ತಸ್ಮೈ ದದೌ ಭರತಸತ್ತಮಃ ॥೧೬॥

ಹೇ ಭರತಶ್ರೇಷ್ಠನೇ, ಗುರುವಾದ ಕೃಪಾಚಾರ್ಯರನ್ನು ಪೌರಜನರ ಪುರಸ್ಕಾರದೊಂದಿಗೆ ಪೂಜಿಸಿ, ಅವರನ್ನು ಅರಮನೆಗೆ ಆಮಂತ್ರಿಸಿ, ಆಸನದಲ್ಲಿ ಕುಳ್ಳಿರಿಸಿ, ಭರತಸತ್ತಮನಾದ ಆ ಯುಧಿಷ್ಠಿರನು ಪರೀಕ್ಷಿತನನ್ನು ಅವರಿಗೆ ಶಿಷ್ಯನನ್ನಾಗಿ ಒಪ್ಪಿಸಿದನು.

ತತಸ್ತು ಪ್ರಕೃತೀಃ ಸರ್ವಾಃ ಸಮಾನಾಯ್ಯ ಯುಧಿಷ್ಠಿರಃ ।
ಸರ್ವಮಾಚಷ್ಟ ರಾಜರ್ಷಿಶ್ಚಿಕೀರ್ಷಿತಮಥಾತ್ಮನಃ ॥೧೭॥

ಅನಂತರ ರಾಜರ್ಷಿಯಾದ ಯುಧಿಷ್ಠಿರನು ಮಂತ್ರಿಮಂಡಲದ ಎಲ್ಲರನ್ನೂ ಕರೆಸಿ ಅವರಿಗೆ ತಾನು ಮಾಡಬಯಸಿದ ಎಲ್ಲವನ್ನೂ ವಿವರಿಸಿದನು.

ತೇ ಶ್ರುತ್ವೈವ ವಚಸ್ತಸ್ಯ ಪೌರಜಾನಪದಾ ಜನಾಃ ।
ಭೃಶಮುದ್ವಿಗ್ನಮನಸೋ ನಾಭ್ಯನಂದಂತ ತದ್ವಚಃ ॥೧೮॥

ಆ ಎಲ್ಲ ಪಟ್ಟಣಿಗ ಹಾಗೂ ಗ್ರಾಮೀಣ ಜನರು ಅವನಾಡಿದ ಮಾತುಗಳನ್ನು ಕೇಳಿಯೇ ಬಹಳ ವ್ಯಾಕುಲಚಿತ್ತರಾಗಿ ಆ ಮಾತುಗಳನ್ನು ಅಭಿನಂದಿಸಲಿಲ್ಲ.

ನೈವ ಕರ್ತವ್ಯಮಿತಿ ತೇ ತದೋಚುಸ್ತಂ ಜನಾಧಿಪಮ್ ।
ನ ಚ ರಾಜಾ ತಥಾऽಕಾರ್ಷೀತ್ಕಾಲಪರ್ಯಾಯಧರ್ಮವಿತ್ ॥೧೯॥

ಅವರೆಲ್ಲರೂ ಜನಾಧಿಪತಿಯಾದ ಆ ಯುಧಿಷ್ಠಿರನನ್ನು ಕುರಿತು 'ಹೀಗೆ ಮಾಡುವುದು ಯೋಗ್ಯವಲ್ಲ' ಎಂದೇ ಹೇಳಿದರು. ಆದರೆ ಕಾಲಚಕ್ರದ ಪರಿಭ್ರಮಣೆಯ ಧರ್ಮವನ್ನು ತಿಳಿದ ರಾಜನು ಅವರು ಹೇಳಿದಂತೆ ಮಾಡಲಿಲ್ಲ.

ತತೋಽನುಮಾನ್ಯ ಧರ್ಮಾತ್ಮಾ ಪೌರಜಾನಪದಂ ಜನಮ್ ।
ಗಮನಾಯ ಮತಿಂ ಚಕ್ರೇ ಕೃಷ್ಣಸ್ಯ ಗಮನಾದಪಿ ॥೨೦॥

ಅನಂತರ ಧರ್ಮಾತ್ಮನಾದ ಯುಧಿಷ್ಠಿರನು ಪಟ್ಟಣಿಗ ಹಾಗೂ ಗ್ರಾಮೀಣ ಜನರನ್ನು ಒಪ್ಪಿಸಿ, ಕೃಷ್ಣನು ಪರಂಧಾಮಕ್ಕೆ ತೆರಳಿರುವುದರಿಂದಲೂ, ತಾನೂ ಹೊರಡಬೇಕೆಂದು ಮನಸ್ಸು ಮಾಡಿದನು.

ವರ್ತಮಾನೇ ವಿವಾದೇ ತು ವಾಸ್ತುವಿಕ್ರಯಿಣಂ ಪ್ರತಿ ।
ಧನೇಚ್ಛಾ ಯುಗಪತ್ತ್ವಾಪ್ತಾ ಕ್ಷೇತ್ರವತ್ತ್ವಾಮಿಭೂಭೃತಾಮ್ ॥೨೧॥

ಇದೇ ಸಮಯಕ್ಕೆ ಸರಿಯಾಗಿ ಮನೆಯನ್ನು ಮಾರಾಟ ಮಾಡಿದ ಬಗ್ಗೆ ವಿವಾದವು ಉಂಟಾದಾಗ, ಆ ಸ್ಥಳದ ಒಡೆತನವುಳ್ಳ ಸ್ವಾಮಿಗೂ, ಆ ಸ್ಥಳದಲ್ಲಿ ವಾಸವಾಗಿರುವ ವ್ಯಕ್ತಿಗೂ ಒಂದೇ ಕಾಲದಲ್ಲಿ ಹಣದ ಬಯಕೆಯು ಉಂಟಾಯಿತು.

ಪ್ರಾಪ್ತಂ ಕಲಿಯುಗಂ ಜ್ಞಾತ್ವಾ ಸಹದೇವೋ ಹಸನ್ನಿವ ।
ರಾಜ್ಞಸ್ತು ಕಥಯಾಮಾಸ ಧರ್ಮೋ ನಷ್ಟಸ್ತು ಸಂಕರಃ ॥೨೨॥

ಆಗ ಸಹದೇವನು ನಗುತ್ತಾ, ಕಲಿಯುಗವು ಪ್ರಾಪ್ತವಾಯಿತೆಂದು ತಿಳಿದು, ಧರ್ಮಕ್ಕೆ ಸಾಂಕರ್ಯವುಂಟಾಗಿದೆ ಎಂದು ರಾಜನಾದ ಯುಧಿಷ್ಠಿರನಿಗೆ ವಿವರಿಸಿದನು.

ಶ್ರುತ್ವಾ ತು ದುರ್ಮನಾ ರಾಜಾ ಪರ್ಯಾಪ್ತಂ ಜೀವನಂ ಮಮ ।
ಇತಿ ಸ್ಮ ರಾಜಾ ಕೌರವ್ಯೋ ಧರ್ಮಪುತ್ರೋ ಯುಧಿಷ್ಠಿರಃ ॥೨೩॥

ಉತ್ಸೃಜ್ಯಾಭರಣಾನ್ಯಂಗಾತ್ ಜಗೃಹೇ ವಲ್ಕಲಾನ್ಯುತ ॥೨೪॥

ಇದನ್ನು ಕೇಳಿ ಬೇಸರಗೊಂಡ ರಾಜನು, ತನ್ನ ಜೀವನವು ಮುಗಿಯುತ್ತಾ ಬಂತೆಂದು ತಿಳಿದನು. ನಂತರ ಕುರುವಂಶಜನಾದ ಧರ್ಮಪುತ್ರನಾದ ಯುಧಿಷ್ಠಿರರಾಜನು ತಾನು ಧರಿಸಿದ ಆಭರಣಗಳನ್ನು ತೆಗೆದಿರಿಸಿ ನಾರುಮಡಿಗಳನ್ನು ಧರಿಸಿದನು.

ಭೀಮಾರ್ಜುನಯಮಾಶ್ಚೈವ ದ್ರೌಪದೀ ಚ ಯಶಸ್ವಿನೀ ।
ತಥೈವ ಜಗೃಹುಃ ಸರ್ವೇ ವಲ್ಕಲಾನಿ ನರಾಧಿಪ ॥೨೫॥

ಹೇ ನರಾಧಿಪನೇ, ಭೀಮಾರ್ಜುನರೂ, ನಕುಲ-ಸಹದೇವರೂ ಮತ್ತು ಯಶಸ್ವಿನಿಯಾದ ದ್ರೌಪದೀ ದೇವಿಯೂ ಧರ್ಮರಾಜನಂತೆಯೇ ಎಲ್ಲರೂ ನಾರುಮಡಿಗಳನ್ನು ಧರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಮಹಾಪ್ರಸ್ಥಾನಿಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮಹಾಪ್ರಸ್ಥಾನಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ನಾರುಮಡಿಗಳನ್ನುಡುವ ಮೂಲಕ ಶ್ವಾನದೊಂದಿಗೆ ಯುಧಿಷ್ಠಿರಾದಿಗಳು ಮನೆಯಿಂದ ಹೊರಡುವುದು. ಮಾರ್ಗಮಧ್ಯದಲ್ಲಿ ಅರ್ಜುನನು ಬತ್ತಳಿಕೆಯೊಂದಿಗೆ ಗಾಂಡೀವವನ್ನು ಅಗ್ನಿಯ ಮಾತಿನಂತೆ ವರುಣನಿಗಾಗಿ ಸಮುದ್ರದಲ್ಲಿ ಎಸೆಯುವುದು.

ವೈಶಂಪಾಯನಃ

ವಿಧಿವತ್ ಕಾರಯಿತ್ವೇಷ್ಟಿಂ ನೈಷ್ಠಿಕೀಂ ಭರತರ್ಷಭ ॥
ಸಮುತ್ಸೃಜ್ಯಾಪ್ಸು ಸರ್ವೇऽಗ್ನೀನ್ ಪ್ರತಸ್ಥುರ್ನರಪುಂಗವಾಃ ॥೧॥

ವೈಶಂಪಾಯನ– ಹೇ ಭರತರ್ಷಭನೇ, ನರಶ್ರೇಷ್ಠರಾದ ಆ ಪಾಂಡವರು ಮರಣಕಾಲಕ್ಕೆ ಸಂಬಂಧಿಸಿದ ಇಷ್ಟಿಯನ್ನು ವಿಧಿವತ್ತಾಗಿ ಮಾಡಿಸಿ, ಅಗ್ನಿಗಳನ್ನು ನೀರಿನಲ್ಲಿ ವಿಸರ್ಜಿಸಿ ಎಲ್ಲರೂ ಅಲ್ಲಿಂದ ಹೊರಟರು.

ತತಃ ಪ್ರರುರುದುಃ ಸರ್ವಾಃ ಸ್ತ್ರಿಯೋ ದೃಷ್ಟ್ವಾ ನರೋತ್ತಮಾನ್ ।
ಪ್ರಸ್ಥಿತಾನ್ ದ್ರೌಪದೀಷಷ್ಠಾನ್ ಪುರಾ ದ್ಯೂತಜಿತಾನ್ಯಥಾ ॥೨॥

ಹೀಗೆ ಹೊರಟುನಿಂತ ನರಶ್ರೇಷ್ಠರಾದ ಪಂಚಪಾಂಡವರನ್ನೂ, ಆರನೆಯವಳಾಗಿ ದ್ರೌಪದಿಯನ್ನೂ ನೋಡಿ, ಅಲ್ಲಿರುವ ಎಲ್ಲಸ್ತ್ರೀಯರೂ ಹಿಂದೆ ದ್ಯೂತದಲ್ಲಿ ಹೊರಟು ನಿಂತಾಗ ಹೇಗೋ ಹಾಗೆ ಬಹಳವಾಗಿ ರೋದಿಸಿದರು.

ಹರ್ಷೋऽಭವಚ್ಚ ಸರ್ವೇಷಾಂ ಭ್ರಾತೄಣಾಂ ಗಮನಂ ಪ್ರತಿ ।
ಯುಧಿಷ್ಠಿರಮತಂ ಜ್ಞಾತ್ವಾ ವೃಷ್ಣಿಕ್ಷಯಮವೇಕ್ಷ್ಯ ಚ ॥೩॥

ಯುಧಿಷ್ಠಿರನ ಅಭಿಪ್ರಾಯವನ್ನು ತಿಳಿದಿರುವುದರಿಂದಲೂ, ಯಾದವರ ನಾಶವನ್ನು ನೋಡಿರುವುದರಿಂದಲೂ ಎಲ್ಲ ಸಹೋದರರಿಗೂ ತಾವು ಹೊರಟಿರುವ ವಿಷಯದಲ್ಲಿ ಸಂತೋಷವೇ ಆಯಿತು.

ಭ್ರಾತರಃ ಪಂಚ ಕೃಷ್ಣಾ ಚ ಷಷ್ಠೀ ಶ್ವಾ ಚೈವ ಸಪ್ತಮಃ ।
ಆತ್ಮನಾ ಸಪ್ತಮೋ ರಾಜಾ ನಿರ್ಯಯೌ ಗಜಸಾಹ್ವಯಾತ್ ॥೪॥

ಐದು ಮಂದಿ ಸಹೋದರರು, ಆರನೆಯವಳಾಗಿ ಕೃಷ್ಣೆಯು, ಏಳನೆಯದ್ದಾಗಿ ಯಾವುದೋ ಒಂದು ಶ್ವಾನವೂ-ಹೀಗೆ ತಾನು ಏಳನೆಯವನಾಗಿ ರಾಜನಾದ ಯುಧಿಷ್ಠಿರನು ಹಸ್ತಿನಾಪುರದಿಂದ ಹೊರಟನು.

ಪೌರೈರನುಗತೋ ದೂರಂ ಸರ್ವೈರಂತಃಪುರೈಸ್ತಥಾ ॥೫॥

ನ ಚೈನಮಶಕತ್ ಕಶ್ಚಿನ್ನಿವರ್ತಸ್ವೇತಿ ಭಾಷಿತುಮ್ ।
ನ್ಯವರ್ತಂತ ತತಃ ಸರ್ವೇ ನರಾ ನಗರವಾಸಿನಃ ॥೬॥

ಹಾಗೆಯೇ ಅಂತಃಪುರದ ಎಲ್ಲ ಜನರಿಂದಲೂ ಹಾಗೂ ಪೌರರಿಂದಲೂ ಬಹುದೂರದವರೆಗೆ ರಾಜನು ಹಿಂಬಾಲಿಸಲ್ಪಟ್ಟನು. ಆದರೆ ಅವರಲ್ಲಿ ಯಾವನೊಬ್ಬನೂ 'ನಮ್ಮ ಜೊತೆಗೆ ಹಿಂದಿರುಗು' ಎಂದು ಈ ಯುಧಿಷ್ಠಿರನನ್ನು ಕೇಳಿಕೊಳ್ಳಲು ಸಮರ್ಥನಾಗಲಿಲ್ಲ. ಅನಂತರ ನಗರವಾಸಿಗಳಾದ ಎಲ್ಲ ಜನರೂ ಅಲ್ಲಿಂದ ಹಿಂದಿರುಗಿದರು.

ಕೃಪಪ್ರಭೃತಯಶ್ಚೈವ ಯುಯುತ್ಸುಂ ಪರ್ಯವಾರಯನ್ ।
ವಿವೇಶ ಗಂಗಾಂ ಕೌರವ್ಯ ಉಲೂಪೀ ಭುಜಗಾತ್ಮಜಾ ॥೭॥

ಹೇ ಕೌರವ್ಯನೇ, ಕೃಪರೇ ಮೊದಲಾದ ಹಿರಿಯರೆಲ್ಲರೂ ಯುಯುತ್ಸುವಿನ ಪರಿವಾರವಾಗಿ ಉಳಿದುಕೊಂಡರು. ನಾಗನ ಮಗಳಾದ ಉಲೂಪಿಯು ಗಂಗೆಯನ್ನು ಪ್ರವೇಶಿಸಿದಳು.

ಚಿತ್ರಾಂಗದಾ ಯಯೌ ಚಾಪಿ ಮಣಲೂರುಪುರಂ ಪ್ರತಿ ।
ಶಿಷ್ಟಾಃ ಪರಿಕ್ಷಿತಂ ತ್ವನ್ಯಾ ಮಾತರಃ ಪರ್ಯವಾರಯನ್ ॥೮॥

ಅರ್ಜುನನ ಇನ್ನೋರ್ವಮಡದಿಯಾದ ಚಿತ್ರಾಂಗದೆಯು ಮಣಲೂರು ಪುರವನ್ನು ಕುರಿತು ಹೊರಟು ಹೋದಳು. ಉಳಿದ ಬೇರೆ ತಾಯಂದಿರು (ಧರ್ಮರಾಜಾದಿಗಳ ಪತ್ನಿಯರು) ಪರೀಕ್ಷಿತನನ್ನು ನೋಡಿಕೊಳ್ಳಲು ಉಳಿದರು.

ಪಾಂಡವಾಶ್ಚ ಮಹಾತ್ಮಾನೋ ದ್ರೌಪದೀ ಚ ಯಶಸ್ವಿನೀ ।
ಕೃತೋಪವಾಸಾಃ ಕೌರವ್ಯ ಪ್ರಯಯುಃ ಪ್ರಾಙ್ಮುಖಾಸ್ತತಃ ॥೯॥

ಹೇ ಕುರುವಂಶಜನೇ, ಮಹಾತ್ಮರಾದ ಪಾಂಡವರು ಹಾಗೂ ಯಶಸ್ವಿನಿಯಾದ ದ್ರೌಪದೀದೇವಿ ಇವರು ಉಪವಾಸದಲ್ಲಿದ್ದುಕೊಂಡು ಪೂರ್ವಾಭಿಮುಖವಾಗಿ ಮುಂದುವರೆದರು.

ಯೋಗಯುಕ್ತಾ ಮಹಾತ್ಮಾನಸ್ತ್ಯಾಗಧರ್ಮಮುಪೇಯುಷಃ ।
ಅಭಿಜಗ್ಮುರ್ಬಹೂನ್ ದೇಶಾನ್ ಸರಿತಃ ಸಾಗರಾಂಸ್ತಥಾ ॥೧೦॥

ಯೋಗಯುಕ್ತರಾಗಿ, ಸಂನ್ಯಾಸಧರ್ಮವನ್ನು ಹೊಂದಿದ್ದ ಆ ಮಹಾತ್ಮರು ಅನೇಕ ದೇಶಗಳನ್ನೂ, ನದಿಗಳನ್ನೂ, ಸಾಗರಗಳನ್ನೂ ದಾಟಿ ಮುನ್ನಡೆದರು.

ಯುಧಿಷ್ಠಿರೋ ಯಯಾವಗ್ರೇ ಭೀಮಸ್ತು ತದನಂತರಮ್ ।
ಅರ್ಜುನಸ್ತಸ್ಯ ಚಾನ್ವೇವ ಯಮೌ ಚಾಪಿ ಯಥಾಕ್ರಮಮ್ ॥೧೧॥

ಮುಂಭಾಗದಲ್ಲಿ ಯುಧಿಷ್ಠಿರನು, ಯುಧಿಷ್ಠಿರನ ನಂತರ ಭೀಮಸೇನನು, ಭೀಮಸೇನನ ಹಿಂಭಾಗದಲ್ಲೇ ಅರ್ಜುನನು, ಅರ್ಜುನನನ್ನು ಅನುಸರಿಸಿಕೊಂಡೇ ಅವಳಿ ಮಕ್ಕಳು- ಹೀಗೆ ಕ್ರಮವಾಗಿ ಅವರು ಹೋಗುತ್ತಿದ್ದರು.

ಪೃಷ್ಠತಸ್ತು ವರಾರೋಹಾ ಶ್ಯಾಮಾ ಪದ್ಮದಲೇಕ್ಷಣಾ ।
ದ್ರೌಪದೀ ಯೋಷಿತಾಂ ಶ್ರೇಷ್ಠಾ ಯಯೌ ಭರತಸತ್ತಮ ॥೧೨॥

ಹೇ ಭರತಶ್ರೇಷ್ಠನೇ, ಇವರೆಲ್ಲರ ಹಿಂಭಾಗದಲ್ಲಿ ಪರಿಪುಷ್ಟವಾದ ನಿತಂಬವುಳ್ಳ, ಕೃಷ್ಣವರ್ಣದ, ಕಮಲದ ಎಸಳಿನಂತೆ ಕಣ್ಣುಗಳುಳ್ಳ, ಸ್ತ್ರೀಯರಲ್ಲಿ ಶ್ರೇಷ್ಠಳಾದ ದ್ರೌಪದೀ ದೇವಿಯು ನಡೆದು ಬರುತ್ತಿದ್ದಳು.

ಶ್ವಾ ಚೈವಾನುಯಯಾವೇಕಃ ಪ್ರಸ್ಥಿತಾನ್ ಪಾಂಡವಾನ್ ವನಮ್ ।
ಕ್ರಮೇಣ ತೇ ಯಯುರ್ವೀರಾ ಲೌಹಿತ್ಯಂ ಸಲಿಲಾರ್ಣವಮ್ ॥೧೩॥

ಕಾಡಿಗೆ ಹೊರಟಿರುವ ಆ ಪಾಂಡವರನ್ನು ಒಂದು ಶ್ವಾನವು ಹಿಂಬಾಲಿಸಿತು. ವೀರರಾದ ಅವರು ಕ್ರಮವಾಗಿ ಸಂಚರಿಸುತ್ತಾ ಅಗ್ನಿಸಂಬಂಧಿಯಾದ ಸಮುದ್ರವನ್ನು ತಲುಪಿದರು.

ಗಾಂಡೀವಂ ತು ಧನುರ್ದಿವ್ಯಂ ನ ಮುಮೋಚ ಧನಂಜಯಃ ।
ರತ್ನಲೋಭಾನ್ಮಹಾರಾಜ ತೇ ಚಾಕ್ಷಯ್ಯೇ ಮಹೇಷುಧೀ ॥೧೪॥

ಹೇ ಮಹಾರಾಜನೇ, ಅರ್ಜುನನು ದಿವ್ಯವಾದ ಆ ಗಾಂಡೀವ ಧನುಸ್ಸನ್ನು ಹಾಗೂ ಎಂದೂ ಬರಿದಾಗದ ಆ ಮಹಾ ಬತ್ತಳಿಕೆಗಳನ್ನೂ ಅವು ಅತ್ಯಂತ ಶ್ರೇಷ್ಠವಾದವುಗಳೆಂಬ ಲೋಭದಿಂದ ಬಿಟ್ಟಿರಲಿಲ್ಲ.

ಅಗ್ನಿಂ ತೇ ದದೃಶುಸ್ತತ್ರ ಸ್ಥಿತಂ ಶೈಲಮಿವಾಗ್ರತಃ ।
ಮಾರ್ಗಮಾವೃತ್ಯ ತಿಷ್ಠಂತಂ ಸಾಕ್ಷಾತ್ ಪುರುಷವಿಗ್ರಹಮ್ ॥೧೫॥

ಆ ಸಮುದ್ರತೀರದಲ್ಲಿಯೇ ಪಾಂಡವರು ಬೆಟ್ಟದಂತೆ ತಮ್ಮೆದುರಿಗೆ ನಿಂತಿರುವ, ಮಾರ್ಗವನ್ನು ಪೂರ್ಣವಾಗಿ ಆವರಿಸಿರುವ, ಮನುಷ್ಯಶರೀರವನ್ನು ತಾಳಿ ಪ್ರತ್ಯಕ್ಷನಾದ ಅಗ್ನಿಯನ್ನು ನೋಡಿದರು.

ತತೋ ದೇವಃ ಸ ಸಪ್ತಾರ್ಚಿಃ ಪಾಂಡವಾನಿದಮಬ್ರವೀತ್ ।
ಭೋ ಭೋ ಪಾಂಡುಸುತಾ ವೀರಾಃ ಪಾವಕಂ ಮಾಂ ನಿಬೋಧತ ॥

ಆಗ ಸಪ್ತಜ್ವಾಲೆಗಳುಳ್ಳ ಆ ದೇವನು ಪಾಂಡವರನ್ನು ಕುರಿತು ಹೀಗೆಂದನು. 'ಹೇ ವೀರರಾದ ಪಾಂಡುಸುತರೇ, ನಾನು ಅಗ್ನಿ ಎಂದು ತಿಳಿಯಿರಿ'.

ಯುಧಿಷ್ಠಿರ ಮಹಾಬಾಹೋ ಭೀಮಸೇನ ಪರಂತಪ ।
ಅರ್ಜುನಾಶ್ವಿಸುತೌ ವೀರೌ ನಿಬೋಧತ ವಚೋ ಮಮ ॥೧೭॥

'ಹೇ ಮಹಾಬಾಹುವಾದ ಯುಧಿಷ್ಠಿರನೇ, ಶತ್ರುಮರ್ದನನಾದ ಭೀಮಸೇನನೇ, ಅರ್ಜುನನೇ, ವೀರರಾದ ಅಶ್ವಿನೀದೇವತೆಗಳ ಮಕ್ಕಳೇ, ನನ್ನ ಮಾತನ್ನು ಗಮನವಿಟ್ಟು ಕೇಳಿರಿ'.

ಅಹಮಗ್ನಿಃ ಕುರುಶ್ರೇಷ್ಠಾ ಮಯಾ ದಗ್ಧಂ ಚ ಖಾಂಡವಮ್ ।
ಅರ್ಜುನಸ್ಯ ಪ್ರಭಾವೇನ ತಥಾ ನಾರಾಯಣಸ್ಯ ಚ ॥೧೮॥

'ಹೇ ಕುರುಶ್ರೇಷ್ಠರೇ, ನಾನು ಅಗ್ನಿಯಾಗಿರುವೆನು. ಅರ್ಜುನನ ಹಾಗೂ ನಾರಾಯಣನ ಪ್ರಭಾವದಿಂದ ನನ್ನಿಂದಲೇ ಖಾಂಡವವನವು ದಗ್ಧವಾಗಿದೆ'.

ಅಯಂ ವಃ ಫಲ್ಗುನೋ ಭ್ರಾತಾ ಗಾಂಡೀವಂ ಪರಮಾಯುಧಮ್ ।
ಪರಿತ್ಯಜ್ಯ ವನೇ ಯಾತು ನಾನೇನಾರ್ಥೋಽಸ್ತಿ ಕಶ್ಚನ ॥೧೯॥

ಈ ನಿಮ್ಮ ಸಹೋದರನಾದ ಫಲ್ಗುನನು ಶ್ರೇಷ್ಠ ಆಯುಧವಾದ ಗಾಂಡೀವವನ್ನು ನೀರಿನಲ್ಲಿ ಪರಿತ್ಯಜಿಸಿ ಮುಂದೆ ಹೋಗಲಿ. ಇನ್ನು ಈ ಗಾಂಡೀವದಿಂದ ಯಾವುದೇ ಪ್ರಯೋಜನವೂ ಇರುವುದಿಲ್ಲ.

ಚಕ್ರರತ್ನಂ ತು ಯತ್ಕೃಷ್ಣೇ ಸ್ಥಿತಮಾಸೀನ್ಮಹಾತ್ಮನಿ ।
ಗತಂ ತಚ್ಚ ಪುನರ್ಹಸ್ತೇ ಕಾಲೇನೈಷ್ಯತಿ ತಸ್ಯ ಹ ॥೨೦॥

ಮಹಾತ್ಮನಾದ ಶ್ರೀಕೃಷ್ಣನಲ್ಲಿ ಯಾವ ಶ್ರೇಷ್ಠವಾದ ಚಕ್ರವು ಸ್ಥಿತವಾಗಿತ್ತೋ ಅದೂ ಕೂಡ ಹೊರಟು ಹೋಗಿದೆ. ಮತ್ತೆ ಅಗತ್ಯವಾದ ಕಾಲವು ಬಂದಾಗ ಅವನ ಕೈಗೆ ಅದು ಬಂದು ಸೇರುವುದಷ್ಟೆ?

ವರುಣಾದಾಹೃತಂ ಪೂರ್ವಂ ಮಯೈತತ್ಪಾರ್ಥಕಾರಣಾತ್ ।
ಗಾಂಡೀವಂ ಧನುಷಾಂ ಶ್ರೇಷ್ಠಂ ವರುಣಾಯೈವ ದೀಯತಾಮ್ ॥೨೧॥

ಈ ಧನುಸ್ಸುಗಳಲ್ಲಿ ಶ್ರೇಷ್ಠವಾದ ಗಾಂಡೀವವು ಪಾರ್ಥನಿಗೋಸ್ಕರ ನನ್ನಿಂದಲೇ ಹಿಂದೆ ವರುಣನಿಂದ ಸ್ವೀಕೃತವಾಗಿತ್ತು. ಇದನ್ನು ಮತ್ತೆ ವರುಣನಿಗೇ ಕೊಡಲಿ.

ತತಸ್ತೇ ಭ್ರಾತರಃ ಸರ್ವೇ ಧನಂಜಯಮಚೋದಯನ್ ।
ಸ ಜಲೇ ಪ್ರಾಕ್ಷಿಪಚ್ಚೈತತ್ ತಥಾಽಕ್ಷಯ್ಯೇ ಮಹೇಷುಧೀ ॥೨೨॥

ಇಷ್ಟಾದ ನಂತರ ಸಹೋದರರೆಲ್ಲರೂ ಅರ್ಜುನನನ್ನು (ಧನುಸ್ಸನ್ನು ಹಿಂತಿರುಗಿಸುವಂತೆ) ಪ್ರೇರೇಪಿಸಿದರು. ಅವನು ಈ ಧನುಸ್ಸನ್ನು ಮತ್ತು ಅಕ್ಷಯವಾದ ಬತ್ತಳಿಕೆಗಳನ್ನು ನೀರಿನಲ್ಲಿ ಎಸೆದುಬಿಟ್ಟನು.

ತತೋಽಗ್ನಿರ್ಭರತಶ್ರೇಷ್ಠ ತತ್ರೈವಾಂತರಧೀಯತ ।
ಯಯುಶ್ಚ ಪಾಂಡವಾ ವೀರಾಸ್ತತಸ್ತೇ ದಕ್ಷಿಣಾಮುಖಾಃ ॥೨೩॥

ಹೇ ಭರತಶ್ರೇಷ್ಠನೇ, ನಂತರ ಅಗ್ನಿಯು ಅಲ್ಲೇ ಅಂತರ್ಧಾನನಾದನು. ಅನಂತರ ವೀರರಾದ ಪಾಂಡವರು ದಕ್ಷಿಣಾಭಿಮುಖವಾಗಿ ಮುಂದೆ ಹೊರಟರು.

ತತಸ್ತೇ ತೂತ್ತರೇಣೈವ ತೀರೇಣ ಲವಣಾಂಭಸಃ ।
ಜಗ್ಮುರ್ಭರತಶಾರ್ದೂಲ ದಿಶಂ ದಕ್ಷಿಣಪಶ್ಚಿಮಾಮ್ ॥೨೪॥

ಹೇ ಭರತಶ್ರೇಷ್ಠನೇ, ಅನಂತರ ಅವರೆಲ್ಲರೂ ಲವಣಸಮುದ್ರದ ಉತ್ತರ ತೀರದಲ್ಲೇ ಮುಂದೆ ಸಾಗುತ್ತಾ ದಕ್ಷಿಣ-ಪಶ್ಚಿಮ ಅಂದರೆ ನೈಋತ್ಯ ದಿಕ್ಕಿಗೆ ಸಾಗಿದರು.

ತತಃ ಪುನಃ ಸಮಾವೃತ್ತಾಃ ಪಶ್ಚಿಮಾಂ ದಿಶಮೇವ ತೇ ।
ದದೃಶುರ್ದ್ವಾರಕಾಂ ಚಾಪಿ ಸಾಗರೇಣ ಪರಿಪ್ಲುತಾಮ್ ॥೨೫॥

ಉದೀಚೀಂ ಪುನರಾವೃತ್ಯ ಯಯುರ್ಭರತಸತ್ತಮಾಃ ।
ಪ್ರಾದಕ್ಷಿಣ್ಯಂ ಚಿಕೀರ್ಷಂತಃ ಪೃಥಿವ್ಯಾ ಯೋಗಧರ್ಮಿಣಃ ॥೨೬॥

ಮತ್ತೆ ಪುನಃ ಪಶ್ಚಿಮ ದಿಕ್ಕಿಗೇ ಹಿಂದಿರುಗಿದ ಅವರು, ಸಾಗರದಲ್ಲಿ ಮುಳುಗಿ ಹೋದ ದ್ವಾರಕೆಯನ್ನೂ ಕಂಡರು. ನಂತರ ಭರತಶ್ರೇಷ್ಠರಾದ, ಯೋಗಧರ್ಮದಲ್ಲಿ ಆಸಕ್ತರಾದ ಪಾಂಡವರು ಭೂಮಿಯಲ್ಲಿ ಪ್ರದಕ್ಷಿಣೆಯನ್ನು ಮಾಡಬಯಸುತ್ತಾ ಮತ್ತೆ ಉತ್ತರ ದಿಕ್ಕಿಗೇ ಹಿಂದಿರುಗಿ ಮುಂದೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಮಹಾಪ್ರಸ್ಥಾನಿಕಪರ್ವಣಿ ಪಾಂಡವಾನಾಂ ಪೂರ್ವಾದಿಚತುರ್ದಿಕ್ಷು ಲವಣಸಮುದ್ರತೀರೇ ಭೂಪ್ರದಕ್ಷಿಣವರ್ಣನಂ ನಾಮ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮಹಾಪ್ರಸ್ಥಾನಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩ನೇ ಅಧ್ಯಾಯ

ಅತ್ರ ನಾರಾಯಣಕ್ಷೇತ್ರೇ ತೇಷಾಂ ತನ್ವೋಽಪತನ್ ಕ್ರಮಾತ್ ।
ದ್ರೌಪದೀಸಹದೇವಾದಿಪಂಚಾನಾಂ ತತ್ರ ಮಾರುತಿಃ ॥

ಸದೇಹನಾಕಾನಿಚ್ಛುತ್ವಾದ್ ದೇಹಪ್ರಪತನಂ ಹಿ ತತ್ ॥

ತೇಷಾಮಿಹೇತಿ ಯಾಥಾರ್ಥ್ಯಂ ಜಾನನ್ ಪಪ್ರಚ್ಛ ಧರ್ಮಜಮ್ ।
ಕೇನ ಕೇನಾಪತದ್ ದೇಹೋ ದೋಷೇಣ ನ ಇತಿ ಕ್ರಮಾತ್ ॥

ಅಲ್ಲಿ ಬದರಿಕಾಶ್ರಮದಲ್ಲಿ ದ್ರೌಪದಿ, ಸಹದೇವ ಮುಂತಾದ ಐವರ ಶರೀರಗಳು ಕ್ರಮವಾಗಿ ಪತನ ಹೊಂದಿದವು. ಅವರಿಗೆ ದೇಹಸಹಿತರಾಗಿ ಸ್ವರ್ಗಕ್ಕೆ ಹೋಗಲು ಇಚ್ಛೆಯಿಲ್ಲದ ಕಾರಣದಿಂದಲೆ ಹೀಗೆ ದೇಹಪತನವಾಗಿತ್ತು. ಈ ನಿಜಸಂಗತಿಯನ್ನು ಭೀಮ ತಿಳಿದಿದ್ದರೂ 'ಯಾವ ಯಾವ ದೋಷದಿಂದ ನಮ್ಮ ದೇಹಗಳು ಕ್ರಮವಾಗಿ ಬಿದ್ದವೆಂದು' ಧರ್ಮರಾಜನನ್ನು ಕೇಳಿದನು.

ಮೃತಿಕಾಲೇ ಹಿ ಯೋ ಯಸ್ಯ ದೋಷಂ ವಕ್ತ್ಯೃಣಮೋಚನಮ್ ।
ತಸ್ಮಾತ್ ಸ್ಯಾದುಕ್ತದೋಷಸ್ಯೇತ್ಯಾಹ ಯಚ್ಛ್ರುತಿರೇವ ತತ್ ।
ಋಣಮೋಕ್ಷಾಯ ಸರ್ವೇಷಾಂ ಭೀಮೋ ದೋಷಾನವಾದಯತ್ ॥

ಮರಣಕಾಲದಲ್ಲಿ ಯಾವಾತನು ಯಾವನ ದೋಷವನ್ನು ಹೇಳುವನೋ ಅವನಿಗೆ ಆ ದೋಷ ಹೇಳಿದವನ ಋಣ ಪರಿಹಾರವಾಗುವುದು ಎಂದು ಶ್ರುತಿ ಹೇಳುವುದರಿಂದ ಎಲ್ಲರ ಋಣ ಪರಿಹಾರಕ್ಕಾಗಿ ಎಲ್ಲರ ದೋಷಗಳನ್ನು ಧರ್ಮರಾಜನಿಂದ ಭೀಮನು ಹೇಳಿಸಿದನು.

ಸೋಽಪೀಚ್ಛಾಪತಿತಾನ್ ದೇಹಾನಜಾನಂಶುದ್ಧಕರ್ಮಣಾಮ್ ।
ಅಪಶ್ಯನ್ ಕಾರಣಂ ಪ್ರಾಹ ದೋಷಾತ್ ಸ್ಯಾದೇವಮಿತ್ಯಪಿ ।
ರಾಜಾ ಸಂಭಾವನಾಮಾತ್ರಂ ನಹಿ ಕಾರ್ಯಮಕಾರಣಮ್ ॥

ಧರ್ಮರಾಜನು ದ್ರೌಪದೀ ಮುಂತಾದವರ ಶರೀರ ಅವರ ಇಚ್ಛೆಯಿಂದ ಬಿದ್ದಿತೆಂಬುದನ್ನು ತಿಳಿಯದೆ ಅವರು ಶುದ್ಧಕರ್ಮವನ್ನೆ ಮಾಡುವವರಾದ್ದರಿಂದ ಶರೀರ ಪಾತಕ್ಕೆ ಕಾರಣವಾಗಬಹುದಾದ ಪಾಪ ಒಂದನ್ನೂ ಕಾಣದೆ, ದೋಷದಿಂದ ಹೀಗಾಗಿರ ಬಹುದೆಂದು ಊಹೆಯಿಂದಲೆ ಹೇಳುತ್ತಾನೆ. ಏಕೆಂದರೆ ಕಾರಣವಿಲ್ಲದೆ ಕಾರ್ಯ ಆಗದು ತಾನೆ?

ಸ್ವಚ್ಛಂದಮೃತ್ಯವೋ ಯೋಗಾದ್ ದೇಹಾನುತ್ಸೃಜ್ಯ ಪಾಂಡವಾಃ ।
ಕೃಷ್ಣಾ ಚಾऽಪುಃ ಪರಂ ಸ್ಥಾನಂ ಯನ್ನ ಯಾಂತ್ಯಪಿ ದೇವತಾಃ ।
ಇತಿ ಶ್ರುತೇರ್ನ ತೇ ಪಾಪಾದ್ ದೇಹಾಂಸ್ತತ್ಯಜುರೂರ್ಜಿತಾಃ ।

'ಪಾಂಡವರೂ ದ್ರೌಪದಿಯೂ ಸ್ವಚ್ಛಂದ ಮರಣಿಗಳು. ಆದ್ದರಿಂದ ಯೋಗದಿಂದ ಶರೀರ ತ್ಯಾಗಮಾಡಿ, ದೇವತೆಗಳಿಂದಲೂ ಹೊಂದಲಾಗದಂಥ ಉತ್ತಮ ಲೋಕವನ್ನು ಹೊಂದಿದರು' ಎಂದು ಶ್ರುತಿ ಇರುವುದರಿಂದ ಶಕ್ತಿಶಾಲಿಗಳಾದ ಅವರು ಪಾಪದಿಂದ ದೇಹಗಳನ್ನು ತೊರೆಯಲಿಲ್ಲ.

ಋಣಾನ್ಯುನ್ಮುಚ್ಯ ದೋಷೋಕ್ತ್ಯಾ ಸ್ವಾನಾಂ ಭೀಮಃ ಸ್ವಕಾಂ ತನುಮ್ ।
ತತ್ಯಾಜ ಪರಮಂ ಧ್ಯಾಯನ್ನಾಪ ಚ ಸ್ಥಾನಮುತ್ತಮಮ್ ।
ಇತಿ ಸ್ಕಾಂದಪುರಾಣೋಕ್ತಂ ವ್ಯಾಸವಾಕ್ಯಮೃಷೀನ್ ಪ್ರತಿ ॥

ಭೀಮನು ತನ್ನವರನ್ನು ದೋಷಾರೋಪಣದ ಮೂಲಕ ಋಣದಿಂದ ಮೋಚನಗೊಳಿಸಿ, ಪರಮಾತ್ಮನನ್ನು ಧ್ಯಾನಿಸುತ್ತ, ತನ್ನ ಶರೀರವನ್ನು ತೊರೆದನು. ಮತ್ತು ಉತ್ತಮ ಲೋಕವನ್ನು ಹೊಂದಿದನು ಎಂದು ಸ್ಕಾಂದಪುರಾಣದಲ್ಲಿ ಋಷಿಗಳಿಗೆ ವ್ಯಾಸರು ಹೇಳಿದ ವಚನವಿದೆ.

ಭೀಮಾದೃತೇ ಹಿ ಚತುರ್ಷು ಪಕ್ಷಪಾತಸ್ತು ವಾಸವೌ ।
ಯೋಗ್ಯ ಏವೇತಿ ಕೃಷ್ಣಾಯಾ ನ ದೋಷಃ ಸ್ಯಾತ್ ಕಥಂಚನ ॥

ಭೀಮನಲ್ಲಿ ಹೊರತು ಉಳಿದ ನಾಲ್ವರಲ್ಲಿ, ಅರ್ಜುನನಲ್ಲಿ ದ್ರೌಪದಿಗೆ ಪಕ್ಷಪಾತವಿರುವುದು ಯೋಗ್ಯವೆ. ಆದ್ದರಿಂದ ಅದು ದ್ರೌಪದಿಗೆ ಯಾವ ರೀತಿಯಿಂದಲೂ ದೋಷವಲ್ಲ.

ನೀತಿರೂಪೇ ವೀರ್ಯಬಲೇ ಮಹಾಂತ್ಯೇಷಾಂ ಯತಃ ಕ್ರಮಾತ್ ।
ಪ್ರಾಣತ್ವಾದ್ ಭೋಗಶಕ್ತಿಶ್ಚ ನ ಹಿ ದೋಷಾಯ ಮಾರುತೇಃ ॥

ನೀತಿ ರೂಪ ವೀರ್ಯಬಲಗಳು ಪಾಂಡವರಲ್ಲಿ ಕ್ರಮವಾಗಿ ಹೆಚ್ಚು ಇರುವುದರಿಂದ ಕ್ರಮವಾಗಿ ಹೆಚ್ಚು ಪಕ್ಷಪಾತವಿರಿಸಿದುದು ದೋಷವಲ್ಲ. ಭೀಮು ಮುಖ್ಯಪ್ರಾಣನಾದ್ದರಿಂದ ಅವನಿಗೆ ಹೆಚ್ಚಿನ ಭೋಜನ ಶಕ್ತಿ ಇರುವುದೂ ದೋಷವಲ್ಲ.

'ಯಥಾಸ್ವರೂಪವಿಜ್ಞಾನಮಾತ್ಮನ್ಯಪಿ ನ ದೋಷಕೃತ್' ।
ಇತಿ ವ್ಯಾಸಸ್ಮೃತೇರೇಷಾಮುಕ್ತದೋಷೋದ್ಭವಃ ಕಥಮ್ ॥

'ತನ್ನ ಸ್ವರೂಪ ಹೇಗಿದೆಯೋ ಹಾಗೆ ತಿಳಿದುಕೊಳ್ಳುವುದು ತನ್ನಲ್ಲಿ ದೋಷಕ್ಕೆ ಕಾರಣವಲ್ಲ' ಎಂದು ವ್ಯಾಸಸ್ಮೃತಿ ಇರುವುದರಿಂದ ಪಾಂಡವರಿಗೆ ಧರ್ಮರಾಜ ಹೇಳಿದ ದೋಷ ಹೇಗೆ ದೋಷವಾದೀತು?

ಕದಾಚಿದತಿಮಾನೋಽಪಿ ತ್ರಯಾಣಾಮೇಷು ಜಾಯತೇ ।
ತಥಾಽಪಿ ತತ್ಫಲಂ ನೈತತ್ ತಾರತಮ್ಯಂ ಹಿ ಮುಕ್ತಿಗಮ್ ॥

ಗುಣದೋಷಾಧಿಕಾಲ್ಪತ್ವಾದತ್ರಸ್ಥಮಪಿ ಹಿ ಶ್ರುತಮ್ ।
ಆರಬ್ಧಕರ್ಮನಾಶೇ ಹಿ ಪತೇದ್ ದೇಹೋಽಪ್ಯಪಾಪಿನಃ ॥

ಕೆಲವೊಮ್ಮೆ ಸಹದೇವ, ನಕುಲ, ಅರ್ಜುನ- ಈ ಮೂವರಲ್ಲಿ ಅತಿಯಾದ ಅಹಂಕಾರವೂ ಉಂಟಾಗುವುದು. ಆದರೂ ಅದಕ್ಕೆ ದೇಹಪಾತ ಫಲವಲ್ಲ. ಮನುಷ್ಯರಿಗೆ ಮುಕ್ತಿಯಲ್ಲಿ ಆನಂದದ ವೃದ್ಧಿ-ಹ್ರಾಸಗಳೆ ಅದಕ್ಕೆ ಫಲವೆಂದು ಶ್ರುತಿ ಸಿದ್ಧವಾಗಿದೆ. 'ಮನುಷ್ಯರಿಗೂ ಅಪರೋಕ್ಷ ಜ್ಞಾನಾನಂತರ ಗುಣ-ದೋಷಗಳು ಅಧಿಕ ಅಥವಾ ಅಲ್ಪವಾದ ಮಾತ್ರಕ್ಕೆ ಸಂಸಾರದಲ್ಲಿರುವ ದೇಹಪಾತಾದಿಗಳು ಅದರ ಫಲವಾಗಿರುವುದಿಲ್ಲ ಎಂದಮೇಲೆ ದೇವತೆಗಳಿಗೆ ಏನು ಹೇಳಬೇಕು? ಪಾಪರಹಿತನ ದೇಹವೂ ಕೂಡ ಪ್ರಾರಬ್ಧ ತೀರಿದಾಗ ಪತನ ಹೊಂದುತ್ತದೆ.

ಯುಧಿಷ್ಠಿರೋಽಪಿ ಹಿ ಸ್ವರ್ಗಂ ಬುಭುಜೇ ನೈವ ತತ್ತನುಃ ।
ಅತಿಮಾನಾದಯೋ ದೋಷಾಃ ಕುತ ಏವ ಹಿ ಮಾರುತೇಃ ॥

ಅನಾದಿಕಾಲತಃ ಸರ್ವದೋಷಹೀನಾ ಗುಣಾಧಿಕಾಃ ।
ಸರ್ವಜೀವಗಣೇಭ್ಯೋ ಯೇ ತೇ ಹಿ ವಾಯುತ್ವಮಾಪ್ನುಯುಃ ।
ಋಜವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥

ಧರ್ಮರಾಜನೂ ಕೂಡ ಸಶರೀರನಾಗಿ ಸ್ವರ್ಗಸುಖವನ್ನು ಅನುಭವಿಸಲಿಲ್ಲ. ಅದರಿಂದ ಅತಿಯಾದ ಅಹಂಕಾರ ಮುಂತಾದುವು ಭೀಮನಿಗೆ ಹೇಗೆ ದೋಷವಾಗುವವು? ಅನಾದಿಕಾಲದಿಂದ ಗರುಡ-ಶೇಷಾದಿ ಎಲ್ಲ ಜೀವ ಸಮೂಹಗಳಿಗಿಂತ ಅಧಿಕ ಗುಣ ಉಳ್ಳವರು, ಸರ್ವದೋಷರಹಿತರು, ದೇವತೆಗಳಿಗೂ ದೇವತೆಗಳು - ಇಂತಹ ಋಜುಗಳೆಂಬ ದೇವತೆಗಳು ಯಾರೋ ಅವರೇ ವಾಯು ಪದವಿಗೆ ಬರುತ್ತಾರೆ ತಾನೆ?

ಅಭಾವಂ ಹ್ಯತಿಮಾನಾದೇರ್ಭೀಮಸ್ಯಾಹ ಚ ಕೇಶವಃ ॥

'ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥'

ಇತಿ ತಸ್ಮಾದ್ ಯಥಾ ಯುದ್ಧೇ ಧರ್ಮಹಾನಿಮಮನ್ಯತ ।
ಏವಮತ್ರಾಪ್ಯಧರ್ಮೇಣ ದೇಹಪಾತಂ ನೃಪೋಽಬ್ರವೀತ್ ॥

ಅತಿಯಾದ ಅಹಂಕಾರ ಮುಂತಾದ ದೋಷಗಳು ಭೀಮನಲ್ಲಿ ಇಲ್ಲವೆಂದು ಶ್ರೀಕೃಷ್ಣನೇ ಹೇಳಿದ್ದಾನೆ: ನೀನು ನಿನ್ನಲ್ಲಿ ಬಹಳ ಅಲ್ಪಗುಣಗಳನ್ನೆ ಹೇಳಿಕೊಳ್ಳುವಿ. ಅದಕ್ಕಿಂತ ಸಾವಿರಪಾಲು ಅಧಿಕ ಗುಣಗಳನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ' ಎಂದು. ಅದರಿಂದ ಧರ್ಮರಾಜ ಧರ್ಮಯುದ್ಧದಲ್ಲಿ ಅಧರ್ಮವಾಯಿತೆಂದುಕೊಂಡಂತೆ ದೇಹಪಾತ ಪಾಪದಿಂದಾಯಿತು ಎಂದ.

ಪೂಜ್ಯೇಭ್ಯಃ ಪೂರ್ವಮೇವೈಷಾಂ ದೇಹಪಾತಮಭೀಪ್ಸತಾಮ್ ।
ತತ್ಕಮಾತ್ ದೇಹಪಾತೋಽಭೂನ್ನ ಪಾಪಾನ್ಮುಚ್ಯತಾಂ ಯಥಾ ॥

ನ ಹಿ ಪಾಪಫಲಾನ್ಮುಕ್ತೈ ದೇಹಪಾತಃ ಕಥಂಚನ ।
ಕಿಂ ತು ಕರ್ಮಕ್ಷಯಾದೇವ ತಥಾ ಸರ್ವತ್ರ ನಿಶ್ಚಿತಃ ॥

ದೇವತೆಗಳು ಮುಕ್ತಿಗೆ ಹೋಗುವಾಗ ಉತ್ತಮದೇವತೆಗಳಿಗಿಂತ ಮೊದಲು ತಮ್ಮ ದಿವ್ಯದೇಹ ಪತನ ಹೊಂದಲಿ ಎಂಬ ಇಚ್ಛೆಯಿಂದಲೆ ಅವರಿಗೆ ಹಾಗೆ ದೇಹಪಾತವಾಗುವುದೆ ಹೊರತು ಪಾಪದಿಂದಲ್ಲ. ಮುಕ್ತಿಯಲ್ಲಿ ದೇಹಪಾತವಾಗುವುದು ಸರ್ವಥಾ ಪಾಪದ ಫಲವಲ್ಲ. ಕರ್ಮಕ್ಷಯದಿಂದಲೆ ಅದು ಸಂಭವಿಸುತ್ತದೆ ಎನ್ನುವುದು ಬ್ರಹ್ಮಸೂತ್ರ ಮುಂತಾದ ಸಕಲ ಶಾಸ್ತ್ರಗಳ ನಿರ್ಣಯ. ಹಾಗೇ ವಯಸ್ಸಿನಲ್ಲಿ ಹಿರಿಯರಾದವರಿಗಿಂತ ಮೊದಲು ಕಿರಿಯರು ತಮ್ಮ ಮಾನುಷ ದೇಹ ಪತನ ಹೊಂದಲಿ ಎಂದು ಬಯಸಿದ್ದರಿಂದ ಆ ಕ್ರಮದಿಂದಲೆ ಪಾಂಡವರಿಗೂ ದ್ರೌಪದಿಗೂ ದೇಹಪತನವಾಯಿತೆ ಹೊರತು ಪಾಪದಿಂದಲ್ಲ.

★ ★ ★ ★ ★

ಮೂರನೆಯ ಅಧ್ಯಾಯ

ಮೇರುಪರ್ವತವನ್ನು ಏರುತ್ತಾ ಯುಧಿಷ್ಠಿರನು ಹಿರಿತನಕ್ಕೆ ಅನುಸಾರವಾಗಿ ಹಿಂಬಾಲಿಸುತ್ತಿರುವ ದ್ರೌಪದಿಯೇ ಮೊದಲಾದವರು ಯೋಗಭ್ರಷ್ಟರಾಗಿ ಕ್ರಮವಾಗಿ ಭೂಮಿಯಲ್ಲಿ ಬೀಳುತ್ತಿರುವಾಗ ಭೀಮನ ಪ್ರಶ್ನೆಯಂತೆ ಅವನಿಗೆ ಅವರು ಬಿದ್ದುದಕ್ಕೆ ಕಾರಣವನ್ನು ತಿಳಿಸುವುದು ಹಾಗೂ ಕೇವಲ ತನ್ನನ್ನು ಹಿಂಬಾಲಿಸುತ್ತಿರುವ ಶ್ವಾನದೊಂದಿಗೆ ಮುಂದೆ ನಡೆಯುವುದು.

ವೈಶಂಪಾಯನಃ

ತತಸ್ತೇ ನಿಯತಾತ್ಮಾನ ಉದೀಚೀಂ ದಿಶಮಾಸ್ಥಿತಾಃ ।
ದದೃಶುರ್ಯೋಗಯುಕ್ತಾಶ್ಚ ಹಿಮವಂತಂ ಮಹಾಗಿರಿಮ್ ॥೧॥

ವೈಶಂಪಾಯನ– ಅನಂತರ ಆತ್ಮನಿಗ್ರಹವುಳ್ಳ, ಯೋಗಯುಕ್ತರಾದ ಆ ಪಾಂಡವರು ಉತ್ತರದಿಕ್ಕಿಗೆ ಸಾಗುತ್ತಾ ಪರ್ವತಶ್ರೇಷ್ಠನಾದ ಹಿಮವಂತನನ್ನು ಕಂಡರು.

ತಂ ಚಾಪ್ಯತಿಕ್ರಮಂತಸ್ತೇ ದದೃಶುರ್ವಾಲುಕಾರ್ಣವಮ್ ।
ಅವೈಕ್ಷಂತ ಮಹಾಶೈಲಂ ಮೇರುಂ ಶಿಖರಿಣಾಂ ವರಮ್ ॥೨॥

ಆ ಹಿಮವಂತನನ್ನೂ ದಾಟಿ ಮುಂದುವರೆದ ಅವರು ಮರುಳುಗಾಡೊಂದನ್ನು ಕಂಡರು. ನಂತರ ಪರ್ವತದಲ್ಲಿ ಶ್ರೇಷ್ಠವಾದ ಮಹಾಮೇರುಪರ್ವತವನ್ನು ನೋಡಿದರು.

ತೇಷಾಂ ತು ಗಚ್ಛತಾಂ ಶೀಘ್ರಂ ಸರ್ವೇಷಾಂ ಯೋಗಧರ್ಮಿಣಾಮ್ ।
ಯಾಜ್ಞಸೇನೀ ಭ್ರಷ್ಟಯೋಗಾ ನಿಪಪಾತ ಮಹೀತಳೇ ॥೩॥

ಹೀಗೆ ಯೋಗಧರ್ಮವನ್ನು ಆಶ್ರಯಿಸಿಕೊಂಡು ವೇಗವಾಗಿ ಸಾಗುತ್ತಿರುವ ಅವರಲ್ಲಿ ದ್ರೌಪದಿಯು ಯೋಗಭ್ರಷ್ಟಳಾಗಿ ಭೂತಳದಲ್ಲಿ ಬಿದ್ದುಬಿಟ್ಟಳು.

ತಾಂ ತು ಪ್ರಪತಿತಾಂ ದೃಷ್ಟ್ವಾ ಭೀಮಸೇನೋ ಮಹಾಬಲಃ ।
ಉವಾಚ ಧರ್ಮರಾಜಾನಂ ಯಾಜ್ಞಸೇನೀಮವೇಕ್ಷ್ಯ ಹ ॥೪॥

ಅವಳು ಬಿದ್ದುದನ್ನು ನೋಡಿದ ಮಹಾಬಲಿಷ್ಠನಾದ ಭೀಮಸೇನನು ದ್ರೌಪದಿಯನ್ನು ನೋಡುತ್ತಾ, ಧರ್ಮರಾಜನನ್ನು ಕುರಿತು ಹೀಗೆಂದನು.

ನಾಧರ್ಮಶ್ಚರಿತಃ ಕಶ್ಚಿದ್ ರಾಜಪುತ್ರ್ಯಾ ಪರಂತಪ ।
ಕಾರಣಂ ಕಿನ್ನು ತದ್ ಬ್ರೂಹಿ ಯತ್ಕೃಷ್ಣಾ ಪತಿತಾ ಭುವಿ ॥೫॥

ಹೇ ಪರಂತಪನೇ, ರಾಜಪುತ್ರಿಯಾದ ದ್ರೌಪದಿಯಿಂದ ಯಾವುದೇ ಅಧರ್ಮಾಚರಣೆಯೂ ನಡೆದಿರಲಿಲ್ಲ. ಆದರೂ ದ್ರೌಪದಿಯು ಭೂಮಿಯಲ್ಲಿ ಬೀಳಲು ಕಾರಣವೇನೆಂಬುದನ್ನು ಹೇಳು.

ಯುಧಿಷ್ಠಿರಃ

ಪಕ್ಷಪಾತೋ ಮಹಾನಸ್ಯಾ ವಿಶೇಷೇಣ ಧನಂಜಯೇ ।
ತಸ್ಯೈ ತತ್ಫಲಮದ್ಯೈಷಾ ಭುಂಕ್ತೇ ಪುರುಷಸತ್ತಮ ॥೬॥

ಯುಧಿಷ್ಠಿರ– ಹೇ ಪುರುಷಶ್ರೇಷ್ಠನೇ, ಇವಳಿಗೆ ವಿಶೇಷವಾಗಿ ಅರ್ಜುನನಲ್ಲಿ ಪಕ್ಷಪಾತಗುಣವಿತ್ತು. ಅದರ ಫಲವನ್ನೇ ಅವಳಿಂದು ಅನುಭವಿಸುತ್ತಿದ್ದಾಳೆ.

ವೈಶಂಪಾಯನಃ

ಏವಮುಕ್ತ್ವಾ ತ್ವನವೇಕ್ಷ್ಯೈನಾಂ ಯಯೌ ಭರತಸತ್ತಮಃ ।
ಸಮಾಧಾಯ ಮನೋ ಧೀಮಾನ್ ಧರ್ಮಾತ್ಮಾ ಪುರುಷರ್ಷಭಃ ॥೭॥

ವೈಶಂಪಾಯನ– ಇಷ್ಟು ಹೇಳಿ ಧೀಮಂತನಾದ, ಧರ್ಮಾತ್ಮನಾದ, ಪುರುಷ ಶ್ರೇಷ್ಠನಾದ, ಭರತವಂಶದಲ್ಲಿ ಅತ್ಯುತ್ತಮನಾದ ಯುಧಿಷ್ಠಿರನು ಮನಸ್ಸನ್ನು ಸಮಾಧಾನ ಪಡಿಸಿಕೊಂಡು, ಅವಳನ್ನು ನೋಡದೆಯೇ ಮುಂದೆ ಸಾಗಿದನು.

ಸಹದೇವಸ್ತತೋ ವಿದ್ವಾನ್ ನಿಪಪಾತ ಮಹೀತಳೇ ।
ತಂ ಚಾಪಿ ಪತಿತಂ ದೃಷ್ಟ್ವಾ ಭೀಮೋ ರಾಜಾನಮಬ್ರವೀತ್ ॥೮॥

ಸ್ವಲ್ಪ ಹೊತ್ತಿನ ನಂತರ ಜ್ಞಾನಿಯಾದ ಸಹದೇವನು ಭೂತಳದಲ್ಲಿ ಬಿದ್ದುಬಿಟ್ಟನು. ಹೀಗೆ ಬಿದ್ದ ಅವನನ್ನು ನೋಡಿದ ಭೀಮಸೇನನು ರಾಜನ ಬಳಿ ಹೀಗೆಂದನು.

ಯೋಽಯಮಸ್ಮಾಸು ಸರ್ವೇಷು ಶುಶ್ರೂಷುರನಹಂಕೃತಃ ।
ಸೋಽಯಂ ಮಾದ್ರವತೀಪುತ್ರಃ ಕಸ್ಮಾನ್ನಿಪತಿತೋ ಭುವಿ ॥೯॥

ಯಾವನು ಅಹಂಕಾರವಿಲ್ಲದೆ ನಮ್ಮೆಲ್ಲರ ಸೇವೆಗಾಗಿ ನಿಲ್ಲುತ್ತಿದ್ದನೋ ಅಂತಹ ಈ ಸಹದೇವನು ಭೂಮಿಯಲ್ಲೇಕೆ ಪತಿತನಾದನು?

ಯುಧಿಷ್ಠಿರಃ

ಆತ್ಮನಃ ಸದೃಶಂ ಪ್ರಾಜ್ಞಂ ನೈಷೋಽಮನ್ಯತ ಕಂಚನ ।
ತೇನ ದೋಷೇಣ ಪತಿತೋ ವಿದ್ವಾನೇಷ ನೃಪಾತ್ಮಜಃ ॥೧೦॥

ಯುಧಿಷ್ಠಿರ– ಈ ವಿದ್ವಾಂಸನಾದ ರಾಜಪುತ್ರನು ತನಗೆ ಸದೃಶವಾದ ಬುದ್ಧಿವಂತರು ಯಾರೂ ಇಲ್ಲ ಎಂದು ಭಾವಿಸಿದ್ದನು. ಆ ದೋಷದಿಂದಲೇ ಈಗ ಪತಿತನಾದನು.

ವೈಶಂಪಾಯನಃ

ಇತ್ಯುಕ್ತ್ವಾ ತಂ ಸಮುತ್ಸೃಜ್ಯ ಸಹದೇವಂ ಯಯೌ ತದಾ ।
ಭ್ರಾತೃಭಿಃ ಸಹ ಕೌಂತೇಯಃ ಶುನಾ ಚೈವ ಯುಧಿಷ್ಠಿರಃ ॥೧೧॥

ವೈಶಂಪಾಯನ– ಇಷ್ಟು ಹೇಳಿದ ಕುಂತೀಪುತ್ರನಾದ ಯುಧಿಷ್ಠಿರನು ಸಹದೇವನನ್ನು ಅಲ್ಲಿಯೇ ಬಿಟ್ಟು, ಉಳಿದ ಸಹೋದರರೊಂದಿಗೆ ಮತ್ತು ಶ್ವಾನದೊಂದಿಗೆ ಮುಂದೆ ನಡೆದನು.

ಕೃಷ್ಣಾಂ ನಿಪತಿತಾಂ ದೃಷ್ಟ್ವಾ ಸಹದೇವಂ ಚ ಪಾಂಡವಮ್ ।
ಆರ್ತೋ ಬಂಧುಪ್ರಿಯಃ ಶೂರೋ ನಕುಲೋ ನಿಪಪಾತ ಹ ॥೧೨॥

ದ್ರೌಪದಿಯೂ, ಪಾಂಡವನಾದ ಸಹದೇವನೂ ಬಿದ್ದುದನ್ನು ನೋಡಿ, ಶೋಕಾವಿಷ್ಟನಾದ ಬಂಧುಪ್ರಿಯನಾದ ಶೂರ ನಕುಲನು ಅವನೂ ಬಿದ್ದನು.

ತಸ್ಮಿನ್ನಿಪತಿತೇ ವೀರೇ ನಕುಲೇ ಚಾರುದರ್ಶನೇ ।
ಪುನರೇವ ತದಾ ಭೀಮೋ ರಾಜಾನಮಿದಮಬ್ರವೀತ್ ॥೧೩॥

ಸುಂದರಾಂಗನಾದ ಆ ವೀರ ನಕುಲನೂ ಬಿದ್ದಾಗ ಮತ್ತೆ ಭೀಮನು ರಾಜನ ಬಳಿ ಹೀಗೆಂದನು.

ಯೋಽಯಮಕ್ಷತಧರ್ಮಾತ್ಮಾ ಭ್ರಾತಾ ವಚನಕಾರಕಃ ।
ರೂಪೇಣಾಪ್ರತಿಮೋ ಲೋಕೇ ನಕುಲಃ ಪತಿತೋ ಭುವಿ ॥೧೪॥

ಯಾವನು ಸ್ವಲ್ಪವೂ ಚ್ಯುತಿಬರದಂತೆ ಧರ್ಮವನ್ನು ಮೈಗೂಡಿಸಿಕೊಂಡಿದ್ದನೋ, ಹೇಳಿದ ಎಲ್ಲವನ್ನೂ ನಡೆಸಿಕೊಡುತ್ತಿದ್ದನೋ, ಲೋಕದಲ್ಲಿ ಅಪ್ರತಿಮ ರೂಪಶಾಲಿಯೋ ಅಂತಹ ಸಹೋದರನಾದ ನಕುಲನೂ ಭೂಮಿಯಲ್ಲಿ ಬಿದ್ದನಲ್ಲವೆ?

ಇತ್ಯುಕ್ತೋ ಭೀಮಸೇನೇನ ಪ್ರತ್ಯುವಾಚ ಯುಧಿಷ್ಠಿರಃ ।
ನಕುಲಂ ಪ್ರತಿ ಧರ್ಮಾತ್ಮಾ ಸರ್ವಬುದ್ಧಿಮತಾಂವರಃ ॥೧೫॥

ಹೀಗೆ ಭೀಮಸೇನನು ಹೇಳಿದಾಗ ಎಲ್ಲ ಬುದ್ಧಿಶಾಲಿಗಳಲ್ಲಿ ಶ್ರೇಷ್ಠನಾದ, ಧರ್ಮಾತ್ಮನಾದ ಯುಧಿಷ್ಠಿರನು ನಕುಲನನ್ನು ಕುರಿತು ಹೀಗೆ ಉತ್ತರಿಸಿದನು.

ರೂಪೇಣ ಮತ್ಸಮೋ ನಾಸ್ತಿ ಕಶ್ಚಿದಿತ್ಯಸ್ಯ ದರ್ಶನಮ್ ।
ಅಧಿಕಶ್ಚಾಹಮೇವೈಕ ಇತ್ಯಸ್ಯ ಮನಸಿ ಸ್ಥಿತಮ್ ॥೧೬॥

ನಕುಲಃ ಪತಿತಸ್ತಸ್ಮಾದಾಗಚ್ಛ ತ್ವಂ ವೃಕೋದರ ।
ಯಸ್ಯ ಯದ್ವಿಹಿತಂ ವೀರ ಸೋಽವಶ್ಯಂ ತದುಪಾಶ್ನುತೇ ॥೧೭॥

ರೂಪದಿಂದ ತನಗೆ ಸರಿಸಾಟಿಯಾದವರು ಯಾರೂ ಇಲ್ಲ. ನಾನೊಬ್ಬನೇ ಅಧಿಕವಾದ ರೂಪಶಾಲಿ ಎಂಬುದಾಗಿ ಇವನ ಮನಸ್ಸಿನಲ್ಲಿ ಭಾವವಿತ್ತು. ಇದರಿಂದಾಗಿ ನಕುಲನು ಪತಿತನಾದನು. ಹೇ ವೃಕೋದರನೇ, ನೀನು ಬಂದು ಬಿಡು. ವೀರನೇ, ಯಾವಾತನಿಗೆ ಯಾವುದು ವಿಹಿತವಾಗಿರುವುದೋ ಅವನು ಅವಶ್ಯವಾಗಿಯೂ ಅದನ್ನು ಅನುಭವಿಸುತ್ತಾನೆ.

ತಾಂಸ್ತು ಪ್ರಪತಿತಾನ್ ದೃಷ್ಟ್ವಾ ಪಾಂಡವಃ ಶ್ವೇತವಾಹನಃ ।
ಪಪಾತ ಶೋಕಸಂತಪ್ತಸ್ತತೋಽನು ಪರವೀರಹಾ ॥೧೮॥

ಆ ಮೂರು ಮಂದಿ ಬಿದ್ದುದನ್ನು ನೋಡಿ ಶತ್ರುವೀರರನ್ನು ಸಂಹರಿಸಿದ, ಬಿಳಿ ಕುದುರೆಗಳನ್ನು ಕಟ್ಟಿದ ರಥವುಳ್ಳ, ಪಾಂಡುಪುತ್ರನಾದ ಅರ್ಜುನನು ದುಃಖಸಂತಪ್ತನಾಗಿ ಅವರ ನಂತರ ತಾನೂ ಬಿದ್ದನು.

ತಸ್ಮಿಂಸ್ತು ಪುರುಷವ್ಯಾಘ್ರೇ ಪತಿತೇ ಶಕ್ರತೇಜಸಿ ।
ಮ್ರಿಯಮಾಣೇ ದುರಾಧರ್ಷೇ ಭೀಮೋ ರಾಜಾನಮಬ್ರವೀತ್ ॥೧೯॥

ಪುರುಷಶ್ರೇಷ್ಠನಾದ, ಇಂದ್ರನ ತೇಜಸ್ಸುಳ್ಳ, ಬಲಾತ್ಕಾರಕ್ಕೆ ಒಳಪಡದ ಆ ಅರ್ಜುನನು ಬಿದ್ದು ಮರಣಹೊಂದುತ್ತಿರಲು ಭೀಮನು ರಾಜನ ಬಳಿ ಹೀಗೆಂದನು.

ಅನೃತಂ ನ ಸ್ಮರಾಮ್ಯಸ್ಯ ಸ್ವೈರೇಷ್ವಪಿ ಮಹಾತ್ಮನಃ ।
ಅಥ ಕಸ್ಯ ವಿಕಾರೋಽಯಂ ಯೇನಾಯಂ ಪತಿತೋ ಭುವಿ ॥೨೦॥

ಮಹಾತ್ಮನಾದ ಪಾರ್ಥನು ಹಾಸ್ಯಪ್ರಸಂಗದಲ್ಲಿಯೂ ಸುಳ್ಳಾಡಿರುವುದು ನನ್ನ ನೆನಪಿಗೆ ಬರುತ್ತಿಲ್ಲ. ಮತ್ತೆ ಯಾವುದರ ಪರಿಣಾಮದಿಂದ ಇವನು ಭೂಮಿಯಲ್ಲಿ ಪತಿತನಾದನು?

ಯುಧಿಷ್ಠಿರಃ

ಏಕೋಹಂ ನಿರ್ದಹೇಯಂ ವೈ ಶತ್ರೂನಿತ್ಯರ್ಜುನೋಽಬ್ರವೀತ್ ।
ನ ಚ ತತ್ಕೃತವಾನೇಷ ಶೂರಮಾನೀ ತತೋಽಪತತ್ ॥೨೧॥

ಯುಧಿಷ್ಠಿರ– ಈ ಅರ್ಜುನನು ನಾನೊಬ್ಬನೇ ಶತ್ರುಗಳನ್ನು ಸುಟ್ಟುಬಿಡಬಲ್ಲೆ ಎಂದು ಹೇಳಿದ್ದನು. ತಾನೇ ಶೂರನೆಂಬ ದರ್ಪವುಳ್ಳ ಇವನು ಹೇಳಿದಂತೆ ಮಾಡಲಿಲ್ಲ. ಹಾಗಾಗಿ ಬಿದ್ದನು.

ಅವಮೇನೇ ಧನುರ್ಗ್ರಾಹಾನೇಷ ಸರ್ವಾಂಶ್ಚ ಫಲ್ಗುನಃ ।
ತಥಾ ಚೈತನ್ನ ತು ತಥಾ ಕರ್ತವ್ಯಂ ಭೂತಿಮಿಚ್ಛತಾ ॥೨೨॥

ಈ ಫಲ್ಗುನನು ಎಲ್ಲ ಧನುರ್ಧಾರಿಗಳನ್ನೂ ಅವಮಾನಿಸುತ್ತಿದ್ದನು. ಏಳಿಗೆಯನ್ನು ಬಯಸುವವನು ಆ ರೀತಿ ಮಾಡಕೂಡದು. ಆದ್ದರಿಂದಲೇ ಹೀಗಾಯಿತು.

ವೈಶಂಪಾಯನಃ

ಇತ್ಯುಕ್ತ್ವಾ ಪ್ರಸ್ಥಿತೋ ರಾಜಾ ಭೀಮೋಽಥ ನಿಪಪಾತ ಹ ।
ಪತಿತಶ್ಚಾಬ್ರವೀದ್ ಭೀಮೋ ಧರ್ಮರಾಜಂ ಯುಧಿಷ್ಠಿರಮ್ ॥೨೩॥

ವೈಶಂಪಾಯನ– ಇಷ್ಟು ಹೇಳಿ ರಾಜನು ಮುಂದೆ ಹೊರಟನು. ಅಷ್ಟರಲ್ಲಿ ಭೀಮನೂ ಬಿದ್ದನು. ಬೀಳುತ್ತಿರುವ ಭೀಮನು ಧರ್ಮರಾಜನಾದ ಯುಧಿಷ್ಠಿರನನ್ನು ಕುರಿತು ಹೀಗೆಂದನು.

ಭೋ ಭೋ ರಾಜನ್ನವೇಕ್ಷಸ್ವ ಪತಿತೋಽಹಂ ಪ್ರಿಯಸ್ತವ ।
ಕಿಂನಿಮಿತ್ತಂ ಚ ಪತನಂ ಬ್ರೂಹಿ ಮೇ ಯದಿ ವೇತ್ಥ ಹ ॥೨೪॥

ಹೇ ರಾಜನೇ, ನಿನಗೆ ಪ್ರಿಯನಾದ ನಾನೂ ಬಿದ್ದಿರುವೆನು, ನೋಡು. ನೀನು ತಿಳಿದಿರುವೆಯಾದರೆ ನನ್ನ ಪತನಕ್ಕೆ ಕಾರಣವೇನೆಂದು ಹೇಳು.

ಯುಧಿಷ್ಠಿರಃ

ಅತಿಭುಕ್ತಂ ಚ ಭವತಾ ಪ್ರಾಣೇನ ಚ ವಿಕತ್ಥಸೇ ।
ಅನವೇಕ್ಷ್ಯ ಪರಂ ಪಾರ್ಥ ತೇನಾಸಿ ಪತಿತಃ ಕ್ಷಿತೌ ॥೨೫॥

ಯುಧಿಷ್ಠಿರ– ಹೇ ಪಾರ್ಥನೇ, ನೀನು ಅಗತ್ಯಕ್ಕಿಂತ ಹೆಚ್ಚಾಗಿ ತಿನ್ನುತ್ತಿದ್ದೆ. ಅಲ್ಲದೇ ಎದುರಿಗಿರುವವರನ್ನು ಲೆಕ್ಕಿಸದೆ ನಿನ್ನ ಬಲದ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದೆ. ಇದರಿಂದಾಗಿಯೇ ನೀನು ಭೂಮಿಯಲ್ಲಿ ಬಿದ್ದಿರುವೆ.

ಇತ್ಯುಕ್ತ್ವಾ ತಂ ಮಹಾಬಾಹುರ್ಜಗಾಮಾನವಲೋಕಯನ್ ।
ಶ್ವಾಪ್ಯೇಕೋऽನುಯಯೌ ಯಸ್ತೇ ಬಹುಶಃ ಕೀರ್ತಿತೋ ಮಯಾ ॥೨೬॥

ಇಷ್ಟು ಹೇಳಿ ಮಹಾಬಾಹುವಾದ ಯುಧಿಷ್ಠಿರನು ಅವನನ್ನು ಮತ್ತೆ ನೋಡದೆ ಮುನ್ನಡೆದನು. ಈ ಹಿಂದೆ ನಾನು ಬಹಳ ಬಾರಿ ತಿಳಿಸಿದಂತೆ ಆ ಶ್ವಾನವೊಂದೇ ಇವನನ್ನು ಹಿಂಬಾಲಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಮಹಾಪ್ರಸ್ಥಾನಿಕಪರ್ವಣಿ ಭೀಮಾರ್ಜುನ-ನಕುಲ-ಸಹದೇವ-ದ್ರೌಪದೀ
ದೇಹಪತನನಿಮಿತ್ತಕಥನಂ ನಾಮ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಮಹಾಪ್ರಸ್ಥಾನಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಶ್ವಾನದೊಂದಿಗೆ ಮುಂದೆ ನಡೆಯುತ್ತಿರುವ ಯುಧಿಷ್ಠಿರನಿಗೆ ಇಂದ್ರನು ಸ್ವರ್ಗಕ್ಕೆ ತೆರಳಲು ತನ್ನ ರಥವನ್ನೇರುವಂತೆ ತಿಳಿಸುವುದು. ಯುಧಿಷ್ಠಿರನು ಶ್ವಾನವನ್ನು ಬಿಟ್ಟು ರಥವನ್ನೇರಲು ಬಯಸದಿದ್ದಾಗ, ಯಮನು ನಿಜಸ್ವರೂಪವನ್ನು ತೋರಿಸಿ ಅವನನ್ನು ಪ್ರಶಂಸಿಸುವುದು. ಅನಂತರ ಯಮ-ಇಂದ್ರಾದಿಗಳ ಜೊತೆಗೆ ರಥದಲ್ಲಿ ಸ್ವರ್ಗಕ್ಕೆ ತೆರಳಿದ ಯುಧಿಷ್ಠಿರನು ಅಲ್ಲಿ ಭೀಮಾದಿಗಳನ್ನು ಕಾಣದೆ ಸಹೋದರರಿಲ್ಲದ ಸ್ಥಳವು ಸ್ವರ್ಗವಾಗಿದ್ದರೂ ನನಗೆ ಅದು ಬೇಡ ಎಂದು ಹೇಳುತ್ತಾ, ಭೀಮಾದಿಗಳು ಇರುವಲ್ಲಿಗೆ ತನ್ನನ್ನು ಕಳುಹಿಸಿರೆಂದು ಇಂದ್ರನನ್ನು ಪ್ರಾರ್ಥಿಸುವುದು.

ವೈಶಂಪಾಯನಃ

ತತಃ ಸನ್ನಾದಯನ್ ಶಕ್ರೋ ದಿವಂ ಭೂಮಿಂ ಚ ಸರ್ವಶಃ ।
ರಥೇನೋಪಯಯೌ ಪಾರ್ಥಮಾರೋಹೇತ್ಯಬ್ರವೀಚ್ಚ ತಮ್ ॥೧॥

ವೈಶಂಪಾಯನ– ಅದೇ ಸಮಯಕ್ಕೆ ಇಂದ್ರನು ಭೂಮ್ಯಾಕಾಶಗಳನ್ನು ಸುತ್ತಲೂ ಮಂಗಳಧ್ವನಿಗಳಿಂದ ಮೊಳಗಿಸುತ್ತಾ ರಥದಿಂದ ಸಾಗಿಬಂದು ಯುಧಿಷ್ಠಿರನನ್ನು ಕುರಿತು 'ರಥವನ್ನೇರು' ಎಂದನು.

ಸ್ವಭ್ರಾತೄನ್ ಪತಿತಾನ್ ದೃಷ್ಟ್ವಾ ಧರ್ಮರಾಜೋ ಯುಧಿಷ್ಠಿರಃ ।
ಅಬ್ರವೀಚ್ಛೋಕಸಂತಪ್ತಃ ಸಹಸ್ರಾಕ್ಷಮಿದಂ ವಚಃ ॥೨॥

ಧರ್ಮರಾಜನಾದ ಯುಧಿಷ್ಠಿರನು ಬಿದ್ದಿರುವ ತನ್ನ ಸಹೋದರರನ್ನು ನೋಡುತ್ತಾ ದುಃಖತಪ್ತನಾಗಿ ಇಂದ್ರನನ್ನು ಕುರಿತು ಈ ಮಾತನ್ನಾಡಿದನು.

ಧರ್ಮಃ

ಭ್ರಾತರಃ ಪತಿತಾ ಮೇಽತ್ರ ಗಚ್ಛೇಯುಸ್ತೇ ಮಯಾ ಸಹ ।
ನ ವಿನಾ ಭ್ರಾತೃಭಿಃ ಸ್ವರ್ಗಮಿಚ್ಛೇ ಗಂತುಂ ಸುರೇಶ್ವರ ॥೩॥

ಧರ್ಮರಾಜ– ಹೇ ಸುರೇಶ್ವರನೇ, ನನ್ನ ಸಹೋದರರು ಇಲ್ಲೇ ಬಿದ್ದಿರುವರು. ಅವರೂ ನನ್ನ ಜೊತೆಗೆ ಹೋಗುವಂತಾಗಲಿ. ಸಹೋದರರಿಲ್ಲದೆ ಸ್ವರ್ಗವನ್ನೇರಲು ನನಗೆ ಇಷ್ಟವಿಲ್ಲ.

ಸುಕುಮಾರೀ ಸುಖಾರ್ಹಾ ಚ ರಾಜಪುತ್ರೀ ಪುರಂದರ ।
ಸಾಽಸ್ಮಾಭಿಃ ಸಹ ಗಚ್ಛೇತ ತದ್ಭವಾನನುಮನ್ಯತಾಮ್ ॥೪॥

ಹೇ ಪುರಂದರನೇ, ಸುಕುಮಾರಿಯಾಗಿದ್ದು, ಸುಖಾನುಭವಕ್ಕೆ ಯೋಗ್ಯಳಾದ, ರಾಜಪುತ್ರಿಯಾದ ಆ ದ್ರೌಪದಿಯೂ ನಮ್ಮ ಜೊತೆಗೆ ಬರುವಂತಾಗಲಿ. ಅದನ್ನೂ ನೀನು ಅನುಮತಿಸಬೇಕು.

ಶಕ್ರಃ

ಭ್ರಾತೄನ್ ದ್ರಕ್ಷ್ಯಸಿ ಸ್ವರ್ಗೇ ತ್ವಮಗ್ರತಸ್ತ್ರಿದಿವಂ ಗತಾನ್ ।
ಕೃಷ್ಣಯಾ ಸಹಿತಾನ್ ಸರ್ವಾನ್ ಮಾ ಶುಚೋ ಭರತರ್ಷಭ ॥೫॥

ಇಂದ್ರ– ಹೇ ಭರತರ್ಷಭನೇ, ದುಃಖಿಸಬೇಡ. ದ್ರೌಪದಿಯೊಂದಿಗೆ ಕೂಡಿಕೊಂಡು ಈ ಮೊದಲೇ ಸ್ವರ್ಗವನ್ನೇರಿದ ನಿನ್ನೆಲ್ಲ ಸಹೋದರರನ್ನು ನೀನು ಸ್ವರ್ಗದಲ್ಲಿ ನೋಡಲಿರುವೆ.

ನಿಕ್ಷಿಪ್ಯ ಮಾನುಷಂ ದೇಹಂ ಗತಾಸ್ತೇ ಭರತರ್ಷಭ ।
ಅನೇನ ತ್ವಂ ಶರೀರೇಣ ಸ್ವರ್ಗಂ ಗಂತಾ ನ ಸಂಶಯಃ ॥೬॥

ಹೇ ಭರತರ್ಷಭನೇ, ಅವರೆಲ್ಲರೂ ಮನುಷ್ಯದೇಹವನ್ನು ಇಲ್ಲೇ ಬಿಟ್ಟು ಸ್ವರ್ಗವನ್ನು ಸೇರಿರುವರು. ನೀನು ಈ ಶರೀರದ ಜೊತೆಗೆ ಸ್ವರ್ಗವನ್ನೇರಬಹುದಾಗಿದೆ. ಇದರಲ್ಲಿ ಸಂಶಯವಿಲ್ಲ.

ಯುಧಿಷ್ಠಿರಃ

ಅಯಂ ಶ್ವಾ ಭೂತಭವ್ಯೇಶ ಭಕ್ತೋ ಮಾಂ ನಿತ್ಯಮೇವ ಹ ।
ಸ ಗಚ್ಛೇತ ಮಯಾ ಸಾರ್ಧಮಾನೃಶಂಸ್ಯಾ ಹಿ ಮೇ ಮತಿಃ ॥೭॥

ಯುಧಿಷ್ಠಿರ– ಭೂತ-ಭವಿಷ್ಯತ್ತುಗಳ ಅಧಿಪತಿಯಾದ ಹೇ ಇಂದ್ರನೇ, ಈ ಶ್ವಾನವು ನಿತ್ಯವೂ ನನ್ನೊಂದಿಗೇ ಇದ್ದು, ನನ್ನ ವಿಶ್ವಾಸಿಯಾಗಿತ್ತು. ಇದೂ ನನ್ನ ಜೊತೆಗೆ ಸ್ವರ್ಗವನ್ನೇರುವಂತಾಗಲಿ. ನನ್ನ ಮನಸ್ಸಿನಲ್ಲಿ ಯಾವುದೇ ವಂಚನೆಯಿಲ್ಲ.

ಶಕ್ರಃ

ಅಮರ್ತ್ಯತ್ವಂ ಮತ್ಸಮತ್ವಂ ಚ ರಾಜನ್
ಶ್ರಿಯಂ ಕೃತ್ಸ್ನಾಂ ಮಹತೀಂ ಚೈವ ಸಿದ್ಧಿಮ್ ।
ಸಂಪ್ರಾಪ್ತೋದ್ಯ ಸ್ವರ್ಗಸುಖಾನಿ ಚ ತ್ವಂ
ತ್ಯಜ ಶ್ವಾನಂ ನಾತ್ರ ನೃಶಂಸಮಸ್ತಿ ॥೮॥

ಇಂದ್ರ– ಹೇ ರಾಜನೇ, ನೀನು ನನಗಿಂದು ಸಮನಾಗಿದ್ದು ಅಮರತ್ವವನ್ನೂ, ಎಲ್ಲ ರೀತಿಯ ಸಂಪತ್ತನ್ನೂ, ಬಹುದೊಡ್ಡ ಸಿದ್ಧಿಯನ್ನೂ ಪಡೆದಿರುವೆ. ಜೊತೆಗೆ ಸ್ವರ್ಗಸುಖಗಳನ್ನೂ ಪಡೆಯಲಿರುವೆ. ಆದ್ದರಿಂದ ಈ ಶ್ವಾನವನ್ನು ಬಿಟ್ಟುಬಿಡು. ಇಲ್ಲಿ ವಂಚನೆಯ ಮಾತೇ ಬರಲಾರದು.

ಯುಧಿಷ್ಠಿರಃ

ಅನಾರ್ಯಮಾರ್ಯೇಣ ಸಹಸ್ರನೇತ್ರ
ಶಕ್ಯಂ ಕರ್ತುಂ ದುಷ್ಕರಮೇತದಾರ್ಯ ।
ಮಾ ಮೇ ಶ್ರಿಯಾ ಸಂಗಮನಂ ತಯಾಽಸ್ತು
ಯಸ್ಯಾಃ ಕೃತೇ ಭಕ್ತಜನಂ ತ್ಯಜೇಯಮ್ ॥೯॥

ಯುಧಿಷ್ಠಿರ– ಹೇ ಗೌರವಾನ್ವಿತನಾದ ಸಹಸ್ರಾಕ್ಷನೇ, ಔದಾರ್ಯವುಳ್ಳ ವ್ಯಕ್ತಿಗೆ ಈ ದುರ್ನೀತಿಯ ನಡತೆಯನ್ನು ಸಾಧಿಸಿ ನಡೆಸುವುದು ಬಹಳ ಕಷ್ಟ. ಆದ್ದರಿಂದ ಯಾವ ಸಂಪತ್ತಿಗೋಸ್ಕರ ಭಕ್ತಜನರನ್ನು ಬಿಡಬೇಕಾಗುವುದೋ ಆ ರೀತಿಯ ಸಂಪತ್ತಿನ ಸಂಬಂಧವೇ ನನಗೆ ಬೇಡ.

ಇಂದ್ರಃ

ಸ್ವರ್ಗೇ ಲೋಕೇ ಶ್ವತಾಂ ನಾಸ್ತಿ ಧಿಷ್ಣ್ಯ-
ಮಿಷ್ಟಾಪೂರ್ತಂ ಕ್ರೋಧವಶಾ ಹರಂತಿ ।
ತತೋ ವಿಚಾರ್ಯ ಕ್ರಿಯತಾಂ ಧರ್ಮರಾಜ
ತ್ಯಜ ಶ್ವಾನಂ ನಾತ್ರ ನೃಶಂಸಮಸ್ತಿ ॥೧೦॥

ಇಂದ್ರ– ಹೇ ಧರ್ಮರಾಜನೇ, ಶ್ವಾನದ ಒಡೆತನವುಳ್ಳವರಿಗೆ ಸ್ವರ್ಗಲೋಕದಲ್ಲಿ ಸ್ಥಾನವಿಲ್ಲ. ಏಕೆಂದರೆ ಅಂತಹವರ ಧರ್ಮಕರ್ಮಗಳ ಪುಣ್ಯಫಲವನ್ನು ಕ್ರೋಧವಶರೆಂಬ ರಾಕ್ಷಸರು ಅಪಹರಿಸುವರು. ಆದ್ದರಿಂದ ಚೆನ್ನಾಗಿ ವಿಮರ್ಶಿಸಿ ಮುಂದೆ ನಡೆ. ಶ್ವಾನವನ್ನು ಬಿಟ್ಟುಬಿಡು. ಇದರಿಂದ ಏನೂ ವಂಚನೆಯಾಗದು.

ಯುಧಿಷ್ಠಿರಃ

ಭಕ್ತತ್ಯಾಗಂ ಪ್ರಾಹುರತ್ಯಂತಪಾಪಂ
ತುಲ್ಯಂ ಲೋಕೇ ಬ್ರಹ್ಮವಧ್ಯಾಕೃತೇನ ।
ತಸ್ಮಾನ್ನಾಹಂ ಜಾತು ಕಥಂಚನಾದ್ಯ
ತ್ಯಕ್ಷ್ಯಾಮ್ಯೇನಂ ಸ್ವಸುಖಾರ್ಥೀ ಮಹೇಂದ್ರ ॥೧೧॥

ಯುಧಿಷ್ಠಿರ– ಹೇ ಮಹೇಂದ್ರನೇ, ಲೋಕದಲ್ಲಿ ಭಕ್ತರನ್ನು ತ್ಯಾಗ ಮಾಡುವುದು ಬ್ರಹ್ಮಹತ್ಯೆಗೆ ಸಮವಾದ ಮಹಾಪಾಪವೆಂದು ಹೇಳುವರು. ಆದ್ದರಿಂದ ಎಷ್ಟು ವಿಮರ್ಶೆ ಮಾಡಿದರೂ ಯಾವುದೇ ರೀತಿಯಿಂದ ಆಲೋಚಿಸಿದರೂ ನನ್ನ ಸುಖಕ್ಕೋಸ್ಕರ ನಾನು ಈ ಶ್ವಾನವನ್ನು ಬಿಡಲಾರೆ.

ಭೀತಂ ಭಕ್ತಂ ನಾನ್ಯದಸ್ತೀತಿ ಚಾರ್ತಂ
ಪ್ರಾಪ್ತಂ ಕ್ಷೀಣಂ ರಕ್ಷಣೇ ಪ್ರಾಣಲಿಪ್ಸುಮ್ ।

ಪ್ರಾಣತ್ಯಾಗಾದಪ್ಯಹಂ ನೈವ ಮೋಕ್ತುಂ
ಯತೇಯಂ ವೈ ನಿತ್ಯಮೇತದ್ ವ್ರತಂ ಮೇ ॥೧೨॥

ಹೆದರಿದ, ಬೇರಾರೂ ಇಲ್ಲವೆಂದು ಕಂಗೆಟ್ಟ, ಕ್ಷೀಣನಾದ, ರಕ್ಷಣೆಗೋಸ್ಕರ ನನ್ನ ಬಳಿ ಬಂದ, ಬದುಕಬೇಕೆಂಬ ಬಯಕೆಯುಳ್ಳ ಭಕ್ತನನ್ನು ಪ್ರಾಣಹೋಗುವಂತಿದ್ದರೂ ನಾನು ಬಿಡಲು ಪ್ರಯತ್ನಿಸಲಾರೆ. ಇದು ನನಗೆ ಬಿಡಲಾರದ ನಿಷ್ಠೆಯಾಗಿದೆ.

ಇಂದ್ರಃ

ಶುನಾ ದೃಷ್ಟಂ ಕ್ರೋಧವಶಾ ಹರಂತಿ
ಯದ್ದತ್ತಂ ವಿವೃತಮಥೋ ಹುತಂ ಚ ।
ತಸ್ಮಾಚ್ಛುನಸ್ತ್ಯಾಗಮಿಮಂ ಕುರುಷ್ವ
ಶುನಸ್ತ್ಯಾಗಾತ್ ಪ್ರಾಪ್ಸ್ಯಸೇ ದೇವಲೋಕಮ್ ॥೧೩॥

ಇಂದ್ರ– ನಾಯಿಯು ನೋಡಿದ ಯಾವುದೇ ದಾನ, ಯಜ್ಞ, ಆಹುತಿಗಳನ್ನು ಕ್ರೋಧವಶರು ಅಪಹರಿಸುವರು. ಆದ್ದರಿಂದ ಈ ಶ್ವಾನವನ್ನು ತ್ಯಜಿಸು. ಇದನ್ನು ಬಿಟ್ಟುಬಿಡುವುದರಿಂದ ನೀನು ದೇವಲೋಕವನ್ನು ಪಡೆಯುವೆ.

ತ್ಯಕ್ತ್ವಾ ಭ್ರಾತೄನ್ ದಯಿತಾಂ ಚಾಪಿ ಕೃಷ್ಣಾಂ
ಪ್ರಾಪ್ತೋ ಲೋಕಃ ಕರ್ಮಣಾ ಸ್ವೇನ ವೀರ ।
ಶ್ವಾನಂ ಚೈನಂ ನ ತ್ಯಜಸೇ ಕಥಂ ನು
ತ್ಯಾಗಂ ಕೃತ್ಸ್ನಂ ಚಾಸ್ಥಿತೋ ಮುಹ್ಯಸೇಽದ್ಯ ॥೧೪॥

ಹೇ ವೀರನೇ, ನಿನ್ನ ಸಹೋದರರನ್ನೂ ಬಿಟ್ಟು, ದಯಿತೆಯಾದ ದ್ರೌಪದಿಯನ್ನೂ ಬಿಟ್ಟು, ನಿನ್ನದೇ ಸತ್ಕರ್ಮಗಳಿಂದ ಸ್ವರ್ಗಲೋಕವು ಪ್ರಾಪ್ತವಾಗಿದೆ. ಈ ಶ್ವಾನವನ್ನೇಕೆ ನೀನು ಬಿಡುತ್ತಿಲ್ಲ? ಎಲ್ಲವನ್ನೂ ಬಿಟ್ಟು ನಿಂತಿರುವ ನೀನು ಈ ಶ್ವಾನದ ವಿಷಯದಲ್ಲಿ ಇಂದು ಏಕೆ ಮೋಹಗೊಂಡಿರುವೆ?

ಯುಧಿಷ್ಠಿರಃ

ನ ವಿದ್ಯತೇ ಸಂಧಿರಥಾಪಿ ವಿಗ್ರಹೋ
ಮೃತೈರ್ಮರ್ತ್ಯೈರಿತಿ ಲೋಕೇಷು ನಿಷ್ಠಾ ।

ನ ತೇ ಮಯಾ ಜೀವಯಿತುಂ ಹಿ ಶಕ್ಯಾಃ
ತತಸ್ತ್ಯಾಗಸ್ತೇಷು ಕೃತೋ ನ ಜೀವತಾಮ್ ॥೧೫॥

ಯುಧಿಷ್ಠಿರ– ಮರಣ ಹೊಂದಿದ ಮನುಜರೊಂದಿಗೆ ಸಂಧಾನವಾಗಲಿ, ಯುದ್ಧವಾಗಲಿ ಇರುವುದಿಲ್ಲ ಎಂಬುದು ಲೋಕದ ನೀತಿಯಾಗಿದೆ. ಅವರನ್ನು ಬದುಕಿಸಲೂ ನನಗೆ ಸಾಧ್ಯವಿಲ್ಲ. ಆದ್ದರಿಂದ ಅವರನ್ನು ನಾನು ಬಿಡಬೇಕಾಯಿತು ಹೊರತು ಬದುಕಿದ್ದ ಅವರನ್ನು ನಾನು ತ್ಯಜಿಸಲಿಲ್ಲ.

ಪ್ರತಿಪ್ರದಾನಂ ಶರಣಾಗತಸ್ಯ
ಸ್ತ್ರಿಯಾ ವಧೋ ಬ್ರಾಹ್ಮಣಸ್ವಾಪಹಾರಃ ।
ಮಿತ್ರದ್ರೋಹಸ್ತಾನಿ ಚತ್ವಾರಿ ಶಕ್ರ
ಭಕ್ತತ್ಯಾಗಶ್ಚೈವ ಸಮೋ ಮತೋ ಮೇ ॥೧೬॥

ಶರಣಾಗತನಾದವನನ್ನು ಅವನ ಶತ್ರುವಿಗೆ ಒಪ್ಪಿಸುವುದು, ಸ್ತ್ರೀಯನ್ನು ವಧಿಸುವುದು, ಬ್ರಾಹ್ಮಣರ ಸಂಪತ್ತನ್ನು ಅಪಹರಿಸುವುದು ಮತ್ತು ಮಿತ್ರದ್ರೋಹ ಈ ನಾಲ್ಕು ಭಕ್ತತ್ಯಾಗಕ್ಕೆ ಸಮಾನ ಎಂಬುದು ನನ್ನ ಅಭಿಪ್ರಾಯ.

ವೈಶಂಪಾಯನಃ

ತದ್ಧರ್ಮರಾಜಸ್ಯ ವಚೋ ನಿಶಮ್ಯ
ಧರ್ಮಸ್ವರೂಪೀ ಭಗವಾನುವಾಚ ।
ಯುಧಿಷ್ಠಿರಂ ಪ್ರೀತಿಯುಕ್ತೋ ನರೇಂದ್ರಂ
ಶ್ಲಕ್ಷ್ಣೈರ್ವಾಕ್ಯೈಃ ಸಂಸ್ತವಸಂಪ್ರಯುಕ್ತೈಃ ॥೧೭॥

ವೈಶಂಪಾಯನ– ಧರ್ಮರಾಜನ ಆ ಮಾತನ್ನು ಕೇಳಿ, ಧರ್ಮಸ್ವರೂಪಿಯಾದ ಆ ಭಗವಂತನು ಯುಧಿಷ್ಠಿರನ ಬಗ್ಗೆ ಸಂತೋಷವುಳ್ಳವನಾಗಿ, ಮಧುರವಾಕ್ಯಗಳಿಂದ ಮತ್ತು ಹೊಗಳು ಮಾತುಗಳಿಂದ ರಾಜನನ್ನು ಕುರಿತು ಹೀಗೆಂದನು.

ಅಭಿಜಾತೋಸಿ ರಾಜೇಂದ್ರ ಪಿತುರ್ವೃತ್ತೇನ ಮೇಧಯಾ ।
ಅನುಕ್ರೋಶೇನ ಚಾನೇನ ಸರ್ವಭೂತೇಷು ಭಾರತ ॥೧೮॥

ಹೇ ಭಾರತನೇ, ರಾಜಶ್ರೇಷ್ಠನೇ, ತಂದೆಯ ನಡವಳಿಕೆಯಿಂದ, ಉತ್ತಮವಾದ ಬುದ್ಧಿಯಿಂದ ಎಲ್ಲ ಜೀವಜಂತುಗಳಲ್ಲಿ ಈ ರೀತಿಯ ದಯಾಗುಣದಿಂದ ನೀನು ಸಾರ್ಥಕವಾದ ಜನ್ಮವುಳ್ಳವನಾಗಿರುವಿ.

ಪುರಾ ದ್ವೈತವನೇ ಚಾಸಿ ಮಯಾ ಪುತ್ರ ಪರೀಕ್ಷಿತಃ ।
ಪಾನೀಯಾರ್ಥೇ ಪರಾಕ್ರಾಂತಾ ಯತ್ರ ತೇ ಭ್ರಾತರೋ ಹತಾಃ ॥೧೯॥

ಹೇ ಮಗನೇ, ಹಿಂದೆ ದ್ವೈತವನದಲ್ಲಿ ನೀರಿಗೋಸ್ಕರ ಪರಾಕ್ರಮವನ್ನು ತೋರಿಸಿ, ನಿನ್ನ ಸಹೋದರರು ಹತರಾದಾಗ ನನ್ನಿಂದ ನೀನು ಪರೀಕ್ಷೆಗೊಳಗಾಗಿದ್ದೆ.

ಭೀಮಾರ್ಜುನೌ ಪರಿತ್ಯಜ್ಯ ಯತ್ರ ತ್ವಂ ಭ್ರಾತರಾವುಭೌ ।
ಮಾತ್ರೋಃ ಸಾಮ್ಯಮಭೀಪ್ಸನ್ ವೈ ನಕುಲಂ ಜೀವಮಿಚ್ಛಸಿ ॥೨೦॥

ಆ ಯಾವ ದ್ವೈತವನದಲ್ಲಿ ನಿನ್ನ ಇಬ್ಬರು ಸಹೋದರರಾದ ಭೀಮಾರ್ಜುನರನ್ನು ಬಿಟ್ಟು, ಮಾತೆಯರಲ್ಲಿ ಸಾಮ್ಯವನ್ನು ಬಯಸಿದ ನೀನು ನಕುಲನನ್ನು ಬದುಕಿಸಲು ಇಷ್ಟಪಟ್ಟೆ.

ಅಯಂ ಶ್ವಾ ಭಕ್ತ ಇತ್ಯೇವಂ ತ್ಯಕ್ತೋ ದೇವರಥಸ್ತ್ವಯಾ ।
ತಸ್ಮಾತ್ ಸ್ವರ್ಗೇ ನ ತೇ ತುಲ್ಯಃ ಕಶ್ಚಿದಸ್ತಿ ನರಾಧಿಪಃ ॥೨೧॥

ಈಗ ಪುನಃ ಈ ಶ್ವಾನವು ನಿನ್ನ ಭಕ್ತ ಎಂಬ ಕಾರಣದಿಂದಲೇ ದೇವರಥವನ್ನು ತ್ಯಾಗ ಮಾಡಿರುವೆ. ಆದ್ದರಿಂದ ಹೇ ನರಾಧಿಪತಿಯೇ, ಸ್ವರ್ಗದಲ್ಲಿ ನಿನಗೆ ಸಮಾನರಾದವರು ಯಾರೂ ಇಲ್ಲ.

ಅತಸ್ತವಾಕ್ಷಯಾ ಲೋಕಾಃ ಸ್ವಶರೀರೇಣ ಭಾರತ ।
ಪ್ರಾಪ್ತೋಸಿ ಭರತಶ್ರೇಷ್ಠ ದಿವ್ಯಾಂ ಗತಿಮನುತ್ತಮಾಮ್ ॥೨೨॥

ಹೇ ಭಾರತನೇ, ಆದ್ದರಿಂದಲೇ ನಿನಗೆ ಈ ಶರೀರದೊಂದಿಗೆ ನಾಶವಿಲ್ಲದ ಪುಣ್ಯಲೋಕಗಳು ಪ್ರಾಪ್ತವಾದವು. ಹೇ ಭರತಶ್ರೇಷ್ಠನೇ, ಇದರಿಂದ ಅದ್ವಿತೀಯವಾದ ದೇವಗತಿಯನ್ನು ನೀನು ಪಡೆದಿರುವಿ.

ವೈಶಂಪಾಯನಃ

ತತೋ ಧರ್ಮಶ್ಚ ಶಕ್ರಶ್ಚ ಮರುತಶ್ಚಾಶ್ವಿನಾವಪಿ ।
ದೇವಾ ದೇವರ್ಷಯಶ್ಚೈವ ರಥಮಾರೋಪ್ಯ ಪಾಂಡವಮ್ ॥೨೩॥

ಪ್ರಯಯುಃ ಸ್ವೈರ್ವಿಮಾನೈಸ್ತೇ ಸಿದ್ಧಾಃ ಕಾಮವಿಹಾರಿಣಃ ।
ಸರ್ವೇ ವಿರಜಸಃ ಪುಣ್ಯಾಃ ಪುಣ್ಯವಾಗ್ ಬುದ್ಧಿಕರ್ಮಿಣಃ ॥೨೪॥

ವೈಶಂಪಾಯನ– ಅನಂತರ ಯಮಧರ್ಮನೂ, ಇಂದ್ರನೂ, ಮರುದ್ದೇವತೆಗಳೂ, ಅಶ್ವಿನೀದೇವತೆಗಳೂ ಅಲ್ಲದೆ ಮನಸ್ಸಿಗೆ ಬಂದಲ್ಲಿ ಸಂಚರಿಸುವ ಸಾಮರ್ಥ್ಯವುಳ್ಳ, ಸಿದ್ಧರಾದ, ಮಂಗಳಮಯವಾದ ಮಾತು-ಬುದ್ಧಿ ಮತ್ತು ಕರ್ಮಗಳುಳ್ಳ ಆ ಎಲ್ಲ ದೇವತೆಗಳು, ದೇವರ್ಷಿಗಳೂ ಪಾಂಡುಪುತ್ರನಾದ ಯುಧಿಷ್ಠಿರನನ್ನು ರಥಕ್ಕೆ ಹತ್ತಿಸಿ ತಮ್ಮ ತಮ್ಮ ವಿಮಾನಗಳಿಂದ ಸ್ವರ್ಗಕ್ಕೆ ಸಾಗಿದರು.

ಸ ತಂ ರಥಂ ಸಮಾಸ್ಥಾಯ ರಾಜಾ ಕುರುಕುಲೋದ್ವಹಃ ।
ಊರ್ಧ್ವಮಾಚಕ್ರಮೇ ಶೀಘ್ರಂ ತೇಜಸಾऽऽವೃತ್ಯ ರೋದಸೀ ॥೨೫॥

ಕುರುಕುಲದಲ್ಲಿ ಜನಿಸಿದ ಆ ಯುಧಿಷ್ಠಿರನು ರಥದಲ್ಲಿ ಕುಳಿತು ತನ್ನ ತೇಜಸ್ಸಿನಿಂದ ಭೂಮ್ಯಾಕಾಶಗಳನ್ನು ಬೆಳಗಿಸುತ್ತಾ, ಶೀಘ್ರವಾಗಿ ಮೇಲಕ್ಕೆ ಪ್ರಯಾಣ ಬೆಳೆಸಿದನು.

ತತೋ ದೇವನಿಕಾಯ್ಯಸ್ಥೋ ನಾರದಃ ಸರ್ವಲೋಕವಿತ್ ।
ಉವಾಚೋಚ್ಚೈಸ್ತದಾ ವಾಕ್ಯಂ ಬೃಹದ್ವಾದೀ ಬೃಹತ್ತಪಾಃ ॥೨೬॥

ಆಗ ದೇವಸಮೂಹದ ಮಧ್ಯದಲ್ಲಿದ್ದ ಮಹಾನ್‌ವಾಗ್ಮಿಯಾದ, ಉತ್ತಮ ತಪಸ್ವಿಯಾದ, ಸರ್ವಲೋಕಗಳನ್ನೂ ತಿಳಿದಿರುವ ನಾರದರು ಉಚ್ಚಸ್ವರದಲ್ಲಿ ಹೀಗೆಂದರು.

ಯೇऽಪಿ ರಾಜರ್ಷಯಃ ಪೂರ್ವೇ ತೇ ಚಾಪಿ ಸಮುಪಸ್ಥಿತಾಃ ।
ಕೀರ್ತಿಂ ಪ್ರಚ್ಛಾದ್ಯ ತೇಷಾಂ ವೈ ಕುರುರಾಜೋऽಧಿತಿಷ್ಠತಿ ॥೨೭॥

ಈ ಮೊದಲು ಯಾರೆಲ್ಲ ರಾಜರ್ಷಿಗಳು ಆಗಿಹೋದರೋ ಅವರೆಲ್ಲರೂ ಈ ಸ್ವರ್ಗದಲ್ಲಿ ಸನ್ನಿಹಿತರಾಗಿರುವರು. ಅಂತಹ ಎಲ್ಲರ ಕೀರ್ತಿಯನ್ನು ಮರೆ ಮಾಡಿ ಈ ಕುರುರಾಜನು ಸ್ವರ್ಗವನ್ನೇರಿರುವನು.

ಲೋಕಾನಾವೃತ್ಯ ಯಶಸಾ ತೇಜಸಾ ವೃತ್ತಸಂಪದಾ ।
ಸ್ವಶರೀರೇಣ ಸಂಪ್ರಾಪ್ತಂ ನಾನ್ಯಂ ಶುಶ್ರುಮ ಪಾಂಡವಾತ್ ॥೨೮॥

ತೇಜಾಂಸಿ ಯಾನಿ ದೃಷ್ಟಾನಿ ಭೂಮಿಷ್ಠೇನ ತ್ವಯಾ ವಿಭೋ ।
ವೇಶ್ಮಾನಿ ಭುವಿ ದೇವಾನಾಂ ಪಶ್ಯಾಮೂನಿ ಸಹಸ್ರಶಃ ॥೨೯॥

ತನ್ನ ಯಶಸ್ಸೂ, ತೇಜಸ್ಸೂ ಹಾಗೂ ಸನ್ಮಾರ್ಗಗಳೆಂಬ ಸಂಪತ್ತಿನಿಂದ ಇಡೀ ಜಗತ್ತನ್ನು ಆವರಿಸಿಕೊಂಡು ತನ್ನ ಶರೀರದೊಂದಿಗೇ ಸ್ವರ್ಗಕ್ಕೆ ಬಂದ ಧರ್ಮರಾಯನನ್ನು ಬಿಟ್ಟು ಇನ್ನೊಬ್ಬನನ್ನು ನಾವು ಕೇಳಲಾರೆವು. ಹೇ ವಿಭುವೇ, ಭೂಮಿಯಲ್ಲಿರುವ ನಿನ್ನಿಂದ ಯಾರೆಲ್ಲ ತೇಜಸ್ವಿಗಳು ದೃಷ್ಟರಾಗಿರುವರೋ ಅಂತಹ ಸಾವಿರಾರು ಜನರ ಮನೆಗಳನ್ನು ಈ ದೇವಭೂಮಿಯಲ್ಲಿ ನೋಡು.

ನಾರದಸ್ಯ ವಚಃ ಶ್ರುತ್ವಾ ರಾಜಾ ವಚನಮಬ್ರವೀತ್ ।
ಭ್ರಾತೄನಪಶ್ಯನ್ ಧರ್ಮಾತ್ಮಾ ಸ್ವಪಕ್ಷಾಂಶ್ಚೈವ ಪಾರ್ಥಿವಾನ್ ॥೩೦॥

ನಾರದರ ಮಾತುಗಳನ್ನು ಕೇಳಿ, ಧರ್ಮಾತ್ಮನಾದ ರಾಜನು ಅಲ್ಲಿ ತನ್ನ ಸಹೋದರರನ್ನೂ, ತನ್ನ ಪಕ್ಷದಲ್ಲಿರುವ ರಾಜರನ್ನೂ ನೋಡದೆ ಹೀಗೆಂದನು.

ಶುಭಂ ವಾ ಯದಿ ವಾ ಪಾಪಂ ಭ್ರಾತೄಣಾಂ ಸ್ಥಾನಮದ್ಯ ಮೇ ।
ತದೇವ ಪ್ರಾಪ್ತುಮಿಚ್ಛಾಮಿ ಲೋಕಾನನ್ಯಾನ್ನ ಕಾಮಯೇ ॥೩೧॥

ನನ್ನ ಸಹೋದರರಿಗೆ ಇಂದು ಯಾವ ಸ್ಥಾನ ಸಿಕ್ಕಿದೆಯೋ ಅದು ಶುಭ ಲೋಕವಾಗಿರಲಿ ಅಥವಾ ಪಾಪಲೋಕವಾಗಿರಲಿ, ಅದನ್ನೇ ಪಡೆಯಲು ನಾನು ಬಯಸುವೆ. ಬೇರೆ ಲೋಕಗಳನ್ನು ಬಯಸಲಾರೆ.

ರಾಜ್ಞಸ್ತು ವಚನಂ ಶ್ರುತ್ವಾ ದೇವರಾಜಃ ಪುರಂದರಃ ।
ಆನೃಶಂಸ್ಯಸಮಾಯುಕ್ತಂ ಪ್ರತ್ಯುವಾಚ ಯುಧಿಷ್ಠಿರಮ್ ॥೩೨॥

ರಾಜನ ನಿರ್ವಂಚನೆಯಿಂದ ಕೂಡಿದ ಈ ಮಾತುಗಳನ್ನು ಕೇಳಿದ, ದೇವತೆಗಳ ರಾಜನಾದ ಪುರಂದರನು ಯುಧಿಷ್ಠಿರನನ್ನು ಕುರಿತು ಈ ರೀತಿ ಉತ್ತರಿಸಿದನು.

ಸ್ಥಾನೇಽಸ್ಮಿನ್ ವಸ ರಾಜೇಂದ್ರ ಕರ್ಮಭಿರ್ನಿರ್ಜಿತೈಃ ಶುಭೈಃ ।
ಕಿಂ ತ್ವಂ ಮಾನುಷ್ಯಕಂ ಸ್ನೇಹಮದ್ಯಾಪಿ ಪರಿಕರ್ಷಸಿ ॥೩೩॥

ಹೇ ರಾಜೇಂದ್ರನೇ, ನೀನೇ ಮಾಡಿದ ಉತ್ತಮ ಶುಭಕರ್ಮಗಳಿಂದ ಪಡೆದ ಈ ಸ್ಥಾನದಲ್ಲಿ ನೀನು ವಾಸ ಮಾಡು. ಮನುಷ್ಯ ಜನ್ಮದಲ್ಲಿ ಇರಿಸಿಕೊಂಡಿದ್ದ ಸ್ನೇಹವನ್ನು ನೀನು ಇಂದೂ ಏಕೆ ಎಳೆದುತರುತ್ತಿರುವೆ?

ಸಿದ್ಧಿಂ ಪ್ರಾಪ್ತೋಸಿ ಪರಮಾಂ ಯಥಾ ನಾನ್ಯಃ ಪುಮಾನ್ ಕ್ವಚಿತ್ ।
ನೈವ ತೇ ಭ್ರಾತರಃ ಸ್ಥಾನಂ ಸಂಪ್ರಾಪ್ತಾಃ ಕುರುನಂದನ ॥೩೪॥

ಹೇ ಕುರುನಂದನನೇ, ಬೇರ್ಯಾವ ಪುರುಷನು ಎಂದೂ ಪಡೆಯದ, ಉತ್ತಮವಾದ ಸಿದ್ಧಿಯನ್ನು ನೀನು ಹೊಂದಿರುವೆ. ಆ ನಿನ್ನ ಸಹೋದರರು ಈ ಸ್ಥಾನವನ್ನು ಪಡೆದಿಲ್ಲ.

ಅದ್ಯಾಪಿ ಮಾನುಷೋ ಭಾವಃ ಸ್ಪೃಶತೇ ತ್ವಾಂ ನರಾಧಿಪ ।
ಸ್ವರ್ಗೋಽಯಂ ಪಶ್ಯ ದೇವರ್ಷೀನ್ ಸಿದ್ಧಾಂಶ್ಚ ತ್ರಿದಿವಾಲಯಾನ್ ॥

ಹೇ ನರಾಧಿಪನೇ, ನಿನಗೆ ಈಗಲೂ ಮನುಷ್ಯಸ್ವಭಾವವೇ ಉಳಿದುಬಿಟ್ಟಿದೆ. ಸರಿಯಾಗಿ ನೋಡು. ಇದು ಸ್ವರ್ಗ. ಇಲ್ಲಿರುವ ದೇವರ್ಷಿಗಳನ್ನೂ, ಸಿದ್ಧರನ್ನೂ, ದೇವತೆಗಳನ್ನೂ ಗಮನಿಸು.

ಯುಧಿಷ್ಠಿರಸ್ತು ದೇವೇಂದ್ರಮೇವಂವಾದಿನಮೀಶ್ವರಮ್ ।
ಪುನರೇವಾಬ್ರವೀದ್ಧೀಮಾನಿದಂ ವಚನಮರ್ಥವತ್ ॥೩೬॥

ಹೀಗೆ ಹೇಳುತ್ತಿರುವ ಸ್ವರ್ಗಾಧಿಪತಿಯಾದ ದೇವೇಂದ್ರನನ್ನು ಕುರಿತು ಧೀಮಂತನಾದ ಯುಧಿಷ್ಠಿರನು ಮತ್ತೆ ಹೀಗೆ ಅರ್ಥವತ್ತಾದ ಮಾತುಗಳನ್ನು ಆಡಿದನು.

ಯುಧಿಷ್ಠಿರಃ

ತೈರ್ವಿನಾ ನೋತ್ಸಹೇ ವಸ್ತುಮಿಹ ದೈತ್ಯನಿಬರ್ಹಣ ।
ಗಂತುಮಿಚ್ಛಾಮಿ ತತ್ರಾಹಂ ಯತ್ರ ಮೇ ಭ್ರಾತರೋ ಗತಾಃ ॥೩೭॥

ಯುಧಿಷ್ಠಿರ– ಹೇ ದೈತ್ಯಸಂಹಾರಕನೇ, ಅವರಿಲ್ಲದ ಸ್ಥಳದಲ್ಲಿ ವಾಸ ಮಾಡಲು ನಾನು ಉತ್ಸಾಹ ಪಡಲಾರೆ. ಎಲ್ಲಿ ನನ್ನ ಸಹೋದರರು ಸೇರಿರುವರೋ ಅಲ್ಲಿಗೇ ಹೋಗಲು ನಾನು ಬಯಸುತ್ತಿದ್ದೇನೆ.

ಯತ್ರ ಸಾ ಬೃಹತೀ ಶ್ಯಾಮಾ ಬುದ್ಧಿಸತ್ತ್ವಗುಣಾನ್ವಿತಾ ।
ದ್ರೌಪದೀ ಯೋಷಿತಾಂ ಶ್ರೇಷ್ಠಾ ಯತ್ರ ಚೈವ ಸುತಾ ಮಮ ॥೩೮॥

ಬುದ್ಧಿ ಹಾಗೂ ಸತ್ವಗುಣಗಳಿಂದ ತುಂಬಿದ, ಅದರಿಂದಲೇ ಮಹತ್ವವನ್ನು ಪಡೆದ, ಸ್ತ್ರೀಶ್ರೇಷ್ಠಳಾದ ಕೃಷ್ಣೆ ದ್ರೌಪದಿಯು ಎಲ್ಲಿರುವಳೋ, ನನ್ನ ಮಕ್ಕಳು ಎಲ್ಲಿರುವರೋ ಅಲ್ಲೇ ನಾನು ಇರಬಯಸುವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಮಹಾಪ್ರಸ್ಥಾನಿಕಪರ್ವಣಿ ಇಂದ್ರಯುಧಿಷ್ಠಿರಸಂವಾದೋ ನಾಮ ಚತುರ್ಥೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಮಹಾಪ್ರಸ್ಥಾನಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಮಹಾಪ್ರಸ್ಥಾನಿಕಪರ್ವ ॥

★ ★ ★ ★

ಸ್ವರ್ಗಾರೋಹಣಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ತೇಷು ಸ್ವಲೋಕಾನ್ ಪ್ರಾಪ್ತೇಷು ಧರ್ಮಜಶ್ಚಾತ್ಮನಾ ಸಹ ।
ಯಯೌ ಪುರೋ ದೇವರಥಸ್ತದಾಽಸ್ಯಾವತತಾರ ಹ ॥

ಭೀಮ ಮುಂತಾದವರು ತಮ್ಮ ಲೋಕಗಳಿಗೆ ಹೋದ ಬಳಿಕ ಧರ್ಮರಾಜನು ನಾಯಿರೂಪದ ತನ್ನ ಜೊತೆಗೇ ಮುಂದೆ ನಡೆದ. ಆಗ ಅವನ ಮುಂದೆ ದೇವರಥ ಇಳಿದು ಬಂದಿತು.

ರಥಮಾರುಹೇತಿ ಕಥಿತೋ ರಥಿನಾ ಪುರತಃ ಶುನಃ ।
ಆರೋಹಮಬ್ರವೀನ್ನೈತದ್ ಯುಕ್ತಮಿತ್ಯಾಹ ಸೋಽಪಿ ತಮ್ ॥

ರಥವನ್ನೇರು ಎಂದು ಸೂತ ನುಡಿದಾಗ ಮೊದಲಿಗೆ ನಾಯಿ ಏರಬೇಕು ಎಂದ ಧರ್ಮರಾಜ. ಇದು ಯುಕ್ತವಲ್ಲ ಎಂದ ಸೂತ.

ನಾಽರುಹೇಯಂ ವಿನಾ ಶ್ವಾನಮಿತಿ ತೇನ ಸ್ಥಿರೋದಿತೇ ।
ಸ್ವರೂಪಂ ದರ್ಶಯಾಮಾಸ ಧರ್ಮೋ ಹ್ಯಾತ್ಮಸ್ವರೂಪತಾಮ್ ॥

'ನಾಯಿಯನ್ನು ಬಿಟ್ಟು ನಾನು ರಥವನ್ನೇರಲಾರೆ' ಎಂದು ದೃಢವಾಗಿ ಧರ್ಮರಾಜ ಹೇಳಿದಾಗ ನಾಯಿಯ ರೂಪವನ್ನು ತಳೆದಿದ್ದ ಯಮ ನಿಜರೂಪವನ್ನು ತೋರಿದನು.

ಆನೃಶಂಸ್ಯಪರತ್ವೇನ ಕೀರ್ತಿಮೇವಾತ್ಮನೋ ವೃಷಃ ।
ಖ್ಯಾಪಯಾಮಾಸ ಕೌಂತೇಯರೂಪಿಣೋ ಧರ್ಮಸೂಕ್ತಿಭಿಃ ॥

ತಾನು ದಯಾಪರನೆನ್ನುವ ತನ್ನ ಕೀರ್ತಿಯನ್ನು ಹೀಗೆ ಯಮ ಧರ್ಮರಾಜ ರೂಪಿಯಾದ ತನ್ನ ಧರ್ಮಯುಕ್ತ ವಚನಗಳ ಮೂಲಕ ಪ್ರಸಿದ್ಧಿಪಡಿಸಿದನು.

ತತಃ ಸ ರಥಮಾರುಹ್ಯ ಲೋಕಾನಾಮುತ್ತರೋತ್ತರಮ್ ।
ಅತಿಕ್ರಮ್ಯಾಖಿಲಾನ್ ರಾಜ್ಞೋ ಜಗಾಮ ಶ್ರೀಪತಿಪ್ರಿಯಃ ॥

ಬಳಿಕ ಹರಿಪ್ರಿಯನಾದ ಧರ್ಮರಾಜ ಮೇಲುಮೇಲಿನ ವೀರಸ್ವರ್ಗದ ಎಲ್ಲ ರಾಜರನ್ನೂ ದಾಟಿ ಮುಂದುವರಿದನು.

ಸರ್ವೇಷಾಮುತ್ತರಂ ಲೋಕಮೈಂದ್ರಂ ಪ್ರಾಪ್ಯೇದಮೇವ ತೇ ।
ಸ್ಥಾನಮಿತ್ಯುದಿತೋ ದೇವೈರ್ದುರ್ಯೋಧನಮವೈಕ್ಷತ ॥

ಎಲ್ಲಕ್ಕಿಂತ ಮೇಲೆ ಇಂದ್ರ ತನ್ನ ಲೀಲೆಗಾಗಿ ನಿರ್ಮಿಸಿಕೊಂಡಿದ್ದ ಸಾಂಕಲ್ಪಿಕ ಸ್ವರ್ಗದ ಇಂದ್ರಭವನಕ್ಕೆ ಹೋದಾಗ, ದೇವತೆಗಳು ಧರ್ಮರಾಜನಿಗೆ ಇದೇ ನಿನ್ನ ಸ್ಥಾನ ಎಂದರು. ಆದರೆ ಧರ್ಮರಾಜ ಅಲ್ಲಿ ದುರ್ಯೋಧನನನ್ನು ಕಂಡನು.

ಸಭ್ರಾತೃಕಂ ಜ್ವಲಂತಂ ಚ ಸರ್ವೇಷಾಮುಪರಿ ಸ್ಥಿತಮ್ ।
ತಂ ದೃಷ್ಟ್ವಾ ಪರಮಕ್ರುದ್ಧೋ ನಿಮೀಲ್ಯ ನಯನೇ ಶುಭೇ ॥

ಭ್ರಾತರೋ ಮೇ ಕ್ವ ಕೃಷ್ಣಾ ಚ ಸಕರ್ಣಾಃ ಕ್ವ ಚ ಬಾಂಧವಾಃ ।
ಧೃಷ್ಟದ್ಯುಮ್ನಾದಯಃ ಪುತ್ರಾ ಹೈಡಿಂಬಾದ್ಯಾಶ್ಚ ಸರ್ವಶಃ ॥

ಯಾದವಾಶ್ಚೇತಿ ಪಪ್ರಚ್ಛ ದೇವಾಂಸ್ತೇ ಚ ತಮಬ್ರುವನ್ ।
ಕಿಂ ತೇ ತೈಃ ಸ್ವಕೃತಂ ಕರ್ಮ ಭುಜ್ಯತೇऽತ್ರ ನ ಚಾಪರೈಃ ॥

ಎಲ್ಲರಿಗಿಂತ ಉಚ್ಚಸ್ಥಾನದಲ್ಲಿ ಸೋದರರೊಂದಿಗೆ ಕುಳಿತು ಮೆರೆಯುತ್ತಿದ್ದ ದುರ್ಯೋಧನನನ್ನು ಕಂಡು ಧರ್ಮರಾಜನು ಬಹಳ ಕುಪಿತನಾಗಿ, ತನ್ನ ಸುಂದರವಾದ ಕಣ್ಣುಗಳನ್ನು ಮುಚ್ಚಿ 'ಕರ್ಣ ಮುಂತಾದ ನನ್ನ ಸೋದರರೆಲ್ಲಿ? ದ್ರೌಪದಿ ಎಲ್ಲಿ? ಧೃಷ್ಟದ್ಯುಮ್ನ ಮುಂತಾದ ಬಾಂಧವರೂ ಘಟೋತ್ಕಚ ಮುಂತಾದ ಮಕ್ಕಳೂ ಎಲ್ಲರೂ

ಎಲ್ಲಿ? ಯಾದವರೆಲ್ಲಿ?' ಎಂದು ದೇವತೆಗಳನ್ನು ಕೇಳಿದನು. ಅವರು ಅವನಿಗೆ ಹೇಳಿದರು: 'ಅವರಿಂದ ನಿನಗೆ ಏನು ಪ್ರಯೋಜನ? ಇಲ್ಲಿ ಎಲ್ಲರೂ ತಾವು ಮಾಡಿದ ಕರ್ಮವನ್ನು ತಾವು ಅನುಭವಿಸುತ್ತಿದ್ದಾರೆ. ಬೇರೆಯವರಲ್ಲ'.

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ ।
ಸರ್ವಾತಿಶಂಕೀ ಮಿತ್ರಧ್ರುಡ್ ನಾರಾಯಣಪರಾಙ್ಮುಖಃ ॥

ನಾಸ್ತಿಕೋಽತಿಶಠಃ ಕ್ರೂರೋ ದ್ವೇಷ್ಟಾ ವಿಷ್ಣೋಶ್ಚ ತದ್ಭವಾಮ್ ।
ಕಥಂ ದುರ್ಯೋಧನಃ ಸ್ಥಾನಂ ಸರ್ವೋತ್ತಮಮವಾಪ್ತವಾನ್ ॥

ದೇವತೆಗಳು ಹೀಗೆ ಹೇಳಿದಾಗ ಧರ್ಮರಾಜನು 'ಪಾಪಿಯಾದ ಈ ದುರ್ಯೋಧನನು ಭೂಲೋಕದಲ್ಲಿ ಎಲ್ಲ ರಾಜರನ್ನು ನಾಶಮಾಡಿದವನು ಎಲ್ಲರಲ್ಲಿಯೂ ಸಂಶಯಪಡುವ ಸ್ವಭಾವದವನು. ಮಿತ್ರದ್ರೋಹಿ. ಹರಿಗೆ ವಿಮುಖ, ನಾಸ್ತಿಕ, ಮಹಾವಂಚಕ, ಕ್ರೂರ, ವಿಷ್ಣು-ವೈಷ್ಣವ ದ್ವೇಷಿ. ಇವನು ಸರ್ವೋಚ್ಚವಾದ ಸ್ಥಾನವನ್ನು ಹೇಗೆ ಪಡೆದನು?' ಎಂದು ಕೇಳಿದನು.

ಕಥಂ ಚ ಸರ್ವಧರ್ಮಜ್ಞಾ ನಾರಾಯಣಪರಾಯಣಾಃ ।
ಸಂಸ್ಥಿತಾಃ ಪರಮೇ ಧರ್ಮೇ ದೃಶ್ಯಂತೇಽತ್ರ ನ ಮತ್ಪ್ರಿಯಾಃ ॥

'ಸರ್ವಧರ್ಮಗಳನ್ನೂ ಬಲ್ಲವರು, ನಾರಾಯಣನನ್ನೇ ನಂಬಿದವರು, ಪರಮ ಧರ್ಮಿಷ್ಠರೂ ಮತ್ತು ನನಗೆ ಪ್ರಿಯರೂ ಆದ ನನ್ನವರು ಇಲ್ಲಿ ಏಕೆ ಕಾಣುತ್ತಿಲ್ಲ?'

ಯತ್ರ ಸಂತಸ್ತು ತೇ ಸಂತಿ ತತ್ರ ಸ್ಥಾತವ್ಯಮೇವ ಮೇ ।
ನಿರಯೇಽಪಿ ನ ಚಾತ್ರಾಪಿ ನಾನೇನ ಸಹ ಪಾಪಿನಾ ॥

'ಎಲ್ಲಿ ಆ ಸಜ್ಜನರಿರುವರೋ ಅಲ್ಲಿ ನಾನಿರಬೇಕು. ನರಕದಲ್ಲಾದರೂ ಸರಿಯೆ. ಈ ಪಾಪಿಯೊಂದಿಗೆ ಸ್ವರ್ಗದಲ್ಲಿಯೂ ನಾನಿರಲಾರೆ'.

ಅಸ್ಯ ವೀರತಮಸ್ಯೇದಂ ಧಾರ್ತರಾಷ್ಟ್ರಸ್ಯ ಯುಜ್ಯತೇ ।
ಇತ್ಯುಕ್ತ್ವಾ ದೇವತಾ ದೂತಂ ಸ್ವಾನಾಂ ಸಂದರ್ಶನಾರ್ಥಿನಃ ॥

ರಾಜ್ಞಃ ಸಂಪ್ರೇಷಯಾಮಾಸುಸ್ತತ್ಸಂದರ್ಶಿತವರ್ತ್ಮನಾ ।
ದುರ್ಗಂಧೇನ ಸುಕೃಚ್ಛ್ರೇಣ ತಮಸಾ ಪ್ರಾವೃತೇನ ಚ ॥

ಗತ್ವೈವ ಕಿಯತೀಂ ಭೂಮಿಂ ತದ್ದುರ್ಗಂಧಾಸಹೋ ನೃಪಃ ।
ಇಚ್ಛನ್ ನಿವರ್ತನಂ ತತ್ರ ಸ್ವಾನಾಂ ವಾಚ ಇವಾಶೃಣೋತ್ ॥

ದೇವತೆಗಳು 'ಉತ್ತಮ ವೀರನಾದ ದುರ್ಯೋಧನನಿಗೆ ಈ ಉತ್ತಮ ಸ್ಥಾನ ಯೋಗ್ಯವೆ ಆಗಿದೆ' ಎಂದು ಹೇಳಿ ತನ್ನವರನ್ನು ಕಾಣಲು ಬಯಸಿದ ಧರ್ಮರಾಜನ ಹತ್ತಿರ ದೂತನನ್ನು ಕಳಿಸಿಕೊಟ್ಟರು. ಧರ್ಮರಾಜ ಅವನು ತೋರಿಸಿದ ದುರ್ಗಂಧಮಯವಾದ, ಕತ್ತಲು ಕವಿದ, ಕಷ್ಟಕರವಾದ ದಾರಿಯಲ್ಲಿ ಸ್ವಲ್ಪ ದೂರ ಹೋದ ಬಳಿಕ, ಆ ದುರ್ಗಂಧವನ್ನು ಸಹಿಸಲಾರದೆ ಹಿಂತಿರುಗಲು ಬಯಸಿದಾಗ ಅಲ್ಲಿ ಅವನಿಗೆ ತನ್ನವರ ಮಾತುಗಳು ಕೇಳಿ ಬಂದಂತಾಯಿತು.

ಕ್ಷಣಂ ತಿಷ್ಠ ಮಹಾರಾಜ ಸನ್ನಿಧಾನಬಲಾತ್ ತವ ।
ವೇದನಾ ನೋ ನ ಮಹತೀತ್ಯೇತಚ್ಛ್ರುತ್ವಾ ಯುಧಿಷ್ಠಿರಃ ॥

ಕೇ ಯೂಯಮಿತಿ ಪಪ್ರಚ್ಛ ದೀನಧ್ವನಿವಿಶಂಕಿತಃ ।
ಭೀಮೋಽಹಮರ್ಜುನಃ ಕರ್ಣ ಇತ್ಯಾದ್ಯುಕ್ತಮಿವಾಶ್ರುಣೋತ್ ॥

'ಮಹಾರಾಜನೇ, ಒಂದು ಕ್ಷಣ ನಿಲ್ಲು, ನಿನ್ನ ಸಾಮೀಪ್ಯದ ಬಲದಿಂದ ನಮ್ಮ ವೇದನೆ ಕಡಿಮೆಯಾಗುತ್ತಿದೆ'. ಈ ದೀನಧ್ವನಿಯನ್ನು ಕೇಳಿ ಯುಧಿಷ್ಠಿರನು ಸಂಶಯದಿಂದ ಕೇಳಿದನು: 'ಯಾರು ನೀವು?' 'ನಾನು ಭೀಮ, ನಾನು ಅರ್ಜುನ, ನಾನು ಕರ್ಣ' ಎಂದು ಮುಂತಾಗಿ ಹೇಳಿದಂತಾಯಿತು. ಅದನ್ನು ಧರ್ಮರಾಜನು ಕೇಳಿದನು.

ಶ್ರುತ್ವಾ ತತ್ಕೃಪಯಾSSವಿಷ್ಟಃ ಶೋಕಾಮರ್ಷಸಮನ್ವಿತಃ ।
ಅಹ ದೂತ ಯಥೇಷ್ಟಂ ತ್ವಂ ಗಚ್ಛ ನಾಹಮಿತೋ ವ್ರಜೇ ॥

ನ ಚ ಸ್ವರ್ಗೇಣ ಮೇ ಕಾರ್ಯಂ ತ್ಯಕ್ತ್ವಾ ಸ್ವಜನಮೀದೃಶಮ್ ।
ಇತ್ಯುಕ್ತಃ ಪ್ರಯಯೌ ದೂತಸ್ತಸ್ಥಾವೇವ ಯುಧಿಷ್ಠಿರಃ ॥

ಧರ್ಮರಾಜನು ಅದನ್ನು ಕೇಳಿ ಕರುಣೆಯಿಂದ ದುಃಖ. ಕೋಪಯುಕ್ತನಾಗಿ ದೂತನಿಗೆ ಹೇಳಿದನು: 'ನೀನು ನಿನಗೆ ಮನಬಂದಲ್ಲಿಗೇ ಹೋಗು. ನಾನು ಇಲ್ಲಿಂದ ಹೋಗಲಾರೆ. ಇಂಥ ಬಂಧುಗಳನ್ನು ಬಿಟ್ಟು ನನಗೆ ಸ್ವರ್ಗದಿಂದಲೂ ಏನಾಗಬೇಕಾಗಿಲ್ಲ'. ಹೀಗೆ ಹೇಳಿದಾಗ ದೂತ ಹೊರಟು ಹೋದನು. ಧರ್ಮರಾಜನು ಅಲ್ಲಿಯೇ ನಿಂತನು.

ತತೋಽತ್ರ ದೇವಾಃ ಪುರುಹೂತಪೂರ್ವಕಾಃ
ಸಮಾಯಯುಃ ಸ್ನೇಹವಶಾದ್ ಯುಧಿಷ್ಠಿರೇ ।
ತೇಷ್ವಾಗತೇಷ್ವೇವ ನ ತತ್ರ ವಾಚೋ
ದೀನಾ ನ ದುರ್ಗಂಧತಮೋಽಪ್ಯಪಶ್ಯತ್ ॥

ಆಗ ಅಲ್ಲಿಗೆ ಇಂದ್ರಾದಿ ದೇವತೆಗಳು ಧರ್ಮರಾಜನಲ್ಲಿ ಸ್ನೇಹವಶದಿಂದ ಬಂದರು. ಅವರು ಬಂದೊಡನೆ ಅಲ್ಲಿ ದುಃಖದ ಮಾತುಗಳು ಕೇಳಿಸದಂತಾದವು. ದುರ್ಗಂಧ ಅಂಧಕಾರಗಳು ಇಲ್ಲವಾದವು.

ಸ್ವರ್ಗೋತ್ತಮಂ ದೇಶಮಪಶ್ಯದೇತ-
ಮಭ್ರಾಂತಚೇತಾಃ ಸ ಯುಧಿಷ್ಠಿರಸ್ತದಾ ।
ಆಹಾತ್ರ ಧರ್ಮಃ ಪುನರಾತ್ಮಸದೃಶಃ
ಪ್ರಕಾಶಯನ್ ಪಾಂಡುಸುತಾಭಿಧಂ ಸ್ವಮ್ ॥

ಆಗ ಭ್ರಮಮುಕ್ತ ಬುದ್ಧಿಯವನಾದ ಯುಧಿಷ್ಠಿರನು ಆ ಪ್ರದೇಶ ಸ್ವರ್ಗಕ್ಕಿಂತ ಉತ್ತಮವಾಗಿರುವುದನ್ನು ಕಂಡನು. ಯಮ ತನ್ನ ಉತ್ತಮವಾದ ಕೀರ್ತಿಯನ್ನು ಪ್ರಸಿದ್ಧಿಗೊಳಿಸುವುದಕ್ಕಾಗಿ ಧರ್ಮರಾಜ ರೂಪದ ತನಗೇ ಹೇಳಿದನು.

ಧರ್ಮಾದ್ ವಿಶಿಷ್ಟಾ ಹಿ ಸದಾಽನೃಶಂಸತಾ
ದೃಷ್ಟಾ ಚ ಸಾ ತ್ವಯ್ಯಧಿಕಾ ತ್ರಿಶೋ ಮಯಾ ।
ಶಕ್ರೋಽಪ್ಯವಾಚೈನಮಿದಂ ಮೃಷಾ ತೇ
ಪ್ರದರ್ಶಿತಂ ದ್ರೋಣಕೃತೇ ಮೃಷಾ ಗಿರಃ ॥

ಕೃಚ್ಛ್ರಾದಿದಂ ತೇ ಕಥಿತಂ ನ ಚಾತಿ
ವಿಸ್ರಂಭ ಆಸೀತ್ ತವ ಕೃಷ್ಣವಾಕ್ಯೇ ।
ನ ಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್
ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ॥

'ಎಲ್ಲ ಧರ್ಮಕ್ಕಿಂತ ಸದಾ ಶ್ರೇಷ್ಠವಾದುದು ದಯೆ. ಅದು ನಿನ್ನಲ್ಲಿ ಅಧಿಕವಾಗಿಯೇ ಇರುವುದನ್ನು ಮೂರು ಬಾರಿ ನಾನು ಕಂಡೆ' ಎಂದು ಇಂದ್ರನು ಹೇಳಿದನು.

ದ್ರೋಣನಿಗೆ ಸುಳ್ಳು ಹೇಳಿದ ನಿನಗೆ ಈ ಸುಳ್ಳು ನರಕ ಪ್ರದರ್ಶಿತವಾಯಿತು. ಏಕೆಂದರೆ ನೀನು ಈ ಸುಳ್ಳನ್ನು ಕಷ್ಟದಿಂದ ಹೇಳಿದೆ. ಶ್ರೀಕೃಷ್ಣನ ಮಾತಿನಲ್ಲಿ ನಿನಗೆ ಪೂರ್ಣ ವಿಶ್ವಾಸವಿರಲಿಲ್ಲ. ಕೃಷ್ಣನ ಆಜ್ಞೆ ಇದ್ದರೆ ಸಕಲಶಾಸ್ತ್ರವಿರುದ್ಧ ಆಚರಣೆ ಉಳ್ಳವನಿಗೂ ಏನೂ ಪಾಪ ಬರಲಾರದು.

ಬ್ರಹ್ಮಾಪರೋಕ್ಷ್ಯೇಽಪಿ ವಿಕರ್ಮ ಸೂಚಕಂ
ಪ್ರಾರಬ್ಧಪಾಪಸ್ಯ ವಿಷಾಶನಂ ಯಥಾ ।
ಪಶ್ಯಾತ್ರ ಭೀಮಪ್ರಮುಖಾನ್ ಸುಖಸ್ಥಾನ್
ಸಂಪೂಜ್ಯಮಾನಾಂಸ್ತ್ರಿದಶೈಃ ಸುರೂಪಾನ್ ॥

ಬ್ರಹ್ಮಾಪರೋಕ್ಷ ಬಂದ ಬಳಿಕ ಜ್ಞಾನಿ ಮಾಡಿದ ಪಾಪಕರ್ಮ ವಿಷಭಕ್ಷಣದಂತೆ ಪ್ರಾರಬ್ಧಪಾಪಕ್ಕೆ ಸೂಚಕವಾಗುತ್ತದೆ. ಈಗ ಸುಖವಾಗಿ ದೇವತೆಗಳಿಂದ ಆದರಿಸಲ್ಪಡುತ್ತಿರುವ, ಸುಂದರ ರೂಪದವರಾದ ಭೀಮ ಮುಂತಾದವರನ್ನು ಇಲ್ಲಿ ನೋಡು.

ಕುತಃ ಪರಬ್ರಹ್ಮದೃಶಾಂ ಸುಶುದ್ಧ-
ಸತ್ಕರ್ಮಣಾಂ ಕೃಷ್ಣಪರಾಯಣಾನಾಮ್ ।
ಪರೇಣ ಯೋಗೇನ ವಿಸೃಷ್ಟತನ್ವಾಂ
ದುಃಖಂ ಭವೇದ್ ದೇವವರಾಧಿಪಾನಾಮ್ ॥

ಪರಬ್ರಹ್ಮಾಪರೋಕ್ಷ ಉಳ್ಳವರು, ಅತ್ಯಂತ ಶುದ್ಧ ಸತ್ಕರ್ಮ ಮಾಡಿದವರು, ವಿಷ್ಣುಭಕ್ತರು, ಉತ್ತಮ ಯೋಗಬಲದಿಂದ ಶರೀರ ತ್ಯಾಗ ಮಾಡಿದವರು, ದೇವೋತ್ತಮರಿಗೂ ಅಧಿಪತಿಗಳು ಭೀಮ ಮುಂತಾದವರು. ಅವರಿಗೆ ದುಃಖ ಎಲ್ಲಿಂದ ಬಂದೀತು?

ಏತೇ ಹಿ ದೇವಪ್ರವರಾಃ ಪೃಥಿವ್ಯಾಂ
ಜಾತಾ ಭುವೋ ಭಾರಜಿಹೀರ್ಷಮೀಶಮ್ ।
ಪ್ರತೋಷ್ಯ ತದ್ಭಾವಿತಬುದ್ಧಿಕರ್ಮಭಿಃ
ಪುನಶ್ಚ ತೇನೈವ ಸಹಾಽಪಿರೇ ದಿವಮ್ ॥

ಈ ಭೀಮ ಮುಂತಾದವರು ದೇವೋತ್ತಮರು. ಭೂಮಿಯಲ್ಲಿ ಅವತರಿಸಿ, ಭೂಭಾರ ಕಳೆಯಲು ಬಯಸಿದ ಹರಿಯನ್ನು ಅವನಲ್ಲಿ ಅರ್ಪಿತವಾದ ಜ್ಞಾನ ಕರ್ಮಗಳಿಂದ ಆರಾಧಿಸಿ ಪುನಃ ಅವನೊಂದಿಗೇ ಸ್ವರ್ಗವನ್ನು ಹೊಂದಿದ್ದಾರೆ.

★ ★ ★ ★ ★

ಒಂದನೆಯ ಅಧ್ಯಾಯ

ಸ್ವರ್ಗವನ್ನು ಪ್ರವೇಶಿಸಿದ ಯುಧಿಷ್ಠಿರನು ಅಲ್ಲಿ ಎತ್ತರವಾದ ಆಸನದಲ್ಲಿ ಶೋಭಿಸುತ್ತಿರುವ ದುರ್ಯೋಧನನನ್ನು ನೋಡುವುದು ಹಾಗೂ ಅವನ ಏಳಿಗೆಯನ್ನು ಸಹಿಸಲಾಗದೆ, ಅವರಲ್ಲಿದ್ದ ದೋಷಗಳನ್ನು ಹೇಳುವ ಮೂಲಕ ದುರ್ಯೋಧನನೊಂದಿಗೆ ತನಗೆ ಸ್ವರ್ಗವಾಸದಲ್ಲೂ ಆಸಕ್ತಿಯಿಲ್ಲ ಎಂದು ನಿವೇದಿಸುತ್ತಾ ನಾರದರಲ್ಲಿ ತನ್ನ ಸಹೋದರರನ್ನು ನೋಡುವ ಬಯಕೆಯನ್ನು ನಿವೇದಿಸುವುದು.

ಜನಮೇಜಯಃ

ಸ್ವರ್ಗಂ ತ್ರಿವಿಷ್ಟಪಂ ಪ್ರಾಪ್ಯ ಮಮ ಪೂರ್ವಪಿತಾಮಹಾಃ ।
ಪಾಂಡವಾ ಧಾರ್ತರಾಷ್ಟ್ರಾಶ್ಚ ಕಾನಿ ಸ್ಥಾನಾನಿ ಭೇಜಿರೇ ॥೧॥

ಜನಮೇಜಯ– ನನ್ನ ಪಿತಾಮಹನಿಗೂ ಪೂರ್ವಜರಾದ ಪಾಂಡವರು ಮತ್ತು ಧೃತರಾಷ್ಟ್ರನ ಮಕ್ಕಳಾದ ಕೌರವರು ಮೂರನೆಯ ಲೋಕವಾದ ಸ್ವರ್ಗವನ್ನು ಪಡೆದು ಎಂತಹ ಸ್ಥಾನಗಳನ್ನು ಅಲಂಕರಿಸಿದರು?

ಏತದಿಚ್ಛಾಮ್ಯಹಂ ಶ್ರೋತುಂ ಸರ್ವವಿಚ್ಚಾಸಿ ಮೇ ಮತಃ ।
ಮಹರ್ಷಿಣಾಽಭ್ಯನುಜ್ಞಾತೋ ವ್ಯಾಸೇನಾದ್ಭುತಕರ್ಮಣಾ ॥೨॥

ಅದ್ಭುತವಾದ ಕರ್ಮಗಳನ್ನು ನಡೆಸಿದ ಮಹರ್ಷಿಯಾದ ವೇದವ್ಯಾಸರಿಂದ ಅನುಜ್ಞೆಯನ್ನು ಪಡೆದ ನೀವು ಸರ್ವಜ್ಞರಾಗಿರುವಿರೆಂದು ನನಗೆ ತಿಳಿದಿದೆ. ಹಾಗಾಗಿ ಇದನ್ನು ಕೇಳಲು ನಾನು ಬಯಸುತ್ತಿದ್ದೇನೆ.

ವೈಶಂಪಾಯನಃ

ಸ್ವರ್ಗಂ ತ್ರಿವಿಷ್ಟಪಂ ಪ್ರಾಪ್ಯ ತವ ಪೂರ್ವಪಿತಾಮಹಾಃ ।
ಯುಧಿಷ್ಠಿರಪ್ರಭೃತಯೋ ಯದಕುರ್ವತ ತಚ್ಛೃಣು ॥೩॥

ವೈಶಂಪಾಯನ– ನಿನ್ನ ಪಿತಾಮಹರಿಗೂ ಪೂರ್ವಜರಾದ ಯುಧಿಷ್ಠಿರನೇ ಮೊದಲಾದವರು ತ್ರಿವಿಷ್ಟಪವೆಂಬ ಸ್ವರ್ಗವನ್ನು ಪಡೆದು ಏನು ಮಾಡಿದರೆಂದು ಕೇಳುವವನಾಗು.

ಸ್ವರ್ಗಂ ತ್ರಿವಿಷ್ಟಪಂ ಪ್ರಾಪ್ಯ ಧರ್ಮರಾಜೋ ಯುಧಿಷ್ಠಿರಃ ।
ದುರ್ಯೋಧನಂ ಶ್ರಿಯಾ ಜುಷ್ಟಂ ದದರ್ಶಾಸೀನಮಾಸನೇ ॥೪॥

ಧರ್ಮರಾಜನಾದ ಯುಧಿಷ್ಠಿರನು ತ್ರಿವಿಷ್ಟಪನೆಂಬ ಸ್ವರ್ಗವನ್ನು ಪ್ರವೇಶಿಸಿ, ಆಸನದಲ್ಲಿ ಕುಳಿತು ಸಂಪತ್ತಿನಿಂದ ಮೆರೆಯುವ ದುರ್ಯೋಧನನನ್ನು ಕಂಡನು.

ಭ್ರಾಜಮಾನಮಿವಾದಿತ್ಯಂ ವೀರಲಕ್ಷ್ಮ್ಯಾಽಭಿಸಂವೃತಮ್ ।
ದೇವೈರ್ಭ್ರಾಜಿಷ್ಣುಭಿಃ ಸಾಧ್ಯೈಃ ಸಹಿತಂ ಪುಣ್ಯಕರ್ಮಭಿಃ ॥೫॥

ಅವನು ಸೂರ್ಯನಂತೆ ತೇಜಸ್ವಿಯಾಗಿದ್ದನು. ವೀರಲಕ್ಷ್ಮಿಯು ಅವನ ಜೊತೆಗಿದ್ದಳು. ಶೋಭಾಯಮಾನರಾದ ದೇವತೆಗಳಿಂದಲೂ, ಸಾಧ್ಯರಿಂದಲೂ ಪುಣ್ಯಕರ್ಮಿಗಳಿಂದಲೂ ಕೂಡಿಕೊಂಡಿದ್ದನು.

ತತೋ ಯುಧಿಷ್ಠಿರೋ ರಾಜಾ ದುರ್ಯೋಧನಮಮರ್ಷಿತಃ ।
ಸಹಸಾ ಸನ್ನಿವೃತ್ತೋಽಭೂಚ್ಛ್ರಿಯಂ ದೃಷ್ಟ್ವಾ ಸುಯೋಧನೇ ॥೬॥

ಇಷ್ಟಾದಾಗ ಈ ಮೊದಲೇ ದುರ್ಯೋಧನನ ಬಗ್ಗೆ ಅಸಹನೆಯುಳ್ಳ ಯುಧಿಷ್ಠಿರ ರಾಜನು, ದುರ್ಯೋಧನನಿಗೆ ಒದಗಿ ಬಂದ ಸಂಪತ್ತನ್ನು ಕಂಡು ಕೂಡಲೇ ಹಿಂದಿರುಗಿದನು.

ಬ್ರುವನ್ನುಚ್ಚೈರ್ವಚಸ್ತಾನ್ ವೈ ನಾಹಂ ದುರ್ಯೋಧನೇನ ವೈ ।
ಸಹಿತಃ ಕಾಮಯೇ ಲೋಕಾನ್ ಲುಬ್ಧೇನಾದೀರ್ಘದರ್ಶಿನಾ ॥೭॥

ಅಲ್ಲಿರುವ ದೇವದೂತರನ್ನು ಕುರಿತು ಜೋರಾದ ಸ್ವರದಿಂದ ಹೀಗೆಂದನು: ಲುಬ್ಧನಾದ, ದೂರದೃಷ್ಟಿಯಿಲ್ಲದ ದುರ್ಯೋಧನನೊಂದಿಗೆ ನಾನು ಪುಣ್ಯಲೋಕಗಳನ್ನು ಬಯಸಲಾರೆ.

ಯತ್ಕೃತೇ ಪೃಥಿವೀ ಸರ್ವಾ ಸುಹೃದೋ ಬಾಂಧವಾಸ್ತಥಾ ।
ಹತಾಸ್ಮಾಭಿಃ ಪ್ರಸಹ್ಯಾಜೌ ಕ್ಲಿಷ್ಟೈಃ ಪೂರ್ವಂ ಮಹಾವನೇ ॥೮॥

ದ್ರೌಪದೀ ಚ ಸಭಾಮಧ್ಯೇ ಪಾಂಚಾಲೀ ಧರ್ಮಚಾರಿಣೀ ।
ಪರ್ಯಾಕೃಷ್ಟಾನವದ್ಯಾಂಗೀ ಪತ್ನೀ ನೋ ಗುರುಸನ್ನಿಧೌ ॥೯॥

ಅಸ್ತಿ ದೇವಾ ನ ಮೇ ಕಾಮಃ ಸುಯೋಧನಮುದೀಕ್ಷಿತುಮ್ ।
ತತ್ರಾಹಂ ಗಂತುಮಿಚ್ಛಾಮಿ ಯತ್ರ ತೇ ಭ್ರಾತರೋ ಮಮ ॥೧೦॥

ಯಾರ ದೆಸೆಯಿಂದ ಮೊದಲು ಮಹಾಕಾಡಿನಲ್ಲಿ ಕಷ್ಟವನ್ನು ಅನುಭವಿಸಿದ ನಮ್ಮಿಂದ ಸ್ನೇಹಿತರು, ಬಾಂಧವರು, ಹಾಗೆಯೇ ಭೂಮಿಯಲ್ಲಿರುವ ಎಲ್ಲರೂ ಬಲಾತ್ಕಾರವಾಗಿ ಯುದ್ಧದಲ್ಲಿ ಹತರಾದರೋ, ಸದಾ ಧರ್ಮವನ್ನೇ ಆಚರಿಸುತ್ತಿದ್ದ, ನಿರ್ದುಷ್ಟವಾದ ಅಂಗಗಳುಳ್ಳ ನಮ್ಮ ಪತ್ನಿಯಾದ, ಪಾಂಚಾಲದೇಶದ ದ್ರೌಪದೀದೇವಿಯು ಗುರು ಹಿರಿಯರ ಸಮ್ಮುಖದಲ್ಲಿ ಸಭೆಯ ಮಧ್ಯದಲ್ಲಿ ಸೀರೆಯ ಸೆಳೆತಕ್ಕೆ ಒಳಗಾದಳೋ ಅಂತಹ ವ್ಯಕ್ತಿಯು ಇಲ್ಲಿರುವನು. ಹೇ ದೇವತೆಗಳೇ, ಆ ಸುಯೋಧನನನ್ನು ನೋಡಲು ನನಗೆ ಮನಸ್ಸಿಲ್ಲ. ಆದ್ದರಿಂದ ಎಲ್ಲಿ ನನ್ನ ಸಹೋದರರಿರುವರೋ ಅಲ್ಲಿಗೇ ನಾನು ಹೋಗ ಬಯಸುವೆ.

ನೈವಮಿತ್ಯಬ್ರವೀತ್ ತಂ ತು ನಾರದಃ ಪ್ರಹಸನ್ನಿವ ।
ಸ್ವರ್ಗೇ ನಿವಾಸೇ ರಾಜೇಂದ್ರ ವಿರುದ್ಧಂ ಚಾಪಿ ನಶ್ಯತಿ ॥೧೧॥

ಆಗ ನಾರದರು ನಗುತ್ತಾ 'ಹೇ ರಾಜೇಂದ್ರನೇ, ಸ್ವರ್ಗದಲ್ಲಿ ವಾಸಿಸುವ ಸಂದರ್ಭದಲ್ಲಿ ಭೂಮಿಯಲ್ಲಿದ್ದ ವಿರುದ್ಧ ಭಾವನೆಗಳು ನಾಶವಾಗುವವು. ಆದ್ದರಿಂದ ಈ ನಿನ್ನ ಆಲೋಚನೆ ಸರಿಯಾದುದಲ್ಲ' ಎಂದರು.

ಯುಧಿಷ್ಠಿರ ಮಹಾಬಾಹೋ ಮೈವಂ ವೋಚಃ ಕಥಂಚನ ।
ದುರ್ಯೋಧನಂ ಪ್ರತಿ ನೃಪಂ ಶೃಣು ಚೇದಂ ವಚೋ ಮಮ ॥೧೨॥

'ಹೇ ಮಹಾಬಾಹುವಾದ ಯುಧಿಷ್ಠಿರನೇ, ಯಾವುದೇ ಕಾರಣಕ್ಕೂ ಹೀಗೆನ್ನಬೇಡ. ರಾಜನಾದ ದುರ್ಯೋಧನನ ಬಗ್ಗೆ ಈ ನನ್ನ ಮಾತನ್ನು ಕೇಳು'.

ಏಷ ದುರ್ಯೋಧನೋ ರಾಜಾ ಪೂಜ್ಯತೇ ತ್ರಿದಶೈಃ ಸಹ ।
ಸದ್ಭಿಶ್ಚ ರಾಜಪ್ರವರೈರ್ಯ ಇಮೇ ಸ್ವರ್ಗವಾಸಿನಃ ॥೧೩॥

'ಈ ರಾಜನಾದ ದುರ್ಯೋಧನನು ಸ್ವರ್ಗವಾಸಿಗಳಾದ ಈ ಯಾವ ರಾಜಶ್ರೇಷ್ಠರು ಮತ್ತು ಸಜ್ಜನರಿರುವರೋ ಅವರಿಂದ ದೇವತೆಗಳ ಜೊತೆಗೆ ಪೂಜಿಸಲ್ಪಡುತ್ತಿದ್ದಾನೆ'.

ವೀರಲೋಕಗತಿಂ ಪ್ರಾಪ್ತಾ ಯುದ್ಧೇ ಹುತ್ವಾऽऽತ್ಮನಸ್ತನುಮ್ ।
ಯೂಯಂ ಸರ್ವೇ ಸುರಸಮಾ ಯೇನ ಯುದ್ಧೇನ ಬಾಧಿತಾಃ ॥೧೪॥

'ಯುದ್ಧದಲ್ಲಿ ತಮ್ಮ ಶರೀರವನ್ನು ಆಹುತಿಯನ್ನಾಗಿ ನೀಡಿ ವೀರಲೋಕಗತಿಯನ್ನು ಪಡೆದ ಮತ್ತು ಆ ಯಾವ ಯುದ್ಧದಿಂದ ಬಾಧೆಗೊಳಗಾದ ನೀವೆಲ್ಲರೂ ದೇವತೆಗಳಿಗೆ ಸಮರಾಗಿರುವಿರಿ'.

ಸ ಏಷ ಕ್ಷತ್ರಧರ್ಮೇಣ ಸ್ಥಾನಮೇತದವಾಪ್ತವಾನ್ ।
ಭಯೇ ಮಹತಿ ಯೋऽಭೀತೋ ಬಭೂವ ಪೃಥಿವೀಪತಿಃ ॥೧೫॥

'ಅಂತಹ ಈ ಪೃಥಿವೀಪತಿಯಾದ ದುರ್ಯೋಧನನು ಮಹತ್ತಾದ ಭಯವು ಪ್ರಾಪ್ತವಾಗಿದ್ದರೂ ಭೀತಿಗೊಳಗಾಗದೆ ಕ್ಷತ್ರಧರ್ಮದಲ್ಲೇ ಇದ್ದನು. ಆದ್ದರಿಂದ ಈ ಸ್ಥಾನವನ್ನು ಪಡೆದಿದ್ದಾನೆ'.

ನ ತನ್ಮನಸಿ ಕರ್ತವ್ಯಂ ಪುತ್ರ ಯದ್ ದ್ಯೂತಕಾರಿತಮ್ ।
ದ್ರೌಪದ್ಯಾಶ್ಚ ಪರಿಕ್ಲೇಶಂ ನ ಚಿಂತಯಿತುಮರ್ಹಸಿ ॥೧೬॥

'ಮಗು, ದ್ಯೂತಕಾಲದಲ್ಲಿ ಇವನಿಂದ ಏನು ಮಾಡಿಸಲ್ಪಟ್ಟಿದೆಯೋ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ. ಅಲ್ಲದೆ ದ್ರೌಪದಿಗೆ ಒದಗಿದ ಕಷ್ಟವನ್ನೂ ಆಲೋಚಿಸುವುದು ಯೋಗ್ಯವಲ್ಲ'.

ಯೇ ಚಾನ್ಯೇऽಪಿ ಪರಿಕ್ಲೇಶಾ ಯುಷ್ಮಾಕಂ ಜ್ಞಾತಿಕಾರಿತಾಃ ।
ಸಂಗ್ರಾಮೇಷ್ವಥವಾऽನ್ಯತ್ರ ನ ತಾನ್ ಸಂಸ್ಮರ್ತುಮರ್ಹಸಿ ॥೧೭॥

ಅದೂ ಅಲ್ಲದೆ ನಿಮ್ಮ ಬಂಧುಗಳಿಂದ ನಡೆಸಲ್ಪಟ್ಟ ಯುದ್ಧ ಅಥವಾ ಬೇರೆ ಸಂದರ್ಭಗಳಲ್ಲಿ ಒದಗಿ ಬಂದ ಬೇರೆ ಯಾವೆಲ್ಲ ಕಷ್ಟಗಳಿವೆಯೋ ಅವ್ಯಾವುದನ್ನೂ ನೀನು ಸ್ಮರಿಸುವುದು ತರವಲ್ಲ.

ಸಮಾಗಚ್ಛ ಯಥಾನ್ಯಾಯಂ ರಾಜ್ಞಾ ದುರ್ಯೋಧನೇನ ವೈ ।
ಸ್ವರ್ಗೋऽಯಂ ನೇಹ ವೈರಾಣಿ ಭವಂತಿ ಮನುಜಾಧಿಪ ॥೧೮॥

'ಹೇ ಮನುಜಾಧಿಪನೇ, ರಾಜನಾದ ದುರ್ಯೋಧನನೊಂದಿಗೆ ನ್ಯಾಯಾನುಸಾರವಾಗಿ ಸೇರಿಕೊ. ಇದು ಸ್ವರ್ಗವಾಗಿದೆ. ಇಲ್ಲಿ ಭೂಲೋಕದ ಯಾವುದೇ ವೈರಗಳು ಇರಬಾರದು'.

ವೈಶಂಪಾಯನಃ

ನಾರದೇನೈವಮುಕ್ತಸ್ತು ಕುರುರಾಜೋ ಯುಧಿಷ್ಠಿರಃ ।
ಭ್ರಾತೄನ್ ಪಪ್ರಚ್ಛ ಮೇಧಾವೀ ವಾಕ್ಯಮೇತದುವಾಚ ಹ ॥೧೯॥

ವೈಶಂಪಾಯನ– ನಾರದರು ಹೀಗೆಂದಾಗ ಮೇಧಾವಿಯಾದ, ಕುರುರಾಜನಾದ ಯುಧಿಷ್ಠಿರನು ಸಹೋದರರ ಬಗ್ಗೆ ಕೇಳುತ್ತಾ ಈ ಮಾತುಗಳನ್ನಾಡಿದನು.

ಯದಿ ದುರ್ಯೋಧನಸ್ಯೈತೇ ವೀರಲೋಕಾಃ ಸನಾತನಾಃ ।
ಅಧರ್ಮಜ್ಞಸ್ಯ ಪಾಪಸ್ಯ ಪೃಥಿವೀಸುಹೃದದ್ರುಹಃ ॥೨೦॥

ಯತ್ಕೃತೇ ಪೃಥಿವೀ ನಷ್ಟಾ ಸಹಯಾ ಸನರದ್ವಿಪಾ ।
ವಯಂ ಚ ಮನ್ಯುನಾ ದಗ್ಧಾ ವೈರಂ ಪ್ರತಿಚಿಕೀರ್ಷವಃ ॥೨೧॥

ಯೇ ತೇ ವೀರಾ ಮಹಾತ್ಮಾನೋ ಭ್ರಾತರೋ ಮೇ ಮಹಾವ್ರತಾಃ ।
ಸತ್ಯಪ್ರತಿಜ್ಞಾ ಲೋಕಸ್ಯ ಶೂರಾ ವೈ ಸತ್ಯವಾದಿನಃ ॥೨೨॥

ತೇಷಾಮಿದಾನೀಂ ಕೇ ಲೋಕಾ ದ್ರಷ್ಟುಮಿಚ್ಛಾಮಿ ತಾನಹಮ್ ॥೨೩॥

'ಒಂದು ವೇಳೆ ಯಾವ ದುರ್ಯೋಧನನಿಗೋಸ್ಕರ ಕುದುರೆಗಳು, ಮನುಷ್ಯರು, ಆನೆಗಳಿಂದ ಸಹಿತವಾದ ಇಡೀ ಭೂಮಿಯು ನಷ್ಟವಾಯಿತೋ, ಯಾರಿಂದಾಗಿ ನಾವು ವೈರಕ್ಕೆ ಪ್ರತೀಕಾರವನ್ನು ಮಾಡುವುದಕ್ಕಾಗಿ ಕ್ರೋಧದಿಂದ ದಗ್ಧರಾದೆವೋ ಅಂತಹ ಅಧರ್ಮನಿಷ್ಠನಾದ, ಪಾಪಿಯಾದ, ಭೂಮಿ ಹಾಗೂ ಸ್ನೇಹಿತರಿಗೆ ದ್ರೋಹ ಮಾಡಿದ ದುರ್ಯೋಧನನಿಗೆ ಈ ಸನಾತನವಾದ ವೀರಲೋಕಗಳು ಸಿಗುವಂತಿದ್ದರೆ ಮಹಾತ್ಮರಾದ, ಮಹಾವ್ರತನಿಷ್ಠರಾದ, ಸತ್ಯವಾದ ಪ್ರತಿಜ್ಞೆಯುಳ್ಳ, ಲೋಕದಲ್ಲಿ ಬಹಳ ಶೂರರಾದ, ಸತ್ಯವನ್ನೇ ಹೇಳಿರುವ, ವೀರರಾದ ನನ್ನ ಸಹೋದರರು ಯಾರಿರುವರೋ ಅವರಿಗೆ ಈಗ ಯಾವ ಲೋಕಗಳು ಸಿಕ್ಕಿವೆ? ಎಂಬುದನ್ನು ನಾನು ನೋಡಬಯಸುತ್ತೇನೆ'.

ವ್ಯಾಖ್ಯಾನ ವಿಶೇಷ– ಈ ಶ್ಲೋಕದಲ್ಲಿ ವೀರಲೋಕ ಅಂದರೆ ಯುದ್ಧದಲ್ಲಿ ಅಭಿಮುಖವಾಗಿ ಹೋರಾಡಿ ಮೃತರಾದ ವೀರರಿಗೆ ಸ್ವಲ್ಪ ಕಾಲ ಉಪಭೋಗವನ್ನು ಅನುಭವಿಸಲು ಸ್ವರ್ಗಕ್ಕಿಂತ ಕೆಳಭಾಗದಲ್ಲಿ, ಅಂತರಿಕ್ಷಕ್ಕಿಂತ ಮೇಲ್ಭಾಗದಲ್ಲಿ ಮಾಡಿರತಕ್ಕಂತಹ ಲೋಕಗಳು ಎಂದು ಅರ್ಥ.

ಕರ್ಣಂ ಚೈವ ಮಹಾತ್ಮಾನಂ ಕೌಂತೇಯಂ ಸತ್ಯಸಂಗರಮ್ ।
ಧೃಷ್ಟದ್ಯುಮ್ನಂ ಸಾತ್ಯಕಿಂ ಚ ಧೃಷ್ಟದ್ಯುಮ್ನಸ್ಯ ಚಾತ್ಮಜಾನ್ ॥೨೪॥

ಯೇ ಚ ಶಸ್ತ್ರೈರ್ವಧಂ ಪ್ರಾಪ್ತಾಃ ಕ್ಷತ್ರಧರ್ಮೇಣ ಪಾರ್ಥಿವಾಃ ।
ಕ್ವನು ತೇ ಪಾರ್ಥಿವಾನ್ ಬ್ರಹ್ಮನ್ನೃತಾನ್ ಪಶ್ಯಾಮಿ ನಾರದ ॥೨೫॥

'ಮಹಾತ್ಮನಾದ ಕುಂತೀಪುತ್ರನಾದ ಕರ್ಣನನ್ನೂ, ಸತ್ಯಪ್ರತಿಜ್ಞೆಯುಳ್ಳ ಧೃಷ್ಟದ್ಯುಮ್ನನನ್ನೂ, ಸಾತ್ಯಕಿಯನ್ನೂ, ಧೃಷ್ಟದ್ಯುಮ್ನನ ಮಕ್ಕಳನ್ನೂ, ಅಲ್ಲದೆ ಬೇರೆ ಯಾವೆಲ್ಲ ರಾಜರುಗಳು ಕ್ಷತ್ರಧರ್ಮವನ್ನು ಹೊಂದಿ, ಶಸ್ತ್ರದಿಂದ ಹತರಾಗಿರುವರೋ ಅಂತಹ ರಾಜರನ್ನು ಹೇ ಬ್ರಹ್ಮನ್, ನಾರದನೇ, ನಾನೆಲ್ಲಿ ನೋಡಲು ಸಾಧ್ಯ ?'

ವಿರಾಟದ್ರುಪದೌ ಚೈವ ಧೃಷ್ಟಕೇತುಮುಖಾಂಶ್ಚ ತಾನ್ ।
ಶಿಖಂಡಿನಂ ಚ ಪಾಂಚಾಲ್ಯಂ ದ್ರೌಪದೇಯಾಂಶ್ಚ ಸರ್ವಶಃ ।
ಅಭಿಮನ್ಯುಂ ಚ ದುರ್ಧರ್ಷಂ ದ್ರಷ್ಟುಮಿಚ್ಛಾಮಿ ನಾರದ ॥೨೬॥

'ಅಲ್ಲದೆ ವಿರಾಟರಾಜ ಹಾಗೂ ದ್ರುಪದರಾಜರು, ಧೃಷ್ಟಕೇತುವೇ ಮೊದಲಾದ ರಾಜರು, ಪಾಂಚಾಲದೇಶದವನಾದ ಶಿಖಂಡಿ, ದ್ರೌಪದಿಯ ಎಲ್ಲ ಮಕ್ಕಳು, ಕಷ್ಟದಿಂದ ಬಲಾತ್ಕಾರಕ್ಕೊಳಗಾದ ಅಭಿಮನ್ಯು, ಇವರೆಲ್ಲರನ್ನೂ ಹೇ ನಾರದರೇ, ನಾನು ನೋಡಬಯಸುವೆನು'.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಸ್ವರ್ಗಾರೋಹಣಪರ್ವಣಿ ಯುಧಿಷ್ಠಿರೇಣ ದುರ್ಯೋಧನದರ್ಶನಾನಂತರಂ
ನಾರದೇನ ಸಹ ಸಂಭಾಷಣಂ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಯುಧಿಷ್ಠಿರನು ಸ್ವರ್ಗದಲ್ಲಿ ಕರ್ಣನೇ ಮೊದಲಾದ ಬಂಧುಜನರನ್ನು ಕಾಣದೆ, ದೇವತೆಗಳಲ್ಲಿ ಎಂತಹ ಪ್ರದೇಶವಾಗಿದ್ದರೂ ಬಂಧುಜನರೊಂದಿಗೆ ತಾನು ವಾಸಿಸುತ್ತೇನೆ ಎಂದು ತಿಳಿಸುವುದು. ದೇವತೆಗಳಿಂದ ಆಜ್ಞಾಪಿತನಾದ ದೇವದೂತನು ಬಂಧುಜನರನ್ನು ತೋರಿಸುವುದಕ್ಕಾಗಿ ಯುಧಿಷ್ಠಿರನನ್ನು ನರಕ ಪ್ರದೇಶಕ್ಕೆ ಒಯ್ಯುವುದು. ನೋಡಲು ಅಶಕ್ಯವಾದ ನರಕದರ್ಶನವನ್ನು ಸಹಿಸಿಕೊಳ್ಳಲಾಗದೆ ದೇವದೂತನೊಂದಿಗೆ ಹಿಂದಿರುಗುತ್ತಿದ್ದ ಯುಧಿಷ್ಠಿರನು ತಾನು ಹಿಂದೆ ಕೇಳಿದ ಕಂಠಧ್ವನಿಗಳನ್ನು ಕೇಳಿಸಿಕೊಳ್ಳುವುದು. ಅನಂತರ ಯುಧಿಷ್ಠಿರನು ಕೇಳಿದಾಗ, ತಾವು ಕರ್ಣ-ಭೀಮಾದಿಗಳೆಂದು ತಿಳಿಸುವುದು. ಅನಂತರ ದೂತನಲ್ಲಿ ತಾನು ಹಿಂದಿರುಗಿ ಅಲ್ಲಿಗೆ ಬರಲಾರೆನೆಂದು ತಿಳಿಸು ಎಂದು ಸೂಚಿಸುವುದು. ದೂತನು ಇಂದ್ರನ ಸಮೀಪದಲ್ಲಿ ಯುಧಿಷ್ಠಿರನು ಹೇಳಿದುದನ್ನು ನಿವೇದಿಸುವುದು.

ಯುಧಿಷ್ಠಿರಃ

ನೇಹ ಪಶ್ಯಾಮಿ ವಿಬುಧಾ ರಾಧೇಯಮಮಿತೌಜಸಮ್ ।
ಭ್ರಾತರೌ ಚ ಮಹಾತ್ಮಾನೌ ಯುಧಾಮನ್ಯೂತ್ತಮೌಜಸೌ ॥೧॥

ಯುಧಿಷ್ಠಿರ– ಹೇ ದೇವತೆಗಳೇ, ನಾನು ಅಮಿತವಾದ ಪರಾಕ್ರಮವುಳ್ಳ ರಾಧೇಯನನ್ನು ಇಲ್ಲಿ ನೋಡುತ್ತಿಲ್ಲ. ಅಲ್ಲದೆ ಮಹಾತ್ಮರಾದ ಸಹೋದರರಾದ ಯುಧಾಮನ್ಯು ಮತ್ತು ಉತ್ತಮೌಜರನ್ನೂ ನೋಡುತ್ತಿಲ್ಲ.

ಜುಹುವುರ್ಯೇ ಶರೀರಾಣಿ ರಣವಹ್ನೌ ಮಹಾರಥಾಃ ।
ರಾಜಾನೋ ರಾಜಪುತ್ರಾಶ್ಚ ಯೇ ಮದರ್ಥೇ ಹತಾ ರಣೇ ॥೨॥

ಯಾವ ಮಹಾರಥರು ಯುದ್ಧವೆಂಬ ಬೆಂಕಿಯಲ್ಲಿ ತಮ್ಮ ಶರೀರವನ್ನು ಹೋಮಿಸಿರುವರೋ, ಯಾವ ರಾಜರು ಮತ್ತು ರಾಜಪುತ್ರರು ನನಗೋಸ್ಕರ ಹತರಾಗಿರುವರೋ ಅವರನ್ನೂ ನೋಡುತ್ತಿಲ್ಲ.

ಕ್ವ ತೇ ಮಹಾರಥಾಃ ಸರ್ವೇ ಶಾರ್ದೂಲಸಮವಿಕ್ರಮಾಃ ।
ತೈರಪ್ಯಯಂ ಜಿತೋ ಲೋಕಃ ಕಚ್ಚಿತ್ ಪುರುಷಸತ್ತಮೈಃ ॥೩॥

ಹುಲಿಗೆ ಸದೃಶವಾದ ಪರಾಕ್ರಮವುಳ್ಳ ಆ ಎಲ್ಲ ಮಹಾರಥರು ಎಲ್ಲಿರುವರು? ಪುರುಷಶ್ರೇಷ್ಠರಾದ ಅವರಿಂದಲೂ ಈ ಲೋಕವು ಗೆಲ್ಲಲ್ಪಟ್ಟಿದೆ ತಾನೆ?

ಯದಿ ಲೋಕಾನಿಮಾನ್ ಪ್ರಾಪ್ತಾಸ್ತೇ ಚ ಸರ್ವೇ ಮಹಾರಥಾಃ ।
ಸ್ಥಿತಂ ವಿತ್ತ ಹಿ ಮಾಂ ದೇವಾಃ ಸಹಿತಂ ತೈರ್ಮಹಾತ್ಮಭಿಃ ॥೪॥

ಹೇ ದೇವತೆಗಳೇ, ಒಂದು ವೇಳೆ ಆ ಎಲ್ಲ ಮಹಾರಥರು ಈ ವೀರಲೋಕಗಳನ್ನು ಪಡೆದಿರುವರಾದರೆ ಅಂತಹ ಮಹಾತ್ಮರೊಂದಿಗೆ ನಾನು ಇರುವೆನೆಂದು ತಿಳಿಯಿರಿ.

ಕಚ್ಚಿನ್ನ ತೈರವಾಪ್ತೋಽಯಂ ನೃಪೈರ್ಲೋಕೋಽಕ್ಷಯಃ ಶುಭಃ ।
ನ ತೈರಹಂ ವಿನಾ ವತ್ಸ್ಯೇ ಭ್ರಾತೃಭಿರ್ಜ್ಞಾತಿಭಿಸ್ತಥಾ ॥೫॥

ಒಂದು ವೇಳೆ ಆ ರಾಜರಿಂದ ಅಕ್ಷಯವಾದ ಈ ಶುಭಲೋಕವು ಪ್ರಾಪ್ತವಾಗಿಲ್ಲದಿದ್ದರೆ ಅಂತಹ ಸಹೋದರರು ಮತ್ತು ಬಂಧುಗಳಿಲ್ಲದ ನಾನು ಇಲ್ಲಿ ವಾಸ ಮಾಡಲಾರೆನು.

ಮಾತುರ್ಹಿ ವಚನಂ ಶ್ರುತ್ವಾ ತದಾ ಸಲಿಲಕರ್ಮಣಿ ।
ಕರ್ಣಸ್ಯ ಕ್ರಿಯತಾಂ ತೋಯಮಿತಿ ತಪ್ಯಾಮಿ ತೇನ ವೈ ॥೬॥

ಬಂಧುಗಳಿಗೆ ಜಲಾಂಜಲಿ ಕೊಡುವ ಆ ಸಂದರ್ಭದಲ್ಲಿ ಕರ್ಣನಿಗೂ ಜಲಾಂಜಲಿಯನ್ನು ನೀಡಬೇಕೆಂದು ತಾಯಿಯ ಮಾತನ್ನು ಕೇಳಿದ ನಾನು ಈಗಲೂ ಆ ಬಗ್ಗೆ ಪರಿತಪಿಸುತ್ತಿದ್ದೇನೆ.

ಇದಂ ಚ ಪರಿತಪ್ಯಾಮಿ ಪುನಃಪುನರಹಂ ಸುರಾಃ ।
ಯನ್ಮಾತುಃ ಸದೃಶೌ ಪಾದೌ ತಸ್ಯಾಹಮಮಿತಾತ್ಮನಃ ॥೭॥

ದೃಷ್ಟ್ವೈವ ತಂ ನಾನುಗತಃ ಕರ್ಣಂ ಪರಬಲಾರ್ದನಮ್ ।
ನ ಹ್ಯಸ್ಮಾನ್ ಕರ್ಣಸಹಿತಾನ್ ಜಯೇಚ್ಚಕ್ರೋಽಪಿ ಸಂಯುಗೇ ॥೮॥

ಹೇ ದೇವತೆಗಳೇ, ಮತ್ತೆ ಮತ್ತೆ ನಾನು ಈ ವಿಷಯದಲ್ಲಿ ಪರಿತಾಪ ಪಡುತ್ತಿದ್ದೇನೆ. ಅದೇನೆಂದರೆ ತಾಯಿಯ ಪಾದಗಳಿಗೆ ಸದೃಶವಾದ, ಅಮಿತಾತ್ಮನಾದ ಅವನ ಪಾದಗಳನ್ನು ನೋಡಿದ ಕೂಡಲೇ ನಾನು ಅವನನ್ನು ಅನುಸರಿಸಿಲ್ಲ. ಆ ಶತ್ರುಗಳ

ನಾಶಕನಾದ ಕರ್ಣನನ್ನು ನಾನು ಅನುಸರಿಸಬೇಕಿತ್ತು. ಕರ್ಣಸಹಿತರಾದ ನಮ್ಮನ್ನು ಯುದ್ಧದಲ್ಲಿ ಇಂದ್ರನೂ ಜಯಿಸಲಾರನು.

ತಮಹಂ ಯತ್ರತತ್ರಸ್ಥಂ ದ್ರಷ್ಟುಮಿಚ್ಛಾಮಿ ಸೂರ್ಯಜಮ್ ।
ಅವಿಜ್ಞಾತೋ ಮಯಾ ಯೋಸೌ ಘಾತಿತಃ ಸವ್ಯಸಾಚಿನಾ ॥೯॥

ಅಂತಹ ಸೂರ್ಯಪುತ್ರನಾದ ಅವನು ಎಲ್ಲೇ ಇರಲಿ, ಅವನನ್ನು ನಾನು ನೋಡ ಬಯಸುವೆನು. ಯಾವ ಕರ್ಣನು ನನ್ನ ಅಣ್ಣನೆಂದು ತಿಳಿಯದೆ ಸವ್ಯಸಾಚಿಯಾದ ಅರ್ಜುನನಿಂದ ಹತನಾದನೋ ಅವನನ್ನು ನೋಡಬೇಕು.

ಭೀಮಂ ಚ ಭೀಮವಿಕ್ರಾಂತಂ ಪ್ರಾಣೇಭ್ಯೋಽಪಿ ಪ್ರಿಯಂ ಮಮ ।
ಅರ್ಜುನಂ ಚೇಂದ್ರಸಂಕಾಶಂ ಯಮೌ ಚೈವ ಯಮೋಪಮೌ ॥೧೦॥

ದ್ರಷ್ಟುಮಿಚ್ಛಾಮಿ ತಾಂ ಚಾಹಂ ಪಾಂಚಾಲೀಂ ಧರ್ಮಚಾರಿಣೀಮ್ ।
ನ ಚೇಹ ಸ್ಥಾತುಮಿಚ್ಛಾಮಿ ಸತ್ಯಮೇವಂ ಬ್ರವೀಮಿ ವಃ ॥೧೧॥

ಬಹು ಪರಾಕ್ರಮವುಳ್ಳ ಭೀಮನನ್ನೂ, ನನ್ನ ಪ್ರಾಣಗಳಿಗಿಂತಲೂ ನನಗೆ ಪ್ರೀತಿಪಾತ್ರನಾದ ಇಂದ್ರಸದೃಶನಾದ ಅರ್ಜುನನನ್ನೂ, ಯಮಧರ್ಮರಿಗೆ ಸದೃಶರಾದ ಅವಳಿ ಮಕ್ಕಳನ್ನೂ, ಸದಾ ಧರ್ಮಾಚಾರಣೆಯನ್ನೇ ನಡೆಸುತ್ತಿದ್ದ ಪಾಂಚಾಲಿಯನ್ನೂ ನಾನು ನೋಡಬಯಸುತ್ತಿದ್ದೇನೆ. ಸತ್ಯವಾಗಿಯೂ ಹೇಳುವೆನು, ನನಗೆ ಇಲ್ಲಿ ನಿಲ್ಲಲೂ ಇಷ್ಟವಾಗುತ್ತಿಲ್ಲ.

ಕಿಂ ಮೇ ಭ್ರಾತೃವಿಹೀನಸ್ಯ ಸ್ವರ್ಗೇಣ ಸುರಸತ್ತಮಾಃ ।
ಯತ್ರ ತೇ ಮಮ ಸ ಸ್ವರ್ಗೋ ನಾಯಂ ಸ್ವರ್ಗೋ ಮತೋ ಮಮ ॥

ಹೇ ದೇವಶ್ರೇಷ್ಠರೇ, ಸಹೋದರರಿಲ್ಲದ ಸ್ವರ್ಗದಿಂದ ನನಗೆ ಏನಾಗಬೇಕಿದೆ? ಎಲ್ಲಿ ನನ್ನ ಸಹೋದರರಿರುವರೋ ಅದೇ ನನಗೆ ಸ್ವರ್ಗ. ಇದು ಸ್ವರ್ಗವೆಂದೇ ನನಗೆ ಅನಿಸುತ್ತಿಲ್ಲ.

ದೇವಾಃ

ಯದಿ ವೈ ತತ್ರ ತೇ ಶ್ರದ್ಧಾ ಗಮ್ಯತಾಂ ತತ್ರ ಮಾಚಿರಮ್ ।
ಪ್ರಿಯೇ ಹಿ ತವ ವರ್ತಾಮೋ ದೇವರಾಜಸ್ಯ ಶಾಸನಾತ್ ॥೧೩॥

ದೇವತೆಗಳು– ಅವರಿರುವ ಪ್ರದೇಶದಲ್ಲೇ ನಿನಗೆ ಆಸಕ್ತಿಯಿದ್ದರೆ ತಡಮಾಡದೆ ಅಲ್ಲಿಗೆ ಹೋಗೋಣ. ದೇವರಾಜನಾದ ಇಂದ್ರನ ಅಪ್ಪಣೆಯಂತೆ ನಿನಗೆ ಯಾವುದು ಪ್ರಿಯವೋ ಅದನ್ನೇ ನಾವು ನಡೆಸುವೆವು.

ವೈಶಂಪಾಯನಃ

ಇತ್ಯುಕ್ತ್ವಾ ತಂ ತತೋ ದೇವಾ ದೇವದೂತಮುಪಾದಿಶನ್ ।
ಯುಧಿಷ್ಠಿರಸ್ಯ ಸುಹೃದೋ ದರ್ಶಯೇತಿ ಪರಂತಪ ॥೧೪॥

ವೈಶಂಪಾಯನ– ಹೇ ಪರಂತಪನೇ, ದೇವತೆಗಳು ಯುಧಿಷ್ಠಿರನನ್ನು ಕುರಿತು ಇಷ್ಟು ಹೇಳಿ, ನಂತರ ಯುಧಿಷ್ಠಿರನಿಗೆ ಅವನ ಸ್ನೇಹಿತರನ್ನು ತೋರಿಸು ಎಂದು ದೇವದೂತನಿಗೆ ಆದೇಶಿಸಿದರು.

ತತಃ ಕುಂತೀಸುತೋ ರಾಜಾ ದೇವದೂತಶ್ಚ ಜಗ್ಮತುಃ ।
ಸಹಿತೌ ರಾಜಶಾರ್ದೂಲ ಯತ್ರ ತೇ ಪುರುಷರ್ಷಭಾಃ ॥೧೫॥

ಹೇ ರಾಜಶಾರ್ದೂಲನೇ, ಅನಂತರ ಕುಂತೀಸುತನಾದ ಯುಧಿಷ್ಠಿರ ರಾಜನೂ ದೇವದೂತನೂ ಇಬ್ಬರೂ ಜೊತೆಯಾಗಿ ಆ ಪುರುಷಶ್ರೇಷ್ಠರು ಎಲ್ಲಿರುವರೋ ಅಲ್ಲಿಗೆ ನಡೆದರು.

ಅಗ್ರತೋ ದೇವದೂತಶ್ಚ ಯಯೌ ರಾಜಾ ಚ ಪೃಷ್ಠತಃ ।
ಪಂಥಾನಮಶುಭಂ ದುರ್ಗಂ ಸೇವಿತಂ ಪಾಪಕರ್ಮಭಿಃ ॥೧೬॥

ಮುಂಭಾಗದಲ್ಲಿ ದೇವದೂತನು, ಹಿಂಭಾಗದಲ್ಲಿ ರಾಜನಾದ ಯುಧಿಷ್ಠಿರನು ಪಾಪಕರ್ಮವನ್ನು ಮಾಡಿದ ವ್ಯಕ್ತಿಗಳಿಂದ ತುಂಬಿರುವ ದುರ್ಗಮವಾದ ಅಮಂಗಳವಾದ ದಾರಿಯಲ್ಲಿ ಮುಂದುವರೆದರು.

ತಮಸಾ ಸಂವೃತಂ ಘೋರಂ ಕೇಶಕಂಕಾಲಸಂಕುಲಮ್ ।
ಯುಕ್ತಂ ಪಾಪಕೃತಾಂ ಗಂಧೈರ್ಮಾಂಸಶೋಣಿತಕರ್ದಮಮ್ ॥೧೭॥

ಆ ದಾರಿಯು ಕತ್ತಲಿನಿಂದ ತುಂಬಿದ್ದು ಘೋರವಾಗಿತ್ತು. ಪಾಪಕರ್ಮವನ್ನು ಮಾಡಿದ ವ್ಯಕ್ತಿಗಳ ಕೂದಲು, ಶರೀರದ ಮೂಳೆಗಳು ಇವುಗಳಿಂದ ತುಂಬಿತ್ತು. ಮಾಂಸ, ರಕ್ತ ಇವುಗಳ ಕೆಸರಿನಿಂದ ತುಂಬಿ ದುರ್ನಾತ ಬೀರುತ್ತಿತ್ತು.

ದಂಶೋತ್ಪಾತಕಫಲ್ಗೂಕಮಕ್ಷಿಕಾಮಶಕಾವೃತಮ್ ।
ಇತಶ್ಚೇತಶ್ಚ ಕುಣಪೈಃ ಸಮಂತಾತ್ ಪರಿವಾರಿತಮ್ ॥೧೮॥

ಕಾಡುನೊಣ, ಮಿಡತೆ, ಜೀರುಂಡೆ, ನೊಣ ಹಾಗು ಸೊಳ್ಳೆಗಳಿಂದ ಕೂಡಿದ ಸುತ್ತಲೂ ಅಲ್ಲಲ್ಲಿ ಬಿದ್ದಿರುವ ಹೆಣಗಳಿಂದಆ ಪ್ರದೇಶ ತುಂಬಿಹೋಗಿತ್ತು.

ಅಸ್ಥಿಕೇಶಸಮಾಕೀರ್ಣಂ ಕೃಮಿಕೀಟಸಮಾಕುಲಮ್ ।
ಜ್ವಲನೇನ ಪ್ರದೀಪ್ತೇನ ಸಮಂತಾತ್ ಪರಿವೇಷ್ಟಿತಮ್ ॥೧೯॥

ಎಲ್ಲೆಡೆ ಎಲುಬು ಹಾಗೂ ಕೂದಲುಗಳ ರಾಶಿಬಿದ್ದಿದ್ದು ಅವುಗಳ ಮೇಲೆ ಕ್ರಿಮಿ ಕೀಟಗಳು ಮುತ್ತಿದ್ದವು. ಅಲ್ಲದೆ ಸುತ್ತಲೂ ಬೇಲಿಯ ರೂಪದಲ್ಲಿ ಉರಿಯುತ್ತಿರುವ ಬೆಂಕಿಯು ಹಬ್ಬಿತ್ತು.

ಅಯೋಮುಖೈಶ್ಚ ಕಾಕೋಲೈರ್ಗೃಧ್ರೈಶ್ಚ ಸಮಭಿದ್ರುತಮ್ ।
ಸೂಚೀಮುಖೈಸ್ತಥಾ ಪ್ರೇತೈರ್ವಿಂಧ್ಯ ಶೈಲೋಪಮೈರ್ವೃತಮ್ ॥೨೦॥

ಮೇದೋರುಧಿರಯುಕ್ತೈಶ್ಚ ಚ್ಛಿನ್ನಬಾಹೂರುಪಾಣಿಭಿಃ ।
ನಿಕೃತ್ತೋದರಪಾದೈಶ್ಚ ತತ್ರ ತತ್ರ ಪ್ರವೇಶಿತೈಃ ॥೨೧॥

ಕಬ್ಬಿಣದಂತೆ ಗಟ್ಟಿಯಾದ ಕೊಕ್ಕುಳ್ಳ ಮಂಡಕಾಗೆಗಳು ಹಾಗು ಹದ್ದುಗಳು ಅಟ್ಟಿಸಿಕೊಂಡು ಬರುತ್ತಿದ್ದವು. ಅಲ್ಲದೆ ವಿಂಧ್ಯಪರ್ವತದಂತೆ ಎತ್ತರವಾದ, ಸೂಜಿಯಂತೆ ಮುಖವುಳ್ಳ ಪ್ರೇತಗಳಿಂದ ತುಂಬಿಹೋಗಿತ್ತು. ಕೊಬ್ಬು ಮತ್ತು ರಕ್ತಗಳಿಂದ ಲೇಪಿತವಾದ ತುಂಡಾದ ಕೈ-ಕಾಲುಗಳು ಅಲ್ಲಲ್ಲಿ ಬಿದ್ದಿದ್ದವು. ಅಲ್ಲದೆ ಸೀಳಿ ಹೋದ ಉದರವುಳ್ಳ, ಸೀಳಿದ ಪಾದಗಳುಳ್ಳ ವ್ಯಕ್ತಿಗಳು ಅಲ್ಲಿ ಪ್ರವೇಶಿಸುತ್ತಿದ್ದರು.

ಸ ತತ್ಕುಣಪದುರ್ಗಂಧಮಶಿವಂ ರೋಮಹರ್ಷಣಮ್ ।
ಜಗಾಮ ರಾಜಾ ಧರ್ಮಾತ್ಮಾ ಮಧ್ಯೇ ಬಹು ವಿಚಿಂತಯನ್ ॥೨೨॥

ಧರ್ಮಾತ್ಮನಾದ ಆ ಯುಧಿಷ್ಠಿರರಾಜನು ಆ ಹೆಣಗಳ ದುರ್ಗಂಧದಿಂದ ಕೂಡಿದ, ಅಮಂಗಳಮಯವಾದ, ನೆನಪಿನಿಂದಲೇ ರೋಮಾಂಚವನ್ನು ಉಂಟು ಮಾಡುವ ಆ ದಾರಿಯ ಮಧ್ಯದಲ್ಲಿ ಬಹಳವಾದ ಆಲೋಚನೆಯನ್ನು ನಡೆಸುತ್ತಾ ಮುಂದೆ ಸಾಗಿದನು.

ದದರ್ಶೋಷ್ಣೋದಕೈಃ ಪೂರ್ಣಂ ನದೀಂ ಚಾಪಿ ಸುದುರ್ಗಮಾಮ್ ।
ಅಸಿಪತ್ರವನಂ ಚೈವ ನಿಶಿತಂ ಕ್ಷುರಸಂವೃತಮ್ ॥೨೩॥

ಹೀಗೆ ಸಾಗುತ್ತಾ ದುರ್ಗಮವಾದ, ಕುದಿಯುವ ನೀರಿನಿಂದ ತುಂಬಿದ ನದಿಯನ್ನೂ, ಹರಿತವಾದ ಖಡ್ಗಗಳಿಂದ ಕೂಡಿದ ಅಸಿಪತ್ರವನವನ್ನೂ ನೋಡಿದನು.

ಕರಂಭವಾಲುಕಾಸ್ತಪ್ತಾ ಆಯಸೀಶ್ಚ ಶಿಲಾಃ ಪೃಥಕ್ ।
ಲೋಹಕುಂಭೀಶ್ಚ ತೈಲಸ್ಯ ಕಾಥ್ಯಮಾನಾಃ ಸಮಂತತಃ ॥೨೪॥

ಕೂಟಶಾಲ್ಮಲಿಕಂ ಚಾಪಿ ದುಃಸ್ಪರ್ಶಂ ತೀಕ್ಷ್ಣಕಂಟಕಮ್ ।
ದದರ್ಶಾನ್ಯಾಶ್ಚ ಕೌಂತೇಯೋ ಯಾತನಾಃ ಪಾಪಕರ್ಮಿಣಾಮ್ ॥೨೫॥

ಧಾನ್ಯಗಳನ್ನು ಹುರಿಯಲು ಬಳಸುವಂತೆ ಚೆನ್ನಾಗಿ ಬಿಸಿಯಾದ ಮರಳಿನ ರಾಶಿಗಳನ್ನೂ, ಚೆನ್ನಾಗಿ ಬಿಸಿಮಾಡಲ್ಪಟ್ಟ ಕಬ್ಬಿಣದ ಬಂಡೆಗಳನ್ನೂ, ಸುತ್ತಲೂ ಬೆಂಕಿ ಹಾಕುವ ಮೂಲಕ ಕುದಿಯುತ್ತಿರುವ ಎಣ್ಣೆಯಿಂದ ಕೂಡಿದ ಲೋಹಕುಂಭಗಳನ್ನೂ, ಮುಟ್ಟಲು ಅಸಾಧ್ಯವಾದ ಚೂಪಾದ ಮುಳ್ಳುಗಳಿಂದ ಕೂಡಿದ ಶಾಲ್ಮಲೀ ವೃಕ್ಷದ ಸಾಲನ್ನೂ ಹೀಗೆ ಇನ್ನೂ ನಾನಾ ರೀತಿಯ ಪಾಪಕರ್ಮಿಗಳಿಗೆ ಯಾತನೆಯನ್ನು ನೀಡಬಲ್ಲ ವ್ಯವಸ್ಥೆಗಳನ್ನು ಕೌಂತೇಯನು ಅಲ್ಲಿ ಕಂಡನು.

ಸ ತಂ ದುರ್ಗಂಧಮಾಲಕ್ಷ್ಯ ದೇವದೂತಮುವಾಚ ಹ ।
ಕಿಯದಧ್ವಾನಮಸ್ಮಾಭಿರ್ಗಂತವ್ಯಮಿಮಮೀದೃಶಮ್ ॥೨೬॥

ಅಲ್ಲಿ ಬರುತ್ತಿರುವ ಆ ದುರ್ಗಂಧವನ್ನು ಗಮನಿಸಿ, ಯುಧಿಷ್ಠಿರನು ನಾವು ಇಂತಹ ಕೆಟ್ಟದಾದ ಈ ದಾರಿಯಲ್ಲಿ ಎಷ್ಟು ದೂರ ನಡೆಯಬೇಕು? ಎಂದು ದೇವದೂತನನ್ನು ಕೇಳಿದನು.

ಕ್ವ ಚ ತೇ ಭ್ರಾತರೋ ಮಹ್ಯಂ ತನ್ಮಮಾಖ್ಯಾತುಮರ್ಹಸಿ ।
ದೇಶೋಽಯಂ ಕಶ್ಚ ದೇವಾನಾಮೇತದಿಚ್ಛಾಮಿ ವೇದಿತುಮ್ ॥೨೭॥

ನನ್ನ ಸಹೋದರರು ಎಲ್ಲಿರುವರು ಎಂಬುದನ್ನು ನೀನು ನನಗೆ ಹೇಳಬೇಕು. ಅಲ್ಲದೆ ದೇವತೆಗಳಿಗೆ ಸಂಬಂಧಪಟ್ಟ ಈ ಪ್ರದೇಶವು ಯಾವುದು ಎಂಬುದನ್ನೂ ನಾನು ತಿಳಿಯಬಯಸುತ್ತೇನೆ.

ಸ ಸನ್ನಿವವೃತೇ ಶ್ರುತ್ವಾ ಧರ್ಮರಾಜಸ್ಯ ಭಾಷಿತಮ್ ।
ದೇವದೂತೋಽಬ್ರವೀಚ್ಚೈನಮೇತಾವದ್ಗಮನಂ ತವ ॥೨೮॥

ಧರ್ಮರಾಜನ ಈ ಮಾತನ್ನು ಕೇಳಿ ಆ ದೇವದೂತನು ಹಿಂದೆ ತಿರುಗಿ, ಇಷ್ಟು ದೂರ ಮಾತ್ರ ನೀನು ಬರಬೇಕಾಗಿದ್ದುದು ಎಂದನು.

ನಿವರ್ತಿತವ್ಯೋ ಹಿ ಮಯಾ ತಥಾಽಸ್ಮ್ಯಕ್ತೋ ದಿವೌಕಸೈಃ ।
ಯದಿ ಶ್ರಾಂತೋಸಿ ರಾಜೇಂದ್ರ ತ್ವಮಥಾಗಂತುಮರ್ಹಸಿ ॥೨೯॥

ನಾನು ಇಲ್ಲಿಂದಲೇ ಹಿಂದುರುಗಬೇಕಾಗಿದೆ. ಹಾಗೆಯೇ ದೇವತೆಗಳು ನನಗೆ ತಿಳಿಸಿದ್ದಾರೆ. ಹೇ ರಾಜಶ್ರೇಷ್ಠನೇ, ನೀನು ಆಯಾಸಗೊಂಡಿದ್ದರೆ ನೀನೂ ನನ್ನೊಂದಿಗೆ ಹಿಂದಿರುಗಬಹುದು.

ಯುಧಿಷ್ಠಿರಸ್ತು ನಿರ್ವಿಣ್ಣಸ್ತೇನ ಗಂಧೇನ ಮೂರ್ಛಿತಃ ।
ನಿವರ್ತನೇ ಧೃತಮನಾಃ ಪರ್ಯಾವರ್ತತ ಭಾರತ ॥೩೦॥

ಹೇ ಭಾರತನೇ, ಆಗ ಯುಧಿಷ್ಠಿರನಾದರೂ ಖೇದಗೊಂಡವನಾಗಿ, ಅಲ್ಲಿನ ದುರ್ಗಂಧದಿಂದ ಮೂರ್ಛೆಗೊಳಗಾಗಿ ಹಿಂದಿರುಗಬೇಕೆಂದು ಮನಸ್ಸುಮಾಡಿ ತಿರುಗಿ ಹೊರಟನು.

ಸ ಸನ್ನಿವೃತ್ತೋ ಧರ್ಮಾತ್ಮಾ ದುಃಖಶೋಕಸಮಾಹತಃ ।
ಶುಶ್ರಾವ ತತ್ರ ವದತಾಂ ದೀನಾ ವಾಚಃ ಸಮಂತತಃ ॥೩೧॥

ಧರ್ಮಾತ್ಮನಾದ ಅವನು ದುಃಖ-ಶೋಕಗಳಿಂದ ಜರ್ಝರಿತನಾಗಿ ಹಿಂದಿರುಗುತ್ತಿರುವಾಗಲೇ ಸುತ್ತಲೂ ದೀನಸ್ವರದಿಂದ ತನ್ನನ್ನುದ್ದೇಶಿಸಿ ಆಡುವ ಮಾತುಗಳನ್ನು ಕೇಳಿಸಿಕೊಂಡನು.

ಭೋ ಭೋ ಧರ್ಮಜ ರಾಜರ್ಷೇ ಪುಣ್ಯಾಭಿಜನ ಪಾಂಡವ ।
ಅನುಗ್ರಹಾರ್ಥಮಸ್ಮಾಕಂ ತಿಷ್ಠ ತಾವನ್ಮುಹೂರ್ತಕಮ್ ॥೩೨॥

‘ಓ ಧರ್ಮಜನೇ, ರಾಜಶ್ರೇಷ್ಠನೇ, ಮಂಗಳಮಯವಾದ ವಂಶದಲ್ಲಿ ಜನಿಸಿದವನೇ, ಪಾಂಡುಪುತ್ರನೇ, ನಮ್ಮನ್ನು ಅನುಗ್ರಹಿಸುವುದಕ್ಕಾಗಿ ಒಂದು ಮುಹೂರ್ತಕಾಲವಾದರೂ ಇಲ್ಲೇ ನಿಲ್ಲು.

ಆಯಾತಿ ತ್ವಯಿ ದುರ್ಧರ್ಷೇ ವಾತಿ ಪುಣ್ಯಃ ಸಮೀರಣಃ ।
ತವ ಗಂಧಾನುಗಸ್ತಾತ ಯೇನಾಸ್ಮಾನ್ ಸುಖಮಾಗಮತ್ ॥೩೩॥

ಸೋಲಿಲ್ಲದ ನೀನು ಬರುತ್ತಿದ್ದಂತೆಯೇ ಮಂಗಳಮಯವಾದ ಗಾಳಿಯು ಬೀಸತೊಡಗಿದೆ. ನಿನ್ನ ಶರೀರದ ಸುಗಂಧಕ್ಕೆ ಅನುಗುಣವಾಗಿರುವ ಆ ಗಾಳಿಯಿಂದ ನಮಗೆ ಸುಖವುಂಟಾಗುತ್ತಿದೆ.

ತೇ ವಯಂ ಪಾರ್ಥ ದೀರ್ಘಸ್ಯ ಕಾಲಸ್ಯ ಪುರುಷರ್ಷಭ ।
ಸುಖಮಾಸಾದಯಿಷ್ಯಾಮಸ್ತ್ವಾಂ ದೃಷ್ಟ್ವಾ ರಾಜಸತ್ತಮ ॥೩೪॥

ಪುರುಷಶ್ರೇಷ್ಠನಾದ ಹೇ ಪಾರ್ಥನೇ, ಬಹಳ ಕಾಲದ ನಂತರ ನಿನ್ನನ್ನು ನೋಡಿದ ಮೇಲೆ ಕಷ್ಟದಲ್ಲಿದ್ದ ನಾವು ಸುಖವನ್ನು ಹೊಂದುತ್ತಿದ್ದೇವೆ.

ಸಂತಿಷ್ಠಸ್ವ ಮಹಾಬಾಹೋ ಮುಹೂರ್ತಮಿಹ ಭಾರತ ।
ತ್ವಯಿ ತಿಷ್ಠತಿ ಕೌರವ್ಯ ಯಾತನಾऽಸ್ಮಾನ್ನ ಬಾಧತೇ ॥೩೫॥

ಹೇ ಮಹಾಬಾಹುವೇ, ಭಾರತನೇ, ಕುರುವಂಶಜನೇ, ಮುಹೂರ್ತದ ಕಾಲ ಇಲ್ಲಿ ನಿಂತುಬಿಡು. ನೀನು ನಿಂತಿರುವಷ್ಟು ಹೊತ್ತು ಈ ಯಾತನೆಯು ನಮ್ಮನ್ನು ಬಾಧಿಸುವುದಿಲ್ಲ'.

ಏವಂ ಬಹುವಿಧಾ ವಾಚಃ ಕೃಪಣಾ ವೇದನಾವತಾಮ್ ।
ತಸ್ಮಿನ್ ದೇಶೇ ಸ ಶುಶ್ರಾವ ಸಮಂತಾದ್ ವದತಾಂ ನೃಪ ॥೩೬॥

ಹೇ ನೃಪನೇ, ಆ ಯುಧಿಷ್ಠಿರನು ಈ ರೀತಿಯಾಗಿ ಕಷ್ಟದಲ್ಲಿದ್ದವರ ಕರುಣಾಜನಕವಾದ ಅನೇಕ ರೀತಿಯ ಮಾತುಗಳನ್ನು ಆ ಪ್ರದೇಶದಲ್ಲಿ ಸುತ್ತಲೂ ಆಡುತ್ತಿರುವುದನ್ನು ಕೇಳಿದನು.

ತೇಷಾಂ ತು ವಚನಂ ಶ್ರುತ್ವಾ ದಯಾವಾನ್ ದೀನಭಾಷಿಣಾಮ್ ।
ಅಹೋ ಕೃಚ್ಛ್ರಮಿತಿ ಪ್ರಾಹ ತಸ್ಥೌ ಸ ಚ ಯುಧಿಷ್ಠಿರಃ ॥೩೭॥

ಹೀಗೆ ದೀನರಾಗಿ ಬೇಡಿಕೊಳ್ಳುತ್ತಿರುವ ಅವರ ಮಾತುಗಳನ್ನು ಕೇಳಿದ ದಯಾಮಯನಾದ ಯುಧಿಷ್ಠಿರನು ಅಯ್ಯೋ ಕಷ್ಟವೇ! ಎಂದು ಹೇಳುತ್ತಾ ಅಲ್ಲೇ ನಿಂತನು.

ಸ ತಾ ಗಿರಃ ಪುರಸ್ತಾದ್ ವೈ ಶ್ರುತಪೂರ್ವಾಃ ಪುನಃಪುನಃ ।
ಗ್ಲಾನಾನಾಂ ದುಃಖಿತಾನಾಂ ಚ ನಾಭ್ಯಜಾನತ ಪಾಂಡವಃ ॥೩೮॥

ಅವನು ಆ ಸ್ವರಗಳನ್ನು ಹಿಂದೆ ಕೂಡ ಮತ್ತೆ ಮತ್ತೆ ಕೇಳಿದ್ದರೂ ದುಃಖದಿಂದ ಬಳಲಿರುವ ಅವರು ಯಾರೆಂದು ಪಾಂಡುಪುತ್ರನು ಸರಿಯಾಗಿ ಗುರುತಿಸಲಾಗಲಿಲ್ಲ.

ಅಬುದ್ಧ್ಯಮಾನಸ್ತಾ ವಾಚೋ ಧರ್ಮಪುತ್ರೋ ಯುಧಿಷ್ಠಿರಃ ।
ಉವಾಚ ಕೇ ಭವಂತೋ ವೈ ಕಿಮರ್ಥಮಿಹ ತಿಷ್ಠಥ ॥೩೯॥

ಎಷ್ಟು ಆಲೋಚಿಸಿದರೂ ಆ ಮಾತುಗಳು ಯಾರದೆಂದು ತಿಳಿಯಲಾರದ ಧರ್ಮಪುತ್ರನಾದ ಯುಧಿಷ್ಠಿರನು 'ಯಾರು ನೀವು? ಇಲ್ಲೇಕಿರುವಿರಿ?' ಎಂದು ಕೇಳಿದನು.

ಇತ್ಯುಕ್ತಾಸ್ತೇ ತತಃ ಸರ್ವೇ ಸಮಂತಾದವಭಾಷಿರೇ ।
ಕರ್ಣೋSಹಂ ಭೀಮಸೇನೋSಹಮರ್ಜುನೋಹಮಿತಿ ಪ್ರಭೋ ॥

ನಕುಲಃ ಸಹದೇವೋSಹಂ ಧೃಷ್ಟದ್ಯುಮ್ನೋSಹಮಿತ್ಯುತ ।
ದ್ರೌಪದೀ ದ್ರೌಪದೇಯಾಶ್ಚ ಇತ್ಯೇವಂ ತೇ ವಿಚುಕ್ರುಶುಃ ॥೪೧॥

ಹೀಗೆ ಯುಧಿಷ್ಠಿರನು ಹೇಳಿದಾಗ ಅವರೆಲ್ಲರೂ 'ನಾನು ಕರ್ಣ, ನಾನು ಭೀಮಸೇನ, ಹೇ ಪ್ರಭೋ, ನಾನು ಅರ್ಜುನ, ನಾನು ನಕುಲ, ನಾನು ಸಹದೇವ, ನಾನು ಧೃಷ್ಟದ್ಯುಮ್ನ, ನಾನು ದ್ರೌಪದಿ, ನಾವು ದ್ರೌಪದಿಯ ಮಕ್ಕಳು' - ಈ ರೀತಿಯಾಗಿ ಜೋರಾಗಿ ಬೊಬ್ಬಿಡುತ್ತಾ ಅವರು ಮಾತನಾಡಿದರು.

ವ್ಯಾಖ್ಯಾನ ವಿಶೇಷ– ದ್ರೋಣರನ್ನು ನಿಗ್ರಹ ಮಾಡಬೇಕಾದ ಕಾಲದಲ್ಲಿ ಕೃಷ್ಣನು 'ಅಶ್ವತ್ಥಾಮಾ ಹತಃ' ಎಂದು ಹೇಳು ಎಂದು ಧರ್ಮರಾಜನಲ್ಲಿ ಕೇಳಿಕೊಂಡಾಗ, ದೇವರ ಮಾತಿನಲ್ಲಿ ವಿಶ್ವಾಸವಿಡದೆ ಸಣ್ಣದನಿಯಲ್ಲಿ 'ಕುಂಜರಶ್ಚ' ಎಂದು ಹೇಳಿದುದರಿಂದ ಅಷ್ಟಂಶ ಪಾಪಕ್ಕೆ ಯೋಗ್ಯವಾದ ನರಕ ದರ್ಶನವನ್ನು ಮಾಡಿಸುವುದಕ್ಕೋಸ್ಕರ ದೇವತೆಗಳು ತತ್ಕಾಲದಲ್ಲಿ ಕಲ್ಪಿಸಿದ ನರಕ ಇದಾಗಿದೆ ಹೊರತು ಇದು ನರಕಲೋಕವಲ್ಲ. ಏಕೆಂದರೆ ಹಿಂದೆ ಮಹಾಪ್ರಸ್ಥಾನಿಕ ಪರ್ವದಲ್ಲಿ 'ದ್ರೌಪದಿಯ ಜೊತೆಗೆ ನಿನ್ನ ಸಹೋದರರನ್ನೂ, ಪುತ್ರರನ್ನೂ ಮುಂದೆ ನೀನು ಸ್ವರ್ಗದಲ್ಲಿ ನೋಡಲಿರುವೆ. ಆದ್ದರಿಂದ ದುಃಖಪಡಬೇಡ' ಎಂದು ಇಂದ್ರನು ಹೇಳಿದ್ದಾನೆ. ಇದು ನರಕಲೋಕವೇ ಆಗಿದ್ದಲ್ಲಿ ಆ ಇಂದ್ರನ ಮಾತು ಸುಳ್ಳಾಗುವುದು. ಆದ್ದರಿಂದಲೇ ಪ್ರಕೃತದಲ್ಲಿ ನಾನು ಭೀಮ, ನಾನು ಕರ್ಣ, ನಾನು ಅರ್ಜುನ

ಎಂದು ಹೇಳುವ ಜೀವರನ್ನು ಧರ್ಮರಾಜನಿಗೆ ನರಕದರ್ಶನರೂಪವಾದ ದುಃಖವನ್ನು ನೀಡಲು ದೇವತೆಗಳು ತತ್ಕಾಲದಲ್ಲಿ ಕಲ್ಪಿಸಿದ್ದಾರೆ. ಹಾಗಿಲ್ಲವಾದರೆ ಭೂಮಿಗಿಂತಲೂ ಕೆಳಭಾಗದಲ್ಲಿರುವ ನರಕವು ಸ್ವರ್ಗಮಾರ್ಗದಲ್ಲಿ ಹೇಗೆ ಕಂಡೀತು? ಅಷ್ಟಲ್ಲದೆ ಮುಂದೆ ದೇವತೆಗಳು ಬಂದಾಗ ಆ ಎಲ್ಲ ನರಕಚಿಹ್ನೆಗಳೂ ಹೊರಟು ಹೋದವು ಎಂಬ ಮಾತು ಬರುತ್ತದೆ. ಇದೂ ಸುಳ್ಳಾಗಬೇಕಾಗುತ್ತದೆ – ಲಕ್ಷಾಲಂಕಾರ.

ತಾ ವಾಚಃ ಸ ತದಾ ಶ್ರುತ್ವಾ ತದ್ದೇಶಸದೃಶೀರ್ನೃಪ ।
ತತೋ ವಿಮಮೃಶೇ ರಾಜಾ ಕಿಂತ್ವಿದಂ ದೈವಕಾರಿತಮ್ ॥೪೨॥

ಹೇ ನೃಪನೇ, ಆ ಪ್ರದೇಶಕ್ಕೆ ಅನುಗುಣವಾದ ರೀತಿಯಲ್ಲಿ ದೈನ್ಯಯುಕ್ತವಾದ ಆ ಮಾತುಗಳನ್ನು ಕೇಳಿದ ಯುಧಿಷ್ಠಿರ ರಾಜನು 'ಇದೇಕೆ ದೈವದ ನಡೆ ಹೀಗಿದೆ' ಎಂದು ತನ್ನಲ್ಲೇ ವಿಮರ್ಶಿಸಿಕೊಂಡನು.

ಕಿಂತು ತತ್ಕಲುಷಂ ಕರ್ಮ ಕೃತಮೇಭಿರ್ಮಹಾತ್ಮಭಿಃ ।
ಕರ್ಣೇನ ದ್ರೌಪದೇಯೈರ್ವಾ ಪಾಂಚಾಲ್ಯಾ ವಾ ಸುಮಧ್ಯಯಾ ॥೪೩॥

ಮಹಾತ್ಮರಾದ ಈ ಕರ್ಣ, ದ್ರೌಪದೀ ಪುತ್ರರು ಹಾಗೂ ಸುಮಧ್ಯಮೆಯಾದ ಪಾಂಚಾಲಿಯಿಂದ ಯಾವ ಕೆಟ್ಟ ಕೆಲಸ ಆಚರಿಸಲ್ಪಟ್ಟಿತ್ತು ?

ಯ ಇಮೇ ಪಾಪಗಂಧೇಽಸ್ಮಿನ್ ದೇಶೇ ಸಂತಿ ಸುದಾರುಣೇ ।
ನಾಹಂ ಜಾನಾಮಿ ಸರ್ವೇಷಾಂ ದುಷ್ಕೃತಂ ಪುಣ್ಯಕರ್ಮಣಾಮ್ ॥೪೪॥

ಬಹುದಾರುಣವಾದ, ದುರ್ಗಂಧವುಳ್ಳ ಈ ಪ್ರದೇಶದಲ್ಲಿ ಏನು ಇವರು ಇದ್ದಾರೆಯೋ ಈ ಎಲ್ಲ ಪುಣ್ಯಕರ್ಮಿಗಳ ದುಷ್ಕರ್ಮವನ್ನು ನಾನು ತಿಳಿಯದವನಾಗಿದ್ದೇನೆ.

ಕಿಂ ಕೃತ್ವಾ ಧೃತರಾಷ್ಟ್ರಸ್ಯ ಪುತ್ರೋ ರಾಜಾ ಸುಯೋಧನಃ ।
ತಥಾ ಶ್ರಿಯಾ ಯುತಃ ಪಾಪೈಃ ಸಹ ಸರ್ವೈಃ ಪದಾನುಗೈಃ ॥೪೫॥

ಧೃತರಾಷ್ಟ್ರನ ಪುತ್ರನಾದ, ರಾಜನಾದ ಸುಯೋಧನನು ಯಾವ ಕರ್ಮವನ್ನು ಮಾಡುವ ಮೂಲಕ ತನ್ನ ಪರಿವಾರಭೂತರಾದ ಎಲ್ಲ ಪಾಪಿಷ್ಠರೊಂದಿಗೆ ಆ ರೀತಿಯ ಸಂಪತ್ತಿನಿಂದ ಕೂಡಿಕೊಂಡಿರುವನು?

ಸ ತಾ ಗಿರಃ ಪುರಸ್ತಾದ್ ವೈ ಶ್ರುತಪೂರ್ವಾಃ ಪುನಃಪುನಃ ।
ಗ್ಲಾನಾನಾಂ ದುಃಖಿತಾನಾಂ ಚ ನಾಭ್ಯಜಾನತ ಪಾಂಡವಃ ॥೩೮॥

ಅವನು ಆ ಸ್ವರಗಳನ್ನು ಹಿಂದೆ ಕೂಡ ಮತ್ತೆ ಮತ್ತೆ ಕೇಳಿದ್ದರೂ ದುಃಖದಿಂದ ಬಳಲಿರುವ ಅವರು ಯಾರೆಂದು ಪಾಂಡುಪುತ್ರನು ಸರಿಯಾಗಿ ಗುರುತಿಸಲಾಗಲಿಲ್ಲ.

ಅಬುದ್ಧ್ಯಮಾನಸ್ತಾ ವಾಚೋ ಧರ್ಮಪುತ್ರೋ ಯುಧಿಷ್ಠಿರಃ ।
ಉವಾಚ ಕೇ ಭವಂತೋ ವೈ ಕಿಮರ್ಥಮಿಹ ತಿಷ್ಠಥ ॥೩೯॥

ಎಷ್ಟು ಆಲೋಚಿಸಿದರೂ ಆ ಮಾತುಗಳು ಯಾರದೆಂದು ತಿಳಿಯಲಾರದ ಧರ್ಮಪುತ್ರನಾದ ಯುಧಿಷ್ಠಿರನು 'ಯಾರು ನೀವು? ಇಲ್ಲೇಕಿರುವಿರಿ?' ಎಂದು ಕೇಳಿದನು.

ಇತ್ಯುಕ್ತಾಸ್ತೇ ತತಃ ಸರ್ವೇ ಸಮಂತಾದವಭಾಷಿರೇ ।
ಕರ್ಣೋಽಹಂ ಭೀಮಸೇನೋಽಹಮರ್ಜುನೋಹಮಿತಿ ಪ್ರಭೋ ॥

ನಕುಲಃ ಸಹದೇವೋಽಹಂ ಧೃಷ್ಟದ್ಯುಮ್ನೋಽಹಮಿತ್ಯುತ ।
ದ್ರೌಪದೀ ದ್ರೌಪದೇಯಾಶ್ಚ ಇತ್ಯೇವಂ ತೇ ವಿಚುಕ್ರುಶುಃ ॥೪೧॥

ಹೀಗೆ ಯುಧಿಷ್ಠಿರನು ಹೇಳಿದಾಗ ಅವರೆಲ್ಲರೂ 'ನಾನು ಕರ್ಣ, ನಾನು ಭೀಮಸೇನ, ಹೇ ಪ್ರಭೋ, ನಾನು ಅರ್ಜುನ, ನಾನು ನಕುಲ, ನಾನು ಸಹದೇವ, ನಾನು ಧೃಷ್ಟದ್ಯುಮ್ನ, ನಾನು ದ್ರೌಪದಿ, ನಾವು ದ್ರೌಪದಿಯ ಮಕ್ಕಳು' - ಈ ರೀತಿಯಾಗಿ ಜೋರಾಗಿ ಬೊಬ್ಬಿಡುತ್ತಾ ಅವರು ಮಾತನಾಡಿದರು.

ವ್ಯಾಖ್ಯಾನ ವಿಶೇಷ– ದ್ರೋಣರನ್ನು ನಿಗ್ರಹ ಮಾಡಬೇಕಾದ ಕಾಲದಲ್ಲಿ ಕೃಷ್ಣನು 'ಅಶ್ವತ್ಥಾಮಾ ಹತಃ' ಎಂದು ಹೇಳು ಎಂದು ಧರ್ಮರಾಜನಲ್ಲಿ ಕೇಳಿಕೊಂಡಾಗ, ದೇವರ ಮಾತಿನಲ್ಲಿ ವಿಶ್ವಾಸವಿಡದೆ ಸಣ್ಣದನಿಯಲ್ಲಿ 'ಕುಂಜರಶ್ಚ' ಎಂದು ಹೇಳಿದುದರಿಂದ ಅಷ್ಟಂಶ ಪಾಪಕ್ಕೆ ಯೋಗ್ಯವಾದ ನರಕ ದರ್ಶನವನ್ನು ಮಾಡಿಸುವುದಕ್ಕೋಸ್ಕರ ದೇವತೆಗಳು ತತ್ಕಾಲದಲ್ಲಿ ಕಲ್ಪಿಸಿದ ನರಕ ಇದಾಗಿದೆ ಹೊರತು ಇದು ನರಕಲೋಕವಲ್ಲ. ಏಕೆಂದರೆ ಹಿಂದೆ ಮಹಾಪ್ರಸ್ಥಾನಿಕ ಪರ್ವದಲ್ಲಿ 'ದ್ರೌಪದಿಯ ಜೊತೆಗೆ ನಿನ್ನ ಸಹೋದರರನ್ನೂ, ಪುತ್ರರನ್ನೂ ಮುಂದೆ ನೀನು ಸ್ವರ್ಗದಲ್ಲಿ ನೋಡಲಿರುವೆ. ಆದ್ದರಿಂದ ದುಃಖಪಡಬೇಡ' ಎಂದು ಇಂದ್ರನು ಹೇಳಿದ್ದಾನೆ. ಇದು ನರಕಲೋಕವೇ ಆಗಿದ್ದಲ್ಲಿ ಆ ಇಂದ್ರನ ಮಾತು ಸುಳ್ಳಾಗುವುದು. ಆದ್ದರಿಂದಲೇ ಪ್ರಕೃತದಲ್ಲಿ ನಾನು ಭೀಮ, ನಾನು ಕರ್ಣ, ನಾನು ಅರ್ಜುನ

ಎಂದು ಹೇಳುವ ಜೀವರನ್ನು ಧರ್ಮರಾಜನಿಗೆ ನರಕದರ್ಶನರೂಪವಾದ ದುಃಖವನ್ನು ನೀಡಲು ದೇವತೆಗಳು ತತ್ಕಾಲದಲ್ಲಿ ಕಲ್ಪಿಸಿದ್ದಾರೆ. ಹಾಗಿಲ್ಲವಾದರೆ ಭೂಮಿಗಿಂತಲೂ ಕೆಳಭಾಗದಲ್ಲಿರುವ ನರಕವು ಸ್ವರ್ಗಮಾರ್ಗದಲ್ಲಿ ಹೇಗೆ ಕಂಡೀತು? ಅಷ್ಟಲ್ಲದೆ ಮುಂದೆ ದೇವತೆಗಳು ಬಂದಾಗ ಆ ಎಲ್ಲನರಕಚಿಹ್ನೆಗಳೂ ಹೊರಟು ಹೋದವು ಎಂಬ ಮಾತು ಬರುತ್ತದೆ. ಇದೂ ಸುಳ್ಳಾಗಬೇಕಾಗುತ್ತದೆ – ಲಕ್ಷ್ಮಲಂಕಾರ.

ತಾ ವಾಚಃ ಸ ತದಾ ಶ್ರುತ್ವಾ ತದ್ದೇಶಸದೃಶೀರ್ನೃಪ ।
ತತೋ ವಿಮಮೃಶೇ ರಾಜಾ ಕಿಂತ್ವಿದಂ ದೈವಕಾರಿತಮ್ ॥೪೨॥

ಹೇ ನೃಪನೇ, ಆ ಪ್ರದೇಶಕ್ಕೆ ಅನುಗುಣವಾದ ರೀತಿಯಲ್ಲಿ ದೈನ್ಯಯುಕ್ತವಾದ ಆ ಮಾತುಗಳನ್ನು ಕೇಳಿದ ಯುಧಿಷ್ಠಿರ ರಾಜನು 'ಇದೇಕೆ ದೈವದ ನಡೆ ಹೀಗಿದೆ' ಎಂದು ತನ್ನಲ್ಲೇ ವಿಮರ್ಶಿಸಿಕೊಂಡನು.

ಕಿಂತು ತತ್ಕಲುಷಂ ಕರ್ಮ ಕೃತಮೇಭಿರ್ಮಹಾತ್ಮಭಿಃ ।
ಕರ್ಣೇನ ದ್ರೌಪದೇಯೈರ್ವಾ ಪಾಂಚಾಲ್ಯಾ ವಾ ಸುಮಧ್ಯಯಾ ॥೪೩॥

ಮಹಾತ್ಮರಾದ ಈ ಕರ್ಣ, ದ್ರೌಪದೀ ಪುತ್ರರು ಹಾಗೂ ಸುಮಧ್ಯಮೆಯಾದ ಪಾಂಚಾಲಿಯಿಂದ ಯಾವ ಕೆಟ್ಟ ಕೆಲಸ ಆಚರಿಸಲ್ಪಟ್ಟಿತ್ತು ?

ಯ ಇಮೇ ಪಾಪಗಂಧೇಽಸ್ಮಿನ್ ದೇಶೇ ಸಂತಿ ಸುದಾರುಣೇ ।
ನಾಹಂ ಜಾನಾಮಿ ಸರ್ವೇಷಾಂ ದುಷ್ಕೃತಂ ಪುಣ್ಯಕರ್ಮಣಾಮ್ ॥೪೪॥

ಬಹುದಾರುಣವಾದ, ದುರ್ಗಂಧವುಳ್ಳ ಈ ಪ್ರದೇಶದಲ್ಲಿ ಏನು ಇವರು ಇದ್ದಾರೆಯೋ ಈ ಎಲ್ಲ ಪುಣ್ಯಕರ್ಮಿಗಳ ದುಷ್ಕರ್ಮವನ್ನು ನಾನು ತಿಳಿಯದವನಾಗಿದ್ದೇನೆ.

ಕಿಂ ಕೃತ್ವಾ ಧೃತರಾಷ್ಟ್ರಸ್ಯ ಪುತ್ರೋ ರಾಜಾ ಸುಯೋಧನಃ ।
ತಥಾ ಶ್ರಿಯಾ ಯುತಃ ಪಾಪೈಃ ಸಹ ಸರ್ವೈಃ ಪದಾನುಗೈಃ ॥೪೫॥

ಧೃತರಾಷ್ಟ್ರನ ಪುತ್ರನಾದ, ರಾಜನಾದ ಸುಯೋಧನನು ಯಾವ ಕರ್ಮವನ್ನು ಮಾಡುವ ಮೂಲಕ ತನ್ನ ಪರಿವಾರಭೂತರಾದ ಎಲ್ಲ ಪಾಪಿಷ್ಠರೊಂದಿಗೆ ಆ ರೀತಿಯ ಸಂಪತ್ತಿನಿಂದ ಕೂಡಿಕೊಂಡಿರುವನು?

ಮಹೇಂದ್ರ ಇವ ಲಕ್ಷ್ಮೀವಾನಾಸ್ತೇ ಪರಮಪೂಜಿತಃ ।
ಕಸ್ಯೇದಾನೀಂ ವಿಕಾರೋಽಯಂ ಯ ಇಮೇ ನರಕಂ ಗತಾಃ ॥೪೬॥

ಅವನು ಬಹುಗೌರವಾನ್ವಿತನಾಗಿ ಮಹೇಂದ್ರನಂತೆ ಲಕ್ಷ್ಮೀಯುಕ್ತನಾಗಿದ್ದಾನೆ. ಆದರೆ ಇವರು ಈಗೇನು ನರಕದಲ್ಲಿ ಬಿದ್ದಿರುವರೋ ಇದು ಯಾವ ಕರ್ಮದ ಪರಿಣಾಮವಾಗಿರಬಹುದು?

ಸರ್ವೇ ಧರ್ಮವಿದಃ ಶೂರಾ ಸತ್ಯಾಗಮಪರಾಯಣಾಃ ।
ಕ್ಷತ್ರಧರ್ಮರತಾಃ ಸನ್ತೋ ಯಜ್ವಾನೋ ಭೂರಿದಕ್ಷಿಣಾಃ ॥೪೭॥

ಈ ಎಲ್ಲರೂ ಧರ್ಮಜ್ಞಾನಿಗಳು, ಶೂರರು, ಸತ್ಯ ಮತ್ತು ಶಾಸ್ತ್ರದಲ್ಲಿ ನಿಷ್ಣಾತರು, ಕ್ಷತ್ರಿಯಧರ್ಮವನ್ನು ಆಸಕ್ತಿಯಿಂದ ನಡೆಸಿದವರು, ಸಜ್ಜನರು, ಯಜ್ಞಯಾಗಾದಿಗಳನ್ನು ಮಾಡಿಸಿ ಉತ್ತಮ ರೀತಿಯಲ್ಲಿ ದಕ್ಷಿಣೆಯನ್ನು ನೀಡಿದವರೂ ಆಗಿದ್ದಾರೆ.

ಕಿನ್ನು ಸುಪ್ತೋಽಸ್ಮಿ ಜಾಗರ್ಮಿ ಚೇತಯಾಮಿ ನ ಚೇತಯೇ ।
ಅಹೋ ಚಿತ್ತವಿಕಾರೋಽಯಂ ಸ್ಯಾದ್ವಾ ಮೇ ಚಿತ್ತವಿಭ್ರಮಃ ॥೪೮॥

ನಾನೇನು ಮಲಗಿರುವೆನೋ, ಎಚ್ಚರದಿಂದಿರುವೆನೋ, ನನಗೆ ಚಿತ್ತ ವಿಕಾರವಾಗಿದೆಯೇ ಅಥವಾ ಬುದ್ಧಿ ಭ್ರಮಣೆಯೇ ಆಗಿದೆಯೇ? ಎಷ್ಟು ಆಲೋಚಿಸಿದರೂ ತಿಳಿಯಲಾಗುತ್ತಿಲ್ಲ.

ಏವಂ ಬಹುವಿಧಂ ರಾಜಾ ವಿಮಮರ್ಶ ಯುಧಿಷ್ಠಿರಃ ।
ದುಃಖಶೋಕಸಮಾವಿಷ್ಟಶ್ಚಿನ್ತಾವ್ಯಾಕುಲಿತೇಂದ್ರಿಯಃ ॥೪೯॥

ಹೀಗೆ ರಾಜನಾದ ಯುಧಿಷ್ಠಿರನು ದುಃಖ-ಶೋಕಗಳಿಂದ ಕೂಡಿದವನಾಗಿ, ಚಿಂತೆಯಿಂದ ವ್ಯಾಕುಲಗೊಂಡ ಇಂದ್ರಿಯವುಳ್ಳವನಾಗಿ ಬಹುಪ್ರಕಾರವಾಗಿ ವಿಮರ್ಶಿಸಿದನು.

ಕ್ರೋಧಮಾಹಾರಯಚ್ಚೈವ ತೀವ್ರಂ ಧರ್ಮಸುತೋ ನೃಪಃ ।
ದೇವಾಂಶ್ಚ ಗರ್ಹಯಾಮಾಸ ಧರ್ಮಂ ಚೈವ ಯುಧಿಷ್ಠಿರಃ ॥೫೦॥

ಹೀಗೆ ಧರ್ಮಪುತ್ರನಾದ ಯುಧಿಷ್ಠಿರರಾಜನು ಬಹಳವಾಗಿ ಕೋಪಗೊಂಡು ದೇವತೆಗಳನ್ನೂ, ಧರ್ಮವನ್ನೂ ಹಳಿದನು.

ಸ ತೀವ್ರಶೋಕಸಂತಪ್ತೋ ದೇವದೂತಮುವಾಚ ಹ ।
ಗಮ್ಯತಾಂ ಯತ್ರ ಯೇಷಾಂ ತ್ವಂ ದೂತಸ್ತೇಷಾಮುಪಾಂತಿಕಮ್ ॥೫೧॥

ನ ಹ್ಯಹಂ ತತ್ರ ಯಾಸ್ಯಾಮಿ ಸ್ಥಿತೋಸ್ಮೀತಿ ನಿವೇದ್ಯತಾಮ್ ।
ಮತ್ಸಂಶ್ರಯಾದಿಮೇ ದೂನಾಃ ಸುಖಿನೋ ಭ್ರಾತರೋ ಹಿ ಮೇ ॥೫೨॥

ತೀವ್ರವಾದ ಶೋಕದಿಂದ ದಗ್ಧನಾದ ಅವನು ದೇವದೂತನನ್ನು ಕುರಿತು 'ನೀನು ಯಾರ ದೂತನಾಗಿ ನನ್ನೊಡನೆ ಬಂದಿರುವೆಯೋ ಅವರಿರುವಲ್ಲಿಯೇ ಹೋಗಿಬಿಡು. ನಾನು ಅಲ್ಲಿಗೆ ಬರಲಾರೆ. ಇಲ್ಲೇ ಇರುವೆನೆಂದು ನಿವೇದಿಸು. ಈ ನನ್ನ ಸಹೋದರರು ಬಹುಕಷ್ಟದಲ್ಲಿದ್ದರೂ ನನ್ನ ಜೊತೆಗಿರುವುದರಿಂದ ಸಂತೋಷಪಡುವರು' ಎಂದು ಹೇಳಿದನು.

ಇತ್ಯುಕ್ತಃ ಸ ತದಾ ದೂತಃ ಪಾಂಡುಪುತ್ರೇಣ ಧೀಮತಾ ।
ಜಗಾಮ ತತ್ರ ಯತ್ರಾಸ್ತೇ ದೇವರಾಜಃ ಶತಕ್ರತುಃ ॥೫೩॥

ಹೀಗೆ ಧೀಮಂತನಾದ ಪಾಂಡುಪುತ್ರನು ಹೇಳಿದಾಗ, ಆ ದೂತನು ಶತಕ್ರತುವಾದ ದೇವರಾಜನು ಎಲ್ಲಿರುವನೋ ಅಲ್ಲಿಗೆ ತೆರಳಿದನು.

ನಿವೇದಯಾಮಾಸ ಚ ತದ್ಧರ್ಮರಾಜಚಿಕೀರ್ಷಿತಮ್ ।
ಯಥೋಕ್ತಂ ಧರ್ಮಪುತ್ರೇಣ ಸರ್ವಮೇವ ಜನಾಧಿಪ ॥೫೪॥

ಹೇ ಜನಾಧಿಪನೇ, ಆ ದೂತನು ಧರ್ಮರಾಜನು ಏನು ಮಾಡಬೇಕೆಂದು ಬಯಸಿರುವನೋ ಅವೆಲ್ಲವನ್ನೂ ಧರ್ಮಪುತ್ರನು ಯಾವ ರೀತಿ ತಿಳಿಸಿದ್ದನೋ ಅದೇ ರೀತಿ ಇಂದ್ರನಲ್ಲಿ ನಿವೇದಿಸಿಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಸ್ವರ್ಗಾರೋಹಣಪರ್ವಣಿ ಧರ್ಮರಾಜಸ್ಯ ನರಕದರ್ಶನಂ ನಾಮ
ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ನ ತೇ ನೃಪಾದ್ಯಾಪಿ ಹಿ ಮಾನುಷೋ ಗತೋ
ಭಾವಸ್ತತೋ ದ್ವೇಷ್ಟಿ ಸುಯೋಧನಾದೀನ್ ।
ನಿಮಜ್ಯ ತದ್ವಿಷ್ಣುಪದೋದಕೇऽತ್ರ
ವಿಸೃಜ್ಯ ದೇಹಂ ಭಜ ದೇವಭಾವಮ್ ॥

'ರಾಜನೇ, ನಿನಗಿನ್ನೂ ಮನುಷ್ಯಸ್ವಭಾವ ಬಿಟ್ಟು ಹೋಗಿಲ್ಲ. ದುರ್ಯೋಧನಾದಿಗಳನ್ನು ಇನ್ನೂ ದ್ವೇಷಿಸುತ್ತಿರುವಿ'. ಅದರಿಂದ ಗಂಗಾಜಲದಲ್ಲಿ ಮುಳುಗಿ ದೇಹವನ್ನು ತೊರೆದು ದೇವತ್ವವನ್ನು ಪಡೆ.

ಸುಯೋಧನಾದ್ಯಾ ಯದಿಮೇ ಸುಪಾಪಾ
ಆರಬ್ಧಧರ್ಮಕ್ಷಯಮಾಪ್ಯ ನಿತ್ಯೇ ।
ನಿಶ್ಶೇಷಸೌಖ್ಯೋಜ್ಝಿತನಿತ್ಯದುಃಖೇऽ
ವಶಾಃ ಪತಿಷ್ಯಂತ್ಯಪುನರ್ನಿವೃತ್ತಾಃ ॥

ಈ ದುರ್ಯೋಧನ ಮುಂತಾದವರು ಪಾಪಿಗಳಾದುದರಿಂದ ಪ್ರಾರಬ್ಧ ಪುಣ್ಯ-ಕ್ಷಯ ಹೊಂದಿದ ಬಳಿಕ ಯಾವ ಸುಖವೂ ಇಲ್ಲದಂಥ, ನಿತ್ಯ ದುಃಖಮಯವಾದ ನಿತ್ಯನರಕದಲ್ಲಿ ಪುನರಾವೃತ್ತಿ ಇಲ್ಲದವರಾಗಿ ಹರಿಯ ಅಧೀನರಾಗಿ ಬೀಳುವರು.

ದೇವಾಂಶಜಾ ಯೇ ತು ಸಮಸ್ತಶಸ್ತೇ
ಸ್ವಮೂಲರೂಪಂ ಸಮವಾಪ್ಯ ಕಾಲೇ ।
ಸ್ವತಾರತಮ್ಯಾನುಸೃತಾಂ ವಿಮುಕ್ತಿಂ
ಪ್ರಾಪ್ಸ್ಯಂತಿ ನಾತ್ರಾಪಿ ವಿಚಾರ್ಯಮಸ್ತಿ ॥

ದೇವಾಂಶಸಂಭೂತರು ಯಾರೋ ಅವರೆಲ್ಲರೂ ತಮ್ಮ ಮೂಲರೂಪವನ್ನು ಹೊಂದಿ, ಬ್ರಹ್ಮಪ್ರಳಯ ಕಾಲದಲ್ಲಿ ತಮ್ಮ ಯೋಗ್ಯತಾ ತಾರತಮ್ಯಕ್ಕೆ ಅನುಗುಣವಾದ ಮುಕ್ತಿಯನ್ನು ಹೊಂದುತ್ತಾರೆ. ದೈತ್ಯರ ತಮಃಪ್ರಾಪ್ತಿಯಲ್ಲಾಗಲಿ, ದೇವತೆಗಳ ಮುಕ್ತಿ ಪ್ರಾಪ್ತಿಯಲ್ಲಾಗಲಿ ಸಂಶಯಕ್ಕೆ ಅವಕಾಶವಿಲ್ಲ.

ಇತ್ಯುಕ್ತ ಆಶ್ವೇವ ನಿಮಜ್ಯ ಗಂಗಾಂ
ಧರ್ಮಾತ್ಮಜಸ್ತಂ ಪ್ರವಿಸೃಜ್ಯ ದೇಹಮ್ ।
ಸದ್ಯೋ ಬಭೌ ದೈವಮವಾಪ್ಯ ಕಾಯಂ
ವಿಸೃಷ್ಟರೋಷಾದಿಸಮಸ್ತದೋಷಃ ॥

ದೇವತೆಗಳು ಹೀಗೆ ಹೇಳಿದಾಗ ಧರ್ಮರಾಜನು ಬೇಗನೆ ಗಂಗೆಯಲ್ಲಿ ಮುಳುಗಿ, ಅದರಲ್ಲಿ ಮನುಷ್ಯದೇಹವನ್ನು ತೊರೆದು, ದಿವ್ಯಶರೀರವನ್ನು ಪಡೆದುಕೊಂಡು, ರೋಷ ಮುಂತಾದ ಎಲ್ಲ ದೋಷವನ್ನೂ ಕಳೆದುಕೊಂಡು ಬೆಳಗಿದನು.

ಸ ತು ಪ್ರಪಶ್ಯನ್ ಸ್ವಜನಂ ಸಮಸ್ತಂ
ಸ್ವಮೂಲರೂಪಾತಿಸಮೀಪಸಂಸ್ಥಮ್ ।
ದದರ್ಶ ಭೀಮಂ ಚ ಮರುತ್ಸಮೀಪೇ
ಮಧ್ಯೇ ಜ್ವಲಂತಂ ಮರುತಾಂ ಗಣಸ್ಯ ॥

ಧರ್ಮರಾಜನು ತನ್ನ ಬಂಧುಜನರೆಲ್ಲರೂ ತಮ್ಮ ಮೂಲರೂಪಗಳಿಗೆ ಅತಿ ಸಮೀಪದಲ್ಲಿದ್ದುದನ್ನು ನೋಡುತ್ತ, ಮರುತ್ತುಗಳ ಸಮೂಹದ ನಡುವೆ ಮುಖ್ಯಪ್ರಾಣನ ಸಮೀಪ ಹೊಳೆಯುತ್ತಿದ್ದ ಭೀಮನನ್ನೂ ಕಂಡನು.

ದದರ್ಶ ಕೃಷ್ಣಾಮಪಿ ತತ್ಸಮೀಪೇ
ಶ್ರಿಯಾ ಜ್ವಲಂತೀಂ ಸಮತೀತ್ಯ ಚಾನ್ಯಾಃ ।
ಸ್ಪಷ್ಟುಂ ಚ ಸಂಸ್ಕಾರವಶಾದಿಯೇಷ
ನಿಷಿಧ್ಯ ತಂ ಪ್ರಾಹ ಸುರಾಧಿರಾಜಃ ॥

ಧರ್ಮರಾಜನು ಭೀಮನ ಸಮೀಪದಲ್ಲಿ ಪ್ರಕಾಶದಿಂದ ಬೆಳಗುತ್ತಿದ್ದ ದ್ರೌಪದಿಯನ್ನೂ ಕಂಡು, ಬೇರೆ ದೇವಿಯರನ್ನು ದಾಟಿ, ಸಂಸ್ಕಾರವಶದಿಂದ ಅವಳನ್ನು ಸ್ಪರ್ಶಿಸಲು ಬಯಸಿದನು. ದೇವೇಂದ್ರ ತಡೆದು ಹೇಳಿದನು.

ಏಷಾ ಹಿ ಸಾಕ್ಷಾಜ್ಜಗತಾಂ ಪ್ರಿಯಸ್ಯ
ಪ್ರಾಣಾತ್ಮನೋ ಜೇವವರೇಶ್ವರಸ್ಯ ।
ಪ್ರಾಣಪ್ರಿಯಾ ಶ್ರೀರಿತಿ ನಾಮ ಯಸ್ಯಾಃ
ಶಮಾತ್ಮಕೇಽಸ್ಮಿನ್ ರಮತೇ ಯದೇಷಾ ॥

ಇವಳು ಸಾಕ್ಷಾತ್ ಲೋಕಪ್ರಿಯನಾದ, ಜೀವೋತ್ತಮನಾದ, ಮುಖ್ಯಪ್ರಾಣನ ಪ್ರಾಣಪ್ರಿಯೆ. ಇವಳು ಸುಖಸ್ವರೂಪನಾದ ಪ್ರಾಣನಲ್ಲಿ ಸದಾ ರಮಿಸುವುದರಿಂದ ಶ್ರೀ ಎಂದು ಇವಳಿಗೆ ಹೆಸರು.

ಯುಷ್ಮಚ್ಚತುರ್ದೇಹಗತಸ್ಯ ವಾಯೋ-
ರ್ವಾಯುಪ್ರಿಯಾ ಭೀಮತನೋಸ್ತಥೈವ ।
ಭೋಗಾಯ ಸೃಷ್ಟಾ ಪುರುಷೋತ್ತಮೇನ
ಯುಷ್ಮತ್ತೃಪ್ತ್ಯರ್ಥಂ ಭವತಾಂ ಚ ದಾರೈಃ ॥

ನಿಮ್ಮ ನಾಲ್ವರ ಶರೀರದಲ್ಲಿದ್ದ ಮತ್ತು ಪ್ರತ್ಯೇಕವಾಗಿಯೂ ಭೀಮರೂಪವಾಗಿದ್ದ ವಾಯುವಿನ ಭೋಗಕ್ಕಾಗಿ, ನಿಮ್ಮ ಸಂತೋಷದ ಸಲುವಾಗಿ ನಿಮ್ಮ ಪತ್ನಿಯರೊಂದಿಗೆ ವಾಯುಪತ್ನಿ ಭಾರತಿ ದ್ರೌಪದಿಯಾಗಿ ಹರಿಯಿಂದ ಸೃಷ್ಟಳಾಗಿದ್ದಳು.

ಪ್ರೀತಿಸ್ತತೋ ಹ್ಯಭ್ಯಧಿಕಾ ಬಭೂವ
ಭೀಮಸ್ಯ ಚಾಸ್ಯಾಸ್ತದನು ಸ್ಮ ಪಾರ್ಥೇ ।
ತತೋ ಭವತ್ಸ್ವೇವ ಯಥಾಕ್ರಮೇಣ
ಗುಣಾನುಸಾರೇಣ ಸಮೀರಣಸ್ಯ ॥

ಅದರಿಂದ ಭೀಮನಿಗೂ ದ್ರೌಪದಿಗೂ ಪರಸ್ಪರ ಹೆಚ್ಚು ಪ್ರೀತಿ ಇದ್ದಿತು. ಅನಂತರ ಅರ್ಜುನನಲ್ಲಿ, ಅನಂತರ ನಿಮ್ಮಲ್ಲಿ ವಾಯುವಿನ ಆವೇಶವೆಂಬ ಗುಣಕ್ಕೆ ಅನುಸಾರವಾಗಿ ಕ್ರಮದಿಂದ ಪ್ರೀತಿ ಇದ್ದಿತು.

ಏಷಾ ಹಿ ಸಾ ಶುದ್ಧತನುಃ ಪ್ರಜಾತಾ
ಶಚ್ಯಾದಿಯೋಗಾಪಗತಾऽಗ್ರ್ಯದೇಹಾ ।
ಯೂಯಂ ಚ ಸರ್ವೇ ಮರುತೋ ವಿಶೇಷ-
ಸಂಯೋಗಹೀನಾಃ ಸ್ವಶರೀರಸಂಸ್ಥಾಃ ॥

ಈಗ ಆ ದ್ರೌಪದಿ ಶಚೀ ಮುಂತಾದ ದೇವಿಯರ ಆವೇಶರಹಿತವಾದ ಉತ್ತಮ ದೇಹ ಉಳ್ಳವಳಾಗಿ ಶುದ್ಧ ಭಾರತೀರೂಪಳಾಗಿದ್ದಾಳೆ. ನೀವೆಲ್ಲರೂ ಮುಖ್ಯಪ್ರಾಣನ ವಿಶೇಷಾವೇಶ ರಹಿತರಾಗಿ ನಿಮ್ಮ ಶರೀರದಲ್ಲಿ ಇರುವಿರಿ.

ಸ್ಪರ್ಶೇऽಪಿ ನಾಸ್ಯಾಃ ಪವಮಾನಪತ್ನ್ಯಃ
ಸುಪೂತತಾऽಲಂ ಭವತಾಮಿದಾನೀಮ್ ।
ನ ಚೋತ್ತರತ್ರಾಪಿ ಭವೇತ್ ಕಥಂಚಿದ್
ದಿವೌಕಸಾಂ ಮಾನುಷದೇಹಿನೋ ಯಥಾ ॥

ಈಗ ಈ ವಾಯುಪತ್ನಿಯ ಸ್ಪರ್ಶಮಾಡುವುದಕ್ಕೂ ನಿಮಗೆ ಶುದ್ಧಿ, ಯೋಗ್ಯತೆ ಇಲ್ಲ. ಮುಂದೆಯೂ ಅದು ಸರ್ವಥಾ ಬರುವುದಿಲ್ಲ. ಮನುಷ್ಯದೇಹಿಗೆ ದೇವತೆಗಳ ಸ್ಪರ್ಶಯೋಗ್ಯತೆ ಹೇಗೆ ಇಲ್ಲವೋ ಹಾಗೆ.

ಇತೀರಿತಂ ತಂ ಪ್ರತಿಸನ್ನಿವೃತ್ತಂ
ವಿನಾಶಯನ್ ಮಾನುಷವಾಸನಾಂ ಸ್ವಯಮ್ ।
ಸಮಾಶ್ಲಿಷಚ್ಛುದ್ಧತನುಃ ಸ್ವತೋತ್ಥೋ
ಧರ್ಮೋ ಹರೇಃ ಸೋऽಭವದಾಶು ತತ್ಸಮಃ ॥

ಇಂದ್ರ ಹೀಗೆ ಹೇಳಿದಾಗ ಧರ್ಮರಾಜ ದ್ರೌಪದೀ ಸ್ಪರ್ಶಕ್ಕೆ ಹಿಮ್ಮೆಟ್ಟಿದನು. ಅವನ ಮಾನುಷ ಸಂಸ್ಕಾರವನ್ನು ಕಳೆಯುವುದಕ್ಕಾಗಿ ಶ್ರೀಹರಿಯ ಬಲಸ್ತನದಿಂದ ಉದ್ಭವಿಸಿದ ಶುದ್ಧಶರೀರಿಯಾದ ಧರ್ಮ ಸ್ವತಃ ಅವನನ್ನು ಆಲಿಂಗಿಸಿದನು. ಒಡನೆ ಧರ್ಮರಾಜ ಧರ್ಮನಿಗೆ ಪೂರ್ತಿ ಸದೃಶನಾದ.

★ ★ ★ ★ ★

ಮೂರನೆಯ ಅಧ್ಯಾಯ

ತಮ್ಮ ಪರೀಕ್ಷೆಯಲ್ಲಿ ಯುಧಿಷ್ಠಿರನು ಗೆದ್ದುದರಿಂದ ಸಂತೋಷಗೊಂಡ ಧರ್ಮ ಹಾಗೂ ಇಂದ್ರಾದಿಗಳು ಯುಧಿಷ್ಠಿರನ ಸಮೀಪಕ್ಕೆ ಬಂದಾಗ, ಅಲ್ಲಿ ಈ ಮೊದಲು ಕಂಡಿದ್ದ ನರಕಾದಿಗಳು ಕ್ಷಣದಲ್ಲಿ ಅಂತರ್ಧಾನವಾಗುವುದು. ಧರ್ಮರಾಜನು ಯುಧಿಷ್ಠಿರನನ್ನು ಪ್ರಶಂಸಿಸುತ್ತಾ, ಅವನು ನೋಡಿದ ನರಕವು ಪರೀಕ್ಷೆಗೋಸ್ಕರ ಇಂದ್ರನ ಮಾಯೆಯಿಂದ ಸೃಷ್ಟಿಯಾದುದೆಂದು ತಿಳಿಸುವುದು. ಅನಂತರ ಯುಧಿಷ್ಠಿರನು ದೇವಗಂಗೆಯಲ್ಲಿ ಮುಳುಗಿ, ಮಾನುಷಶರೀರವನ್ನು ಪರಿತ್ಯಜಿಸಿ, ದಿವ್ಯಶರೀರವನ್ನು ಸ್ವೀಕರಿಸಿ, ಮಹರ್ಷಿಗಳ ಹೊಗಳಿಕೆಯೊಂದಿಗೆ ದೇವತೆಗಳ ಜೊತೆಗೆ ತನ್ನ ಸಹೋದರರಿರುವ ದಿವ್ಯ ಸ್ಥಳಕ್ಕೆ ಆಗಮಿಸುವುದು.

ವೈಶಂಪಾಯನಃ

ಸ್ಥಿತೇ ಮುಹೂರ್ತೇ ಪಾರ್ಥೇ ತು ಧರ್ಮರಾಜೇ ಯುಧಿಷ್ಠಿರೇ ।
ಆಜಗ್ಮುಸ್ತತ್ರ ಕೌರವ್ಯ ದೇವಾಃ ಶಕ್ರಪುರೋಗಮಾಃ ॥೧॥

ವೈಶಂಪಾಯನ– ಹೇ ಕುರುವಂಶಜನೇ, ಕುಂತೀಪುತ್ರನಾದ ಧರ್ಮರಾಜನಾದ ಯುಧಿಷ್ಠಿರನು ಒಂದು ಮುಹೂರ್ತ ಕಾಲ ಅಲ್ಲಿದ್ದಾಗಲೇ ಇಂದ್ರನೇ ಮೊದಲಾದ ದೇವತೆಗಳು ಅಲ್ಲಿಗೆ ಆಗಮಿಸಿದರು.

ಸ್ವಯಂ ವಿಗ್ರಹವಾನ್ ಧರ್ಮೋ ರಾಜಾನಂ ಸಂಪರೀಕ್ಷ್ಯ ತಮ್ ।
ತತ್ರಾಜಗಾಮ ಯತ್ರಾಸೌ ಕುರುರಾಜೋ ಯುಧಿಷ್ಠಿರಃ ॥೨॥

ಆ ರಾಜನನ್ನು ಚೆನ್ನಾಗಿ ಪರೀಕ್ಷೆಗೊಳಪಡಿಸಿದ ಯಮಧರ್ಮರಾಜನೇ ತಾನೇ ಮೂರ್ತಿಮತ್ತಾಗಿ ಕುರುರಾಜನಾದ ಯುಧಿಷ್ಠಿರನು ಎಲ್ಲಿರುವನೋ ಅಲ್ಲಿಗೆ ಆಗಮಿಸಿದನು.

ತೇಷು ಭಾಸುರದೇಹೇಷು ಪುಣ್ಯಾಭಿಜನಕರ್ಮಸು ।
ಸಮಾಗತೇಷು ದೇವೇಷು ವ್ಯಗಮತ್ ತತ್ತಮೋ ನೃಪ ॥೩॥

ಹೇ ನೃಪನೇ, ಜನ್ಮ ಹಾಗೂ ಕರ್ಮಗಳಿಂದ ಮಂಗಳಮಯರಾದ, ದೇದೀಪ್ಯಮಾನವಾದ ಶರೀರವುಳ್ಳ ಆ ದೇವತೆಗಳು ಅಲ್ಲಿಗೆ ಬಂದ ಕೂಡಲೇ ಅಲ್ಲಿರುವ ಕತ್ತಲೆಯು ಹೊರಟು ಹೋಯಿತು.

ನಾಪಶ್ಯತ ಚ ತಾಸ್ತತ್ರ ಯಾತನಾಃ ಪಾಪಕರ್ಮಣಾಮ್ ।
ನದೀ ವೈತರಣೀ ಚೈವ ಕೂಟಶಾಲ್ಮಲಿನಾ ಸಹ ॥೪॥

ಪಾಪಕರ್ಮಿಗಳು ಅಲ್ಲಿ ಅನುಭವಿಸುತ್ತಿದ್ದ ಯಾತನೆಗಳೂ, ವೈತರಿಣೀ ನದಿಯೂ ಶಾಲ್ಮಲೀ ಮರಗಳ ಸಾಲಿನೊಂದಿಗೆ ಅಲ್ಲಿ ಕಾಣೆಯಾದವು.

ಲೋಹಕುಂಭ್ಯಃ ಶಿಲಾಶ್ಚೈವ ನಾದೃಶ್ಯಂತ ಭಯಾನಕಾಃ ।
ವಿಕೃತಾನಿ ಶರೀರಾಣಿ ಯಾನಿ ತತ್ರ ಸಮಂತತಃ ॥೫॥

ದದರ್ಶ ರಾಜಾ ಕೌರವ್ಯಸ್ತಾನ್ ಸರ್ವಾನ್ ಸುಮಹಾಪ್ರಭಾನ್ ॥೬॥

ಹಿಂದೆ ಅಲ್ಲಿದ್ದ ಕಬ್ಬಿಣದ ಗಡಿಗೆಗಳೂ, ಭಯಾನಕವಾದ ಶಿಲೆಗಳೂ, ಸುತ್ತಲೂ ಅಲ್ಲಿ ಬಿದ್ದಿದ್ದ ಯಾವೆಲ್ಲ ವಿಕಾರವಾದ ಶರೀರಗಳಿದ್ದವೋ ಅವುಗಳೂ ಕಾಣೆಯಾದವು. ಆ ಎಲ್ಲ ಪ್ರದೇಶವನ್ನೂ ಕುರುವಂಶಜನಾದ ಆ ರಾಜನು ಉತ್ತಮವಾದ ಮಹಾಪ್ರಭೆಯಿಂದ ಕೂಡಿದ್ದನ್ನಾಗಿ ಕಂಡನು.

ತತ್ರ ವಾಯುಃ ಸುಖಸ್ಪರ್ಶಃ ಪುಣ್ಯಗಂಧವಹಃ ಶಿವಃ ।
ವವೌ ದೇವಸಮೀಪಸ್ಥಃ ಶೀತಲೋಽತೀವ ಭಾರತ ॥೭॥

ಹೇ ಭಾರತನೇ, ದೇವತೆಗಳ ಸಮೀಪದಲ್ಲಿ ಹಿತಕರವಾದ ಸ್ಪರ್ಶವುಳ್ಳ, ಮಂಗಳಮಯವಾದ, ಉತ್ತಮ ಸುಗಂಧಗಳನ್ನು ಹೊತ್ತುಕೊಂಡ, ತುಂಬಾ ತಂಪಾದ ಗಾಳಿಯು ಬೀಸತೊಡಗಿತು.

ಮರುತಃ ಸಹ ಶಕ್ರೇಣ ವಸವಶ್ಚಾಶ್ವಿನೌ ಸಹ ।
ಸಾಧ್ಯಾ ರುದ್ರಾಸ್ತಥಾऽऽದಿತ್ಯಾ ಯೇ ಚಾನ್ಯೇऽಪಿ ದಿವೌಕಸಃ ॥೮॥

ಸರ್ವೇ ಚಾಪಿ ಸಮಾಜಗ್ಮುಃ ಸಿದ್ಧಾಶ್ಚ ಪರಮರ್ಷಯಃ ।
ಯತ್ರ ರಾಜಾ ಮಹಾತೇಜಾ ಧರ್ಮಪುತ್ರಃ ಸ್ಥಿತೋऽಭವತ್ ॥೯॥

ಇಂದ್ರನೊಂದಿಗೆ ಮರುದ್ದೇವತೆಗಳೂ, ವಸುಗಳೂ, ಅಶ್ವಿನೀದೇವತೆಗಳೂ, ಸಾಧ್ಯರೂ, ರುದ್ರರೂ ಹಾಗೆಯೇ ಆದಿತ್ಯರೂ ಬೇರೆ ಯಾವೆಲ್ಲ ದೇವತೆಗಳಿರುವರೋ ಅವರೆಲ್ಲರೂ ಸಿದ್ಧರೂ, ಶ್ರೇಷ್ಠ ಋಷಿಗಳೂ ಮಹಾತೇಜಸ್ವಿಯಾದ ಧರ್ಮಪುತ್ರನಾದ ಯುಧಿಷ್ಠಿರರಾಜನು ಎಲ್ಲಿ ನಿಂತಿದ್ದನೋ ಅಲ್ಲಿಗೆ ಆಗಮಿಸಿದರು.

ತತಃ ಶಕ್ರಃ ಸುರಪತಿಃ ಶ್ರಿಯಾ ಪರಮಯಾ ಯುತಃ ।
ಯುಧಿಷ್ಠಿರಮುವಾಚೇದಂ ಸಾಂತ್ವಪೂರ್ವಮಿದಂ ವಚಃ ॥೧೦॥

ಆಗ ಉತ್ತಮವಾದ ಐಶ್ವರ್ಯದಿಂದ ಕೂಡಿದ, ದೇವಪತಿಯಾದ ಇಂದ್ರನು ಸಮಾಧಾನಪೂರ್ವಕವಾಗಿ ಯುಧಿಷ್ಠಿರನನ್ನು ಕುರಿತು ಈ ಮಾತುಗಳನ್ನಾಡಿದನು.

ಯುಧಿಷ್ಠಿರ ಮಹಾಬಾಹೋ ಪ್ರೀತಾ ದೇವಗಣಾಸ್ತ್ವಯಾ ।
ಏಹ್ಯೇಹಿ ಪುರುಷವ್ಯಾಘ್ರ ಕೃತಮೇತಾವತಾ ವಿಭೋ ॥೧೧॥

'ಹೇ ಮಹಾಬಾಹುವಾದ ಯುಧಿಷ್ಠಿರನೇ, ನಿನ್ನಿಂದ ದೇವತೆಗಳು ಪ್ರೀತರಾದರು. ಹೇ ವಿಭುವೇ, ಇಷ್ಟರಿಂದ ನೀನು ಕೃತಾರ್ಥನಾಗಿರುವೆ. ಪುರುಷವ್ಯಾಘ್ರನೇ, ಇತ್ತ ಕಡೆ ಬಾ.

ಸಿದ್ಧಿಃ ಪ್ರಾಪ್ತಾ ಮಹಾಬಾಹೋ ಲೋಕಾಶ್ಚಾಪ್ಯಕ್ಷಯಾಸ್ತವ ।
ಭ್ರಾತೄಣಾಂ ಸುಹೃದಾಂ ಚೈವ ಗತಿರ್ನಿತ್ಯಾ ಸುಪೂಜಿತಾ ॥೧೨॥

ಹೇ ಮಹಾಬಾಹುವೇ, ನಿನಗೆ ಉತ್ತಮವಾದ ಸಿದ್ಧಿಯು ಪ್ರಾಪ್ತವಾಗಿದೆ. ಅಕ್ಷಯವಾದ ಲೋಕಗಳೂ ದೊರಕಿವೆ. ನಿನ್ನ ಸಹೋದರರಿಗೂ ಹಾಗೂ ಮಿತ್ರರಿಗೂ ಗೌರವಾನ್ವಿತವಾದ, ನಾಶವಿಲ್ಲದ ಉತ್ತಮ ಗತಿಯು ದೊರಕಿತು.

ನ ಚ ಮನ್ಯುಸ್ತ್ವಯಾ ಕಾರ್ಯಃ ಶೃಣು ಚೇದಂ ವಚೋ ಮಮ ।
ಅವಶ್ಯಂ ನರಕಸ್ತಾತ ದ್ರಷ್ಟವ್ಯಃ ಸರ್ವರಾಜಭಿಃ ॥೧೩॥

ಮಗು, ನೀನು ಕೋಪ ಮಾಡಿಕೊಳ್ಳಬೇಡ. ನನ್ನ ಈ ಮಾತುಗಳನ್ನು ಕೇಳು. ಎಲ್ಲ ರಾಜರು ಅವಶ್ಯವಾಗಿ ನರಕವನ್ನು ನೋಡಲೇಬೇಕು.

ಶುಭಾನಾಮಶುಭಾನಾಂ ಚ ದ್ವೌ ರಾಶೀ ಪುರುಷರ್ಷಭ ।
ಯಃ ಪೂರ್ವಂ ಸುಕೃತಂ ಭುಂಕ್ತೇ ಪಶ್ಚಾನ್ನಿರಯಮೇತಿ ಸಃ ॥೧೪॥

ಹೇ ಪುರುಷಶ್ರೇಷ್ಠನೇ, ಪ್ರತಿಯೊಬ್ಬನು ಮಾಡಿದ ಶುಭಕರ್ಮಗಳ ಹಾಗೂ ಅಶುಭಕರ್ಮಗಳ ಎರಡು ರಾಶಿಗಳು ಇರುತ್ತವೆ. ಯಾವನು ಮೊದಲು ಸುಕೃತದ ಫಲವನ್ನು ಉಣ್ಣುತ್ತಾನೋ ಅವನು ನಂತರ ನರಕವನ್ನು ಹೊಂದುತ್ತಾನೆ.

ಪೂರ್ವಂ ನಿರಯಭಾಗ್ಯಶ್ಚ ಪಶ್ಚಾತ್ ಸ್ವರ್ಗಮುಪೈತಿ ಸಃ ।
ಭೂಯಿಷ್ಠಪಾಪಕರ್ಮಾ ಯಃ ಸ ಪೂರ್ವಂ ಸ್ವರ್ಗಮಶ್ನುತೇ ॥೧೫॥

ಯಾವನು ಮೊದಲು ನರಕವನ್ನು ಹೊಂದುತ್ತಾನೋ ಅವನು ನಂತರ ಸ್ವರ್ಗವನ್ನು ಪಡೆಯುತ್ತಾನೆ. ಹೆಚ್ಚು ಪಾಪಕರ್ಮಗಳನ್ನು ಯಾವನು ಮಾಡಿದ್ದಾನೋ ಅವನು ಮೊದಲು ಸ್ವರ್ಗವನ್ನು ಪಡೆಯುತ್ತಾನೆ.

ಭೂಯಿಷ್ಠಶುಭಕರ್ಮಾ ತು ಪೂರ್ವಂ ನರಕಮೃಚ್ಛತಿ ।
ತೇನ ತ್ವಮೇವಂ ಗಮಿತೋ ಮಯಾ ಶ್ರೇಯೋರ್ಥಿನಾ ನೃಪ ॥೧೬॥

ಯಾವನು ಹೆಚ್ಚು ಶುಭಕರ್ಮಗಳನ್ನು ನಡೆಸಿದ್ದಾನೋ ಅವನು ಮೊದಲಾಗಿ ನರಕವನ್ನು ಹೊಂದುತ್ತಾನೆ. ಹೇ ನೃಪನೇ, ನಿನ್ನ ಶ್ರೇಯಸ್ಸನ್ನು ಬಯಸುವ ನನ್ನಿಂದ, ನೀನು ಶುಭಕರ್ಮಗಳನ್ನು ಹೆಚ್ಚಾಗಿ ಮಾಡಿರುವುದರಿಂದಲೇ ಈ ರೀತಿ ಮೊದಲು ನರಕಕ್ಕೆ ಆಗಮಿಸಿರುವೆ.

ವ್ಯಾಖ್ಯಾನ ವಿಶೇಷ– ಯಾವನು ಮೊದಲು ಸುಕೃತವನ್ನು ಉಣ್ಣುತ್ತಾನೋ ಅವನು ನಂತರ ನರಕಕ್ಕೆ ಹೋಗುತ್ತಾನೆ. ಪಾಪಕರ್ಮಗಳನ್ನು ಹೆಚ್ಚು ನಡೆಸಿದವನು ಯಾವನೋ ಅವನು ಮೊದಲು ಸ್ವರ್ಗವನ್ನು ಹೊಂದುತ್ತಾನೆ ಎಂದು ಏನು ಇಂದ್ರದೇವರ ವಚನವಿದೆಯೋ ಇದು ದುರ್ಯೋಧನನನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ್ದು. ಯಾವನು ಮೊದಲು ನರಕಕ್ಕೆ ಹೋಗುತ್ತಾನೋ ಅವನು ನಂತರ ಸ್ವರ್ಗವನ್ನು ಪಡೆಯುತ್ತಾನೆ. ಹೆಚ್ಚು ಶುಭಕರ್ಮಗಳನ್ನು ನಡೆಸಿದವನು ಮೊದಲು ನರಕವನ್ನು ಹೊಂದುತ್ತಾನೆ ಎಂಬ ಇಂದ್ರವಚನವು ಧರ್ಮರಾಜನನ್ನು ಉದ್ದೇಶಿಸಿ ಹೇಳಿದ್ದು ಎಂದು ತಿಳಿಯಬೇಕು– **ಲಕ್ಷಾಲಂಕಾರ.**

ವ್ಯಾಜೇನ ಹಿ ತ್ವಯಾ ದ್ರೋಣ ಉಪಚೀರ್ಣಃ ಸುತಂ ಪ್ರತಿ ।
ವ್ಯಾಜೇನೈವ ತತೋ ರಾಜನ್ ದರ್ಶಿತೋ ನರಕಸ್ತವ ॥೧೭॥

ದ್ರೋಣನು ತನ್ನ ಮಗನ ವಿಷಯದಲ್ಲಿ ನಿನ್ನಿಂದ ಕಪಟ ಮಾತುಗಳ ಮೂಲಕ ಮೋಸ ಹೊಂದಿದ್ದಾನೆ. ಆದ್ದರಿಂದ ಹೇ ರಾಜನೇ, ನಿನಗೆ ಕಪಟವಾದ ನರಕವೇ ಪ್ರದರ್ಶಿತವಾಗಿದೆ.

ವ್ಯಾಖ್ಯಾನ ವಿಶೇಷ– ವಾಸ್ತವಿಕವಾಗಿ ದ್ರೋಣನ ನಿಗ್ರಹ ಸಂದರ್ಭದಲ್ಲಿ ಧರ್ಮರಾಜನು 'ಅಶ್ವತ್ಥಾಮಾ ಹತಃ' ಎಂದು ಹೇಳಿ ಮೆಲ್ಲನೆ 'ಕುಂಜರಶ್ಚ' ಎಂದು ಹೇಳಿರುವುದರಿಂದ ಧರ್ಮರಾಜನ ಮಾತಿನಲ್ಲಿ ಕಪಟವಿಲ್ಲ. ಹಾಗಿದ್ದರೂ ಕೃಷ್ಣನ ಮಾತಿನಲ್ಲಿ 'ಇದು ಮೋಸ' ಎಂಬ ಬುದ್ಧಿಯನ್ನು ಮಾಡಿದ್ದರಿಂದಲೇ ದೇವರ ಮಾತಿನಲ್ಲಿ ವಿಶ್ವಾಸವಿಡದಿರುವುದೇ ಮೋಸ ಎಂದು ತಿಳಿಯಬೇಕು – **ಲಕ್ಷಾಲಂಕಾರ.**

ಯಥೈವ ತ್ವಂ ತಥಾ ಭೀಮಸ್ತಥಾ ಪಾರ್ಥೋ ಯಮೌ ತಥಾ ।
ದ್ರೌಪದೀ ಚ ತಥಾ ಕೃಷ್ಣಾ ವ್ಯಾಜೇನ ನರಕಂ ಗತಾಃ ॥೧೮॥

ಆಗಚ್ಛ ನರಶಾರ್ದೂಲ ಮುಕ್ತಾಸ್ತೇ ಚೈವ ಕಲ್ಮಷಾತ್ ॥೧೯॥

ನೀನು ಹೇಗೋ ಹಾಗೆಯೇ ಭೀಮನೂ, ಅರ್ಜುನನೂ, ಅವಳಿ ಮಕ್ಕಳಾದ ನಕುಲ-ಸಹದೇವರು, ಹಾಗೆಯೇ ಕೃಷ್ಣೆಎನಿಸಿದ ದ್ರೌಪದಿಯು ನೆಪಮಾತ್ರಕ್ಕೆ ನರಕವನ್ನು ಹೊಂದಿರುವರು. ಹೇ ರಾಜಶ್ರೇಷ್ಠನೇ, ಅವರೆಲ್ಲರೂ ಕಲ್ಮಷರಹಿತರಾಗಿದ್ದಾರೆ, ಬಂದು ನೋಡು.

ವ್ಯಾಖ್ಯಾನ ವಿಶೇಷ– ಇಲ್ಲಿ **'ವ್ಯಾಜೇನ ನರಕಂ ಗತಾಃ'** ಎಂಬುದಕ್ಕೆ ನಿನ್ನ ನೆಪದಿಂದ ನರಕದಲ್ಲಿದ್ದವರಂತೆ ಕಂಡಿದ್ದಾರೆ ಎಂದರ್ಥ. ಅವರಿಗೆ ನರಕವಿಲ್ಲ ಎಂದು ಅಭಿಪ್ರಾಯ. ಹೀಗೆ

ಒಪ್ಪಿಕೊಳ್ಳದಿದ್ದರೆ ಮುಂದೆ ೩೮ ಮತ್ತು ೪೦ನೇ ಶ್ಲೋಕದಲ್ಲಿ ಹೇಳಿದಂತೆ, ದೇವರಾಜನಾದ ಮಹೇಂದ್ರ ಪ್ರಯೋಗಿಸಿದ ಮಾಯೆಯಿದು ಎಂಬ ಮತ್ತು ಅರ್ಜುನ, ಭೀಮ, ನಕುಲ-ಸಹದೇವರು, ಕರ್ಣ, ರಾಜಪುತ್ರಿಯಾದ ಕೃಷ್ಣೆ ಇವರು ಯಾರೂ ನರಕಾರ್ಹರಲ್ಲ ಎಂಬ ಸ್ಪಷ್ಟವಾದ ಮಾತಿನ ವಿರೋಧ ಬರುವುದು. ಆದ್ದರಿಂದ ಭಾರತದ ಹೃದಯವನ್ನು ಭಾರತೀಪತಿ ಮಾತ್ರ ತಿಳಿಯಬಲ್ಲ. ಬೇರೆಯವರಿಗೆ ಸಾಧ್ಯವಾಗದು ಎಂದು ತಿಳಿಯಬೇಕು – **ಲಕ್ಷಾಲಂಕಾರ.**

ಸ್ವಪಕ್ಷ್ಯಾಶ್ಚೈವ ಯೇ ತುಭ್ಯಂ ಪಾರ್ಥಿವಾ ನಿಹತಾ ರಣೇ ।
ಸರ್ವೇ ಸ್ವರ್ಗಮನುಪ್ರಾಪ್ತಾಸ್ತಾನ್ ಪಶ್ಯ ಭರತರ್ಷಭ ॥೨೦॥

ಹೇ ಭರತಶ್ರೇಷ್ಠನೇ, ನಿನಗೆ ಸ್ವಪಕ್ಷರೆನಿಸಿಕೊಂಡ ಯಾರೆಲ್ಲ ರಾಜರು ಯುದ್ಧದಲ್ಲಿ ಹತರಾಗಿರುವರೋ ಆ ಎಲ್ಲರೂ ಸ್ವರ್ಗವನ್ನು ಪಡೆದಿರುವರು, ಅವರನ್ನು ನೋಡು.

ಕರ್ಣಶ್ಚೈವ ಮಹೇಷ್ವಾಸಃ ಸರ್ವಶಸ್ತ್ರಭೃತಾಂವರಃ ।
ಸ ಗತಃ ಪರಮಾಂ ಸಿದ್ಧಿಂ ಯದರ್ಥಂ ಪರಿತಪ್ಯಸೇ ॥೨೧॥

ಯಾವನಿಗೋಸ್ಕರ ನೀನು ಪರಿತಪಿಸುತ್ತಿರುವೆಯೋ ಅಂತಹ ಮಹಾ ಧನುರ್ಧಾರಿಯಾದ, ಎಲ್ಲ ಶಸ್ತ್ರವೇತ್ತರಲ್ಲಿ ಶ್ರೇಷ್ಠನಾದ ಕರ್ಣನೂ ಉತ್ತಮವಾದ ಸಿದ್ಧಿಯನ್ನು ಹೊಂದಿರುವನು.

ತಂ ಪಶ್ಯ ಪುರುಷವ್ಯಾಘ್ರಮಾದಿತ್ಯತನಯಂ ವಿಭೋ ।
ಸ್ವಸ್ಥಾನಸ್ಥಂ ಮಹಾಬಾಹೋ ಜಹಿ ಶೋಕಂ ನರರ್ಷಭ ॥೨೨॥

ಹೇ ವಿಭುವೇ, ನರಶ್ರೇಷ್ಠನೇ, ಪುರುಷಸಿಂಹನಾದ ಆ ಸೂರ್ಯನ ಮಗನನ್ನು ನೋಡು. ಹೇ ಮಹಾಬಾಹುವೇ, ಅವನು ಸ್ವಸ್ಥಾನದಲ್ಲೇ ಇರುವನು. ಆದ್ದರಿಂದ ಶೋಕವನ್ನು ಬಿಡು.

ಭ್ರಾತೄನ್ ಪುತ್ರಾಂಸ್ತಥಾ ಪಶ್ಯ ಸ್ವಪಕ್ಷ್ಯಾಂಶ್ಚೈವ ಪಾರ್ಥಿವಾನ್ ।
ಸ್ವಂ ಸ್ವಂ ಸ್ಥಾನಮನುಪ್ರಾಪ್ತಾನ್ ವ್ಯೇತು ತೇ ಮಾನಸೋ ಜ್ವರಃ ॥೨೩॥

ಸಹೋದರರನ್ನೂ, ಅಂತೆಯೇ ಪುತ್ರರನ್ನೂ, ಹಾಗೆಯೇ ನಿನ್ನ ಪಕ್ಷದಲ್ಲಿದ್ದ ರಾಜರನ್ನೂ, ಅವರು ತಮ್ಮ ತಮ್ಮ ಸ್ಥಾನ ಪಡೆದಿದ್ದಾರೆ ಎಂದೂ ನೋಡು. ನಿನ್ನ ಮಾನಸಿಕ ವೇದನೆಯು ಕಳೆಯಲಿ.

ಕೃಚ್ಛ್ರಂ ಪೂರ್ವಂ ಚಾನುಭೂಯ ಇತಃಪ್ರಭೃತಿ ಕೌರವ ।
ವಿಹರಸ್ವ ಮಯಾ ಸಾರ್ಧಂ ಗತಶೋಕೋ ನಿರಾಮಯಃ ॥೨೪॥

ಹೇ ಕೌರವನೇ, ಮೊದಲು ಕಷ್ಟವನ್ನು ಅನುಭವಿಸಿ ಇನ್ನು ಮುಂದೆ ಶೋಕವಿಲ್ಲದೆ, ಯಾವುದೇ ಉಪಟಳವಿಲ್ಲದೆ ನನ್ನೊಂದಿಗೆ ವಿಹರಿಸು.

ಕರ್ಮಣಾಂ ತಾತ ಪುಣ್ಯಾನಾಂ ಜ್ಞಾನಾನಾಂ ತಪಸಾಂ ಸ್ವಯಮ್ ।
ದಾನಾನಾಂ ಚ ಮಹಾಬಾಹೋ ಫಲಂ ಪ್ರಾಪ್ನುಹಿ ಪಾರ್ಥಿವ ॥೨೫॥

ಮಗು, ಮಹಾಬಾಹುವಾದ ರಾಜನೇ, ನೀನು ಮಾಡಿದ ಪುಣ್ಯಕರ್ಮಗಳ, ಜ್ಞಾನದ, ತಪಸ್ಸಿನ, ದಾನಗಳ ಫಲವನ್ನು ಸ್ವಯಂ ಅನುಭವಿಸು.

ಉಪರ್ಯುಪರಿ ರಾಜ್ಞಾಂ ಹಿ ತವ ಲೋಕಾ ಯುಧಿಷ್ಠಿರ ।
ಹರಿಶ್ಚಂದ್ರಸಮಃ ಪಾರ್ಥ ಯೇಷು ತ್ವಂ ವಿಹರಿಷ್ಯಸಿ ॥೨೬॥

ಹೇ ಯುಧಿಷ್ಠಿರನೇ, ನಿನ್ನ ಲೋಕಗಳು ಇತರ ರಾಜರ ಲೋಕಗಳಿಗಿಂತ ತುಂಬಾ ಮೇಲೆ ಇವೆ. ಹೇ ಪಾರ್ಥನೇ, ಹರಿಶ್ಚಂದ್ರನಿಗೆ ಸಮನಾಗಿ ಆ ಯಾವ ಲೋಕಗಳಲ್ಲಿ ನೀನು ವಿಹರಿಸುವೆ.

ಮಾಂಧಾತಾ ಯತ್ರ ರಾಜರ್ಷಿರ್ಯತ್ರ ರಾಜಾ ಭಗೀರಥಃ ।
ದೌಷ್ಯಂತಿರ್ಯತ್ರ ಭರತಸ್ತತ್ರ ತ್ವಂ ವಿಹರಿಷ್ಯಸಿ ॥೨೭॥

ಎಲ್ಲಿ ರಾಜರ್ಷಿಯಾದ ಮಾಂಧಾತ ಇರುವನೋ, ಎಲ್ಲಿ ರಾಜನಾದ ಭಗೀರಥನಿರುವನೋ, ಎಲ್ಲಿ ದುಷ್ಯಂತನ ಮಗನಾದ ಭರತನಿರುವನೋ ಅಲ್ಲಿ ನೀನು ವಿಹರಿಸಲಿರುವೆ.

ಏಷಾ ದೇವನದೀ ಪುಣ್ಯಾ ಪಾರ್ಥ ತ್ರೈಲೋಕ್ಯಪಾವನೀ ।
ಆಕಾಶಗಂಗಾ ರಾಜೇಂದ್ರ ತತ್ರಾಪ್ಲುತ್ಯ ಗಮಿಷ್ಯಸಿ ॥೨೮॥

ಹೇ ರಾಜಶ್ರೇಷ್ಠನಾದ ಪಾರ್ಥನೇ, ಇದು ದೇವನದಿಯಾದ ಮಂಗಳಮಯವಾದ ಮೂರುಲೋಕಗಳನ್ನು ಪವಿತ್ರಗೊಳಿಸುವ ಆಕಾಶಗಂಗೆಯಾಗಿದೆ. ಅಲ್ಲಿ ಮುಳುಗೆದ್ದು ಮುಂದೆ ಹೋಗು.

ಅತ್ರ ಸ್ನಾತಸ್ಯ ಭಾವಸ್ತೇ ಮಾನುಷೋ ವಿಗಮಿಷ್ಯತಿ ।
ಗತಶೋಕೋ ನಿರಾಯಾಸೋ ಮುಕ್ತವೈರೋ ಭವಿಷ್ಯಸಿ ॥೨೯॥

ಅಲ್ಲಿ ಸ್ನಾನ ಮಾಡಿದಾಗ ನಿನ್ನ ಮಾನುಷಸ್ವಭಾವವು ಇಲ್ಲವಾಗುವುದು. ಆಗ ನೀನು ದ್ವೇಷವನ್ನು ತೊರೆದು ಶೋಕ ಮತ್ತು ಶ್ರಮಗಳು ಇಲ್ಲದವನಾಗುವಿ'.

ಏವಂ ಬ್ರುವತಿ ದೇವೇಂದ್ರೇ ಕೌರವೇಂದ್ರಂ ಯುಧಿಷ್ಠಿರಮ್ ।
ಧರ್ಮೋ ವಿಗ್ರಹವಾನ್ ಸಾಕ್ಷಾದುವಾಚ ಸುತಮಾತ್ಮನಃ ॥೩೦॥

ಕೌರವಶ್ರೇಷ್ಠನಾದ ಯುಧಿಷ್ಠಿರನನ್ನು ಕುರಿತು ದೇವೇಂದ್ರನು ಹೀಗೆ ಹೇಳಿದೊಡನೆಯೇ ಮೂರ್ತಿವೆತ್ತನಾದ ಸಾಕ್ಷಾತ್ ಯಮಧರ್ಮನೇ ತನ್ನ ಮಗನನ್ನು ಕುರಿತು ಹೀಗೆ ಹೇಳಿದನು.

ಭೋ ಭೋ ರಾಜನ್ ಮಹಾಪ್ರಾಜ್ಞ ಪ್ರೀತೋಸ್ಮಿ ತವ ಪುತ್ರಕ ।
ಮದ್ಭಕ್ತ್ಯಾ ಸತ್ಯವಾಕ್ಯೈಶ್ಚ ಕ್ಷಮಯಾ ಚ ದಮೇನ ಚ ॥೩೧॥

'ಹೇ ಮಹಾಪ್ರಾಜ್ಞನಾದ ರಾಜನೇ, ಮಗನೇ, ನಿನ್ನ ಸತ್ಯವಾದ ಮಾತುಗಳಿಂದಲೂ, ಕ್ಷಮೆಯಿಂದಲೂ, ಇಂದ್ರಿಯನಿಗ್ರಹದಿಂದಲೂ, ನನ್ನ ಮೇಲಿನ ಭಕ್ತಿಯಿಂದಲೂ ನಾನು ಪ್ರೀತನಾಗಿರುವೆ.

ಏಷಾ ತೃತೀಯಾ ಜಿಜ್ಞಾಸಾ ತವ ರಾಜನ್ ಕೃತಾ ಮಯಾ ।
ನ ಶಕ್ಯಸೇ ಚಾಲಯಿತುಂ ಸ್ವಭಾವಾತ್ ಪಾರ್ಥ ಹೇತುಭಿಃ ॥೩೨॥

ಹೇ ರಾಜನೇ, ಇದು ನಾನು ನಿನಗೆ ಒಡ್ಡಿದ ಮೂರನೆಯ ಪರೀಕ್ಷೆಯಾಗಿದೆ. ಹೇ ಪಾರ್ಥನೇ, ಯಾವುದೇ ಆಮಿಷಗಳಿಂದಲೂ ನೀನು ನಿನ್ನ ಸ್ವಾಭಾವಿಕ ನಿಷ್ಠೆಯನ್ನು ಬಿಟ್ಟು ಅಲುಗಾಡುವಂತೆ ಮಾಡುವುದು ಯಾರಿಗೂ ಶಕ್ಯವಿಲ್ಲ.

ಅದ್ಯ ತ್ವಾಂ ದೇವಗಂಧರ್ವಾ ದಿವ್ಯಾಶ್ಚಾಪ್ಸರಸೋ ದಿವಿ ।
ಉಪಸೇವಂತು ಕಲ್ಯಾಣಂ ವಿರಜೋಂಬರಭೂಷಣಾಃ ॥೩೩॥

ಇಂದು ಮಂಗಳಮಯನಾದ ನಿನ್ನನ್ನು ದೇವಲೋಕದಲ್ಲಿರುವ ದೇವ-ಗಂಧರ್ವರೂ, ದಿವ್ಯರಾದ ಅಪ್ಸರಸ್ತ್ರೀಯರೂ, ಶುಭ್ರವಸ್ತ್ರಾಭರಣಗಳೊಂದಿಗೆ ಸೇವಿಸಲಿ.

ರಾಜಸೂಯಜಿತಾನ್ ಲೋಕಾನಶ್ವಮೇಧಾಭಿನಿರ್ಮಿತಾನ್ ।
ಪ್ರಾಪ್ನುಹಿ ತ್ವಂ ಮಹಾಬಾಹೋ ತಪಸಶ್ಚ ಮಹಾಫಲಮ್ ॥೩೪॥

ಹೇ ಮಹಾಬಾಹುವೇ, ನೀನು ರಾಜಸೂಯಯಾಗದಿಂದ ಗೆದ್ದ ಲೋಕಗಳನ್ನೂ, ಅಶ್ವಮೇಧಯಾಗದಿಂದ ಪ್ರಾಪ್ತವಾದ ಲೋಕಗಳನ್ನೂ, ಈ ಹಿಂದೆ ನಡೆಸಿದ ತಪಸ್ಸಿನ ಮಹಾಫಲವನ್ನೂ ಹೊಂದಲಿರುವೆ.

ಪೂರ್ವಂ ಪರೀಕ್ಷಿತೋ ಹಿ ತ್ವಂ ಪ್ರಶ್ನಾದ್ ದ್ವೈತವನೇ ಮಯಾ ।
ಅರಣೇಸಹಿತಸ್ಯಾರ್ಥೇ ತಚ್ಚ ನಿಸ್ತೀರ್ಣವಾನಸಿ ॥೩೫॥

ಹಿಂದೆ ನೀನು ದ್ವೈತವನದಲ್ಲಿ ಅರಣಿಯನ್ನು ಹುಡುಕಿಕೊಂಡು ಬಂದಿದ್ದಾಗ ನನ್ನಿಂದ ಪ್ರಶ್ನೆಯ ಮೂಲಕ ಪರೀಕ್ಷೆಗೆ ಒಳಪಟ್ಟಿದ್ದೆ. ಅಲ್ಲೂ ನೀನು ತೇರ್ಗಡೆಯಾಗಿದ್ದೆ.

ಸೋದರ್ಯೇಷು ವಿನಷ್ಟೇಷು ದ್ರೌಪದ್ಯಾ ತತ್ರ ಭಾರತ ।
ಶ್ವರೂಪಧಾರಿಣಾ ತತ್ರ ಪುನಸ್ತ್ವಂ ಮೇ ಪರೀಕ್ಷಿತಃ ॥೩೬॥

ಹೇ ಭಾರತನೇ, ದ್ರೌಪದಿಯೊಂದಿಗೆ ನಿನ್ನ ಸಹೋದರರೆಲ್ಲರೂ ನಾಶವಾಗಿದ್ದಾಗ ಶ್ವಾನದ ರೂಪವನ್ನು ಧರಿಸಿ ಮತ್ತೆ ನಿನ್ನನ್ನು ಪರೀಕ್ಷಿಸಿದ್ದೆ.

ಇದಂ ತೃತೀಯಂ ಭ್ರಾತೄಣಾಮರ್ಥೇ ಯತ್ತ್ವಾಸ್ಥಾತುಮಿಚ್ಛಸಿ ।
ವಿಶುದ್ಧೋಸಿ ಮಹಾಭಾಗ ಸುಖೀ ವಿಗತಕಲ್ಮಷಃ ॥೩೭॥

ಇದು ನಿನಗೆ ಮೂರನೆಯ ಪರೀಕ್ಷೆಯಾಗಿದ್ದು, ಸಹೋದರರಿಗೋಸ್ಕರ ನೀನೇನು ಇಲ್ಲಿರಲು ಬಯಸಿರುವೆಯೋ ಹೇ ಮಹಾನುಭಾವನೇ, ಈ ಪರೀಕ್ಷೆಯಲ್ಲೂ ನೀನು ಶುದ್ಧನಾಗಿದ್ದು, ಯಾವುದೇ ಕಲ್ಮಷವಿಲ್ಲದೆ ಸುಖಾರ್ಹನಾಗಿರುವೆ.

ನ ಚ ತೇ ಭ್ರಾತರಃ ಪಾರ್ಥ ನರಕಾರ್ಹಾ ವಿಶಾಂಪತೇ ।
ಮಾಯೈಷಾ ದೇವರಾಜೇನ ಮಹೇಂದ್ರೇಣ ಪ್ರಯೋಜಿತಾ ॥೩೮॥

ಹೇ ಜನಾಧಿಪತಿಯಾದ ಪಾರ್ಥನೇ, ನಿನ್ನ ಸಹೋದರರು ನರಕಯೋಗ್ಯರಲ್ಲವೇ ಅಲ್ಲ. ಇದು ದೇವರಾಜನಾದ ಮಹೇಂದ್ರನಿಂದ ಪ್ರಯೋಗಿಸಲ್ಪಟ್ಟ ಮಾಯೆಯಾಗಿದೆ.

ಅವಶ್ಯಂ ನರಕಾ ಪಾರ್ಥ ದ್ರಷ್ಟವ್ಯಾಃ ಸರ್ವರಾಜಭಿಃ ।
ತತಸ್ತ್ವಯಾ ಪ್ರಾಪ್ತಮಿದಂ ಮುಹೂರ್ತಂ ದುಃಖಮುತ್ತಮಮ್ ॥೩೯॥

ಹೇ ಪಾರ್ಥನೇ, ಎಲ್ಲ ರಾಜರು ಅವಶ್ಯವಾಗಿ ನರಕವನ್ನು ನೋಡಲೇಬೇಕು. ಆದ್ದರಿಂದಲೇ ಅತಿಯಾದ ಈ ದುಃಖವು ಒಂದು ಮುಹೂರ್ತದ ಕಾಲ ನಿನ್ನಿಂದ ಪ್ರಾಪ್ತವಾಗಿದೆ.

ನ ಸವ್ಯಸಾಚೀ ಭೀಮೋ ವಾ ಯಮೌ ವಾ ಪುರುಷರ್ಷಭೌ ।
ಕರ್ಣೋ ವಾ ಸತ್ಯವಾಕ್ ಶೂರೋ ನರಕಾರ್ಹಾ ವಿಶಾಂಪತೇ ॥೪೦॥

ಹೇ ವಿಶಾಂಪತಿಯೇ, ಸವ್ಯಸಾಚಿಯಾದ ಅರ್ಜುನನಾಗಲೀ, ಭೀಮನಾಗಲೀ, ಪುರುಷಶ್ರೇಷ್ಠರಾದ ಅವಳಿ ಮಕ್ಕಳಾಗಲೀ, ಸತ್ಯವಾದ ಮಾತುಗಳುಳ್ಳ ಶೂರನಾದ ಕರ್ಣನಾಗಲೀ ನರಕಾರ್ಹರು ಅಲ್ಲವೇ ಅಲ್ಲ.

ನ ಕೃಷ್ಣಾ ರಾಜಪುತ್ರೀ ಚ ನರಕಾರ್ಹಾ ಕಥಂಚನ ।
ಏಹ್ಯೇಹಿ ಭರತಶ್ರೇಷ್ಠ ಪಶ್ಯ ಚೇಮಾಂತ್ರಿಲೋಕಗಾಮ್ ॥೪೧॥

ಹಾಗೆಯೇ ರಾಜಪುತ್ರಿಯಾದ ಕೃಷ್ಣೆಯಾಗಲೀ ಇವರ್ಯಾರೂ ಯಾವುದೇ ರೀತಿಯಿಂದ ನರಕಾರ್ಹರಲ್ಲ. ಹೇ ಭರತಶ್ರೇಷ್ಠನೇ, ಮೂರುಲೋಕದಲ್ಲಿ ಹರಿಯುವ ಈ ಗಂಗೆಯನ್ನು ನೋಡು, ಅಲ್ಲಿ ಬಾ'.

ವೈಶಂಪಾಯನಃ

ಏವಮುಕ್ತಃ ಸ ರಾಜರ್ಷಿಸ್ತವ ಪೂರ್ವಪಿತಾಮಹಃ ।
ಜಗಾಮ ಸಹ ಧರ್ಮೇಣ ಸರ್ವೈಶ್ಚ ತ್ರಿದಿವಾಲಯೈಃ ॥೪೨॥

ವೈಶಂಪಾಯನ– ಯಮಧರ್ಮನು ಹೀಗೆ ಹೇಳಿದಾಗ ನಿನ್ನ ಪಿತಾಮಹನಿಗೂ ಪೂರ್ವಜನಾದ ರಾಜರ್ಷಿಯಾದ ಆ ಧರ್ಮರಾಜನು ಯಮಧರ್ಮ ಹಾಗೂ ಎಲ್ಲ ದೇವತೆಗಳೊಂದಿಗೆ ಗಂಗೆಯ ಸಮೀಪಕ್ಕೆ ತೆರಳಿದನು.

ಗಂಗಾಂ ದೇವನದೀಂ ಪುಣ್ಯಾಂ ಪಾವನೀಮೃಷಿಸಂಸ್ತುತಾಮ್ ।
ಅವಗಾಹ್ಯ ತತೋ ರಾಜಾ ತನುಂ ತತ್ಯಾಜ ಮಾನುಷೀಮ್ ॥೪೩॥

ದೇವನದಿಯಾದ, ಮಂಗಳಮಯಳಾದ, ಎಲ್ಲ ರೀತಿಯ ಪಾವಿತ್ರ್ಯವನ್ನು ತಂದುಕೊಡುವ, ಋಷಿಗಳಿಂದ ಸ್ತೋತ್ರಗೈಯ್ಯಲ್ಪಟ್ಟ ಗಂಗೆಯಲ್ಲಿ ಮುಳುಗಿದ ನಂತರ ರಾಜನಾದ ಯುಧಿಷ್ಠಿರನು ಮಾನುಷ ಶರೀರವನ್ನು ತೊರೆದನು.

ತತೋ ದಿವ್ಯವಪುರ್ಭೂತ್ವಾ ಧರ್ಮರಾಜೋ ಯುಧಿಷ್ಠಿರಃ ।
ನಿರ್ವೈರೋ ಗತಸಂತಾಪೋ ಜಲೇ ತಸ್ಮಿನ್ ಸಮಾಪ್ಲುತಃ ॥೪೪॥

ಆ ನೀರಿನಲ್ಲಿ ಮುಳುಗೆದ್ದ ನಂತರ ಧರ್ಮರಾಜನಾದ ಯುಧಿಷ್ಠಿರನು ದಿವ್ಯವಾದ ಶರೀರವನ್ನು ಹೊಂದಿ, ಹಗೆತನವನ್ನು ಹೋಗಲಾಡಿಸಿಕೊಂಡು, ಸಂತಾಪವಿಲ್ಲದವನಾದನು.

ತತೋ ಯಯೌ ವೃತೋ ದೇವೈಃ ಕುರುರಾಜೋ ಯುಧಿಷ್ಠಿರಃ ।
ಧರ್ಮೇಣ ಸಹಿತೋ ಧೀಮಾಸ್ತೂಯಮಾನೋ ಮಹರ್ಷಿಭಿಃ ॥೪೫॥

ಯತ್ರ ತೇ ಪುರುಷವ್ಯಾಘ್ರಾಃ ಶೂರಾ ವಿಗತಮನ್ಯವಃ ।
ಪಾಂಡವಾ ಧಾರ್ತರಾಷ್ಟ್ರಾಶ್ಚ ಸ್ವಾನಿ ಸ್ಥಾನಾನಿ ಭೇಜಿರೇ ॥೪೬॥

ಅನಂತರ ಕುರುರಾಜನಾದ, ಧೀಮಂತನಾದ ಯುಧಿಷ್ಠಿರನು ದೇವತೆಗಳಿಂದ ಸುತ್ತುವರಿಯಲ್ಪಟ್ಟ ಯಮಧರ್ಮನೊಂದಿಗೆ ಮಹರ್ಷಿಗಳಿಂದ ಹೊಗಳಿಸಿಕೊಳ್ಳುತ್ತಾ ಪುರುಷಶ್ರೇಷ್ಠರಾದ, ಶೂರರಾದ, ಪರಸ್ಪರ ಕೋಪವಿಲ್ಲದ ಪಾಂಡವರು ಮತ್ತು ಧೃತರಾಷ್ಟ್ರನ ಮಕ್ಕಳು ತಮಗೆ ಯೋಗ್ಯವಾದ ಸ್ಥಾನವನ್ನು ಎಲ್ಲಿ ಪಡೆದಿದ್ದರೋ ಅಲ್ಲಿಗೆ ತೆರಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ವರ್ಗಾರೋಹಣಪರ್ವಣಿ ಯುಧಿಷ್ಠಿರಸ್ಯ ಮಂದಾಕಿನ್ಯಾಂ ಸ್ನಾತ್ವಾ ಮಾನುಷದೇಹಂ ತ್ಯಕ್ತ್ವಾ ಯಮಧರ್ಮಾದಿದೇವೈಃ ಸಹ ಸ್ವರ್ಗಾರೋಹಣಂ ನಾಮ ತೃತೀಽಯೋಧ್ಯಾಯಃ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೨ನೇ ಅಧ್ಯಾಯ

ತತಸ್ತು ಪಾರ್ಥಾ ಅಖಿಲಾಃ ಸ್ವಮೂಲ-
ರೂಪೈಃ ಸಹೈವಾವಿವಿಶುರ್ಮುದಾऽನ್ವಿತಾಃ ।
ಸ್ವೀಯಾನಿ ಧಾಮಾನಿ ತತೋऽಪ್ಯನೂನ-
ಭೋಗಾಃ ಸದಾರಾ ನ್ಯವಸಂಶ್ಚ ತತ್ರ ॥

ಬಳಿಕ ಎಲ್ಲ ಪಾಂಡವರೂ ಸಂತುಷ್ಟರಾಗಿ, ತಮ್ಮ ಮೂಲರೂಪಗಳೊಂದಿಗೆ ತಮ್ಮ ಲೋಕಗಳನ್ನು ಪ್ರವೇಶಿಸಿದರು. ಮೂಲರೂಪಗಳಿಗಿಂತ ಕಡಿಮೆಯಲ್ಲದ ಭೋಗ ಉಳ್ಳವರಾಗಿ ಪತ್ನೀಸಮೇತರಾಗಿ ಅಲ್ಲಿ ವಾಸ ಮಾಡಿದರು.

ತತ್ರಾಪಿ ಕೃಷ್ಣೇನ ಸಮಾಗಮೋऽಭೂತ್
ಪುರೇವ ತೇಷಾಮತಿತತ್ಪರಾಣಾಮ್ ।
ಚಿಕ್ರೀಡ ವಿಭಿಃ ಸಹಿತಸ್ತಥೈವ
ಕೃಷ್ಣೋऽಪಿ ತದ್ವತ್ ಸರಥೋऽರ್ಜುನೇನ ॥

ಅಲ್ಲಿಯೂ ಅತ್ಯಂತ ಕೃಷ್ಣಭಕ್ತರಾದ ಪಾಂಡವರಿಗೆ ಹಿಂದಿನಂತೆ ಶ್ರೀಕೃಷ್ಣನೊಡನೆ ಸಮಾಗಮವಾಯಿತು. ಶ್ರೀಕೃಷ್ಣನು ಹಾಗೇ ಪಾಂಡವರೊಡನೆ ವಿಹರಿಸಿದನು. ಹಿಂದಿನಂತೆಯೆ ರಥವೇರಿ ಅರ್ಜುನನೊಡನೆ ವಿಹರಿಸಿದನು.

ಅನ್ಯೇ ಚ ದೇವಾಂಶಭವಾಃ ಸಮಸ್ತಾಃ
ಸ್ವಮೂಲರೂಪೈಕ್ಯಮವಾಪುರಾಶು ।
ಕರ್ಮಕ್ಷಯಾದೇವ ಸುರೇತರಾಸ್ತು
ಪುಣ್ಯಕ್ಷಯಂ ಪ್ರಾಪ್ಯ ಭುವಿ ಪ್ರಜಾತಾಃ ॥

ಚತುಃಸಹಸ್ರಂ ತ್ರಿಶತೋತ್ತರಂ ತೇ
ಸಂವತ್ಸರಾಣಾಮನುಭೂಯ ದಿವ್ಯಾನ್ ।
ಭೋಗಾನ್ ನರತ್ವೇऽಪಿ ಸದೇಶ್ವರೋऽಹ-
ಮಸಜ್ಜಗಚ್ಚೇತಿ ಧಿಯಾऽऽಪ್ನುವಂಸ್ತಮಃ ॥

ಬೇರೆ ದ್ರೋಣರು ಮುಂತಾದ ದೇವಾಂಶಸಂಭೂತರೆಲ್ಲರೂ ಪ್ರಾರಬ್ಧ ಕರ್ಮಕ್ಷಯದಿಂದಲೆ ಬೇಗನೆ ತಮ್ಮ ಮೂಲರೂಪಗಳೊಂದಿಗೆ ಐಕ್ಯಹೊಂದಿದರು. ಅಸುರರು ನಾಲ್ಕು ಸಾವಿರದ ಮುನ್ನೂರು ವರ್ಷಪರ್ಯಂತ ವೀರಸ್ವರ್ಗದಲ್ಲಿ ದಿವ್ಯ ಭೋಗಗಳನ್ನು ಅನುಭವಿಸಿ, ಪುಣ್ಯಕ್ಷಯ ಹೊಂದಿ ಭೂಲೋಕದಲ್ಲಿ ಹುಟ್ಟಿದರು. ಆಗ ಮನುಷ್ಯರಾಗಿ ಹುಟ್ಟಿ ಸದಾ ನಾನೇ ಭಗವಂತ, ಜಗತ್ತು ಸುಳ್ಳು ಎಂಬ ಉಪಾಸನೆಯಿಂದ ತಮಸ್ಸನ್ನು ಸಂಪಾದಿಸಿಕೊಂಡರು.

ದುಃಖೇऽಪಿ ತೇಷಾಮಿಹ ತಾರತಮ್ಯಂ
ಕಲೇಃ ಪರಂ ದುಃಖಮಿಹಾಖಿಲಾಚ್ಚ।
ಯಥಾ ವಿರಿಂಚಸ್ಯ ಸುಖಂ ಪರಂ ಸ್ಯಾ-
ನ್ಮುಕ್ತೌ ಹರಿದ್ವೇಷಕೃತೋ ವಿಶೇಷಃ ॥

ಅಂಧಂತಮಸ್ಸಿನಲ್ಲಿ ಅಸುರರಿಗೂ ದುಃಖದಲ್ಲಿ ತಾರತಮ್ಯವಿದೆ. ಅಸುರರಲ್ಲಿ ಎಲ್ಲರಿಗಿಂತ ಕಲಿಗೆ ಹೆಚ್ಚು ದುಃಖ. ಮುಕ್ತಿಯಲ್ಲಿ ಬ್ರಹ್ಮನಿಗೆ ಹೇಗೆ ಎಲ್ಲರಿಗಿಂತ ಹೆಚ್ಚು ಸುಖವೋ ಹಾಗೆ. ಅಸುರರಿಗೆ ಹರಿದ್ವೇಷ ತಾರತಮ್ಯದಿಂದ ದುಃಖದಲ್ಲಿ ತಾರತಮ್ಯ.

ಕೇಚಿತ್ ಪಿಶಾಚಾಸುರರಾಕ್ಷಸತ್ವ-
ಮವಾಪ್ಯ ವಿಷ್ಣೋರಪಿ ತತ್ಪರಾಣಾಮ್ ।
ದ್ವೇಷಾತ್ತಮೋऽಂಧಂ ತ್ವರಯಾ ಸಮಾಪ್ನುಯು-
ರ್ದೇವಾಃ ಸ್ವಕಾಲೇ ನಿಜಯೋಗ್ಯಮುಕ್ತಿಮ್ ॥

ಎಲ್ಲ ಅಸುರರೂ ಮನುಷ್ಯರಾಗಿ ಹುಟ್ಟುವುದಿಲ್ಲ. ಕೆಲವರು ಪಿಶಾಚ, ಅಸುರ, ರಾಕ್ಷಸಜನ್ಮ ಪಡೆದು ವಿಷ್ಣು-ವೈಷ್ಣವದ್ವೇಷದಿಂದ ಬೇಗನೆ ಅಂಧಂತಮಸ್ಸನ್ನು ಹೊಂದುತ್ತಾರೆ. ದೇವತೆಗಳು ಸ್ವರೂಪಯೋಗ್ಯತಾನುಗುಣಸಾಧನೆ ಪೂರ್ತಿಯಾದಾಗಲೆ ತಮಗೆ ಯೋಗ್ಯವಾದ ಮುಕ್ತಿಯನ್ನು ಹೊಂದುವರು.

ಚತುಃಸಹಸ್ರೇ ತ್ರಿಶತೋತ್ತರೇ ಗತೇ
ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ
ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥

ಆ ಭೀಮನೇ ಕಲಿಯುಗದಲ್ಲಿ ನಾಲ್ಕು ಸಾವಿರದ ಮುನ್ನೂರು ವರ್ಷಗಳು ಕಳೆದಾಗ ಪುನಃ ಬ್ರಾಹ್ಮಣನಾಗಿ ಹುಟ್ಟಿ, ದೈತ್ಯರಿಂದ ಮರೆಮಾಡಲ್ಪಟ್ಟ ಹರಿತತ್ತ್ವವನ್ನು ಉಪದೇಶಿಸಿದನು.

ತದೈವ ಕೃಷ್ಣಾಪಿ ಭುವಿ ಪ್ರಜಾತಾ
ಪ್ರೀತ್ಯೈ ಹರೇರಂಧತಮಸ್ಯಪಾತಯತ್ ।
ಮಹಾಸುರಾನ್ ವಿಷ್ಣುಪರಾರ್ಜುನಾದ್ಯಾಃ
ಕೃತೇ ಪ್ರಜಾತಾ ಹರಿತೋಷಣಾಯ ।
ಪುನಶ್ಚ ತೇ ಸ್ಥಾನಮವಾಪ್ಯ ಸರ್ವೇ
ಸ್ವೀಯಂ ಪರಾಂತೇ ತು ವಿಮುಕ್ತಿಮಾಪ್ನುಯುಃ ॥

ಆಗಲೇ ದ್ರೌಪದಿಯೂ ಭೂಮಿಯಲ್ಲಿ ಅವತರಿಸಿ, ವಿಷ್ಣುಪ್ರೀತಿಗಾಗಿ ಮಹಾ ಅಸುರರನ್ನು ಅಂಧಂತಮಸ್ಸಿನಲ್ಲಿ ಬೀಳಿಸಿದಳು. ವಿಷ್ಣುಭಕ್ತರಾದ ಅರ್ಜುನ ಮುಂತಾದವರು ಹರಿಪ್ರೀತಿಗಾಗಿ ಮುಂದಿನ ಕೃತಯುಗದಲ್ಲಿ ವಿಕುಕ್ಷಿ ಮುಂತಾದ ರಾಜರಾಗಿ ಹುಟ್ಟಿ, ಪುನಃ ತಮ್ಮ ಸ್ಥಾನವನ್ನು ಹೊಂದಿ, ಬ್ರಹ್ಮಪ್ರಳಯಾನಂತರ ಮುಕ್ತಿಯನ್ನು ಹೊಂದುವರು.

ವಾಯುತ್ವಮಾಪ್ತಃ ಸ ಹನೂಮದಂಶೋ
ಬ್ರಾಹ್ಮಂ ಪದಂ ಪ್ರಾಪ್ಯ ವೃಕೋದರಶ್ಚ ।
ವಾಗೀಶ್ವರೀತ್ವಂ ಗತಯೈವ ಕೃಷ್ಣಯಾ
ಸಹೈವ ಮುಕ್ತಿಂ ಗಮಿತಾऽಖಿಲೋತ್ತಮಾಮ್ ॥

ಹನುಮಂತನೆಂಬ ಅಂಶವೂ ಭೀಮ ಎಂಬ ಅಂಶವೂ ವಾಯುವಿನೊಡನೆ ಐಕ್ಯಹೊಂದಿ ಬ್ರಹ್ಮಪದವಿಯನ್ನು ಪಡೆದು, ಸರಸ್ವತೀ ಪದವಿಯನ್ನು ಹೊಂದಿದ ಭಾರತಿಯೊಂದಿಗೆ ಎಲ್ಲರಿಗಿಂತ ಉತ್ತಮವಾದ ಮುಕ್ತಿಯನ್ನು ಹೊಂದುವುದು.

ಭುವಿ ದ್ಯುಲೋಕೇ ಚ ವಿರಿಂಚತಾಯಾಂ
ಮುಕ್ತೌ ಚ ತಾಭ್ಯಾಮಧಿಕಂ ಸಮಸ್ತಾತ್ ।
ಸಂತೋಷ್ಯತೇ ಪೂರ್ಣಗುಣೋ ರಮೇಶಃ
ಸದೈವ ನಿತ್ಯೋರ್ಜಿತಸದ್ರತಿಭ್ಯಾಮ್ ॥

ಭೂಲೋಕದಲ್ಲಿಯೂ ಸ್ವರ್ಗದಲ್ಲಿಯೂ ಬ್ರಹ್ಮಪದವಿಯಲ್ಲಿಯೂ ಮುಕ್ತಿಯಲ್ಲಿಯೂ ಸದಾ ನಿತ್ಯ ಉತ್ಕೃಷ್ಟ ವಿಷ್ಣುಭಕ್ತಿಯುಳ್ಳ ವಾಯು-ಭಾರತಿಯರು ಪೂರ್ಣಗುಣನಾದ ರಮೇಶನನ್ನು ಎಲ್ಲ ಜೀವಸಮೂಹಕ್ಕಿಂತ ಅಧಿಕವಾಗಿ ಸಂತೋಷಪಡಿಸುವರು.

ಭೂಷನ್ನಯೋಧಿ ಬಭ್ರೂಷು ನಮ್ನತೇ
ಬಳಿತ್ಥಾ ತದ್ ವಪುಷೇ ಧಾಯಿ ದರ್ಶತಮ್ ।
ತಾಂ ಸು ತೇ ಕೀರ್ತಿಂ ಮಘವನ್ಮಹಿತ್ವಾ-
ಇತ್ಯಾದಿಸೂಕ್ತಾನಿ ಚ ತತ್ಪ್ರಮಾಣಮ್ ॥

'ಭೂಷನ್ನಯೋಧಿ ಬಭ್ರೂಷು ನಮ್ನತೇ' 'ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ' 'ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ' ಇತ್ಯಾದಿ ಸೂಕ್ತಗಳು ಈ ವಿಷಯದಲ್ಲಿ ಪ್ರಮಾಣಗಳು.

ಅನ್ಯಾನಿ ವಾಕ್ಯಾನಿ ಚ ವೈದಿಕಾನಿ
ಸಪಂಚರಾತ್ರೋಕ್ತಿಪುರಾಣಕಾನಿ ।
ಪೃಷ್ಟಶ್ಚ ಭೀಷ್ಮೋಽತ್ರ ಯುಧಿಷ್ಠಿರೇಣ-
ತನ್ಮೋಕ್ಷಧರ್ಮೇಷ್ವಪಿ ಕಿಂಚಿದಾಹ ॥

ಬೇರೆ ವೇದವಚನಗಳೂ ಪಂಚರಾತ್ರೋಕ್ತಿಗಳೂ, ಪುರಾಣಗಳೂ ಈ ವಿಷಯದಲ್ಲಿ ಪ್ರಮಾಣಗಳು. ಈ ವಿಷಯದಲ್ಲಿ ಧರ್ಮರಾಜ ಕೇಳಿದಾಗ, ಭೀಷ್ಮ ಮೋಕ್ಷ ಧರ್ಮಗಳಲ್ಲಿಯೂ ಸಂಕ್ಷೇಪವಾಗಿ ಇದನ್ನು ಹೇಳಿದ್ದಾನೆ.

ಏವಂ ಪ್ರಯಾತೇಷು ಸಕೇಶವೇಷು
ಸ್ವಾನೇವ ಲೋಕಾನ್ ಯದುಪಾಂಡವೇಷು ।
ಪರೀಕ್ಷಿದಾದ್ಯಾಸ್ತು ತದನ್ವಯೋತ್ಥಾ
ವ್ಯಾಸಾನುಶಿಷ್ಟಾಃ ಪೃಥಿವೀಮರಕ್ಷನ್ ॥

ಹೀಗೆ ಶ್ರೀಕೃಷ್ಣನೂ, ಯಾದವರೂ, ಪಾಂಡವರೂ ತಮ್ಮ ಲೋಕಕ್ಕೆ ಹೋದಾಗ ಅವರ ವಂಶದಲ್ಲಿ ಬಂದ ಪರೀಕ್ಷಿತ ಮುಂತಾದ ರಾಜರು ವೇದವ್ಯಾಸರಿಂದ ಉಪದಿಷ್ಟರಾಗಿ ಭೂಮಿಯನ್ನು ಆಳಿದರು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಯುಧಿಷ್ಠಿರನು ಸ್ವರ್ಗದಲ್ಲಿ ವಾಸಿಸುತ್ತಿದ್ದ ಕೃಷ್ಣ-ಕರ್ಣಾದಿಗಳನ್ನು ನೋಡುವುದು. ಇಂದ್ರನು ಯುಧಿಷ್ಠಿರನಿಗೆ ದ್ರೌಪದಿಯ ಮಕ್ಕಳೇ ಮೊದಲಾದವರು ಅವರವರಿಗೆ ಯೋಗ್ಯವಾದ ಸ್ಥಾನದಲ್ಲಿ ಇರುವರೆಂದು ಪ್ರತ್ಯೇಕವಾಗಿ ತೋರಿಸುವುದು.

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ದೇವೈಃ ಸರ್ಷಿಮರುದ್ಗಣೈಃ ।
ಪೂಜ್ಯಮಾನೋ ಯಯೌ ತತ್ರ ಯತ್ರ ತೇ ಕುರುಪುಂಗವಾಃ ॥೧॥

ವೈಶಂಪಾಯನ– ಅನಂತರ ರಾಜನಾದ ಯುಧಿಷ್ಠಿರನು ಋಷಿಗಳು ಹಾಗೂ ಮರುದ್ಗಣಗಳಿಂದ ಕೂಡಿದ ದೇವತೆಗಳಿಂದ ಪೂಜೆಗೊಳ್ಳುತ್ತಾ, ಎಲ್ಲಿ ಆ ಕುರುಶ್ರೇಷ್ಠರಿರುವರೋ ಅಲ್ಲಿಗೆ ಹೊರಟು ನಡೆದನು.

ದದರ್ಶ ತತ್ರ ಗೋವಿಂದಂ ಬ್ರಾಹ್ಮೇಣ ವಪುಷಾऽನ್ವಿತಮ್ ।
ತೇನೈವ ದೃಷ್ಟಪೂರ್ವೇಣ ಸಾದೃಶ್ಯೇನೈವ ಸೂಚಿತಮ್ ॥೨॥

ಅಲ್ಲಿ ಬ್ರಹ್ಮದೇವರಂತೆ ಕಂಗೊಳಿಸುವ ಶರೀರದಿಂದ ಕೂಡಿದ ಗೋವಿಂದನೆನಿಸಿದ ಕೃಷ್ಣನನ್ನು ಕಂಡನು. ಹಿಂದೆ ನೋಡಿದ ಕೃಷ್ಣ ಶರೀರದ ಹೋಲಿಕೆಯಿಂದಲೇ ಅದು ಕೃಷ್ಣನೇ ಎಂದು ಸೂಚಿತವಾಗಿತ್ತು.

ದೀಪ್ಯಮಾನಂ ಸ್ವವಪುಷಾ ದಿವ್ಯೈರಸ್ತ್ರೈರುಪಸ್ಥಿತಮ್ ।
ಚಕ್ರಪ್ರಭೃತಿಭಿಘೋರ್ಯೈರ್ದಿವ್ಯೈಃ ಪುರುಷವಿಗ್ರಹೈಃ ॥೩॥

ಆ ಕೃಷ್ಣನು ತನ್ನ ಶರೀರದಿಂದ ಸ್ವರ್ಗವನ್ನು ಬೆಳಗಿಸುತ್ತಾ, ಪುರುಷಾಕೃತಿಯನ್ನು ಪಡೆದ ದಿವ್ಯವಾದ ಚಕ್ರವೇ ಮೊದಲಾದ ಘೋರವಾದ ದಿವ್ಯಾಸ್ತ್ರಗಳಿಂದ ಪರಿಸೇವಿತನಾಗಿದ್ದನು.

ಉಪಾಸ್ಯಮಾನಂ ವೀರೇಣ ಫಲ್ಗುನೇನ ಸುವರ್ಚಸಾ ।
ತಥಾ ಸ್ವರೂಪಂ ಕೌಂತೇಯೋ ದದರ್ಶ ಮಧುಸೂದನಮ್ ॥೪॥

ವೀರನಾದ, ಉತ್ತಮ ವರ್ಚಸ್ವಿಯಾದ ಅರ್ಜುನನಿಂದಲೂ ಉಪಾಸಿತನಾದ, ವಿಶಿಷ್ಟಸ್ವರೂಪವುಳ್ಳ ಮಧುಸೂದನನನ್ನು ಕೌಂತೇಯನು ಕಂಡನು.

ತಾವುಭೌ ಪುರುಷವ್ಯಾಘ್ರೌ ಸಮುದ್ವೀಕ್ಷ್ಯ ಯುಧಿಷ್ಠಿರಮ್ ।
ಯಥಾವತ್ ಪ್ರತಿಪೇದಾತೇ ಪೂಜಯಾ ದೇವಪೂಜಿತೌ ॥೫॥

ಯುಧಿಷ್ಠಿರನನ್ನು ಕಂಡ ಕೂಡಲೇ ದೇವಪೂಜಿತರಾದ ಆ ಇಬ್ಬರು ಪುರುಷಶ್ರೇಷ್ಠರು ಹಿಂದಿನಂತೆಯೇ ಯಥಾಯೋಗ್ಯವಾಗಿ ಗೌರವಪೂರ್ವಕವಾಗಿ ನಡೆದುಕೊಂಡರು.

ಅಪರಸ್ಮಿನ್ನಥೋದ್ದೇಶೇ ಕರ್ಣಂ ಶಸ್ತ್ರಭೃತಾಂ ವರಮ್ ।
ದ್ವಾದಶಾದಿತ್ಯಸಹಿತಂ ದದರ್ಶ ಕುರುನಂದನಃ ॥೬॥

ಅಲ್ಲೇ ಸಮೀಪದ ಇನ್ನೊಂದು ಪ್ರದೇಶದಲ್ಲಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಹನ್ನೆರಡು ಮಂದಿ ಆದಿತ್ಯರಿಂದ ಕೂಡಿಕೊಂಡ ಕರ್ಣನನ್ನು ಕುರುನಂದನನು ಕಂಡನು.

ತಥಾಪರಸ್ಮಿನ್ನುದ್ದೇಶೇ ಮರುದ್ಗಣವೃತಂ ವಿಭುಮ್ ।
ಭೀಮಸೇನಮಥಾಪಶ್ಯತ್ತೇನೈವ ವಪುಷಾऽನ್ವಿತಮ್ ॥೭॥

ಅಲ್ಲಿಯೇ ಇನ್ನೊಂದು ಪ್ರದೇಶದಲ್ಲಿ ಮರುದ್ಗಣದಿಂದ ಸಹಿತನಾದ, ಸಮರ್ಥನಾದ, ಈ ಹಿಂದಿನಂತೆಯೇ ಶರೀರವನ್ನು ಧರಿಸಿಕೊಂಡ ಭೀಮಸೇನನನ್ನು ಕಂಡನು.

ವಾಯೋರ್ಮೂರ್ತಿಮತಃ ಪಾರ್ಶ್ವೇ ದಿವ್ಯಮೂರ್ತಿಸಮನ್ವಿತಮ್ ।
ಶ್ರಿಯಾ ಪರಮಯಾ ಯುಕ್ತಂ ಸಿದ್ಧಿಂ ಪರಮಿಕಾಂ ಗತಮ್ ॥೮॥

ಆ ಭೀಮನು ಮೂರ್ತಿಮತ್ತಾದ ವಾಯುವಿನ ಪಾರ್ಶ್ವದಲ್ಲೇ ದಿವ್ಯ ಶರೀರದಿಂದ ಕೂಡಿಕೊಂಡು ಶ್ರೇಷ್ಠವಾದ ಕಾಂತಿಯಿಂದ ಯುಕ್ತನಾಗಿ ಉತ್ಕೃಷ್ಟವಾದ ಸಿದ್ಧಿಯನ್ನು ಪಡೆದಿದ್ದನು.

ಅಶ್ವಿನೋಸ್ತು ತಥಾ ಸ್ಥಾನೇ ದೀಪ್ಯಮಾನೌ ಸ್ವತೇಜಸಾ ।
ನಕುಲಂ ಸಹದೇವಂ ಚ ದದರ್ಶ ಕುರುನಂದನಃ ॥೯॥

ಅಂತೆಯೇ ಅಶ್ವಿನೀದೇವತೆಗಳ ಸ್ಥಾನದಲ್ಲಿ ತಮ್ಮ ತೇಜಸ್ಸಿನಿಂದ ಬೆಳಗುತ್ತಿದ್ದ ನಕುಲನನ್ನೂ, ಸಹದೇವನನ್ನೂ ಕುರುನಂದನನು ಕಂಡನು.

ತಥಾ ದದರ್ಶ ಪಾಂಚಾಲೀಂ ಕಮಲೋತ್ಪಲಮಾಲಿನೀಮ್ ।
ವಪುಷಾ ಸ್ವರ್ಗಮಾಕ್ರಮ್ಯ ತಿಷ್ಠಂತೀಮರ್ಕವರ್ಚಸಮ್ ॥೧೦॥

ಹಾಗೆಯೇ ಕಮಲದ ಹೂವುಗಳ ಮಾಲೆಯನ್ನು ಧರಿಸಿರುವ, ಸೂರ್ಯನಂತೆ ಬೆಳಗುತ್ತಿರುವ, ತನ್ನ ಶರೀರದ ತೇಜಸ್ಸಿನಿಂದ ಸ್ವರ್ಗವನ್ನು ವ್ಯಾಪಿಸಿ ನಿಂತಿರುವ ಪಾಂಚಾಲಿಯನ್ನೂ ಮರುದ್ದೇವತೆಗಳ ಸಮೀಪದಲ್ಲಿರುವ ಭೀಮಸೇನನ ಸಮೀಪದಲ್ಲಿ ಕಂಡನು.

ತತ್ಸೈನಾಂ ಸಹಸಾ ರಾಜಾ ಸ್ಪಷ್ಟುಮೈಚ್ಛದ್ ಯುಧಿಷ್ಠಿರಃ ।
ತತೋಽಸ್ಯ ಭಗವಾನಿಂದ್ರಃ ಕಥಯಾಮಾಸ ದೇವರಾಟ್ ॥೧೧॥

ಶ್ರೀರೇಷಾ ದ್ರೌಪದೀರೂಪಾ ತ್ವದರ್ಥೇ ಮಾನುಷೀಕೃತಾ ।
ಅಯೋನಿಜಾ ಲೋಕಕಾಂತಾ ಪುಣ್ಯಗಂಧಾ ಯುಧಿಷ್ಠಿರ ॥೧೨॥

ರಾಜನಾದ ಯುಧಿಷ್ಠಿರನು ದ್ರೌಪದಿಯನ್ನು ಕಂಡ ಕೂಡಲೇ ಅವಳನ್ನು ಮುಟ್ಟ ಬಯಸಿದನು. ಆಗ ದೇವರಾಜನಾದ ಭಗವಾನ್ ಇಂದ್ರನು ಹೀಗೆಂದನು: 'ಹೇ ಯುಧಿಷ್ಠಿರನೇ, ಇವಳು ಭಾರತೀದೇವಿಯಾಗಿರುವಳು. ನಿಮಗೋಸ್ಕರ ಅಯೋನಿಜಳಾಗಿ, ಲೋಕಮನೋಹರಳಾಗಿ, ಮಂಗಳಮಯವಾದ ಸುವಾಸನೆಯನ್ನು ಬೀರುತ್ತಾ ದ್ರೌಪದಿಯ ರೂಪದಿಂದ ಮನುಷ್ಯಳಾಗಿ ಬಂದಿರುವಳು'.

ವ್ಯಾಖ್ಯಾನ ವಿಶೇಷ– ಹಿಂದೆ ದ್ರೌಪದೀ ದೇಹದಲ್ಲಿ ಶ್ಯಾಮಲೆಯೇ ಮೊದಲಾದ ಐದು ಮಂದಿ ಕನ್ಯೆಯರು ಸೇರಿಕೊಂಡಿದ್ದರಿಂದಲೇ ನಿಮಗೆಲ್ಲರಿಗೂ ಅವಳು ಸ್ಪರ್ಶಯೋಗ್ಯಳಾಗಿದ್ದಳು. ಈಗ ಕೇವಲ ಭಾರತೀದೇವಿ ಮಾತ್ರ ಅಲ್ಲಿರುವುದರಿಂದ ಭೀಮನಿಗೆ ಮಾತ್ರ ಅವಳು ಸ್ಪರ್ಶಯೋಗ್ಯಳೇ ವಿನಾ ಬೇರೆಯವರಿಗೆ ಅಲ್ಲ ಎಂಬುದನ್ನು ದೇವೇಂದ್ರ ತಿಳಿಸುತ್ತಿದ್ದಾನೆ. ಶಂರೂಪನಾದ ವಾಯುವಿನಲ್ಲಿ ರತಿ ಇರುವುದರಿಂದಲೇ ಭಾರತಿಯು ಶ್ರೀ ಎಂಬುದಾಗಿ ಕೀರ್ತಿತಳಾಗಿದ್ದಾಳೆ. ಅವಳೇ ದ್ರೌಪದಿಯೆಂದೂ, ಕಾಳಿ ಎಂದೂ ಚಂದ್ರಾ ಎಂದೂ ಶಾಸ್ತ್ರದಲ್ಲಿ ಉಕ್ತಳಾಗಿರುವಳು. ಈ ಮಾತಿನಂತೆ ಭಾರತಿಯು ಶ್ರೀ ಶಬ್ದವಾಚ್ಯಳಾಗಿರುವಳು. ಹಾಗಾಗಿಯೇ 'ಭಾರತೀರೇಷಾ' ಎಂದು ಹೇಳಬೇಕಾಗಿದ್ದ ಸ್ಥಾನದಲ್ಲಿ 'ಶ್ರೀರೇಷಾ' ಎಂದು ಹೇಳಿದ್ದಾರೆ – **ಲಕ್ಷಾಲಂಕಾರ.**

ದ್ರುಪದಸ್ಯ ಕುಲೇ ಜಾತಾ ಭವದ್ಭಿಶ್ಚೋಪಜೀವಿತಾ ।
ರತ್ಯರ್ಥಂ ಭವತಾಂ ಹ್ಯೇಷಾ ನಿರ್ಮಿತಾ ಶೂಲಪಾಣಿನಾ ॥೧೩॥

ಐದು ಮಂದಿ ಒಂದೇ ಕಡೆ ಇರುವ, ನಿಮ್ಮ ಸಂತೋಷಕ್ಕೋಸ್ಕರ ರುದ್ರದೇವರ ವರದಿಂದ ಇವಳು ನಿರ್ಮಿತಳಾಗಿದ್ದು, ದ್ರುಪದರಾಜನ ವಂಶದಲ್ಲಿ ಬಂದು, ನಿಮ್ಮೊಂದಿಗೆ ಜೀವಿಸಿರುವಳು.

ವಿಶೇಷ ಸೂಚನೆ– ಈ ಬಗ್ಗೆ ವಿಶೇಷ ವಿವರಣೆ ಶ್ರೀಮಹಾಭಾರತ ತಾತ್ಪರ್ಯನಿರ್ಣಯದ ಹದಿನೆಂಟನೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಬಂದಿದೆ.

ಏತೇ ಪಂಚ ಮಹಾಭಾಗಾ ಗಂಧರ್ವಾಃ ಪಾವಕಪ್ರಭಾಃ ।
ದ್ರೌಪದ್ಯಾಸ್ತನಯಾ ರಾಜನ್ ಯುಷ್ಮಾಕಮಮಿತೌಜಸಃ ॥೧೪॥

ಹೇ ರಾಜನೇ, ನಿಮಗೆ ದ್ರೌಪದಿಯಲ್ಲಿ ಜನಿಸಿದ, ಅಮಿತವಾದ ಪರಾಕ್ರಮವುಳ್ಳ, ಮಹಾತ್ಮರಾದ, ಅಗ್ನಿಯಂತೆ ತೇಜಸ್ಸುಳ್ಳ ಈ ಮಕ್ಕಳು ಐದುಮಂದಿ ಗಂಧರ್ವರಾಗಿರುವರು.

ಪಶ್ಯ ಗಂಧರ್ವರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಏನಂ ಚ ತ್ವಂ ವಿಜಾನೀಹಿ ಭ್ರಾತರಂ ಪೂರ್ವಜಂ ಪಿತುಃ ॥೧೫॥

ಗಂಧರ್ವರಾಜನಾದ, ಜ್ಞಾನಿಯಾದ ಈ ಧೃತರಾಷ್ಟ್ರನನ್ನು ನೋಡು. ಇವನು ನಿನ್ನ ತಂದೆಗಿಂತ ಮೊದಲು ಜನಿಸಿದ, ಅವನ ಸಹೋದರನಾದ ಧೃತರಾಷ್ಟ್ರನೇ ಎಂದು ತಿಳಿದುಕೊ.

ಅಯಂ ತೇ ಪೂರ್ವಜೋ ಭ್ರಾತಾ ಕೌಂತೇಯಃ ಪಾವಕದ್ಯುತಿಃ ।
ಸೂರ್ಯಪುತ್ರೋ ರಥಿಶ್ರೇಷ್ಠೋ ರಾಧೇಯ ಇತಿ ವಿಶ್ರುತಃ ॥೧೬॥

ಆದಿತ್ಯಸಹಿತೋ ಭಾತಿ ಪಶ್ಯೈನಂ ಪುರುಷರ್ಷಭಮ್ ॥೧೭॥

ಅಗ್ನಿಯಂತೆ ತೇಜಸ್ಸುಳ್ಳ ಇವನು ಕುಂತಿಯಲ್ಲಿ ನಿನಗೂ ಮೊದಲೇ ಜನಿಸಿದ ಸಹೋದರನಾಗಿರುವನು. ಸೂರ್ಯಪುತ್ರನಾದ, ರಥಿಶ್ರೇಷ್ಠನಾದ ಇವನು ರಾಧೇಯನೆಂದು ಪ್ರಸಿದ್ಧನಾಗಿರುವನು. ಪುರುಷಶ್ರೇಷ್ಠನಾದ ಇವನು ಆದಿತ್ಯರೊಂದಿಗೆ ಕೂಡಿಕೊಂಡು ಶೋಭಿಸುತ್ತಿದ್ದಾನೆ, ನೋಡು.

ಸಾಧ್ಯಾನಾಮಥ ದೇವಾನಾಂ ವಿಶ್ವೇಷಾಂ ಮರುತಾಮಪಿ ।
ಗಣೇಷು ಪಶ್ಯ ರಾಜೇಂದ್ರ ವೃಷ್ಣ್ಯಂಧಕಮಹಾರಥಾನ್ ॥೧೮॥

ಸಾತ್ಯಕಿಪ್ರಮುಖಾನ್ ವೀರಾನ್ ಭೋಜಾಂಶ್ಚೈವ ಮಹಾಬಲಾನ್ ॥೧೯॥

ಹೇ ರಾಜಶ್ರೇಷ್ಠನೇ, ವೃಷ್ಣಿಮತ್ತು ಅಂಧಕವಂಶದ ಮಹಾರಥರೂ ಸಾತ್ಯಕಿಯೇ ಮೊದಲಾದ ವೀರರೂ, ಮಹಾಬಲಿಷ್ಠರಾದ ಭೋಜವಂಶದವರೂ ಇವರೆಲ್ಲರೂ ಸಾಧ್ಯರ, ವಿಶ್ವೇದೇವತೆಗಳ, ಮರುದ್ದೇವತೆಗಳ ಗಣದಲ್ಲಿ ಇರುವರು. ಅವರನ್ನು ನೋಡು.

ಸೋಮೇನ ಸಹಿತಂ ಪಶ್ಯ ಸೌಭದ್ರಮಪರಾಜಿತಮ್ ।
ಅಭಿಮನ್ಯುಂ ಮಹೇಷ್ವಾಸಂ ನಿಶಾಕರಸಮದ್ಯುತಿಮ್ ॥೨೦॥

ಮಹಾಧನುರ್ಧಾರಿಯಾದ, ಸೋಲೇ ಇಲ್ಲದ, ಚಂದ್ರನಂತೆ ಕಂಗೊಳಿಸುವ, ಸುಭದ್ರೆಯ ಮಗನಾದ ಅಭಿಮನ್ಯುವು ಸೋಮನೊಂದಿಗೆ ಕೂಡಿರುವನು. ಅವನನ್ನು ನೋಡು.

ಏಷ ಪಾಂಡುರ್ಮಹೇಷ್ವಾಸಃ ಕುಂತ್ಯಾ ಮಾದ್ರ್ಯಾ ಚ ಸಂಗತಃ ।
ವಿಮಾನೇನ ಸದಾऽಭ್ಯೇತಿ ಪಿತಾ ತವ ಮಮಾಂತಿಕಮ್ ॥೨೧॥

ನಿನ್ನ ತಂದೆಯಾದ, ಮಹಾಧನುರ್ಧಾರಿಯಾದ ಈ ಪಾಂಡುರಾಜನು ಕುಂತಿಯೊಂದಿಗೆ ಹಾಗೂ ಮಾದ್ರಿಯೊಂದಿಗೆ ಕೂಡಿಕೊಂಡು, ವಿಮಾನವನ್ನೇರಿ ಸದಾ ನನ್ನ ಬಳಿಗೆ ಬರುತ್ತಾನೆ. ಅವನನ್ನು ನೋಡು.

ವಸುಭಿಃ ಸಹಿತಂ ಪಶ್ಯ ಭೀಷ್ಮಂ ಶಾಂತನವಂ ನೃಪಮ್ ।
ದ್ರೋಣಂ ಬೃಹಸ್ಪತೇಃ ಪಾರ್ಶ್ವೇ ಗುರುಮೇನಂ ನಿಶಾಮಯ ॥೨೨॥

ಶಂತನುವಿನ ಮಗನಾದ, ರಾಜನಾದ ಭೀಷ್ಮನನ್ನು ವಸುಗಳೊಂದಿಗೆ ನೋಡು. ನಿನ್ನ ಗುರುವಾದ ಈ ದ್ರೋಣನು ಬೃಹಸ್ಪತಿಯ ಸಮೀಪದಲ್ಲೇ ಇರುವುದನ್ನು ಗಮನಿಸು.

ಏತೇ ಚಾನ್ಯೇ ಮಹೀಪಾಲಾ ಯೋಧಾಸ್ತವ ಚ ಪಾಂಡವ ।
ಗಂಧರ್ವಸಹಿತಾ ಯಾಂತಿ ಯಕ್ಷಪುಣ್ಯಜನೈಸ್ತಥಾ ॥೨೩॥

ಹೇ ಪಾಂಡವನೇ, ಇವರಲ್ಲದೆ ಬೇರೆ ರಾಜರೂ ನಿನಗೆ ಯುದ್ಧದಲ್ಲಿ ಸಹಾಯಕರಾಗಿ ಬಂದಿರುವರು. ಅವರು ಗಂಧರ್ವರೊಂದಿಗೂ, ಯಕ್ಷರೊಂದಿಗೂ, ಯಾತುಧಾನರೊಂದಿಗೂ ಕೂಡಿ ನಡೆಯುತ್ತಿದ್ದಾರೆ, ಅದನ್ನೂ ನೋಡು.

ಗುಹ್ಯಕಾನಾಂ ಗತಿಂ ಚಾಪಿ ಕೇಚಿತ್ ಪ್ರಾಪ್ತಾ ನರಾಧಿಪಾಃ ।
ತ್ಯಕ್ತ್ವಾ ದೇಹಂ ಜಿತಃ ಸ್ವರ್ಗಃ ಪುಣ್ಯವಾಗ್ಬುದ್ಧಿಕರ್ಮಭಿಃ ॥೨೪॥

ಮತ್ತೆ ಕೆಲವು ರಾಜರು ಗುಹ್ಯಕರ ಗತಿಯನ್ನು ಪಡೆದಿದ್ದಾರೆ. ಮಂಗಳಮಯವಾದ ಮಾತು, ಬುದ್ಧಿ ಹಾಗೂ ಕರ್ಮಗಳುಳ್ಳ ಅವರು ಶರೀರವನ್ನು ತ್ಯಜಿಸಿ ಸ್ವರ್ಗವನ್ನೇ ಗೆದ್ದಿರುವರು.

ಜನಮೇಜಯಃ

ಭೀಷ್ಮದ್ರೋಣೌ ಮಹಾತ್ಮಾನೌ ಧೃತರಾಷ್ಟ್ರಶ್ಚ ಪಾರ್ಥಿವಃ ।
ವಿರಾಟದ್ರುಪದೌ ಚೋಭೌ ಶಂಖಶ್ಚೈವೋತ್ತರಸ್ತಥಾ ॥೨೫॥

ಧೃಷ್ಟಕೇತುರ್ಜಯತ್ಸೇನೋ ರಾಜಾ ಚೈವ ಸ ಸತ್ಯಜಿತ್ ।
ದುರ್ಯೋಧನಸುತಾಶ್ಚೈವ ಶಕುನಿಶ್ಚೈವ ಸೌಬಲಃ ॥೨೬॥

ಕರ್ಣಪುತ್ರಾಶ್ಚ ವಿಕ್ರಾಂತಾ ರಾಜಾ ಚೈವ ಜಯದ್ರಥಃ ।
ಘಟೋತ್ಕಚಾದಯಶ್ಚೈವ ಯೇ ಚಾನ್ಯೇ ನಾನುಕೀರ್ತಿತಾಃ ॥೨೭॥

ಯೇ ಚಾನ್ಯೇ ಕೀರ್ತಿತಾ ವೀರಾ ರಾಜಾನೋ ದೀಪ್ತಮೂರ್ತಯಃ ।
ಸ್ವರ್ಗೇ ಕಾಲಂ ಕಿಯಂತಂ ತೇ ತಸ್ಥುಸ್ತದಪಿ ಶಂಸ ಮೇ ॥೨೮॥

ಜನಮೇಜಯ– ಮಹಾತ್ಮರಾದ ಭೀಷ್ಮ ಹಾಗೂ ದ್ರೋಣರು, ರಾಜನಾದ ಧೃತರಾಷ್ಟ್ರ, ವಿರಾಟ ಮತ್ತು ದ್ರುಪದರಾಜ, ಹಾಗೆಯೇ ಆ ಇಬ್ಬರು ಶಂಖ ಮತ್ತು ಉತ್ತಮರು, ಧೃಷ್ಟಕೇತು, ಜಯತ್ಸೇನ, ಅಂತೆಯೇ ಸತ್ಯಜಿತ್ ರಾಜ, ದುರ್ಯೋಧನನ ಮಕ್ಕಳು, ಸುಬಲದೇಶದ ಶಕುನಿ, ಮಹಾಪರಾಕ್ರಮಿಗಳಾದ ಕರ್ಣಪುತ್ರರು, ರಾಜನಾದ ಜಯದ್ರಥ, ಅಲ್ಲದೆ ಘಟೋತ್ಕಚನೇ ಮೊದಲಾದ ಮತ್ತು ಇಲ್ಲಿ ಹೆಸರಿಸದ ಯಾರೆಲ್ಲ ಇರುವರೋ, ಅಲ್ಲದೆ ಇಲ್ಲಿ ಹೆಸರಿಸಿದ ಯಾರೆಲ್ಲ ಇರುವರೋ ಅಂತಹ ವೀರರಾದ, ತೇಜಸ್ವಿಗಳಾದ ರಾಜರು ಸ್ವರ್ಗದಲ್ಲಿ ಎಷ್ಟು ಕಾಲದ ತನಕ ಇದ್ದರು? ಅದನ್ನೂ ನನಗೆ ಹೇಳುವವರಾಗಿ.

ಅಹೋಸ್ವಿಚ್ಛಾಶ್ವತಂ ಸ್ಥಾನಂ ತೇಷಾಂ ತತ್ರ ದ್ವಿಜೋತ್ತಮ ।
ಅಂತೇ ವಾ ಕರ್ಮಣಾಂ ಕಾಂ ತೇ ಗತಿಂ ಪ್ರಾಪ್ತಾ ನರರ್ಷಭಾಃ ॥೨೯॥

ಹೇ ದ್ವಿಜೋತ್ತಮರೇ, ಅವರಿಗೆ ಅಲ್ಲಿ ಶಾಶ್ವತವಾದ ಸ್ಥಾನವು ಸಿಕ್ಕಿದೆಯೇ ಅಥವಾ ನರಶ್ರೇಷ್ಠರಾದ ಅವರು ತಮ್ಮ ಕರ್ಮಫಲಗಳ ಕೊನೆಯಲ್ಲಿ ಬೇರೆ ಯಾವ ಗತಿಯನ್ನು ಪಡೆದರು?

ಏತದಿಚ್ಛಾಮ್ಯಹಂ ಶ್ರೋತುಂ ಪ್ರೋಚ್ಯಮಾನಂ ದ್ವಿಜೋತ್ತಮ ।
ತಪಸಾ ಹಿ ಪ್ರದೀಪ್ತೇನ ಸರ್ವಂ ತ್ವಮನುಪಶ್ಯಸಿ ॥೩೦॥

ಹೇ ದ್ವಿಜೋತ್ತಮರೇ, ನೀವು ಹೇಳುವಿರಾದರೆ ನಾನು ಆ ಎಲ್ಲವನ್ನೂ ಕೇಳಲು ಬಯಸುತ್ತಿದ್ದೇನೆ. ನೀವು ಜಾಜ್ವಲ್ಯಮಾನವಾದ ತಪಸ್ಸಿನಿಂದ ಎಲ್ಲವನ್ನೂ ಸರಿಯಾಗಿ ನೋಡಬಲ್ಲವರಾಗಿರುವಿರಿ (ತಿಳಿದಿರುವಿರಿ).

ಸೂತಃ

ಇತ್ಯುಕ್ತಃ ಸ ತು ವಿಪ್ರರ್ಷಿರನುಜ್ಞಾತೋ ಮಹಾತ್ಮನಾ ।
ವ್ಯಾಸೇನ ತಸ್ಯ ನೃಪತೇರಾಖ್ಯಾತುಮುಪಚಕ್ರಮೇ ॥೩೧॥

ಸೂತರು– ಜನಮೇಜಯನು ಹೀಗೆ ಕೇಳಿದಾಗ, ಆ ವಿಪ್ರಶ್ರೇಷ್ಠರು ಮಹಾತ್ಮರಾದ ವೇದವ್ಯಾಸರಿಂದ ಅನುಜ್ಞೆ ಪಡೆದು, ಆ ರಾಜನಿಗೆ ಉತ್ತರಿಸಲು ಆರಂಭಿಸಿದರು.

ವೈಶಂಪಾಯನಃ

ಗಂತವ್ಯಂ ಕರ್ಮಣಾಮಂತೇ ಸರ್ವೇಷಾಂ ಮನುಜಾಧಿಪ ॥೩೨॥

ಪ್ರಕೃತಿಂ ಕಿಂತು ಸಮ್ಯಕ್ತ್ವಂ ಪೃಚ್ಛೈಷಾ ಯತ್ಪ್ರಯೋಜಿಕಾ ॥೩೩॥

ವೈಶಂಪಾಯನ– ಹೇ ಮನುಜಾಧಿಪನೇ, ಕರ್ಮಗಳ ಕೊನೆಯಲ್ಲಿ ಎಲ್ಲರೂ ತಮ್ಮ ತಮ್ಮ ಮೂಲಸ್ವರೂಪವನ್ನು ಸೇರುವುದೇ ಯೋಗ್ಯ. ಆದರೆ ಈ ನಿನ್ನ ಪ್ರಶ್ನೆಯು ಆ ಮೂಲಸ್ವರೂಪದ ಒಳ್ಳೆಯತನವನ್ನು ಉದ್ದೇಶಿಸಿದೆ (ಮೂಲಸ್ವರೂಪವು ಒಳ್ಳೆಯದೋ ಕೆಟ್ಟದ್ದೋ ಎಂದು ನೀನು ಕೇಳಿರುವೆ)

ಶೃಣು ಗುಹ್ಯಮಿದಂ ರಾಜನ್ ದೇವಾನಾಂ ಭರತರ್ಷಭ ।
ಯದುವಾಚ ಮಹಾತೇಜಾ ದಿವ್ಯಚಕ್ಷುಃ ಪ್ರತಾಪವಾನ್ ॥೩೪॥

ಹೇ ಭರತಶ್ರೇಷ್ಠನಾದ ರಾಜನೇ, ಮಹಾತೇಜಸ್ವಿಯಾದ, ದಿವ್ಯವಾದ ಚಕ್ಷುಸ್ಸುಳ್ಳ, ಪ್ರತಾಪಶಾಲಿಯಾದ ವೇದವ್ಯಾಸರು ಏನು ಹೇಳಿರುವರೋ ಅಂತಹ ಈ ದೇವಗುಹ್ಯ(ರಹಸ್ಯ)ವನ್ನು ಕೇಳು.

ಮುನಿಃ ಪುರಾಣಃ ಕೌರವ್ಯ ಪಾರಾಶರ್ಯೋ ಮಹಾವ್ರತಃ ।
ಅಗಾಧಬುದ್ಧಿಃ ಸರ್ವಜ್ಞೋ ಗತಿಜ್ಞಃ ಸರ್ವಕರ್ಮಣಾಮ್ ॥೩೫॥

ಹೇ ಕುರುವಂಶಜನೇ, ಆ ಮುನಿಗಳು ಪರಾಶರರ ಮಗನಾಗಿ ಹುಟ್ಟಿದ ಪುರಾಣ ಪುರುಷರಾಗಿರುವರು. ಅವರು ಮಹಾವ್ರತನಿಷ್ಠರೂ, ಅಗಾಧವಾದ ಬುದ್ಧಿಯುಳ್ಳವರೂ, ಸರ್ವಜ್ಞರೂ, ಸರ್ವಕರ್ಮಗಳ ಗತಿಯನ್ನು ಬಲ್ಲವರೂ ಆಗಿದ್ದಾರೆ.

ತೇನೋಕ್ತಂ ಕರ್ಮಣಾಮಂತೇ ಪ್ರವಿಶಂತಿ ಸ್ವಕಾಂ ತನುಮ್ ॥೩೬॥

ಅವರು ಹೇಳಿರುವುದು ಏನೆಂದರೆ, ಎಲ್ಲರೂ ಕರ್ಮಗಳು ಕೊನೆಯಾದಾಗ ತಮ್ಮ ತಮ್ಮ ಮೂಲದೇಹವನ್ನು ಪ್ರವೇಶಿಸುವರು.

ವಸೂನೇವ ಮಹಾತೇಜಾ ಭೀಷ್ಮಃ ಪ್ರಾಪ ಮಹಾದ್ಯುತಿಃ ।
ಅಷ್ಟಾವೇವ ಹಿ ದೃಶ್ಯಂತೇ ವಸವೋ ಭರತರ್ಷಭ ॥೩೭॥

ಹೇ ಭರತರ್ಷಭನೇ, ಮಹಾಕಾಂತಿಯುಳ್ಳ, ಮಹಾತೇಜಸ್ವಿಯಾದ ಭೀಷ್ಮರು ವಸುಗಳಲ್ಲೇ ಪ್ರವೇಶಿಸಿರುವರು. ಏಕೆಂದರೆ ವಸುಗಳ ಗುಂಪಿನಲ್ಲಿ ಈಗ ಎಂಟು ಮಂದಿ ಮಾತ್ರ ಕಾಣುತ್ತಿದ್ದಾರೆ.

ಬೃಹಸ್ಪತಿಂ ವಿವೇಶಾಥ ದ್ರೋಣೋ ಹ್ಯಂಗಿರಸಾಂ ವರಮ್ ।
ಕೃತವರ್ಮಾ ತು ಹಾರ್ದಿಕ್ಯಃ ಪ್ರವಿವೇಶ ಮರುದ್ಗಣಾನ್ ॥೩೮॥

ದ್ರೋಣಾಚಾರ್ಯರು ಅಂಗಿರಸ ವಂಶರಲ್ಲಿ ಶ್ರೇಷ್ಠರಾದ ಬೃಹಸ್ಪತ್ಯಾಚಾರ್ಯರನ್ನು ಪ್ರವೇಶಿಸಿರುವರು. ಹೃದಿಕನ ಮಗನಾದ ಕೃತವರ್ಮನು ಮರುದ್ಗಣವನ್ನು ಪ್ರವೇಶಿಸಿದ್ದಾನೆ.

ಸನತ್ಕುಮಾರಂ ಪ್ರದ್ಯುಮ್ನಃ ಪ್ರವಿವೇಶ ಯಥಾಗತಮ್ ।
ಧೃತರಾಷ್ಟ್ರೋ ಧನೇಶಸ್ಯ ಲೋಕಾನ್ ಪ್ರಾಪ ದುರಾಸದಾನ್ ॥೩೯॥

ಪ್ರದ್ಯುಮ್ನನು ತಾನು ಎಲ್ಲಿಂದ ಹೊರಟಿರುವನೋ ಅದೇ ಸನತ್ಕುಮಾರರನ್ನು ಪ್ರವೇಶಿಸಿದ್ದಾನೆ. ಧೃತರಾಷ್ಟ್ರನು ಬೇರೆಯವರಿಗೆ ಹೊಂದಲು ಅಶಕ್ಯವಾದ ಧನಾದಿಪತಿಯಾದ ಕುಬೇರನ ಲೋಕಕ್ಕೆ ತಲುಪಿರುವನು.

ಧೃತರಾಷ್ಟ್ರೇಣ ಸಹಿತಾ ಗಾಂಧಾರೀ ಚ ಯಶಸ್ವಿನೀ ।
ಪತ್ನೀಭ್ಯಾಂ ಸಹಿತಃ ಪಾಂಡುರ್ಮಹೇಂದ್ರಸದನಂ ಯಯೌ ॥೪೦॥

ಧೃತರಾಷ್ಟ್ರನೊಂದಿಗೆ ಕೂಡಿದ ಯಶಸ್ವಿನಿಯಾದ ಗಾಂಧಾರೀದೇವಿಯೂ, ಇಬ್ಬರು ಪತ್ನಿಯರಿಂದ ಸಹಿತನಾದ ಪಾಂಡುರಾಜನೂ ಮಹೇಂದ್ರನ ಆಲಮನೆಗೆ ತೆರಳಿರುವನು.

ವಿರಾಟದ್ರುಪದೌ ಚೋಭೌ ಧೃಷ್ಟಕೇತುಶ್ಚ ಪಾರ್ಥಿವಃ ।
ನಿಶಠಾಕ್ರೂರಶಂಖಾಶ್ಚ ಭಾನುಃ ಕಣ್ವೋ ವಿಡೂರಥಃ ॥೪೧॥

ಭೂರಿಶ್ರವಾಃ ಶಲಶ್ಚೈವ ಭೂರಿಶ್ಚ ಪೃಥಿವೀಪತಿಃ ।
ಕಂಸಶ್ಚೈವೋಗ್ರಸೇನಶ್ಚ ವಸುದೇವಸ್ತಥೈವ ಚ ॥೪೨॥

ಉತ್ತರಶ್ಚ ಸಹ ಭ್ರಾತ್ರಾ ಶಂಖೇನ ನರಪುಂಗವಃ ।
ವಿಶ್ವೇಷಾಂ ದೇವತಾನಾಂ ತೇ ವಿವಿಶುರ್ನರಸತ್ತಮಾಃ ॥೪೩॥

ವಿರಾಟ ಹಾಗೂ ದ್ರುಪದರೆಂಬ ಆ ಇಬ್ಬರು ರಾಜರು, ಧೃಷ್ಟಕೇತು ಎಂಬ ರಾಜನು, ನಿಶಠ, ಅಕ್ರೂರ, ಶಂಖ ಇವರು, ಭಾನುವೂ, ಕಣ್ವನೂ, ವಿಡೂರಥನೂ, ಭೂರಿಶ್ರವ, ಶಲ, ಹಾಗೆಯೇ ರಾಜನಾದ ಭೂರಿ, ಕಂಸ ಮತ್ತು ಉಗ್ರಸೇನ, ಹಾಗೆಯೇ ವಸುದೇವ, ನರಶ್ರೇಷ್ಠನಾದ ಶಂಖನೆಂಬ ಸಹೋದರನಿಂದ ಸಮೇತನಾದ ಉತ್ತರ - ಆ ಎಲ್ಲ ನರಶ್ರೇಷ್ಠರೂ ವಿಶ್ವೇದೇವತೆಗಳ ಸ್ಥಾನವನ್ನು ಪ್ರವೇಶಿಸಿರುವರು.

ವ್ಯಾಖ್ಯಾನ ವಿಶೇಷ– ಶಂಖ, ಕಣ್ವ, ವಿಡೂರಥ – ಈ ಮೂರು ಮಂದಿ ಯಾದವ ಕುಮಾರರು - ಲಕ್ಷಾಲಂಕಾರ.

ಯಸ್ತು ವರ್ಚಾ ಇತಿ ಖ್ಯಾತಃ ಸೋಮಪುತ್ರಃ ಬಭೂವ ಹ ।
ಸೋಽಭಿಮನ್ಯುರ್ನರಸಿಂಹಸ್ಯ ಫಲ್ಗುನಸ್ಯ ಸುತೋಽಭವತ್ ॥೪೪॥

ಯಾವಾತನು ವರ್ಚಾ ಎಂಬ ಹೆಸರಿನಿಂದ ಸೋಮನ ಮಗನಾಗಿ ಹುಟ್ಟಿದ್ದನೋ ಅವನೇ ನರಶ್ರೇಷ್ಠನಾದ ಫಲ್ಗುನನೆಂಬ ಹೆಸರಿನ ಅರ್ಜುನನಿಗೆ ಮಗನಾಗಿ ಅಭಿಮನ್ಯುವಾಗಿ ಹುಟ್ಟಿದ್ದನು.

ವ್ಯಾಖ್ಯಾನ ವಿಶೇಷ– ಸೋಮಪುತ್ರ ಎಂಬ ಶಬ್ದಕ್ಕೆ ಸೋಮನ ಅಂಶ ಎಂದರ್ಥ. ಅಂಶಿಯಾದ ಚಂದ್ರನಿಂದ ಅಂಶರೂಪನಾದ ವರ್ಚಾ ಅಥವಾ ವರ್ಚಸ್ಸು ಎಂಬ ವ್ಯಕ್ತಿ ಹುಟ್ಟಿದ್ದಾನೆ. ಅವನೇ ಅಭಿಮನ್ಯುವಾಗಿ ನಂತರ ಹುಟ್ಟಿದನು – **ಲಕ್ಷಾಲಂಕಾರ.**

ಸ ಯುದ್ಧ್ವಾ ಕ್ಷತ್ರಧರ್ಮೇಣ ಯಥಾ ನಾನ್ಯಃ ಪುಮಾನ್ ಕ್ವಚಿತ್ ।
ವಿವೇಶ ಸೋಮಂ ಧರ್ಮಾತ್ಮಾ ಕರ್ಮಣೋಽಂತೇ ಮಹಾರಥಃ ॥೪೫॥

ಮಹಾರಥನಾದ ಅವನು ಬೇರೆ ಯಾವ ಪುರುಷನೂ ಎಲ್ಲೂ ನಡೆಸದ ರೀತಿಯಲ್ಲಿ ಕ್ಷತ್ರಧರ್ಮದಿಂದ ಯುದ್ಧ ಮಾಡಿ ಕರ್ಮಗಳ ಕೊನೆಯಲ್ಲಿ ಧರ್ಮಾತ್ಮನಾದ ಅವನು ಸೋಮನನ್ನು ಪ್ರವೇಶಿಸಿದನು.

ಅವಿವೇಶ ರವಿಂ ಕರ್ಣೋ ನಿಹತಃ ಪುರುಷರ್ಷಭ ।
ದ್ವಾಪರಂ ಶಕುನಿಃ ಪ್ರಾಪ ಧೃಷ್ಟದ್ಯುಮ್ನಸ್ತು ಪಾವಕಮ್ ॥೪೬॥

ಹೇ ಪುರುಷಶ್ರೇಷ್ಠನೇ, ಯುದ್ಧದಲ್ಲಿ ಹತನಾದ ಕರ್ಣನು ಸೂರ್ಯನನ್ನು ಪ್ರವೇಶಿಸಿರುವನು. ಶಕುನಿಯು ದ್ವಾಪರನನ್ನೂ, ಧೃಷ್ಟದ್ಯುಮ್ನನು ಅಗ್ನಿಯನ್ನೂ ಸೇರಿದರು.

ಧೃತರಾಷ್ಟ್ರಾತ್ಮಜಾಃ ಸರ್ವೇ ಯಾತುಧಾನಾನ್ ಪ್ರಪೇದಿರೇ ।
ಧರ್ಮಮೇವಾವಿಶತ್ ಕ್ಷತ್ತಾ ರಾಜಾ ಚೈವ ಯುಧಿಷ್ಠಿರಃ ॥೪೭॥

ಧೃತರಾಷ್ಟ್ರನ ಎಲ್ಲ ಮಕ್ಕಳೂ ಅಸುರರನ್ನು ಪ್ರವೇಶಿಸಿದರು. ವಿದುರನು ಹಾಗೂ ರಾಜನಾದ ಯುಧಿಷ್ಠಿರನು ಯಮಧರ್ಮನನ್ನು ಪ್ರವೇಶಿಸಿದರು.

ಅನಂತೋ ಭಗವಾನ್ ದೇವಃ ಪ್ರವಿವೇಶ ರಸಾತಲಮ್ ।
ಪಿತಾಮಹನಿಯೋಗಾದ್ ವೈ ಯೋ ಯೋಗಾದ್ ಗಾಮಧಾರಯತ್ ॥

ಬ್ರಹ್ಮದೇವರ ಆಜ್ಞೆಯಂತೆ ಯಾವನು ತನ್ನ ಯೋಗಶಕ್ತಿಯಿಂದ ಭೂಮಿಯನ್ನು ಧರಿಸಿರುವನೋ ಅಂತಹ ಬಲದೇವನಾಗಿ ಹುಟ್ಟಿದ ಭಗವಾನ್ ಅನಂತನು ರಸಾತಳವನ್ನು ಪ್ರವೇಶಿಸಿದನು.

ಯಃ ಸ ನಾರಾಯಣೋ ನಾಮ ದೇವದೇವಃ ಸನಾತನಃ ।
ತಸ್ಯಾಂಶೋ ವಾಸುದೇವಸ್ತು ಕರ್ಮಣೋಂತೇ ವಿವೇಶ ಹ ॥೪೯॥

ದೇವತೆಗಳಿಗೂ ದೇವನಾದ, ಸನಾತನನಾದ ಯಾವಾತನು ನಾರಾಯಣನೆಂದು ಪ್ರಸಿದ್ಧನೋ ಅವನ ಅಂಶನೇ ಆದ ವಾಸುದೇವನು ಕರ್ಮಗಳನ್ನು ಮುಗಿಸಿ, ತಿರುಗಿ ಮೂಲರೂಪಕ್ಕೆ ಪ್ರವೇಶಿಸಿದನು.

ಷೋಡಶಸ್ತ್ರೀಸಹಸ್ರಾಣಿ ವಾಸುದೇವಪರಿಗ್ರಹಾಃ ।
ಅಮಜ್ಜಂಸ್ತಾಃ ಸರಸ್ವತ್ಯಾಂ ಕಾಲೇನ ಜನಮೇಜಯ ॥೫೦॥

ತತ್ರ ತ್ಯಕ್ತ್ವಾ ಶರೀರಾಣಿ ದಿವಮಾರುರುಹುಃ ಪುನಃ ।
ತಾಶ್ಚೈವಾಪ್ಸರಸೋ ಭೂತ್ವಾ ವಾಸುದೇವಮುಪಾವಿಶನ್ ॥೫೧॥

ಹೇ ಜನಮೇಜಯನೇ, ವಾಸುದೇವನನ್ನು ವರಿಸಿದ ಹದಿನಾರು ಸಾವಿರಮಂದಿ ಸ್ತ್ರೀಯರು ಸರಸ್ವತೀ ನದಿಯಲ್ಲಿ ಮುಳುಗಿ, ಅಲ್ಲಿ ತಮ್ಮ ಶರೀರವನ್ನು ತ್ಯಜಿಸಿ, ಯೋಗ್ಯ ಕಾಲದಲ್ಲಿ ದೇದೀಪ್ಯಮಾನವಾದ ಅರ್ಚಿರ್ಲೋಕವನ್ನು ಏರಿದರು. ಅದೇ ಕೃಷ್ಣನನ್ನು ಗೋಕುಲದಲ್ಲಿ ವರಿಸಿದ ಆ ಗೋಪಿಕೆಯರು ಕೂಡ ಅಪ್ಸರ ಸ್ತ್ರೀಯರಾಗಿ ವಾಸುದೇವನನ್ನು ಸೇರಿಕೊಂಡರು.

ಹತಾಸ್ತಸ್ಮಿನ್ ಮಹಾಯುದ್ಧೇ ಯೇ ವೀರಾಸ್ತು ಮಹಾರಥಾಃ ।
ಘಟೋತ್ಕಚಾದಯಶ್ಚೈವ ದೇವಾನ್ಯಕ್ಷಾಂಶ್ಚ ಭೇಜಿರೇ ॥೫೨॥

ಆ ಮಹಾಯುದ್ಧದಲ್ಲಿ ಹತರಾದ ಮಹಾರಥರಾದ ಯಾರೆಲ್ಲ ವೀರರಿರುವರೋ ಘಟೋತ್ಕಚಾದಿಗಳೊಂದಿಗೆ ಅವರೆಲ್ಲರೂ ದೇವತೆಗಳನ್ನೂ, ಯಕ್ಷರನ್ನೂ ಸೇರಿಕೊಂಡರು.

ಧೃತರಾಷ್ಟ್ರಾತ್ಮಜಾಶ್ಚೈವ ಯಾತುಧಾನಾ ಮದೋತ್ಕಟಾಃ ।
ದುರ್ಯೋಧನಸಹಾಯಾಶ್ಚ ಪಾರ್ಥಿವಾ ಯೇऽನುಕೀರ್ತಿತಾಃ ।
ದಾನವಾನ್ ಗುಹ್ಯಕಾಂಶ್ಚೈವ ಗಂಧರ್ವಾಂಶ್ಚ ತಥಾऽವಿಶನ್ ।
ಪ್ರಾಪ್ತಾಸ್ತೇ ಕ್ರಮಶೋ ರಾಜನ್ ಸರ್ವಲೋಕಾನನುತ್ತಮಾನ್ ॥೫೩॥

ಧೃತರಾಷ್ಟ್ರನಿಗೆ ಮಕ್ಕಳಾಗಿ ಹುಟ್ಟಿದ, ಮದೋನ್ಮತ್ತರಾದ ರಾಕ್ಷಸರು ಮತ್ತು ಈ ಹಿಂದೆ ಹೇಳಿದ ದುರ್ಯೋಧನನಿಗೆ ಸಹಾಯಕರಾದ ರಾಜರು ಕ್ರಮವಾಗಿ ದಾನವರನ್ನೂ, ಗುಹ್ಯಕರೆಂಬ ಶಂಖಚೂಡಾದಿ ದುರ್ದೇವರನ್ನೂ, ಗಂಧರ್ವರೆಂಬ

ದ್ರವಿಡಾದಿ ದುರ್ಜೀವರನ್ನೂ ಪ್ರವೇಶಿಸಿದರು. ಹೀಗೆ ಅವರೆಲ್ಲರೂ ಅವರವರ ಯೋಗ್ಯತೆಗೆ ಅನುಸಾರವಾಗಿ ಅಧಮಲೋಕಗಳಿಗೆ ತೆರಳಿದರು.

ಭವನಂ ಚ ಮಹೇಂದ್ರಸ್ಯ ಕುಬೇರಸ್ಯ ಚ ಧೀಮತಃ ।
ವರುಣಸ್ಯ ತಥಾ ಲೋಕಾನ್ ವಿವಿಶುಃ ಪುರುಷರ್ಷಭಾಃ ॥೫೪॥

ಅಲ್ಲದೆ ಆ ದುರ್ಯೋಧನನಿಗೆ ಸಹಾಯ ಮಾಡಿದ ರಾಜರಲ್ಲಿ ಉತ್ತಮ ಜೀವರು ಮಹೇಂದ್ರನ ಭವನವನ್ನು, ಧೀಮಂತನಾದ ಕುಬೇರನ ಲೋಕಗಳನ್ನು ಹಾಗೂ ವರುಣನಿಗೆ ಸಂಬಂಧಿಸಿದ ಲೋಕಗಳನ್ನು ಸೇರಿಕೊಂಡರು.

ಏತತ್ತೇ ಸರ್ವಮಾಖ್ಯಾತಂ ವಿಸ್ತರೇಣ ಮಹಾದ್ಯುತೇ ।
ಕುರೂಣಾಂ ಚರಿತಂ ಕೃತ್ಸ್ನಂ ಪಾಂಡವಾನಾಂ ಚ ಭಾರತ ॥೫೫॥

ಹೇ ಮಹಾಕಾಂತಿಶಾಲಿಯೇ, ಭಾರತನೇ, ಹೀಗೆ ಪೂರ್ಣವಾಗಿ ಕುರುಗಳ ಮತ್ತು ಪಾಂಡವರ ಚರಿತ್ರೆ ಎಲ್ಲವನ್ನೂ ವಿಸ್ತಾರವಾಗಿ ತಿಳಿಸಿರುವೆನು.

ಸೂತಃ

ಏತಚ್ಛ್ರುತ್ವಾ ದ್ವಿಜಶ್ರೇಷ್ಠಾತ್ ಸ ರಾಜಾ ಜನಮೇಜಯಃ ।
ವಿಸ್ಮಿತೋಽಭವದತ್ಯರ್ಥಂ ಯಜ್ಞಕರ್ಮಾಂತರೇಷ್ವಥ ॥೫೬॥

ಸೂತರು– ಸರ್ಪಯಜ್ಞದ ಕರ್ಮಗಳ ನಡುವೆ ದ್ವಿಜಶ್ರೇಷ್ಠರಾದ ವೈಶಂಪಾಯನರಿಂದ ಈ ಎಲ್ಲವನ್ನೂ ಕೇಳಿದ, ರಾಜನಾದ ಆ ಜನಮೇಜಯನು ಬಹಳವಾಗಿ ವಿಸ್ಮಯಗೊಂಡನು.

ತತಃ ಸಮಾಪಯಾಮಾಸುಃ ಕರ್ಮ ತತ್ತಸ್ಯ ಯಾಜಕಾಃ ।
ಆಸ್ತಿಕಶ್ಚಾಭವತ್ಪ್ರೀತಃ ಪರಿಮೋಕ್ಷ್ಯ ಭುಜಂಗಮಾನ್ ॥೫೭॥

ಅನಂತರ ಯಾಜ್ಞಿಕರು ಅವರ ಆ ಕರ್ಮವನ್ನು ಪೂರ್ಣಗೊಳಿಸಿದರು. ಆಸ್ತಿಕನೂ ಕೂಡ ಸರ್ಪಗಳನ್ನು ಸಂಕಟದಿಂದ ಬಿಡುಗಡೆಗೊಳಿಸಿ ಪ್ರೀತನಾದನು.

ತತೋ ದ್ವಿಜಾತೀನ್ ಸರ್ವಾನ್ ತಾನ್ ದಕ್ಷಿಣಾಭಿರತೋಷಯತ್ ।
ಪೂಜಿತಾಶ್ಚಾಪಿ ತೇ ರಾಜ್ಞಾ ತತೋ ಜಗ್ಮುರ್ಯಥಾಗತಮ್ ॥೫೮॥

ಅನಂತರ ಅವನು ಯಜ್ಞದಲ್ಲಿ ಭಾಗವಹಿಸಿದ ಎಲ್ಲ ಬ್ರಾಹ್ಮಣರನ್ನೂ ದಕ್ಷಿಣೆಗಳಿಂದ ಸಂತೋಷಪಡಿಸಿದನು. ರಾಜನಿಂದ ಪೂಜಿತರಾದ ಅವರೆಲ್ಲರೂ ಅನಂತರ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ವಿಸರ್ಜಯಿತ್ವಾ ವಿಪ್ರಾನ್ ತಾನ್ ರಾಜಾऽಪಿ ಜನಮೇಜಯಃ ।
ಹೃಷ್ಟಸ್ತಕ್ಷಶಿಲಾಯಾಃ ಸ ಪುನರಾಯಾದ್ ಗಜಾಹ್ವಯಮ್ ॥೫೯॥

ರಾಜನಾದ ಜನಮೇಜಯನೂ ಕೂಡ ಆ ಎಲ್ಲ ಬ್ರಾಹ್ಮಣರನ್ನೂ ಬೀಳ್ಕೊಟ್ಟು ಸಂತೋಷದಿಂದಲೇ ತಕ್ಷಶಿಲೆಯಿಂದ ಮತ್ತೆ ಹಸ್ತಿನಪುರಕ್ಕೆ ಹಿಂದಿರುಗಿದನು.

ಏತತ್ತೇ ಸರ್ವಮಾಖ್ಯಾತಂ ವೈಶಂಪಾಯನಕೀರ್ತಿತಮ್ ।
ವ್ಯಾಸಾಜ್ಞಯಾ ಸಮಾಜ್ಞಾತಂ ಸರ್ಪಸತ್ರೇ ನೃಪಸ್ಯ ಹಿ ॥೬೦॥

ವೇದವ್ಯಾಸರ ಆಜ್ಞೆಯಂತೆ, ರಾಜನ ಸರ್ಪಯಜ್ಞದಲ್ಲಿ ವೈಶಂಪಾಯನರಿಂದ ಕೀರ್ತಿತವಾದ ಹಾಗೂ ನಾನು ತಿಳಿದ ಎಲ್ಲವನ್ನೂ ನಿನಗಿಂದು ಹೇಳಿರುವೆನು.

ಪುಣ್ಯೋऽಯಮಿತಿಹಾಸಾಖ್ಯಃ ಪವಿತ್ರಂ ಚೇದಮುತ್ತಮಮ್ ।
ವ್ಯಾಸೇನ ಮುನಿನಾ ವಿಪ್ರ ಚರಿತಂ ಸ್ತವ್ಯದರ್ಶಿನಾ ॥೬೧॥

ಇತಿಹಾಸವೆಂಬ ಹೆಸರುಳ್ಳ ಈ ಗ್ರಂಥವು ಮಂಗಳಮಯವಾಗಿದೆ ಹಾಗೂ ಪವಿತ್ರವೂ, ಉತ್ತಮವೂ ಆಗಿದೆ. ಹೇ ವಿಪ್ರನೇ, ಇದು ವೇದಗಳನ್ನು ಕಂಡ ವ್ಯಾಸ ಮುನಿಯಿಂದ ರಚಿತವಾಗಿದೆ.

ಸರ್ವಜ್ಞೇನ ವಿಧಿಜ್ಞೇನ ಧರ್ಮಜ್ಞಾನವತಾ ಸತಾ ।
ಅತೀಂದ್ರಿಯೇಣ ಶುಚಿನಾ ತಪಸಾ ಭಾವಿತಾತ್ಮನಾ ॥೬೨॥

ಐಶ್ವರ್ಯೇ ವರ್ತತಾ ಚೈವ ಸಾಂಖ್ಯಯೋಗವತಾ ತಥಾ ।
ನೈಕತಂತ್ರವಿಬುದ್ಧೇನ ದೃಷ್ಟಾ ದಿವ್ಯೇನ ಚಕ್ಷುಷಾ ॥೬೩॥

ಕೀರ್ತಿಂ ಪ್ರಥಯತಾ ಲೋಕೇ ಪಾಂಡವಾನಾಂ ಮಹಾತ್ಮನಾಮ್ ।
ಅನ್ಯೇಷಾಂ ಕ್ಷತ್ರಿಯಾಣಾಂ ಚ ಭೂರಿದ್ರವಿಣತೇಜಸಾಮ್ ॥೬೪॥

ಸರ್ವಜ್ಞರಾದ, ವಿಧಿಗಳನ್ನು ತಿಳಿದಿರುವ, ಧರ್ಮದ ಜ್ಞಾನವುಳ್ಳ, ಸ್ವಯಂ ಆಚರಿಸುವ, ಅತೀಂದ್ರಿಯವಾದ ಶುಚಿಯಾದ ತಪಸ್ಸಿನಿಂದ ಆತ್ಮಜ್ಞಾನವನ್ನು ಪಡೆದಿರುವ, ಅಣಿಮಾದಿ ಅಷ್ಟೈಶ್ವರ್ಯವನ್ನು ಸಿದ್ಧಿಸಿಕೊಂಡ, ಹಾಗೆಯೇ ಸಾಂಖ್ಯ ಯೋಗಶಾಸ್ತ್ರವನ್ನು ಮೈಗೂಡಿಸಿಕೊಂಡು, ಅನೇಕ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದಿರುವ, ಲೋಕದಲ್ಲಿ ಮಹಾತ್ಮರಾದ ಪಾಂಡವರ ಹಾಗೂ ಬಹುವಾದ ಸಂಪತ್ತು ಮತ್ತು ತೇಜಸ್ಸುಗಳುಳ್ಳ ಉಳಿದ ಕ್ಷತ್ರಿಯರ ಕೀರ್ತಿಯನ್ನು ಬೆಳಗಿಸುತ್ತಾ ದಿವ್ಯಚಕ್ಷುಸ್ಸಿನಿಂದ ಇದನ್ನು ಕಂಡು ವ್ಯಾಸರು ಹೇಳಿರುವರು.

ಕ್ರೀಡಾಂ ಚ ವಾಸುದೇವಸ್ಯ ದೇವದೇವಸ್ಯ ಶಾರ್ಙ್ಗಿಣಃ ।
ವಿಶ್ವೇಷಾಂ ದೇವಭಾಗಾನಾಂ ಜನ್ಮಸಾಯುಜ್ಯಮೇವ ಚ ॥೬೫॥

ಯ ಇದಂ ಶೃಣುಯಾದ್ ವಿದ್ವಾನ್ ಪರ್ವಸು ದ್ವಿಜಸತ್ತಮಃ ।
ಧೂತಪಾಪ್ಮಾ ಜಿತಸ್ವರ್ಗೋ ಬ್ರಹ್ಮಭೂಯಾಯ ಗಚ್ಛತಿ ॥೬೬॥

ದೇವದೇವನಾದ ಶಾರ್ಙ್ಗಧನುಸ್ಸನ್ನು ಧರಿಸಿದ ವಾಸುದೇವನ ಕ್ರೀಡೆಗಳನ್ನೂ, ಎಲ್ಲ ದೇವತೋತ್ತಮರ ಅವತಾರ ಹಾಗೂ ಸಾಯುಜ್ಯವನ್ನು ಒಳಗೊಂಡ ಈ ಮಹಾಭಾರತವನ್ನು ಜ್ಞಾನಿಯಾದ ಯಾವ ದ್ವಿಜಶ್ರೇಷ್ಠನು ಪರ್ವದಿನಗಳಲ್ಲಿ ಕೇಳುವನೋ, ಅವನು ಪಾಪಗಳನ್ನು ಝಾಡಿಸಿಕೊಂಡು, ಸ್ವರ್ಗವನ್ನೇ ಗೆದ್ದು ಮೋಕ್ಷಕ್ಕೂ ಹೋಗಬಲ್ಲನು.

ಕಾರ್ಷ್ಣಂ ವೇದಮಿಮಂ ಸರ್ವಂ ಶೃಣುಯಾದ್ ಯಃ ಸಮಾಹಿತಃ ।
ಬ್ರಹ್ಮಹತ್ಯಾಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥೬೭॥

ವೇದವ್ಯಾಸರಿಂದ ರಚಿತವಾದ ಈ ವೇದವನ್ನು ಯಾವನು ಸಮಾಧಾನಚಿತ್ತನಾಗಿ ಪೂರ್ಣವಾಗಿ ಕೇಳುವನೋ ಅವನು ಬ್ರಹ್ಮಹತ್ಯೆಯಂತಹ ಪಾಪವನ್ನು ಮಾಡಿದ್ದರೂ ಅದು ತಕ್ಷಣದಲ್ಲಿಯೇ ನಾಶವಾಗುವುದು.

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಬ್ರಾಹ್ಮಣಾನ್ ಪಾದಮಂತತಃ ।
ಅಕ್ಷಯ್ಯಮನ್ನಪಾನಂ ವೈ ಪಿತೄಂಸ್ತಸ್ಯೋಪತಿಷ್ಠತೇ ॥೬೮॥

ಯಾವನು ಈ ಮಹಾಭಾರತದ ಸ್ವಲ್ಪ ಭಾಗವನ್ನಾದರೂ ಶ್ರಾದ್ಧಕಾಲದಲ್ಲಿ ಬ್ರಾಹ್ಮಣರಿಗೆ ಕೇಳಿಸುವನೋ ಅವನು ಮಾಡಿದ ಅನ್ನಪಾನವು ಅಕ್ಷಯಫಲವನ್ನು ನೀಡುವುದು ಮತ್ತು ಅವನ ಪಿತೃಗಳಿಗೆ ಅದು ತಲುಪುವುದು.

ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥೬೯॥

ಹೇ ಭರತಶ್ರೇಷ್ಠನೇ, ಧರ್ಮದ ವಿಷಯದಲ್ಲಿಯೂ, ಅರ್ಥದ ವಿಷಯದಲ್ಲಿಯೂ, ಕಾಮದ ವಿಷಯದಲ್ಲಿಯೂ, ಮೋಕ್ಷದ ವಿಷಯದಲ್ಲಿಯೂ ಇಲ್ಲಿ ಏನಿದೆಯೋ ಅದೇ ಬೇರೆ ಕಡೆ ಸಿಗುವುದು. ಇಲ್ಲಿ ಯಾವುದಿಲ್ಲವೋ ಅದು ಬೇರೆಲ್ಲೂ ಸಿಗಲಾರದು.

ವಾಚ್ಯತೇ ಯತ್ರ ಸತತಂ ಜಯಾಖ್ಯಂ ಭಾರತಂ ಮಹತ್ ।
ಶ್ರೀಶ್ಚ ಕೀರ್ತಿಶ್ಚ ವಿದ್ಯಾ ಚ ಭವಂತಿ ಮುದಿತಾಃ ಸದಾ ॥೭೦॥

ಎಲ್ಲಿ ಜಯವೆಂಬ ಹೆಸರುಳ್ಳ ಮಹಾಭಾರತದ ಪ್ರವಚನವು ಸತತವಾಗಿ ನಡೆಯುವುದೋ ಅಲ್ಲಿ ಸಂಪತ್ತು, ಕೀರ್ತಿ, ವಿದ್ಯೆ ಇವುಗಳೆಲ್ಲವೂ ಸಿದ್ಧಿಸುವವು. ಅಲ್ಲದೆ ಅಲ್ಲಿರುವ ಜನರು ಸದಾ ಸಂತೋಷದಿಂದ ಇರುವರು.

ಭಾರತಸ್ಯ ತು ವಕ್ತಾರಂ ಬ್ರಹ್ಮರ್ಷಿಂ ಚ ಮಹಾಗುರುಮ್ ।
ವೈಶಂಪಾಯನಮಾರೋಪ್ಯ ಸ್ವರ್ಣಭದ್ರಾಸನಂ ತದಾ ॥೭೧॥

ಜನಮೇಜಯಾದಿರಾಜಾನ ಆಸ್ತಿಕಾದ್ಯಾ ದ್ವಿಜಾತಯಃ ।
ಧರ್ಮದತ್ತಾದಿವೈಶ್ಯಾಶ್ಚ ಸೋಮ್ಯವಂಶ್ಯಾದಿಶೂದ್ರಕಾಃ ॥೭೨॥

ಪ್ರಯುತಂ ಚಾಯುತಂ ಚೇತಿ ಸಹಸ್ರಂ ಶತಮಿತ್ಯಪಿ ।
ದಶಕಂ ಚೇತಿ ನಿಷ್ಕಾಣಾಮಾನರ್ಚುಸ್ತಂ ಮಹಾಗುರುಮ್ ॥೭೩॥

ಭಾರತವನ್ನು ಪ್ರವಚನ ಮಾಡಿದ, ಮಹಾಗುರುವಾದ, ಬ್ರಹ್ಮರ್ಷಿಗಳಾದ ವೈಶಂಪಾಯನರನ್ನು ಚಿನ್ನದ ಭದ್ರಾಸನದಲ್ಲಿ ಕುಳ್ಳಿರಿಸಿ, ಜನಮೇಜಯನೇ ಮೊದಲಾದ ರಾಜರು, ಆಸ್ತಿಕನೇ ಮೊದಲಾದ ಬ್ರಾಹ್ಮಣರು, ಧರ್ಮದತ್ತನೇ ಮೊದಲಾದ ವೈಶ್ಯರು,

ಸೋಮ್ಯವಂಶನೇ ಮೊದಲಾದ ಶೂದ್ರರೂ ಆಗ ಹತ್ತುಲಕ್ಷ, ಹತ್ತು ಸಾವಿರ, ಸಾವಿರ, ನೂರು, ಹತ್ತು ಹೀಗೆ ತಮ್ಮ ಶಕ್ತ್ಯನುಸಾರ ಸುವರ್ಣನಿಷ್ಕಗಳನ್ನು ನೀಡುವ ಮೂಲಕ ಆ ಮಹಾಗುರುವನ್ನು ಪೂಜಿಸಿದರು.

ನಿಷ್ಕಾಣಾಂ ದಶಕಂ ದತ್ತ್ವಾ ಮೃತಪುತ್ರೋಽಮೃತಪ್ರಜಃ ।
ಊಷ್ಮಾದಿವ್ಯಾಧಿಯುಕ್ತಶ್ಚ ಶತಂ ದತ್ತ್ವಾ ನಿರಾಮಯಃ ॥೭೪॥

ಹತ್ತು ನಿಷ್ಕಗಳನ್ನು ದಕ್ಷಿಣೆಯಾಗಿ ನೀಡುವ ಮೂಲಕ ಮಕ್ಕಳನ್ನು ಕಳೆದುಕೊಂಡವನು ಮಕ್ಕಳನ್ನು ಪಡೆದನು. ನೂರು ನಿಷ್ಕಗಳನ್ನು ನೀಡಿದವನು ಕುಷ್ಠಾದಿ ಮಹಾವ್ಯಾಧಿಗಳಿಂದ ಕೂಡಿದವನಾದರೂ ಆರೋಗ್ಯವಂತನಾದನು.

ಸಹಸ್ರದಾನಾತ್ಸಂತಾನಹೀನಃ ಸಂತಾನಪುತ್ರವಾನ್ ।
ಆಯುರಾರೋಗ್ಯಮೈಶ್ವರ್ಯಂ ಭೇಜುಸ್ತೇಽನ್ನಂ ಚ ಪುತ್ರಕಾನ್ ॥೭೫॥

ಸಾವಿರನಿಷ್ಕಗಳನ್ನು ದಾನ ಮಾಡಿದವನು ಸಂತಾನಹೀನನಾಗಿದ್ದರೂ ಪರಂಪರೆಯನ್ನು ಬೆಳೆಸುವ ಮಗನನ್ನು ಪಡೆದನು. ಹೀಗೆ ದಕ್ಷಿಣೆಗಳನ್ನು ನೀಡಿದವರು ಆಯುಷ್ಯ, ಆರೋಗ್ಯ, ಐಶ್ವರ್ಯಗಳನ್ನು, ಅನ್ನಸಮೃದ್ಧಿಯನ್ನೂ, ಮಕ್ಕಳನ್ನೂ ಪಡೆದರು.

ಸುವರ್ಣಂ ರಜತಂ ರತ್ನಂ ಸರ್ವಾಣ್ಯಾಭರಣಾನಿ ಚ ।
ಸರ್ವೋಪಕರಣೈರ್ಯುಕ್ತಂ ನಿಧಿನಿಕ್ಷೇಪಸಂಯುತಮ್ ॥೭೬॥

ಇಷ್ಟಕಾಭಿತ್ತಿಸಂಯುಕ್ತಮಗ್ನಿಬಾಧಾದಿವರ್ಜಿತಮ್ ।
ದೇವಪೂಜಾಗ್ನಿಹೋತ್ರಾದಿಪಾಠಾರ್ಥಗೃಹಸಂಯುತಮ್ ॥೭೭॥

ಸಾಂತರ್ಬಹಿಃ ಸಂವರಣಂ ಸಪ್ರಾಸಾದಂ ಸಗೋಗೃಹಮ್ ॥೭೮॥

ವ್ಯಷ್ಟ್ಯಾ ಸಮಷ್ಟ್ಯಾ ವಾ ದದ್ಯಾತ್ ಸ್ವರ್ಗಾರೋಹಣಪರ್ವಣಿ ।
ನಿವೃತ್ತಿಕಾಮೋ ದದ್ಯಾಚ್ಚೇತ್ ಪುನರ್ಜನ್ಮ ನ ವಿದ್ಯತೇ ॥೭೯॥

ಸುವರ್ಣ, ಬೆಳ್ಳಿ, ರತ್ನ, ಎಲ್ಲ ರೀತಿಯ ಆಭರಣಗಳು, ಇವುಗಳೊಂದಿಗೆ ಎಲ್ಲ ರೀತಿಯ ಉಪಯುಕ್ತ ಸಾಮಗ್ರಿಗಳಿಂದ ಕೂಡಿದ ಅಮೂಲ್ಯವಸ್ತುಗಳನ್ನು

ಗೌಪ್ಯವಾಗಿಡಲು ಮತ್ತು ಬಳಕೆಯ ವಸ್ತುಗಳನ್ನು ಓರಣವಾಗಿಡಲು ವ್ಯವಸ್ಥೆಗಳಿಂದ ಕೂಡಿದ, ಇಟ್ಟಿಗೆಗಳಿಂದ ನಿರ್ಮಿಸಿದ ಗೋಡೆಗಳುಳ್ಳ, ಅಗ್ನಿಯೇ ಮೊದಲಾದ ಬಾಧೆಗಳಿಲ್ಲದ, ದೇವಪೂಜೆಗೆ ಅಗ್ನಿಹೋತ್ರ ಮೊದಲಾದವುಗಳಿಗೆ ಪಾಠಾದಿಗಳನ್ನು ನಡೆಸುವುದಕ್ಕೆ ಬೇಕಾದ ಕೋಣೆಗಳಿಂದ ಕೂಡಿದ, ಹೊರಗೂ ಮತ್ತು ಒಳಗೂ ಮುಚ್ಚಿಗೆಗಳುಳ್ಳ, ಉಪ್ಪರಿಗೆಯಿಂದ ಕೂಡಿದ, ಹಟ್ಟಿಯಿಂದ ಸಹಿತವಾದ ಮನೆಯನ್ನು ಪ್ರತ್ಯೇಕವಾಗಿಯಾಗಲಿ ಅಥವಾ ಜೊತೆ ಜೊತೆಯಾಗಿಯಾಗಲಿ, ಸ್ವರ್ಗಾರೋಹಣ ಪರ್ವ ಮುಗಿಯುವ ಕಾಲದಲ್ಲಿ ದಾನ ಮಾಡಬೇಕು. ನಿವೃತ್ತಿಯನ್ನು ಬಯಸುವವನು ಈ ರೀತಿ ದಾನ ಮಾಡಿದರೆ ಪುನರ್ಜನ್ಮವೇ ಬರಲಾರದು.

ಸಕಾಮಶ್ಚೇದ್ ಬ್ರಹ್ಮಕಲ್ಪಂ ಸುಖಂ ಬ್ರಹ್ಮಗೃಹೇ ವಸೇತ್ ॥೮೦॥

ಸಕಾಮ ವ್ಯಕ್ತಿಯು ಈ ರೀತಿ ದಾನ ಮಾಡುವುದರಿಂದ ಬ್ರಹ್ಮಗೃಹದಲ್ಲಿ ಬ್ರಹ್ಮಕಲ್ಪದ ಕಾಲ ಸುಖವಾಗಿ ವಾಸಮಾಡಬಲ್ಲನು.

ಪುರಾಣಮುಖತೋ ಯಸ್ಮಾದ್ ವೇದಾಂತಜ್ಞಾನಮಾಪ್ಯತೇ ।
ಸ ತೇನ ಗುರುರಾಖ್ಯಾತಸ್ತತ್ಪೂಜಾ ಹೀಶಪೂಜನಮ್ ॥೮೧॥

ವೇದಗಳ ನಿರ್ಣಯಜ್ಞಾನವು ಪುರಾಣಗಳ ಮುಖಾಂತರವೇ ಸಿಗಬಹುದಾದ್ದರಿಂದ ಪುರಾಣ ಹೇಳುವವರು ಗುರುಗಳೆಂದು ಪ್ರಸಿದ್ಧರಾಗಿರುವರು. ಅವರನ್ನು ಪೂಜಿಸಿದರೆ ಭಗವಂತನ ಪೂಜೆ ನಡೆಸಿದಂತೆಯೇ ಆಗುವುದು.

ಭಾರತಸ್ಯ ತು ವಕ್ತಾರಂ ಶ್ರೋತಾರಂ ಲೇಖಕಾಂಸ್ತದಾ ।
ಪ್ರಪೂಜಯಂತಿ ಸಂಹೃಷ್ಟಾಃ ಸಿದ್ಧಾಶ್ಚ ಪರಮರ್ಷಯಃ ॥೮೨॥

ಮಹಾಭಾರತವನ್ನು ಹೇಳುವವನನ್ನು, ಕೇಳುವವನನ್ನು ಹಾಗೂ ಲೇಖಕರನ್ನು ಸಂತೋಷದಿಂದ ಸಿದ್ಧರು, ಮುನಿಶ್ರೇಷ್ಠರು ಪೂಜಿಸುವರು.

ಮಹಾಭಾರತವಕ್ತಾರಂ ನಾರ್ಚಯಂತೀಹ ಯೇ ನರಾಃ ।
ತೇಷಾಂ ಸರ್ವಕ್ರಿಯಾಹಾನಿರ್ಭವೇದ್ ದೇವಾಃ ಶಪಂತಿ ಚ ॥೮೩॥

ಯಾವ ಮನುಷ್ಯರು ಮಹಾಭಾರತವನ್ನು ಹೇಳುವವನನ್ನು ಅರ್ಚಿಸುವುದಿಲ್ಲವೋ ಅವರು ಮಾಡಿದ ಎಲ್ಲ ಕ್ರಿಯೆಗಳು ನಿಷ್ಫಲವಾಗುವವು. ಅಲ್ಲದೆ ದೇವತೆಗಳೂ ಅವರನ್ನು ಶಪಿಸುವರು.

ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ಜಯಮಿಚ್ಛತಾ ।
ಇತಿಹಾಸಮಿದಂ ಶ್ರುತ್ವಾ ಪುಣ್ಯಂ ಸಫಲಮಶ್ನುತೇ ॥೮೪॥

ಯಾವನು ಜಯವನ್ನು ಬಯಸುವನೋ ಅವನು ಜಯ ಎಂದು ಪ್ರಸಿದ್ಧವಾದ ಈ ಇತಿಹಾಸವನ್ನು ಕೇಳಲೇಬೇಕು. ಈ ಇತಿಹಾಸವನ್ನು ಕೇಳುವುದರಿಂದ ನಿಶ್ಚಯವಾಗಿ ಫಲವನ್ನು ಕೊಡುವ ಪುಣ್ಯವನ್ನು ಗಳಿಸುವನು.

ರಾಜ್ಞಾ ರಾಜಸುತೈಶ್ಚೈವ ಗರ್ಭಿಣ್ಯಾ ಚೈವ ಯೋಷಿತಾ ॥೮೫॥

ರಾಜನಿಂದಲೂ, ರಾಜನ ಮಕ್ಕಳಿಂದಲೂ ಹಾಗೂ ಗರ್ಭಿಣೀ ಸ್ತ್ರೀಯರಿಂದಲೂ ಈ ಮಹಾಭಾರತವು ಶ್ರವಣ ಯೋಗ್ಯವಾಗಿದೆ.

ಸ್ವರ್ಗಕಾಮೋ ಲಭೇತ್ಸ್ವರ್ಗಂ ಜಯಕಾಮೋ ಲಭೇಜ್ಜಯಮ್ ।
ಗರ್ಭಿಣೀ ಲಭತೇ ಪುತ್ರಂ ಕನ್ಯಾಂ ವಾ ಬಹುಭಾಗಿನೀಮ್ ॥೮೬॥

ಸ್ವರ್ಗವನ್ನು ಬಯಸುವವನು ಸ್ವರ್ಗವನ್ನು ಪಡೆಯುತ್ತಾನೆ. ಯುದ್ಧಾದಿಗಳಲ್ಲಿ ಜಯವನ್ನು ಬಯಸುವವನು ಜಯವನ್ನು ಪಡೆಯುತ್ತಾನೆ. ಗರ್ಭಿಣಿಯಾದವಳು ಪುತ್ರನನ್ನು ಪಡೆಯುತ್ತಾಳೆ ಅಥವಾ ಬಹಳ ಭಾಗ್ಯವಂತಳಾದ ಕನ್ಯೆಯನ್ನು ಪಡೆಯುತ್ತಾಳೆ.

ಅನಾಗತಶ್ಚ ಮೋಕ್ಷಶ್ಚ ಕೃಷ್ಣದ್ವೈಪಾಯನಃ ಪ್ರಭುಃ ।
ಸಂದರ್ಭಂ ಭಾರತಸ್ಯಾಸ್ಯ ಕೃತವಾನ್ ಧರ್ಮಕಾಮ್ಯಯಾ ॥೮೭॥

ಜನನ-ಮರಣಗಳಿಲ್ಲದೆ ನಿತ್ಯಮುಕ್ತರಾದ, ಸರ್ವಸಮರ್ಥರಾದ ಕೃಷ್ಣದ್ವೈಪಾಯನರು ಧರ್ಮವನ್ನು ಜಗತ್ತಿನಲ್ಲಿ ಪ್ರಚುರಗೊಳಿಸುವ ಇಚ್ಛೆಯಿಂದ ಈ ಭಾರತಗ್ರಂಥವನ್ನು ರಚಿಸಿದ್ದಾರೆ.

ಷಷ್ಟಿಂ ಶತಸಹಸ್ರಾಣಿ ಚಕಾರಾನ್ಯಾಂ ಸ ಸಂಹಿತಾಮ್ ।
ತ್ರಿಂಶಚ್ಛತಸಹಸ್ರಾಣಿ ದೇವಲೋಕೇ ಪ್ರತಿಷ್ಠಿತಮ್ ॥೮೮॥

ಪಿತ್ರ್ಯೇ ಪಂಚದಶಂ ಜ್ಞೇಯಂ ಯಕ್ಷಲೋಕೇ ಚತುರ್ದಶ ।
ಏಕಂ ಶತಸಹಸ್ರಂ ತು ಮಾನುಷೇಷು ಪ್ರಭಾಷಿತಮ್ ॥೮೯॥

ಆ ಕೃಷ್ಣದ್ವೈಪಾಯನರು ಅರವತ್ತು ಲಕ್ಷ ಗ್ರಂಥ ಪರಿಮಿತವಾದ ಬೇರೊಂದು ಸಂಹಿತೆಯನ್ನು ರಚಿಸಿದರು. ಅದರಲ್ಲಿ ಮೂವತ್ತು ಲಕ್ಷ ಪರಿಮಿತವಾದ ಗ್ರಂಥವು

ದೇವಲೋಕದಲ್ಲಿ ನೆಲೆಗೊಂಡಿತು. ಪಿತೃಲೋಕದಲ್ಲಿ ಹದಿನೈದು ಲಕ್ಷ ಹಾಗೂ ಯಕ್ಷಲೋಕದಲ್ಲಿ ಹದಿನಾಲ್ಕು ಲಕ್ಷ ಪರಿಮಿತವಿದೆ ಎಂದು ತಿಳಿಯಬೇಕು. ಒಂದು ಲಕ್ಷ ಪರಿಮಿತವಾದ ಗ್ರಂಥವು ಈ ಮನುಷ್ಯಲೋಕದಲ್ಲಿ ಪ್ರಸಿದ್ಧವಾಗಿದೆ.

ನಾರದೋಽಶ್ರಾವಯದ್ದೇವಾನ್ ಅಸಿತೋ ದೇವಲಃ ಪಿತೄನ್ ।
ರಕ್ಷೋ ಯಕ್ಷಾನ್ ಶುಕೋ ಮರ್ತ್ಯಾನ್ ವೈಶಂಪಾಯನ ಏವ ತು ॥

ಈ ಮಹಾಭಾರತದ ಪ್ರವಚನವನ್ನು ದೇವತೆಗಳಿಗೆ ನಾರದರು, ಪಿತೃಗಳಿಗೆ ಅಸಿತ ಎಂಬ ಉಪನಾಮವುಳ್ಳ ದೇವಲರು, ರಾಕ್ಷಸರು ಹಾಗೂ ಯಕ್ಷರಿಗೆ ಶುಕಮುನಿಗಳೂ, ಮನುಷ್ಯರಿಗೆ ವೈಶಂಪಾಯನರು ಹೇಳಿದ್ದಾರೆ.

ಇತಿಹಾಸಮಿಮಂ ಪುಣ್ಯಂ ಮಹಾರ್ಥಂ ವೇದಸಮ್ಮಿತಮ್ ।
ವ್ಯಾಸೋಕ್ತಂ ಶ್ರೂಯತೇ ಯೇನ ಕೃತ್ವಾ ಬ್ರಾಹ್ಮಣಮಗ್ರತಃ ॥೯೧॥

ಸ ನರಃ ಸರ್ವಕಾಮಾಂಶ್ಚ ಕೀರ್ತಿಂ ಪ್ರಾಪ್ಯೇಹ ಶೌನಕ ।
ಗಚ್ಛೇತ್ ಪರಮಿಕಾಂ ಸಿದ್ಧಿಮತ್ರ ಮೇ ನಾಸ್ತಿ ಸಂಶಯಃ ॥೯೨॥

ವೇದವ್ಯಾಸರಿಂದ ಉಕ್ತವಾದ, ಮಂಗಳಮಯವಾದ, ಮಹಾ ಅರ್ಥಗಳುಳ್ಳ, ವೇದಸದೃಶವಾದ ಈ ಇತಿಹಾಸವನ್ನು ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು ಯಾವಾತನು ಕೇಳುವನೋ ಆ ನರನು ಇಹಲೋಕದಲ್ಲಿ ಸರ್ವಕಾಮನೆಗಳನ್ನೂ, ಕೀರ್ತಿಯನ್ನೂ ಪಡೆಯಬಲ್ಲನು. ಹೇ ಶೌನಕನೇ, ಅವನು ಇಹ-ಪರಗಳಲ್ಲಿ ಉತ್ತಮವಾದ ಸಿದ್ಧಿಯನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.

ಭಾರತಾಧ್ಯಯನಾತ್ ಪುಣ್ಯಾದಪಿ ಪಾದಮಧೀಯತಃ ।
ಶ್ರದ್ಧಯಾ ಪರಯಾ ಭಕ್ತ್ಯಾ ಶ್ರಾವ್ಯತೇ ಚಾಪಿ ಯೇನ ತು ॥೯೩॥

ಯ ಇಮಾಂ ಸಂಹಿತಾಂ ಪುಣ್ಯಾಂ ಪುತ್ರಮಧ್ಯಾಪಯಚ್ಛುಕಮ್ ॥೯೪॥

ಯಾವ ವೇದವ್ಯಾಸರು ಈ ಮಂಗಳಕರವಾದ ಸಂಹಿತೆಯನ್ನು ತನ್ನ ಪುತ್ರರಾದ ಶುಕಮುನಿಗಳಿಗೆ ಉಪದೇಶಿಸಿದರೋ ಅಂತಹ ಸಂಹಿತೆಯ ಬಗ್ಗೆ, ವೇದವ್ಯಾಸರ

ಬಗ್ಗೆ ಶುಕಮುನಿಗಳ ಬಗ್ಗೆ ಉತ್ತಮವಾದ ಶ್ರದ್ಧೆಯನ್ನಿಟ್ಟು ಭಕ್ತಿಯಿಂದ ಯಾವನು ಈ ಸಂಹಿತೆಯ ನಾಲ್ಕನೆಯ ಒಂದಂಶವನ್ನಾಗಲಿ ಅಥವಾ ಶ್ಲೋಕದ ಒಂದು ಪಾದವನ್ನಾಗಲಿ ಅಧ್ಯಯನ ಮಾಡುವನೋ ಅವನು ಭಾರತವನ್ನು ಅಧ್ಯಯನ ಮಾಡಿದ ಪುಣ್ಯದಿಂದ ಉತ್ಕೃಷ್ಟವಾದ ಸಿದ್ಧಿಯನ್ನು ಪಡೆಯುತ್ತಾನೆ.

ಮುಂದಿನ ನಾಲ್ಕು ಶ್ಲೋಕಗಳು ಭಾರತ ಸಾವಿತ್ರೀ ಅಥವಾ ಚತುಃಶ್ಲೋಕೀ ಭಾರತ ಎಂದು ಪ್ರಸಿದ್ಧವಾದ ಭಾಗ–

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಸಂಸಾರೇಷ್ವನುಭೂತಾನಿ ಯಾಂತಿ ಯಾಸ್ಯಂತಿ ಚಾಪರೇ ॥೯೫॥

ಹರ್ಷಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೯೬॥

ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ ।
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥೯೭॥

ನಾವು ಎತ್ತಿಬಂದ ಸಾವಿರಾರು ಜನ್ಮಗಳಲ್ಲಿ ಸಾವಿರಾರು ಮಂದಿ ತಂದೆ-ತಾಯಿಗಳು, ನೂರಾರು ಮಂದಿ ಹೆಂಡಿರು-ಮಕ್ಕಳು ನಮ್ಮ ಅನುಭವದಲ್ಲಿ ಬಂದಿರುವರು. ಈಗಲೂ ಇದ್ದಾರೆ. ಮುಂದೆಯೂ ಬೇರೆ ಮಂದಿ ಬರಲಿದ್ದಾರೆ. ಹಾಗೆಯೇ ಪ್ರತಿನಿತ್ಯವೂ ಮೂರ್ಖನಿಗೆ ಸಾವಿರಾರು ಸಂತೋಷವನ್ನು ನೀಡುವ ಘಟನೆಗಳು, ನೂರಾರು ಭಯವನ್ನು ತಂದುಕೊಡುವ ಘಟನೆಗಳು ಎದುರಾಗುತ್ತವೆ. ಆದರೆ ಜ್ಞಾನಿಗೆ ಇದ್ಯಾವುದೂ ಇಲ್ಲ. ಕೈಗಳನ್ನೆತ್ತಿಕೊಂಡು ಬೊಬ್ಬಿಡುತ್ತಾ ನಾನು ಹೇಳುತ್ತಿದ್ದೇನೆ. ನನ್ನ ಮಾತುಗಳನ್ನು ಯಾರೂ ಕೇಳಿಸಿಕೊಳ್ಳುತ್ತಿಲ್ಲ. ಅದೇನೆಂದರೆ ಧರ್ಮದಿಂದಲೇ ಅರ್ಥವು, ಕಾಮವು ಲಭಿಸುವುದು. ಆದರೆ ಧರ್ಮವನ್ನು ಏತಕ್ಕಾಗಿ ನೀವು ಸೇವಿಸುತ್ತಿಲ್ಲ?

ನ ಜಾತು ಕಾಮಾನ್ನ ಭಯಾನ್ನ ಲೋಭಾದ್
ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ ।
ನಿತ್ಯೋ ಧರ್ಮಃ ಸುಖದುಃಖೇ ತ್ವನಿತ್ಯೇ
ಜೀವೋ ನಿತ್ಯೋ ಹೇತುರಸ್ಯ ತ್ವನಿತ್ಯಃ ॥೯೮॥

ಯಾವತ್ತೂ ಕೂಡ ಕಾಮದಿಂದಾಗಲಿ, ಭಯದಿಂದಾಗಲಿ, ಅತಿಯಾಸೆಯಿಂದ ಆಗಲಿ, ಅಷ್ಟೇ ಏಕೆ, ಬದುಕಬೇಕೆಂಬ ಕಾರಣದಿಂದಾಗಲಿ ಧರ್ಮವನ್ನು ಬಿಡಕೂಡದು. ಏಕೆಂದರೆ ಸುಖ-ದುಃಖಗಳು ಅನಿತ್ಯವಾಗಿವೆ. ಧರ್ಮವು ನಿತ್ಯವಾಗಿದೆ. ಅದೇ ರೀತಿ ಜೀವನು ನಿತ್ಯನಾಗಿರುವನು. ಈ ಜೀವನ ಜೀವನಕ್ಕೆ ಕಾರಣವಾದ ಸಂಸಾರವು ಅನಿತ್ಯವಾಗಿದೆ.

ಇಮಾಂ ಭಾರತಸಾವಿತ್ರೀಂ ಪ್ರಾತರುತ್ಥಾಯ ಯಃ ಪಠೇತ್ ।
ಸ ಭಾರತಫಲಂ ಪ್ರಾಪ್ಯ ಪರಂ ಬ್ರಹ್ಮಾಧಿಗಚ್ಛತಿ ॥೯೯॥

ಯಾವನು ಮುಂಜಾನೆ ಎದ್ದು ಈ ಭಾರತದ ಸಾವಿತ್ರೀಯನ್ನು (ಗಾಯತ್ರಿಯಂತೆ ಸಾರಭೂತವಾದ ನಾಲ್ಕು ಶ್ಲೋಕಗಳನ್ನು) ಪಠಿಸುವನೋ ಅವನು ಭಾರತದ ಫಲವನ್ನು ಪಡೆದು ಪರಬ್ರಹ್ಮನನ್ನು ಸೇರುವನು.

ಯಥಾ ಸಮುದ್ರೋ ಭಗವಾನ್ ಯಥಾ ಹಿ ಹಿಮವಾನ್ ಗಿರಿಃ ।
ಖ್ಯಾತಾವುಭೌ ರತ್ನನಿಧೀ ತಥಾ ಭಾರತಮುಚ್ಯತೇ ॥೧೦೦॥

ಐಶ್ವರ್ಯಯುಕ್ತವಾದ ಸಮುದ್ರ ಮತ್ತು ಹಿಮವದ್ ಪರ್ವತ ಎಂಬ ಈ ಎರಡು ಹೇಗೆ ರತ್ನನಿಧಿ ಎಂದು ಪ್ರಸಿದ್ಧವಾಗಿವೆಯೋ ಹಾಗೆಯೇ ಭಾರತವೂ ರತ್ನನಿಧಿ ಎಂದು ಪ್ರಸಿದ್ಧವಾಗಿದೆ.

ಕಾರ್ಷ್ಣಂ ವೇದಮಿಮಂ ವಿದ್ವಾನ್ ಶ್ರಾವಯಿತ್ವಾऽರ್ಥಮಶ್ನುತೇ ॥೧೦೧॥

ಕೃಷ್ಣನೆನಿಸಿಕೊಂಡ ವೇದವ್ಯಾಸರ ಈ ವೇದವನ್ನು ಜ್ಞಾನಿಯಾದವನು ಇನ್ನೊಬ್ಬರಿಗೆ ಕೇಳಿಸುವ ಮೂಲಕ ಎಲ್ಲ ಪುರುಷಾರ್ಥಗಳನ್ನೂ ಪಡೆಯಬಲ್ಲನು.

ಇದಂ ಭಾರತಮಾಖ್ಯಾನಂ ಯಃ ಪಠೇತ್ ಸುಸಮಾಹಿತಃ ।
ಸ ಗಚ್ಛೇತ್ ಪರಮಾಂ ಸಿದ್ಧಿಮಿತಿ ಮೇ ನಾಸ್ತಿ ಸಂಶಯಃ ॥೧೦೨॥

ಯಾವನು ಸಮಾಧಾನಚಿತ್ತನಾಗಿ ಈ ಮಹಾಭಾರತವೆಂಬ ಇತಿಹಾಸ ಗ್ರಂಥವನ್ನು ಪಠಿಸುವನೋ ಅವನು ಅತ್ಯುತ್ತಮವಾದ ಸಿದ್ಧಿಯನ್ನು ಹೊಂದಬಲ್ಲನು. ನನಗೆ ಈ ವಿಷಯದಲ್ಲಿ ಸಂಶಯವೇ ಇಲ್ಲ.

ದ್ವೈಪಾಯನೋಷ್ಠಪುಟನಿಸ್ಸೃತಮಪ್ರಮೇಯಂ
ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಧಿಗಚ್ಛತಿ ವಾಚ್ಯಮಾನಂ
ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ॥೧೦೩॥

ವೇದವ್ಯಾಸರ ತುಟಿಗಳಿಂದ ಹೊರಹೊಮ್ಮಿದ, ಎಣಿಕೆಗೆ ನಿಲುಕದ, ಮಂಗಳಮಯವಾದ, ಪರಿಶುದ್ಧವಾದ, ಜೊತೆಗೆ ಪಾಪವನ್ನು ಪರಿಹರಿಸಿ ಮಾಂಗಲ್ಯವನ್ನು ನೀಡುವ ಮಹಾಭಾರತದ ಪ್ರವಚನವನ್ನು ಯಾವನು ಚೆನ್ನಾಗಿ ಕೇಳುವನೋ ಅವನಿಗೆ ಪುಷ್ಕರವೆಂಬ ಪರ್ವಕಾಲದಲ್ಲಿ ಗಂಗಾದಿ ಜಲದಿಂದ ಅಭಿಷೇಕ ಮಾಡುವುದರಿಂದ ಏನು ಉಪಯೋಗ? (ಪುಷ್ಕರವೆಂಬ ಪರ್ವಕಾಲದಲ್ಲಿ ಗಂಗಾದಿ ತೀರ್ಥಸ್ನಾನವು ಕೋಟಿ ಗ್ರಹಣಸ್ನಾನಕ್ಕೆ ಸಮ ಎಂದು ಅತಿಶಯ ಫಲವನ್ನು ಹೇಳಿದ್ದಾರೆ. ಮಹಾಭಾರತ ಶ್ರವಣವು ಅದಕ್ಕಿಂತಲೂ ಹೆಚ್ಚು ಫಲವನ್ನು ನೀಡುತ್ತದೆ ಎಂಬುದು ಇಲ್ಲಿನ ಅಭಿಪ್ರಾಯ).

ಯೋ ಗೋಶತಂ ಕನಕಶೃಂಗಮಯಂ ದದಾತಿ
ವಿಪ್ರಾಯ ವೇದವಿದುಷೇ ಸುಬಹುಶ್ರುತಾಯ ।
ಪುಣ್ಯಾಂ ಚ ಭಾರತಕಥಾಂ ಸತತಂ ಶೃಣೋತಿ
ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯ ಚೈವ ॥೧೦೪॥

ಯಾವನು ವೇದಜ್ಞಾನಿಯಾದ, ಒಳ್ಳೆಯ ರೀತಿಯಿಂದ ಬಹುಶಾಸ್ತ್ರಾಧ್ಯಯನವನ್ನು ನಡೆಸಿದ ಬ್ರಾಹ್ಮಣನಿಗೆ ನೂರು ಗೋವುಗಳನ್ನು ಶೃಂಗಗಳಿಗೆ ಚಿನ್ನವನ್ನು ಮುಚ್ಚಿ ದಾನ ಮಾಡುವನೋ ಅವನಿಗೂ, ಯಾವನು ಸತತವಾಗಿ ಪುಣ್ಯಪ್ರದವಾದ ಮಹಾಭಾರತದ ಕಥೆಯನ್ನು ಕೇಳುವನೋ ಅವನಿಗೂ ಸಮಾನವಾದ ಫಲವು ಲಭಿಸುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ವರ್ಗಾರೋಹಣಪರ್ವಣಿ ಯುಧಿಷ್ಠಿರಾದಿಪಾಂಡವಾನಾಂ ಶ್ರೀಕೃಷ್ಣಸ್ಯ
ಚ ಸ್ವಸ್ವಮೂಲರೂಪಪ್ರವೇಶಾನುವರ್ಣನಂ ನಾಮ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಭಾರತಶ್ರವಣವಿಧ್ಯಧ್ಯಾಯಃ

ಐದನೆಯ ಅಧ್ಯಾಯ

ಜನಮೇಜಯಃ

ಭಗವನ್ ಕೇನ ವಿಧಿನಾ ಶ್ರೋತವ್ಯಂ ಭಾರತಂ ಬುಧೈಃ ।
ಫಲಂ ಕಿಂ ಕೇ ಚ ದೇವಾಶ್ಚ ಪೂಜ್ಯಾ ವೈ ಪಾರಣೇಷ್ವಿಹ ॥೧॥

ಜನಮೇಜಯ– ಹೇ ಭಗವನ್, ಮಹಾಭಾರತವನ್ನು ಜ್ಞಾನಿಗಳು ಯಾವ ವಿಧಿಯಿಂದ ಕೇಳಬೇಕು? ಮಹಾಭಾರತ ಶ್ರವಣದಿಂದ ಏನು ಫಲ? ಪಾರಣೆಯ ಕಾಲದಲ್ಲಿ ಯಾವೆಲ್ಲ ದೇವತೆಗಳನ್ನು ಪೂಜಿಸಬೇಕು?

ದೇಯಂ ಸಮಾಪ್ತೇ ಭಗವನ್ ಕಿಂ ಚ ಪರ್ವಣಿ ಪರ್ವಣಿ ।
ವಾಚಕಃ ಕೀದೃಶಶ್ಚಾತ್ರ ಏಷ್ಟವ್ಯಸ್ತದ್ ಬ್ರವೀಹಿ ಮೇ ॥೨॥

ಹೇ ಭಗವನ್, ಪ್ರತಿಯೊಂದು ಪರ್ವವು ಸಮಾಪ್ತವಾದಾಗ ಏನೆಲ್ಲ ದಾನಗಳನ್ನು ನೀಡಬೇಕು? ಈ ಮಹಾಭಾರತವನ್ನು ಕೇಳಲು ಯಾವ ರೀತಿಯ ಪ್ರವಚನಕಾರರನ್ನು ನಿಯೋಜಿಸಬೇಕು? ಇವೆಲ್ಲವನ್ನೂ ನನಗೆ ತಿಳಿಸಿಕೊಡಿ.

ವೈಶಂಪಾಯನಃ

ಶೃಣು ರಾಜನ್ ವಿಧಿಮಿಮಂ ಫಲಂ ಯಚ್ಚಾಪಿ ಭಾರತಾತ್ ।
ಶ್ರುತಾದ್ ಭವತಿ ರಾಜೇಂದ್ರ ಯತ್ತ್ವಂ ಮಾಮನುಪೃಚ್ಛಸಿ ॥೩॥

ವೈಶಂಪಾಯನ– ಹೇ ರಾಜಶ್ರೇಷ್ಠನಾದ ಜನಮೇಜಯನೇ, ನೀನು ಕೇಳುತ್ತಿರುವುದಕ್ಕೆ ನಾನು ಹೇಳಬಯಸಿದ್ದೇನೆ. ಈ ಭಾರತವನ್ನು ಕೇಳುವ ವಿಧಿಯನ್ನು, ಇದರಿಂದ ಉಂಟಾಗುವ ಏನೆಲ್ಲ ಫಲವಿದೆಯೋ, ಅದನ್ನು ಕೇಳುವುದರಿಂದ ಏನಾಗುವುದೋ ಅದನ್ನೂ ಹೇಳುವೆನು, ಕೇಳು.

ದಿವಿ ದೇವಾ ಮಹೀಪಾಲ ಕ್ರೀಡಾರ್ಥಮವನಿಂ ಗತಾಃ ।
ಕೃತ್ವಾ ಕಾರ್ಯಮಿದಂ ಚೈವ ತತಶ್ಚ ದಿವಮಾಗತಾಃ ॥೪॥

ಹೇ ಮಹೀಪಾಲನೇ, ದೇವಲೋಕದಲ್ಲಿರುವ ದೇವತೆಗಳು ಕ್ರೀಡೆಗೋಸ್ಕರ ಭೂಮಿಗೆ ಬಂದರು. ಈ ಎಲ್ಲ ಕಾರ್ಯಗಳನ್ನು ಮಾಡಿ ಅನಂತರ ದೇವಲೋಕಕ್ಕೆ ತೆರಳಿದರು.

ಹಂತ ಯತ್ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ಸಮಾಹಿತಃ ।
ಋಷೀಣಾಂ ದೇವತಾನಾಂ ಚ ಸಂಭವಂ ವಸುಧಾತಳೇ ॥೫॥

ಭೂಮಿಯಲ್ಲಿ ಋಷಿಗಳ ಮತ್ತು ದೇವತೆಗಳ ಅವತಾರವನ್ನು ಕುರಿತು ನಾನೇನು ಹೇಳಲಿರುವನೋ ಆ ಅದ್ಭುತವನ್ನು ಸಮಾಧಾನಚಿತ್ತನಾಗಿ ಕೇಳು.

ಅತ್ರ ರುದ್ರಾಸ್ತಥಾ ಸಾಧ್ಯಾ ವಿಶ್ವೇದೇವಾಶ್ಚ ಶಾಶ್ವತಾಃ ।
ಆದಿತ್ಯಾಶ್ಚಾಶ್ವಿನೌ ದೇವೌ ಲೋಕಪಾಲಾ ಮಹರ್ಷಯಃ ॥೬॥

ಗುಹ್ಯಕಾಶ್ಚ ಸಗಂಧರ್ವಾ ನಾಗಾ ವಿದ್ಯಾಧರಾಸ್ತಥಾ ।
ಸಿದ್ಧಾ ಧರ್ಮಃ ಸ್ವಯಂಭೂಶ್ಚ ಮುನಿಃ ಕಾತ್ಯಾಯನೋ ವರಃ ॥೭॥

ಗಿರಯಃ ಸಾಗರಾ ನದ್ಯಸ್ತಥೈವಾಪ್ಸರಸಾಂ ಗಣಾಃ ।
ಗ್ರಹಾಃ ಸಂವತ್ಸರಾಶ್ಚೈವ ಅಯನಾನ್ಯೃತವಸ್ತಥಾ ॥೮॥

ಸ್ಥಾವರಂ ಜಂಗಮಂ ಚೈವ ಜಗತ್ಸರ್ವಂ ಸುರಾಸುರಮ್ ।
ಭಾರತೇ ಭರತಶ್ರೇಷ್ಠ ಏಕಸ್ಥಮಿಹ ದೃಶ್ಯತೇ ॥೯॥

ಹೇ ಭರತಶ್ರೇಷ್ಠನೇ, ಈ ಭಾರತದಲ್ಲಿ ರುದ್ರರು, ಹಾಗೆಯೇ ಸಾಧ್ಯರು, ಶಾಶ್ವತರಾದ ವಿಶ್ವೇದೇವತೆಗಳು, ಆದಿತ್ಯರು, ಅಶ್ವಿನೀದೇವತೆಗಳು, ಲೋಕಪಾಲ ದೇವತೆಗಳು, ಮಹರ್ಷಿಗಳು, ಗಂಧರ್ವರೊಂದಿಗೆ ಕೂಡಿದ ಗುಹ್ಯಕರು, ನಾಗರು, ವಿದ್ಯಾಧರರು, ಸಿದ್ಧರು, ಯಮಧರ್ಮನು, ಬ್ರಹ್ಮದೇವನು, ಶ್ರೇಷ್ಠನಾದ ಕಾತ್ಯಾಯನ ಮುನಿಯು, ಗಿರಿದೇವತೆಗಳು, ಸಾಗರದೇವತೆಗಳು, ನದೀದೇವತೆಗಳು, ಅಪ್ಸರೋಗಣಗಳು, ಗ್ರಹಗಳು, ಸಂವತ್ಸರಗಳು, ಅಯನಗಳು, ಋತುಗಳು, ಹಾಗೆಯೇ ಸ್ಥಾವರಜಂಗಮಾತ್ಮಕವಾದ ಮತ್ತು ಸುರಾಸುರಾತ್ಮಕವಾದ ಇಡೀ ಜಗತ್ತು ಒಂದೇ ಕಡೆಯಲ್ಲಿ ಕಾಣಿಸಿಗುವುದು.

ತೇಷಾಂ ಶ್ರುತ್ವಾ ಪ್ರತಿಷ್ಠಾನಂ ನಾಮಕರ್ಮಾನುಕೀರ್ತನಾತ್ ।
ಕೃತ್ವಾಽಪಿ ಪಾತಕಂ ಘೋರಂ ಸದ್ಯೋ ಮುಚ್ಯೇತ ಮಾನವಃ ॥೧೦॥

ಆ ಎಲ್ಲ ದೇವತೆಗಳ ಪ್ರಖ್ಯಾತಿಯನ್ನು ಕೇಳಿ, ಜೊತೆಗೆ ಅವರ ಹೆಸರುಗಳನ್ನೂ, ಅವರು ಮಾಡಿದ ಕರ್ಮಗಳನ್ನೂ ಕೀರ್ತನೆಗೈಯ್ಯುವುದರ ಮೂಲಕ ಘೋರವಾದ ಪಾತಕಗಳನ್ನು ಮಾಡಿದ್ದರೂ ಮನುಷ್ಯನು ಕೂಡಲೇ ಅವುಗಳಿಂದ ಬಿಡುಗಡೆ ಹೊಂದುವನು.

ಇತಿಹಾಸಮಿಮಂ ಶ್ರುತ್ವಾ ಯಥಾವದನುಪೂರ್ವಶಃ ।
ಸಂಯತಾತ್ಮಾ ಶುಚಿರ್ಭೂತ್ವಾ ಪಾರಂ ಗತ್ವಾ ಚ ಭಾರತೇ ॥೧೧॥

ತೇಷಾಂ ಶ್ರಾದ್ಧಾನಿ ದೇಯಾನಿ ಶ್ರುತ್ವಾ ಭಾರತ ಭಾರತಮ್ ।
ಬ್ರಾಹ್ಮಣೇಭ್ಯೋ ಯಥಾಶಕ್ತ್ಯಾ ಭಕ್ತ್ಯಾ ಚ ಭರತರ್ಷಭ ॥೧೨॥

ಹೇ ಭರತಶ್ರೇಷ್ಠನಾದ ಭಾರತನೇ, ಈ ಇತಿಹಾಸವನ್ನು ಯಥಾವತ್ತಾಗಿ ಅನುಕ್ರಮವಾಗಿ, ಇಂದ್ರಿಯನಿಗ್ರಹದೊಂದಿಗೆ, ಶುಚಿರ್ಭೂತನಾಗಿ ಕೇಳಿ, ಈ ಮಹಾಭಾರತದ ಕೊನೆಯ ಭಾಗವನ್ನು ತಲುಪಿದಾಗ, ಆ ಎಲ್ಲ ರುದ್ರಾದಿ ದೇವತೆಗಳ ಪ್ರೀತ್ಯರ್ಥವಾಗಿ ಶ್ರಾದ್ಧಕರ್ಮವನ್ನು ನಡೆಸಬೇಕು. ಈ ಭಾರತವನ್ನು ಕೇಳಿ ಶಕ್ತ್ಯನುಸಾರವಾಗಿ ಭಕ್ತಿಯಿಂದ ಬ್ರಾಹ್ಮಣರಿಗೆ ದಾನ ಮಾಡಬೇಕು.

ಮಹಾದಾನಾನಿ ದೇಯಾನಿ ರತ್ನಾನಿ ವಿವಿಧಾನಿ ಚ ।
ಗಾವಃ ಕಾಂಸ್ಯೋಪದೋಹಾಶ್ಚ ಕನ್ಯಾಶ್ಚೈವ ಸ್ವಲಂಕೃತಾಃ ॥೧೩॥

ಸರ್ವಕಾಮಗುಣೋಪೇತಾ ಯಾನಾನಿ ವಿವಿಧಾನಿ ಚ ।
ಭವನಾನಿ ವಿಚಿತ್ರಾಣಿ ಭೂಮಿರ್ವಾಸಾಂಸಿ ಕಾಂಚನಮ್ ॥೧೪॥

ವಾಹನಾನಿ ಚ ದೇಯಾನಿ ಹಯಾ ಮತ್ತಾಶ್ಚ ವಾರಣಾಃ ।
ಶಯನಂ ಶಿಬಿಕಾಶ್ಚೈವ ಸ್ಯಂದನಾಶ್ಚ ಸ್ವಲಂಕೃತಾಃ ॥೧೫॥

ಮಹಾದಾನಗಳನ್ನೂ, ನಾನಾ ರೀತಿಯ ರತ್ನಗಳನ್ನೂ, ಹಾಲು ಕರೆಯುವ ಕಂಚಿನ ಪಾತ್ರೆಗಳ ಜೊತೆಗೆ ಗೋವುಗಳನ್ನೂ, ಅಲಂಕೃತರಾದ ಕನ್ಯೆಯರನ್ನೂ, ಬಯಸಿದ

ವಸ್ತುಗಳನ್ನೆಲ್ಲ ಸಂಗ್ರಹಿಸಿಡಬಹುದಾದ ನಾನಾ ರೀತಿಯ ವಾಹನಗಳನ್ನೂ, ಚಿತ್ರ ವಿಚಿತ್ರವಾದ ಮನೆಗಳನ್ನೂ, ಭೂಮಿ-ವಸ್ತ್ರ-ಚಿನ್ನಗಳನ್ನೂ, ಕುದುರೆ-ಮದಭರಿತವಾದ ಆನೆ ಮೊದಲಾದ ವಾಹನಗಳನ್ನೂ ಬ್ರಾಹ್ಮಣರಿಗೆ ನೀಡಬೇಕು. ಅಲ್ಲದೆ ಹಾಸಿಗೆ, ಪಲ್ಲಕ್ಕಿಗಳನ್ನೂ, ಅಲಂಕೃತವಾದ ರಥಗಳನ್ನೂ ಬ್ರಾಹ್ಮಣರಿಗೆ ನೀಡಬೇಕು.

ಯದ್ಯದ್ ಗೃಹೇ ವರಂ ಕಿಂಚಿದ್ಯದ್ಯದಸ್ತಿ ಮಹದ್ವಸು ।
ತತ್ತದ್ದೇಯಂ ದ್ವಿಜಾತಿಭ್ಯ ಆತ್ಮಾ ದಾರಾಶ್ಚ ಸೂನವಃ ॥೧೬॥

ಇಷ್ಟೇ ಅಲ್ಲದೆ ಶ್ರದ್ಧಾಳುವಾದ ಅವನ ಮನೆಯಲ್ಲಿ ಶ್ರೇಷ್ಠವಾದ ಏನೆನೆಲ್ಲ ಇದೆಯೋ, ಬೆಲೆ ಬಾಳುವ ಏನೆಲ್ಲ ಸಂಪತ್ತಿದೆಯೋ ಅವೆಲ್ಲವನ್ನೂ ನೀಡಬೇಕು. ಅಷ್ಟೇ ಏಕೆ, ತನ್ನನ್ನೂ, ಪತ್ನಿಯರನ್ನೂ, ಮಕ್ಕಳನ್ನೂ ಅವನ ಸೇವೆಗೆ ಮೀಸಲಿಡಬೇಕು.

ಶ್ರದ್ಧಯಾ ಪರಯಾ ಯುಕ್ತಂ ಕ್ರಮಶಸ್ತಸ್ಯ ಪಾರಗಃ ।
ಶಕ್ತಿತಃ ಸುಮನಾ ಹೃಷ್ಟಃ ಶುಶ್ರೂಷುರವಿಕಲ್ಪಕಃ ॥೧೭॥

ಸತ್ಯಾರ್ಜವರತೋ ದಾಂತಃ ಶುಚಿಃ ಶೌಚಸಮನ್ವಿತಃ ।
ಶ್ರದ್ದಧಾನೋ ಜಿತಕ್ರೋಧೋ ಯಥಾ ಸಿದ್ಧ್ಯತಿ ತಚ್ಛೃಣು ॥೧೮॥

ಉತ್ಕೃಷ್ಟವಾದ ಶ್ರದ್ಧೆಯಿಂದ ಕೂಡಿಕೊಂಡು, ಕ್ರಮವಾಗಿ ಆ ಮಹಾಭಾರತದ ಕೊನೆಯ ಘಟ್ಟಕ್ಕೆ ತಲುಪಬೇಕು. ಯಥಾಶಕ್ತಿಯಾಗಿ ಒಳ್ಳೆಯ ಮನಸ್ಸಿನಿಂದ, ಸಂತೋಷವುಳ್ಳವನಾಗಿ, ಯಾವುದೇ ರೀತಿಯ ಸಂಶಯವಿಲ್ಲದವನಾಗಿ ಸತ್ಯ ಹಾಗೂ ನೇರವಾದ ನಡತೆಗಳಲ್ಲಿ ಆಸಕ್ತನಾಗಿ, ಇಂದ್ರಿಯನಿಗ್ರಹವುಳ್ಳವನಾಗಿ, ಶುದ್ಧನಾಗಿ, ಶೌಚಾಚಾರಗಳಿಂದ ಕೂಡಿಕೊಂಡು, ಮಹಾಭಾರತದ ಮೇಲೆ ಶ್ರದ್ಧೆ ಇಟ್ಟು, ಕೋಪವನ್ನು ಗೆದ್ದು, ಈ ಮಹಾಭಾರತವನ್ನು ಕೇಳಿದರೆ ಹೇಗೆ ಸಿದ್ಧಿಯಾಗುವುದೋ ಅದನ್ನು ಕೇಳು.

ಶುಚಿಃ ಶೀಲಾನ್ವಿತಾಚಾರಃ ಶುಕ್ಲವಾಸಾ ಜಿತೇಂದ್ರಿಯಃ ।
ಸಂಯತಃ ಸರ್ವಶಾಸ್ತ್ರಜ್ಞಃ ಶ್ರದ್ದಧಾನೋऽನಸೂಯಕಃ ॥೧೯॥

ರೂಪವಾನ್ ಸುಭಗೋ ದಾಂತಃ ಸತ್ಯವಾದೀ ಜಿತೇಂದ್ರಿಯಃ ।
ದಾನಮಾನಗೃಹೀತಶ್ಚ ಕಾರ್ಯೋ ಭವತಿ ವಾಚಕಃ ॥೨೦॥

ತೇಷಾಂ ಶ್ರುತ್ವಾ ಪ್ರತಿಷ್ಠಾನಂ ನಾಮಕರ್ಮಾನುಕೀರ್ತನಾತ್ ।
ಕೃತ್ವಾಽಪಿ ಪಾತಕಂ ಘೋರಂ ಸದ್ಯೋ ಮುಚ್ಯೇತ ಮಾನವಃ ॥೧೦॥

ಆ ಎಲ್ಲ ದೇವತೆಗಳ ಪ್ರಖ್ಯಾತಿಯನ್ನು ಕೇಳಿ, ಜೊತೆಗೆ ಅವರ ಹೆಸರುಗಳನ್ನೂ, ಅವರು ಮಾಡಿದ ಕರ್ಮಗಳನ್ನೂ ಕೀರ್ತನೆಗೈಯ್ಯುವುದರ ಮೂಲಕ ಘೋರವಾದ ಪಾತಕಗಳನ್ನು ಮಾಡಿದ್ದರೂ ಮನುಷ್ಯನು ಕೂಡಲೇ ಅವುಗಳಿಂದ ಬಿಡುಗಡೆ ಹೊಂದುವನು.

ಇತಿಹಾಸಮಿಮಂ ಶ್ರುತ್ವಾ ಯಥಾವದನುಪೂರ್ವಶಃ ।
ಸಂಯತಾತ್ಮಾ ಶುಚಿರ್ಭೂತ್ವಾ ಪಾರಂ ಗತ್ವಾ ಚ ಭಾರತೇ ॥೧೧॥

ತೇಷಾಂ ಶ್ರಾದ್ಧಾನಿ ದೇಯಾನಿ ಶ್ರುತ್ವಾ ಭಾರತ ಭಾರತಮ್ ।
ಬ್ರಾಹ್ಮಣೇಭ್ಯೋ ಯಥಾಶಕ್ತ್ಯಾ ಭಕ್ತ್ಯಾ ಚ ಭರತರ್ಷಭ ॥೧೨॥

ಹೇ ಭರತಶ್ರೇಷ್ಠನಾದ ಭಾರತನೇ, ಈ ಇತಿಹಾಸವನ್ನು ಯಥಾವತ್ತಾಗಿ ಅನುಕ್ರಮವಾಗಿ, ಇಂದ್ರಿಯನಿಗ್ರಹದೊಂದಿಗೆ, ಶುಚಿರ್ಭೂತನಾಗಿ ಕೇಳಿ, ಈ ಮಹಾಭಾರತದ ಕೊನೆಯ ಭಾಗವನ್ನು ತಲುಪಿದಾಗ, ಆ ಎಲ್ಲ ರುದ್ರಾದಿ ದೇವತೆಗಳ ಪ್ರೀತ್ಯರ್ಥವಾಗಿ ಶ್ರಾದ್ಧಕರ್ಮವನ್ನು ನಡೆಸಬೇಕು. ಈ ಭಾರತವನ್ನು ಕೇಳಿ ಶಕ್ತ್ಯನುಸಾರವಾಗಿ ಭಕ್ತಿಯಿಂದ ಬ್ರಾಹ್ಮಣರಿಗೆ ದಾನ ಮಾಡಬೇಕು.

ಮಹಾದಾನಾನಿ ದೇಯಾನಿ ರತ್ನಾನಿ ವಿವಿಧಾನಿ ಚ ।
ಗಾವಃ ಕಾಂಸ್ಯೋಪದೋಹಾಶ್ಚ ಕನ್ಯಾಶ್ಚೈವ ಸ್ವಲಂಕೃತಾಃ ॥೧೩॥

ಸರ್ವಕಾಮಗುಣೋಪೇತಾ ಯಾನಾನಿ ವಿವಿಧಾನಿ ಚ ।
ಭವನಾನಿ ವಿಚಿತ್ರಾಣಿ ಭೂಮಿರ್ವಾಸಾಂಸಿ ಕಾಂಚನಮ್ ॥೧೪॥

ವಾಹನಾನಿ ಚ ದೇಯಾನಿ ಹಯಾ ಮತ್ತಾಶ್ಚ ವಾರಣಾಃ ।
ಶಯನಂ ಶಿಬಿಕಾಶ್ಚೈವ ಸ್ಯಂದನಾಶ್ಚ ಸ್ವಲಂಕೃತಾಃ ॥೧೫॥

ಮಹಾದಾನಗಳನ್ನೂ, ನಾನಾ ರೀತಿಯ ರತ್ನಗಳನ್ನೂ, ಹಾಲು ಕರೆಯುವ ಕಂಚಿನ ಪಾತ್ರೆಗಳ ಜೊತೆಗೆ ಗೋವುಗಳನ್ನೂ, ಅಲಂಕೃತರಾದ ಕನ್ಯೆಯರನ್ನೂ, ಬಯಸಿದ

ವಸ್ತುಗಳನ್ನೆಲ್ಲ ಸಂಗ್ರಹಿಸಿಡಬಹುದಾದ ನಾನಾ ರೀತಿಯ ವಾಹನಗಳನ್ನೂ, ಚಿತ್ರ ವಿಚಿತ್ರವಾದ ಮನೆಗಳನ್ನೂ, ಭೂಮಿ-ವಸ್ತ್ರ-ಚಿನ್ನಗಳನ್ನೂ, ಕುದುರೆ-ಮದಭರಿತವಾದ ಆನೆ ಮೊದಲಾದ ವಾಹನಗಳನ್ನೂ ಬ್ರಾಹ್ಮಣರಿಗೆ ನೀಡಬೇಕು. ಅಲ್ಲದೆ ಹಾಸಿಗೆ, ಪಲ್ಲಕ್ಕಿಗಳನ್ನೂ, ಅಲಂಕೃತವಾದ ರಥಗಳನ್ನೂ ಬ್ರಾಹ್ಮಣರಿಗೆ ನೀಡಬೇಕು.

ಯದ್ಯದ್ ಗೃಹೇ ವರಂ ಕಿಂಚಿದ್ಯದ್ಯದಸ್ತಿ ಮಹದ್ಧನು ।
ತತ್ತದ್ದೇಯಂ ದ್ವಿಜಾತಿಭ್ಯ ಆತ್ಮಾ ದಾರಾಶ್ಚ ಸೂನವಃ ॥೧೬॥

ಇಷ್ಟೇ ಅಲ್ಲದೆ ಶ್ರದ್ಧಾಳುವಾದ ಅವನ ಮನೆಯಲ್ಲಿ ಶ್ರೇಷ್ಠವಾದ ಏನೆನೆಲ್ಲ ಇದೆಯೋ, ಬೆಲೆ ಬಾಳುವ ಏನೆಲ್ಲ ಸಂಪತ್ತಿದೆಯೋ ಅವೆಲ್ಲವನ್ನೂ ನೀಡಬೇಕು. ಅಷ್ಟೇ ಏಕೆ, ತನ್ನನ್ನೂ, ಪತ್ನಿಯರನ್ನೂ, ಮಕ್ಕಳನ್ನೂ ಅವನ ಸೇವೆಗೆ ಮೀಸಲಿಡಬೇಕು.

ಶ್ರದ್ಧಯಾ ಪರಯಾ ಯುಕ್ತಂ ಕ್ರಮಶಸ್ತಸ್ಯ ಪಾರಗಃ ।
ಶಕ್ತಿತಃ ಸುಮನಾ ಹೃಷ್ಟಃ ಶುಶ್ರೂಷುರವಿಕಲ್ಪಕಃ ॥೧೭॥

ಸತ್ಯಾರ್ಜವರತೋ ದಾಂತಃ ಶುಚಿಃ ಶೌಚಸಮನ್ವಿತಃ ।
ಶ್ರದ್ದಧಾನೋ ಜಿತಕ್ರೋಧೋ ಯಥಾ ಸಿದ್ಧ್ಯತಿ ತಚ್ಛೃಣು ॥೧೮॥

ಉತ್ಕೃಷ್ಟವಾದ ಶ್ರದ್ಧೆಯಿಂದ ಕೂಡಿಕೊಂಡು, ಕ್ರಮವಾಗಿ ಆ ಮಹಾಭಾರತದ ಕೊನೆಯ ಘಟ್ಟಕ್ಕೆ ತಲುಪಬೇಕು. ಯಥಾಶಕ್ತಿಯಾಗಿ ಒಳ್ಳೆಯ ಮನಸ್ಸಿನಿಂದ, ಸಂತೋಷವುಳ್ಳವನಾಗಿ, ಯಾವುದೇ ರೀತಿಯ ಸಂಶಯವಿಲ್ಲದವನಾಗಿ ಸತ್ಯ ಹಾಗೂ ನೇರವಾದ ನಡತೆಗಳಲ್ಲಿ ಆಸಕ್ತನಾಗಿ, ಇಂದ್ರಿಯನಿಗ್ರಹವುಳ್ಳವನಾಗಿ, ಶುದ್ಧನಾಗಿ, ಶೌಚಾಚಾರಗಳಿಂದ ಕೂಡಿಕೊಂಡು, ಮಹಾಭಾರತದ ಮೇಲೆ ಶ್ರದ್ಧೆ ಇಟ್ಟು, ಕೋಪವನ್ನು ಗೆದ್ದು, ಈ ಮಹಾಭಾರತವನ್ನು ಕೇಳಿದರೆ ಹೇಗೆ ಸಿದ್ಧಿಯಾಗುವುದೋ ಅದನ್ನು ಕೇಳು.

ಶುಚಿಃ ಶೀಲಾನ್ವಿತಾಚಾರಃ ಶುಕ್ಲವಾಸಾ ಜಿತೇಂದ್ರಿಯಃ ।
ಸಂಸ್ಕೃತಃ ಸರ್ವಶಾಸ್ತ್ರಜ್ಞಃ ಶ್ರದ್ದಧಾನೋऽನಸೂಯಕಃ ॥೧೯॥

ರೂಪವಾನ್ ಸುಭಗೋ ದಾಂತಃ ಸತ್ಯವಾದೀ ಜಿತೇಂದ್ರಿಯಃ ।
ದಾನಮಾನಗೃಹೀತಶ್ಚ ಕಾರ್ಯೋ ಭವತಿ ವಾಚಕಃ ॥೨೦॥

ಮಹಾಭಾರತದ ಪ್ರವಚನವನ್ನು ನಡೆಸುವವನು ಶುಚಿಯಾಗಿದ್ದು, ಒಳ್ಳೆಯ ಆಚಾರವಂತನಾಗಿ, ಶುಭ್ರವಸ್ತ್ರವನ್ನುಟ್ಟು, ಇಂದ್ರಿಯನಿಗ್ರಹವುಳ್ಳವನಾಗಿರಬೇಕು. ಸಂಸ್ಕಾರದಿಂದ ಪೂರ್ಣನಾಗಿರಬೇಕು. ಸರ್ವಶಾಸ್ತ್ರಗಳನ್ನೂ ತಿಳಿದುಕೊಂಡು ಶ್ರದ್ಧೆಯುಳ್ಳವನಾಗಿ, ಯಾರ ಬಗ್ಗೆಯೂ ಅಸೂಯೆಯಿಲ್ಲದೆ, ರೂಪವಂತನಾಗಿ, ಸೌಭಾಗ್ಯವಂತನಾಗಿ, ಸತ್ಯವಾದ ಮಾತುಗಳುಳ್ಳವನೂ, ಜಿತೇಂದ್ರಿಯನೂ ಆಗಿದ್ದು, ದಾನ ಹಾಗೂ ಗೌರವಗಳಿಂದ ಅವನನ್ನು ತೃಪ್ತಿ ಪಡಿಸಿರಬೇಕು. ಅಂತಹ ವ್ಯಕ್ತಿಯನ್ನೇ ವಾಚಕನನ್ನಾಗಿ ಮಾಡಬೇಕು.

ಅವಿಲಂಬಮನಾಯಸ್ತಮದ್ಭುತಂ ಧೀರಮೂರ್ಜಿತಮ್ ।
ಅಸಂಸಕ್ತಾಕ್ಷರಪದಂ ಸ್ವರಭಾವಸಮನ್ವಿತಮ್ ॥೨೧॥

ತ್ರಿಷಷ್ಟಿವರ್ಣಸಂಯುಕ್ತಮಷ್ಟಸ್ಥಾನಸಮೀರಿತಮ್ ।
ವಾಚಯೇದ್ ವಾಚಕಃ ಸ್ವಸ್ಥಃ ಸ್ವಾಸೀನಃ ಸುಸಮಾಹಿತಃ ॥೨೨॥

ಆರೋಗ್ಯವಂತನಾದ, ಯೋಗ್ಯವಾದ ಆಸನದಲ್ಲಿ ಕುಳಿತಿರುವ, ಸಮಾಧಾನ ಚಿತ್ತನಾದ ಪ್ರವಚನಕಾರನು ಹೆಚ್ಚುವಿಳಂಬವಾಗದಂತೆ, ಶ್ರಮವಿಲ್ಲದೆಯೇ, ಹೆಚ್ಚು ವೇಗವೂ ಆಗದಂತೆ ಮನೋಹರವಾಗಿ, ಉತ್ಸಾಹಯುಕ್ತವಾಗಿ, ಅಕ್ಷರ ಹಾಗೂ ಪದಗಳನ್ನು ಒಟ್ಟಾರೆ ಸೇರಿಸದೆಯೇ ಯೋಗ್ಯವಾದ ಸ್ವರ ಹಾಗೂ ಭಾವಗಳಿಂದ ಕೂಡಿಕೊಂಡು, ಕಂಠತಾಲ್ವಾದಿ ಎಂಟು ಸ್ಥಾನಗಳಿಂದ ಉಚ್ಚರಿಸಲ್ಪಟ್ಟ, ಸುಸ್ಪಷ್ಟವಾಗಿ ಕೇಳುವ ಅರವತ್ಮೂರು ವರ್ಣಗಳಿಂದ ಯುಕ್ತವಾಗಿ ಮಹಾಭಾರತದ ವಾಚನವನ್ನು ನಡೆಸಬೇಕು.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ (ವ್ಯಾಸಂ) ಚೈವ ತತೋ ಜಯಮುದೀರಯೇತ್ ॥

ಗ್ರಂಥಪ್ರತಿಪಾದ್ಯನಾದ ನಾರಾಯಣನನ್ನೂ, ಉಪಚಾರಕರಾದ ಶೇಷದೇವರನ್ನೂ, ಜೀವೋತ್ತಮರಾದ ವಾಯುದೇವರನ್ನೂ, ಸಕಲ ಭಾಗ್ಯದೇವಿಯಾದ ಲಕ್ಷ್ಮಿಯನ್ನೂ, ವಿದ್ಯಾಧಿದೇವಿಯಾದ ಸರಸ್ವತಿಯನ್ನೂ, ಗ್ರಂಥಕರ್ತೃಗಳಾದ ವೇದವ್ಯಾಸರನ್ನೂ ನಮಸ್ಕರಿಸಿ ಅನಂತರ ಮಹಾಭಾರತವನ್ನು ಹೇಳಬೇಕು.

ಈದೃಶಾದ್ ವಾಚಕಾದ್ ರಾಜನ್ ಶ್ರುತ್ವಾ ಭಾರತ ಭಾರತಮ್ ।
ನಿಯಮಸ್ಥಃ ಶುಚಿಃ ಶ್ರೋತಾ ಶೃಣ್ವನ್ ಸ ಫಲಮಶ್ನುತೇ ॥೨೪॥

ಹೇ ರಾಜನೇ, ಭಾರತನೇ, ಇಂತಹ ಪ್ರವಚನಕಾರರಿಂದ ಮಹಾಭಾರತವನ್ನು ಕೇಳಿರುವ ನಿಯಮನಿಷ್ಠನಾದ, ಶುಚಿರ್ಭೂತನಾದ ಶ್ರೋತೃವು ಮಹಾಭಾರತವನ್ನು ಕೇಳಿದ ಎಲ್ಲ ಫಲವನ್ನೂ ಪಡೆಯಬಲ್ಲನು.

ಪಾರಣಂ ಪ್ರಥಮಂ ಪ್ರಾಪ್ಯ ದ್ವಿಜಾನ್ ಕಾಮ್ಯೈಶ್ಚ ತರ್ಪಯನ್ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ವೈ ಲಭತೇ ನರಃ ॥೨೫॥

ಮಹಾಭಾರತವನ್ನು ಒಂದು ಬಾರಿ ಪೂರ್ತಿಯಾಗಿ ಕೇಳಿ ಮಂಗಳಕಾಲದಲ್ಲಿ ಬ್ರಾಹ್ಮಣರನ್ನು ಅವರಿಗಿಷ್ಟವಾದ ವಸ್ತುಗಳಿಂದ ಸಂತೋಷಪಡಿಸಿದರೆ ಅಂತಹ ವ್ಯಕ್ತಿಯು ಅಗ್ನಿಷ್ಟೋಮ ಯಜ್ಞದ ಫಲವನ್ನು ಪಡೆಯುತ್ತಾನೆ.

ಅಪ್ಸರೋಗಣಸಂಕೀರ್ಣಂ ವಿಮಾನಂ ಲಭತೇ ಮಹತ್ ।
ಪ್ರಹೃಷ್ಟಃ ಸ ತು ದೇವೈಶ್ಚ ದಿವಂ ಯಾತಿ ಸಮಾಹಿತಃ ॥೨೬॥

ಅಪ್ಸರೆಯರ ಸಮೂಹದಿಂದ ತುಂಬಿದ ದೊಡ್ಡದಾದ ವಿಮಾನವನ್ನು ಪಡೆಯುತ್ತಾನೆ. ಹೀಗೆ ಅವನು ಸಂತೋಷದಿಂದ ಸಮಾಧಾನಚಿತ್ತನಾಗಿ ದೇವತೆಗಳ ಸಮೂಹವನ್ನು ಸೇರುತ್ತಾನೆ.

ದ್ವಿತೀಯಂ ಪಾರಣಂ ಪ್ರಾಪ್ಯ ಸೋತಿರಾತ್ರಫಲಂ ಲಭೇತ್ ।
ಸರ್ವರತ್ನಮಯಂ ದಿವ್ಯಂ ವಿಮಾನಮಧಿರೋಹತಿ ॥೨೭॥

ಎರಡು ಬಾರಿ ಮಹಾಭಾರತದ ಮಂಗಳವನ್ನು ಮಾಡಿದವನು ಅತಿರಾತ್ರಯಜ್ಞದ ಫಲವನ್ನು ಪಡೆಯುತ್ತಾನೆ. ಅವನು ಸರ್ವರತ್ನಗಳಿಂದ ತುಂಬಿದ ದಿವ್ಯವಾದ ವಿಮಾನವನ್ನು ಏರುತ್ತಾನೆ.

ದಿವ್ಯಮಾಲ್ಯಾಂಬರಧರೋ ದಿವ್ಯಗಂಧವಿಭೂಷಿತಃ ।
ದಿವ್ಯಾಂಗದಧರೋ ನಿತ್ಯಂ ದೇವಲೋಕೇ ಮಹೀಯತೇ ॥೨೮॥

ದಿವ್ಯವಾದ ಮಾಲೆ ಹಾಗೂ ವಸ್ತ್ರಗಳನ್ನು ಧರಿಸಿಕೊಂಡು, ದಿವ್ಯವಾದ ಗಂಧ ವಸ್ತುಗಳಿಂದ ಅಲಂಕೃತನಾಗಿ, ನಿತ್ಯವೂ ದಿವ್ಯವಾದ ಆಭರಣಗಳನ್ನು ಧರಿಸಿಕೊಂಡು ದೇವಲೋಕದಲ್ಲಿ ಮೆರೆಯುತ್ತಾನೆ.

ತೃತೀಯಂ ಪಾರಣಂ ಪ್ರಾಪ್ಯ ದ್ವಾದಶಾಹಫಲಂ ಲಭೇತ್ ।
ವಸತ್ಯಮರಸಂಕಾಶೋ ವರ್ಷಾಣ್ಯಯುತಶೋ ದಿವಿ ॥೨೯॥

ಮೂರು ಬಾರಿ ಮಹಾಭಾರತದ ಮಂಗಳವನ್ನು ನಡೆಸಿದವನು ದ್ವಾದಶಾಹ ಯಜ್ಞದ ಫಲವನ್ನು ಪಡೆಯುತ್ತಾನೆ. ಹತ್ತುಸಾವಿರ ವರ್ಷಗಳ ಕಾಲ ದೇವತೆಗಳಿಗೆ ಸದೃಶನಾಗಿ ಸ್ವರ್ಗದಲ್ಲಿ ವಾಸಮಾಡುತ್ತಾನೆ.

ಚತುರ್ಥೇ ವಾಜಪೇಯಸ್ಯ ಪಂಚಮೇ ದ್ವಿಗುಣಂ ಫಲಮ್ ।
ಉದಿತಾದಿತ್ಯಸಂಕಾಶಂ ಜ್ವಲಂತಮನಲೋಪಮಮ್ ॥೩೦॥

ವಿಮಾನಂ ವಿಬುಧೈಃ ಸಾರ್ಧಮಾರುಹ್ಯ ದಿವಿ ಗಚ್ಛತಿ ।
ವರ್ಷಾಯುತಾನಿ ಭವನೇ ಶಕ್ರಸ್ಯ ದಿವಿ ಮೋದತೇ ॥೩೧॥

ನಾಲ್ಕು ಬಾರಿ ಮಂಗಳವನ್ನು ನಡೆಸಿದವನು ವಾಜಪೇಯ ಯಾಗದ ಫಲವನ್ನು ಪಡೆಯುವನು. ಐದುಬಾರಿ ಮಂಗಳವನ್ನು ನಡೆಸಿದವನು ಹಿಂದಿಗಿಂತ ಎರಡು ಪಟ್ಟು ಫಲವನ್ನು ಪಡೆಯುತ್ತಾನೆ. ಅವನು ಉದಯಿಸುವ ಸೂರ್ಯನಿಗೆ ಸದೃಶನಾದ, ದೇದೀಪ್ಯಮಾನವಾದ ಅಗ್ನಿಯಂತೆ ಕಂಗೊಳಿಸುವ ವಿಮಾನವನ್ನು ದೇವತೆಗಳ ಜೊತೆಗೆ ಕೂಡಿಕೊಂಡು ಏರಿ, ಆಕಾಶದಲ್ಲಿ ಸಂಚರಿಸುವನು. ಅಲ್ಲದೆ ಸ್ವರ್ಗದಲ್ಲಿ ಇಂದ್ರ ಭವನದಲ್ಲಿ ಹತ್ತು ಸಾವಿರ ವರ್ಷಗಳ ಕಾಲ ಸಂತೋಷವಾಗಿ ವಾಸಮಾಡುತ್ತಾನೆ.

ಷಷ್ಠೇ ದ್ವಿಗುಣಮಸ್ತೀತಿ ಸಪ್ತಮೇ ತ್ರಿಗುಣಂ ಫಲಮ್ ।
ಕೈಲಾಸಶಿಖಿರಾಕಾರಂ ವೈಡೂರ್ಯಮಣಿವೇದಿಕಮ್ ॥೩೨॥

ಪರಿಕ್ಷಿಪ್ತಂ ಚ ಬಹುಧಾ ಮಣಿವಿದ್ರುಮಭೂಷಿತಮ್ ।
ವಿಮಾನಂ ಸಮಧಿಷ್ಠಾಯ ಕಾಮಗಂ ಸಾಪ್ಸರೋಗಣಮ್ ॥೩೩॥

ಸರ್ವಾನ್ ಲೋಕಾನ್ ವಿಚರತೇ ದ್ವಿತೀಯ ಇವ ಭಾಸ್ಕರಃ ।
ಅಷ್ಟಮೇ ರಾಜಸೂಯಸ್ಯ ಪಾರಣೇ ಲಭತೇ ಫಲಮ್ ॥೩೪॥

ಆರು ಬಾರಿ ಮಹಾಭಾರತದ ಮಂಗಳವನ್ನು ನಡೆಸಿದವನು ಹಿಂದಿಗಿಂತ ಎರಡು ಪಟ್ಟು ಫಲವನ್ನೂ, ಏಳು ಬಾರಿ ಮಂಗಳವನ್ನು ನಡೆಸಿದವನು ಮೂರು ಪಟ್ಟು ಫಲವನ್ನು ಪಡೆಯುತ್ತಾನೆ. ಅಂತಹ ವ್ಯಕ್ತಿಯು ಕೈಲಾಸ ಶಿಖರದಂತೆ ರೂಪವುಳ್ಳ, ವೈಡೂರ್ಯ ಮಣಿಗಳಿಂದ ಮಾಡಿದ ವೇದಿಕೆಯುಳ್ಳ, ನಾನಾ ರೀತಿಯಾಗಿ ಸುತ್ತಲೂ ಕಟ್ಟಲ್ಪಟ್ಟ ಪಟ್ಟಿಗಳುಳ್ಳ, ಮುತ್ತು-ಹವಳ ಮೊದಲಾದ ಮಣಿಗಳಿಂದ ಅಲಂಕೃತವಾದ, ಬಯಸಿದಲ್ಲಿಗೆ ಹೋಗಬಲ್ಲ ವಿಮಾನವನ್ನು ಅಪ್ಸರಾಸ್ತ್ರೀಯರ ಸಮೂಹದೊಂದಿಗೆ ಏರಿ, ಎರಡನೆಯ ಸೂರ್ಯನಂತೆ ಎಲ್ಲ ಲೋಕಗಳನ್ನೂ ಸಂಚರಿಸಬಲ್ಲನು. ಎಂಟು ಬಾರಿ ಮಹಾಭಾರತದ ಮಂಗಳವನ್ನು ನಡೆಸಿದವನು ರಾಜಸೂಯ ಯಾಗದ ಫಲವನ್ನು ಪಡೆಯುತ್ತಾನೆ.

ಚಂದ್ರೋದಯನಿಭಂ ರಮ್ಯಂ ವಿಮಾನಮಧಿರೋಹತಿ ।
ಚಂದ್ರರಶ್ಮಿಪ್ರತೀಕಾಶೈರ್ಹಯೈರ್ಯುಕ್ತಂ ಮನೋಜವೈಃ ॥೩೫॥

ಸೇವ್ಯಮಾನೋ ವರಸ್ತ್ರೀಣಾಂ ಚಂದ್ರಾತ್ ಕಾಂತತರೈರ್ಮುಖೈಃ ।
ಮೇಖಲಾನಾಂ ನಿನಾದೇನ ನೂಪುರಾಣಾಂ ಚ ನಿಃಸ್ವನೈಃ ॥೩೬॥

ಅಂಕೇ ಪರಮನಾರೀಣಾಂ ಸುಖಸುಪ್ತೋ ವಿಬುದ್ಧ್ಯತೇ ।
ನವಮೇ ಕ್ರತುರಾಜಸ್ಯ ವಾಜಿಮೇಧಸ್ಯ ಭಾರತ ॥೩೭॥

ಅವನು ಉದಯಿಸುತ್ತಿರುವ ಚಂದ್ರನಿಗೆ ಸದೃಶವಾದ, ಮನೋಹರವಾದ ವಿಮಾನವನ್ನು ಏರುತ್ತಾನೆ. ಆ ವಿಮಾನವು ಮನೋವೇಗವುಳ್ಳ, ಚಂದ್ರನ ಬೆಳದಿಂಗಳಿನಂತೆ ಮನೋಹರವಾದ ಕುದುರೆಗಳಿಂದ ಕೂಡಿರುತ್ತದೆ. ಅಲ್ಲಿ ಅವನು ದಿವ್ಯಸ್ತ್ರೀಯರ ಚಂದ್ರನಿಗಿಂತಲೂ ಮನೋಹರವಾದ ಮುಖಗಳಿಂದ ಸೇವೆಯನ್ನು ಸ್ವೀಕರಿಸುತ್ತಾ, ಅವರ ವಡ್ಯಾಣದ ನಾದಗಳಿಂದಲೂ, ಗೆಜ್ಜೆಗಳ ನಾದದಿಂದಲೂ ಸಂತೋಷಪಡುತ್ತಾ, ಆ ಸ್ತ್ರೀಯರ ತೊಡೆಗಳಲ್ಲಿ ಸುಖವಾಗಿ ಮಲಗಿ ಸಂತೋಷ ಪಡುತ್ತಾನೆ. ಹೇ ಭಾರತನೇ, ಒಂಬತ್ತು ಬಾರಿ ಮಹಾಭಾರತದ ಮಂಗಳವನ್ನು ನಡೆಸಿದವನು ಯಜ್ಞಗಳಲ್ಲಿ ರಾಜನಾದ ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.

ಕಾಂಚನಸ್ತಂಭನಿರ್ಯೂಹವೈದೂರ್ಯಕೃತವೇದಿಕಮ್ ।
ಜಾಂಬೂನದಮಯೈರ್ದಿವ್ಯೈರ್ಗವಾಕ್ಷೈಃ ಸರ್ವತೋ ವೃತಮ್ ॥೩೮॥

ಸೇವಿತಂ ಚಾಪ್ಸರಃಸಂಘೈರ್ಗಂಧರ್ವೈರ್ದಿವಿ ಚಾರಿಭಿಃ ।
ವಿಮಾನಂ ಸಮಧಿಷ್ಠಾಯ ಶ್ರಿಯಾ ಪರಮಯಾ ಜ್ವಲನ್ ॥೫೯॥

ದಿವ್ಯಮಾಲ್ಯಾಂಬರಧರೋ ದಿವ್ಯಚಂದನರೂಷಿತಃ ।
ಮೋದತೇ ದೈವತೈಃ ಸಾರ್ಧಂ ದಿವಿ ದೇವ ಇವಾಪರಃ ॥೬೦॥

ಅವನು ಬಂಗಾರದ ಕಂಬ ಹಾಗೂ ಅಟ್ಟಣಿಗೆಗಳಿಂದ ಕೂಡಿದ, ವೈಡೂರ್ಯ-ಮಯವಾದ ವೇದಿಕೆಯುಳ್ಳ, ಸುತ್ತಲೂ ಬಂಗಾರದಿಂದ ರಚಿಸಿದ ಕಿಟಕಿಗಳುಳ್ಳ, ಅಪ್ಸರಸಮೂಹ ಹಾಗೂ ದೇವ-ಗಂಧರ್ವರಿಂದ ಸೇವಿತವಾದ ವಿಮಾನವನ್ನು ಏರಿ, ಉತ್ತಮವಾದ ಐಶ್ವರ್ಯದಿಂದ ಬೆಳಗುತ್ತಾ, ದಿವ್ಯವಾದ ಮಾಲೆ ಹಾಗೂ ವಸ್ತ್ರಗಳನ್ನು ಧರಿಸಿ, ದೇವಲೋಕದ ಚಂದನದಿಂದ ಲೇಪಿತನಾಗಿ ದೇವತೆಗಳೊಂದಿಗೆ ಸ್ವರ್ಗದಲ್ಲಿ ಇನ್ನೊಬ್ಬ ದೇವತೆಯಂತೆ ಸಂತೋಷಪಡುತ್ತಾನೆ.

ದಶಮಂ ಪಾರಣಂ ಪ್ರಾಪ್ಯ ದ್ವಿಜಾತೀನಭಿವಂದ್ಯ ಚ ।
ಕಿಂಕಿಣೀಜಾಲನಿರ್ಘೋಷಂ ಪತಾಕಾಧ್ವಜಶೋಭಿತಮ್ ॥೬೧॥

ರತ್ನವೇದಿಕಸಂಬಾಧಂ ವೈದೂರ್ಯಮಣಿತೋರಣಮ್ ।
ಹೇಮಜಾಲಪರಿಕ್ಷಿಪ್ತಂ ಪ್ರವಾಲವಲಭೀಮುಖಮ್ ॥೬೨॥

ಗಂಧರ್ವೈರ್ಗೀತಕುಶಲೈರಪ್ಸರೋಭಿಶ್ಚ ಶೋಭಿತಮ್ ।
ವಿಮಾನಂ ಸುಕೃತಾವಾಸಂ ಸುಖೇನೈವೋಪಪದ್ಯತೇ ॥೬೩॥

ಹತ್ತನೆ ಬಾರಿ ಮಹಾಭಾರತದ ಮಂಗಳವನ್ನು ನಡೆಸಿ ಬ್ರಾಹ್ಮಣರನ್ನು ಗೌರವಿಸಿದರೆ ಕಿಂಕಿಣಿಗಳ ಸಮೂಹದ ಘೋಷದಿಂದ ಕೂಡಿದ, ಪತಾಕೆ ಹಾಗೂ ಧ್ವಜಗಳಿಂದ ಅಲಂಕೃತವಾದ, ರತ್ನಮಯವಾದ ವೇದಿಕೆಗಳಿಂದ ಕೂಡಿದ, ವೈಡೂರ್ಯ ಮಣಿಗಳ ತೋರಣವುಳ್ಳ, ಚಿನ್ನದ ಬಲೆಯಿಂದ ಸುತ್ತುವರಿಯಲ್ಪಟ್ಟ, ಹವಳದ ಹೊರಾಂಗಣ ದ್ವಾರವುಳ್ಳ, ಸಂಗೀತ ಕುಶಲರಾದ ಗಂಧರ್ವರಿಂದಲೂ, ಅಪ್ಸರಸ್ತ್ರೀಯರಿಂದಲೂ ಶೋಭಿತವಾದ, ಪುಣ್ಯವಂತರಿಗೆ ಮಾತ್ರ ಸಿಗಬಹುದಾದ ವಿಮಾನವನ್ನು ಸುಖವಾಗಿ ಪಡೆಯುತ್ತಾನೆ.

ಮುಕುಟೇನಾಗ್ನಿವರ್ಣೇನ ಜಾಂಬೂನದವಿಭೂಷಿಣಾ ।
ದಿವ್ಯಚಂದನದಿಗ್ಧಾಂಗೋ ದಿವ್ಯಮಾಲ್ಯವಿಭೂಷಿತಃ ॥೬೪॥

ದಿವ್ಯಾನ್ ಲೋಕಾನ್ ವಿಚರತಿ ದಿವ್ಯೈರ್ಭೋಗೈಃ ಸಮನ್ವಿತಃ ।
ವಿಬುಧಾನಾಂ ಪ್ರಸಾದೇನ ಶ್ರಿಯಾ ಪರಮಯಾ ಯುತಃ ॥೪೫॥

ಅಗ್ನಿಯಂತೆ ಜ್ವಲಿಸುವ, ಚಿನ್ನದಿಂದ ಮಾಡಿದ ಕುಸುರಿಕೆತ್ತನೆಗಳುಳ್ಳ ಕಿರೀಟವನ್ನು ತೊಟ್ಟು, ದಿವ್ಯವಾದ ಗಂಧಗಳಿಂದ ಲೇಪಿತವಾದ ಅಂಗಗಳುಳ್ಳವನಾಗಿ, ದಿವ್ಯ ಮಾಲೆಗಳಿಂದ ಅಲಂಕೃತನಾಗಿ, ಸ್ವರ್ಗಲೋಕಗಳ ಭೋಗಗಳಿಂದ ಕೂಡಿಕೊಂಡು ದೇವತೆಗಳ ಅನುಗ್ರಹದಿಂದ ಉತ್ಕೃಷ್ಟವಾದ ಐಶ್ವರ್ಯದಿಂದ ಕೂಡಿದವನಾಗಿ ದಿವ್ಯಲೋಕಗಳಲ್ಲಿ ಸಂಚರಿಸುತ್ತಾನೆ.

ಅಥ ವರ್ಷಗಣಾನೇವಂ ಸ್ವರ್ಗಲೋಕೇ ಮಹೀಯತೇ ।
ತತೋ ಗಂಧರ್ವಸಹಿತಃ ಸಹಸ್ರಾಣ್ಯೇಕವಿಂಶತಿಮ್ ॥೪೬॥

ಪುರಂದರಪುರೇ ರಮ್ಯೇ ಶಕ್ರೇಣ ಸಹ ಮೋದತೇ ।
ದಿವ್ಯಯಾನವಿಮಾನೇಷು ಲೋಕೇಷು ವಿವಿಧೇಷು ಚ ॥೪೭॥

ದಿವ್ಯನಾರೀಗಣಾಕೀರ್ಣೋ ನಿವಸತ್ಯಮರೋ ಯಥಾ ।
ತತಃ ಸೂರ್ಯಸ್ಯ ಭವನೇ ಚಂದ್ರಸ್ಯ ಭವನೇ ತಥಾ ॥೪೮॥

ಶಿವಸ್ಯ ಭವನೇ ರಾಜನ್ ವಿಷ್ಣೋರ್ಯಾತಿ ಸಲೋಕತಾಮ್ ।
ಏವಮೇತನ್ಮಹಾರಾಜ ನಾತ್ರ ಕಾರ್ಯಾ ವಿಚಾರಣಾ ॥೪೯॥

ಅಲ್ಲದೆ ಅನೇಕ ವರ್ಷಗಳ ಕಾಲ ಸ್ವರ್ಗಲೋಕದಲ್ಲಿ ಮೆರೆಯುತ್ತಾನೆ. ಅನಂತರ ಇಪ್ಪತ್ತೊಂದು ಸಾವಿರ ವರ್ಷಗಳ ಕಾಲ ಗಂಧರ್ವರೊಂದಿಗೂ ರಮ್ಯವಾದ ಇಂದ್ರಲೋಕದಲ್ಲಿ ಇಂದ್ರನ ಜೊತೆಗೆ ಆನಂದವನ್ನು ಹೊಂದುತ್ತಾನೆ. ಅಲ್ಲದೆ ದಿವ್ಯವಾದ ವಾಹನ ಮತ್ತು ವಿಮಾನಗಳಲ್ಲಿ ವಿವಿಧ ಲೋಕಗಳಲ್ಲಿ ಸ್ವರ್ಗಲೋಕದ ನಾರೀ ಸಮೂಹದಿಂದ ಸುತ್ತುವರಿಯಲ್ಪಟ್ಟು ದೇವತೆಗಳಂತೆಯೇ ವಾಸ ಮಾಡುವನು. ಅನಂತರ ಸೂರ್ಯನ ಭವನದಲ್ಲಿಯೂ, ಚಂದ್ರನ ಭವನದಲ್ಲಿಯೂ, ರುದ್ರನ ಭವನದಲ್ಲಿಯೂ ಇದೇ ರೀತಿ ಅನೇಕ ವರ್ಷಗಳ ಕಾಲ ಸಂತೋಷಪಡುತ್ತಾನೆ. ರಾಜನೇ, ಕೊನೆಗೆ ವಿಷ್ಣುಲೋಕವನ್ನೇ ಪಡೆಯುತ್ತಾನೆ. ಹೇ ಮಹಾರಾಜನೇ, ಮಹಾಭಾರತವನ್ನು ಶ್ರವಣ ಮಾಡಿದ ಫಲವು ಹೀಗೆ ಇರುತ್ತದೆ. ಇದರಲ್ಲಿ ಯಾವುದೇ ವಿಮರ್ಶೆಯ ಅಗತ್ಯವಿಲ್ಲ.

ಶ್ರದ್ದಧಾನೇನ ವೈ ಭಾವ್ಯಮೇವಮಾಹ ಗುರುರ್ಮಮ ।
ವಾಚಕಸ್ಯ ತು ದಾತವ್ಯಂ ಮನಸಾ ಯದ್ಯದಿಚ್ಛತಿ ॥೫೦॥

ಹಸ್ತ್ಯಶ್ವರಥಯಾನಾನಿ ವಾಹನಾನಿ ವಿಶೇಷತಃ ।
ಕಟಕೇ ಕುಂಡಲೇ ಚೈವ ಬ್ರಹ್ಮಸೂತ್ರಂ ತಥಾ ಪರಮ್ ॥೫೧॥

ವಸ್ತ್ರಂ ಚೈವ ವಿಚಿತ್ರಂ ಚ ಗಂಧಂ ಚೈವ ವಿಶೇಷತಃ ।
ದೇವವತ್ ಪೂಜಯೇತ್ ತಂ ತು ವಿಷ್ಣುಲೋಕಮವಾಪ್ನುಯಾತ್ ॥೫೨॥

ಈ ಎಲ್ಲ ಕ್ರಿಯೆಗಳನ್ನು ಶ್ರದ್ಧೆಯಿಂದ ಕೂಡಿಕೊಂಡೇ, ವಿಶ್ವಾಸಯುಕ್ತನಾಗಿಯೇ ಮಾಡಬೇಕು. ಹೀಗೆಯೇ ನನ್ನ ಗುರುಗಳು ಹೇಳಿದ್ದಾರೆ. ಮಹಾಭಾರತದ ಪ್ರವಚನವನ್ನು ನಡೆಸಿದವನಿಗೆ ಅವನು ಮನಸ್ಸಿನಲ್ಲಿ ಏನೇನು ಬಯಸುವನೋ ಅಂತಹ ಆನೆ, ಕುದುರೆ, ರಥ, ಪಲ್ಲಕ್ಕಿಯೇ ಮೊದಲಾದ ವಾಹನಗಳನ್ನೂ ವಿಶೇಷ ರೀತಿಯಿಂದ ನೀಡಬೇಕು. ಅಲ್ಲದೆ ಕಡಗಗಳನ್ನು, ಕುಂಡಲಗಳನ್ನು, ಉತ್ತಮವಾದ ಬ್ರಹ್ಮಸೂತ್ರವನ್ನು, ಚಿತ್ರ ವಿಚಿತ್ರವಾದ ವಸ್ತ್ರಗಳನ್ನು, ಉತ್ತಮವಾದ ಗಂಧವನ್ನು ವಿಶೇಷವಾಗಿ ನೀಡಬೇಕು. ಆ ವಾಚಕನನ್ನು ದೇವರಂತೆಯೇ ಪೂಜಿಸಬೇಕು. ಹೀಗೆ ಮಾಡುವುದರಿಂದ ವಿಷ್ಣು ಲೋಕವನ್ನೇ ಪಡೆಯುವನು.

ಅತಃ ಪರಂ ಪ್ರವಕ್ಷ್ಯಾಮಿ ಯಾನಿ ದೇಯಾನಿ ಭಾರತೇ ।
ವಾಚ್ಯಮಾನೇ ತು ವಿಪ್ರೇಭ್ಯೋ ರಾಜನ್ ಪರ್ವಣಿ ಪರ್ವಣಿ ॥೫೩॥

ಹೇ ರಾಜನೇ, ಇನ್ನು ಮುಂದೆ ಮಹಾಭಾರತದ ಪ್ರವಚನವು ನಡೆಯುತ್ತಿರುವಾಗ ಪ್ರತಿಯೊಂದು ಪರ್ವದಲ್ಲೂ ಬ್ರಾಹ್ಮಣರಿಗೆ ಏನೇನನ್ನು ನೀಡಬೇಕೆಂದು ಹೇಳಲಿದ್ದೇನೆ.

ಜಾತಿಂ ದೇಶಂ ಚ ಸತ್ಯಂ ಚ ಮಾಹಾತ್ಮ್ಯಂ ಭರತರ್ಷಭ ।
ಧರ್ಮಂ ವೃತ್ತಿಂ ಚ ವಿಜ್ಞಾಯ ಕ್ಷತ್ರಿಯಾಣಾಂ ನರಾಧಿಪ ॥೫೪॥

ಸ್ಪಷ್ಟಿ ವಾಚ್ಯ ದ್ವಿಜಾನಾದೌ ತತಃ ಕಾರ್ಯೇ ಪ್ರವರ್ತಿತೇ ।
ಸಮಾಪ್ತೇ ಪರ್ವಣಿ ತತಃ ಸ್ವಶಕ್ತ್ಯಾ ಪೂಜಯೇದ್ ದ್ವಿಜಾನ್ ॥೫೫॥

ಹೇ ಭರತಶ್ರೇಷ್ಠನೇ, ನರಾಧಿಪತಿಯೇ, ಜಾತಿಯನ್ನೂ, ಇರುವ ಪ್ರದೇಶವನ್ನೂ, ಮಾಡಿದ ಪ್ರತಿಜ್ಞೆಯನ್ನೂ, ಅವರ ದೊಡ್ಡತನವನ್ನೂ, ಧರ್ಮಾಚರಣೆಯನ್ನೂ,

ವೃತ್ತಿಯನ್ನೂ ಚೆನ್ನಾಗಿ ತಿಳಿದು ಬ್ರಾಹ್ಮಣರನ್ನು ಮೊದಲು ಪೂಜಿಸಬೇಕು. ಅನಂತರ ರಾಜ್ಯವನ್ನು ರಕ್ಷಿಸುವ ಕ್ಷತ್ರಿಯರಿಗೆ ಸ್ವಸ್ತಿವಾಚನವನ್ನು ಬ್ರಾಹ್ಮಣರಿಂದ ಮಾಡಿಸಬೇಕು. ನಂತರ ಮಹಾಭಾರತ ಪ್ರವಚನಕಾರ್ಯವು ಆರಂಭವಾದ ಮೇಲೆ ಪ್ರತಿಯೊಂದು ಪರ್ವದ ಸಮಾಪ್ತಿಕಾಲದಲ್ಲಿ ಬ್ರಾಹ್ಮಣರನ್ನು ಪೂಜಿಸಬೇಕು.

ಆದೌ ತು ವಾಚಕಂ ಚೈವ ವಸ್ತ್ರಗಂಧಸಮನ್ವಿತಮ್ ।
ವಿಧಿವದ್ ಭೋಜಯೇದ್ ರಾಜನ್ ಮಧುಪಾಯಸಮುತ್ತಮಮ್ ॥

ಹೇ ರಾಜನೇ, ಮೊದಲ ಪರ್ವದಲ್ಲಿ ಪ್ರವಚನಕಾರರಿಗೆ ವಸ್ತ್ರ ಹಾಗೂ ಗಂಧಗಳನ್ನು ನೀಡಿ ಗೌರವಿಸಿ, ಉತ್ತಮವಾದ ಜೇನಿನಿಂದ ಕೂಡಿದ ಪಾಯಸವನ್ನು ವಿಧಿವತ್ತಾಗಿ ಉಣಬಡಿಸಬೇಕು.

ತತೋ ಮೂಲಫಲಪ್ರಾಯಂ ಪಾಯಸಂ ಮಧುಸರ್ಪಿಷಾ ।
ಆಸ್ತೀಕೇ ಭೋಜಯೇದ್ ರಾಜನ್ ದದ್ಯಾಚ್ಚೈವ ಗುಡೌದನಮ್ ॥೫೭॥

ಹೇ ರಾಜನೇ, ಅನಂತರ ಆಸ್ತಿಕಪರ್ವ ಸಮಾಪ್ತಿಕಾಲಕ್ಕೆ ಬ್ರಾಹ್ಮಣರಿಗೆ ಮೂಲ-ಫಲಗಳೇ ಅಧಿಕವಾಗಿ ಉಳ್ಳ ಆಹಾರವನ್ನೂ, ಜೇನು ಹಾಗೂ ತುಪ್ಪದಿಂದ ಕೂಡಿದ ಪಾಯಸವನ್ನೂ ಉಣಬಡಿಸಬೇಕು. ಅಲ್ಲದೆ ಗುಡಾನ್ನವನ್ನೂ ನೀಡಬೇಕು.

ಅಪೂಪೈಶ್ಚೈವ ಪೂಪೈಶ್ಚ ಮೋದಕೈಶ್ಚ ಸಮನ್ವಿತಮ್ ।
ಸಭಾಪರ್ವಣಿ ರಾಜೇಂದ್ರ ಹವಿಷ್ಯಂ ಭೋಜಯೇದ್ ದ್ವಿಜಾನ್ ॥೫೮॥

ಹೇ ರಾಜೇಂದ್ರನೇ, ಸಭಾಪರ್ವದ ಸಮಾಪ್ತಿ ಕಾಲಕ್ಕೆ ನಾನಾ ರೀತಿಯ ಅಪೂಪಗಳಿಂದಲೂ, ಹಿಟ್ಟಿನ ಭಕ್ಷ್ಯಗಳಿಂದಲೂ, ಮೋದಕಗಳಿಂದಲೂ ಕೂಡಿದ ಹವಿಷ್ಯಪದಾರ್ಥವನ್ನು ಬ್ರಾಹ್ಮಣರಿಗೆ ಉಣಬಡಿಸಬೇಕು.

ಆರಣ್ಯಕೇ ಮೂಲಫಲೈಸ್ತರ್ಪಯೇತ್ತು ದ್ವಿಜೋತ್ತಮಾನ್ ।
ಅರಣೀಪರ್ವ ಚಾಸಾದ್ಯ ಜಲಕುಂಭಾನ್ ಪ್ರದಾಪಯೇತ್ ॥೫೯॥

ವನಪರ್ವದ ಪ್ರವಚನಕಾಲಕ್ಕೆ ಬ್ರಾಹ್ಮಣರನ್ನು ಮೂಲ-ಫಲಗಳಿಂದ ತೃಪ್ತಿ ಪಡಿಸಬೇಕು. ಅರಣೀಪರ್ವವನ್ನು ಪ್ರವಚನ ಮಾಡುವ ಕಾಲಕ್ಕೆ ಜಲಕುಂಭಗಳನ್ನು ದಾನ ಮಾಡಬೇಕು.

ತರ್ಪಣಾನಿ ಚ ಮುಖ್ಯಾನಿ ವನ್ಯಮೂಲಫಲಾನಿ ಚ ।
ಸರ್ವಕಾಮಗುಣೋಪೇತಂ ವಿಪ್ರೇಭ್ಯೋಽನ್ನಂ ಪ್ರದಾಪಯೇತ್ ॥೬೦॥

ವಿರಾಟಪರ್ವಣಿ ತಥಾ ವಾಸಾಂಸಿ ವಿವಿಧಾನಿ ಚ ।
ಉದ್ಯೋಗೇ ಭರತಶ್ರೇಷ್ಠ ಸರ್ವಕಾಮಗುಣಾನ್ವಿತಮ್ ॥೬೧॥

ಭೋಜನಂ ಭೋಜಯೇದ್ ವಿಪ್ರಾನ್ ಗಂಧಮಾಲ್ಯೈರಲಂಕೃತಾನ್ ।
ಭೀಷ್ಮಪರ್ವಣಿ ರಾಜೇಂದ್ರ ದತ್ತ್ವಾ ಯಾನಮನುತ್ತಮಮ್ ॥೬೨॥

ತತಃ ಸರ್ವಗುಣೋಪೇತಮನ್ನಂ ದದ್ಯಾತ್ ಸುಸಂಸ್ಕೃತಮ್ ।
ದ್ರೋಣಪರ್ವಣಿ ವಿಪ್ರೇಭ್ಯೋ ಭೋಜನಂ ಪರಮಾರ್ಚಿತಮ್ ॥೬೩॥

ಶರಾಶ್ಚ ದೇಯಾ ರಾಜೇಂದ್ರ ಚಾಪಾನ್ಯಸಿವರಾಸ್ತಥಾ ।
ಕರ್ಣಪರ್ವಣ್ಯಪಿ ತಥಾ ಭೋಜನಂ ಸಾರ್ವಕಾಮಿಕಮ್ ॥೬೪॥

ವಿಪ್ರೇಭ್ಯಃ ಸಂಸ್ಕೃತಂ ಸಮ್ಯಗ್ದದ್ಯಾತ್ ಸಂಯತಮಾನಸಃ ।
ಶಲ್ಯಪರ್ವಣಿ ರಾಜೇಂದ್ರ ಮೋದಕೈಃ ಸಗುಡೌದನೈಃ ॥೬೫॥

ಅಪೂಪೈಸ್ತರ್ಪಣೈಶ್ಚೈವ ಸರ್ವಮನ್ನಂ ಪ್ರದಾಪಯೇತ್ ।
ಗದಾಪರ್ವಣ್ಯಪಿ ತಥಾ ಮುದ್ಗಮಿಶ್ರಂ ಪ್ರದಾಪಯೇತ್ ॥೬೬॥

ವಿರಾಟ ಪರ್ವದ ಪ್ರವಚನಕಾಲಕ್ಕೆ ಅಧಿಕವಾದ ತೃಪ್ತಿಯನ್ನು ನೀಡುವ, ಕಾಡಿನಲ್ಲಿ ಬೆಳೆದ ಮೂಲಫಲಗಳನ್ನು ಒಳಗೊಂಡ, ಎಲ್ಲರೂ ಬಯಸಬಹುದಾದ ಗುಣಗಳಿಂದ ಕೂಡಿದ ಅನ್ನವನ್ನೂ, ಹಾಗೆಯೇ ನಾನಾ ರೀತಿಯ ವಸ್ತ್ರಗಳನ್ನೂ ಬ್ರಾಹ್ಮಣರಿಗೆ ನೀಡಬೇಕು. ಹೇ ಭರತಶ್ರೇಷ್ಠನೇ, ಉದ್ಯೋಗಪರ್ವದ ಪ್ರವಚನಕಾಲಕ್ಕೆ ಗಂಧಮಾಲ್ಯಾದಿಗಳಿಂದ ಅಲಂಕೃತವಾದ ಬ್ರಾಹ್ಮಣರನ್ನು ಅವರವರಿಗೆ ಇಷ್ಟವಾದ ಅನ್ನವನ್ನು ನೀಡುವುದರ ಮೂಲಕ ಸಂತೋಷಗೊಳಿಸಬೇಕು. ಹೇ ರಾಜಶ್ರೇಷ್ಠನೇ, ಭೀಷ್ಮಪರ್ವದ ಪ್ರವಚನಕಾಲಕ್ಕೆ ಉತ್ತಮವಾದ ವಾಹನವನ್ನು ನೀಡಿ, ಅನಂತರ ಸುಸಂಸ್ಕೃತವಾದ, ಸರ್ವಗುಣಗಳಿಂದ ಕೂಡಿದ ಅನ್ನವನ್ನು ಉಣಬಡಿಸಬೇಕು. ಹೇ ರಾಜೇಂದ್ರನೇ, ದ್ರೋಣಪರ್ವದ ಪ್ರವಚನಕಾಲಕ್ಕೆ ಬಹು ಆದರಪೂರ್ವಕವಾಗಿ ಬ್ರಾಹ್ಮಣರಿಗೆ ಅನ್ನವನ್ನೂ ಹಾಗೂ ಶರಗಳನ್ನೂ, ಬಿಲ್ಲುಗಳನ್ನೂ, ಶ್ರೇಷ್ಠವಾದ

ಖಡ್ಗಗಳನ್ನೂ ನೀಡಬೇಕು. ನಂತರ ಕರ್ಣಪರ್ವದಲ್ಲಿ ಬ್ರಾಹ್ಮಣರಿಗೆ ಬಹು ಅಪೇಕ್ಷಣೀಯವಾದ, ಸುಸಂಸ್ಕೃತವಾದ ಅನ್ನವನ್ನು ನಿರ್ಮಲಚಿತ್ತನಾಗಿ ನೀಡಬೇಕು. ಹೇ ರಾಜಶ್ರೇಷ್ಠನೇ, ಶಲ್ಯಪರ್ವದ ಪ್ರವಚನಕಾಲಕ್ಕೆ ಮೋದಕಗಳಿಂದಲೂ, ಗುಡಾನ್ನಗಳಿಂದಲೂ, ಅಪೂಪಗಳಿಂದಲೂ, ನಾನಾ ರೀತಿಯ ಪಾನಕಗಳಿಂದಲೂ ಕೂಡಿದ ಎಲ್ಲ ರೀತಿಯ ಅನ್ನವನ್ನು ನೀಡಬೇಕು. ಅಂತೆಯೇ ಗದಾಪರ್ವದಲ್ಲಿಯೂ ಕೂಡ ಹಿಂದೆ ಹೇಳಿದ ಎಲ್ಲವನ್ನೂ ಮುದ್ಗಾನ್ನದ ಜೊತೆಗೆ ನೀಡಬೇಕು.

ಸ್ತ್ರೀಪರ್ವಣಿ ತಥಾ ರತ್ನೈಸ್ತರ್ಪಯೇತ್ತು ದ್ವಿಜೋತ್ತಮಾನ್ ।
ಘೃತೌದನಂ ಪುರಸ್ತಾಚ್ಚ ಐಷೀಕೇ ದಾಪಯೇತ್ ಪುನಃ ॥೬೭॥

ತತಃ ಸರ್ವಗುಣೋಪೇತಮನ್ನಂ ದದ್ಯಾತ್ ಸುಸಂಸ್ಕೃತಮ್ ।
ಶಾಂತಿಪರ್ವಣ್ಯಪಿ ತಥಾ ಹವಿಷ್ಯಂ ಭೋಜಯೇದ್ ದ್ವಿಜಾನ್ ॥೬೮॥

ಸ್ತ್ರೀಪರ್ವದ ಪ್ರವಚನಕಾಲಕ್ಕೆ ರತ್ನಗಳಿಂದ ಬ್ರಾಹ್ಮಣಶ್ರೇಷ್ಠರನ್ನು ಸಂತೋಷ ಪಡಿಸಬೇಕು. ಜೊತೆಗೆ ತುಪ್ಪದಿಂದ ಸಹಿತವಾದ ಅನ್ನವನ್ನು ನೀಡಬೇಕು. ಮುಂದೆ ಐಷೀಕಪರ್ವದಲ್ಲಿ (ಸೌಪ್ತಿಕ) ಸರ್ವಗುಣಗಳಿಂದ ಕೂಡಿದ ಸುಸಂಸ್ಕೃತವಾದ ಅನ್ನವನ್ನು ನೀಡಬೇಕು. ಹಾಗೆಯೇ ಶಾಂತಿಪರ್ವದಲ್ಲೂ ಹವಿಷ್ಯಪದಾರ್ಥಗಳನ್ನು ಬ್ರಾಹ್ಮಣರಿಗೆ ಉಣಬಡಿಸಬೇಕು.

ಆಶ್ವಮೇಧಿಕಮಾಸಾದ್ಯ ಭೋಜನಂ ಸಾರ್ವಕಾಮಿಕಮ್ ।
ತಥಾऽऽಶ್ರಮವಾಸಿಕೇ ತು ಹವಿಷ್ಯಂ ಭೋಜಯೇದ್ ದ್ವಿಜಾನ್ ॥೬೯॥

ಆಶ್ವಮೇಧಿಕಪರ್ವದ ಪ್ರವಚನ ನಡೆಯುವ ಕಾಲಕ್ಕೆ ಎಲ್ಲರೂ ಬಯಸುವ ಉತ್ತಮವಾದ ಅನ್ನವನ್ನೂ ಹಾಗೆಯೇ ಆಶ್ರಮವಾಸಿಕ ಪರ್ವದಲ್ಲಿ ಹವಿಷ್ಯ ಪದಾರ್ಥಗಳನ್ನು ಬ್ರಾಹ್ಮಣರಿಗೆ ಉಣಬಡಿಸಬೇಕು.

ಮೌಸಲೇ ಸಾರ್ವಗುಣಿಕಂ ಗಂಧಮಾಲ್ಯಾನುಲೇಪನಮ್ ।
ಮಹಾಪ್ರಾಸ್ಥಾನಿಕೇ ತದ್ವತ್ ಸರ್ವಕಾಮಗುಣಾನ್ವಿತಮ್ ॥೭೦॥

ಮೌಸಲಪರ್ವದಲ್ಲಿ ಎಲ್ಲ ರೀತಿಯ ಗುಣಗಳಿಂದ ಕೂಡಿದ ಗಂಧ, ಮಾಲ್ಯ, ಅನುಲೇಪನಾದಿಗಳನ್ನು ನೀಡಬೇಕು. ಅಂತೆಯೇ ಮಹಾಪ್ರಾಸ್ಥಾನಿಕಪರ್ವದಲ್ಲೂ ಎಲ್ಲರೂ ಬಯಸುವ ಮಾಲ್ಯಾದಿಗಳನ್ನು ನೀಡಬೇಕು.

ಸ್ವರ್ಗಪರ್ವಣ್ಯಪಿ ತಥಾ ಹವಿಷ್ಯಂ ಭೋಜಯೇದ್ ದ್ವಿಜಾನ್ ।
ಹರಿವಂಶಸಮಾಪ್ತೌ ತು ಸಹಸ್ರಂ ಭೋಜಯೇದ್ ದ್ವಿಜಾನ್ ॥೭೧॥

ಸ್ವರ್ಗಪರ್ವದಲ್ಲೂ ಕೂಡ ಅದೇ ರೀತಿಯಾಗಿ ಗಂಧಮಾಲ್ಯಾದಿಗಳ ಜೊತೆಗೆ ಹವಿಷ್ಯಪದಾರ್ಥಗಳನ್ನು ಬ್ರಾಹ್ಮಣರಿಗೆ ನೀಡಬೇಕು. ಹರಿವಂಶದ ಸಮಾಪ್ತಿಯ ಕಾಲಕ್ಕೆ ಸಾವಿರ ಮಂದಿ ಬ್ರಾಹ್ಮಣರಿಗೆ ಅನ್ನದಾನ ಮಾಡಬೇಕು.

ಗಾಮೇಕಾಂ ನಿಷ್ಕಸಂಯುಕ್ತಾಂ ಬ್ರಾಹ್ಮಣಾಯ ನಿವೇದಯೇತ್ ।
ತದರ್ಧೇನಾಪಿ ದಾತವ್ಯಾ ದರಿದ್ರೇಣಾಪಿ ಪಾರ್ಥಿವ ॥೭೨॥

ಅಲ್ಲದೆ ಯೋಗ್ಯಬ್ರಾಹ್ಮಣನಿಗೆ ನಿಷ್ಕಪ್ರಮಾಣದ ಸುವರ್ಣದೊಂದಿಗೆ ಒಳ್ಳೆಯ ಹಸುವನ್ನು ನೀಡಬೇಕು (ನಿಷ್ಕ ಎಂದರೆ ನಾಲ್ಕು ತೊಲೆ). ಹೇ ರಾಜನೇ, ಯಜಮಾನನು ದಾರಿದ್ರ್ಯವುಳ್ಳವನಾಗಿದ್ದರೂ ಹಿಂದೆ ಹೇಳಿದುದರ ಅರ್ಧಭಾಗ ಸುವರ್ಣವನ್ನಾದರೂ ಗೋವಿನ ಜೊತೆಗೆ ನೀಡಬೇಕು.

ಪ್ರತಿಪರ್ವಸಮಾಪ್ತೌ ತು ಪುಸ್ತಕಂ ವೈ ವಿಚಕ್ಷಣಃ ।
ಸುವರ್ಣೇನ ಚ ಸಂಯುಕ್ತಂ ವಾಚಕಾಯ ನಿವೇದಯೇತ್ ॥೭೩॥

ಜ್ಞಾನಿಯಾದ ಯಜಮಾನನು ಪ್ರತೀ ಪರ್ವಗಳ ಸಮಾಪ್ತಿಕಾಲಕ್ಕೆ ಸುವರ್ಣದೊಂದಿಗೆ ಪುಸ್ತಕವನ್ನೂ ಪ್ರವಚನಕಾರನಿಗೆ ನೀಡಬೇಕು.

ಹರಿವಂಶೇ ಪರ್ವಣಿ ಚ ಪಾಯಸಂ ತತ್ರ ಭೋಜಯೇತ್ ।
ಪಾರಣೇ ಪಾರಣೇ ರಾಜನ್ ಯಥಾವದ್ ಭರತರ್ಷಭ ॥೭೪॥

ಹರಿವಂಶದ ಪ್ರವಚನ ನಡೆಯುವಾಗ ಪ್ರತಿಯೊಂದು ಪರ್ವದಲ್ಲಿಯೂ ಪಾಯಸವನ್ನು ಉಣಬಡಿಸಬೇಕು. ಹೇ ಭರತಶ್ರೇಷ್ಠರಾಜನೇ, ಪ್ರತಿಯೊಂದು ಬಾರಿ ಪ್ರವಚನ ನಡೆಸಿದಾಗಲೂ ಯಥಾವತ್ತಾಗಿ ಈ ಎಲ್ಲಕ್ರಮಗಳನ್ನೂ ಅನುಸರಿಸಬೇಕು.

ಸಮಾಪ್ಯ ಸರ್ವಾಃ ಪ್ರಯತಃ ಸಂಹಿತಾಃ ಶಾಸ್ತ್ರಕೋವಿದಃ ।
ಶುಭೇ ದೇಶೇ ನಿವೇಶ್ಯಾಥ ಕ್ಷೌಮವಸ್ತ್ರಾಭಿಸಂವೃತಾಃ ॥೭೫॥

ಶುಕ್ಲಾಂಬರಧರಃ ಸ್ರಗ್ವೀ ಶುಚಿರ್ಭೂತ್ವಾ ಸ್ವಲಂಕೃತಃ ।
ಅರ್ಚಯೇತ ಯಥಾನ್ಯಾಯಂ ಗಂಧಮಾಲ್ಯೈಃ ಪೃಥಕ್‌ಪೃಥಕ್ ॥೭೬॥

ಹೀಗೆ ಹಿಂದೆ ಹೇಳಿದ ಎಲ್ಲ ಕ್ರಿಯೆಗಳನ್ನೂ ಶಾಸ್ತ್ರಜ್ಞನಾದ ಯಜಮಾನನು ಪ್ರಯತ್ನ ಪೂರ್ವಕವಾಗಿ ನಡೆಸಿ, ಸಂಹಿತೆಗಳನ್ನು (ಮಹಾಭಾರತದ ಪುಸ್ತಕಗಳನ್ನು) ರೇಷ್ಮೆಯ ವಸ್ತ್ರದಿಂದ ಸುತ್ತಿ ಶುದ್ಧವಾದ ಪ್ರದೇಶದಲ್ಲಿರಿಸಿ, ತಾನೂ ಶುಚಿಯಾದ ವಸ್ತ್ರಗಳನ್ನು ತೊಟ್ಟು, ಮಾಲೆಯನ್ನು ಧರಿಸಿ, ಶುಚಿರ್ಭೂತನಾಗಿ, ಅಲಂಕಾರಗಳನ್ನು ತೊಟ್ಟುಕೊಂಡು ಯಥಾಯೋಗ್ಯವಾಗಿ ಗಂಧ-ಮಾಲ್ಯಗಳಿಂದ ಪ್ರತ್ಯೇಕವಾಗಿ ಪುಸ್ತಕಗಳನ್ನು ಅರ್ಚಿಸಬೇಕು.

ಸಂಹಿತಾಪುಸ್ತಕಾನ್ ರಾಜನ್ ಪ್ರಯತಃ ಸುಸಮಾಹಿತಃ ।
ಭಕ್ಷ್ಯೈರ್ಮಾಲ್ಯೈಶ್ಚ ಪೇಯೈಶ್ಚ ಕಾಮ್ಯೈಶ್ಚ ವಿವಿಧೈಃ ಶುಭೈಃ ॥೭೭॥

ಹಿರಣ್ಯಂ ಚ ಸುವರ್ಣಂ ಚ ದಕ್ಷಿಣಾಮಥ ದಾಪಯೇತ್ ।
ಸರ್ವತ್ರ ತ್ರಿಪಲಂ ಸ್ವರ್ಣಂ ದಾತವ್ಯಂ ಪ್ರಯತಾತ್ಮನಾ ॥೭೮॥

ತದರ್ಧಂ ಪಾದಶೇಷಂ ವಾ ವಿತ್ತಶಾಠ್ಯವಿವರ್ಜಿತಮ್ ।
ಯದ್ಯದೇವಾತ್ಮನೋಽಭೀಷ್ಟಂ ತತ್ತದ್ದೇಯಂ ದ್ವಿಜಾತಯೇ ॥೭೯॥

ಹೇ ರಾಜನೇ, ಇಂದ್ರಿಯನಿಗ್ರಹವುಳ್ಳ, ಸಮಾಧಾನಚಿತ್ತನಾದ ಯಜಮಾನನು ಆ ಸಂಹಿತೆಯ ಪುಸ್ತಕಗಳನ್ನು ಭಕ್ಷ್ಯ-ಮಾಲೆಗಳು-ಪೇಯಗಳು ಮತ್ತು ನಾನಾ ರೀತಿಯ ಅಭೀಷ್ಟವಸ್ತುಗಳೊಂದಿಗೆ ದಾನ ಮಾಡಬೇಕು. ಅನಂತರ ದಕ್ಷಿಣೆಯಾಗಿ ಹಣವನ್ನೂ, ಬಂಗಾರವನ್ನೂ ನೀಡಬೇಕು. ಸುವರ್ಣವನ್ನು ನೀಡುವ ಸಂದರ್ಭದಲ್ಲಿ ಪ್ರಯತ್ನ ಪೂರ್ವಕವಾಗಿ ಎಲ್ಲ ಕಡೆ ಮೂರುಪಲಗಳಷ್ಟು ಸುವರ್ಣವನ್ನು ನೀಡಬೇಕು (ಒಂದು ಪಲ ಅಂದರೆ ನಾಲ್ಕು ತೊಲೆ) ಅಥವಾ ಅದರ ಅರ್ಧದಷ್ಟನ್ನಾದರೂ ಅಥವಾ ಕಾಲಂಶವನ್ನಾದರೂ ಸಂಪತ್ತಿನ ಮೋಹವನ್ನು ಬಿಟ್ಟು ನೀಡಬೇಕು. ಅಲ್ಲದೆ ತನಗೆ ಯಾವೆಲ್ಲ ವಸ್ತುಗಳು ಪ್ರಿಯವಾಗಿವೆಯೋ ಅಂತಹ ಎಲ್ಲ ವಸ್ತುಗಳನ್ನೂ ಬ್ರಾಹ್ಮಣನಿಗೆ ನೀಡಬೇಕು.

ಸರ್ವಥಾ ತೋಷಯೇದ್ ಭಕ್ತ್ಯಾ ವಾಚಕಂ ಗುರುಮಾತ್ಮನಃ ।
ದೇವತಾಃ ಕೀರ್ತಯೇತ್ ಸರ್ವಾ ನರನಾರಾಯಣೌ ತಥಾ ॥೮೦॥

ಎಲ್ಲ ರೀತಿಯಿಂದಲೂ ತನಗೆ ಗುರುವಾದ ವಾಚಕನನ್ನು ಭಕ್ತಿಯಿಂದ ಸಂತೋಷಗೊಳಿಸಬೇಕು. ಈ ಕರ್ತವ್ಯಗಳನ್ನು ನಡೆಸುವ ಸಂದರ್ಭದಲ್ಲಿ ಹಾಗೆಯೇ ನರ-ನಾರಾಯಣರನ್ನೂ ಸ್ತೋತ್ರ ಮಾಡಬೇಕು.

ತತೋ ಗಂಧೈಶ್ಚ ಮಾಲ್ಯೈಶ್ಚ ಸ್ವಲಂಕೃತ್ಯ ದ್ವಿಜೋತ್ತಮಾನ್ ।
ತರ್ಪಯೇದ್ ವಿವಿಧೈಃ ಕಾಮೈರ್ದಾನೈಶ್ಚೋಚ್ಚಾವಚೈಸ್ತಥಾ ॥೮೧॥

ಅನಂತರ ಸೇರಿದ ಎಲ್ಲ ಬ್ರಾಹ್ಮಣಶ್ರೇಷ್ಠರನ್ನೂ ಗಂಧ ಹಾಗೂ ಮಾಲ್ಯಗಳಿಂದ ಅಲಂಕರಿಸಿ, ಅವರಿಗೆ ಇಷ್ಟವಾದ ನಾನಾ ರೀತಿಯ ವಸ್ತುಗಳಿಂದ ಅವರನ್ನು ಸಂತೋಷಗೊಳಿಸಬೇಕು. ಜೊತೆಗೆ ದಾನಯೋಗ್ಯವಾದ ಪದಾರ್ಥಗಳನ್ನು ಹಿರಿದು ಕಿರಿದೆನ್ನದೆ ದಾನ ಮಾಡಬೇಕು.

ಅತಿರಾತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ।
ಪ್ರಾಪ್ನುಯಾಚ್ಚ ಕ್ರತುಫಲಂ ಯಥಾ ಪರ್ವಣಿ ಪರ್ವಣಿ ॥೮೨॥

ಹೀಗೆ ಮಾಡುವುದರಿಂದ ಮಾನವನು ಅತಿರಾತ್ರ ಯಜ್ಞದ ಫಲವನ್ನು ಪಡೆಯುತ್ತಾನೆ. ಪ್ರತಿಯೊಂದು ಪರ್ವಗಳಲ್ಲಿಯೂ ಹಿಂದೆ ಹೇಳಿದಂತೆ ಕ್ರಿಯೆಗಳನ್ನು ನಡೆಸುವುದರಿಂದ ಆ ಯಜ್ಞಫಲವನ್ನು ಸಂಪೂರ್ಣವಾಗಿ ಪಡೆಯಬಹುದಾಗಿದೆ.

ವಾಚಕೋ ಭರತಶ್ರೇಷ್ಠ ವ್ಯಕ್ತಾಕ್ಷರಪದಸ್ವರಃ ।
ಭವಿಷ್ಯಂ ಶ್ರಾವಯೇದ್ ವಿದ್ವಾನ್ ಭಾರತಂ ಭರತರ್ಷಭ ॥೮೩॥

ಹೇ ಭರತಶ್ರೇಷ್ಠನೇ, ಇಷ್ಟಾದ ಮೇಲೆ ವಾಚಕನು ಸ್ಪಷ್ಟವಾದ ಅಕ್ಷರ, ಪದ ಹಾಗೂ ಸ್ವರಗಳುಳ್ಳವನಾಗಿ, ಮಹಾಭಾರತದ ಅಂತರಾರ್ಥಗಳನ್ನು ಬಲ್ಲವನಾಗಿ ಭವಿಷ್ಯ ಪರ್ವವನ್ನು ಪ್ರವಚನ ಮಾಡುವ ಮೂಲಕ ಶ್ರೋತೃಗಳಿಗೆ ಕೇಳಿಸಬೇಕು.

ಭುಕ್ತವತ್ಸು ದ್ವಿಜೇಂದ್ರೇಷು ಯಥಾವತ್ ಸಂಪ್ರದಾಪಯೇತ್ ।
ವಾಚಕಂ ಭರತಶ್ರೇಷ್ಠ ಭೋಜಯಿತ್ವಾ ಸ್ವಲಂಕೃತಮ್ ॥೮೪॥

ಹಿಂದೆ ಹೇಳಿದ ದಾನಾದಿಗಳೆಲ್ಲವನ್ನೂ ಬ್ರಾಹ್ಮಣರ ಭೋಜನವಾದ ನಂತರ ಯಥಾವತ್ತಾಗಿ ನೀಡಬೇಕು. ಹಾಗೆಯೇ ವಾಚಕರನ್ನೂ ಕೂಡ ಯಥೋಕ್ತವಾದ ಅನ್ನಾಹಾರಗಳಿಂದ ಸಂತೋಷಗೊಳಿಸಿ, ಚೆನ್ನಾಗಿ ಅಲಂಕರಿಸಿ, ನಂತರ ಅವನ ಪೂಜಾದಿಗಳನ್ನು ನೆರವೇರಿಸಬೇಕು.

ವಾಚಕೇ ಪರಿತುಷ್ಟೇ ತು ಶುಭಾ ಪ್ರೀತಿರನುತ್ತಮಾ ।
ಬ್ರಾಹ್ಮಣೇಷು ತು ತುಷ್ಟೇಷು ಪ್ರಸನ್ನಾಃ ಸರ್ವದೇವತಾಃ ॥೮೫॥

ಪ್ರವಚನಕಾರನು ಸಂತೋಷಗೊಂಡರೆ ಅತ್ಯಂತ ಮಂಗಳವು, ಅತಿಶಯವಾದ ಆನಂದವೂ ಸಿಗುವುದು. ಹಾಗೆಯೇ ಬ್ರಾಹ್ಮಣರು ಸಂತೋಷಗೊಂಡರೆ ಎಲ್ಲ ದೇವತೆಗಳೂ ಪ್ರಸನ್ನರಾಗುವರು.

ತತೋ ಹಿ ವರಣಂ ಕಾರ್ಯಂ ದ್ವಿಜಾನಾಂ ಭರತರ್ಷಭ ।
ಸರ್ವಕಾಮೈರ್ಯಥಾನ್ಯಾಯಂ ಸಾಧುಭಿಶ್ಚ ಪೃಥಗ್ವಿಧೈಃ ॥೮೬॥

ಹೇ ಭರತರ್ಷಭನೇ, ವಾಚಕನನ್ನು ಪೂಜಿಸಿದ ನಂತರ ಬ್ರಾಹ್ಮಣರಿಗೆ ನಾನಾ ವಿಧವಾದ, ಉತ್ತಮವಾದ ಅವರು ಬಯಸುವ ವಸ್ತುಗಳಿಂದ ಯಥಾಯೋಗ್ಯವಾಗಿ ಪೂಜೆಯನ್ನು ನಡೆಸಬೇಕು.

ಇತ್ಯೇಷ ವಿಧಿರುದ್ದಿಷ್ಟೋ ಮಯಾ ತೇ ದ್ವಿಪದಾಂವರ ।
ಶ್ರದ್ದಧಾನೇನ ವೈ ಭಾವ್ಯಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೮೭॥

ಹೇ ಮನುಜಶ್ರೇಷ್ಠನೇ, ನೀನು ಏನನ್ನು ಕೇಳಿರುವೆಯೋ ಆ ವಿಧಿಯನ್ನು ನಾನು ನಿನಗೆ ಉಪದೇಶಿಸಿದ್ದೇನೆ. ಶ್ರದ್ಧೆಯಿಂದ ಈ ಎಲ್ಲ ಕರ್ತವ್ಯಗಳನ್ನು ನಡೆಸಬೇಕು.

ಭಾರತಶ್ರವಣೇ ರಾಜನ್ ಪಾರಣೇ ಚ ನೃಪೋತ್ತಮ ।
ಸದಾ ಯತ್ನವತಾ ಭಾವ್ಯಂ ಶ್ರೇಯಸ್ತು ಪರಮಿಚ್ಛತಾ ॥೮೮॥

ಹೇ ನೃಪೋತ್ತಮನಾದ ರಾಜನೇ, ಮಹಾಭಾರತದ ಶ್ರವಣದಲ್ಲಿಯೂ ಪಾರಣದಲ್ಲಿಯೂ (ಮಂಗಳಮಹೋತ್ಸವ) ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮವಾದ ಶ್ರೇಯಸ್ಸನ್ನು ಬಯಸುವವನಾದರೆ ಸದಾ ಪ್ರಯತ್ನವನ್ನು ನಡೆಸಬೇಕು.

ಭಾರತಂ ಶೃಣುಯಾನ್ನಿತ್ಯಂ ಭಾರತಂ ಪರಿಕೀರ್ತಯೇತ್ ।
ಭಾರತಂ ಭವನೇ ಯಸ್ಯ ತಸ್ಯ ಹಸ್ತಗತೋ ಜಯಃ ॥೮೯॥

ಪ್ರತಿನಿತ್ಯವೂ ಭಾರತವನ್ನು ಕೇಳಬೇಕು. ನಿತ್ಯವೂ ಭಾರತವನ್ನು ಕೀರ್ತನೆ ಮಾಡಬೇಕು. ಯಾರ ಮನೆಯಲ್ಲಿ ಭಾರತವಿದೆಯೋ ಜಯವು ಅವನ ಕೈಯಲ್ಲೇ ಇದೆ.

ಭಾರತಂ ಪರಮಂ ಪುಣ್ಯಂ ಭಾರತೇ ವಿವಿಧಾಃ ಕಥಾಃ ।
ಭಾರತಂ ಸೇವ್ಯತೇ ದೇವೈರ್ಭಾರತಂ ಪರಮಂ ಪದಮ್ ॥೯೦॥

ಭಾರತವು ಅತ್ಯಂತ ಮಂಗಳಮಯವಾಗಿದೆ. ಭಾರತದಲ್ಲಿರುವ ನಾನಾ ರೀತಿಯ ಕಥೆಗಳೂ ಮಂಗಳಮಯವಾಗಿವೆ. ದೇವತೆಗಳೂ ಭಾರತವನ್ನು ಸೇವಿಸುತ್ತಾರೆ. ಭಾರತವೇ ಉತ್ಕೃಷ್ಟವಾದ ಸ್ಥಾನವನ್ನು ನೀಡುತ್ತದೆ.

ಭಾರತಂ ಸರ್ವಶಾಸ್ತ್ರಾಣಾಮುತ್ತಮಂ ಭರತರ್ಷಭ ।
ಭಾರತಾತ್ ಪ್ರಾಪ್ಯತೇ ಮೋಕ್ಷಸ್ತತ್ತ್ವಮೇತದ್ ಬ್ರವೀಮಿ ತತ್ ॥೯೧॥

ಹೇ ಭರತರ್ಷಭನೇ, ನಿಜವಾಗಿಯೂ ಹೇಳುತ್ತಿದ್ದೇನೆ ಭಾರತವು ಸರ್ವ-ಶಾಸ್ತ್ರಗಳಿಗಿಂತಲೂ ಉತ್ತಮವಾಗಿದೆ. ಭಾರತದಿಂದ ಮೋಕ್ಷವೇ ಲಭಿಸುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಸ್ವರ್ಗಾರೋಹಣಪರ್ವಣಿ ಸರ್ವಭಾರತಾಧ್ಯಾಯಪಠನಫಲಶ್ರುತಿವರ್ಣನಂ ನಾಮ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ವೈಶಂಪಾಯನಃ

ಮಹಾಭಾರತಮಾಖ್ಯಾನಂ ಕ್ಷಿತಿಂ ಗಾಂ ಚ ಸರಸ್ವತೀಮ್ ।
ಬ್ರಾಹ್ಮಣಾನ್ ಕೇಶವಂ ಚೈವ ಕೀರ್ತಯನ್ನಾವಸೀದತಿ ॥೧॥

ವೈಶಂಪಾಯನ– ಮಹಾಭಾರತದ ಕಥೆಯನ್ನು, ಭೂಮಿಯನ್ನು, ಗೋವನ್ನು ಹಾಗೆಯೇ ಸರಸ್ವತೀ ದೇವಿಯನ್ನೂ, ಬ್ರಾಹ್ಮಣರನ್ನೂ, ಕೇಶವನೆಂಬ ಹೆಸರುಳ್ಳ ಶ್ರೀಕೃಷ್ಣನನ್ನೂ ಯಾವನು ಕೀರ್ತನೆ ಮಾಡುತ್ತಾನೋ ಅವನು ಎಂದಿಗೂ ಅವನತಿಯನ್ನು ಪಡೆಯುವುದಿಲ್ಲ.

ವ್ಯಾಖ್ಯಾನ ವಿಶೇಷ– ಮಹಾಭಾರತದಲ್ಲಿ ಹೇಳಿದಂತೆ ಭೂಮಿಯನ್ನು, ಗೋವನ್ನು, ಸರಸ್ವತಿಯನ್ನು, ಬ್ರಾಹ್ಮಣರನ್ನು, ಕೇಶವನೆನಿಸಿಕೊಂಡ ಕೃಷ್ಣನನ್ನು ಯಾವಾತನು ಸ್ತೋತ್ರ ಮಾಡುತ್ತಾನೋ ಅವನು ಯಾವತ್ತೂ ಅವನತಿಯನ್ನು ಪಡೆಯುವುದಿಲ್ಲ – **ಲಕ್ಷಾಲಂಕಾರ**.

ಲಕ್ಷಾಲಂಕಾರದ ಶ್ಲೋಕಗಳು

ವ್ಯಾಸಸ್ಯ ಕೃಪಯಾ ಲಕ್ಷಾಲಂಕಾರಾಖ್ಯಃ ಕೃತೋ ಮಯಾ ।
ಗ್ರಂಥೋಽಯಂ ಯಃ ಪ್ರಭುಃ ಕೀಟಮಕರೋತ್‌ಪೃಥಿವೀಪತಿಮ್ ॥೧॥

ಯಾವ ಪ್ರಭುವು ಕೀಟವನ್ನು ರಾಜನನ್ನಾಗಿ ಮಾಡಿರುವನೋ ಅಂತಹ ವೇದವ್ಯಾಸರ ಕೃಪೆಯಿಂದ ಈ ಲಕ್ಷಾಲಂಕಾರ ಎಂಬ ಹೆಸರುಳ್ಳ ಗ್ರಂಥವು ನನ್ನಿಂದ ರಚಿತವಾಗಿದೆ.

ಭಾರತಸ್ಯ ಸುಧಾಂಬೋಧೇಃ ಭಾರತೀಶಾದಯಃ ಸುರಾಃ ।
ಯಥಾವನ್ಮಥನೇ ಶಕ್ತಾಃ ಕೃತಶಿಕ್ಷಾ ಹರೇರ್ಮುಖಾತ್ ॥೨॥

ಭಾರತವೆಂಬ ಈ ಅಮೃತಸಮುದ್ರವನ್ನು ಯಥಾವತ್ತಾಗಿ ಮಥನ ಮಾಡಲು ಭಗವಂತನ ಮುಖದಿಂದಲೇ ಶಿಕ್ಷಣವನ್ನು ಪಡೆದ ಭಾರತೀಪತಿಯಾದ ಮುಖ್ಯಪ್ರಾಣನೇ ಮೊದಲಾದ ದೇವತೆಗಳೇ ಸಮರ್ಥರು.

ಅಹಂ ತು ಮಾನುಷಃ ಕುರ್ಯಾಂ ಮಹಾಕಾರ್ಯೇ ಕಥಂ ಮತಿಮ್ ।
ಅತ್ರಾಸ್ತಿ ಕಾರಣಂ ಕಿಂಚಿದ್ ಗುಹ್ಯಂ ತಚ್ಛ್ರೂಯತಾಂ ಬುಧೈಃ ॥೩॥

ಮನುಷ್ಯನಾದ ನಾನು ಈ ಮಹಾಕಾರ್ಯದಲ್ಲಿ ಹೇಗೆ ತಾನೆ ಮನಸ್ಸು ಮಾಡಿಯೇನು? ಆದರೂ ಇಲ್ಲಿ ಗೋಪ್ಯವಾದ ಏನೋ ಒಂದು ಕಾರಣವಿದೆ. ವಿದ್ವಾಂಸರು ಅದನ್ನು ಕೇಳಿರಿ.

ಪ್ರಯಾಗೇ ಬ್ರಹ್ಮಣಃ ಸಂಧ್ಯಾಮಠೇ ಜಪಪರಾಯಣಃ ।
ಅಹಮಾಸಂ ತದಾ ಲಕ್ಷಾಲಂಕಾರಂ ಕುರ್ವಿತಿ ಪ್ರಭುಃ ॥೪॥

ಭಾರತಸ್ಯ ಶ್ಲೋಕಲಕ್ಷಸ್ಯಾರ್ಥವಿಸ್ತರಣಾತ್ಮಕಮ್ ।
ಕಾರಯಾಮಾಸ ಯೋಗೀಂದ್ರೋ ಲಕ್ಷಾಲಂಕಾರಮೀದೃಶಮ್ ॥೫॥

ನಾನೊಮ್ಮೆ ಪ್ರಯಾಗಕ್ಷೇತ್ರದಲ್ಲಿ ಬ್ರಹ್ಮದೇವರ ಸಂಧ್ಯಾಮಠದಲ್ಲಿ ಜಪವನ್ನು ನಡೆಸುತ್ತಾ ಇದ್ದೆನು. ಆಗ ಪ್ರಭುಗಳಾದ ವೇದವ್ಯಾಸರು ಮಹಾಭಾರತದ ಲಕ್ಷಶ್ಲೋಕಗಳ ಅರ್ಥವನ್ನು ವಿಸ್ತಾರವಾಗಿ ತಿಳಿಸುವ ಲಕ್ಷಾಲಂಕಾರವನ್ನು ರಚಿಸು ಎಂದು ಆದೇಶಿಸಿ,

ಯೋಗಿಶ್ರೇಷ್ಠರಾದ ಅವರು ಇಂತಹ ಲಕ್ಷಾಲಂಕಾರವೆಂಬ ಗ್ರಂಥವನ್ನು ನನ್ನಿಂದ ಮಾಡಿಸಿದರು.

ವ್ಯಾಸ ಏವ ಯತಃ ಕರ್ತಾ ದಾಸಸ್ಯ ಹೃದಿ ಮೇ ಸ್ಥಿತಃ ।
ಅತೋ ನ ವಿಸ್ಮಯಃ ಕಾರ್ಯಃ ಕಿಮಕಾರ್ಯಂ ಮಹಾಪ್ರಭೋಃ ॥೬॥

ದಾಸನಾದ ನನ್ನ ಹೃದಯದಲ್ಲಿ ನಿಂತಿದ್ದು ವೇದವ್ಯಾಸರೇ ಈ ಗ್ರಂಥವನ್ನು ರಚಿಸಿರುವುದರಿಂದ ಇಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಮಹಾಪ್ರಭುವಿಗೆ ಮಾಡಲಾಗದ್ದು ಏನಿದೆ?

ಸದಾಕ್ಷರತ್ನಮಾಲೇಯಂ ತದ್ ವ್ಯಾಸಸ್ಯ ಗಲೇಽರ್ಪಿತಾ ।
ಸದಾ ಸ್ಯಾತ್ ಸ್ವಾಂಗಕಾಂತ್ಯೇಮಾಂ ಸ ಏವ ಪ್ರಥಯೇತ್ಪ್ರಭುಃ ॥೭॥

ಈ ಉತ್ತಮ ಮಾತುಗಳೆಂಬ ರತ್ನಗಳ ಮಾಲೆಯು ಅದೇ ವೇದವ್ಯಾಸರ ಕೊರಳಿನಲ್ಲಿಯಾವಾಗಲೂ ಅರ್ಪಿತವಾಗಿರಲಿ. ಸಮರ್ಥರಾದ ಅವರೇ ತನ್ನ ಶರೀರದ ಕಾಂತಿಯಿಂದ ಈ ಮಾತ್ರೆಯು ಇನ್ನಷ್ಟು ಶೋಭಿಸುವಂತೆ ಮಾಡಲಿ.

ನಮೋಽಸ್ತು ವಾಸುದೇವಾಯ ವ್ಯಾಸದೇವಾಯ ಧೀಮತೇ ।
ಅಸುದೇವಾಯ ದೇವೇಭ್ಯೋ ಗುರುಭ್ಯಶ್ಚ ನಮೋ ನಮಃ ॥೮॥

ವಾಸುದೇವನೆಂಬ ಶ್ರೀಕೃಷ್ಣನಿಗೂ, ಧೀಮಂತರಾದ ವೇದವ್ಯಾಸರಿಗೂ ನಮಸ್ಕಾರವಿರಲಿ. ಅಂತೆಯೇ ಪ್ರಾಣದೇವರಿಗೂ, ದೇವತೆಗಳಿಗೂ, ಎಲ್ಲ ಗುರುಗಳಿಗೂ ನಮಸ್ಕಾರಗಳು.

ಶ್ರೀದೇವ್ಯೈ ಭಾರತೀದೇವ್ಯೈ ಗೌರೀದೇವ್ಯೈ ನಮೋ ನಮಃ ।
ನಮಃ ಶಚ್ಯೈ ಚ ರತ್ಯೈ ಚ ಮಾತೃಭ್ಯಶ್ಚ ನಮೋ ನಮಃ ॥೯॥

ಲಕ್ಷ್ಮೀದೇವಿಗೂ, ಭಾರತೀದೇವಿಗೂ, ಗೌರೀದೇವಿಗೂ ನಮಸ್ಕಾರಗಳು. ಅಂತೆಯೇ ಶಚೀದೇವಿ, ರತೀದೇವಿ ಮತ್ತು ಎಲ್ಲ ತಾಯಂದಿರಿಗೂ ನಮಸ್ಕಾರಗಳು.

ಅಕ್ಷರಂ ಯತ್ಪರಿಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ಕ್ಷಂತುಮರ್ಹಂತಿ ವಿದ್ವಾಂಸಃ ಪಿತಾ ಪುತ್ರಾಪರಾಧವತ್ ॥೧೦॥

ಈ ಗ್ರಂಥದಲ್ಲಿ ಅಕ್ಷರವ್ಯತ್ಯಾಸವಾಗಲಿ, ಅರ್ಥವ್ಯತ್ಯಾಸವಾಗಲಿ ಉಂಟಾಗಿದ್ದರೆ ಅದನ್ನು ಮಗನ ಅಪರಾಧವನ್ನು ತಂದೆಯು ಮನ್ನಿಸುವಂತೆ ವಿದ್ವಾಂಸರೆಲ್ಲರೂ ಕ್ಷಮಿಸಬೇಕು.

॥ ಭಾವಿಸಮೀರವಾದಿರಾಜತೀರ್ಥಪೂಜ್ಯಚರಣವಿರಚಿತಾ
ಲಕ್ಷಾಲಂಕಾರಾಖ್ಯಟಿಪ್ಪಣೇ ಸಮಾಪ್ತಾ ॥

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।
ಆದೌ ಚಾಂತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥೨॥

ಹೇ ಭರತಶ್ರೇಷ್ಠನೇ, ವೇದದಲ್ಲೂ, ರಾಮಾಯಣದಲ್ಲೂ ಮಂಗಳಮಯವಾದ ಭಾರತದಲ್ಲೂ ಆದಿ, ಅಂತ್ಯ ಹಾಗೂ ಮಧ್ಯಭಾಗದಲ್ಲೂ ಎಲ್ಲ ಕಡೆ ಹರಿಯೇ ವರ್ಣಿತನಾಗಿರುವನು.

ಯತ್ರ ವಿಷ್ಣುಕಥಾ ದಿವ್ಯಾಃ ಶ್ರುತಯಶ್ಚ ಸನಾತನಾಃ ।
ತಚ್ಛ್ರೋತವ್ಯಂ ಮನುಷ್ಯೇಣ ಪರಂ ಪದಮಿಹೇಚ್ಛತಾ ॥೩॥

ದಿವ್ಯವಾದ ವಿಷ್ಣುವಿನ ಕಥೆಗಳು ಎಲ್ಲಿ ಇವೆಯೋ ಹಾಗೂ ಸನಾತನವಾದ ಶ್ರುತಿಗಳು ಎಲ್ಲಿವೆಯೋ ಅಂತಹ ಮಹಾಭಾರತವನ್ನು ಉತ್ತಮವಾದ ಸ್ಥಾನವನ್ನು ಬಯಸುವ ಮನುಷ್ಯನು ಕೇಳಲೇಬೇಕು.

ಏತತ್ ಪವಿತ್ರಂ ಪರಮಮೇತದ್ಧರ್ಮನಿದರ್ಶನಮ್ ।
ಏತತ್ಸರ್ವಗುಣೋಪೇತಂ ಶ್ರೋತವ್ಯಂ ಭೂತಿಮಿಚ್ಛತಾ ॥೪॥

ಈ ಮಹಾಭಾರತವು ಪರಮಪವಿತ್ರವಾಗಿದೆ. ಧರ್ಮಕ್ಕೆ ಇದೇ ದೃಷ್ಟಾಂತವಾಗಿದೆ. ಆದ್ದರಿಂದ ಐಶ್ವರ್ಯವನ್ನು ಬಯಸುವವನು ಎಲ್ಲ ಸದ್ಗುಣಗಳಿಂದ ಕೂಡಿದ ಈ ಮಹಾಭಾರತವನ್ನು ಕೇಳಲೇಬೇಕು.

ಅಹ್ನಾ ಯದೇನಃ ಕುರುತೇ ಇಂದ್ರಿಯೈರ್ಮನಸಾऽಪಿ ವಾ ।
ಮಹಾಭಾರತಮಾಖ್ಯಾಯ ಸರ್ವಪಾಪೈಃ ಪ್ರಮುಚ್ಯತೇ ॥೫॥

ಹಗಲಿನಲ್ಲಿ ಇಂದ್ರಿಯಗಳಿಂದಾದರೂ, ಮನಸ್ಸಿನಿಂದಾದರೂ ಏನೆಲ್ಲ ಪಾಪಗಳನ್ನು ನಡೆಸುವನೋ ಆ ಎಲ್ಲ ಪಾಪಗಳಿಂದ ಮಹಾಭಾರತವನ್ನು ಹೇಳುವ ಮೂಲಕ ಬಿಡುಗಡೆಯನ್ನು ಪಡೆಯುತ್ತಾನೆ.

ಯದ್ರಾತ್ರೌ ಕುರುತೇ ಪಾಪಂ ಬ್ರಾಹ್ಮಣಃ ಸ್ತ್ರೀಗಣೈರ್ವೃತಃ ।
ಮಹಾಭಾರತಮಾಖ್ಯಾಯ ಪೂರ್ವಾಂ ಸಂಧ್ಯಾಂ ಪ್ರಮುಚ್ಯತೇ ॥೬॥

ಬ್ರಾಹ್ಮಣನು ಸ್ತ್ರೀ ಸಮೂಹದಿಂದ ಕೂಡಿಕೊಂಡು ರಾತ್ರಿಕಾಲದಲ್ಲಿ ಏನು ಪಾಪವನ್ನು ಮಾಡಿದ್ದಾನೋ, ಪೂರ್ವಸಂಧ್ಯಾಕಾಲದಲ್ಲಿ ಮಹಾಭಾರತವನ್ನು ಹೇಳುವ ಮೂಲಕ ಅದರಿಂದ ಮುಕ್ತನಾಗುತ್ತಾನೆ.

ಮಹತ್ತ್ವಾದ್ ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೭॥

ಈ ಗ್ರಂಥವು ಮಹತ್ವಪೂರ್ಣವಾದ ವಿಷಯಗಳನ್ನು ಒಳಗೊಂಡಿರುವುದರಿಂದಲೂ, ಪರಿಮಾಣದಲ್ಲಿ ದೊಡ್ಡದಿರುವುದರಿಂದಲೂ, ಅದರಿಂದಾಗಿ ದೇವತೆಗಳು ತುಲನೆ ಮಾಡುವಾಗ ಭಾರವನ್ನು ತೋರಿಸಿರುವುದರಿಂದಲೂ 'ಮಹಾಭಾರತ' ಎಂಬ ಹೆಸರನ್ನು ಪಡೆದಿದೆ. ಈ ಹೆಸರಿನ ಅರ್ಥವೈಶಾಲ್ಯವನ್ನು ಯಾವನು ತಿಳಿಯುವನೋ ಅವನು ಎಲ್ಲ ಪಾಪಗಳಿಂದ ಮುಕ್ತನಾಗುವನು.

ಅಷ್ಟಾದಶಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ।
ವೇದಾಃ ಸಾಂಗಾಸ್ತಥೈಕತ್ರ ಭಾರತಂ ಚೈಕತಃ ಸ್ಥಿತಮ್ ॥೮॥

ಹದಿನೆಂಟು ಪುರಾಣಗಳು, ಎಲ್ಲ ರೀತಿಯ ಧರ್ಮಶಾಸ್ತ್ರಗಳು, ಎಲ್ಲ ಷಡಂಗಗಳಿಂದ ಸಹಿತವಾದ ವೇದಗಳು ಒಂದು ಕಡೆಯಾದರೆ, ಮಹಾಭಾರತವು ಒಂದೇ ಇನ್ನೊಂದು ಕಡೆ ತಕ್ಕಡಿಯಲ್ಲಿ ಇದೆ.

ಶ್ರೂಯತಾಂ ಸಿಂಹನಾದೋಽಯಮೃಷೇಸ್ತಸ್ಯ ಮಹಾತ್ಮನಃ ।
ಅಷ್ಟಾದಶಪುರಾಣಾನಾಂ ಕರ್ತುರ್ವೇದಮಹೋದಧೇಃ ॥೯॥

ಹದಿನೆಂಟು ಪುರಾಣಗಳನ್ನು ರಚಿಸಿದ, ವೇದಗಳಿಂದ ದೊಡ್ಡ ಸಮುದ್ರದಂತಿರುವ, ಮಹಾತ್ಮರಾದ ಆ ವೇದವ್ಯಾಸ ಋಷಿಗಳ ಈ ಸಿಂಹನಾದವು ನಿಮಗೆಲ್ಲರಿಗೂ ಕೇಳಿಸಲಿ.

ತ್ರಿಭಿರ್ವರ್ಷೈರ್ಮಹತ್ಪುಣ್ಯಂ ಕೃಷ್ಣದ್ವೈಪಾಯನಃ ಪ್ರಭುಃ ।
ಅಖಿಲಂ ಭಾರತಂ ಚೇದಂ ಚಕಾರ ಭಗವಾನ್ ಮುನಿಃ ॥೧೦॥

ಸರ್ವಸಮರ್ಥರಾದ ಭಗವಾನ್ ಕೃಷ್ಣದ್ವೈಪಾಯನ ಮುನಿಗಳು ಮೂರು ವರ್ಷಗಳಲ್ಲಿ ಬಹುಮಂಗಳಕರವಾದ ಈ ಇಡೀ ಭಾರತಗ್ರಂಥವನ್ನು ರಚಿಸಿದರು.

ಆಕರ್ಣ್ಯ ಭಕ್ತ್ಯಾ ಸತತಂ ಜಯಾಖ್ಯಂ ಭಾರತಂ ಮಹತ್ ।
ಶ್ರೀಶ್ಚ ಕೀರ್ತಿಸ್ತಥಾ ವಿದ್ಯಾ ಭವಂತಿ ಸಹಿತಾಃ ಸದಾ ॥೧೧॥

ಯಾವಾಗಲೂ ಜಯ ಎಂಬ ಹೆಸರುಳ್ಳ ಈ ಮಹಾಭಾರತವನ್ನು ಭಕ್ತಿಯಿಂದ ಕೇಳಿದರೆ ಸಂಪತ್ತು, ಕೀರ್ತಿ, ಹಾಗೆಯೇ ಎಲ್ಲ ರೀತಿಯ ವಿದ್ಯೆಗಳೂ ನಮ್ಮ ಜೊತೆಗೂಡುತ್ತವೆ.

ಯದ್ಯದಿಷ್ಟತಮಂ ಕಾಮಂ ಲಭತೇ ಶ್ರದ್ಧಯಾಽನ್ವಿತಃ ।
ಶೃಣುಯಾನ್ಮುದಿತೋ ಭೂತ್ವಾ ಆಸ್ತಿಕೋ ಬುದ್ಧಿಸಂಯುತಃ ॥೧೨॥

ಈ ಮಹಾಭಾರತವನ್ನು ಸಂತೋಷದಿಂದಲೇ ವೇದಗಳ ಪಾರಮ್ಯವನ್ನು ಒಪ್ಪಿಕೊಂಡು, ಬುದ್ಧಿವಂತನಾಗಿ ಶ್ರದ್ಧೆಯಿಂದ ಕೂಡಿ ಕೇಳಬೇಕು. ಅದರಿಂದ ಯಾವೆಲ್ಲ ಅಭೀಷ್ಟ ಬಯಕೆಗಳಿವೆಯೋ ಅವೆಲ್ಲವನ್ನೂ ಪಡೆಯುತ್ತಾನೆ.

ವಾಸುದೇವಂ ಸ್ಮರನ್ ವಿದ್ವಾನ್ ಪುಂಡರೀಕಾಯತೇಕ್ಷಣಮ್ ।
ಇತಿಹಾಸಮಿಮಂ ಪುಣ್ಯಂ ಮಹಾರ್ಥಂ ವೇದಸಮ್ಮಿತಮ್ ॥೧೩॥

ಶ್ರಾವಯೇದ್ಯಸ್ತು ವರ್ಣಾದೀನ್ ಕೃತ್ವಾ ಬ್ರಾಹ್ಮಣಮಗ್ರತಃ ।
ಸರ್ವಪಾಪವಿಶುದ್ಧಾತ್ಮಾ ಶುಚಿಸ್ತದ್ಗತಮಾನಸಃ ॥೧೪॥

ಇಹ ಕೀರ್ತಿಂ ಮಹತ್ಪ್ರಾಪ್ಯ ಭೋಗವಾನ್ ಸುಖಮಶ್ನುತೇ ।
ವ್ಯಾಸಪ್ರಸಾದೇನ ಪುನಃ ಸ್ವರ್ಗಲೋಕಂ ಸ ಗಚ್ಛತಿ ॥೧೫॥

ಯಾವ ವಿದ್ವಾಂಸನು ಕಮಲದಂತೆ ಕಣ್ಣುಗಳುಳ್ಳ ವಾಸುದೇವನನ್ನು ಸ್ಮರಿಸುತ್ತಾ, ವೇದಸದೃಶವಾದ, ಅತಿಶಯವಾದ ಅರ್ಥಗಳುಳ್ಳ, ಮಂಗಳಮಯವಾದ ಈ ಇತಿಹಾಸ ಗ್ರಂಥವನ್ನು ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು ಎಲ್ಲ ವರ್ಣದವರಿಗೆ ಕೇಳಿಸುವನೋ ಅವನು ಎಲ್ಲ ಪಾಪಗಳನ್ನು ಕಳೆದುಕೊಂಡು, ಶುದ್ಧನಾಗಿ ಭಗವಂತನಲ್ಲೇ ಮನಸ್ಸುಳ್ಳವನಾಗುವನು. ಅಲ್ಲದೆ ಇಹಲೋಕದಲ್ಲಿ ಮಹತ್ತಾದ ಕೀರ್ತಿಯನ್ನು ಪಡೆದು

ಉತ್ತಮಭೋಗಗಳನ್ನೂ, ಸುಖವನ್ನೂ ಅನುಭವಿಸುತ್ತಾನೆ ಮತ್ತು ವೇದವ್ಯಾಸರ ಅನುಗ್ರಹದಿಂದ ಸ್ವರ್ಗಲೋಕವನ್ನೇ ಪಡೆಯುತ್ತಾನೆ.

ಏತದ್ ವಿದಿತ್ವಾ ಸರ್ವಂ ತು ಸರ್ವವೇದಾರ್ಥವಿದ್ ಭವೇತ್ ।
ಪೂಜನೀಯಶ್ಚ ಸತತಂ ಮಾನನೀಯೋ ಭವೇದ್ ದ್ವಿಜಃ ॥೧೬॥

ಈ ಮಹಾಭಾರತದಲ್ಲಿ ಹೇಳಿದ ಎಲ್ಲ ಅಂಶಗಳನ್ನೂ ತಿಳಿದುಕೊಂಡರೆ ಎಲ್ಲ ವೇದಗಳ ಅರ್ಥಜ್ಞಾನವುಳ್ಳವನಾಗುವನು. ಅಲ್ಲದೆ ಆ ಬ್ರಾಹ್ಮಣನು ಪೂಜನೀಯನೂ, ಯಾವಾಗಲೂ ಗೌರವಯೋಗ್ಯನೂ ಆಗುವನು.

ಕಾಯಿಕಂ ವಾಚಿಕಂ ಚೈವ ಮನಸಾ ಸಮುಪಾರ್ಜಿತಮ್ ।
ತತ್ಸರ್ವಂ ನಾಶಮಾಯಾತಿ ತಮಃ ಸೂರ್ಯೋದಯೇ ಯಥಾ ॥೧೭॥

ಇದರೊಂದಿಗೆ ಕಾಯಿಕವಾದ, ವಾಚಿಕವಾದ ಮತ್ತು ಮನಸ್ಸಿನಿಂದ ಸಂಪಾದಿಸಿದ ಏನೆಲ್ಲ ಪಾಪಗಳಿವೆಯೋ ಅವೆಲ್ಲವೂ ಸೂರ್ಯೋದಯಕಾಲದಲ್ಲಿ ಕತ್ತಲೆಯು ಹೊರಟು ಹೋದಂತೆ ನಾಶವಾಗುವವು.

ಅಷ್ಟಾದಶಪುರಾಣಾನಾಂ ಶ್ರವಣಾದ್ಯತ್ ಫಲಂ ಭವೇತ್ ।
ತತ್ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥೧೮॥

ಹದಿನೆಂಟು ಪುರಾಣಗಳ ಶ್ರವಣದಿಂದ ಯಾವ ಫಲ ಉಂಟಾಗುವುದೋ ಆ ಎಲ್ಲ ಫಲವನ್ನು ವೈಷ್ಣವನು ಈ ಮಹಾಭಾರತದ ಶ್ರವಣದಿಂದ ಪಡೆಯುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಸ್ತ್ರಿಯಶ್ಚ ಪುರುಷಾಶ್ಚೈವ ವೈಷ್ಣವಂ ಪದಮಾಪ್ನುಯುಃ ।
ಸ್ತ್ರೀಭಿಶ್ಚ ಪುತ್ರಕಾಮಾಭಿಃ ಶ್ರೋತವ್ಯಂ ವೈಷ್ಣವಂ ಯಶಃ ॥೧೯॥

ಅಲ್ಲದೆ ಸ್ತ್ರೀಯರಾಗಲೀ, ಪುರುಷರಾಗಲೀ ಭಗವಂತನ ಪಾದವನ್ನೇ ಹೊಂದುವರು. ಯಾವ ಸ್ತ್ರೀಯರು ಮಕ್ಕಳನ್ನು ಬಯಸುವರೋ ಅವರು ವಿಷ್ಣುವಿನ ಕೀರ್ತಿಯನ್ನು ವರ್ಣಿಸುವ ಇದನ್ನು ಕೇಳಲೇಬೇಕು.

ದಕ್ಷಿಣಾ ಚಾತ್ರ ದೇಯಾ ವೈ ನಿಷ್ಕಪಂಚಸುವರ್ಣಕಮ್ ।
ವಾಚಕಾಯ ಯಥಾಶಕ್ತ್ಯಾ ಯಥೋಕ್ತಂ ಫಲಮಿಚ್ಛತಾ ॥೨೦॥

ಮಹಾಭಾರತವನ್ನು ವಾಚಿಸಿದ ಗುರುವಿಗೆ ಐದುನಿಷ್ಕಗಳಷ್ಟು ಸುವರ್ಣಗಳನ್ನು ದಕ್ಷಿಣೆಯನ್ನಾಗಿ ನೀಡಬೇಕು ಅಥವಾ ಯಥಾಶಕ್ತಿಯಾದ ದಕ್ಷಿಣೆಯನ್ನು ಇಲ್ಲಿ ಹೇಳಿದ ಫಲವನ್ನು ಬಯಸುವವನು ನೀಡಲೇಬೇಕು.

ಸ್ವರ್ಣಶೃಂಗೀಂ ಚ ಕಪಿಲಾಂ ಸವತ್ಸಾಂ ವಸ್ತ್ರಸಂಯುತಾಮ್ ।
ವಾಚಕಾಯ ಚ ದದ್ಯಾದ್ಧಿ ಆತ್ಮನಃ ಶ್ರೇಯ ಇಚ್ಛತಾ ॥೨೧॥

ಯಾವನು ಆತ್ಮೋನ್ನತಿಯನ್ನು ಬಯಸುವನೋ ಅವನು ಮಹಾಭಾರತವನ್ನು ವಾಚನ ಮಾಡಿದ ಗುರುವಿಗೆ ಬಂಗಾರದ ಕೊಂಬುಗಳುಳ್ಳ, ವಸ್ತ್ರಗಳಿಂದ ಕೂಡಿದ ಕಪಿಲಾ ಗೋವನ್ನು ಕರುವಿನೊಂದಿಗೆ ನೀಡಬೇಕು.

ಅಲಂಕಾರಂ ಪ್ರದದ್ಯಾಚ್ಚ ಪಾಣ್ಯೋರ್ವೈ ಭರತರ್ಷಭ ।
ಕರ್ಣಸ್ಯಾಭರಣಂ ದದ್ಯಾದ್ಧನಂ ಚೈವ ವಿಶೇಷತಃ ॥೨೨॥

ಹೇ ಭರತಶ್ರೇಷ್ಠನೇ, ಕೈಗಳಿಗೆ ಕಡಗಗಳನ್ನೂ ನೀಡಬೇಕು ಜೊತೆಗೆ ಕರ್ಣಾಭರಣಗಳನ್ನು, ಹಣವನ್ನು ವಿಶೇಷ ರೀತಿಯಿಂದ ನೀಡಬೇಕು.

ಭೂಮಿದಾನಂ ಸಮಾದದ್ಯಾದ್ ವಾಚಕಾಯ ನರಾಧಿಪ ।
ಭೂಮಿದಾನಸಮಂ ದಾನಂ ನ ಭೂತಂ ಭವಿಷ್ಯತಿ ॥೨೩॥

ಹೇ ನರಾಧಿಪತಿಯೇ, ವಾಚಕನಿಗೆ ಭೂದಾನವನ್ನೂ ಮಾಡಬೇಕು. ಈ ಭೂದಾನಕ್ಕೆ ಸಮಾನವಾದ ದಾನವು ಹಿಂದೆಂದೂ ಇಲ್ಲ, ಮುಂದೆಯೂ ಇರುವುದಿಲ್ಲ.

ಶೃಣೋತಿ ಶ್ರಾವಯೇದ್ ವಾऽಪಿ ಸತತಂ ಚೈವ ಯೋ ನರಃ ।
ಸರ್ವಪಾಪವಿನಿರ್ಮುಕ್ತೋ ವೈಷ್ಣವಂ ಪದಮಾಪ್ನುಯಾತ್ ॥೨೪॥

ಪಿತೄನುದ್ಧರತೇ ಸರ್ವಾನೇಕಾದಶಸಮುದ್ಭವಾನ್ ।
ಆತ್ಮಾನಂ ಸಸುತಂ ಚೈವ ಸ್ತ್ರಿಯಂ ಚ ಭರತರ್ಷಭ ॥೨೫॥

ದಶಾಂಶಶ್ಚೈವ ಹೋಮೋಪಿ ಕರ್ತವ್ಯೋತ್ರ ನರಾಧಿಪ ।
ಇದಂ ಮಯಾ ತವಾಗ್ರೇ ಚ ಪ್ರೋಕ್ತಂ ಸರ್ವಂ ನರರ್ಷಭ ॥೨೬॥

ಯಾವ ಮನುಷ್ಯನು ಈ ಮಹಾಭಾರತವನ್ನು ನಿತ್ಯವೂ ಕೇಳುವನೋ ಅಥವಾ ನಿತ್ಯವೂ ಪ್ರವಚನ ಮಾಡುವನೋ ಅವನು ಎಲ್ಲ ಪಾಪಗಳಿಂದ ಬಿಡುಗಡೆಯನ್ನು ಪಡೆದು, ಭಗವಂತನ ಪಾದಗಳನ್ನು ಪಡೆಯಬಲ್ಲನು. ಅಂತಹ ವ್ಯಕ್ತಿಯು ಹಿಂದಿನ ಹನ್ನೊಂದು ತಲೆಮಾರಿನ ಪಿತೃಗಳನ್ನು ಉದ್ಧರಿಸುವನು. ಜೊತೆಗೆ ಪುತ್ರರಿಂದ ಕೂಡಿದ ತನ್ನನ್ನೂ, ತನ್ನ ಸ್ತ್ರೀಯರನ್ನೂ ಉದ್ಧರಿಸುವನು. ಹೇ ನರಾಧಿಪತಿಯಾದ ಭರತಶ್ರೇಷ್ಠನೇ, ಈ ಪ್ರವಚನಕಾಲದಲ್ಲಿ ಹತ್ತನೆಯ ಒಂದಂಶ ಹೋಮವನ್ನೂ ಮಾಡಬೇಕು. ಹೇ ನರಶ್ರೇಷ್ಠನೇ, ನೀನು ಏನೆಲ್ಲವನ್ನು ಕೇಳಿರುವೆಯೋ ಆ ಎಲ್ಲವನ್ನೂ ನಿನ್ನ ಮುಂದೆ ನಾನಿಂದು ಹೇಳಿರುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಸ್ವರ್ಗಾರೋಹಣಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ವರ್ಗಾರೋಹಣಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಸ್ವರ್ಗಾರೋಹಣಪರ್ವ ॥

॥ ಸಮಾಪ್ತಂ ಮಹಾಭಾರತಮ್ ॥

॥ ಶ್ರೀಮದ್ಭಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

॥ ಹರಿಃಪ್ರಿಯತಾಮ್ ॥

★ ★ ★ ★ ★

ಯೋಗೋಶತಂಕನಕಶೃಂಗಮಯಂದದಾತಿ
ವಿಪ್ರಾಯ ವೇದವಿದುಷೇ ಸುಬಹುಶ್ರುತಾಯ ।
ಪುಣ್ಯಾಂ ಚ ಭಾರತಕಥಾಂ ಸತತಂ ಶೃಣೋತಿ
ತುಲ್ಯಂ ಫಳ ಭವತಿತಸ್ಯ ಚ ತಸ್ಯ ಚೈವ ॥

ಯಾವನು ವೇದಜ್ಞಾನಿಯಾದ, ಒಳ್ಳೆಯ ರೀತಿಯಿಂದ
ಬಹುಶಾಸ್ತ್ರಾಧ್ಯಯನವನ್ನು ನಡೆಸಿದ ಬ್ರಾಹ್ಮಣನಿಗೆ ನೂರು
ಗೋವುಗಳನ್ನು ಶ್ರುಂಗಗಳಿಗೆ ಚಿನ್ನವನ್ನು ಮುಚ್ಚಿ, ದಾನ
ಮಾಡುವನೋ ಅವನಿಗೂ, ಯಾವನು ಸತತವಾಗಿ
ಪುಣ್ಯಪ್ರದವಾದ ಮಹಭಾರತದಕಥೆಯನ್ನು
ಕೇಳುವನೋ ಅವನಿಗೂ ಸಮಾನವಾದ
ಫಲವು ಲಭಿಸುವುದು.

ISBN: 978-93-88813-41-9